ಕನ್ನಡ ಕ್ರೈಸ್ತ ಗೀತೆಗಳ ಚಾರಿತ್ರಿಕ ಅಧ್ಯಯನ

ಪಾಶ್ಚಾತ್ಯ ವಿದ್ವಾಂಸರ ಕೊಡುಗೆ

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ

ಸಂಶೋಧಕಿ

ಏಲಿಯಮ್ಮ ಜಾರ್ಜ್

ಮಾರ್ಗದರ್ಶಕರು

ಡಾ. ಹಿ. ಚಿ. ಬೋರಲಿಂಗಯ್ಯ

ಮುಖ್ಯಸ್ಥರು
ಕುವೆಂಪು ಅಧ್ಯಯನ ಕೇಂದ್ರ
ಕುಪ್ಪಳಿ

ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ಕ್ರೈಸ್ತ ಗೀತೆಗಳ ಚಾರಿತ್ರಿಕ ಅಧ್ಯಯನ

ಪಾಶ್ಚಾತ್ಯ ವಿದ್ವಾಂಸರ ಕೊಡುಗೆ

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ

ಸಂಶೋಧಕಿ
ಏಲಿಯಮ್ಮ ಜಾರ್ಜ್

ಮಾರ್ಗದರ್ಶಕರು
ಡಾ. ಹಿ. ಚಿ. ಬೋರಲಿಂಗಯ್ಯ
ಮುಖ್ಯಸ್ಥರು
ಕುವೆಂಪು ಅಧ್ಯಯನ ಕೇಂದ್ರ
ಕುಪ್ಪಳಿ

ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೃಢೀಕರಣ ಪತ್ರ

ಏಲಿಯಮ್ಮ ಜಾರ್ಜ್ ಅವರು **'ಕನ್ನಡ ಕ್ರೈಸ್ತ ಗೀತೆಗಳ ಚಾರಿತ್ರಿಕ ಅಧ್ಯಯನ: ಪಾಶ್ಚಾತ್ಯ ವಿದ್ವಾಂಸರ ಕೊಡುಗೆ'** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾ ನಿಕಾಯದ ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ ಇಲ್ಲಿಗೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಲಾಗುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ. ಹಿ.ಚಿ. ಬೋರಲಿಂಗಯ್ಯ)

ಮಾರ್ಗದರ್ಶಕರು

ಕುವೆಂಪು ಅಧ್ಯಯನ ಕೇಂದ್ರ

ಕುಪ್ಪಳಿ

ದಿನಾಂಕ : 30-6-2011

ಸ್ಥಳ : ಕುಪ್ಪಳಿ

ಪ್ರಮಾಣ ಪತ್ರ

'ಕನ್ನಡ ಕ್ರೈಸ್ತ ಗೀತೆಗಳ ಚಾರಿತ್ರಿಕ ಅಧ್ಯಯನ: ಪಾಶ್ಚಾತ್ಯ ವಿದ್ವಾಂಸರ ಕೊಡುಗೆ' ಎಂಬ ಮಹಾಪ್ರಬಂಧವನ್ನು **ಡಾ. ಹಿ.ಚಿ. ಬೋರಲಿಂಗಯ್ಯ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ **ಪಿಎಚ್.ಡಿ ಪದವಿಗಾಗಿ** ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾ ನಿಕಾಯದ ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ ಇಲ್ಲಿಗೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶಕ್ಕಾಗಿ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

Yeliyamma George

(ಏಲಿಯಮ್ಮ ಜಾರ್ಜ್)

ಸಂಶೋಧಕಿ

ಕುವೆಂಪು ಅಧ್ಯಯನ ಕೇಂದ್ರ

ಕುಪ್ಪಳಿ

ದಿನಾಂಕ : 30. 06. 2011

ಸ್ಥಳ : ಕುಪ್ಪಳಿ

ಮನ ಬಿಚ್ಚಿದಾಗ ಕೃತಜ್ಞತೆಯ ಹೊನಲು

"ನನ್ನ ಅನುಗ್ರಹವೇ ನಿನಗೆ ಸಾಕು, ನನ್ನ ಶಕ್ತಿ ಪರಿಪಕ್ವವಾಗುವುದು ನಿಶ್ಯಕ್ತಿಯಲ್ಲಿಯೇ" (೨ ಕೊರಿಂಥ ೧೨:೯). ದೇವರು ತನ್ನ ಅತಿಶಯ ಕೃಪಾವರಗಳನ್ನು ಸುರಿಸಿ ಈ ಮಹಾಪ್ರಬಂಧದ ಕಾರ್ಯವನ್ನು ಆತನೇ ಮಾಡಿದ್ದಾನೆ ಎಂಬ ಅನುಭವ ನನ್ನದಾಗಿದೆ. ಬಾಳ ಪಯಣದಲ್ಲಿ 'ಅಂಜದಿರು, ನಾ ನಿನ್ನ ಜೊತೆಯಿರುವೆ' ಎನ್ನುತ್ತಾ ಕರಹಿಡಿದು ನನ್ನೊಂದಿಗೆ ಹೆಜ್ಜೆಹಾಕುತ್ತಾ ಜ್ಞಾನ ಪಥದಲ್ಲಿ ಸಾಗಲು ಪ್ರೇರೇಪಿಸಿ, ಇಂದು ಆತ್ಮ ಸಂತೃಪ್ತಿಗೆ ಎಡೆ ಮಾಡಿಕೊಟ್ಟ ದೇವರಿಗೆ ಕರ ಮುಗಿದು ವಂದಿಸುವುದರೊಂದಿಗೆ ಈ ಅಧ್ಯಯನ ಪೂರ್ಣಗೊಳ್ಳಲು ಅನೇಕ ವ್ಯಕ್ತಿಗಳು ದೇವರಿಂಲೇ ನೇಮಕರಾದರು ಎಂದು ನಾನು ನಂಬಿದ್ದೇನೆ. ಉದಾರವಾಗಿ ತಮ್ಮ ಜ್ಞಾನವನ್ನು ದಾರೆಯೆರೆಯಲು ಸಿದ್ದರಾದ ಎಲ್ಲ ವ್ಯಕ್ತಿಗಳನ್ನು ಸ್ಮರಿಸಿ ದೇವರಿಗೆ ಅನಂತ ವಂದನೆಯನ್ನು ಸಲ್ಲಿಸುತ್ತೇನೆ.

ಸಾಗರದ ಎಲ್.ಬಿ. ಕಾಲೇಜಿನಲ್ಲಿ ಬಿ.ಎ ಪದವಿಗಾಗಿ ವ್ಯಾಸಂಗ ಮಾಡುತ್ತಿರುವಾಗ ಅರ್ಥಶಾಸ್ತ್ರ ವಿಭಾಗದ ಪ್ರೊ.ರಾಘವೇಂದ್ರರವರು ಕಾಲೇಜಿನ ವಾರ್ಷಿಕೆಗಾಗಿ ವಿದ್ಯಾರ್ಥಿಗಳಿಂದ ಕವಿತೆ, ಕಥೆ, ಲೇಖನಗಳನ್ನು ಸಂಗ್ರಹಿಸುತ್ತಿದ್ದಾಗ ನಾನು ಬರೆದುಕೊಟ್ಟಿದ್ದೆ. ಅಂದು ಪ್ರಕೃತಿಯ ಕುರಿತು ಬರೆದ ಕವಿತೆ ಕಾಲೇಜಿನ ವಾರ್ಷಿಕ ಸಂಚಿಕೆಯಲ್ಲಿ ಬಂದದ್ದು ಕಂಡು ಹರ್ಷಿತಳಾದ ನಾನು ಲೇಖನ ಬರಹದಲ್ಲಿ ತೊಡಗಿದೆ. ಅದೇ ಕಾಲೇಜಿನ ಉಪನ್ಯಾಸಕ ವೃಂದದವರು, ಹಾಗೂ ಲೇಖನಗಳನ್ನು ಕಂಡು ಆನಂದಪಡುತ್ತಿದ್ದ ನನ್ನ ತಂದೆತಾಯಿ, ಸಹೋದರ, ಸಹೋದರಿಯರ ಮೆಚ್ಚುಗೆಗೆ ಪಾತ್ರಳಾದ ನನಗೆ ಗೀತೆಗಳಲ್ಲಿ ಆಳವಾದ ಅಧ್ಯಯನ ನಡೆಸಬೇಕೆಂಬ ಹಂಬಲ ಇದ್ದರೂ ಅದು ನಿದ್ರಾವಸ್ಥೆಯಲ್ಲೇ ಇದ್ದಿತು. ಸೆಂಟ್ ಆನ್ಸ್ ಸನ್ಯಾಸಿ ಸಭೆಗೆ ಸೇರಿದ ನಂತರ ಸಭೆಯ ಹಿರಿಯ ಅಧಿಕಾರಿಯಾದ ಸಿ|ಶಾಂತಿಯವರ ಅನುಮತಿಯೊಂದಿಗೆ ಪಿಎಚ್.ಡಿ ಮಾಡುವ ಅವಕಾಶ ದೊರೆಯಿತು. ಪೂಜ್ಯರ ಪ್ರೋತ್ಸಾಹ, ಮಮತೆ ಪ್ರೇರಕ ಶಕ್ತಿಯಾಗಿಯೇ ಉಳಿಯಿತು. ಅವರಿಗೂ ಸಭೆಯ ಪ್ರತಿಯೊಬ್ಬರಿಗೂ ತುಂಬು ಹೃದಯದ ಕೃತಜ್ಞತೆಗಳು.

'ಇಕ್ಕಟ್ಟಾದ ಬಾಗಿಲಿನಿಂದ ಪ್ರವೇಶಿಸಿರಿ' ಎಂಬ ಯೇಸುವಿನ ವಾಕ್ಯ ನನ್ನ ಸಂಶೋದನೆಯ ಈ ನಾಲ್ಕು ವರ್ಷಗಳಲ್ಲಿ ಈಡೇರಿದಂತೆ ಭಾಸವಾಗುತ್ತದೆ. ಕ್ರೈಸ್ತ ಗೀತೆಗಳ ಅಧ್ಯಯನದ ವಿಷಯ ಕಾರ್ಗತ್ತಲಲ್ಲಿ ಹೆಜ್ಜೆ ಯನ್ನಿಟ್ಟು ಸಂಚರಿಸುವಂತಿತ್ತು. ಆದರೂ ಯಾವುದೋ ಅಗೋಚರ ಶಕ್ತಿ ಅಧ್ಯಯನ ಮುಂದುವರೆಸಲು ನೆರವಾಗುತಿತ್ತು. ಒಂದೆರಡು ಬಾರಿ ಅಧ್ಯಯನ ನಿಲ್ಲಿಸಬೇಕೆಂದಿದ್ದೆ. ಆದರೆ ಪ್ರೊ.ಹಿ.ಚಿ.ಬೋರಲಿಂಗಯ್ಯನವರ ಮಾರ್ಗದರ್ಶನ ಹಾಗೂ ಅವರ ಸ್ಫೂರ್ತಿ ನನ್ನ ಅಧ್ಯಯನ ಮುಂದುವರೆಯುವಂತೆ ಮಾಡಿತು. ಅಧ್ಯಯನ ಸುಗಮವಾಗಿ ಮುಂದುವರೆಯಲು ಅವರು ನೀಡಿದ ಮಾರ್ಗದರ್ಶನ ಬಹಳ ಮೌಲ್ಯಯುತವಾಗಿದೆ. ಇವರಿಗೆ ನನ್ನ ಮನದಾಳದ ವಂದನೆ ಅರ್ಪಿಸುತ್ತೇನೆ.

ಸಂಶೋಧನೆಯ ವಸ್ತು ವಿಷಯದ ಆಯ್ಕೆಗಾಗಿ ಸಹಾಯಮಾಡಿದ ಡಾ.ವಿ.ಬಿ.ತಾರಕೇಶ್ವರ್‌ರವರಿಗೆ ನನ್ನ ನಮನಗಳು. ಅಧ್ಯಯನದ ಪ್ರಾರಂಭದ ಹಂತದಲ್ಲಿ ಕ್ರೈಸ್ತ ಗೀತೆಗಳನ್ನ ಹೇಗೆ ಅಧ್ಯಯನ ಮಾಡಲು ಸಾದ್ಯವಿದೆ ಎಂಬುದನ್ನು ತಿಳಿಸಿಕೊಟ್ಟ ಮಹಾಪ್ರಬಂಧದ ಶೈಶವಾವಸ್ಥೆಯಲ್ಲಿ ನನಗೆ ಸಂಪೂರ್ಣ ಸಲಹೆ, ಮಾಹಿತಿಯನ್ನು ನೀಡಿದ ದಿವಂಗತ ಡಾ.ಶ್ರೀನಿವಾಸ ಹಾವನೂರರವರಿಗೆ ತುಂಬು ಹೃದಯದಿಂದ ಕೃತಜ್ಞತೆಯನ್ನು ಅರ್ಪಿಸುವುದರೊಂದಿಗೆ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ.

ಅಧ್ಯಯನಕ್ಕೆ ಅಗತ್ಯವಾದ ಮೂಲ ಆಕರಗಳಿಗಾಗಿ ಹುಡುಕಾಡುವ ಬಗೆ ಸಂಶೋಧನಾ ವಿದ್ಯಾರ್ಥಿಯ ಸಂಪೂರ್ಣ ಶಕ್ತಿಯನ್ನೆ ನುಂಗಿಬಿಡುತ್ತದೆ. ಡಾ.ಅಂತಪ್ಪ ಅವರು ಅಧ್ಯಯನಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಕಂಡುಕೊಳ್ಳುವ ಬಗೆಯನ್ನು ತಿಳಿಸಿಕೊಡುವುದರೊಂದಿಗೆ ತಮ್ಮಲ್ಲಿದ್ದ ಗ್ರಂಥಗಳನ್ನು ಕೊಟ್ಟು ಕಲಿಕೆ ಮುಂದುವರೆಯಲು ಅವಕಾಶಮಾಡಿಕೊಟ್ಟರು. ಇವರಿಗೂ ಹಾಗೂ ಫಾ।ಸಿ.ಫ್ರಾನ್ಸಿಸ್‌ರವರಿಗೂ ಕರ್ನಾಟಕ ಥಿಯೊಲೊಜಿಕಲ್ ಕಾಲೇಜಿನ ಗ್ರಂಥಾಲಯದ ಮತ್ತು ಪತ್ರಾಗಾರದ ಮುಖ್ಯಸ್ಥರಾದ ಬೆನೆಟ್‌ರವರಿಗೂ ನನ್ನ ನಮನಗಳು.

ಅಧ್ಯಯನ ಮುಂದುವರೆಯಲು ಜ್ಞಾನಿಗೆಳೆಡೆ ಧಾವಿಸಿದ ಸಂದರ್ಭ ಅಪರಿಮಿತ. ಆ ಜ್ಞಾನಿಗಳ ನೆರವು ಸಕಾಲಕ್ಕೆ ಉಪಯೋಗವಾಯಿತು. ಫಾ।ಪ್ರಶಾಂತ್, ಯು.ಟಿ.ಸಿಯ ನಿವೃತ್ತ ಪ್ರಾಂಶುಪಾಲರಾದ ಪ್ರೊ।ಜತ್ತಣ್ಣ, ಪ್ರೊ।ನಟರಾಜ್ ಹುಳಿಯಾರ್, ಫಾ।ದಾನಿಯೇಲ್, ಡಾ.ಕೆ.ಎಮ್.ಮ್ಯಾಥ್ಯೂ, ಫಾ।ಜಿ.ಜೋಸಫ್ ಇವರ ಸಲಹೆ, ಇವರೊಂದಿಗಿನ ಚರ್ಚೆ ನನ್ನ ಅಧ್ಯಯನ ನೇರ ದಿಕ್ಕಿನಲ್ಲಿ ಮತ್ತು ದೊರೆತ ಕಾಲಾವಕಾಶದಲ್ಲಿ ಪೂರ್ಣಗೊಳಿಸಲು ಸಾಧ್ಯವಾಯಿತು. ಇವರನ್ನು ಕೃತಜ್ಞತಾಪೂರ್ವಕವಾಗಿ ನಮಿಸುತ್ತೇನೆ.

ಎಲ್ಲರೂ ಅಪ್ತರೆ ಎಂಬ ಭಾವ ಮೂಡಿದ ಸಂದರ್ಭಗಳು ಅನೇಕ. ವಿವಿಧ ಪ್ರದೇಶಗಳಿಗೆ ಭೇಟಿ ನೀಡಿದಾಗ ನನ್ನನ್ನು ಆಪ್ತತೆಯಿಂದ ಕಂಡು ಅಗತ್ಯತೆಗಳನ್ನು ಪೂರೈಸಿದ ಸೇಕ್ರೆಡ್ ಹಾರ್ಟ್ ಸಭೆ, ಅರ್ಸಲೈನ್ ಫ್ರಾನ್ಸಿಸ್ಕನ್ ಸಿಸ್ಟರ‍್ಸ, ಫಾತಿಮಾ ಸಿಸ್ಟರ‍್ಸ ಇವರಿಗೆ ದೇವರ ಅನುಗ್ರಹಗಳನ್ನು ಕೋರುತ್ತೇನೆ.

ಪ್ರಾಮಾಣಿಕ ಪ್ರಾರ್ಥನೆಯಿಂದ ನನ್ನನ್ನು ಶಕ್ತಿಪಡಿಸುತ್ತಿರುವ ನನ್ನ ಪ್ರೀತಿಯ ಚಾಚ, ಅಮ್ಮ, ಚಿಕ್ಕಪ್ಪರಾದ ಫಾ।ಗರ್ವಾಸಿಸ್ ಮಟ್ಟಂ, ಅಣ್ಣಂದಿರಾದ ಜೋಸಫ್, ಜೋನಿ, ಅಕ್ಕಂದಿರಾದ ಸಿ।ಮರ್ಸಿ, ಜೋಲಿ, ತಮ್ಮ ಫಾ।ಆಂಟೊ, ತಂಗಿ ರಾಣಿ, ಬಾವಂದಿರಾದ ಸಿಬಿ, ಜಾಯ್, ಅತ್ತಿಗೆಯರಾದ ರೋಸ್, ಶೋಬಿ ಮತ್ತು ಮುದ್ದುಮಕ್ಕಳಾದ ಸೋನಾಲಿ, ಆಲ್‌ಫ್ರೆಡ್, ಅಂಜು, ಕ್ರಿಸ್, ವಿಲ್‌ಫ್ರೆಡ್, ಅಬಿ, ಟೋಣಿ, ಗಿಲ್ ಫ್ರೆಡ್, ಕ್ರಿಸ್ಟೋಫರ್, ಎಲ್ಲ ಬಂಧು ಬಾಂಧವರಿಗೂ ಮತ್ತು ಅಂದವಾದ ಅಕ್ಷರ ರೂಪದಲ್ಲಿ ಸಂಯೋಜಿಸಿದ ಜೆ.ಜೆ ಕನ್ಸಟ್ರಕ್ಷನ್ ಅವರಿಗೂ ತುಂಬು ಹೃದಯದ ಕೃತಜ್ಞತೆಗಳು ಹಾಗೂ ದೇವರ ಕೃಪಾವರಗಳನನ್ನು ಕೋರುತ್ತೇನೆ.

ಏಲಿಯಮ್ಮ ಜಾರ್ಜ್

ಪರಿವಿಡಿ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ವಿಧಾನ ಮತ್ತು ವ್ಯಾಪ್ತಿ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ವಿಧಾನ ಮತ್ತು ವ್ಯಾಪ್ತಿ

೧.೧ ಪೀಠಿಕೆ

ಕನ್ನಡ ಗೀತ ಪ್ರಪಂಚಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ ಅಮೋಘವಾದದ್ದು. ಜರ್ಮನ್, ಫ್ರಾನ್ಸ್, ಇಂಗ್ಲೇಂಡ್ ದೇಶದಿಂದ ಬಂದ ಮಿಶನರಿಗಳು ಹೊಸಗನ್ನಡದ ಅರುಣೋದಯದ ಕಾಲದಲ್ಲಿ ಗೀತ ಸಾಹಿತ್ಯದ ಉತ್ಕರ್ಷಕ್ಕೆ ನಾಂದಿ ಹಾಡಿದರು. ಮಿಶನರಿಗಳ ಪ್ರಭಾವದಿಂದ ಕ್ರೈಸ್ತ ಗೀತೆಗಳು ಬೆಳಕಿಗೆ ಬಂದವು.

ಗ್ರೀಕ್ ಸಂಸ್ಕೃತಿ ಅಳಿದು ರೋಮ್ ಸಾಮ್ರಾಜ್ಯವು ಪತನಗೊಂಡ ಮೇಲೆ ಯೂರೋಪಿನಲ್ಲಿ ಕ್ರೈಸ್ತ ಮತ ಸಂಗೀತಕ್ಕೆ ಆಸರೆ ನೀಡಿತು. ಪ್ರಾರ್ಥನಾ ಮಂದಿರದ ಮೇಳ ಹಾಡುಗಾರರ ತಂಡ ಆ ಸಮಾಜದಲ್ಲಿ ವಿಶೇಷವಾದ ಸ್ಥಾನ ಪಡೆಯಿತು. ಇದು ಧರ್ಮ ಪ್ರಧಾನ ಸಂಗೀತ. ಪ್ರಪಂಚದಲ್ಲಿ ಹರಡಿರುವ ಅನೇಕ ದೊಡ್ಡ ಧರ್ಮಗಳಲ್ಲಿ ಕ್ರೈಸ್ತ ಧರ್ಮವೂ ಒಂದು. ಇಂದಿನ ಪಾಶ್ಚಾತ್ಯ ಸಂಸ್ಕೃತಿಯ ಮೇಲೆ ಗ್ರೀಕ್ ಮತ್ತು ರೋಮ್ ನಾಗರೀಕತೆಗಳು ವರ್ಚಸ್ಸು ಬೀರಿದಂತೆ ಕ್ರೈಸ್ತ ಧರ್ಮವೂ ಪ್ರಭಾವ ಬೀರಿದೆ. ಹದಿಮೂರನೆ ಶತಮಾನದ ಆದಿಭಾಗ ಪೋಪ್ ಜಗದ್ಗುರುಗಳ ಅಧಿಕಾರ ವರ್ಚಸ್ಸು ಪ್ರತಿಷ್ಠೆಗೆ ಮೀಸಲಾದ ಸುವರ್ಣ ಯುಗವೆನಿಸುತ್ತದೆ. ೧೦೭೬ ರಿಂದ ೧೨೭೦ ರವರೆಗೆ ಧರ್ಮಯುದ್ಧ (The War of Crusades) ನಡೆದರೂ ಲ್ಯಾಟಿನ್ ಚರ್ಚ್ ಮಧ್ಯಯುಗದ ಯೂರೋಪಿನಲ್ಲಿ ವಿಧ್ಯಾಭ್ಯಾಸದ ಪ್ರಚಾರಕ್ಕೆ ಶ್ರಮಿಸಿತು. ಜ್ಞಾನಾರ್ಜನೆ ಜನತೆಯ ಮೇಲೆ ಬೀರಿದ ಪರಿಣಾಮವನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಲ್ಯಾಟಿನ್ ಭಾಷೆ ಕೇವಲ ಧಾರ್ಮಿಕ ಭಾಷೆಯಾಗಿದ್ದರೂ ಸಹ ಐರೋಪ್ಯ ಜನಾಂಗ ಅದರ ಕೃಷಿಯಿಂದ ಬಹಳ

ಉತ್ತೇಜನವಾಗಿರುವುದು ಒಂದು ಚಾರಿತ್ರಿಕ ಅಂಶ. ಜೊತೆಗೆ ಅದರ ಪ್ರಭಾವ ಸ್ಫೂರ್ತಿಯಿಂದ ತಾಯ್ನುಡಿಗಳಲ್ಲಿ ಸಾಹಿತ್ಯ ರಚನೆಯಾಗಿರುವುದನ್ನು ಮರೆಯಲಾಗದು. ಪ್ರಾರಂಭದಲ್ಲಿ ಲ್ಯಾಟಿನ್ ಭಾಷೆ ಚರ್ಚ್‌ನ ಆಡಳಿತ ಭಾಷೆಯಾಗಿತ್ತು. ಭಾರತವೂ ಇದಕ್ಕೆ ಹೊರತಾಗಿರಲಿಲ್ಲ. ೧೯೬೨-೬೫ ರಲ್ಲಿ ನಡೆದ ೨ನೇ ವ್ಯಾಟಿಕನ್ ವಿಶ್ವ ಸಮ್ಮೇಳನದಲ್ಲಿ ಪ್ರಾಂತೀಯರ ಭಾಷೆಯಲ್ಲಿ ಪೂಜಾ ವಿಧಿಗಳನ್ನು ನಡೆಸಲು ಅನುಮತಿ ದೊರೆಯಿತು. ಆದರೆ ಇದಕ್ಕೂ ಪೂರ್ವದಲ್ಲಿ ಗೀತೆಗಳಿಗೆ ಸಂಬಂಧಿಸಿದಂತೆ ೧೮೪೪ ರಲ್ಲಿ 'ಜಪದ ಪುಸ್ತಕ', ೧೮೯೭ ರಲ್ಲಿ ಕೀರ್ತನೆ ಪುಸ್ತಕಗಳು ರಚನೆಯಾಗಿ ಬಳಕೆಯಲ್ಲಿದ್ದದ್ದು ಇಂದೂ ಲಭ್ಯವಿವೆ. ಆದರೂ ಅಧಿಕೃತವಾಗಿ ಈ ಮಹಾ ಸಮ್ಮೇಳನದ ನಂತರ ಪ್ರಾಂತೀಯ ಭಾಷೆಯಲ್ಲಿ ಪೂಜಾವಿಧಿ ನಡೆಸಲು ಅನುಮತಿ ನೀಡಲಾಯಿತು. ೧೫೨೧ ರಲ್ಲಿ ಮಾರ್ಟಿನ್ ಲೂಥರ್ ಎಂಬ ಜರ್ಮನ್ ಪಾದ್ರಿಯ ನೇತೃತ್ವದಲ್ಲಿ ಸ್ಥಾಪಿತವಾದ ಪ್ರೊಟೆಸ್ಟೆಂಟ್ ಮತದ ಮಿಶನರಿಗಳೂ ಜಗತ್ತಿನ ವಿವಿದೆಡೆ ಭೇಟಿ ನೀಡಿ ಅಲ್ಲಿನ ಸ್ಥಳೀಯ ಭಾಷೆಯಲ್ಲಿ ಗ್ರಂಥ ರಚನೆ, ಕಾವ್ಯ ರಚನೆ ಮಾಡಿರುವುದು ಸ್ಮರಣೀಯ. ಹೀಗೆ ಲ್ಯಾಟಿನ್, ಜರ್ಮನ್, ಫ್ರೆಂಚ್ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಗೀತೆಗಳ ಕೃಷಿಯಾಗತೊಡಗಿದವು. ಕಾಲಕ್ರಮೇಣ ಈ ಭಾಷೆಗಳು ತಮ್ಮ ಪ್ರಭುತ್ವವನ್ನು ಕಳೆದುಕೊಂಡು ಪ್ರಾಂತೀಯ ಭಾಷೆಯು ಹೇಗೆ ಧಾರ್ಮಿಕ ಮೌಲ್ಯಗಳನ್ನು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕಟ್ಟಿ ಬೆಳೆಸುವಲ್ಲಿ ತಮ್ಮ ಪ್ರಾಬಲ್ಯವನ್ನು ಕಂಡುಕೊಂಡಿತು ಎಂಬುದು ಚಾರಿತ್ರಾರ್ಹವಾದ ಸಂಗತಿ. ಈ ದಿಕ್ಕಿನಲ್ಲಿ ಕನ್ನಡ ಕ್ರೈಸ್ರ ಗೀತೆಗಳ ಧಾರ್ಮಿಕ, ಸಾಮಾಜಿಕ ಸ್ಥಾನವನ್ನು ಖಚಿತಪಡಿಸುವ ಉದ್ದೇಶದಿಂದ ಕೆಳಗಿನ ಅಂಶಗಳನ್ನೊಳಗೊಂಡ ಸಂಶೋಧನಾತ್ಮಕ ಆಧ್ಯಯನವನ್ನು ನಡೆಸಲಾಗಿದೆ.

೧.೨ ಇದುವರೆಗಿನ ಸಾಹಿತ್ಯ ಸಮೀಕ್ಷೆ

ಕ್ರೈಸ್ತ ಗೀತಸಾಹಿತ್ಯಕ್ಕೆ ಸಂಬಂಧಿಸಿದಂತೆ ದೊರೆಯುವ ಗೀತ ಪುಸ್ತಕಗಳು ವಿಫುಲ. ಗೀತೆಯ ಪ್ರಕಾರಗಳಲ್ಲಿಯೆ ಬರುವ ಕೀರ್ತನೆಗಳು, ಕ್ರೈಸ್ತ ಜನಪದ ಗೀತೆಗಳು, ಗೀಗೀ ಪದಗಳು, ಕವಾಲಿ, ಯಕ್ಷಗಾನದ ಹಾಡುಗಳು, ಲಾವಣಿ, ಕಥಾಕಾಲಕ್ಷೇಪ ಮುಂತಾದವು ಲಭ್ಯವಿವೆ.

ಕಥೋಲಿಕ ಗೀತಸಾಹಿತ್ಯದಲ್ಲಿ ಕೀರ್ತನೆ ಪುಸ್ತಕ (೧೮೯೭), ಜಪದ ಪುಸ್ತಕ (೧೮೪೪) ಇವುಗಳಲ್ಲದೆ ಕ್ರಿಸ್ತು ಭಜಕ (೧೯೫೭), ಅಂಜಲಿ (೧೯೬೧), ಭಕ್ತಿ ಮಾರ್ಗ (೧೯೬೪), ಪೂಜಾ ಭಜನೆ (೧೯೬೫), ಗೀತಾಮೃತ (೧೯೬೬), ಗಾನಜ್ಯೋತಿ (೧೯೬೬), ಅಮೃತ (೧೯೮೧), ಚೇತನ (೧೯೯೯) ಈ ಗೀತ ಪುಸ್ತಕಗಳೂ ಲಭ್ಯವಿವೆ. ಇದರೊಂದಿಗೆ ಅನೇಕ ನವೀಕರಣ ಧ್ಯಾನ ಕೇಂದ್ರಗಳು (Retreat Center) ಹೊರತಂದ ಗೀತಪುಸ್ತಕಗಳು ಅಪಾರ. ಇವು ಸ್ಥಳೀಯರ ಕೊಡುಗೆ.

ಪ್ರೊಟೆಸ್ಟೆಂಟ್ ಮಿಶನರಿಗಳು ಹಾಗೂ ಸ್ಥಳೀಯರು ರಚಿಸಿದ ಗೀತಪುಸ್ತಕಗಳು ಇವೆ. ಗೆಲ್ಲರ್ಟನ್‌ನ ಗೀತೆಗಳು (Gellert's Hymn 1925), ಅಬ್ಬೆಜ ಸಾಮುವೇಲರ ಜ್ಞಾನ ಕೀರ್ತನೆಗಳು (೧೮೭೧), ಬಾಸೆಲ್ ಮಿಶನ್ ಪ್ರಕಟಿಸಿದ ಸಂಕೀರ್ತನ ಮಾಲೆ (೧೮೮೯), ದಲಭಂಜನರವರ ಕ್ರಿಸ್ತದಾಸರ ಪದಗಳು (೧೯೩೨).

ಅಭಿನಯ ಗೀತೆ (೧೯೦೩), ಬಾಲಕರ ಗೀತೆ (೧೮೬೫), ಸುರಾರೀ ಕೀರ್ತನೆಗಳು (೧೯೦೮), ಎಲೀಮ್ ಖೋರಸ್‌ಗಳು (೧೯೫೫), ಕಥಾಮಾಲೆ (೧೮೬೭) ಕನ್ನಡ ಸಂಗೀತಗಳು (೧೮೯೮) ಕನ್ನಡ ಗೀತಗಳು (೧೮೪೧), ಯಾತ್ರಿಕನ ಸಂಚಾರ (೧೮೪೯), ಪ್ರಾಕ್ಕಾವ್ಯಮಾಲಿಕೆ (೧೮೬೮) ಇತ್ಯಾದಿ.

ಕ್ರೈಸ್ತರಲ್ಲದವರೂ ಸಹ ಈ ಕ್ಷೇತ್ರದಲ್ಲಿ ಸಾಕಷ್ಟು ಕೊಡುಗೆ ನೀಡಿದ್ದಾರೆ. ಉದಾಹರಣೆಗೆ ಗೋವಿಂದ ಪೈರವರ 'ಗೋಲ್ಗೋಥ ಮತ್ತು ವೈಶಾಖ' (೧೯೩೬) ವಿ.ಯಂ.ಜೆ ಪಿಳ್ಳೆಯವರ ಶ್ರೀ ಮಸ್ಸೀಯ ಸ್ತೋತ್ರ ಶತಕ (೧೯೬೪) ಹಾಗೂ ಪತ್ರಿಕೆಗಳಲ್ಲಿ ಬಿಡಿಯಾಗಿ ಪ್ರಕಟವಾಗುತ್ತಿದ್ದ ಗೀತೆಗಳು ಸಾಕಷ್ಟಿದ್ದು ಅವುಗಳ ಸಂಗ್ರಹದ ಕಾರ್ಯ ನಡೆದಿದ್ದು, ಕ್ರಿಸ್ತಾಂಜಲಿ (೧೯೭೩), ಕ್ರಿಸ್ತ ಕಾವ್ಯ (೨೦೧೦) ಎಂಬ ಪ್ರಸ್ತಕಗಳಾಗಿ ಪ್ರಕಟಗೊಂಡಿವೆ. ಈ ಸಂಗ್ರಹ ಕೃತಿಗಳಲ್ಲಿ ಕುವೆಂಪು, ಗೋವಿಂದ ಪೈ, ಕೆ.ಎಸ್. ನರಸಿಂಹಸ್ವಾಮಿ, ವಿ. ಸೀತಾರಾಮಯ್ಯ, ಅಂಬಿಕಾತನಯದತ್ತ, ಸು.ರಂ. ಎಕ್ಕುಂಡಿ ಮುಂತಾದ ಕವಿಗಳ ಗೀತೆಗಳನ್ನು ಕಾಣುತ್ತೇವೆ.

ಕನ್ನಡದಲ್ಲಿ ಹೀಗೆ ಬೆಳೆದು ಬಂದ ಕ್ರೈಸ್ತ ಗೀತಸಾಹಿತ್ಯವನ್ನು ಕುರಿತು ಕನ್ನಡ ನಾಡಿನ ವಿದ್ವಾಂಸರು ಈಗಾಗಲೇ ವಿವೇಚಿಸಿದ್ದಾರೆ. ಡಾ. ಶ್ರೀನಿವಾಸ ಹಾವನೂರ ಅವರು ತಮ್ಮ ಮಹಾ ಪ್ರಬಂಧ ಹೊಸಗನ್ನಡದ ಅರುಣೋದಯದ (೧೯೭೪) 'ಹೊಸಕವಿತೆ' (ಪುಟ ೩೮೫) ಅಧ್ಯಾಯದಲ್ಲಿ ಕ್ರೈಸ್ತಗೀತೆಗಳನ್ನು ಕುರಿತು ಮೌಲಿಕ ವಿಚಾರಗಳನ್ನು ಹೇಳಿದ್ದಾರೆ. ಡಾ. ರಾ.ಯ ಧಾರವಾಡಕರ ಅವರ ಹೊಸಗನ್ನಡ ಸಾಹಿತ್ಯದ ಉದಯಕಾಲ (೧೯೭೫) ಹೆಸರಿನ ಮಹಾ ಪ್ರಬಂಧದಲ್ಲಿ ಮಿಶನರಿಗಳ ಸಾಹಿತ್ಯ ಸೇವೆಯನ್ನು ಗುರುತಿಸುತ್ತಾ (ಪುಟ ೫೮೬) ಸಾಂದರ್ಭಿಕವಾಗಿ ಕ್ರೈಸ್ತ ಗೀತೆಗಳನ್ನು ಕುರಿತು ವಿವೇಚಿಸಿದ್ದಾರೆ. ಜಿ.ಎಸ್. ಶಿವರುದ್ರಪ್ಪ ಅವರ 'ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು' (೧೯೭೭) ಕೃತಿಯಲ್ಲಿ ಕ.ವೆಂ. ರಾಜಗೋಪಾಲ ಅವರ 'ಕಾವ್ಯ ರಚನಾ ಶಿಲ್ಪ' ಹೆಸರಿನ ಲೇಖನದಲ್ಲಿ (ಪುಟ ೧೬೫), ಕ್ರೈಸ್ತ ಗೀತ ಸಾಹಿತ್ಯದ ರೂಪ, ರಚನೆಯನ್ನು ಕುರಿತು ವಿವೇಚಿಸಿದ್ದಾರೆ. ಐ.ಮ. ಮುತ್ತಣ್ಣ ಅವರ '೧೯ ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ' (೧೯೬೯) ಕೃತಿಯಲ್ಲಿ ಕೆಲವು ಕ್ರೈಸ್ತ ಮಿಶನರಿಗಳ ಸೇವೆ ಹಾಗೂ ಕೊಡುಗೆಯ ಕುರಿತು (ಅಧ್ಯಾಯ ೧೫) ತಿಳಿಸಿದ್ದಾರೆ. ಡಾ. ಗೀತಾನಂದಿಹಾಳ ಅವರು 'ಬಾಸೆಲ್ ಮಿಶನ್ ಪರಂಪರೆ ಹಾಗೂ ಕರ್ನಾಟಕಕ್ಕೆ ಮಿಶನರಿಗಳ ಕೊಡುಗೆ' ಎಂಬ ಪಿಎಚ್.ಡಿ ಪ್ರಬಂಧದಲ್ಲಿ ಬಾಸೆಲ್ ಮಿಶನರಿಗಳು ಹೊಸಗನ್ನಡದ ಅರುಣೋದಯದ ಉತ್ಕರ್ಷಕ್ಕೆ ಮಾಡಿದ ಮಹತ್ತರ ಕಾರ್ಯವನ್ನು ವಿವರಿಸುತ್ತಾ ಕ್ರೈಸ್ತ ಗೀತೆಗಳಿಗೆ ಇವರು ನೀಡಿದ ಕೊಡುಗೆಯನ್ನು ಚರ್ಚಿಸಿದ್ದಾರೆ. 'ಕನ್ನಡ ಗೀತೆಗಳ ಅಧ್ಯಯನ' ಎಂಬ ಚಿಕ್ಕ ಕೃತಿಯಲ್ಲಿ ಎಸ್.ಪಿ ಗೌಡ ಇವರು ಕ್ರೈಸ್ತ ಗೀತಸಾಹಿತ್ಯದ ನೆಲೆಬೆಲೆಯನ್ನು ವಿವೇಚಿಸಿದ್ದಾರೆ.

ಕನ್ನಡ ದೈವಜ್ಞಾನ ವಿದ್ಯಾಲಯದಲ್ಲಿ ಬಿ.ಡಿ ಪದವಿಗಳು ದೊರೆತ ಕೃತಿಗಳು ಕ್ರೈಸ್ತ ಗೀತೆಗಳ ಕುರಿತು ಮಾಹಿತಿ ಒದಗಿಸುತ್ತವೆ. ಉದಾ:– 'ಬಾಸೆಲ್ ಮಿಶನ್ ಕನ್ನಡ ಸಂಗೀತದಲ್ಲಿ ಕಂಡು ಬರುವ ಕ್ರಿಸ್ತ ಸಿದ್ಧಾಂತ'– ಮನಮೋಹನ್ ಪ್ರವೀಣ್ ಮಾಬೆನ್ (೨೦೦೫), 'ಸ್ತೋತ್ರಗಳ ಮೇಲೆ ವಿಶ್ವವಾಣಿಯ ಕನ್ನಡ ಬಾನುಲಿ

ಕಾರ್ಯಕ್ರಮದ ಪರಿಣಾಮ'–ಪ್ರಭುಕರ್ ಮೋಸೆಸ್ (೧೯೯೧), 'ಕನ್ನಡ ಕ್ರೈಸ್ತ ಸಂಕೀರ್ತನೆಗಳಲ್ಲಿ ಕ್ರೈಸ್ತ ಸಿದ್ಧಾಂತ'–ಅನಿಲ್ ಕುಮಾರ್ ಫೆಡ್ರಿಕ್ (೧೯೮೫).

ಕಥೋಲಿಕ ಸಭೆ, ಲಂಡನ್ ಸಭೆ, ವೆಸ್ಲಿಯನ್ ಸಭೆ ಮತ್ತು ಬಾಸೆಲ್ ಸಭೆಯ ಮಿಶನರಿಗಳು ಭಾಷಾಂತರಿಸಿದ ಹಾಗೂ ಸ್ವರಚಿಸಿದ ಗೀತೆಗಳ ಸಮಗ್ರ ಅಧ್ಯಯನ ಇದೂವರೆಗೂ ನಡೆದಿಲ್ಲ. ಈ ಗೀತೆಗಳ ವೈಶಿಷ್ಟ್ಯದತ್ತ ಗಮನಹರಿಸುವ ನಿಟ್ಟಿನಲ್ಲಿ ಈ ಮಹಾ ಪ್ರಬಂಧದ ಅಧ್ಯಯನ ನಡೆದಿದೆ.

೧.೩ ಅಧ್ಯಯನದ ಉದ್ದೇಶ

ಪಾಶ್ಚಾತ್ಯ ವಿದ್ವಾಂಸರು ಪ್ರಾರಂಭದಲ್ಲಿ ಕ್ರೈಸ್ತ ಗೀತೆಗಳನ್ನು ಲ್ಯಾಟಿನ್, ಜರ್ಮನ್, ಇಂಗ್ಲೀಷ್ ಮತ್ತು ಫ್ರೆಂಚ್ ಭಾಷೆಗಳಿಂದ ದೇಶಿಯ ಭಾಷೆಗಳಿಗೆ ಭಾಷಾಂತರಿಸಿದ ಗೀತೆಗಳ ಮೌಲ್ಯಗಳು ಮತ್ತು ಕನ್ನಡ ಸಾಹಿತ್ಯದಲ್ಲಿ ಇವುಗಳ ಸ್ಥಾನವನ್ನು ಗುರುತಿಸುವ ಪ್ರಮುಖ ಉದ್ದೇಶವನ್ನು ಈ ಅಧ್ಯಯನ ಒಳಗೊಂಡಿದೆ.

ಇಂದಿನ ಜಾಗತೀಕರಣದಲ್ಲಿ ನಡೆಯುತ್ತಿರುವ ಯುದ್ಧ, ಹಿಂಸೆ, ಶೋಷಣೆ, ಅತ್ಯಾಚಾರ, ಆತ್ಮಹತ್ಯೆ ಮುಂತಾದ ಸಮಾಜಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸಿ ಮಾನವಪರ ಧೋರಣೆಯನ್ನು ವಿಶ್ವದಲ್ಲಿ ಒಡ ಮೂಡಿಸುವ ಸಂಬಂಧದಲ್ಲಿ ಜಗತ್ತಿನ ಎಲ್ಲ ಧರ್ಮಗಳ ಮೂಲ ಮಾನವಪರ ಆಶಯಗಳನ್ನು ಪುನರ್ ಅವಲೋಕಿಸುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ತ್ಯಾಗ, ಪ್ರೀತಿ, ಶಾಂತಿ ಮತ್ತು ಸತ್ಯವನ್ನು ಸಾಧಿಸಿದ ಯೇಸುವಿನ ಬೋಧನೆ ಮತ್ತು ತತ್ವಗಳನ್ನು ಪರಿಶೋಧಿಸಿ ಅವಲೋಕಿಸುವುದು ಇವತ್ತಿನ ತುರ್ತು ಅಗತ್ಯವಾಗಿದೆ. ಇದು ಮಹಾ ಪ್ರಬಂಧದ ಪ್ರಧಾನ ಉದ್ದೇಶಗಳಲ್ಲಿ ಒಂದು.

ಮಾನವ ತನ್ನ ಜೀವನದಲ್ಲಿ ಎದುರಿಸುತ್ತಿರುವ ದೊಡ್ಡ ಸಮಸ್ಯೆ ಎಂದರೆ ದೇವರ ಅಸ್ತಿತ್ವದಲ್ಲಿ ಸಂಶಯ. ತಾನು ಸ್ವತಂತ್ರನಾಗಿರಬೇಕು ಎಂಬ ಭಾವನೆ ತಾಳುತ್ತಿದ್ದಾನೆ. ಇದರಿಂದ ಇದುವರೆಗೂ ಇರದ ನಡೆಯದ ಹೋರಾಟವನ್ನು ಈಗಿನ ಯುವಜನತೆ ಎದುರಿಸುತ್ತಿದೆ. ಈಗಿನ ಪರಿಸ್ಥಿತಿಯೇ ಮುಂದುವರೆದರೆ ಮುಂದಿನ ಪೀಳಿಗೆಗೆ ಸಂಸ್ಕಾರಗಳನ್ನು ನೀಡುವವರು ಯಾರು? ಈಗಿನ ಸಂಸ್ಕೃತಿಯಾದರೊ ಗೊಂದಲಗಳ ಸಂಸ್ಕೃತಿಯಾಗಿ ಬಿಟ್ಟಿದೆ. ದೂರದರ್ಶನ, ಕರ್ಕಶ ಸಂಗೀತ, ಶಬ್ದ ಮುಂತಾದವುಗಳಿಂದ ಮಾನಸಿಕ ಗೊಂದಲಗಳು, ತೊಂದರೆಗಳು ಹೆಚ್ಚಾಗುತ್ತಲೆ ಇವೆ. ಇದರಿಂದ ಹೆಚ್ಚಿನ ಯುವಜನತೆ ದೈವಿ ಕೇಂದ್ರವಲ್ಲದ ಸಂಸ್ಕೃತಿಯಡೆಗೆ, ದೇವರಿಲ್ಲದ ಸಮಾಜದೆಡೆಗೆ ನುಗ್ಗುತ್ತಿದ್ದಾರೆ. ಪರಿಣಾಮವಾಗಿ ಹಿಂಸೆ, ಮಾದಕ ವಸ್ತುಗಳ ಬಳಕೆ, ಅನೈತಿಕತೆಯನ್ನು ಸೃಷ್ಠಿ ಮಾಡುವ, ನೋಡುವ, ಎದುರಿಸುವ ಹಂತಕ್ಕೆ ತಲುಪಿದ್ದಾರೆ. ಮಾತ್ರವಲ್ಲ ದೇವರನ್ನು ತಪ್ಪು ಸ್ಥಳಗಳಲ್ಲಿ ಹುಡುಕುತ್ತಿದ್ದಾರೆ. ಮಾರ್ಗ ತಪ್ಪಿದ ಹಾಗೂ ಸತ್ಯ ಜೀವನಕ್ಕೆ ಹಾತೊರೆಯುವ ಜನರಿಗೆ ಮಾರ್ಗದರ್ಶಿಯಾಗಿ ಈ ಅಧ್ಯಯನ ರೂಪುಗೊಳ್ಳಬೇಕು ಎಂಬ ಆಶಯದ ಜೊತೆಗೆ ಮಾನವೀಯ ಮೌಲ್ಯಗಳ ಭದ್ರ ಬುನಾದಿಯ ಮೇಲೆ ಜೀವನ ನಿರ್ಮಾಣವಾದಾಗ ಬದುಕು ಸಾರ್ಥಕವಾಗುತ್ತದೆ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಈ ಬರಹ ರೂಪುಗೊಂಡಿದೆ. ಮಿಶನರಿಗಳೂ ಕೂಡ ಈ

ಉದ್ದೇಶವನ್ನಿಟ್ಟುಕೊಂಡು ಗೀತೆ ರಚಿಸಿದರು. ಆದ್ದರಿಂದ ಸಾಮಾಜದಲ್ಲಿ ಮತ್ತೊಮ್ಮೆ ಈ ಮೌಲ್ಯಭರಿತ ಗೀತೆಗಳ ಅಧ್ಯಯನ ಅಗತ್ಯವಾಗಿದೆ.

ಇಂದಿನ ಮೌಲ್ಯರಹಿತ ಮತ್ತು ಉತ್ತಮ ಸಾಹಿತ್ಯವಲ್ಲದ ಗೀತೆಗಳು ಮನುಷ್ಯ ಮನಸ್ಸನ್ನು ಋಣಾತ್ಮಕ ಮೌಲ್ಯಗಳತ್ತ ನಡೆಸುತ್ತಿದೆ. ಕ್ರೈಸ್ತ ಮಿಶನರಿಗಳು ರಚಿಸಿದ ಗೀತೆಗಳತ್ತ ಗಮನಹರಿಸಿದರೆ ಇವು ಮೌಲ್ಯಭರಿತ ಹಾಗೂ ಹೃದಯಸ್ಪರ್ಶಿಯಾದ ಗೀತೆಗಳಾಗಿವೆ. ಮನುಷ್ಯನು ನೈತಿಕತೆಯ ಭದ್ರ ಬುನಾದಿಯ ಮೇಲೆ ತನ್ನ ಜೀವನ ಕಟ್ಟಲು ಇವು ಪ್ರಮುಖ ಪಾತ್ರವಹಿಸುತ್ತವೆ. ಬದುಕಿಗೆ ಸಾಂತ್ವನ ನೀಡುವ ಈ ಗೀತೆಗಳ ಕ್ರಮಭರಿತ ಅಧ್ಯಯನದ ಅಗತ್ಯವಿದೆ. ಈ ಕಾರಣಕ್ಕಾಗಿ ಈ ನಿಬಂಧದ ಅಧ್ಯಯನ ನಡೆದಿದೆ.

ಕನ್ನಡದ ಮೊಟ್ಟಮೊದಲ ಶಾಸನವಾದ ಕ್ರಿ.ಶ. ೫ನೇ ಶತಮಾನದ ಹಲ್ಮಿಡಿ ಶಾಸನದಿಂದ ಹಿಡಿದು ಇಂದಿನವರೆಗೂ ಕಂಡು ಬರುವ ಲಿಖಿತ ರೂಪದ ಸಾಹಿತ್ಯವನ್ನು ಕನ್ನಡ ಸಾಹಿತ್ಯವೆಂದು ನಾವು ಸಾಮಾನ್ಯವಾಗಿ ಪರಿಗಣಿಸುತ್ತೇವೆ. ಕನ್ನಡ ಸಾಹಿತ್ಯ ಇಂದು ಏಳು ಜನ ಜ್ಞಾನಪೀಠ ಪ್ರಶಸ್ತಿ ವಿಜೇತರನ್ನು ಪಡೆದು ರಾಷ್ಟ್ರದ ಇತರ ಭಾಷಾ ಸಾಹಿತ್ಯಗಳಲ್ಲೇ ಮೇಲುಗೈ ಪಡೆದಿದೆ. ಇಂದು ಇದು ಶಾಸ್ತ್ರಿಯ ಭಾಷೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪ್ರಪಂಚದ ಭೂಪಟದಲ್ಲೆ ಕರ್ನಾಟಕ ತನ್ನ ಸ್ಥಾನವನ್ನು ಗುರುತಿಸಿಕೊಂಡಿದೆ. ಇಷ್ಟರಮಟ್ಟಿಗೆ ಕನ್ನಡ ಸಾಹಿತ್ಯದ ಬೆಳವಣಿಗೆಯಾಗಬೇಕಾದರೆ ಅದರ ಹಿಂದೆ ಅನೇಕರ ದುಡಿಮೆ, ತ್ಯಾಗ, ಶ್ರದ್ಧೆಗಳು ಇವೆ ಎಂಬುದಕ್ಕೆ ಎಳ್ಳಷ್ಟು ಸಂಶಯವಿಲ್ಲ. ಇಂತಹ ಮಹಾನ್ ವ್ಯಕ್ತಿಗಳ ಸಾಲಿನಲ್ಲಿ ಬರುವ ಮಹಾನ್ ಚೇತನಗಳೆ ವಿದೇಶಿ ಮಿಶನರಿಗಳು. ಕನ್ನಡ ಸಾಹಿತ್ಯಕ್ಷೇತ್ರಕ್ಕೆ ಇವರ ಕೊಡುಗೆಗಳ ಕುರಿತು ಅನೇಕ ವಿದ್ವಾಂಸರು ಅಧ್ಯಯನ ನಡೆಸಿದ್ದಾರೆ. ಸಾಕಷ್ಟು ಸಾಹಿತ್ಯ ಕೃತಿಗಳು ಬಂದಿವೆ. ಆದರೆ ಅವರ ಸಂಗೀತ ಕ್ಷೇತ್ರದ ಕುರಿತು ಸಮಗ್ರ ಅಧ್ಯಯನ ನಡೆದಿಲ್ಲ. ಈ ದೃಷ್ಟಿಯಿಂದ ಈ ಅಧ್ಯಯನ ಅವಶ್ಯಕವಾಗಿದೆ.

ಕನ್ನಡ ಸಾಹಿತ್ಯದ ಪ್ರಗತಿಯನ್ನು ಗಮನಿಸಿದ ಶ್ರೀನಿವಾಸ ಹಾವನೂರರು "ವಿದೇಶಿ ಮಿಶನರಿಗಳು ಹೊಸ ಸಾಹಿತ್ಯದ ಆರಂಭಕಾರರು"[೧] ಎಂದು ಹೇಳಿದ್ದಾರೆ. ಇವರ ಹೇಳಿಕೆ ವಿದೇಶಿ ಮಿಶನರಿಗಳ ಸೇವೆಯ ಮಹತ್ತನ್ನು ಎತ್ತಿತೋರಿಸುವಲ್ಲಿ ಮಹತ್ವಪೂರ್ಣವಾಗಿದೆ. ಈ ವಿದೇಶಿ ಮಿಶನರಿಗಳು ಕನ್ನಡವನ್ನು ಕಟ್ಟಲು ಶ್ರಮಿಸಿದ್ದರಿಂದ ಕನ್ನಡಿಗರಲ್ಲಿ ಕನ್ನಡ ಪ್ರಜ್ಞೆ ಅರಳಿತು. ಆಧುನಿಕ ವೈಜ್ಞಾನಿಕ ಪದ್ಧತಿಯಲ್ಲೂ ಕನ್ನಡದ ಶಾಸ್ತ್ರಿಯ ಗ್ರಂಥ ಸಾಹಿತ್ಯವನ್ನು ಅವರು ರೂಪಿಸಿದ್ದರಿಂದ ಇಂದು ಕನ್ನಡ ನಾಡು ನುಡಿಗಳೆರಡು ಆಧುನಿಕ ಜಗತ್ತಿನ ಹೊಸ್ತಿಲಿಗೆ ಕಾಲಿಡುವಂತಾಯಿತು. ಕನ್ನಡ ಸಾಹಿತ್ಯದ ಸಮೃದ್ಧಿಯ ಅರಿವಿಲ್ಲದಿದ್ದ ಆ ಕಾಲದಲ್ಲಿ ಸಾಹಿತ್ಯ ಕೃತಿಗಳನ್ನು ಬೆಳಕಿಗೆ ತಂದು ಅವುಗಳ ಮಹತ್ವವನ್ನು ತೋರಿಸಿಕೊಟ್ಟರಲ್ಲದೆ ಹೊಸಹೊಸ ವಿಚಾರಗಳನ್ನು ವಿಶ್ಲೇಷಣಾ ಪದ್ಧತಿಗಳನ್ನು, ಸಂಪಾದನಾ ರೀತಿಗಳನ್ನು ಕ್ಷೇತ್ರಕಾರ್ಯ ವಿಧಾನಗಳನ್ನು ಕನ್ನಡಕ್ಕೆ ಅಳವಡಿಸಿ ಶುಷ್ಕ ಪರಂಪರಗೆ ಸೀಮಿತವಾದ ಜ್ಞಾನವನ್ನು ಆಧುನಿಕತೆಯತ್ತ ವಾಲಿಸಿದ ಕೀರ್ತಿ ಈ ಪಾಶ್ಚಾತ್ಯ ವಿದ್ವಾಂಸರಿಗೆ ಸಲ್ಲುತ್ತದೆ. ಈ ಕಾರ್ಯದಲ್ಲಿ ಜಿ. ವುರ್ತ್, ಮೊಗ್ಲಿಂಗ್ ಮತ್ತು ಕಿಟಲ್ಲರು ಚಿರಸ್ಮರಣೀಯರು.

ಇವರು ಮಿಶನರಿಗಳಾಗಿ ಕ್ರೈಸ್ತಮತ ಪ್ರಚಾರಕ್ಕಾಗಿ ಭಾರತಕ್ಕೆ ಬಂದರೂ ಇಲ್ಲಿನ ಸ್ಥಳೀಯ ಭಾಷೆ ಸಂಸ್ಕೃತಿಗೆ ಕೊಡುಗೆ ನೀಡಿರುವುದು ಪ್ರಶಂಸನೀಯವಾದ ಅಂಶ.

ಡಾ. ಐ. ಅಂತಪ್ಪ ತಮ್ಮ 'ಹೊಸಗನ್ನಡದ ಪ್ರಥಮ ಗ್ರಂಥಕಾರ' ಎಂಬ ಕೃತಿಯಲ್ಲಿ ಲಿಯೋನಾರ್ಡೊ ಚಿನ್ನಾಮಿ (೧೬೦೯-೧೬೭೬) ಯನ್ನು ಹೊಸಗನ್ನಡ ಗದ್ಯಸಾಹಿತ್ಯದಲ್ಲಿ ಪ್ರಥಮ ಗ್ರಂಥಕಾರ ಎಂದು ಗುರುತಿಸುತ್ತಾರೆ. ಇವರು ಬರೆದ ಕನ್ನಡ ಗ್ರಂಥಗಳು[೨] ಅನೇಕ ಇವೆ. ಕನ್ನಡದಲ್ಲಿ ಮೊಟ್ಟಮೊದಲು ಸಾಹಿತ್ಯ ಚಟುವಟಿಕೆಗೆ ತೊಡಗಿದ ವಿದೇಶಿ ವಿದ್ವಾಂಸರು ಇವರು. ೧೮೯೦ ರಲ್ಲಿ ಶಾರ್ಬೋನೊ ಕೆಲವು ಕೃತಿಗಳನ್ನು ಭಾಷಾಂತರಿಸಿದರು. ಆದರೆ ಮುಂದೆ ಕಥೋಲಿಕ ಮಿಶನರಿಗಳು ಕನ್ನಡ ಸಾಹಿತ್ಯ ಕ್ಷೇತ್ರವನ್ನೆ ಮರೆತು ಬಿಟ್ಟರೇನೋ ಎನ್ನುವಷ್ಟರ ಮಟ್ಟಿಗೆ ಅವರ ಕನ್ನಡ ಸೇವೆ, ಸಾಹಿತ್ಯ ಸೇವೆ ಕುಂಠಿತವಾಗಿ ಬಿಡುತ್ತದೆ. ಅವರು ಹಾಕಿಕೊಟ್ಟ ಮಾರ್ಗದ ಜಾಡನ್ನು ಹಿಡಿದು ಮುಂದುವರೆದ ಪ್ರೊಟೆಸ್ಟಂಟ್ ಪಂಥದ ಲಂಡನ್ ಮಿಶನ್, ವೆಸ್ಲಿಯನ್ ಮಿಶನ್ ಮತ್ತು ಬಾಸೆಲ್ ಮಿಶನ್ ಸಂಸ್ಥೆಗಳ ಸದಸ್ಯರು ಹಾಗೂ ವಿದೇಶಿ ಶ್ರೀ ಸಾಮಾನ್ಯರು ಕನ್ನಡ ಸಾಹಿತ್ಯವನ್ನು ಕೈಗೆತ್ತಿಕೊಂಡು ತಮ್ಮ ಅವಿರತ ಶ್ರಮದಿಂದ ಕನ್ನಡ ಸಾಹಿತ್ಯವನ್ನು ಬೆಳೆಸಿದರು. ಈ ಮಿಶನರಿ ಸಂಸ್ಥೆಗಳ ಸೇವೆಯನ್ನು ಪ್ರಮುಖವಾಗಿ ಗೀತ ಸಾಹಿತ್ಯಕ್ಕೆ ಇವರ ಕೊಡುಗೆಯನ್ನು ಗುರುತಿಸುವುದರೊಂದಿಗೆ ವಿಶ್ವದೆಲ್ಲೆಡೆ ಪ್ರಚಲಿತವಿದ್ದ ಕ್ರೈಸ್ತ ಧರ್ಮ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಪಾದಾರ್ಪಣೆ ಮಾಡಿದ ಮಹತ್ವದ ಅಂಶವನ್ನು ತಿಳಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಧಾರ್ಮಿಕ ತತ್ವಗಳು ಮನುಷ್ಯನ ಆಂತರಿಕ ಮತ್ತು ಬಾಹ್ಯ ಜೀವನವನ್ನು ಶುದ್ಧೀಕರಿಸಿ ಆತನನ್ನು ಜೀವನದ ಅಂತಿಮ ಗುರಿಯಾದ ಮೋಕ್ಷಪ್ರಾಪ್ತಿಗೆ ಅರ್ಹರನ್ನಾಗಿ ಮಾಡುತ್ತದೆ. ಇಂತಹ ಧಾರ್ಮಿಕ ತತ್ವಗಳನ್ನು ಹೊತ್ತು ಜಗತ್ತಿನೆಲ್ಲೆಡೆ ಬಿತ್ತರಿಸಿ ಮಾನವಕೋಟಿಯನ್ನು ಸನ್ಮಾರ್ಗದಲ್ಲಿ ನಡೆಸಲು ಪ್ರಯತ್ನಿಸಿದ ಮಿಶನರಿಗಳು ಪರನಾಡಿನಿಂದ ಆಗಮಿಸಿ ಕನ್ನಡ ನಾಡಿನೊಡನೆ ಒಡನಾಟ ಬೆಳೆಸಿ, ಕನ್ನಡ ಭಾಷೆಯ ಸವಿಯನ್ನುಂಡು ಸಾಹಿತ್ಯ ರಚನೆಗೆ ತಮ್ಮನ್ನೇ ತೊಡಗಿಸಿಕೊಂಡ ಅವರ ಪ್ರತಿಭೆ ಅಪೂರ್ವವಾದದ್ದು. ರೋಗ-ರುಜಿನ, ಕಷ್ಟ-ಸಂಕಟ, ಹಿಂಸೆ, ತಿರಸ್ಕಾರಗಳಿಗೆ ಬಗ್ಗದೆ ಪರಮಾತ್ಮನ ರಕ್ಷಣೆಯಲ್ಲಿ ಆಳವಾದ ವಿಶ್ವಾಸವಿಟ್ಟು ಶುಭಸಂದೇಶದ ಪ್ರಚಾರಕ್ಕಾಗಿ ಅಂದರೆ "ಎಲ್ಲಕ್ಕಿಂತಲೂ ಹೆಚ್ಚಾಗಿ ದೇವರನ್ನು ಪ್ರೀತಿಸು, ನಿನ್ನಂತೆಯೇ ಪರರನ್ನು ಪ್ರೀತಿಸು"[೩] ಎಂಬ ದೇವಾಜ್ಞೆಯನ್ನು ಎಲ್ಲೆಡೆಯೂ ಮೊಳಗುವಂತೆ ಇವರು ನಡೆಸಿದ ಪ್ರಯತ್ನ ಅಸಾಧಾರಣವಾದದ್ದು. ಸ್ವ ನಾಡಿನ ಸುಖ ಸಂತೋಷಗಳಿಗೆ ಮಣಿಯದೆ 'ತಾನೊಂದು ಬಗೆದರೆ ದೈವವೊಂದು ಬಗೆದ' ಎಂಬಂತೆ ದೈವವಾಣಿಗೆ ಶಿರಬಾಗಿ ನಡೆಸಿದ ಇವರ ತ್ಯಾಗಮಯ ಜೀವನವು ಒಂದು ರೀತಿಯಲ್ಲಿ ದಿವ್ಯವಾದ ಜೀವನವೇ ಆಗಿತ್ತು. ಆತ್ಮಪ್ರಶಂಸೆಯನ್ನು ಮಾಡಿಕೊಳ್ಳದ ಮಿಶನರಿಗಳು ಸೇವಾ ಮನೋಭಾವನೆಯನ್ನು ಹೊಂದಿ ತಮ್ಮ ಕಾರ್ಯಗಳಿಂದ ದೇವರಿಗೆ ಮಹಿಮೆ ಉಂಟಾಗುವಂತೆ ಬಯಸಿದರು. ಇಂತಹ ಮಹನೀಯ ವ್ಯಕ್ತಿಗಳ, ಚೇತನಗಳ ರೋಮಾಂಚನಕಾರಿ ಬದುಕನ್ನು ತಿಳಿಸುವುದೂ ಈ ಅಧ್ಯಯನದ ಉದ್ದೇಶವಾಗಿದೆ.

ಕ್ರೈಸ್ತ ಸಿದ್ಧಾಂತ ಅರ್ಥೈಸಿಕೊಳ್ಳಬೇಕಾದರೆ ಅದರ ಪಾರಿಭಾಷಿಕ ಪದಗಳ ಅರಿವು ಅಗತ್ಯ. ಅಂತೆಯೇ ಮಿಶನರಿಗಳು ಕ್ರೈಸ್ತ ಧಾರ್ಮಿಕ ಪದಗಳನ್ನು ಭಾರತೀಕರಣಗೊಳಿಸಿದರು. ಅಂತಹ ಪದಗಳನ್ನ ಗುರುತಿಸುವ ಪ್ರಯತ್ನ ಈ ಅಧ್ಯಯನದಲ್ಲಿದೆ.

ಕ್ರೈಸ್ತ ಮಿಶನರಿಗಳು ರಚಿಸಿದ ಗೀತೆಗಳು ೧೮೪೧ ರಲ್ಲಿ ರಚಿತವಾಗಿದ್ದರೂ ೧೯೬೬ ರವರೆಗೆ ಪರಿಷ್ಕೃತಗೊಳ್ಳುತ್ತಾ ಬಂದಿತು. ಹೀಗೆ ೧೨೫ ವರ್ಷಗಳ ಅವಧಿಯಲ್ಲಿ ಈ ಗೀತೆಗಳು ಬದಲಾವಣೆಗೊಂಡು ಶಿಷ್ಟ ಸಾಹಿತ್ಯಕ್ಕೆ ಸರಿಸಮಾನವಾಗಿ ರಚಿತವಾದ ಬಗೆಯನ್ನು ಕಂಡುಕೊಳ್ಳುವುದು ಇದರ ಉದ್ದೇಶ.

ಪ್ರಾರಂಭದ (೧೮೪೧) ಮುದ್ರಣಕ್ಕೂ, ಇಂದಿನ ಮುದ್ರಣಕ್ಕೂ ವ್ಯತ್ಯಾಸಗಳನ್ನು ಗುರುತಿಸಬಹುದು. ೧೮೪೧ ರಲ್ಲಿ ಮೊಟ್ಟಮೊದಲು ಕಲ್ಲಚ್ಚಿನಲ್ಲಿ ಮುದ್ರಿತವಾದ ಗೀತ ಪುಸ್ತಕದಲ್ಲಿರುವ ಬರವಣಿಗೆಗೂ ಇಂದಿನ ಆಧುನಿಕ ಮುದ್ರಣ ವ್ಯವಸ್ಥೆಯಲ್ಲಿನ ಬರವಣಿಗೆಯ ಬೆಳವಣಿಗೆಯನ್ನು ಗುರುತಿಸುವ ಗುರಿಯನ್ನು ಹೊಂದಿದೆ.

ಕರ್ನಾಟಕಕ್ಕೆ ಆಗಮಿಸಿದ ಮಿಶನರಿಗಳು ಈ ನಾಡಿನ ವಿವಿಧ ಭಾಗಗಳಲ್ಲಿ ಚಲಿಸಿ ಅಲ್ಲಿನ ಪ್ರಾಂತೀಯ ಕನ್ನಡವನ್ನು ಕಲಿತು ಪ್ರಾಂತೀಯ ಭಾಷೆಯಲ್ಲಿಯೇ ಗೀತ ರಚನೆ ಮಾಡಿದರು. ಉದಾ:- ಮಂಗಳೂರು ಕನ್ನಡ, ಮೈಸೂರು ಕನ್ನಡ ಈ ಭಾಷಾ ವಿಭಿನ್ನತೆಯನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ.

ವಿದೇಶಿ ರಾಗದಲ್ಲಿ ಮತ್ತು ಕನ್ನಡ ಕಾವ್ಯಗಳ ಪ್ರಭಾವದಲ್ಲಿ ಪ್ರಮುಖವಾಗಿ ಭಾವ ಗೀತೆ, ಮತ್ತು ಷಟ್ಪದಿ ರೂಪಗಳಲ್ಲಿ ಗೀತ ರಚನೆಮಾಡಿದ್ದನ್ನೂ ಮನಗಾಣುವ ಉದ್ದೇಶ ಇಲ್ಲಿದೆ.

ಗೇಯತೆ, ಪ್ರಾಸ ಉತ್ತಮ ಕಾವ್ಯ ಗುಣಗಳಿಂದ ಇವರ ಗೀತ ರಚನೆ ಕೂಡಿರದೆ ಇರುವುದಕ್ಕೆ ಕಾರಣವನ್ನು ಹುಡುಕುವ ಪ್ರಯತ್ನವೂ ಈ ಅಧ್ಯಯನದಲ್ಲಿದೆ.

ಜೀವನದ ವಿಭಿನ್ನ ಜಂಜಾಟಗಳಿಗೆ ಸಂಕಟಗಳಿಗೆ ಸಿಲುಕಿ ದೈವ ಶಕ್ತಿಯಿಂದ ವಿಜಯ ಸಾಧಿಸಿರುವ ಸಂತರು ಪ್ರತಿಯೊಂದು ಸಂಕಟಕ್ಕೂ ಪರಿಹಾರ ಮಾರ್ಗವನ್ನು ಸೂಚಿಸಿದ್ದಾರೆ. ಅವರು ನಿರಂತರವಾಗಿ ಮೊಳಗುವ ಸ್ಪೂರ್ತಿ ದೀಪಗಳು ಮತ್ತು ಸಮುದ್ರ ತೀರದ ದೀಪ ಸ್ತಂಭಗಳು. ಇವರ ಜೀವನ ಚರಿತ್ರೆಯನ್ನು ತಿಳಿಸುವ ಪ್ರಧಾನ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

ಅಬಾಲ ವೃದ್ಧರನ್ನೂ ಮನಸೆಳೆಯುವ, ಮನತಣಿಸುವ, ಮಾಧುರ್ಯವನ್ನು ಕಟ್ಟಿಕೊಡುವ ಅಪೂರ್ವಶಕ್ತಿ ಗೀತೆಗಿದೆ. ಅದರಲ್ಲು ಧಾರ್ಮಿಕ ಗೀತೆಗಳು ಮನದಾಳದಲ್ಲಿ ನಿರಂತರವಾಗಿ ಪ್ರತಿಧ್ವನಿಸಿದಾಗ ಆತ ನೂತನ ಸೃಷ್ಟಿಯಾಗಬಲ್ಲ. ಗೀತೆಗಳಲ್ಲಿನ ಆಧ್ಯಾತ್ಮಿಕತೆ ಅಬಲರನ್ನು ಸಬಲರನ್ನಾಗಿ ಮಾಡುವ, ದುಃಖಿತರಿಗೆ ಸಾಂತ್ವನ ನೀಡುವ, ಬಾಳಹೊರೆ ಹಗುರಾಗಿಸುವ, ಸ್ಫೂರ್ತಿಯ ಚಿಲುಮೆಯಾಗಿ ಕಂಡು ಬರುತ್ತವೆ. ಕ್ರೈಸ್ತಗೀತೆಗಳು ಭಗವಾನ್ ಯೇಸುವಿನ ಜೀವನವನ್ನು ಅವರ ಬೋಧನೆ ಅವರು ಮಾಡಿದ ಕಾರ್ಯಗಳನ್ನು ವಿವರಿಸಿ ಅವರ ಅಪೂರ್ವ ವ್ಯಕ್ತಿತ್ವವನ್ನು ನಮಗೆ ಪರಿಚಯ ಮಾಡಿಕೊಡುತ್ತದೆ. ಇಂತಹ

ಗೀತೆಗಳ ಅಧ್ಯಯನದೊಂದಿಗೆ ಕ್ರೈಸ್ತ ಧರ್ಮದ ವಿಧಿ ವಿಧಾನಗಳಿಗೆ ಸಂಬಂಧಿಸಿದ ಗೀತೆಗಳ ಅಧ್ಯಯನವನ್ನು ಮಾಡುವ ಉದ್ದೇಶವೂ ಈ ನಿಬಂಧದಲ್ಲಿದೆ.

ಸಾಮಾಜಿಕ ಪಿಡುಗುಗಳಲ್ಲಿ ಒಂದಾದ ಜಾತಿಪದ್ಧತಿ ಅಥವಾ ವರ್ಣ ವ್ಯವಸ್ಥೆಯನ್ನು ಹೋಗಲಾಡಿಸಲು ಮಿಶನರಿಗಳು ಪ್ರಯತ್ನಿಸಿ ಅದರ ಕುರಿತು ರಚಿಸಿದ ಗೀತೆಗಳ ಅಧ್ಯಯನ ನಡೆಸುವ ಗುರಿ ಇಲ್ಲಿದೆ.

ಮಹಿಳಾ ಮಿಶನರಿಗಳು ನೀಡಿದ ಕೊಡುಗೆಯನ್ನು ಅವರ ನಿಸ್ವಾರ್ಥ ಸೇವೆಯನ್ನು ಸ್ಮರಿಸುವ ಪ್ರಯತ್ನವೂ ಇಲ್ಲಿದೆ.

ಪ್ರೊಟೆಸ್ಟೆಂಟ್ ಮತ್ತು ಕಥೋಲಿಕ ಧರ್ಮದ ನಡುವೆ ಇರುವ ಕೆಲವು ವ್ಯತ್ಯಾಸಗಳನ್ನು ಗುರುತಿಸುವ ಪ್ರಯತ್ನವೂ ಇಲ್ಲಿದೆ.

ಪಾಶ್ಚಾತ್ಯ ಮಿಶನರಿಗಳು ಕೇವಲ ಕ್ರೈಸ್ತ ಗೀತೆಗಳನ್ನೇ ರಚಿಸದೆ ಸ್ಥಳೀಯ ಸಂಸ್ಕೃತಿಯನ್ನು ಗೌರವಿಸಿ ರಚಿಸಿದ ಹಾಗೂ ರಾಷ್ಟ್ರಕ್ಕಾಗಿ, ರಾಷ್ಟ್ರವನ್ನಾಳುವ ನಾಯಕರುಗಳಿಗಾಗಿ ಪ್ರಾರ್ಥಿಸುವ ಗೀತೆಗಳನ್ನು ಅಧ್ಯಯನ ಮಾಡುವ ಗುರಿ ಇಲ್ಲಿದೆ.

೧.೪ ಅಧ್ಯಯನದ ವಿಧಾನ

ಪಾಶ್ಚಾತ್ಯ ಮಿಶನರಿಗಳು ಗೀತಸಾಹಿತ್ಯಕ್ಕೆ ನೀಡಿದ ಸೇವೆಯನ್ನು ಕುರಿತ ಮಹಾ ಪ್ರಬಂಧದ ರಚನೆಯ ಕಾರ್ಯದಲ್ಲಿ ವಿಫುಲ ಆಕರ ಸಾಮಗ್ರಿಗಳ ಶೋಧ, ಸಂಗ್ರಹ ಮತ್ತು ವಿವೇಚನೆಯ ಅವಶ್ಯಕತೆ ಎದ್ದು ಕಾಣುತ್ತದೆ.

ಕಥೋಲಿಕ ಮತ್ತು ಪ್ರೊಟೆಸ್ಟೆಂಟ್ ಮಿಶನರಿಗಳು ರಚಿಸಿದ ಹಾಗೂ ಇಂದು ಲಭ್ಯವಿರುವ ಗೀತ ಪುಸ್ತಕಗಳು ಪ್ರಮುಖವಾಗಿ ಅಧ್ಯಯನಕ್ಕೆ ಸಂಬಂಧಪಟ್ಟ ಗೀತೆಗಳ ಪಟ್ಟಿಯನ್ನು ಅನುಬಂಧಗಳಲ್ಲಿ (ಅನುಬಂಧ ೧,೨,೩) ನೀಡಲಾಗಿದೆ. ಲಭ್ಯವಿದ್ದ ಎಲ್ಲ ಗೀತೆಗಳನ್ನು ವಿವಿಧ ಗ್ರಂಥಾಲಯಗಳಿಂದ, ಪತ್ರಾಗಾರ ಹಾಗೂ ಅನೇಕ ಪ್ರದೇಶಗಳಿಗೆ ಭೇಟಿ ನೀಡುವ ಮೂಲಕ ಪಡೆದುಕೊಳ್ಳಲಾಯಿತು. ಒಳಹೊಕ್ಕಷ್ಟು ಸಾಮಗ್ರಿಗಳು ವಿಫುಲವಾಗಿವೆ ಎಂದೆನಿಸಿತು. ಆದರೆ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಗೀತೆಗಳ ಸಂಗ್ರಹವನ್ನು ಸೀಮಿತಗೊಳಿಸಲಾಯಿತು. ಸಂಗ್ರಹಿಸಿದ ಗೀತೆಗಳನ್ನು ಕಥೋಲಿಕ, ಲಂಡನ್, ವೆಸ್ಲಿಯನ್ ಮತ್ತು ಬಾಸೆಲ್ ಮಿಶನ್‌ಗೆ ಸಂಬಂಧಿಸಿದಂತೆ ಬೇರ್ಪಡಿಸಲಾಯಿತು. ಮಾಹಿತಿ ಲಭ್ಯವಿದ್ದ (ಜೀವನ ಚರಿತ್ರೆ ಮತ್ತು ಗೀತೆ) ಮಿಶನರಿಗಳ ಗೀತೆಗಳನ್ನು ಅಧ್ಯಯನಕ್ಕೆ ತೆಗೆದುಕೊಳ್ಳಲಾಯಿತು. ಈ ಗೀತೆಗಳ ವಸ್ತುವಿಷಯಗಳು ವೈವಿಧ್ಯಮಯವಾಗಿದ್ದರಿಂದ ಕೆಲವು ವಸ್ತುವಿಷಯಗಳನ್ನು ಮಾತ್ರ ಆಯ್ದುಕೊಳ್ಳಲಾಯಿತು. ಈ ಗೀತೆಗಳಲ್ಲಿ ಬರುವ ಪಾರಿಭಾಷಿಕ ಪದಗಳನ್ನು ಸಂಗ್ರಹಿಸಿ ಭಾರತೀಕರಣಗೊಂಡ ಬಗೆಯನ್ನು ಅಭ್ಯಸಿಸಲಾಯಿತು. ಈ ಪದಗಳು ಕ್ರೈಸ್ತ ಧಾರ್ಮಿಕ ಚೌಕಟ್ಟಿನಲ್ಲಿ ವಿಶಿಷ್ಟ ಅರ್ಥವನ್ನು ಹೊಂದಿವೆ.

ಅಲಂಕಾರಯುಕ್ತ ಪದಗಳು ಕಂಡು ಬಂದಿದ್ದು ಇವು ಮಿಶನರಿಗಳ ಕಾವ್ಯ ಪ್ರತಿಭೆಗೆ ಹಿಡಿದ ಕೈಗನ್ನಡಿಯಂತಿವೆ. ನಿಸರ್ಗದ ವರ್ಣನೆಯನ್ನು ಮಾಡುವುರೊಂದಿಗೆ ಕ್ರೈಸ್ತ ಧಾರ್ಮಿಕ ಚಿಂತನೆಗಳನ್ನು ಹೋಲಿಸಿ ವರ್ಣಿಸಿರುವುದರಿಂದ ಅರ್ಥಗ್ರಹಿಕೆ ಬಹು ಸುಲಭವಾಗತೊಡಗಿತು.

ಭಾಷಾಂತರ ಸ್ವರೂಪ ಹೇಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ. ೧೮೪೧ ರಿಂದ ೧೯೬೬ ರವರೆಗಿನ ಮೂರು ಪರಿಷ್ಕರಣಗಳನ್ನು ಉದಾಹರಣೆಯಾಗಿಟ್ಟುಕೊಂಡು (ಲಂಡನ್ ಮತ್ತು ವೆಸ್ಲಿಯನ್ ೧೮೯೮, ೧೯೨೯ ಮತ್ತು ೧೯೬೬, ಬಾಸೆಲ್ ಮಿಶನ್-೧೮೪೧, ೧೮೭೪, ೧೯೦೫ ಮತ್ತು ೧೯೬೬) ಇಲ್ಲಿ ಬರುವ ಪದಗಳ ಬೆಳವಣಿಗೆ ಅಂದರೆ ಶಿಷ್ಟ ಪದಗಳ ಬಳಕೆ ಹೇಗಾಗಿದೆ ಹಾಗೂ ಕೆಲವು ಚರಣಗಳು ಕಾಲಕ್ರಮೇಣ ಬಳಕೆಯಲ್ಲಿರದೇ ಹೋಗಿರುವ ಕಾರಣವನ್ನು ಕಂಡುಹಿಡಿಯಲು ಪ್ರಯತ್ನಿಸಲಾಗಿದೆ.

ಸ್ಥಳೀಯ ಸಂಪ್ರದಾಯದ ಜನಪ್ರಿಯ ಪದಗಳನ್ನು ಬಳಸಿರುವ ಬಗೆ ಸಮಂಜಸವಾಗಿದೆ. ೧೮೫೦ ರ ಸುಮಾರಿಗೆ ಸಂಸ್ಕೃತ ಭಾಷೆ ಬಳಕೆಯಲ್ಲಿದ್ದ ಕಾಲ. ಈ ಸಂದರ್ಭದಲ್ಲಿಯೇ ಸಂಸ್ಕೃತ ಮತ್ತು ದೇಶಿಯ ಭಾಷೆಗಳನ್ನು ಸಮಪ್ರಮಾಣದಲ್ಲಿ ಬಳಸಿರುವುದನ್ನು ಗುರುತಿಸಲಾಗಿದೆ. ಹಾಗೆಯೇ ಸಂವಾದಿ ಪದಗಳ ಬಳಕೆಯಾಗಿರುವುದನ್ನು ಕಂಡುಕೊಳ್ಳಲಾಗಿದೆ.

ಗೇಯತೆ, ಪ್ರಾಸ, ಉತ್ತಮ ಕಾವ್ಯಗುಣಗಳಿಂದ ಈ ಗೀತೆಗಳು ಕೂಡಿರದಿದ್ದರೂ ಕೆಲವು ಗೀತೆಗಳು ತೀರ ಸರಳವಾಗಿರುವ ಕಾರಣವನ್ನು ತಿಳಿಸಲಾಗಿದೆ. ಕನ್ನಡದ ಬರವಣಿಗೆ ಶೈಲಿಯ ಬೆಳವಣಿಗೆ ಕಾಲದಿಂದ ಕಾಲಕ್ಕೆ ಹೇಗೆ ಬದಲಾವಣೆ ಹೊಂದಿ ಇಂದಿನ ಸ್ವರೂಪವನ್ನು ಪಡೆಯಿತು ಎಂಬುದನ್ನು ತಿಳಿಸಲಾಗಿದೆ.

ಜಗದ್‌ರಕ್ಷಕ ಯೇಸು ಪಟ್ಟ ಯಾತನೆ, ಮರಣ ಮತ್ತು ಪುನರುತ್ಥಾನಗಳು ಹೇಗೆ ಒಬ್ಬ ಮನುಷ್ಯನು ತನ್ನ ಬದುಕಿನಲ್ಲಿ ಅನುಭವಿಸುವ ಕಷ್ಟಕ್ಕೆ ಹೋಲಿಸಿಕೊಂಡು ಅದರಿಂದ ಭರವಸೆಯನ್ನು, ಆತ್ಮ ಸಂತೃಪ್ತಿಯನ್ನು ಪಡೆಯಬಹುದು ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

ಕ್ರೈಸ್ತ ಮಿಶನರಿಗಳ ಶ್ರೇಷ್ಠ ಸಾಧನೆಗೆ ಪ್ರಚೋದನೆ ನೀಡಿದ ಪ್ರೇರಕ ಶಕ್ತಿಯಾವುದಾಗಿತ್ತು? ಹೊಸನಾಡು, ಹೊಸಭಾಷೆ, ಹೊಸಸಂಸ್ಕೃತಿ ಎಲ್ಲವೂ ಹೊಸದಾದರೂ ಅಂಜದೆ, ಅಳುಕದೆ ಕಾರ್ಯ ಸಾಧಿಸಲು ಶಕ್ತರನ್ನಾಗಿ ಮಾಡಿದ ವಿಷಯಗಳನ್ನು ಗಮನಿಸುವುದರೊಂದಿಗೆ ಅವರ ಜೀವನಚರಿತ್ರೆಯನ್ನು ಸಾಧ್ಯವಾದಷ್ಟು ತಿಳಿಸಲಾಗಿದೆ. ಕ್ರೈಸ್ತ ಗೀತೆಗಳ ಮೂಲ ಕರ್ತೃಗಳಿಗೆ ಗೀತೆ ರಚಿಸಲು ಒದಗಿ ಬಂದ ಸಂದರ್ಭಗಳು ಯಾವುದಾಗಿತ್ತು ಎಂಬುದನ್ನು ಸಾಧ್ಯವಾದಷ್ಟು ಇಲ್ಲಿ ವಿವೇಚಿಸಲಾಗಿದೆ.

ಭಾಷಾಂತರಗೊಂಡ ಜರ್ಮನ್, ಲ್ಯಾಟಿನ್, ಫ್ರೆಂಚ್ ಗೀತೆಗಳ ಮೊದಲ ಸಾಲುಗಳನ್ನು ಹಾಗೂ ಅವುಗಳ ರಾಗವನ್ನು ತಿಳಿಸಲಾಗಿದೆ. ಸ್ವರಚಿತ ಗೀತೆಗಳ ರಾಗವನ್ನು ಗುರುತಿಸಲಾಗಿದೆ.

ಪ್ರಾರಂಭದಲ್ಲಿ ಬಳಸುತ್ತಿದ್ದ ಚಿಹ್ನೆಗಳು ಹಾಗೂ ಕಾಲಕ್ರಮೇಣ ಬಳಸುತ್ತಿದ್ದ ಚಿಹ್ನೆಗಳನ್ನು ಗುರುತಿಸಲಾಗಿದೆ.

ಲಂಡನ್ ಮತ್ತು ವೆಸ್ಲಿಯನ್ ಮಿಶನರಿಗಳ ಗೀತೆಗಳು ಟ್ಯುಟೋನಿಕ್ ರಾಗವನ್ನು ಅನುಸರಿಸಿದ್ದು ಅದರಲ್ಲಿ ಇಂತಿಷ್ಟು ಅಕ್ಷರಗಳಿರಬೇಕು ಎಂಬ ನಿಯಮವಿದ್ದು ಅವುಗಳನ್ನು ಲಾಂಗ್‌ಮೀಟರ್, ಸ್ಮಾಲ್ ಮೀಟರ್ ಮತ್ತು ಕಾಮನ್‌ಮೀಟರ್ ಎಂದು ಕರೆದಿದ್ದು ಈ ಪದ್ಯಗಳನ್ನೇ ದ್ವಿಗುಣಿಸಿಕೊಂಡು ಡಬಲ್ ಲಾಂಗ್‌ಮೀಟರ್ (DLM) ಡಬಲ್ ಕಾಮನ್‌ಮೀಟರ್ (DCM) ಮತ್ತು ಡಬಲ್ ಸ್ಮಾಲ್‌ಮೀಟರ್ (DSM) ಎಂದು ಕರೆದಿರುವುದನ್ನು ಉದಾ:- ಮೂಲಕ ಮನವರಿಕೆ ಮಾಡಿಕೊಡಲಾಗಿದೆ.

ಪಾಶ್ಚಾತ್ಯ ಮಿಶನರಿಗಳು ಭಾಷಾಂತರಿಸಿದ ಹಾಗೂ ಸ್ವರಚಿಸಿದ ಗೀತೆಗಳೆಷ್ಟು ಎಂಬುದನ್ನು ತಿಳಿಸಲಾಗಿದೆ.

ಕಥೋಲಿಕ ಸಭೆ ಹಾಗೂ ಪ್ರೊಟೆಸ್ಟೆಂಟ್ ಸಭೆಗಳಲ್ಲಿ ಕಂಡು ಬರುವ ಕೆಲವು ಪ್ರಮುಖ ವ್ಯತ್ಯಾಸಗಳನ್ನು ಗುರುತಿಸಿಕೊಳ್ಳಲಾಯಿತು.

ಕಷ್ಟ ಸಂಕಟಗಳಲ್ಲಿ, ಅಶಾಂತಿ, ಆಶಾರಹಿತ ಬಾಳಿನಲ್ಲಿ ಕ್ರಿಸ್ತನ ವ್ಯಾಕ್ಯಗಳು ಹೇಗೆ ಧೈರ್ಯವನ್ನು ನೀಡಿ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಜೀವಿಸಬೇಕೆಂದು ಬೋಧಿಸುತ್ತದೆ ಎಂಬುದನ್ನು ತಿಳಿಸಲಾಗಿದೆ.

ಮಿಶನರಿ ಗೀತಸಾಹಿತ್ಯದ ಲೋಕದೃಷ್ಟಿಯನ್ನು ಅಂದರೆ ಪ್ರಸ್ತುತ ಸಮಾಜದಲ್ಲಿ ಅದು ಹೇಗೆ ಸಮಾಜವನ್ನು ಆದರ್ಶ ಸಮಾಜವನ್ನಾಗಿ ಮಾಡುವಲ್ಲಿ ಈ ಗೀತೆಗಳ ಪಾತ್ರ ಎಷ್ಟೆಂಬುದನ್ನು ಚರ್ಚಿಸಲಾಗಿದೆ.

ಕ್ರಿ.ಪೂ. ೭ನೇ ಶತಮಾನದಲ್ಲಿ ಪ್ರಚಲಿತವಿದ್ದ ಗೀತೆಗಳನ್ನು ಗುರುತಿಸಿ ಅಂದಿನಿಂದ ಇಂದಿನವರೆಗೂ ಕ್ರೈಸ್ತ ಸಮುದಾಯದಲ್ಲಿ ಹರಡಿರುವ ಗೀತೆಗಳನ್ನು ಗುರುತಿಸುವಾಗ ಕ್ರಿ.ಪೂ. ೨೦೦ ಕ್ಕೂ ಮುಂಚಿತವಾಗಿ ಪ್ರಚಲಿತದಲ್ಲಿದ್ದ ಗೀತೆಗಳು ಇಂದೂ ಬಳಕೆಯಲ್ಲಿರುವುದನ್ನು ಹಾಗೂ ಈ ಕೀರ್ತನೆಗಳು, ಬೈಬಲ್ ಆಧಾರಿತ ವಾಕ್ಯಗಳನ್ನು, ಘಟನೆಗಳನ್ನು ಆಧರಿಸಿ ಗೀತೆ ರಚಿಸಿರುವುದನ್ನು ತಿಳಿಸಲಾಗಿದೆ.

ಕೆಲವು ಪದಗಳು ಗ್ರೀಕ್, ಹೀಬ್ರು, ಇಂಗ್ಲೀಷ್, ಲ್ಯಾಟಿನ್, ಫ್ರೆಂಚ್, ಸಿರಿಯಕ್ ಭಾಷೆಯಿಂದ ಬಂದದ್ದಾಗಿದ್ದು ಅವು ಈಗ ಕನ್ನಡದಲ್ಲಿ ಹೇಗೆ ಭಾಷಾಂತರಗೊಂಡು ಬಳಕೆಯಾಗಿವೆ ಎಂದು ತಿಳಿಸಲಾಗಿದೆ.

ಪಾಶ್ಚಾತ್ಯ ಮಿಶನರಿಗಳಲ್ಲಿದ್ದ ವಿನಯಮನೋಭಾವ ಹೇಗೆ ಕೃತಿ ರಚಿಸಿ ಪ್ರಕಟಿಸುವಾಗಲೂ ಕಂಡು ಬಂದಿದೆ ಎಂಬುದನ್ನು ತಿಳಿಸಲಾಗಿದೆ.

ಮಿಶನರಿಗಳು ಕೇವಲ ಧಾರ್ಮಿಕ ಮನೋಭಾವನೆಯಿಂದಲೇ ಗೀತೆಗಳನ್ನು ರಚಿಸದೆ ಪ್ರಕೃತಿ ರಕ್ಷಣೆಗೆ ಸಂಬಂಧಿಸಿದ ಗೀತೆಗಳನ್ನು ರಚಿಸಿರುವುದನ್ನು ಅಭ್ಯಸಿಸಲಾಗಿದೆ.

ಮಿಶನರಿಗಳು ಕ್ರೈಸ್ತ ಗೀತೆಗಳನ್ನು ಧಾರ್ಮಿಕ ವಲಯದಲ್ಲಿ ಮಾತ್ರ ಬಳಸದೆ ಅವುಗಳನ್ನು ಶೈಕ್ಷಣಿಕ ಹಾಗೂ ಸಾಮಾಜಿಕ ಬದಲಾವಣೆಗಾಗಿ, ಕೆಲವು ವರ್ಗದ ಉದ್ದಾರಕ್ಕಾಗಿ ಬಳಸಿರುವುದನ್ನು ತಿಳಿಸಲಾಗಿದೆ. ಈ ಗೀತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ಗುರುತಿಸಲಾಗಿದೆ.

ಮಹಿಳಾ ಮಿಶನರಿಗಳು ಗೀತ ಸಾಹಿತ್ಯಕ್ಕೆ ನೀಡಿದ ಕೊಡುಗೆ ಹಾಗೂ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಅವರು ಮಾಡಿದ ಸೇವೆಯನ್ನು ಗುರುತಿಸಲಾಗಿದೆ.

೧.೫ ಅಧ್ಯಯನದ ವ್ಯಾಪ್ತಿ

ಕಥೋಲಿಕ, ಲಂಡನ್, ವೆಸ್ಲಿಯನ್ ಮತ್ತು ಬಾಸೆಲ್ ಮಿಶನ್‌ಗಳ ಪಾಶ್ಚಾತ್ಯ ಮಿಶನರಿಗಳು ರಚಿಸಿದ ಗೀತೆಗಳನ್ನು ಮಾತ್ರ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ. ಹಾಗೂ ಈ ಮಿಶನರಿಗಳು ರಚಿಸಿದ ಆರಾಧನಾ ವಿಧಿಗೆ ಸಂಬಂಧಪಟ್ಟ ಗೀತೆಗಳು, ಶೈಕ್ಷಣಿಕ ಕ್ಷೇತ್ರದಲ್ಲಿ ಮಕ್ಕಳಿಗೆ ಧಾರ್ಮಿಕ ಮೌಲ್ಯವನ್ನು ಬೆಳೆಸಲು ರಚಿಸಿದ ಗೀತೆಗಳು ಮತ್ತು ಸಾಮಾಜಿಕ ನೀತಿ ಬೋಧನೆಗಾಗಿ ಉದಾ:- ಮದ್ಯಪಾನಿಯರನ್ನು ತಿದ್ದುವುದಕ್ಕಾಗಿ ರಚಿಸಿದ ಗೀತೆಗಳನ್ನು ಅಧ್ಯಯನಕ್ಕಾಗಿ ಬಳಸಲಾಗಿದೆ. ಅಧ್ಯಯನಕ್ಕೆ ತೆಗೆದುಕೊಂಡ ಕೃತಿಗಳು ಇಂತಿವೆ. ೧) ಜಪದ ಪುಸ್ತಕ ೨) ಕೀರ್ತನೆಗಳು ೩) ಕನ್ನಡ ಸಂಗೀತಗಳು ೪) ಕನ್ನಡ ಗೀತಗಳು ೫) ಯಾತ್ರಿಕನ ಸಂಚಾರ ೬) ಕಥಾಮಾಲೆ ೭) ಪ್ರಾಕ್ಕಾವ್ಯಮಾಲಿಕೆ ೮) ಅಭಿನಯ ಗೀತೆಗಳು ೯) ಬಾಲಕರ ಗೀತೆಗಳು ೧೦) ಸುರಾರಿ ಕೀರ್ತನೆಗಳು ೧೧) ಒಂದನೇ ನೋಟು ಪುಸ್ತಕ ೧೨) ಪತ್ರಿಕೆಗಳು(ಒಟ್ಟು ೧೨) ಇವುಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಪಾಶ್ಚಾತ್ಯ ಮಿಶನರಿಗಳು ರಚಿಸಿದ ಗೀತೆಗಳ ವಸ್ತು ವಿಷಯಗಳು ವೈವಿಧ್ಯಮಯವಾಗಿವೆ. ಆದರೆ ಕೆಲವು ವಸ್ತು ವಿಷಯಗಳನ್ನು ಆಯ್ದು ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಅವು ಇಂತಿವೆ. ೧) ಬೈಬಲ್ ೨) ಕ್ರಿಸ್ತರ ವ್ಯಕ್ತಿತ್ವ ೩) ಪರಲೋಕ ೪) ಸಂತರು ೫) ಸಂಸ್ಕಾರಗಳು ೬) ಕ್ರೈಸ್ತರ ಜೀವನ ೭) ಅತ್ಮ ನಿವೇದನೆ ೮) ಸ್ತುತಿ ೯) ಪ್ರಾರ್ಥನೆ ೧೦) ಹಬ್ಬಗಳು ೧೧) ಪ್ರಕೃತಿ ೧೨) ಛಂದಸ್ಸು.

೧೮೪೧ ರಿಂದ ೧೯೧೩ ರ ನಡುವಣ ಅವಧಿಯಲ್ಲಿ ವಿದೇಶಿ ಮಿಶನರಿಗಳು ಅನುವಾದಿಸಿದ ಮತ್ತು ಸ್ವರಚಿಸಿದ ಸುಮಾರು ೧೦೦೦ ದಷ್ಟು ಗೀತೆಗಳು ಕಾಣಿಸಿಕೊಂಡಿವೆ. ಈ ಗೀತೆಗಳಲ್ಲಿ ಎರಡು ಧಾರ್ಮಿಕ ಸಂಸ್ಕೃತಿಗಳ ಭೇಟಿ, ಕ್ರೈಸ್ತ ಧಾರ್ಮಿಕ ಪದಗಳ ಭಾರತೀಕರಣ, ಭಾಷಿಕ ಪ್ರಯೋಗ, ಪ್ರಾರಂಭದ ಹಾಗೂ ಹಂತಹಂತವಾಗಿ ಪದಗಳಲ್ಲಿ, ಸಾಲುಗಳಲ್ಲಿ ಬದಲಾವಣೆಯಾದ ಬಗೆ, ಅಲಂಕಾರ, ಛಂದಸ್ಸುಗಳ ಬಳಕೆ, ರಾಗ, ಗೀತೆಗಳ ಮೂಲ ಕರ್ತೃಗಳು ಹಾಗೂ ಅವರು ಗೀತೆ ರಚಿಸಲು ಪ್ರೇರಿತವಾದ ಬಗೆ, ಕ್ರೈಸ್ತ ಧಾರ್ಮಿಕ ನೆಲಗಟ್ಟಿನಲ್ಲಿ ಕೆಲವು ಪದಗಳ ವಿಶ್ಲೇಷಣೆ, ಪ್ರೊಟೆಸ್ಟೆಂಟ್ ಮತ್ತು ಕಥೋಲಿಕರ ಧಾರ್ಮಿಕ ಆಚರಣೆಯಲ್ಲಿನ ವ್ಯತ್ಯಾಸಗಳು, ಪ್ರೊಟೆಸ್ಟೆಂಟ್ ಮಿಶನರಿಗಳು ರಚಿಸಿದ ಗೀತೆಗಳು ವಿವಿಧ ಸಭೆಗಳಲ್ಲಿ ಹೇಗೆ ಬದಲಾವಣೆ ಹೊಂದಿ ಬಳಕೆಯಾಗಿವೆ ಎಂಬುದು ಈ ಮಹಾಪ್ರಬಂಧದ ಅಧ್ಯಯನದ ವ್ಯಾಪ್ತಿಗೆ ಸೇರಿವೆ.

ಅಡಿ ಟಿಪ್ಪಣಿ

೧. ಹೊಸಗನ್ನಡದ ಅರುಣೋದಯ, ಡಾ. ಶ್ರೀನಿವಾಸ ಹಾವನೂರ, ೧೯೭೪, ಪುಟ.೨೪

೨. ಹೊಸಗನ್ನಡದ ಪ್ರಥಮ ಗ್ರಂಥಕಾರ ಡಾ. ಐ. ಅಂತಪ್ಪ, ೨೦೦೫, ಪುಟ.೪೨

ಲಿಯೋನಾರ್ಡೊ ಚಿನ್ನಾಮಿಯವರ ಗ್ರಂಥಗಳು:

೧. ಕ್ರೈಸ್ತ ಧರ್ಮದ ರಹಸ್ಯ ತತ್ವಗಳನ್ನು ಕುರಿತು ಸುದೀರ್ಘ ಪ್ರಶ್ನೋತ್ತರ

೨. ಅದರ ಸಾರರೂಪ

೩. ಕ್ರೈಸ್ತ ಸಂತರ ಜೀವನ ಚರಿತ್ರೆ

೪. ಕ್ರೈಸ್ತ ಧರ್ಮದ ಸಮರ್ಥನೆ

೫. ಮೈಸೂರು ಜನರ ಜಾತಿಗಳು, ಮೂಢನಂಬಿಕೆಗಳು ಇವುಗಳ ಖಂಡನೆ

೬. ಕನ್ನಡ ವ್ಯಾಕರಣ

೭. ಕನ್ನಡ ಕೋಶ

೮. ಉತ್ತರ ಕನ್ನಡದ ಚರಿತ್ರೆ

೯. ಮೈಸೂರಿನ ಚರಿತ್ರೆ

೧೦. ಸ್ವಾಮಿ ಮರ್ಚೆಲ್ಲೋ ಮಸ್ತ್ರೀಲಿ–ಇವರ ಜೀವನ ಚರಿತ್ರೆ

೩. ಮತ್ತಾಯ ೨೨:೩೫–೪೦

ಅಧ್ಯಾಯ – ಎರಡು

ಕ್ರೈಸ್ತ ಗೀತೆಗಳ ಹುಟ್ಟು ಮತ್ತು ಬೆಳವಣಿಗೆ

ಅಧ್ಯಾಯ – ಎರಡು

ಕ್ರೈಸ್ತ ಗೀತೆಗಳ ಹುಟ್ಟು ಮತ್ತು ಬೆಳವಣಿಗೆ

೨.೧ ಗೀತೆ – ಅರ್ಥ

'ಗೀತೆ' ಇದು ಹೃದಯಸ್ಪರ್ಷಿಯಾದ ಪದ. ಅನಾದಿ ಕಾಲದಿಂದ ಇಂದಿನವರೆಗೂ ಅರ್ಥಪೂರ್ಣವಾಗಿ ಬಳಕೆಯಲ್ಲಿದೆ. ಇದು ಸಾಮಾನ್ಯವಾಗಿ ಹಾಡು, ಕಾವ್ಯ, ಪದ್ಯ ಎಂಬ ಅರ್ಥವನ್ನು ಕೊಡುತ್ತದೆ. ನಮ್ಮ ಸಾಂಸ್ಕೃತಿಕ ಪುಟಗಳನ್ನು ತಿರುವಿ ಹಾಕಿದಾಗ ಕಂಡು ಬರುವ ನೈಜ ಸಂಗತಿ ಎಂದರೆ ಪುರಾತನ ಬರವಣಿಗೆಯು ಪದ್ಯ ರೂಪದಲ್ಲಿಯೇ ಇರುವುದು. ಪ್ರಾಚೀನ ಗ್ರಂಥಗಳಾದ ವೇದ, ಉಪನಿಷತ್ತುಗಳು ಪದ್ಯ ರೂಪದಲ್ಲಿಯೇ ರಚಿತವಾಗಿದೆ. ಪಠಿಸುವಿಕೆ (Chant) ಇದರ ಪ್ರಧಾನ ಗುಣ. ಬಹು ಬೇಗನೆ ನೆನಪಿನಲ್ಲಿಡಲು ಹಾಗೂ ಕಾಲವನ್ನು ಮಿತವ್ಯಯಗೊಳಿಸುವ ಕಾರಣದಿಂದ ಪದ್ಯ ರಚನೆ ಕಾಣಿಸಿಕೊಂಡಿರಬೇಕು. ಅತ್ಯಂತ ಪ್ರಾಚೀನವಾದ ವಾತ್ಸ್ಯಾಯನ ವಿರಚಿತ ಕಾಮ ಶಾಸ್ತ್ರದ ವ್ಯಾಖ್ಯಾನಕಾರನಾದ ಯಶೋಧರನು ಗೀತವನ್ನು

"ಸ್ವರ ಪ್ರಧಾನವೂ, ಲಯ ಪ್ರಧಾನವೂ, ಚೇತನದ
ಅವಧಾನ ಪ್ರಧಾನವೂ ಆದ ಗಾನ"

ಎಂಬುದಾಗಿ ಹೇಳಿರುವ ವ್ಯಾಖ್ಯಾನ ಅರ್ಥಪೂರ್ಣವಾಗಿದೆ. ಪ್ರಸ್ತುತ ವಿಚಾರದಲ್ಲಿ ಹಾಡುವಿಕೆ ಎಂದರೆ ಗಾನ ಮಾಡುವಿಕೆ ಎಂದಾಯಿತು. ಹಾಗಾದರೆ ಸಂಗೀತವೆಂದರೇನು? ಇದರ ಕುರಿತು ಯೋಚಿಸುವುದಾದರೆ

'ಗೀತಂ ವಾದ್ಯಂ ತಥಾ ನೃತ್ಯಂ ತ್ರಯಂ ಸಂಗೀತ ಮುಚ್ಚತೇ' ಎಂದು ಹೇಳಲಾಗಿದೆ.

ಅರ್ಥ–ಗೀತ, ವಾದ್ಯ, ನೃತ್ಯ ಈ ಮೂರು ವಿಷಯಗಳೂ ಸೇರಿ ಸಂಗೀತ ಎಂಬರ್ಥವಾಯಿತು. ಎಂದ ಮೇಲೆ ಈ ಪದಗಳ ಅರ್ಥವು ಈ ರೀತಿ ಸೂಚಿಸುತ್ತೆ.

ಗೀತವೆಂದರೆ – ನಾದ ಹಾಗೂ ಶಬ್ದವೆಂದಾಯಿತು.

ವಾದ್ಯವೆಂದರೆ – ಮೇಲ್ಕಂಡ ಶಬ್ದವನ್ನು ಪ್ರಕಾಶಗೊಳಿಸುವ ಶಬ್ದ ಎಂದು ಅರ್ಥ.

ನೃತ್ಯವೆಂದರೆ - ಗೀತ, ವಾದ್ಯ ಇವೆರಡನ್ನೂ ಅನುಸರಿತಕ್ಕ ಕುಣಿತಗಳು.

ಇದರಲ್ಲಿ ಸ.ರಿ.ಗ.ಮ.ಪ.ದ.ನಿ ಎಂಬ ಸಪ್ತ ಸ್ವರಗಳುಂಟು"[೧] "ಮನುಷ್ಯನ ಭಾವನೆಯನ್ನು ಮಧುರವಾದ, ಸಮತಾಳದ, ಏಕಲಯದ ಹಾಗೂ ಶೃತಿ ಸುಖದ, ಸಂಯೋಜಿತವಾದ ಧ್ವನಿಗಳ ಮೂಲಕ ಹುರಿದುಂಬಿಸುವ ಸಂವೇದನೆಯೇ ಸಂಗೀತ"[೨]ವೆಂದು ಶಬ್ದಕೋಶ ನಿರೂಪಿಸುತ್ತದೆ. ಒಟ್ಟಿನಲ್ಲಿ ಸಂಗೀತವೆಂದರೆ ಆತ್ಮವನ್ನು ಪ್ರತಿಬಿಂಬಿಸುವ ಕಲೆ ಎಂದು ಹೇಳಬಹುದು. ಆದರೆ ಕೀರ್ತನೆ ಇದಕ್ಕೆ ಭಿನ್ನವಾಗಿದೆ. ಕೀರ್ತನೆ ಹೆಸರೇ ಹೇಳುವಂತೆ ಕೀರ್ತಿಸುವುದು. ಮಾನವ ತನ್ನಲ್ಲಿ ಹಾಗೂ ಸರ್ವ ಚರಾಚರಗಳಲ್ಲಿ ಅಡಗಿರುವ ದೇವರನ್ನು ಸ್ತುತಿಸುವುದೇ ಕೀರ್ತನೆ. ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸಿದ ಮನುಷ್ಯ ಕೃತಜ್ಞತಾ ಭಾವದಿಂದ ದೇವರನ್ನು ಹೊಗಳಿ ಸ್ತುತಿಸುವ ರೀತಿ ಯಾವುದೇ ಜಾತಿ, ಮತ, ಪಂಥ ಮತ್ತು ವರ್ಣಗಳಿಗೆ ಸೀಮಿತವಾಗಿರದ ನಿತ್ಯ ಸತ್ಯದ ಅನುಭವ.

೨.೨ ಸಂಗೀತದ ಅಮೂಲ್ಯತೆ

ಪಕ್ಷಿಗಳು, ಅಲೆಗಳು ಮತ್ತು ಗಾಳಿ ಇವೇ ಮಾನವನ ಮೊದಲಿನ ಸಂಗೀತದ ಗುರುಗಳು. ಅವುಗಳಿಂದ ಅವನು ಮೂರು ನಾಲ್ಕು ಸ್ವರಗಳನ್ನು ಮಾತ್ರವೇ ಕಲಿತನು.

ಸಂಗೀತವನ್ನು ನಿರ್ಮಿಸಿದವರು ಯಾರು? ಮತ್ತು ಅದು ನಿಜವಾಗಿ ಎಂದಿನಿಂದ ಪ್ರಾರಂಭವಾಯಿತು? ಎಂಬುದನ್ನು ಯೋಚಿಸುವುದು ಅಗತ್ಯ. ಈ ಭೂಮಿಯ ಮೇಲೆ ಇಂಪಾದ ಸ್ವರಗಳು ಇಲ್ಲದೆ ಇದ್ದ ಸಮಯವು ಯಾವಾಗಲೂ ಇರಲಿಲ್ಲವೆಂಬುದು ನಮಗೆ ತಿಳಿಯುತ್ತದೆ. ಏಕೆಂದರೆ ಬಹಳ ಹಿಂದಿನ ಕಾಲದಲ್ಲಾದರೂ ಸಮುದ್ರದ ಅಲೆಗಳ ಹೊರಳುವಿಕೆಯು ಇದ್ದೇ ಇದ್ದಿತಷ್ಟೇ! ಆ ಅಲೆಗಳು ತೀರಕ್ಕೆ ಬಂದು ಬಡಿಯುವಾಗ ದೊಡ್ಡದೊಡ್ಡ ತಮಟೆಗಳನ್ನು ಬಡಿದಂತೆಯೂ, ಆಕಾಶದಲ್ಲಿ ಮಿಂಚು ಕಾಣಿಸಿದಾಗ, ಗುಡುಗಿನ ಭೀಕರ ಶಬ್ದವು ಉಂಟಾಗುತ್ತಿದ್ದವು. ಆ ಮೇಲೆ ಪ್ರಾಣಿ ವರ್ಗವು ಸುತ್ತಲೂ ಸುಳಿದಾಡಲು ಪ್ರಾರಂಭವಾದಾಗ ಗಿಡ ಮರಗಳ ಎಲೆಗಳ ಮರಮರ ಧ್ವನಿಯೂ, ಸಮುದ್ರದ ಅಲೆಗಳ ಹೊರಳಾಟವೂ, ಸಣ್ಣಸಣ್ಣ ನದಿಗಳ ಹರಿದಾಟವೂ, ಕ್ರಿಮಿ ಕೀಟಗಳ ಮನೋಹರವಾದ ಧ್ವನಿಯು, ಪಕ್ಷಿಗಳ ಮೃದುಮಧುರ ಗಾನವು ಉಂಟಾದವು. ಇವೆಲ್ಲವೂ ಪ್ರಕೃತಿಯ ಸ್ವಭಾವಿಕ ಸಂಗೀತ. ಇವನ್ನೇ ನಮ್ಮ ಪ್ರಸಿದ್ಧ ಗಾಯನಾಚಾರ್ಯರು ಕೊಳಲು, ಕೊಂಬು ಮತ್ತು ತಂತಿಗಳಿಂದ ಅನುಕರಿಸಲು ವಿಶೇಷ ಶ್ರಮ ವಹಿಸಿದರು.

ಆದರೆ ನಾವು ಹಾಡುವ, ಕುಣಿಯುವ ಮತ್ತು ನಮ್ಮ ಬೆರಳುಗಳು ಮತ್ತು ತುಟಿಗಳಿಂದ ಮಾಡುವ ಮಾನವ ನಿರ್ಮಿತ ಸಂಗೀತ ಇದು ಹೇಗೆ ಉಂಟಾಯಿತೆಂದು ನಾವು ಪ್ರಶ್ನಿಸಬಹುದು. ಆದಾದರೂ ಈ ಭೂಮಿಯಷ್ಟೇ ಹಳೆಯದಾಗಿ ಪ್ರಕೃತಿಯ ಸಂಗೀತದಿಂದಲೇ ಉಂಟಾಯಿತು. ಅದು ನಾವು ಇದುವರೆಗೂ

ಪ್ರಸ್ತಾಪ ಮಾಡಿದ ಗಾಳಿ, ನೀರು ಮತ್ತು ಪಕ್ಷಿಗಳಿಂದಲೇ ಉಂಟಾಯಿತು. "ಮಾನವ ತಾನು ಮಾತನಾಡಲು ಆರಂಭಿಸಿದ ಕಾಲದಲ್ಲೇ ಹಾಡುವುದಕ್ಕೂ ಪ್ರಾರಂಭಿಸಿದ ಎಂಬುದು ವಿದ್ವಾಂಸರ ಅಭಿಪ್ರಾಯ"[೩]

ನಮ್ಮ ಸುತ್ತಲಿನ ಜೀವರಾಶಿಗಳನ್ನು ಅಂದರೆ ಮೃಗ, ಪಶು ಪಕ್ಷ್ಯಾಧಿಗಳನ್ನು ನೋಡುವುದಾದರೆ ಅವುಗಳಿಗೆಲ್ಲಾ ಗಾಯನದ ಮೇಲೆ ಅಭಿರುಚಿ ಇರುವಂತೆ ಕಾಣುತ್ತದೆ. ಎಲ್ಲಿಂದಲೋ ಗಾಯನದ ಶಬ್ದವು ಕೇಳಿ ಬರುತ್ತಿದ್ದರೆ ಪ್ರಾಣಿಪಕ್ಷಿಗಳು ಕಿವಿಯರಳಿಸಿಕೊಂಡು ಆ ಶಬ್ದವನ್ನು ಆಲಿಸಲು ಪ್ರಯತ್ನಿಸುತ್ತವೆ. ಒಂದು ಜೋಗುಳದ ಹಾಡಿಗೆ ಮಗುವಿನ ಆರ್ತ ಸ್ವರವನ್ನು ನಿಲ್ಲಿಸುವ ಶಕ್ತಿ ಇದೆ. ತೊಟ್ಟಿಲಲ್ಲಿ ಮಲಗಿರುವ ಮಗು ಹಾಡೆಂಬ ಹಾಲನ್ನು ಕುಡಿದು ಬಲು ಸಂತಸಗೊಳ್ಳುತ್ತದೆಂದು ಒಬ್ಬ ಜನಪದ ಕವಿಯು ವರ್ಣಿಸುತ್ತಾನೆ. ಇನ್ನೂ ಮುಂದುವರೆದು ನೋಡುವುದಾದರೆ ಪಕ್ಷಿಗಳು ಮುಂಜಾನೆ, ಸಂಜೆ ತಮ್ಮ ಇಂಪಾದ ಸ್ವರದಿಂದ ಹಾಡುವುದನ್ನು ನಾವು ಕೇಳುವಾಗ ನಮ್ಮ ಮನಸ್ಸಿಗೆ ಎಷ್ಟೋ ಆಹ್ಲಾದವಾಗುವುದು. "ಗಾನವು ಶಿಶು, ಪಶುಗಳಿಗೂ, ಖಗಗಳಿಗೂ ಎಷ್ಟೋ ರುಚಿಕರವಾಗಿದ್ದ ಮೇಲೆ ಪ್ರಾಣಿವರ್ಗಕ್ಕೆಲ್ಲಾ ಶಿರೋಮಣಿಯಂತಿರುವ ಮಾನವನನ್ನು ವಶೀಕರಿಸದೆ ಬಿಟ್ಟೀತೇ!"[೪] ಕೃಷಿಕರು, ಗೊಲ್ಲರು, ಶ್ರಮ ಜೀವಿಗಳು ತಮ್ಮ ದಿನಚರಿಯ ಶ್ರಮವನ್ನು ಮರೆಯುವುದು ಈ ಸಂಗೀತದಿಂದಲೇ ಎಂಬುದು ನಮಗೆ ಅನುಭವವೇದ್ಯ. "ಸಂಗೀತವು ವಿಶ್ವಕ್ಕೆ ಒಂದು ಆತ್ಮವನ್ನೂ, ಮನಸ್ಸಿಗೆ ರೆಕ್ಕೆಗಳನ್ನೂ, ಕಲ್ಪನಾಶಕ್ತಿಗೆ ಬೆಳಕನ್ನೂ, ದುಃಖಕ್ಕೆ ರಮಣೀಯತೆಯನ್ನೂ, ಉಲ್ಲಾಸವನ್ನೂ ಹಾಗೂ ಪ್ರತಿಯೊಂದಕ್ಕೂ ಚೈತನ್ಯವನ್ನೂ ಕೊಡುತ್ತದೆ. ಅದು ಆತ್ಮಕ್ಕೆ ಇಮ್ಮಡಿ ಚೈತನ್ಯವನ್ನು ಕೊಡುತ್ತದೆ"[೫] ಮಾನವನ ಆಧ್ಯಾತ್ಮಿಕ, ಮಾನಸಿಕ, ಭೌದ್ಧಿಕ ಬೆಳವಣಿಗೆಯಲ್ಲಿ ಸಂಗೀತದ ಪಾತ್ರ ಮಹತ್ವವಾದದ್ದು ಎಂಬುದು ಇದರಿಂದ ವಿಧಿತವಾಗುತ್ತದೆ. ಸಂಗೀತ ಮೋಕ್ಷ ಸಿದ್ಧಿಗೆ ಸಾಧನ ಎಂಬ ಸಂಸ್ಕೃತ ಶ್ಲೋಕ ಸಮಂಜಸವಾಗಿದೆ. ಶ್ಲೋಕ ಇಂತಿದೆ:

"ತ್ರಿ ವರ್ಗ ಫಲದಾಸ್ಸರ್ವೇ ದಾನಯಜ್ಞ ಜಪಾದಯ:॥
ಏಕಂ ಸಂಗೀತ ವಿಜ್ಞಾನ ಚತುರ್ವರ್ಗ ಫಲ ಪ್ರದರ॥

ದಾನ, ಯಜ್ಞ ಮತ್ತು ಜಪಗಳು, ಧರ್ಮ, ಅರ್ಥ, ಕಾಮಗಳೆಂಬ ಮೂರು ಪುರುಷಾರ್ಥಗಳನ್ನು ಮಾತ್ರ ಸಾಧಿಸಿಕೊಡುತ್ತದೆ. ಆದರೆ ಸಂಗೀತ ವಿಜ್ಞಾನವು ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳ ಸಿದ್ದಿಗೂ ಒಳ್ಳೆಯ ಸಾಧನವಾಗಿದೆ"[೬] ಎಂದು ಹೇಳುತ್ತದೆ. ಭಾರತೀಯ ಸಾಧು ಸಂತರ ಅಭಿಪ್ರಾಯವೂ, ಮಾರ್ಗದರ್ಶನವೂ ಮತ್ತು ವಿಚಾರ ಸರಣಿಯೂ ಇದೇ ಆಗಿದೆ.

"ಕೋಟ್ಯಾನುಕೋಟಿ ಜಪವ ಮಾಡಿ
ಕೋಟಲೆಗೊಳಲದೇಕೆ ಮನವೇ?
ಕಿಂಚಿತ್ ಗೀತವೊಂದನಂತ ಕೋಟಿ ಜಪ।
ಜಪವೆಂಬುದೇಕೆ ಮನವೇ? ಕೂಡಲ ಸಂಗಮನ ಶರಣರ ಕಂಡು
ಆಡಿ ಪಾಡಿ ಬದುಕು ಮನವೆ"[೭]

ಎಂದು ಭಕ್ತಿ ಭಂಡಾರಿ ಬಸವಣ್ಣನವರು ಹಾಡಿದ್ದಾರೆ. ಇದನ್ನೇ ಸಂತ ಅಗಸ್ಟೀನ್‌ರವರು (ಕ್ರಿ.ಶ. ೩೫೪–೪೩೦) 'One who signs praise twice' ಎಂದು ಹೇಳಿರುವುದು.

ಒಟ್ಟಿನಲ್ಲಿ ಗೀತೆಯು ಮಾನವನ ಜೀವನಾಡಿಯಂತಿದ್ದು, ಆತನಲ್ಲಿ ಸುಖ–ದುಃಖಗಳ ಸಮ ಭಾವನೆಯನ್ನು ಮೂಡಿಸಿ ಮನಸ್ಸಿನ ಉನ್ಮಾದ ಮತ್ತು ಉದ್ರೇಕಗಳನ್ನು ಶಮನಗೊಳಿಸಿ ಶರೀರ, ಮನಸ್ಸು, ಆತ್ಮಗಳಲ್ಲಿ ಸಮನ್ವಯವನ್ನು ಮೂಡಿಸಿ ಬದುಕಿನ ಅಂತಿಮ ಗುರಿಯಾದ ಮೋಕ್ಷಪ್ರಾಪ್ತಿಗೆ ಎಡೆಗೊಡುತ್ತದೆ ಎಂದು ಹೇಳಬಹುದು.

೨.೩ ಧರ್ಮ ಮತ್ತು ಸಂಗೀತ

ಧರ್ಮದೊಂದಿಗಿನ ಸಂಗೀತದ ಸಂಬಂಧ ಧರ್ಮದಷ್ಟೇ ಪುರಾತನವಾದದ್ದು. ಸಾಮಾನ್ಯವಾಗಿ ಎಲ್ಲಾ ಧರ್ಮಗಳು ಸಂಗೀತದೊಂದಿಗೆ ಸಂಬಂಧ ಹೊಂದಿದೆ. "ಧರ್ಮಕ್ಕೂ, ಸಂಗೀತಕ್ಕೂ ಇರುವ ಅಂಟನ್ನು ಕೆಲವು ನಿದರ್ಶನಗಳಿಂದ ಊಹಿಸಬಹುದು. ಕ್ರೈಸ್ತ ಪಾದ್ರಿಗಳೂ, ಇತರ ಸನ್ಯಾಸಿಗಳೂ, ತಜ್ಞರೂ 'ಮಾಸ್' ಗಳನ್ನು ಹಲವು ಶತಮಾನಗಳಿಂದಲೂ ಹಾಡುತ್ತಲೇ ಬಂದಿದ್ದಾರೆ. ಬೌದ್ಧರ ಪೂಜೆಗಳು, ಮುಸ್ಲಿಮರ ಪ್ರಾರ್ಥನಾ ಕರೆಗಳು, ಹಿಂದೂಗಳ ಯಜ್ಞ ಯಗಾದಿಗಳು ಹಾಗೂ ಸಂಸ್ಕಾರಗಳು ಮುಂತಾದವುಗಳಲ್ಲೆಲ್ಲ ಸಂಗೀತಕ್ಕೆ ಮಹತ್ವಪೂರ್ಣ ಸ್ಥಾನವಿದೆ"[೮] ಯೆಹೂದ್ಯರು[೯] ತಮ್ಮ ಮತಾಚಾರದ ವಿಷಯದಲ್ಲಿ ಎಷ್ಟೋ ಹಾಡುಗಳನ್ನು ಕಟ್ಟಿ ಹಾಡುತ್ತಿದ್ದರು (ಉದಾ:– ನಮ್ಮ ಈಗಿನ ಕೀರ್ತನೆಗಳು). ಐಗುಪ್ತ್ಯ, ಗ್ರೇಕ ಮತ್ತು ರೋಮಾಯ ಜನಾಂಗಗಳವರು ತಮ್ಮ ರಾಜರ, ವೀರರ ಮತ್ತು ದೇವತೆಗಳ ನಾಮ ಶ್ರೇಯಸ್ಸನ್ನು ಹಾಡುಗಳಿಂದ ವ್ಯಕ್ತಪಡಿಸಿದ್ದರು. ಗ್ರೇಕರು ತಮ್ಮ ದೇವತೆಯೊಂದಕ್ಕೆ ಸಂಗೀತದ ದೇವತೆಯೆಂಬ ಹೆಸರನ್ನು ಕೊಟ್ಟಿದ್ದರು. ಈ ದೇವತೆಯಿಂದ ಸಂಗೀತ ವರವನ್ನು ಪಡೆದು ಅಭ್ಯಸಿಸಿದ ಯಾರೇ ಆಗಲೀ ಪ್ರಖ್ಯಾತಿ ಹೊಂದುವರು. ಇಂಥಾ ವರವನ್ನು ಪಡೆದ ಒಬ್ಬನು ಒಂದಾವರ್ತಿ ತನ್ನ ಕೈಯಲ್ಲಿ ಕಿನ್ನರಿಯನ್ನು ಹಿಡಿದುಕೊಂಡು ಬಾರಿಸುತ್ತಿರಲು ಅರಣ್ಯದ ಕ್ರೂರ ಮತ್ತು ಸಾಧು ಪಶು ಪಕ್ಷಿಗಳು ಒಂದಾಗಿ ಸೇರಿ ತಮ್ಮ ಆಹಾರವನ್ನು ಬಿಟ್ಟು ಕೇಳುತ್ತಿದ್ದವೆಂಬ ಇತಿಹಾಸ ಒಂದು ಅವರಲ್ಲಿ ರೂಢಿಯಾಗಿತ್ತು ಎಂಬುದು ಪ್ರತೀತಿ. ನಮ್ಮ ನಾಡು ಸಂಗೀತ ವಿಧ್ಯೆಯಲ್ಲಿ ಹಿಂದೆ ಬಿದ್ದದ್ದಲ್ಲವೆಂದು ಅನೇಕ ಗ್ರಂಥಗಳಿಂದ ತಿಳಿದು ಬರುತ್ತದೆ. ಸಾಮವೇದದ ಮಂತ್ರಗಳು ಸಂಗೀತದ ಕುರಿತು ತಿಳಿಯಪಡಿಸುತ್ತವೆ. ದೇವತಾರಾಧನೆ ಹಾಗೂ ಭಕ್ತಿಯಲ್ಲಿ ಸಂಗೀತದ ಪಾತ್ರವು ಮುಖ್ಯವಾದದ್ದು. ಕನಕದಾಸ, ಪುರಂದರದಾಸ, ಕಬೀರದಾಸ ಇವರ ಭಜನೆಗಳು ಇಂದಿಗೂ ಹಿಂದೂ ಧರ್ಮೀಯರಲ್ಲಿ ಪ್ರಸಿದ್ಧವಾಗಿದ್ದು ಮನೆಮನೆಗಳಲ್ಲಿ ಉಳಿದುಕೊಂಡಿರುತ್ತದೆ.

೨.೪ ಸಂಗೀತ ಮತ್ತು ವಾದ್ಯಗಳು

ವಾದ್ಯಗಳ ಬಳಕೆಯ ಕುರಿತು ನಮಗೆ ಹಳೆಒಡಂಬಡಿಕೆಯಲ್ಲಿ ಆಧಾರಗಳು ದೊರೆಯುತ್ತದೆ. 'ಯೂಬಾಲ' ಕಿನ್ನರಿ ಕೊಳಲನ್ನು ನುಡಿಸುವವರಿಗೆ ಮೂಲ ಪುರುಷ (ಆದಿಕಾಂಡ ೪:೨೧) ಎಂದು ಹೆಸರಿಸಲಾಗಿದೆ. ಯೆಹೂದ್ಯರು ಬಾರಿಸುತ್ತಿದ್ದ ವಾದ್ಯಗಳು ಮೂರು ವಿಧವಾದವುಗಳು.

೧. ತಂತಿ ವಾದ್ಯಗಳು: ಇವುಗಳ ಪೈಕಿ ಕಿನ್ನೋರ್ ಎಂಬುದೊಂದು. ಇದನ್ನು ಕಿನ್ನರಿಯೆಂದು ಭಾಷಾಂತರ ಮಾಡಿದೆ (೧ ಸಾಮು ೧೬:೧೬, ಯೆಶಾ ೫:೧೨) ಇದನ್ನು ಕೈಬೆರಳಿನಿಂದಾಗಲಿ ಕಂಬಿಯಿಂದಾಗಲಿ ತಟ್ಟಿ ಬಾರಿಸುವರು. ನಿಬೆಲ್ ಎಂಬುದು ಇನ್ನೊಂದು. ಇದನ್ನು ವೀಣೆ ಅಥವಾ ಸ್ವರ ಮಂಡಲವೆಂಬುದಾಗಿ ಭಾಷಾಂತರ ಮಾಡಿದೆ. (ಯೆಶಾ ೫:೧೨). ಇದು ಕಿನ್ನರಿಗಿಂತಲೂ ದೊಡ್ಡದು. ಇವುಗಳಲ್ಲದೆ ಬೇರೆಬೇರೆ ವಿಧವಾದ ಸ್ವರ ಮಂಡಲಗಳನ್ನು ಸೂಚಿಸುವ ಹೆಸರುಗಳಿರುತ್ತವೆ. ಆದರೆ ಅವುಗಳು ಇಂಥವುಗಳೇ ಎಂಬುದು ಸ್ಪಷ್ಟವಾಗಿ ತಿಳಿಯದು.

೨. ಊದುವ ವಾದ್ಯಗಳು: ಇವುಗಳ ಪೈಕಿ ಖಲೀಲ್ ಎಂಬುದೊಂದು. ಇದನ್ನು ಕೊಳಲು ಅಥವಾ ಪಿಳ್ಳಂಗೋವಿ ಎಂಬುದಾಗಿ ಭಾಷಾಂತರಮಾಡಿದೆ. (೧ ಸಾಮು ೧೦:೫) ಇದನ್ನು ಔತಣ ಮತ್ತು ಉತ್ಸವಗಳ ಕಾಲದಲ್ಲಿ ಊದುವರು. ಇದರಲ್ಲಿ ಅನೇಕ ತರದವುಗಳಿದ್ದವು. ಮಕ್ಕಳು ಊದುವ ಕೊಳಲು (ಮತ್ತಾ ೧೧:೧೭, ೧ ಕೊರಿ ೧೪:೭) ಊಗಾಬ್ ಎಂಬುದು ಇನ್ನೊಂದು. ಇದು ಎರಡು ಮೂರು ಕೊಳಲುಗಳನ್ನು ಸೇರಿಸಿ ಹಲವು ವಿಧವಾದ ಸ್ವರಗಳನ್ನು ಕೊಡುವಂತೆ ಮಾಡಿದ್ದ ವಾದ್ಯ. ಇದನ್ನು ಕೊಳಲು ಅಥವಾ ನಾಗಸ್ವರವೆಂದು ಭಾಷಾಂತರ ಮಾಡಿದೆ (ಆದಿ ೪:೨೧, ದಾನಿ ೩:೫). ಟ್ರಂಪೆಟ್ ಎಂಬುದಾಗಿ ಕರೆಯಲ್ಪಟ್ಟ ಕೊಂಬು ಮತ್ತೊಂದು (ದಾನಿ ೩:೫, ಕೀರ್ತನೆ ೧೫೦:೩). ಯೆಹೂದ್ಯರು ಊದುತ್ತಿದ್ದ ಈ ಕೊಂಬುಗಳು ದನಗಳ ಅಥವಾ ಟಗರುಗಳ ಕೊಂಬುಗಳಿಂದ ಮಾಡಿದವುಗಳು. ಬೇರೆ ತರದ ಕೊಂಬುಗಳು ಬೆಳ್ಳಿಯಿಂದಲೂ ಕಂಚಿನಿಂದಲೂ ನೀಳವಾಗಿ ಮಾಡಲ್ಪಟ್ಟ ತುತೂರಿಗಳು (ಅರಣ್ಯ ೧೦:೧).

೩. ಬಾರಿಸುವ ವಾದ್ಯಗಳು: ಇವುಗಳ ಪೈಕಿ ತೋಫ್ ಎಂಬುದೊಂದು. ಇದನ್ನು ದಮ್ಮಡಿಯೆಂದು ಭಾಷಾಂತರ ಮಾಡಲಾಗಿದೆ (ಯೆಶಾ ೫:೧೨, ಕೀರ್ತನೆ ೬೮:೨೫). ಇನ್ನೊಂದು ಯಾವುದೆಂದರೆ ಕೈತಾಳ. ಇದು ಹಲವು ತರವಾಗಿರುವುದು (೨. ಸಾಮು ೬:೫). ಮತ್ತೊಂದು ವಾದ್ಯವು ಯಾವುದೆಂದರೆ ಕಂಬಿಗಳುಳ್ಳ ಒಂದು ವಿಧವಾದ ಮುಕ್ಕೋಣ (೧ ಸಾಮು ೧೮:೬). ಝುಲ್ಲರಿಯೆಂಬುದು ಬೇರೊಂದು ತರದ ವಾದ್ಯ (೨ ಸಾಮು ೬:೫). ಇದನ್ನು ಕಂಚಿನ ಕಂಬಿಗಳಿಂದ ಮಾಡಿದ್ದುದರಿಂದ ಬಾರಿಸುವಾಗ ಒಳ್ಳೆಯ ನಾದವನ್ನು ಕೊಡುವುದು.

ಇಂದು ಸಂಗೀತ, ಕೀರ್ತನೆಗಳನ್ನು ಹಾಡುವಾಗ ಅವುಗಳೊಂದಿಗೆ ವಾದ್ಯಗಳನ್ನು ಬಾರಿಸುವುದುಂಟು. ಕೆಲವು ಸಭೆಗಳಲ್ಲಿ ಉತ್ತಮವಾದ ಆರ್ಗನ್‌ಗಳೂ, ಹಾರ್ಮೋನಿಯಂಗಳೂ, ತಬಲಾ, ವಾಯಲೀನ, ತಾಳ, ತಪ್ಪಡಿಗಳೂ ಉಪಯೋಗಿಸುತ್ತಿದ್ದಾರೆ.

೨.೫ ಕ್ರೈಸ್ತ ಜೀವನದಲ್ಲಿ ಸಂಗೀತದ ಪಾತ್ರ

ಕ್ರೈಸ್ತ ಸಭೆಗಳಲ್ಲಿ ಸಾಮಾನ್ಯವಾಗಿ ಆರಾಧನೆಗಳ ಸಮಯದಲ್ಲಿ ಸಂಗೀತವು ಒಂದು ವಿಶಿಷ್ಟ ಪಾತ್ರ ವಹಿಸುತ್ತದೆ. ಸಂಗೀತ ಹಾಗೂ ಹಾಡುವ ಕೀರ್ತನೆಗಳು ತಮ್ಮದೇ ಆದ ಒಂದು ಶೈಲಿಯಲ್ಲಿ ಶ್ರೇಷ್ಟವಾದ

ಸಂದೇಶವನ್ನು ಅರಿತಾಗ ಸಂಗೀತ ರಚನಾಕಾರರಿಗೆ ಸಂಗೀತ ಬರೆಯಲು ಪ್ರೇರೇಪಿಸಿರುವ ವಿವಿಧ ಸನ್ನಿವೇಶಗಳು ಅಂದರೆ ಅವರ ಬಾಳಿನ ಹೋರಾಟ, ನೋವು-ನಲಿವು, ಇವುಗಳ ಕುರಿತು ಅರಿವಿದ್ದಾಗ ಅದು ಹೊಸ ಅನುಭವವನ್ನು ನೀಡುತ್ತದೆ. ಈ ಅನುಭವವು ನಮ್ಮ ವೈಯಕ್ತಿಕ ಸ್ಥಿತಿಗತಿಗೆ ಅನ್ವಯಿಸುವ ಅನನ್ಯ ಭಾವನೆಯನ್ನು ನಮ್ಮಲ್ಲಿ ಉಂಟುಮಾಡುವುದು ಎಂಬುದರಲ್ಲಿ ಸಂದೇಹವಿಲ್ಲ. "ಆಧ್ಯಾತ್ಮಿಕ ಮತ್ತು ಭಕ್ತಿಯ ಹಾಡುಗಳು ಕ್ರೈಸ್ತ ಸಾಮೂಹಿಕ ಆರಾಧನೆಯಲ್ಲಿ ಸಭೆಯ ಆರಂಭದಿಂದಲೇ ಕಂಡು ಬಂದವು. ಆರಾಧನೆಯಲ್ಲಿ ಸಂಗೀತವು ಬಹಳ ಮುಖ್ಯ ಸ್ಥಾನವನ್ನು ಹೊಂದಿದೆ. ಪ್ರಸಂಗ, ಆರಾಧನೆ, ಸತ್ಯವೇದದ ಪಾರಾಯಣ ಇವುಗಳಲ್ಲಿ ಸಂಗೀತಗಳು ಬಳಕೆಯಾಗಿ ಕ್ರೈಸ್ತ ವಿಶ್ವಾಸದಲ್ಲಿ ಬೇರೂರಲು ಸಹಾಯಕವಾಗಿದೆ"[೧೦]

೨.೬ ಕ್ರೈಸ್ತ ಗೀತೆಗಳ ಲಕ್ಷಣ

ಕ್ರೈಸ್ತ ಗೀತೆಯ ಲಕ್ಷಣ ಕುರಿತು ಸಂತ ಅಗಸ್ಟೀನ್ ಹೀಗೆ ಹೇಳುತ್ತಾರೆ "ದೇವರನ್ನು ಸ್ತುತಿಸುವ ರಾಗವು ಕ್ರೈಸ್ತ ಸಂಗೀತವಾಗಿದೆ. ನೀನು ರಾಗ ಹಾಡಿದರೂ ಅದರಲ್ಲಿ ದೇವರ ಸ್ತುತಿ ಇಲ್ಲದಿದ್ದರೆ ಅದು ಸಂಗೀತವಲ್ಲ. ಕ್ರೈಸ್ತ ಸಂಗೀತದಲ್ಲಿ ರಾಗ, ಸ್ತುತಿ ಮತ್ತು ದೇವರು ಎಂಬ ಮೂರು ಸಂಗತಿಗಳು ಇರುತ್ತವೆ. ಆದುದರಿಂದ ರಾಗದ ಮೂಲಕ ದೇವರನ್ನು ಸ್ತುತಿಸುವುದೇ ಕ್ರೈಸ್ತ ಸಂಗೀತದ ಲಕ್ಷಣ"[೧೧] ಇದನ್ನೇ ಹೋಮರ್ ಕೋಲಿನ್ಸ್ "Hymn broadly speaking only poetical composition in honour of God or suitable for use in a liturgical setting i.e in worship"[೧೨] ಎಂದಿದ್ದಾರೆ. ಇವರಿಬ್ಬರ ಹೇಳಿಕೆಯು ಒಂದು ಮಹತ್ವದ ಅಂಶವನ್ನು ವ್ಯಕ್ತಪಡಿಸುತ್ತದೆ. ಅದೇನೆಂದರೆ ಸಂಗೀತದಲ್ಲಿ ದೇವರನ್ನು ಸ್ತುತಿಸುವ ಅಂಶಗಳಿದ್ದು ಅದು ಆರಾಧನೆಗೆ ಬಳಸುವಂತಹುಗಳಾಗಿರಬೇಕು ಎಂಬುದಾಗಿದೆ. ಇಂದು ದೇವಾಲಯಗಳಲ್ಲಿ ಬಳಸುವ ಹಾಡುಗಳು ಈ ಅಂಶವನ್ನು ಒಳಗೊಂಡಿದೆ.

೨.೭ ಪವಿತ್ರ ಗ್ರಂಥದ ಹಳೆಒಡಂಬಡಿಕೆ[೧೩]ಯಲ್ಲಿ ಕಂಡು ಬರುವ ಗೀತೆಗಳು

ಸಂಗೀತಕ್ಕೆ ಸಂಬಂಧಿಸಿದಂತೆ ಬೈಬಲ್ ಗ್ರಂಥದಲ್ಲಿ ಮೊದಲಿಗೆ ದೊರೆಯುವ ಆಧಾರವೆಂದರೆ ಸಂಖ್ಯಾಕಾಂಡ[೧೪]ದಲ್ಲಿ ಇಸ್ರಾಯೇಲ್[೧೫] ಜನಾಂಗವು ದೇವರಿಂದ ಆಯ್ಕೆಯಾದ ಜನರು ವಾಗ್ದತ್ತನಾಡಿಗೆ ಪ್ರಯಾಣ ಮಾಡುವಾಗ ಸರ್ವೇಶ್ವರನು ಅವರಿಗೆ ಮಾಡಿದ ಉಪಕಾರವನ್ನು ಸ್ಮರಿಸಿ ಹೀಗೆ ಹಾಡಿದರು.

"ಬಾವಿಯೇ ಎದ್ದು ಬಾ ಉಕ್ಕುತ್ತಾ
ಜನರೇ ಹಾಡಿ ಹಿಗ್ಗುತ್ತಾ
ಹಿರಿಯರು ತೋಡಿದಿರೀ ಬಾವಿಯನ್ನು
ಕೋಲು ಕಡ್ಡಿಗಳಿಂದ
ಪ್ರಜಾಪತಿಗಳು ಅಗೆದರಿದನ್ನು
ರಾಜದಂಡಗಳಿಂದ"[೧೬]

ಈ ಹಾಡು ಒಂದು ಪ್ರಮುಖವಾದ ಸಂದರ್ಭದಲ್ಲಿ ಹಾಡುವರು ಎಂಬುದನ್ನು ತಿಳಿಸಿಕೊಡುತ್ತದೆ. ಕಾಲಾನಂತರದಲ್ಲಿ ಮೂಲ ನಿವಾಸಿಗಳು ಯಾವಾಗ ಬಾವಿಯನ್ನು ಸಮೀಪಿಸುತ್ತಾರೋ ಆಗ ಹಾಡುವ ಒಂದು ಧಾರ್ಮಿಕ ಆಚರಣೆಯಾಗಿ ಉಳಿದಿರುವುದನ್ನು ಕಾಣುತ್ತೇವೆ.

ವಿಮೋಚನಾಕಾಂಡ[೧೭] ಗ್ರಂಥದಲ್ಲಿ ಮೋಸಸ್[೧೮] ಸಹೋದರಿಯಾದ ಮಿರಿಯಮ್[೧೯]ಹಾಡಿರುವ ಹಾಡು ಆಸಕ್ತಿಯಿಂದ ಕೂಡಿದೆ.

"ಮಾಡಿರಿ ಸರ್ವೇಶ್ವರನ ಗುಣಗಾನ

ಮಹೋನ್ನತ ಆತಗಳಿಸಿದ ವಿಜಯ!

ಕಡಲಲ್ಲಿ ಕೆಡವಿ ನಾಶ ಮಾಡಿಹನು

ಕುದುರೆಗಳನ್ನು ರಾಹುತರನು"[೨೦]

ಸೌಲ[೨೧] ನೆಂಬ ರಾಜನು ಯುದ್ಧದಲ್ಲಿ ಜಯಗಳಿಸಿದಾಗ ಆತನ ಅನುಯಾಯಿಗಳು ಅತನನ್ನು ಎದುರುಗೊಂಡು ವಂದಿಸಿ ಅವರ ಜಯವನ್ನು ಗೀತಗಳಿಂದಲೂ, ನರ್ತನಗಳಿಂದಲೂ ಕೊಂಡಾಡಿದರು.

"ಸೌಲನು ಸಾವಿರ ಮಂದಿಯನ್ನು ಕೊಂದನು

ದಾವೀದ*ನು ಹತ್ತು ಸಾವಿರ ಮಂದಿಯನ್ನು ಕೊಂದನು"[೨೨] ಎಂದು ಹಾಡಿದರು.

"ಸಂಗೀತದ ಮೊದಲನೆಯ ದೊಡ್ಡ ನಾಯಕನು ದಾವೀದನೆ"[೨೩] ದಾವೀದನ ವೀಣೆಯು ಅವನ ಸಿಂಹಾಸನಕ್ಕಿಂತಲು ಬಲಶಾಲಿಯಾದದ್ದು ಎಂಬುದಾಗಿ ಲಾರ್ಡ ಬೈರನ್ (Lord Byron) ಎಂಬುವರು ಹೇಳಿದ ಮಾತು ಇನ್ನೂ ಕಡಿಮೆಯಾಗಿದೆ ಎಂದು ಹೇಳಬೇಕು. ಯಾಕೆಂದರೆ ಆ ವೀಣೆಯ ಸತ್ಪ್ರೇರಣೆಯು ಇನ್ನೂ ಬೆಳೆಯುತ್ತಲೇ ಇದೆ. ಅವನು ರಚಿಸಿರುವ ಸಂಗೀತಗಳು ಅಂದರೆ ಕೀರ್ತನೆಗಳು ಬೈಬಲಿನೊಳಗಿರುವ ಬೈಬಲ್ ಎಂದು ಹೇಳಿದರೆ ತಪ್ಪಾಗಲಾರದು. ದಾವೀದನು ಎಲ್ಲ ಇಸ್ರಾಯೇಲರೂ ಕಿನ್ನರಿ, ಸ್ವರ ಮಂಡಲ, ತಮಟೆ, ಝುಲ್ಲರಿ, ತಾಳ ಇವುಗಳನ್ನು ಬಾರಿಸಿಕೊಂಡು ಪೂರ್ಣಾವೇಶದಿಂದ ಗೀತೆಗಳನ್ನು ಹಾಡುತ್ತಾ ಸರ್ವೇಶ್ವರನ ಮುಂದೆ ನರ್ತನ ಮಾಡಿದರು ಎಂದು ೨ ಸಾಮುವೇಲ ೬:೫ ರಲ್ಲಿ ಓದುತ್ತೇವೆ.

ದಾವೀದನು ಕಟ್ಟಿದ "ಕರುಣ ರಸ"[೨೪] ಪೂರಿತವಾದ ಗೀತವನ್ನು ಯೂದಾಯದವರೆಲ್ಲರು ಬಾಯಿಪಾಠ ಮಾಡಬೇಕೆಂದು ಆತನು ಆಜ್ಞಾಪಿಸಿದನು. ಇದು ಮೊದಲು ಯಾರೇಶನ ಪುಸ್ತಕದಲ್ಲಿ ಅಂದರೆ ನೀತಿವಂತರ ಪುಸ್ತಕ ಎಂಬುವ ಜನಾಂಗದ ಗೀತೆಗಳ ಪುಸ್ತಕದಲ್ಲಿ ಸೇರಿಸಲಾಗಿತ್ತು. ಸಾಮುವೇಲನ ಪುಸ್ತಕದ ಗ್ರಂಥ ಕರ್ತನು ಆ ಗೀತೆಗಳ ಪುಸ್ತಕದಿಂದಲೆ ಇದನ್ನು ತೆಗೆದು ಬರೆದಿದ್ದಾನೆ. ದಾವೀದನು ಮುದುಕನಾಗಿಯೂ ಬಹಳ ಬಲಹೀನನಾಗಿಯೂ ಇದ್ದಾಗ ಆತನ ಕವಿತಾ ವಿದ್ಯೆಯ ಜ್ವಾಲೆಯು ಆಗಿಂದಾಗೆ ಆತನಲ್ಲಿ ಪ್ರಜ್ವಲಿಸುತ್ತಿತ್ತು. ಆತನ ಯವ್ವನ ಕಾಲದ ಕವನಗಳು ದೇವ ಭಕ್ತಿಯುತವಾದುವುಗಳಾಗಿ ಶೋಭಿಸುತ್ತಿದ್ದವಾದರೆ ಆತನ 'ಅಂತ್ಯೋಕ್ತಿಗಳು' ದೀರ್ಘಾಲೋಚನೆಯಿಂದಲೂ ಬಹುಕಾಲದ ಅನುಭವ ಪೂರ್ವಕವಾದ ಜ್ಞಾನದಿಂದಲೂ ಮತ್ತು ಬಹುಕಾಲ ಭಗವಂತನಲ್ಲಿ ಇಟ್ಟ ನಂಬಿಕೆಯಿಂದಲೂ

ಹೊಳೆಯುತ್ತದೆ. ಅತನು ತನ್ನ ಜ್ಞಾನಕ್ಕೆ ಬಂದ ತನ್ನ ಹಿಂದಿನ ಜೀವಮಾನವನ್ನೂ ನಾತಾನನ ಪ್ರವಾದನೆಯ ಪ್ರಕಾರ ಮುಂದೆ ಲಭಿಸುವುದಕ್ಕಿರುವ ಭವಿಷ್ಯ ಜೀವನವನ್ನು ಚೆನ್ನಾಗಿ ಅಲೋಚಿಸಿ ಹಾಡಿದ್ದನ್ನು ೨ ಸಾಮುವೇಲ ೨೩:೧–೬ ದಲ್ಲಿ ಓದುತ್ತೇವೆ. ಈ ಕೀರ್ತನೆಗಳೇ ಯೇಸುವಿನ ಸಂಗೀತ ಪುಸ್ತಕವಾಗಿತ್ತು. ಆದುದರಿಂದಲೇ ಆತನ ಶಿಷ್ಯರೂ ಹಾಡಿ ಆದರಣೆ ಹೊಂದಿ ಗೆತ್ಸೇಮನೆಗೆ ಹೋದರು.

ಈ ಕೀರ್ತನೆಗಳ ಸುಪ್ರೇರಣೆ ಮಾಧುರ್ಯಗಳು ಆದಿಕಾಲದ ಕ್ರೈಸ್ತ ಸಭೆಯ ಹೃದಯವನ್ನು ಬೇಗನೆ ಸೆಳೆದುಕೊಂಡವು. ೪ನೇಯ ಶತಮಾನದಲ್ಲಿದ್ದ ಅಂಬ್ರೋಸನೆಂಬ ಭಕ್ತನು 'ದೇವಾರಾಧನೆಯ ಕಾಲದಲ್ಲಿ ಏನಾದರೂ ಓದುವಾಗ ಅದು ಕೇಳಿಸುವದು ಬಹಳ ಕಷ್ಟ. ಆದರೆ ಕೀರ್ತನೆಗಳನ್ನು ಓದುವಾಗ ಎಲ್ಲರೂ ನಿಶ್ಯಬ್ದರಾಗಿರುತ್ತಾರೆ' ಎಂಬುದಾಗಿ ಬರೆದಿದ್ದಾನೆ. ಅಗಸ್ಟೀನನು ಮಿಲಾನ್ ಪಟ್ಟಣದಲ್ಲಿದ್ದಾಗ ತನ್ನ ಹೃದಯದ ಅನೇಕ ವಿಧವಾದ ಅನುಭವ ತರಂಗಗಳನ್ನು ಹೊರಗೆಡವುದಕ್ಕೆ ಈ ಕೀರ್ತನೆಗಳು ಅವನಿಗೆ ಹೆಚ್ಚು ಅನುಕೂಲವಾಗಿ ತೋರಿದವು. ಅವನು ತನ್ನ ಅರಿಕೆಯಲ್ಲಿ "ದೇವರೆ ಕೀರ್ತನೆಗಳ ಮೂಲಕ ನನ್ನ ಹೃದಯದ ಎಷ್ಟೋ ಮಾತುಗಳನ್ನು ನಿನಗೆ ಕಳುಹಿಸಿದೆನಲ್ಲ! ಅವುಗಳ ಮೂಲಕ ನನ್ನ ಹೃದಯವು ನಿನ್ನ ವಿಷಯ ಎಂಥ ಅಭಿಮಾನವುಳ್ಳದ್ದಾಯಿತಲ್ಲಾ! ಮಾನವ ಹೃದಯದ ಗರ್ವಕ್ಕೆ ವಿರುದ್ಧವಾಗಿ ಅವುಗಳನ್ನು ಸಾಧ್ಯವಾದರೆ ಇಡೀ ಲೋಕದಲ್ಲಿ ಹಾಡುತ್ತಾ ಹೋಗಬೇಕೆಂದು ಬಯಸಿದೆನಲ್ಲ!"[೨೫] ಎಂದು ಹೇಳಿದ್ದಾನೆ.

ಕ್ರೈಸ್ತ ಸಭೆಯಿಂದಲೇ ರಚಿತವಾದ ಸಂಗೀತಗಳು ಮೊದಲು ಗ್ರೇಕ ಸಭೆಯಲ್ಲಿ (ಪೌರ್ವಾತ್ಯ ಸಭೆ) ಹುಟ್ಟಿದ್ದವು. ಆದರೆ ಅವು ಯಾವಾಗಲೂ ಹಳೆಒಡಂಬಡಿಕೆಯ ಕೀರ್ತನೆ, ಕಾವ್ಯ, ಆರಾಧನಾ ಪದ್ಧತಿ ಇವುಗಳ ಆಧಾರದಿಂದಲೇ ರಚನೆಯಾಗುತ್ತಿದ್ದವು.

೨.೮ ದೇವಾಲಯದ ಸಂಗೀತ ಮಂಡಳಿ

"ದಾವೀದನು ಹಾಗೂ ಆರಾಧಕ ಮಂಡಳಿಯ ಮುಖ್ಯಸ್ಥರು ಕಿನ್ನರಿ, ಸ್ವರಮಂಡಲ, ತಾಳ ಇವುಗಳನ್ನು ಬಾರಿಸುತ್ತಾ ಪರವಶರಾಗಿ ಗಾಯನ ಸೇವೆ ಮಾಡುವುದಕ್ಕಾಗಿ ಆಸಾಫ್ಯರನ್ನೂ ಹೇಮಾನ್ಯರನ್ನೂ ಯೆದತೂನ್ಯರನ್ನೂ ಆರಿಸಿದನು"[೨೬] ಎಂಬುದಾಗಿ ಕೊರಿಂಥದವರಿಗೆ ಬರೆದ ಪತ್ರದಲ್ಲಿ ಓದುತ್ತೇವೆ.

ಬೈಬಲ್ ಗ್ರಂಥವು ಬ್ಯಾಬಿಲೋನ್ ಸೆರೆವಾಸದ ಸಂದರ್ಭದ 'ಸಿನಗೋಗ್' ಆರಾಧನೆಯ ಕುರಿತು ಮಾಹಿತಿಯನ್ನು ನೀಡುತ್ತದೆ. ಸಿನಗೋಗ್ ಎಂದರೆ Place of worship ಎಂದು ಅರ್ಥ. ಕ್ರಿ.ಪೂ. ೬ನೇ ಶತಮಾನದಲ್ಲಿ ಜೂಸ್(Jews) ಜನತೆಯು ತಮ್ಮ ನಾಡಿಗೆ ಹಿಂದುರುಗಿ ಬಂದಾಗ ಇಂತಹ ಅನೇಕಾನೇಕ ಸಿನಗೋಗ್ ಇದ್ದುವೆಂದು ನೆಹೇಮಿಯಾನು[೨೭] ಬರೆದ ಪುಸ್ತಕವು ತಿಳಿಸುತ್ತದೆ. "ಎಜ್ರ ಎಂಬ ಧರ್ಮೋಪದೇಶಕ ಪಾರಾಯಣಕ್ಕಾಗಿ ಮಾಡಲಾಗಿದ್ದ ಮರದ ಪೀಠದ ಮೇಲೆ ನಿಂತನು."[೨೮] ಈ ಪೀಠವು ಧರ್ಮೋಪದೇಶಕ್ಕಾಗಿ ಹಾಗೂ ಆರಾಧನೆಗಾಗಿ ಬಳಸುತ್ತಿದ್ದರು. ಎಜ್ರನು ಪರಾತ್ಪರ ದೇವರಾದ ಸರ್ವೇಶ್ವರನನ್ನು ಸ್ತುತಿಸಿದಾಗ ಸರ್ವ ಜನರು ತಮ್ಮ ಕೈಗಳನ್ನೆತ್ತಿ 'ಆಮೆನ್' 'ಆಮೆನ್' ಎಂದು ಹೇಳಿ ನೆಲದ

ಮಟ್ಟಿಗೂ ತಲೆಬಾಗಿ ಸರ್ವೇಶ್ವರನನ್ನು ಆರಾಧಿಸಿದರು ಎಂದು ಬರೆದಿದೆ. ಅನಾದಿ ಕಾಲದಿಂದಲೂ ಜನರು ಸಂಗೀತ ಪ್ರಿಯರಾಗಿದ್ದು ದೇವರನ್ನು ಸ್ತುತಿ, ಸ್ತೋತ್ರಗಳಿಂದ ತಮ್ಮದೇ ಆದ ರೀತಿಯಲ್ಲಿ ಹೊಗಳಿ ಹಾಡುತ್ತಿದ್ದರು ಎಂಬುದಕ್ಕೆ ಹಳೆಒಡಂಬಡಿಕೆಯಲ್ಲಿ ಅನೇಕ ನಿದರ್ಶನಗಳು ದೊರೆಯುತ್ತವೆ. ಹಾಗೆಯೇ ಈ ರೀತಿಯ ಘಟನೆಗಳಿಗೆ ಹೊಸಒಡಂಬಡಿಕೆ[೨೯] ಅನೇಕ ನಿದರ್ಶನಗಳನ್ನು ನೀಡುತ್ತದೆ.

೨.೯ ಹೊಸಒಡಂಬಡಿಕೆಯಲ್ಲಿ ಕಂಡು ಬರುವ ಸಂಗೀತದ ನಿದರ್ಶನಗಳು

ಲೂಕನ ಸುವಾರ್ತೆಯಲ್ಲಿ ಕ್ರಿಸ್ತನ ಜೀವನಕ್ಕೆ ಸಂಬಂಧಿಸಿದ ಕೆಲವು ಗೀತೆಗಳಿವೆ. ಅವುಗಳು ಲೂಕ[೩೦] ೧:೪೬-೫೫, ೧:೬೮-೭೯, ೨:೧೪, ೨:೨೯-೩೨ ಅವುಗಳಿಗೆ ಅನುಕ್ರಮವಾಗಿ Magnificat[೩೧], Benedictus[೩೨], Gloria in Excelcies[೩೩] ಎಂಬ ಹೆಸರು ಪಾರಂಪರ್ಯವಾಗಿ ಬಂದಿರುತ್ತವೆ. ಅಪೋಸ್ತೊಲ[೩೪] ನಾದ ಪೌಲನು ಪತ್ರಿಕೆಯಲ್ಲಿ "ಕೀರ್ತನೆಗಳಿಂದಲೂ, ಸಂಗೀತಗಳಿಂದಲೂ ಆತ್ಮ ಸಂಬಂಧವಾದ ಹಾಡುಗಳಿಂದಲೂ ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನ ಮಾಡಿರಿ"[೩೫] ಎಂಬುದಾಗಿ ಬರೆದಿದೆ. ಇದನ್ನು ನೋಡುವಾಗ ದಾವೀದನ ಕೀರ್ತನೆಗಳ ಹೊರತಾಗಿ ಆದಿಸಭೆಯಲ್ಲಿ ಭಕ್ತರಿಂದ ರಚಿತವಾದ ಇತರ ಸಂಗೀತಗಳು ಇದ್ದಿರಬೇಕೆಂದೂ ತೋರುತ್ತದೆ. ಸಂತ ಪೌಲನು ಬರೆದ ವಿವಿಧ ಪತ್ರಿಕೆಗಳಲ್ಲಿ ಅಲ್ಲಲ್ಲಿ ಕಾವ್ಯ ರೂಪದ ವಾಕ್ಯಗಳನ್ನು ಕಾಣುತ್ತೇವೆ. ಉದಾ:- ಎಫೆಸ ೫:೧೪, ೧ ತಿಮೊಥಿ ೩:೧೬, ೨ ತಿಮೊಥಿ ೨:೧೧ ಇತ್ಯಾದಿ. ಉತ್ತಮ ಕಾವ್ಯಾಂಶಗಳಿಂದ ಕೂಡಿದ ಹಾಗೂ ಅರ್ಥಗರ್ಭಿತವಾದ ಗೀತೆಗಳು ಕ್ರಿಸ್ತ ಪೂರ್ವದ ಆದಿಯಲ್ಲೆ ರಚಿತವಾಗಿದ್ದವು ಎಂಬುದು ಈ ಮೇಲಿನ ಉದಾಹರಣೆಗಳಿಂದ ಕಂಡು ಬರುತ್ತವೆ.

೨.೧೦ ಆದಿ ಸಭೆಯಲ್ಲಿ ಸಂಗೀತ

'ಪೌರ್ವಾತ್ಯದ ಆದಿಸಭೆಯಿಂದ ರಚಿತವಾಗಿ ಈಗ ನಮಗೆ ದೊರೆತಿರುವ ಸಂಗೀತಗಳಲ್ಲಿ ಅಲೆಕ್ಸಾಂಡ್ರಿಯದ ಕ್ಲೆಮೆಂಟನೆಂಬ ಭಕ್ತನು ರಚಿಸಿದ 'Bridle of steeds untamed' ಎಂಬ ಸಂಗೀತವೇ ಅತ್ಯಂತ ಪ್ರಾಚೀನವಾದದ್ದು. ಆದರೆ ಅನೇಕ ಸಂಗೀತಗಳನ್ನು ಕಾವ್ಯ ಪದ್ಧತಿಗನುಸಾರವಾಗಿ ಬರೆದು ಗ್ರೀಕ್ ಸಭೆಯಲ್ಲಿ ಬಹು ದೊಡ್ಡ ಗಾಯಕನು ಎನಿಸಿಕೊಂಡವನು ನಾಯಾಂಜಾ ಪಟ್ಟಣದ ಗ್ರೆಗೋರಿ ಎಂಬ ಭಕ್ತನು. ಈ ಆದಿಸಭೆಯಲ್ಲಿ ಸಂಗೀತಗಳ ರುಚಿಯೂ, ವಿದ್ಯೆಯೂ ೮ನೇ ಶತಮಾನದಲ್ಲಿ ಪರಮಾವಧಿಗೆ ಮುಟ್ಟಿತು. ಯೆರುಸಲೇಮಿಗೂ, ಬೆತ್ಲೆಹೇಮಿಗೂ ಮಧ್ಯದಲ್ಲಿದ್ದ ಒಂದು ಮಠವು ಸಂಗೀತ ರಚನಾಕಾರರ ಮುಖ್ಯ ಶಾಲೆಯಾಗಿ ಪರಿಣಮಿಸಿ ಅಲ್ಲಿಂದ ಅನೇಕ ಹೆಸರುವಾಸಿಯಾದ ಸಂಗೀತಗಾರರು ತರಬೇತಿಗಾಗಿ ಹೊರಬಿದ್ದರು. ಹೀಗೆ ಗ್ರೀಕ್ ಸಭೆಗಳಲ್ಲಿ ಸಂಗೀತಗಳು ಆರಂಭದಿಂದ ರಚನೆಯಾಗುತ್ತ ಇದ್ದರೂ ಅವುಗಳಿಗೆ ದೇವಾರಾಧನೆಯಲ್ಲಿ ೫ನೇ ಶತಮಾನದವರೆಗೂ ಪ್ರವೇಶ ದೊರೆಯಲಿಲ್ಲಿ. ಅಂತಿಯೋಕ್ಯದಲ್ಲಿ ಮಾತ್ರ ಕ್ರಿ.ಶ. ೨೬೯ ರಿಂದ ಅವು ದೇವಾರಾಧನೆಯಲ್ಲಿ ಸೇರಿದವು. ಪಾಶ್ಚಿಮಾತ್ಯ ಸಭೆಯು (ಲತೀನ್) ಗ್ರೀಕ್

ಸಭೆಯಿಂದಲೇ ಸಂಗೀತಗಳನ್ನು ಕಲಿತು ಅವುಗಳನ್ನು ಗ್ರೀಕ್ ಭಾಷೆಯಲ್ಲಿಯೇ ಹಾಡುತ್ತಿತ್ತು. ಅಂಬ್ರೋಸನ ಕಾಲದವರೆಗೆ ಅಲ್ಲಿ ಗ್ರೀಕರ ಸಂಗೀತಗಳೇ ಪ್ರಬಲವಾಗಿದ್ದವು. ಈ ಅಂಬ್ರೋಸನೇ ಲತೀನ್ ಭಾಷೆಯ ಸಂಗೀತ ಕರ್ತನೆಂದು ಹೇಳಬೇಕು. ಅವನು ಇಡೀ ಸಭೆಗೆ ಸಂಗೀತಗಳನ್ನು ಕಲಿಸಿ ಸಭೆಯವರೆಲ್ಲರೂ ಸಂಗೀತದಲ್ಲಿ ಪಾಲ್ಗೊಳ್ಳುವಂತೆ ಮಾಡಲು ಬಹಳ ಪ್ರಯಾಸಪಟ್ಟರು.

ಲತೀನ್ ಸಂಗೀತಗಳ ಇತಿಹಾಸದಲ್ಲಿ ಅಂಬ್ರೋಸನ ಜೊತೆಗೆ ಬೆನೆಡಿಕ್ಟ್ ಎಂಬ ಮುಖ್ಯ ಬಿಷಪರ ಹೆಸರನ್ನು ಸೇರಿಸುವುದು ಸೂಕ್ತವಾಗಿದೆ. ಏಕೆಂದರೆ ಇವನು ಅಂಬ್ರೋಸರಿಂದ ರಚಿತವಾದ ಸಂಗೀತಗಳನ್ನು ಆರಾಧನಾ ಪದ್ಧತಿಯಲ್ಲಿ (Liturgy) ಸೇರಿಸಿ ತನ್ನ ಅಧೀನಕ್ಕೊಳಪಟ್ಟ ಎಲ್ಲ ಸಭೆಗಳಲ್ಲಿ ಅವುಗಳನ್ನು ಪ್ರಚುರಪಡಿಸಿದನು.

ಸಭಾ ಚರಿತ್ರೆಯ ಮಧ್ಯಕಾಲದಲ್ಲಿ ಇಂಗ್ಲೇಂಡಿನೊಳಗೆ ಇಂಗ್ಲೀಷ್ ಸಂಗೀತಗಳು ಪ್ರಚಾರದಲ್ಲಿದ್ದವೆಂಬ ಬಗ್ಗೆ ಏನೂ ಹೇಳುವುದಕ್ಕೂ ಬರುವುದಿಲ್ಲ. ಯಾಕೆಂದರೆ ಅಂಥ ಸಂಗೀತಗಳ ಸಂಗ್ರಹ ಏನೂ ನಮಗೆ ಸಿಕ್ಕಿರುವುದಿಲ್ಲ. ಆದರೆ ಅಲ್ಲಿ ಪುನಃ ಸ್ಥಾಪನೆಯ ಕಾಲದವರೆಗೆ ಲತೀನ್ ಸಂಗೀತಗಳು ಬಹಳ ಪ್ರಚಾರದಲ್ಲಿದ್ದವು. ಇಂಗ್ಲೇಂಡಿನ ಆರಂಭದ ಪುನಃ ಸ್ಥಾಪಕರು ಆ ಸಂಗೀತಗಳಾಗಲಿ ಇತರ ಸಂಗೀತಗಳಾಗಲಿ ತಮ್ಮ ಆರಾಧನಾ ಪದ್ಧತಿಯಲ್ಲಿ (Common Prayer Book) ಸ್ಥಳ ಕೊಡಲಿಲ್ಲ. ಆದರೆ ಆ ದೇಶದೊಳಗೆ ಇಂಗ್ಲೀಷ್ ಭಾಷೆಯಲ್ಲಿ ಕೀರ್ತನೆಗಳನ್ನು ಹಾಡುವ ಅಭಿರುಚಿ ಹೆಚ್ಚಾಗುತ್ತಾ ಬಂದು ಇಡೀ ದೇಶದ ದೇವಾಲಯಗಳಲ್ಲಿ ಕೀರ್ತನೆಗಳನ್ನು ಹಾಡುವುದು ರೂಢಿಯಾಗಿತ್ತು. ಕೀರ್ತನೆಗಳನ್ನು ಹಾಡುವುದಕ್ಕೆ ಅನುಕೂಲವಾಗುವಂತೆ ಇಂಗ್ಲೀಷ್‌ನಲ್ಲಿ ಕಾವ್ಯ ರೂಪಕ್ಕೆ ತಂದವರಲ್ಲಿ ಮೊದಲನೆಯವನು ಥಾಮಸ್‌ಸ್ಟರ್ನ್ ಹೋಲ್ಸ್ ಎಂಬಾತನು. ಕೀರ್ತನೆಗಳಲ್ಲಿದ್ದ ಇತರ ಇಂಗ್ಲೀಷ್ ಸಂಗೀತಗಳಿಗೆ ೧೬೬೧ ರವರೆಗೆ ದೇವಾರಾಧನೆಯಲ್ಲಿ ಪ್ರವೇಶವಿದ್ದಿಲ್ಲವಾದ್ದರಿಂದ ಅವುಗಳ ರಚನೆಯೂ ವಿರಳವಾಗಿತ್ತು. ೧೬೬೧ ರಲ್ಲಿ ಇಂಥಾ ಸಂಗೀತಗಳಿಗೆ ಸಭಾಧಿಕಾರಿಗಳಿಂದಲೂ, ರಾಜ್ಯಾಧಿಕಾರಿಗಳಿಂದಲೂ ಪ್ರವೇಶ ದೊರೆಯಿತು. ಆಗ ಸಂಗೀತಗಳು ಹೆಚ್ಚಾಗುತ್ತಾ ನಡೆದವು. ಇಂಗ್ಲೀಷ್ ಸಂಗೀತಗಳ ಮೊದಲನೆಯ ಮತ್ತು ಪ್ರಮುಖ ಕರ್ತನು ಯಾರೆಂದರೆ ಡಾ. ಐಝಕ್ ವಾಟ್ಸ್ (೧೬೭೪–೧೭೪೮). ಅನಂತರ ವೆಸ್ಲಿ ಸಹೋದರರು (ಜಾನ್ ವೆಸ್ಲಿ ಮತ್ತು ಚಾರ್ಲ್ಸ್ ವೆಸ್ಲಿ) ಅನೇಕಾನೇಕ ಇಂಗ್ಲೀಷ್ ಸಂಗೀತಗಳನ್ನು ರಚಿಸಿದರು. ಇವರು ಬದುಕಿದ್ದು ೧೭೦೩–೧೭೯೦ ರವರಗೆ. ಚಾರ್ಲ್ಸ್ ವೆಸ್ಲಿಯು ಅನೇಕಾನೇಕ ಇಂಗ್ಲೀಷ್ ಸಂಗೀತಗಳನ್ನು ರಚಿಸಿದರು. ಚಾರ್ಲ್ಸ್ ವೆಸ್ಲಿಯು ರಚಿಸಿದ ಸಂಗೀತಗಳು ೬೫೦೦ ಈತನ ವಿಷಯವಾಗಿ ಕ್ಯಾನನ್ ಓವರ್ಟನ್ ಎಂಬ ಆಂಗ್ಲಿಕನ್ ಸಭೆಯ ವಿದ್ವಾಂಸರು ಚಾರ್ಲ್ಸ್ ವೆಸ್ಲಿಯ ಎಲ್ಲಾ ಕಾಲಗಳಲ್ಲಿ ಅತ್ಯಂತ ದೊಡ್ಡ ಸಂಗೀತಗಾರನೆಂದು ಹೇಳಬೇಕು. ಸಂಗೀತ ವಿಧಿಯ ವಿಷಯದಲ್ಲಿ ಜರ್ಮನಿಯು ಮಿಕ್ಕ ಎಲ್ಲ ದೇಶಗಳನ್ನು ಮೀರಿಸುವಂಥದ್ದಾಗಿದೆ. ಒಂದು ಲಕ್ಷಕ್ಕೂ ಹೆಚ್ಚಾದ ಸಂಗೀತಗಳು ಆ ದೇಶದಲ್ಲಿ ಇರುತ್ತದೆ. ಮತ್ತು ಅವುಗಳಲ್ಲಿ ಕನಿಷ್ಟ ಹತ್ತು ಸಾವಿರದಷ್ಟು ಸಂಗೀತಗಳು

ಜನಪ್ರಿಯವಾಗಿರುತ್ತವೆ. ಪುನಸ್ಥಾಪನೆಯ ಕಾಲದಿಂದ ಆ ದೇಶವು ತನ್ನ ಸಂಗೀತ ವಿಧಿಯನ್ನು ಬೆಳೆಯಿಸುತ್ತಲೆ ಇರುತ್ತದೆ. ಜರ್ಮನಿ ಭಾಷೆಯಲ್ಲಿ ಸೌವಾರ್ತಿಕ ಸತ್ಯಕ್ಕನುಸಾರವಾಗಿ ಸಂಗೀತಗಳನ್ನು ರಚಿಸಲು ಪ್ರಾರಂಭಿಸಿದವರೊಳಗೆ ಲೂಥರನೆ ಮೊದಲನೆಯವನು. ಇವನು ಜರ್ಮನ್ ಸಂಗೀತಗಳ ಅಂಬ್ರೋಸನೆಂದು ಹೇಳಬೇಕು.

೧೭೫೭-೧೮೧೬ ರವರೆಗೆ ಜರ್ಮನ್ ಸಂಗೀತಗಳಿಗೆ ಅಂಧಕಾರವು ಮುಸುಕಿತೆಂದು ಹೇಳಬಹುದು. ಈ ಕಾಲದಲ್ಲಿ ಸ್ವ ಬುದ್ಧಿ ಪ್ರಾಮಾಣಿಕರು(Rationalists) ಪ್ರಬಲರಾಗಿ 'ಸಂಗೀತಗಳು ಕಾವ್ಯ ಪದ್ಧತಿಗೆ ಸರಿಯಾಗಿಲ್ಲ ಅವುಗಳಲ್ಲಿ ಕಾಲ್ಪನಿಕ(Imagination) ಸಂಗೀತಗಳು ಅನೇಕ ಇವೆ, ಅವುಗಳ ಬಳಕೆ ಜನಾಂಗದ ಏಳಿಗೆಗೆ ಅಡ್ಡಿಯಾದದ್ದು ಎಂಬ ಅಭಿಪ್ರಾಯವನ್ನು ಹೊಂದಿದ್ದರು. ವಿಶ್ವಾಸ ರಕ್ಷಣೆಗಾಗಿ ಸಂಬಂಧಪಟ್ಟ ಸಂಗೀತಗಳಿಗೆ ಬದಲಾಗಿ ಜನರು ದೇವರ ಅಸ್ತಿತ್ವ, ಮನುಷ್ಯನ ಮಹಿಮೆ ಈ ಮುಂತಾದ ವಿಷಯಗಳಿಗೆ ಸಂಬಂಧಿಸಿದ ರಾಗಗಳನ್ನು ರಚಿಸತೊಡಗಿದರು. ಆದರೆ ೧೮೧೬ ರ ನಂತರ ಭಕ್ತಾದಿಗಳ ಆರಾಧನೆಗೆ ಅನುಕೂಲವಾದ ಸಂಗೀತಗಳು ಬೆಳೆಯುತ್ತಾ ಬಂದವು."[೩೬]

ಗೀತೆಗಳು ಹೃನ್ಮಗಳಿಗೆ ಚೇತನ ನೀಡುವ ಅಪೂರ್ವ ಶಕ್ತಿಯನ್ನು ಹೊಂದಿದೆ. ಮನುಷ್ಯನು ಕೂಡ ತನ್ನಲ್ಲಿರುವ ಭಾವಾವೇಶಗಳನ್ನು ಗೀತೆಯಲ್ಲಿ ಹಿಡಿದಿಟ್ಟು ಹಗುರಾಗುತ್ತಾನೆ. ಹೃದಯಾಂತರಾಳದಲ್ಲಿ ಸದ್ಭಾವಗಳು ಮೂಡಿ ನಿಂತಾಗ ಭಕ್ತಿ ಗೀತೆಗಳು ಹರಿದು ಬರುತ್ತವೆ. ಈ ಗೀತೆಗಳು ಕ್ರಿಸ್ತನ ಬೋಧನೆ ಮತ್ತು ತತ್ವಗಳನ್ನು ಅನುಸರಿಸಿ ನಡೆಯಲು ನೆರವಾಗುತ್ತವೆ. ಈ ಗೀತೆಗಳು ಕ್ರಿ.ಪೂ ೨೦೦ಕ್ಕೂ ಪೂರ್ವದಲ್ಲಿ ಹಲವಾರು ಕವಿಗಳಿಂದ ಇವು ರಚಿತವಾದವು. ಯೆಹೂದ್ಯ ಭಕ್ತಾದಿಗಳು ಇವುಗಳನ್ನು ಸಂಗ್ರಹಿಸಿ ತಮ್ಮ ಪ್ರಾರ್ಥನಾ ವಿಧಿಯಲ್ಲಿ ಬಳಕೆಗೆ ತಂದರು. ಅವುಗಳಿಗೆ ಕ್ರಮೇಣ ಬೈಬಲಿನಲ್ಲೇ ಖಚಿತವಾದ ಸ್ಥಾನಮಾನ ದೊರಕಿತು. ಪ್ರಾಚೀನ ಕಾಲದ ಹೀಬ್ರೂ ಭಾಷೆಯ ಈ ಕವಿತೆಗಳನ್ನು ಸರಳ ಕನ್ನಡಕ್ಕೆ ತಂದು ಇಂದು ದೇವಾರಾಧನೆಯಲ್ಲಿ ಬಳಸುತ್ತಿರುವ ವಿಷಯ ನಿಜಕ್ಕೂ ವಿಸ್ಮಯಕಾರಿಯಾಗಿದೆ. ದೈವ ಸ್ತುತಿ ಹಾಗೂ ದೇವಾರಾಧನಾ ಗೀತೆಗಳು ಸಹಾಯಕ್ಕಾಗಿ, ಸಂರಕ್ಷಣೆಗಾಗಿ, ಜೀವೋದ್ಧಾರಕ್ಕಾಗಿ ಪ್ರಾರ್ಥನೆಗಳು, ಉಪಕಾರ ಸ್ಮರಣೆ, ಕ್ಷಮಾಯಾಚನೆ, ಶತ್ರುಗಳ ದಂಡನೆ ಈ ವಿಷಯಗಳನ್ನು ಒಳಗೊಂಡು ಪ್ರೇರಕ ಶಕ್ತಿಗಳಾಗಿ ಪರಿಣಮಿಸಿವೆ. ಅರಸ ನೆಬುಕದ್ನೆಚ್ಚರನ ಆಜ್ಞೆಯ ಮೇರೆಗೆ ಅಜರ್ಯ[೩೭] ಮತ್ತು ಅವನ ಸಂಗಡಿಗರನ್ನು ಧಗಧಗನೆ ಉರಿಯುವ ಆವಿಗೆಯಲ್ಲಿ ಹಾಕಿದಾಗ ಅವರು ಸುಟ್ಟು ಹೋಗದೆ ಸರ್ವೇಶ್ವರನ ಗುಣಗಾನ ಮಾಡುತ್ತಾ ಬೆಂಕಿಯ ನಡುವೆ ತಿರುಗಾಡುತ್ತಿದ್ದರು. ಆಗ ಅವರು ಮಾಡಿದ ದೈವ ಸ್ತುತಿಯು ಭಾವಪೂರ್ಣವಾಗಿದ್ದು ಇಂದು ಬದುಕಿನ ಕಷ್ಟ-ಸಂಕಷ್ಟಗಳಲ್ಲಿ, ಉಪದ್ರವ, ಶೋಧನೆಗಳಲ್ಲಿ ಧೈರ್ಯಸ್ಥೈರ್ಯ ಹಾಗೂ ಆಶಾಭಾವನೆಯನ್ನು ಮೂಡಿಸುವ ಶಕ್ತಿಯಾಗಿ ಅನುಭವವೇದ್ಯವಾಗಿವೆ. ಇಂತಹ ಕ್ರೈಸ್ತ ಗೀತೆಗಳು ಹೇಗೆ ನಮ್ಮ ನಾಡಿಗೆ ಪ್ರವೇಶವಾದವು ಎಂಬುದನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಡಿ ಟಿಪ್ಪಣಿ

೧. ಬೋಧಕ ಬೋಧಿನಿ, ಅಕ್ಟೋಬರ್ ೧೯೩೩, ಸಂಪುಟ ೨೯, ಸಂಚಿಕೆ ೧೦, ವೆಸ್ಲಿಯನ್ ಪ್ರೆಸ್
ಚಿ. ಬೆಂಗಳೂರು, ಪುಟ.೩೨೨

೨. William Little H.W. Fowler and Jessie Coulson, The Oxford Universal Dictionary Illustrated, VOL II, P.1375
'Music that one of the fine arts which is concerned with the combination of sounds with a view to beauty of form and the expression of thought of feeling.'

೩. Emmonis E White – Appriciating India's Music (Madras: Christion Literature Society 1957) P.3

೪. ಬೋಧಕ ಬೋಧಿನಿ, ೧೯೨೨, ನವೆಂಬರ್, ಸಂಪುಟ–೧೮, ಸಂಚಿಕೆ–೧೧, ವೆಸ್ಲಿಯನ್ ಪ್ರೆಸ್
ಚಿ. ಮೈಸೂರು

೫. ಕರ್ನಾಟಕ ಸಂಗೀತ, ಕೆ.ಪಿ ಮುತ್ತಣ್ಣ, ೧೯೭೨, ಪುಟ.೧೭

೬. ಸಂಗೀತ ಲಕ್ಷಣ ಸಂಗ್ರಹ ಭಾಗ–೧, ಪದ್ಮಮೂರ್ತಿ, ೧೯೮೦, ಪುಟ.೧

೭. ಆರ್.ಸಿ ಹಿರೇಮಠ (ಸಂ), ಭಕ್ತಿಭಂಡಾರಿ ಬಸವಣ್ಣ, ೧೯೬೮, ವಚನ–೨೭೫, ಪುಟ.೧೧೩

೮. ಧರ್ಮ, ಕನ್ನಡ ವಿಶ್ವ ವಿದ್ಯಾಲಯ ವಿಶ್ವಕೋಶ:೩, ಸಂಗೀತ, ಪುಟ.೩೬೮

೯. ಯೆಹೂದ್ಯರು– ಒಂದು ಜನಾಂಗ

೧೦. Origen V. Jathanna 'Tulu Hymnal' A theological appraisal wholeness in Christ, Gowin Shiri, 1985, P.107

೧೧. ಕರ್ನಾಟಕ ಕ್ರೈಸ್ತ ಬಂಧು, ೧೯೩೯, ೧ನೇ ಜುಲೈ, ಸಂಪುಟ–೮, ಸಂಚಿಕೆ–೧, ಪುಟ.೬

೧೨. Paul J.Achtemeicr, 1990, Harper's Bible Dictionary, P.413

೧೩. ಹಳೆಒಡಂಬಡಿಕೆ – ಪವಿತ್ರ ಗ್ರಂಥದ ಒಂದನೇ ಭಾಗ

೧೪. ಸಂಖ್ಯಾಕಾಂಡ – ಪವಿತ್ರ ಗ್ರಂಥದ ಒಂದು ಪುಸ್ತಕ

೧೫. ಇಸ್ರಾಯೇಲ್ – ದೇವರಿಂದ ಆಯ್ಕೆ ಆದ ಜನಾಂಗ

೧೬. ಸಂಖ್ಯಾಕಾಂಡ, ೨೧:೧೭–೧೮

೧೭. ವಿಮೋಚನಾಕಾಂಡ, ಪವಿತ್ರ ಗ್ರಂಥದದ ಒಂದು ಪುಸ್ತಕ

೧೮. ಮೋಸಸ್ – ಒಬ್ಬ ಪ್ರವಾದಿ

೧೯. ಮಿರಿಯಮ್ – ಮೊಸಸ್ ಪ್ರವಾದಿಯ ಸಹೋದರಿ

೨೦. ವಿಮೋಚನಾಕಾಂಡ, ೧೭:೧೬

೨೧. ಸೌಲ*ದಾವೀದ – ಹಳೆಯ ಒಡಂಬಡಿಕೆಯಲ್ಲಿ ಬರುವ ದೊರೆಗಳು

೨೨. ೧ನೇ ಸಾಮುವೇಲ, ೧೮:೬–೭

೨೩. ಕರ್ನಾಟಕ ಕ್ರೈಸ್ತ ಬಂಧು, ೧೯೩೯, ಜುಲೈ–೧, ಸಂಪುಟ–೮, ಸಂಚಿಕೆ–೧, ಪುಟ.೬

೨೪. ೨ನೇ ಸಾಮುವೇಲ, ೧:೧೭–೨೭

೨೫. Albert C.outler, Augustine's Confessions and Enchiridion, 1955, P.183

೨೬. ೧ ಕೋರಿಂಥ, ೨೫:೧

೨೭. ಒಬ್ಬ ಪ್ರವಾದಿ

೨೮. ನೆಹೇಮಿಯಾ, ೮–೪

೨೯. ಹೊಸ ಒಡಂಬಡಿಕೆ – ಪವಿತ್ರ ಗ್ರಂಥದ ೨ನೇ ಭಾಗ

೩೦. ಲೂಕ – ಶುಭ ಸಂದೇಶ ರಚನಾಕಾರರಲ್ಲಿ ಒಬ್ಬರು

೩೧. Magnificat- ಹೊಸ ಆಗಮನದ ಸ್ತುತಿ ಗೀತೆಗಳಲ್ಲಿ ಇದು ಮೊದಲನೆಯದು.ಸಂತ ಮರಿಯ, ದೇವದೂತರಿಂದ ದೇವಸುತನ ಜನನಿಯಾಗುವ ಸಂದೇಶ ಪಡೆದು ತನ್ನ ಸಂಬಂಧಿಕಳಾದ ಎಲಿಜಬೇತಳನ್ನು ಬೇಟಿಯಾದಾಗ, ಮರಿಯಮ್ಮನವರು ಆನಂದ ಸ್ಫೂರ್ತಿಯಿಂದ ತುಂಬಿ ಹಾಡಿದ ಗಾನವಿದು. ಪರಾತ್ಪರನು ದೀನ–ದಲಿತರನ್ನು ಉದ್ಧರಿಸುತ್ತಾನೆ. ಗರ್ವಶಾಲಿಗಳನ್ನು ತಳ್ಳಿ ಬಿಡುತ್ತಾನೆ ಎಂಬ ಆತ್ಮ ವಿಶ್ವಾಸ ಹುಟ್ಟಿಸುವ ಗೀತೆಯಿದು. ಈಗ ಯಾಜಕರ ಸಂಧ್ಯಾವಂದನಾ ವಿಧಿಯಲ್ಲಿ ದಿನನಿತ್ಯ ಇದನ್ನು ಹೇಳುವರು. ಸನ್ಯಾಸಿ ಸನ್ಯಾಸಿನಿಯರ ಮಠಗಳಲ್ಲಿಯೂ ಇದನ್ನು ದಿನಂಪ್ರತಿ ಹಾಡುವುದುಂಟು.

೩೨. Benedictus- ಶುಭ ಸಂದೇಶದಲ್ಲಿರುವ ಮೂರು ಸ್ತುತಿಗೀತೆಗಳಲ್ಲಿ ಇದು ಒಂದು

೩೩. Gloria in Exclesis- ಈ ಗೀತೆಯು ಯೇಸು ಜನಿಸಿದಾಗ ದೇವದೂತರು ಹಾಡಿದ ಗೀತೆ

೩೪. ಅಪೋಸ್ತೊಲ– ಸುವಾರ್ತೆ ಸಾರಲು ಪವಿತ್ರಾತ್ಮನಿಂದ ಪ್ರೇರೆಪಿಸಲ್ಪಟ್ಟವನು

೩೫. ಎಫೆಸ, ೫–೧೯, ಕೊಲೆಸ್ಸ, ೩–೧೬

೩೬. ಕರ್ನಾಟಕ ಕ್ರೈಸ್ತ ಬಂಧು, ೧೯೩೯, ೧ನೇ ಜುಲೈ, ಸಂಪುಟ–೮, ಸಂಚಿಕೆ – ೧, ಪುಟ.೬

೩೭. ದಾನಿಯಲ್, ೩:೨೪–೪೫

ಅಧ್ಯಾಯ – ಮೂರು

ಕ್ರೈಸ್ತ ಮತ

ಅಧ್ಯಾಯ – ಮೂರು

ಕ್ರೈಸ್ತ ಮತ

೩.೧ ಕ್ರೈಸ್ತತ್ವದ ಉಗಮ

ಕ್ರೈಸ್ತರು ಈ ಪದದ ಉತ್ಪತ್ತಿಯ ಕುರಿತು ಹೊಸಒಡಂಬಡಿಕೆಯಲ್ಲಿ ಮೂರು ನಿದರ್ಶನಗಳು ದೊರೆಯುತ್ತವೆ. ೧. ಅ.ಕೃ ೧೧:೨, ೨. ಅ.ಕೃ ೨೬:೨೮, ೩. ೧ ಪೇತ್ರ ೪:೧೬. ಕ್ರೈಸ್ತರು ಮೊದಲು ಈ ಹೆಸರನ್ನು ತಮಗಿಟ್ಟುಕೊಳ್ಳಲಿಲ್ಲ. ಅವರು ತಮಗಿಟ್ಟುಕೊಂಡ ಹೆಸರುಗಳು ಯಾವುವೆಂದರೆ–ಶಿಷ್ಯರು (ಅ.ಕೃ ೧೧:೨೬), ಸಹೋದರರು (ಅ.ಕೃ ೯:೩೦), ದೇವರಾದುಕೊಂಡವರು (ರೋಮಾ ೮:೩೩), ದೇವಜನರು (ರೋಮಾ ೧೨:೧೩).

ಯೆಹೊದ್ಯರು ಯೇಸುವನ್ನು ಕ್ರಿಸ್ತನೆಂದು ಒಪ್ಪಿಕೊಳ್ಳದೆ ಹೋದುದರಿಂದ ಅವರು ಅತನ ಶಿಷ್ಯರನ್ನು ಕ್ರೈಸ್ತರೆಂದು ಹೇಳದೆ– ಆ ಮತದವರು (ಅ.ಕೃ. ೨೮:೨೨) ಅಥವಾ ನಜರೇತಿನವರ ಪಾಷಂಡ ಮತದವರು (ಅ.ಕೃ.೨೪:೫) ಎಂದು ಕರೆದರು.

ಆದ ಕಾರಣ ಆ ಕಾಲದಲ್ಲಿ ಕ್ರೈಸ್ತಮತದ ಉತ್ಪತ್ತಿಯನ್ನು ಸ್ಪಷ್ಟವಾಗಿ ತಿಳಿದಿದ್ದ ಯೇಸುವಿನ ಶಿಷ್ಯನಾದ ಲೂಕನು ಬರೆದಿರುವಂತೆ, ಅಂತಿಯೋಕ್ಯದ ಜನರು ಪ್ರಾರಂಭದಲ್ಲಿ ಯೇಸುವಿನ ಶಿಷ್ಯರಿಗೆ ಈ ಹೆಸರನ್ನು ಕೊಟ್ಟರೆಂದು ನಾವು ನಂಬಬೇಕು. ಹೇಗೆಂದರೆ ಕ್ರಿ.ಶ ಸುಮಾರು ೪೦ನೇಯ ವರುಷದಲ್ಲಿ ಬಾರ್ನಬ ಮತ್ತು ಪೌಲರು ಅಂತಿಯೋಕ್ಯದ ಸಂತೆ ಬೀದಿಗಳಲ್ಲಿ ಮಾಡಿದ ಪ್ರಸಂಗಗಳಲ್ಲಿ ಆ ಊರಿನವರು ಕ್ರಿಸ್ತನೆಂಬ ಮಾತನ್ನು ಪದೇಪದೇ ಕೇಳಿ ಅದರರ್ಥವನ್ನು ಸ್ಪಷ್ಟವಾಗಿ ತಿಳಿಯದಿದ್ದರೂ ಅವರು ಈ ನವೀನ ಮತಬೋಧಕರಿಗೆ ಈ ಹೆಸರು ತಕ್ಕುದೆಂದು ನೆನಸಿ ಈ ಹೆಸರನ್ನಿಟ್ಟರು.

ಈ ಹೆಸರಿನ ಪ್ರಾಬಲ್ಯ ಅಂತಿಯೋಕ್ಯದವರು ಈ ಹೆಸರನ್ನು ಪರಿಹಾಸ್ಯಕ್ಕಾಗಿ ಇಟ್ಟಿದ್ದರೂ ಕ್ರಿಸ್ತನನ್ನು

ಹಿಂಬಾಲಿಸುವವರಿಗೆ ಕ್ರೈಸ್ತರೆಂಬ ಈ ಹೆಸರು ಸಲ್ಲತಕ್ಕುದಾದ ಕಾರಣ ತಿಳಿಯಬಂದಿತು. ಕ್ರಿಶ ೫೭ನೇಯ ವರುಷದಲ್ಲಿ ಅಗ್ರಿಪ್ಪರಾಜರು ರೋಮ್ ರಾಜ್ಯದ ಅಧಿಕಾರಿಗಳೂ ಈ ಹೆಸರನ್ನು ತಿಳಿದಿದ್ದರು (ಅ.ಕೃ ೨೬:೨೮). ತರುವಾಯ ಕೆಲವು ವರುಷಗಳ ನಂತರ ಈ ಹೆಸರು ಎಲ್ಲರಿಗೂ ತಿಳಿಯಬಂದಿತು (೧.ಪೇತ್ರ ೪:೧೬). ಕ್ರಿಶ ೬೪ನೇಯ ವರುಷದಲ್ಲಿ ರೋಮ್ ಚಕ್ರವರ್ತಿಯಾದ ನೀರೋ ಎಂಬುವನ ಕಾಲದಲ್ಲಿ ಈ ಹೆಸರು ರೋಮ್ ಚಕ್ರಾಧಿಪತ್ಯದಲ್ಲೆಲ್ಲೂ ಹಬ್ಬಿತು. ಆಗ ಒಬ್ಬನು ಕ್ರೈಸ್ತನಾಗುವುದು ಅನೇಕ ಕಡೆಗಳಲ್ಲಿ ಮರಣಕ್ಕೆ ಹೇತುವಾದ ಅಪರಾಧವಾಗಿದ್ದಿತು. ಕ್ರಿಶ ೧೫೦ನೆಯ ವರುಷದಲ್ಲಿ ಪೊಲಿಕಾರ್ಪನು ಧೈರ್ಯವಾಗಿಯೂ, ಸಂತೋಷವಾಗಿಯೂ ತಾನು ಕ್ರೈಸ್ತನೆಂದು ಅರಿಕೆ ಮಾಡಿದನು. ತರುವಾಯ ಕ್ರಮೇಣ ಈ ಹೆಸರು ಹಲವು ದೇಶಗಳಲ್ಲಿ ಒಳ್ಳೆಯ ಕೀರ್ತಿಯನ್ನು ಪಡೆಯಿತು.

ರೋಮಾಪುರದ ಚಕ್ರವರ್ತಿಗಳು ಬೇರೆಬೇರೆ ಕಾಲಗಳಲ್ಲಿ ೩೦೦ ವರುಷಗಳವರೆಗೂ ಕ್ರೈಸ್ತ ಸಭೆಯನ್ನು ಹಿಂಸೆಪಡಿಸುತ್ತಾ ಬಂದರು. ಅವರು ಹೀಗೆ ಮಾಡುವುದಕ್ಕೆ ಕ್ರೈಸ್ತಮತವು ಇತರ ಎಲ್ಲಾ ಮತಗಳಿಗೂ ವಿರೋಧವಾದ ಮತವಾಗಿದೆಯೆಂದೂ ಭಾವಿಸಿಕೊಂಡದ್ದೆ ಆಗಿದ್ದಿತು. ಇಷ್ಟಾದರೂ ಕ್ರೈಸ್ತಮತವು ನಿರ್ಮೂಲವಾಗಲಿಲ್ಲ. ಕಡೆಗೆ ಕ್ರಿಶ ೩೧೮ರಲ್ಲಿ ರೋಮಾಪುರದ ಚಕ್ರವರ್ತಿಯಾದ ಕಾಂಸ್ಟೆಂಟೈನನು ಕ್ರೈಸ್ತಮತವನ್ನವಲಂಬಿಸಿ ಕ್ರೈಸ್ತರಿಗೆ ಯಾವ ವಿಧವಾದ ಹಿಂಸೆಯನ್ನಾದರೂ ಕೊಡಬಾರದೆಂದು, ಮತ ವಿಷಯದಲ್ಲಿ ಪ್ರತಿಯೊಬ್ಬನಿಗೂ ತನ್ನತನ್ನ ಮನಸ್ಸಾಕ್ಷಿಯ ಹೇಳಿಕೆಯ ಪ್ರಕಾರ ನಡೆಯುವುದಕ್ಕೆ ಸ್ವಾತಂತ್ರ್ಯವಿರಬೇಕೆಂದೂ ರಾಜಾಜ್ಞೆಯನ್ನು ಕೊಟ್ಟನು. ಇದರಿಂದ ಕ್ರೈಸ್ತ ಸಭೆಗೆ ದೊಡ್ಡ ಘನತೆಯೂ, ಅಧಿಕಾರವೂ ಬಂದರೂ ಸಹಜವಾದ ಮತ ಧರ್ಮಕ್ಕೆ ವಾಸ್ತವವಾಗಿ ನ್ಯೂನತೆಯುಂಟಾಯಿತು. "ಕಾಂಸ್ಟೆಂಟೈನು ಎಲ್ಲಾ ಪ್ರೋತ್ಸಾಹವನ್ನು ಕ್ರೈಸ್ತ ಮತಕ್ಕೆ ಕೊಟ್ಟನು. ಹೀಗೆ ಕ್ರೈಸ್ತ ಧರ್ಮವು ಬೆಳೆಯುತ್ತಾ ಹೋಯಿತು."[೧] ಕ್ರಿಸ್ತನ ಬೋಧನೆಯನ್ನು ಅನುಸರಿಸುವ ಭಕ್ತರ ಸಮೂಹ ಬೆಳೆದು ಕ್ರಮೇಣ ಸ್ಪಷ್ಟ ರೂಪವನ್ನು ತಾಳಿ ನಿರ್ದಿಷ್ಟ ನಿರೂಪಣೆಗೆ ಒಳಪಟ್ಟು ಒಂದು ಸ್ವರೂಪವನ್ನು ಪಡೆದು ಜ್ಞಾನಸ್ನಾನಹೊಂದಿ ಒಂದೇ ಸಭೆಯ ಅಂಗವಾಗಿ ಬಾಳುವ ಭಕ್ತರ ಸಮುದಾಯವಾಗಿ 'ಧರ್ಮಸಭೆ' (Church) ಎನಿಸಿಕೊಂಡಿತು. "ದ್ವಿತೀಯ ವ್ಯಾಟಿಕನ್ ಮಹಾಸಮ್ಮೇಳನ ಧರ್ಮಸಭೆಯು ದೇವರ ಪ್ರಜೆಯೆಂದು ಘೋಷಿಸಿದೆ."[೨] ಪವಿತ್ರವಾದ ಕಥೋಲಿಕಾ ಧರ್ಮಸಭೆಯ ಮೊತ್ತಮೊದಲ ಅಗೋಚರ ಜಗದ್ಗುರು ಕ್ರಿಸ್ತನಾದರೂ ಪೀಟರ್ ಮಹಾಶಯ ಗೋಚರ ಜಗದ್ಗುರುವಾಗಿ ಧರ್ಮಸಭೆಯ ಇತಿಹಾಸವನ್ನು ಪ್ರಾರಂಭಿಸಿದರು. ಧರ್ಮಸಭೆಯ ಪ್ರಪ್ರಥಮ ಜಗದ್ಗುರುವಾಗಿ "ಪೇತ್ರ"[೩] ಆಯ್ಕೆಯಾದರು. "ಮೋಕ್ಷರಾಜ್ಯದ ಬೀಗದ ಕೈಯನ್ನು ನಿನಗೆ ಕೊಡುತ್ತೇನೆ, ಭೂಲೋಕದಲ್ಲಿ ನೀನು ಯಾವುದನ್ನು ಕಟ್ಟುತ್ತೀಯೋ ಅದು ಪರಲೋಕದಲ್ಲಿಯೂ ಕಟ್ಟಲ್ಪಡುವುದು ಮತ್ತು ಭೂಲೋಕದಲ್ಲಿ ನೀನು ಯಾವುದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಲ್ಪಡುವುದು"[೪] ಎಂದು ಹೇಳಿ ಸ್ವತಃ ಯೇಸುಕ್ರಿಸ್ತರೇ ಪೇತ್ರ ಜಗದ್ಗುರುವಾಗಲು ಯೋಗ್ಯನೆಂಬುದಾಗಿ ತೀರ್ಮಾನಿಸಿದರು. ಪವಿತ್ರಾತ್ಮರ ಹಬ್ಬದಲ್ಲಿ ಪವಿತ್ರಾತ್ಮನಿಂದ ತುಂಬಿದವರಾಗಿ ಇವರು

ಮಾಡಿದ ಮೊಟ್ಟಮೊದಲ ಬಹಿರಂಗ ಪ್ರಬೋಧನೆ ಬಹಳ ಪರಿಣಾಮಕಾರಿಯಾಗಿತ್ತು. ಸಾವಿರಾರು ಜನ ಯೆಹೂದ್ಯರು, ಹೃದಯ ಪರಿವರ್ತನೆಗೊಂಡು ಕ್ರೈಸ್ತ ಮತಾವಲಂಬಿಗಳಾದರು. ಇದೇ ಧರ್ಮಸಭೆಯ ಶೈಶವಾವಸ್ಥೆಯ ಕ್ರೈಸ್ತ ಮತ ಪ್ರಚಾರದ ಮೊದಲ ಪ್ರಬೋಧನೆಯು ಆಯಿತು. ಯೆರೂಸಲೇಮಿನಲ್ಲಿ ನಡೆದ ಪ್ರಥಮ ಧರ್ಮಸಭೆಯ ಸಮ್ಮೇಳನದಲ್ಲಿ ಇವರು ನಿರ್ಣಯಾತ್ಮಕವಾಗಿ ಮಾತಾಡಿದ್ದನ್ನು ಕೇಳಿದ ಗ್ರೀಕ್ ಮತ್ತು ಲ್ಯಾಟಿನ್ ಭಾಷಾತಜ್ಞರು ಕಾವ್ಯಮಿಮಾಂಸಕರು ವಿಸ್ಮಯಭರಿತರಾದರು. ಗಲಿಲೀಯಾದ ಬೆಸ್ತನೊಬ್ಬನ ತೊದಲು ನುಡಿಗಳು ಪವಿತ್ರಾತ್ಮ ಪ್ರೇರಿತವಾಗಿ ಕಾವ್ಯಮಯದಿಂದ ಧಾರೆಯಾಗಿ ಹರಿದು ಬೆಂಕಿಯ ಜ್ವಾಲೆಯಂತೆ ಅವರ ಎದೆಗಳನ್ನು ತಟ್ಟಿದವು. ರೋಮಾನಗರದಲ್ಲಿ ತನ್ನ ಕೊನೆಯ ದಿನಗಳನ್ನು ಕಳೆದ ಇವರನ್ನು ಕ್ರಿಶ ೬೭ರಲ್ಲಿ ವ್ಯಾಟಿಕನ್ ಗುಡ್ಡದ ಮೇಲೆ ನೀರೋ ರಾಜನ ತೋಟದಲ್ಲಿ ತಲೆಕೆಳಗಾಗಿ ಶಿಲುಬೆಗೆ ಹಾಕಿ ಕೊಂದರು. ಹೀಗೆ ಸಂತ ಪೀಟರ್ ಧರ್ಮಸಭೆಯ ಪ್ರಪ್ರಥಮ ಜಗದ್ಗುರುವಾದ "ರಕ್ತ ಸಾಕ್ಷಿ"[೫] (Martyrdom) ಯಾದರು. ಇಂದು ಧರ್ಮಸಭೆಯು (Church) ಜಗದ್ಗುರುಗಳ ಪಾಲನೆ ಪೋಷಣೆಯಿಂದ ಮುಂದುವರೆದುಕೊಂಡು ಬಂದಿದೆ.

ಕ್ರಮೇಣ ಧರ್ಮಸಭೆಯಲ್ಲಿ ಭಿನ್ನಬೇಧಗಳು ಉಂಟಾದವು. ಜನಾಂಗ, ಕುಲ, ಭಾಷೆ, ಸಾಮಾಜಿಕ ಪರಿಸರ, ರಾಜಕೀಯಒತ್ತಡ, ಆರ್ಥಿಕಪರಿಸ್ಥಿತಿ, ಕೆಲವೆಡೆ ದೈವಜ್ಞಾನ ನಿರೂಪಣೆಯಲ್ಲುಂಟಾದ ವ್ಯತ್ಯಾಸ ಇತ್ಯಾದಿ ಭಿನ್ನಬೇಧಗಳಿಗೆ ಕಾರಣವಾಯಿತು. ಒಂದು ಕಡೆ ರೋಮ್ ಸಾಮ್ರಾಜ್ಯದ ಉತ್ತರಾರ್ಧದಲ್ಲಿ ಲ್ಯಾಟಿನ್ ಸಭೆಯು ಪ್ರಬಲವಾಗಿ ನಿಂತುಕೊಂಡಿತು. ರೋಮ್ ನಗರವೇ ಅದರ ಕೇಂದ್ರವಾಗಿ ಪೋಪ್ ಜಗದ್ಗುರು ಅದರ ಪ್ರಧಾನ ಗುರುವಾದರು. ಮುಂದೆ ೧೬ನೇ ಶತಮಾನದ ಹೊತ್ತಿಗೆ ರೋಮನ್ ಕಥೋಲಿಕ್ ಮತ್ತು ಪ್ರೊಟೆಸ್ಟೆಂಟ್ ಎಂಬ ಕವಲೊಡೆದು ಎರಡು ಬೇರೆಬೇರೆ ಶಾಖೆಗಳೆ ಆಗಿಹೋದವು.

೩.೨ ಭಾರತದಲ್ಲಿ ಕ್ರೈಸ್ತ ಧರ್ಮ

ಮಾನವ ಕುಲದ ರಕ್ಷಣೆಗಾಗಿ ಇಹಕ್ಕೆ ಆಗಮಿಸಿದ ದೇವಪುತ್ರ ಯೇಸುಕ್ರಿಸ್ತನ ಜನನ ಧರೆಗೆ ವರದಾನವಾಯಿತು. ಆತನ ತತ್ವಗಳು ಮನುಷ್ಯ ವರ್ಗವನ್ನು ಸತ್‌ಪಥದಲ್ಲಿ ಮುನ್ನಡೆಸಲು ಶಕ್ತವಾದವು. "ಎಲ್ಲಕ್ಕಿಂತಲೂ ಹೆಚ್ಚಾಗಿ ದೇವರನ್ನು ಪ್ರೀತಿಸು, ನಿನ್ನಂತೆಯೇ ಪರರನ್ನು ಪ್ರೀತಿಸು"[೬] ಎಂಬ ಎರಡು ಮಹಾನ್ ತತ್ವಗಳಲ್ಲಿ ಅಡಕವಾಗಿರುವ ಈ ಧರ್ಮ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹಬ್ಬಿ ಹರಡುತ್ತಿರುವಾಗ ಭಾರತಕ್ಕೆ ಬಂದಿತು. ಭಾರತಕ್ಕೆ ಕ್ರೈಸ್ತಧರ್ಮ ಬಂದದ್ದರ ಕುರಿತು ಎರಡು ಪ್ರಮುಖ ದೃಷ್ಟಿಕೋನಗಳಿವೆ.

"೧. ಅಪೋಸ್ತೋಲನಾದ ಸಂತ ತೋಮನು ಭಾರತಕ್ಕೆ ಕ್ರೈಸ್ತ ಧರ್ಮವನ್ನು ತಂದನು.

೨. ಮಿಶನರಿಗಳ"[೭] ಆಗಮನದಿಂದ"[೮]

೩.೩ ಅಪೋಸ್ತೊಲನಾದ ಸಂತ ಥಾಮಸ್

ಯೇಸುವಿನ ಹನ್ನೆರಡು ಜನ ಅಪೋಸ್ತೋಲರಲ್ಲಿ ಒಬ್ಬರಾದ ಸಂತ ತೋಮಸ್‌ನು (St.Thomas) ಭಾರತಕ್ಕೆ ಸುವಾರ್ತಾಸೇವೆಗಾಗಿ ಬಂದಿದ್ದರೆಂದು ತಿಳಿಸುವ ಆಧಾರಗಳಿವೆ:

೧. ಯೂದಾ ತೋಮನ ಕೃತ್ಯಗಳು

೨. ಕೇರಳದಲ್ಲಿ ಸಂತ ತೋಮರ ಕ್ರೈಸ್ತರ ಅಸ್ತಿತ್ವ

೩. ಮೈಲಾಪುರದಲ್ಲಿ ಸಂತ ತೋಮರ ಸಮಾಧಿ

ಇವು ಇಂದು ಜೀವಂತಸಾಕ್ಷಿಗಳಾಗಿ ನಿಂತಿವೆ. ಈ ಮೂರು ನಿದರ್ಶನಗಳು ಕ್ರೈಸ್ತಧರ್ಮ ಭಾರತಕ್ಕೆ ಕ್ರಿ.ಶ. ೧ನೇ ಶತಮಾನದಲ್ಲಿಯೇ ಬಂದಿತ್ತು ಎಂಬುದಕ್ಕೆ ಜೀವಂತಸಾಕ್ಷಿಗಳಾಗಿ ನಿಂತಿವೆ. ಸಂತ ತೋಮಸ್ ಕ್ರಿಶ ೧ನೇ ಶತಮಾನದಲ್ಲಿ ಹತ್ತಿಸಿದ ಕ್ರೈಸ್ತ ವಿಶ್ವಾಸವೆಂಬ ಹಣತೆ ಇಂದು ಭಾರತದ ಎಲ್ಲಾ ಮೂಲೆಮೂಲೆಗಳಲ್ಲಿ ಪ್ರಜ್ವಲಿಸುತ್ತಿದೆ ಎಂಬುದು ನಿಜ ಸಂಗತಿಯಾಗಿದೆ.

೩.೪ ಪಾಶ್ಚಾತ್ಯ ಮಿಶನರಿ ಸಂಘಗಳ ಆಗಮನ

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹುಟ್ಟಿಕೊಂಡ ಕ್ರೈಸ್ತಧರ್ಮ ಅಲ್ಲಿಗೇ ಸೀಮಿತವಾಗದೆ, ತನ್ನ ಎಲ್ಲೆಯನ್ನು ವಿಶ್ವದ ವಿವಿಧ ಭಾಗಗಳಿಗೆ ವಿಸ್ತರಿಸಿಕೊಂಡಿತು. ಅಂತೆಯೇ ೧೪ನೇ ಶತಮಾನದ ಹೊತ್ತಿಗೆ ಮಿಶನರಿ ಸಭೆಗಳು ಭಾರತಕ್ಕೆ ಕಾಲಿಡಲಾರಂಭಿಸಿದವು. ೧೩೨೧ರಲ್ಲಿ ಡೊಮಿನಿಕನ್ ಮಿಶನರಿಗಳು ಪ್ರಥಮ ಬಾರಿಗೆ ಭಾರತಕ್ಕೆ ಆಗಮಿಸಿ ಕೆನರಾ, ಮೈಸೂರು, ಮಲಬಾರ್ ಮತ್ತು ಟ್ರಾವಂಕೂರು ಈ ಪ್ರದೇಶಗಳಲ್ಲಿ ಧರ್ಮಪ್ರಚಾರ ಮಾಡಿದರು. ಅಂದು ಸುವಾರ್ತಾಸೇವೆಯಲ್ಲಿ ಅತಿ ತೀಕ್ಷ್ಣವಾಗಿ ತೊಡಗಿದವರೇ ಬ್ರದರ್ ಜೋರ್ಡನ್ ಎಂಬುವರು. ನಿಸ್ವಾರ್ಥಸೇವೆ ಸಲ್ಲಿಸಿದ ಡೊಮಿನಿಕನ್ ಮಿಷನರಿಗಳ ಸೇವೆ ಸಾಹಸಮಯವಾಗಿತ್ತು. ಸುಮಾರು ಇದೇ ಕಾಲಘಟ್ಟದಲ್ಲಿ ಆಗಮಿಸಿದ್ದ "ಪ್ರಾನ್ಸಿಸ್ಕನ್ ಮಿಶನರಿಗಳು ಸುವಾರ್ತಾಸೇವೆಯಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಂಡರು. ಇವರಲ್ಲಿ ಜಾನ್ ದೆ ಮರಿಜ್ಞೊಲ ಕೊನೆಯವರು. ಇವರು ೧೩೪೮ರಲ್ಲಿ ಕ್ವಿಲೋನನ್ನು ತಲುಪಿ ಅಲ್ಲಿ ಸುವಾರ್ತಸೇವೆ ಸಲ್ಲಿಸಿದರು."[೯]

"ಅತಿ ಹೆಚ್ಚಿನ ಪ್ರಮಾಣದಲ್ಲಿ ಮಿಶನರಿಗಳು ನಮ್ಮ ನಾಡಿಗೆ ಆಗಮಿಸಿದ್ದು ಪೋರ್ಚುಗೀಸರ ಕಾಲದಲ್ಲಿ."[೧೦] "೧೫೦೦ರಲ್ಲಿ ಪ್ರಾನ್ಸಿಸ್ಕನ್ ಮಿಶನರಿಗಳು ಹಾಗೂ ಎಂಟು ಮಂದಿ ಲೌಕಿಕ ಕ್ರಮದವರು, ಭಾರತಕ್ಕೆ ಆಗಮಿಸಿ ಕಲ್ಲಿಕೋಟೆ, ಕಣ್ಣಾನೂರು, ಕ್ವಿಲೋನ್, ಕೊಚ್ಚಿನ್ ಹಾಗೂ ಇತರ ಕರಾವಳಿ ಪ್ರದೇಶಗಳಲ್ಲಿ ಹೆಚ್ಚಾಗಿ ಮತಪ್ರಚಾರ ಮಾಡಿದರು."[೧೧] ೧೫೪೦ರಲ್ಲಿ ಜೆಸುವಿಟ್ ಮಿಶನರಿಗಳು ಭಾರತಕ್ಕೆ ಬರತೊಡಗಿದರು. ಇವರಲ್ಲಿ ಬಹು ಪ್ರಮುಖರಾದವರೆಂದರೆ ಸೆಂಟ್ ಫ್ರಾನ್ಸಿಸ್ ಜೇವಿಯರ್. ಇವರು ಗೋವೆ ಮತ್ತು ಪಶ್ಚಿಮ ಕರಾವಳಿಯ ಇತರ ಭಾಗಗಳಲ್ಲಿ ಮತಪ್ರಚಾರ ಮಾಡಿದ್ದ ಪ್ರಸಿದ್ಧ ಮಿಶನರಿ ಸಂತರಾಗಿದ್ದರು. ಈ ಸಂತನ ಹೆಸರಿನಲ್ಲಿ ಅನೇಕ ದೇವಾಲಯಗಳು ಭಾರತದಾದ್ಯಂತ ಕಟ್ಟಿರುವುದನ್ನು ಕಾಣಬಹುದು. ಇದೇ ಸನ್ಯಾಸಿ

ಕ್ರಮಕ್ಕೆ ಸೇರಿದ ರಾಬರ್ಟ್ ಡಿ. ನೊಬಲಿಯವರು ೧೬೦೬ರಲ್ಲಿ ಮಧುರೆಯನ್ನು ತಲುಪಿ ಉತ್ತಮ ಕುಲದವರಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ಜೀವನ ರೀತಿ ನೀತಿಗಳನ್ನು ಅಳವಡಿಸಿಕೊಂಡು ಸುವಾರ್ತಾಸೇವೆ ಮಾಡಿದರು. ಇವರು ತಮಿಳಿನಲ್ಲಿ ಸಮೃದ್ಧ ಕ್ರೈಸ್ತ ಧಾರ್ಮಿಕ ಸಾಹಿತ್ಯವನ್ನು ರಚಿಸಿದರು. ಸೆಂಟ್ ಜಾನ್ ಡಿ ಬ್ರಿಟ್ಟೊ ತಾನು ಬೋಧಿಸಿದ ಧರ್ಮಕ್ಕೋಸ್ಕರ ಪ್ರಾಣವನ್ನೇ ಕೊಟ್ಟರು. (ತಮಿಳುನಾಡಿನಲ್ಲಿ ಧರ್ಮಪ್ರಚಾರಕಾರ್ಯದಲ್ಲಿ ತೊಡಗಿದ ಮತ್ತೊಬ್ಬ ಪ್ರವರ್ತಕರೇ ಇವರು) ಸುಮಾರು ಇದೇ ಅವಧಿಯಲ್ಲಿ ಕರ್ನಾಟಕದಲ್ಲಿ ಮಿಶನರಿ ಚಳುವಳಿಗಳು ವ್ಯವಸ್ಥಿತವಾಗಿ ಆರಂಭವಾದವು.

೩.೫ ಕರ್ನಾಟಕದಲ್ಲಿ ಕ್ರೈಸ್ತ ಧರ್ಮ

ಎ.ಸಿ. ಪೆರುಮಲಿಲ್ (A.C. Perumalil) ತಮ್ಮ 'The Apostles In India' ಎಂಬ ಗ್ರಂಥದಲ್ಲಿ ಒಂದನೇ ಶತಮಾನದಲ್ಲಿಯೇ ಸಂತ ತೋಮನು ಕರ್ನಾಟಕಕ್ಕೆ ಮತಪ್ರಚಾರಕ್ಕಾಗಿ ಬಂದಿರಬಹುದೆಂದು ಭಾವಿಸುತ್ತಾರೆ. ಎ. ವಿಕ್ಕಿ (A Wicki) ತಮ್ಮ New Catholic Encyclopedia ಎಂಬ ಗ್ರಂಥದಲ್ಲಿ ಉತ್ತರಭಾರತದ ಗುಡ್ನಾಫರ್ ಎಂಬ ರಾಜ ಸಂತ ತೋಮಸನನ್ನು ಆಮಂತ್ರಿಸಿದನೆಂದು ಹೇಳುತ್ತಾರೆ. ಆದರೆ ಈ ಹೇಳಿಕೆಗಳಲ್ಲಿ ಎಷ್ಟು ಸತ್ಯ ಅಡಕವಾಗಿದೆ ಎಂಬುದು ಪ್ರಶ್ನಾರ್ಥಕವಾಗಿಯೇ ನಿಲ್ಲುತ್ತದೆ. ಮತ್ತು ಕರ್ನಾಟಕದಲ್ಲಿ ಈತನಿಂದ ಕ್ರೈಸ್ತರಾದವರ ಕುರಿತು ಯಾವುದೇ ಮಾಹಿತಿ ತಿಳಿದು ಬಂದಿಲ್ಲ.

ಕರ್ನಾಟಕದಲ್ಲಿ ಕ್ರೈಸ್ತರ ಪ್ರವೇಶದ ಕುರಿತು ಸರಿಯಾದ ಮಾಹಿತಿ ನಮಗೆ ದೊರೆಯುವುದು ೧೩೭೪ರಿಂದೀಚೆಗೆ. "ಸಂತ ಡೊಮಿನಿಕನ್ ಗುರುಗಳು ಪ್ರಥಮಬಾರಿಗೆ ಮಿಷನರಿಗಳಾಗಿ ಬಂದು ಕೆನರಾ, ಮೈಸೂರು, ಮಲಬಾರ್ ಮತ್ತು ಟ್ರಾವಂಕೂರುಗಳಲ್ಲಿ ಪ್ರಚಾರ ಮಾಡಿದರು."[೧೨] "೧೩೭೮ರವರೆಗೂ ಸತತವಾಗಿ ಸುವಾರ್ತಾಸೇವೆಯಲ್ಲಿ ತೊಡಗಿದ ಈ ಮಿಶನರಿಗಳು ೧೦,೦೦೦ ಜನರನ್ನು ಕ್ರೈಸ್ತ ಮತಾವಲಂಬಿಗಳಾಗಿ ಮಾಡಿದರು."[೧೩]

ಭಾರತದಲ್ಲಿ ಮತ್ತೊಮ್ಮೆ ಸುವಾರ್ತಾಸೇವೆಗಾಗಿ "ಪ್ರಾನ್ಸಿಸ್ಕನ್ನರು ೧೫೨೧ರಲ್ಲಿ ಪ್ರವೇಶ ಮಾಡಿ ಮಂಗಳೂರಿನ ಉಳ್ಳಾಲ ಮತ್ತು ಫರಂಗಿ ಪೇಟೆಗಳಲ್ಲಿ ಚರ್ಚ್‌ಗಳನ್ನು ಸ್ಥಾಪಿಸಿದರು."[೧೪] ಜನರ ಆಧ್ಯಾತ್ಮಿಕ ಕಾರ್ಯಗಳಲ್ಲಿ ಆಸಕ್ತಿವಹಿಸಿ ಅನೇಕ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರನ್ನು ಸನ್ಮಾರ್ಗದಲ್ಲಿ ನಡೆಸಲು ಪ್ರಯತ್ನಿಸಿದರು. ಈ ಕಾಲಘಟ್ಟಗಳಲ್ಲಿ ಕೇವಲ ಮಿಶನರಿಗಳು ಮಾತ್ರವಲ್ಲದೇ ಕೆಲವು ಲೌಕಿಕ ಕ್ರಮದ ವ್ಯಕ್ತಿಗಳು ಸಹ ಆಧ್ಯಾತ್ಮಿಕ ವಿಚಾರಗಳಲ್ಲಿ ತಮ್ಮನ್ನೇ ತೊಡಗಿಸಿಕೊಂಡು ಇಲ್ಲಿನ ಜನರ ಧಾರ್ಮಿಕ ಅವಶ್ಯಕತೆಗಳನ್ನು ಈಡೇರಿಸಲು ಪ್ರಯತ್ನಿಸಿದರು. ಇಂತಹ ವ್ಯಕ್ತಿಗಳ ಕುರಿತು ನಮಗೆ ಮಾಹಿತಿಯು ದೊರೆಯುತ್ತದೆ. "ಚಿಕ್ಕಬಳ್ಳಾಪುರ ಕ್ರೈಸ್ತರಲ್ಲಿ ಪ್ರಚಲಿತವಿದ್ದ ಒಂದು ಸಮುದಾಯದಲ್ಲಿ 'ಜ್ಞಾನ ಭೋದ' ಎಂಬ ಗುರುವಿನ ಹೆಸರು ದೊರೆತಿರುವುದು ಇದಕ್ಕೆ ಸಾಕ್ಷಿಯಾಗಿದೆ."[೧೫]

೧೬೪೮ ಕರ್ನಾಟಕದ ಇತಿಹಾಸದಲ್ಲಿಯೇ ಪ್ರಮುಖವಾದ ಕಾಲಘಟ್ಟವಾಗಿದೆ. ಜೆಸ್ವಿಟ್ ಸನ್ಯಾಸಿ

ಚಿನ್ನಾಮಿ ಕರ್ನಾಟಕಕ್ಕೆ ಕಾಲಿಟ್ಟ ಮಹತ್ವದ ಕಾಲವಿದು. ಇವರು ನಿಷ್ಠಾವಂತ ಸುವಾರ್ತಾ ಪ್ರವರ್ತಕರಾಗಿದ್ದರಿಂದ ಇವರು ತಮ್ಮ ಸಹಕಾರ್ಯಕರ್ತರೊಡನೆ ಕೂಡಿ ಮೈಸೂರು, ಬೆಂಗಳೂರು, ಹಾಸನ ಪ್ರದೇಶಗಳಲ್ಲಿ ಧರ್ಮಪ್ರಸಾರ ಮಾಡಿದರು. ೧೮೪೫ರಲ್ಲಿ ಫ್ರೆಂಚ್ ಮಿಷನ್ ಸಂಸ್ಥೆಯವರು ಬೆಂಗಳೂರು, ಚಿಕ್ಕಬಳ್ಳಾಪುರ, ಹಾಸನ, ಶಿವಮೊಗ್ಗ, ಕೊಡಗು, ತುಮಕೂರು, ಮೈಸೂರು ಇವೆ ಮೊದಲಾದ ಧರ್ಮ ಕೇಂದ್ರಗಳಲ್ಲಿ ಸುವಾರ್ತೆ ಸಾರಿದ ಮಹನೀಯರು. ಈ ಕೇಂದ್ರಸ್ಥಳಗಳನ್ನು ಒಟ್ಟಾಗಿ ಪೋಪ್ 'ಮೈಸೂರು ಮಿಶನ್' ಎಂದು ಘೋಷಿಸಿದರು. ಈ ಮಿಶನ್‌ನ ಮುಖ್ಯಾಧಿಕಾರಿಯಾಗಿ ಲೂಯಿಸ್ ಶಾರ್ಬೊನೊ ಇವರನ್ನು ನೇಮಿಸಲಾಯಿತು. ಈ ಸಂದರ್ಭದಲ್ಲಿಯೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಫ್ರೆಂಚ್ ಮಿಶನರಿಗಳು ಬಂದರು. "ಇವರ ಕಾಲದ ಮಹತ್ ಸಾಧನೆಯೆಂದರೆ ೧೮೪೬ರಲ್ಲಿ ಮಿಶನ್ ಸೆಮಿನಾರಿಯ ಸ್ಥಾಪನೆ, ೧೮೪೮ರಲ್ಲಿ ಕಥೋಲಿಕ್ ಅಚ್ಚು ಕೂಟದ ಸ್ಥಾಪನೆ ಹಾಗೂ ೧೮೫೦ರಲ್ಲಿ ಬೆಂಗಳೂರಿನಲ್ಲಿ ಈಗಿನ ಸೆಂಟ್ ಜೋಸೆಫ್ ಕಾಲೇಜಿನ ಸ್ಥಾಪನೆ."[೧೬]

ಮಿಶನರಿಗಳ ನಿಸ್ವಾರ್ಥ ಸೇವಾಮನೋಭಾವ ಹಾಗೂ ದೃಢವಿಶ್ವಾಸದಿಂದ ಕ್ರೈಸ್ತಧರ್ಮ ಕನ್ನಡನಾಡಿನಲ್ಲಿ ೧೯ ಮತ್ತು ೨೦ನೇ ಶತಮಾನದಲ್ಲಿ ವರ್ಧಿಸಿತು. ಸ್ಥಳೀಯ ಕ್ರೈಸ್ತರು ಆಧ್ಯಾತ್ಮ ಜೀವನಕ್ಕೆ ತಮ್ಮನ್ನೇ ಅರ್ಪಿಸಿಕೊಂಡು ಧರ್ಮಗುರುಗಳಾಗಿ ದೀಕ್ಷೆಯನ್ನು ಪಡೆಯಲಾರಂಭಿಸಿದರು. ೨೦ನೇ ಶತಮಾನದ ಮೊದಲ ದಶಕಗಳಲ್ಲಿ ಸ್ಥಳೀಯ ಗುರುಗಳ ಸಂಖ್ಯೆ ಹೆಚ್ಚಿದ್ದರಿಂದ ವಿದೇಶಿ ಮಿಶನರಿಗಳ ಆಗಮನ ಕಡಿಮೆಯಾಗತೊಡಗಿತು.

೩.೬ ಭಾರತದಲ್ಲಿ ಪ್ರೊಟೆಸ್ಟಂಟ್ ಮಿಶನ್‌ಗಳ ಆರಂಭ

ಕ್ರೈಸ್ತಮತದ ಪ್ರಸಾರಕ್ಕಾಗಿ ಭಾರತಕ್ಕೆ ಆಗಮಿನಿಸಿದ ಪ್ರೊಟೆಸ್ಟೆಂಟ್ ಮಿಶನರಿಗಳ ಸೇವೆ ಅಮೋಘವಾದದ್ದು. ೧೬೦೦ರಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ೧೬೦೨ರಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪನಿಯು ಭಾರತದಲ್ಲಿ ಕೆಲಸ ಪ್ರಾರಂಭಿಸಿದರು. ಬ್ರಿಟಿಷರು ತಮ್ಮ ಸಮಯವನ್ನು ವ್ಯಾಪಾರಕ್ಕಾಗಿ ವ್ಯಯ ಮಾಡುತ್ತಿದ್ದರಾದರೂ ಅವರಲ್ಲಿ ಸೌವಾರ್ತಿಕ ಸೇವೆಯ ಮನೋಭಾವವು ಇದ್ದಿತ್ತೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಆದರೆ "ಡಚ್ಚರು ಭಾರತದಲ್ಲಿ ಹೆಚ್ಚಾಗಿ ಸುವಾರ್ತೆ ಸಾರುವ ಉದ್ದೇಶದಿಂದ ಆಗಮಿಸಿ ಕನ್ಯಾಕುಮಾರಿ, ನಾಗಪಟ್ಟಣ ಹಾಗೂ ಕಲ್ಕತ್ತಾದ ಬಳಿ ಇರುವ ಚಿನ್‌ಸುರಾ ಎಂಬ ಸ್ಥಳಗಳನ್ನು ತಮ್ಮ ವಸಹಾತುಗಳನ್ನಾಗಿ ಮಾಡಿಕೊಂಡಿದ್ದರು."[೧೭]

ಡೇನರು ಭಾರತದಲ್ಲಿ ಸುವಾರ್ತಾಸೇವೆಗಾಗಿ ಬಂದು ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಬಹುದಾದ ಕಾರ್ಯಗಳನ್ನು ಮಾಡಿದರು. ಇವರು ಪಾಂಡಿಚೇರಿಯ ಹತ್ತಿರವಿದ್ದ ಟ್ರಾಂಕ್ ವೇ ಬಾರ್ ಎಂಬಲ್ಲಿ ಮೊತ್ತಮೊದಲು ಪ್ರೊಟೆಸ್ಟೆಂಟ್ ನಿಯೋಗವನ್ನು ಸ್ಥಾಪಿಸಿ ಸೇವಾ ನಿರತರಾದರು. ಅನಂತರ ಕಲ್ಕತ್ತಾದ ಹತ್ತಿರ ಇರುವ ಸೇರಾಂಪುರದಲ್ಲಿ ಅವರ ಎರಡನೇಯ ನಿಯೋಗ ಪ್ರಾರಂಭವಾಯಿತು. ಬಾರ್ತಲೋಮಿಯೋ ಝಿಗನ್ ಬಾಲ್ಗ್ (Barthalomio Zigembalg) ಮತ್ತು ಹೆನ್ರಿಕ್ ಪ್ಲೂಚೊ (Henrich

Plutschau) ಎಂಬುವರು ೧೭೦೬ರಲ್ಲಿ ಭಾರತದ ಟ್ರಾಂಕ್ವೇಬಾರ್‌ಗೆ ಬಂದು ಅಸಾಧಾರಣ ಸೇವೆ ಸಲ್ಲಿಸಿದರು. ಝಿಗನ್ ಬಾಲ್ಗನು ಪ್ರಪ್ರಥಮಬಾರಿಗೆ ಹೊಸಒಡಂಬಡಿಕೆಯನ್ನು ತಮಿಳು ಭಾಷೆಗೆ ಭಾಷಾಂತರಿಸಿದರು. ಅಂದಿನ ಜನ ಜೀವನಕ್ಕೆ ಸ್ಪಂದಿಸಿ ಜನರ ಆಧ್ಯಾತ್ಮಕಾರ್ಯದಲ್ಲಿ ನಿರತರಾಗಿದ್ದರು. ಹೀಗೆ ಆಗ್ಲಿಕನ್ ಸಭೆಯು ಸುವಾರ್ತೆಸಾರುವುದು ತನ್ನ ಮುಖ್ಯ ಧ್ಯೇಯ ಎಂದುಕೊಂಡು ಲೋಕದ ಎಲ್ಲೆಡೆ ಸುವಾರ್ತಿಕರನ್ನು ಕಳುಹಿಸಲು ಪ್ರಾರಂಭಿಸಿತು. ಇದರಿಂದ ಎಸ್.ಪಿ.ಸಿ.ಕೆ, ಎಸ್.ಪಿ.ಜಿ ಮತ್ತಿತರ ಅನೇಕ ಮಿಶನರಿ ಸಭೆಗಳು ಹುಟ್ಟಿಕೊಂಡವು. ಇವು ತಮ್ಮ ಶಾಖೆಗಳನ್ನು ಭಾರತದಲ್ಲಿ ಸ್ಥಾಪಿಸಿ ಅತ್ಯುತ್ತಮ ಸೇವಾ ಕಾರ್ಯವನ್ನು ನಿರ್ವಹಿಸಿದವು.

೩.೭ ಲಂಡನ್ ಮಿಶನರಿ ಸೊಸೈಟಿ

"ಹದಿನೆಂಟನೇ ಶತಮಾನದ ಅಂತ್ಯದಲ್ಲಿ ಇಂಗ್ಲೇಂಡಿನ ಕ್ರೈಸ್ತ ಧಾರ್ಮಿಕ ವ್ಯವಸ್ಥೆಯಲ್ಲಿ ಅಸ್ಥಿರತೆ ಕಾಣಿಸಿಕೊಂಡಿತು. ಆಂಗ್ಲ ಜನತೆಯ ಧಾರ್ಮಿಕ ಚರಿತ್ರೆಯಲ್ಲಿ ಇದು ಹದಗೆಟ್ಟ ಕಾಲವಾಗಿತ್ತು. ಇಂಗ್ಲೇಂಡಿನ ಚರ್ಚ್‌ನಲ್ಲಿ ಆಧ್ಯಾತ್ಮತೆ ಕುಂಟಿತವಾಗಿ ದೋಷಗಳು ಹೆಚ್ಚಾಗತೊಡಗಿದವು. ಇಂತಹ ಕ್ಲಿಷ್ಟ ಸಂದರ್ಭದಲ್ಲಿ ಲಂಡನ್ ಮಿಶನರಿ ಸೊಸೈಟಿಯು ೧೭೯೫ ಸೆಪ್ಟಂಬರ್ ೨೧ರಂದು ಸ್ಥಾಪಿತವಾಯಿತು."[೧೮] ಅನೇಕ ನಿಷ್ಟಾವಂತ ಮಿಶನರಿಗಳ ನೇತೃತ್ವದಲ್ಲಿ ಹುಟ್ಟಿ ಬೆಳೆಯತೊಡಗಿತು. ರೆ. ಜೋನ್ ಐರ್ (**Rev.John** Eyre), ಸಾಮ್ಯವೆಲ್ ಗ್ರಿತೀಡ್ (Samuel Greutheed), ಜಾನ್‌ಲವ್ (John Love), ವಿಲಿಯಂ ಎಫ್. ಫ್ಲಾಟ್ (William F. Plaft), ಜಾನ್ ರೈನೋಲ್ಡ್ (John Reynolds), ವಿಲಿಯಂ ಸ್ಮಿತ್ (William Smith), ಜೇಮ್ಸ್ ಸ್ಟೀವನ್ (James Steven), ಅಲೆಗ್ಸಾಂಡರ್ ವಾಯ್ಗ (Alexander Waugh), ಮಾಥ್ಯು ವಿಲ್ಕ್ಸ್(Mathewe Wilks) ಇವರ ಆಧ್ಯಾತ್ಮ ಐಕ್ಯತೆ ಲಂಡನ್ ಮಿಶನ್ ಸೊಸೈಟಿಗೆ ಒಂದು ರೂಪುರೇಷವನ್ನು ಕೊಟ್ಟಿತು. ರೆ. ಜಾನ್ ಲೆಯರ್ ಸೊಸೈಟಿಯ ಧ್ಯೇಯೋದ್ದೇಶಗಳನ್ನು ಕಮಿಟಿಯ ಮುಂದಿಟ್ಟಾಗ ಅದು ಅಂಗೀಕೃತವಾಯಿತು. ಈ ಸೊಸೈಟಿಯ ಗುರಿ ಇದಾಗಿತ್ತು "The sole object is to spread the knowledge of Christ among heathen and other unenlightened nations."[೧೯] ಈ ಸೊಸೈಟಿಯ ನಿರ್ಧಾರಗಳ ಕುರಿತು ಪ್ರಬೋಧನೆಯಲ್ಲಿ ಹೀಗೆ ಹೇಳಲಾಗಿದೆ "No schemes of worldly advantage – no projects of vain ambition-no selfish ends or aims – contaminate our views. Nor will the confused noise of the warrior or garments rolled in blood mark our progress."[೨೦] ಇಂತಹ ದೃಢ ನಿರ್ಧಾರದಿಂದ ಈ ಸೊಸೈಟಿ ಕಾರ್ಯ ನಿರತವಾಯಿತು.

೩.೮ ಕರ್ನಾಟಕದಲ್ಲಿ ಲಂಡನ್ ಮಿಶನರಿಗಳು

ವಿಶ್ವದಾದ್ಯಂತ ಹಬ್ಬುತ್ತಿದ್ದ ಪ್ರೊಟೆಸ್ಟೆಂಟ್ ಮಿಶನರಿಗಳು ಕರ್ನಾಟಕಕ್ಕೆ ಆಗಮಿಸಿ ಅಪೂರ್ವ ಕೊಡುಗೆಯನ್ನು ನೀಡಿದರು. ಮೊಟ್ಟಮೊದಲಿಗೆ ಬಂದ ಮಿಶನರಿಗಳೆಂದರೆ ಲಂಡನ್ ಮಿಶನರಿಗಳು. ೧೭೯೫ರಲ್ಲಿ ಸ್ಥಾಪಿತವಾದ ಈ ಸಂಸ್ಥೆ ವಿಶ್ವದ ಮೂಲೆಮೂಲೆಗಳಲ್ಲಿ ಸುವಾರ್ತೆ ಮುಟ್ಟಿಸುವ ಪೂಜ್ಯಕಾರ್ಯದಲ್ಲಿ ಇದು ತೊಡಗಿತು. ಈ ಸಂಸ್ಥೆಯ ನತಾನಿಯೇಲ್ ಪೋರ್ಸಿತ್ ಎಂಬ ಮಿಶನರಿಯು ೧೭೯೮ರಲ್ಲಿ ಪ್ರಥಮವಾಗಿ ಭಾರತದ ಕಲ್ಕತ್ತಾಕ್ಕೆ ಬಂದು ಸುಮಾರು ೧೪ ವರ್ಷಗಳ ಕಾಲ ಸೇವೆಮಾಡಿದರು. ರೆ. ಜಾನ್ ಹ್ಯಾಂಡ್ಸ್ ಎಂಬುವರು ಕರ್ನಾಟಕದ ಬಳ್ಳಾರಿಗೆ ೫ನೇ ಮೇ ೧೮೧೦ರಲ್ಲಿ ಬಂದು ನೆಲೆಸಿದರು. ಕರ್ನಾಟಕಕ್ಕೆ ಆಗಮಿಸಿದ ಪ್ರಪ್ರಥಮ ಮಿಶನರಿಯಾದ ಇವರು "ಸ್ಥಳೀಯ ಭಾಷೆಯಾದ ಕನ್ನಡವನ್ನು ಕಲಿತು ಒಂದು ವರ್ಷದೊಳಗೆ ಕನ್ನಡದ ಸಾವಿರಾರು ಪದಗಳ ಕುರಿತು ಇಂಗ್ಲೀಷ್-ಕನ್ನಡ ನಿಘಂಟೊಂದನ್ನು ಹಾಗೂ ಚಿಕ್ಕದಾದ ಒಂದು ವ್ಯಾಕರಣ ಪುಸ್ತಕವನ್ನು ಬೆಳಕಿಗೆ ತಂದರು."[೨೧] ಕನ್ನಡ ಭಾಷೆಗೆ ಇವರ ಕೊಡುಗೆ ಅಭಿನಂದನಾರ್ಹವಾಗಿದೆ. ಈ ಸಂಸ್ಥೆಯ ಮತ್ತೊಬ್ಬ ಮಿಶನರಿ ರೆ. ವಿಲಿಯಂ ರೀವ್ಸ್ ಎಂಬುವರು. ಇವರು ಇಂಗ್ಲೀಷ್-ಕನ್ನಡ (೧೮೨೪) ಹಾಗೂ ಕನ್ನಡ-ಇಂಗ್ಲೀಷ್ ನಿಘಂಟುಗಳನ್ನು (೧೮೩೨) ಬರೆದರು. ಈ ಗ್ರಂಥಗಳು ಮದ್ರಾಸಿನ ಸರಕಾರಿ ಮುದ್ರಣಾಲಯದಿಂದ ಪ್ರಕಾಶನಗೊಂಡವು. ಈ ಸಂಸ್ಥೆಯ ಇತರ ಮಿಶನರಿಗಳೆಂದರೆ ಎಡ್ವಿನ್ ಲೂಯಿಸ್, ಐ. ಹುಬರ್ಟ್, ಲೆವಿಸ್ ಬೆರ್ನಾರ್ಡ್ ಲೂಕಸ್ ಮತ್ತು ಹೆಚ್.ಎಫ್.ಎ ಲೆಸ್ಟರ್ ಇವರು ಜನರ ಆತ್ಮೀಕ ಪರಿಪಾಲನೆಯನ್ನು ನೋಡಿಕೊಳ್ಳುತ್ತಿದ್ದರು.

ವಿದ್ಯಾಭ್ಯಾಸಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟ ಈ ಸಂಸ್ಥೆ ಟಿ.ಇ. ಸ್ಲೇಟರ್‌ರವರ ನೇತೃತ್ವದಲ್ಲಿ ಈ ಕಾರ್ಯ ಮುಂದುವರೆಯಿತು. ಇವರ Higher Hinduism in Relation to Christianity ಎಂಬುದು ಪ್ರಸಿದ್ಧ ಗ್ರಂಥವಾಗಿದೆ. ಬೆಂಗಳೂರಿನ ಯುನೈಟೆಡ್ ಥಿಯೊಲೊಜಿಕಲ್ ಕಾಲೇಜು ಪ್ರಾರಂಭದ ವರ್ಷಗಳಲ್ಲಿ ೧೯೧೦ರಲ್ಲಿ ರೆ. ಹೋತಿ ಎಂಬುವರು ಬಹಳ ಕೆಲಸ ಮಾಡಿದ ವ್ಯಕ್ತಿ. ೧೮೯೧ರಲ್ಲಿ ಚಿಕ್ಕಬಳ್ಳಾಪುರದಲ್ಲಿ ಸೇವೆಸಲ್ಲಿಸಿದ ರೆ.ಆರ್.ಎ. ಹಿಕ್ಲಿಂಗ್ ಬಹುಭಾಷಾ ಪಂಡಿತರಾಗಿದ್ದು ನಿಷ್ಣಾತ ಸುವಾರ್ತಾ ಪ್ರಚಾರಕರಾಗಿದ್ದರು. ಇವರೊಂದಿಗೆ ಪ್ರವರ್ತಿಸಿದ ಈ.ಪಿ. ರೈಸ್ ಎಂಬುವರು 'ಕನ್ನಡ ಸಾಹಿತ್ಯ ಚರಿತೆ' ಎಂಬ ಪ್ರಸಿದ್ಧವಾದ ಪುಸ್ತಕವನ್ನು ಬರೆದರು. ಸಿ.ಬಿ. ಪುರ್ತ್ ಎಂಬುವರು ದೈವಜ್ಞಾನಿಗಳಾಗಿದ್ದು ಬಳ್ಳಾರಿಯಲ್ಲಿ ಕೆಲಸ ಮಾಡಿದ ಇವರು 'ಭಾರತೀಯ ಕ್ರೈಸ್ತ ಸಭಾ ಚರಿತ್ರೆ' ಎಂಬ ಪುಸ್ತಕವನ್ನು ಬರೆದರು. ಆಧುನಿಕ ಕನ್ನಡ ಸಾಹಿತ್ಯಕ್ಕೆ ಬುನಾದಿಯನ್ನು ಹಾಕಿದ ಈ ಸಂಸ್ಥೆ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಉತ್ತಮ ಕೊಡುಗೆಯನ್ನು ಕೊಡುವುದರ ಜೊತೆಗೆ ಗೀತಸಾಹಿತ್ಯಕ್ಕೆ ಅಪಾರವಾದ ಕೊಡುಗೆಯನ್ನು ನೀಡಿತು.

ಸುವಾರ್ತಾಸೇವೆಗಾಗಿ ಆಗಮಿಸಿದ ಲಂಡನ್ ಮಿಶನ್ ಸಂಸ್ಥೆ ಸಮಾಜದಲ್ಲಿ ವಿದ್ಯಾಕ್ಷೇತ್ರ, ವೈದ್ಯಕೀಯ ಕ್ಷೇತ್ರದಲ್ಲಿ ತನ್ನ ಸೇವಾಹಸ್ತವನ್ನು ಚಾಚಿತು. ಸಾಹಿತ್ಯಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿ ಆಧುನಿಕ ಕನ್ನಡ ಭಾಷೆಗೆ ಬುನಾದಿಯನ್ನು ಹಾಕಿದ ಕೀರ್ತಿ ಈ ಸಂಸ್ಥೆಗೆ ಸೇರಿದೆ. ಭಾಷಾಂತರ ಕೆಲಸದಲ್ಲಿ ತೊಡಗಿದ

ಈ ಸಂಸ್ಥೆ ಬೈಬಲ್ಲಿನ ಪಂಚಗ್ರಂಥಗಳನ್ನು ಭಾಷಾಂತರಿಸಿ ಮುದ್ರಿಸಿ, ಹೊಸಒಡಂಬಡಿಕೆಯ ಕೆಲವು ಭಾಗಗಳನ್ನು ಭಾಷಾಂತರಿಸಿತು. ಬೆಂಜಮಿನ್ ರೈಸ್ ರಚಿಸಿದ ಕನ್ನಡ ಸಂಗೀತ ಪುಸ್ತಕವು ಶಾಲೆ, ಅನಾಥಾಲಯ, ಹಾಗೂ ಸುವಾರ್ತಸೇವೆಯಲ್ಲಿ ಬಹಳ ಉಪಯುಕ್ತವಾದವು. ಒಟ್ಟಿನಲ್ಲಿ ಇವರ ಸೇವೆ ಅವಿಸ್ಮರಣೀಯವಾದುದು.

೩.೯ ವೆಸ್ಲಿಯನ್ ಮೆಥೊಡಿಸ್ಟ್ ಮಿಶನರಿ ಸೊಸೈಟಿ

ಸೌವಾರ್ತಿಕಸೇವೆ ಅತಿ ಪರಿಣಾಮಕಾರಿಯಾಗಿ ಇಂದೂ ಮುಂದುವರೆಯಲು ಕಾರಣ ಜರ್ಮನಿಯಲ್ಲಿ ಹುಟ್ಟಿಕೊಂಡ ಭಕ್ತಿಚಳುವಳಿಯಾಗಿದೆ. ಇದು ೧೮ ಮತ್ತು ೧೯ನೇ ಶತಮಾನದಲ್ಲಿ ಇಂಗ್ಲೇಂಡಿನಲ್ಲಿಯೂ ತನ್ನ ಪ್ರಭಾವವನ್ನು ಬೀರಿ ಆಧುನಿಕ ಮಿಶನರಿ ಚಳುವಳಿಗೆ ಸ್ಫೂರ್ತಿದಾಯಕವಾಯಿತು.

ದೈವಜ್ಞಾನ, ದೈವಭಕ್ತಿ ಮತ್ತು ದೈವಭಯದ ತಾಣವಾಗಿತ್ತು ಇಂಗ್ಲೆಂಡಿನ ರೆ. ಸಾಮುವೆಲ್ ವೆಸ್ಲಿ ಹಾಗೂ ಸುಸನ್ನ ವೆಸ್ಲಿಯವರ ಕುಟುಂಬ. ಸೌವಾರ್ತಿಕ ಮನೋಭಾವವುಳ್ಳವರಾದ ಇವರು ತಮ್ಮ ಮಗನೂ ಸುವಾರ್ತಾಸೇವೆಯನ್ನು ಮಾಡಬೇಕೆಂದು ಆಶಿಸಿದರು. ಇವರ ೧೫ನೇ ಪುತ್ರ ಜಾನ್ ವೆಸ್ಲಿ ತಂದೆತಾಯಿಗಳ ಆಶಯದಂತೆ ೧೭೩೬ರಲ್ಲಿ ಜಾರ್ಜಿಯಾ ಎಂಬಲ್ಲಿ ಬೋಧಕರಾಗಿದ್ದು ತಮ್ಮ ಹಿಂಬಾಲಕರ ಸಹಾಯದಿಂದ ೧೭೪೦ರಲ್ಲಿ ಒಂದು ಸೊಸೈಟಿಯನ್ನು ಸ್ಥಾಪಿಸಿದರು. ತಮ್ಮ ಸೇವೆಗೆ ಸೇರಿದವರು ಸುವಾರ್ತಸೇವೆಗೆ ಪ್ರತಿವಾರಕ್ಕೊಮ್ಮೆ ಪ್ರತಿಯೊಬ್ಬರು ಒಂದು ಪೆನ್ನಿಯನ್ನು ಕೊಡಬೇಕೆಂದು ಕೇಳಿಕೊಂಡರು. ತಮ್ಮ ಗುಂಪು ದೊಡ್ಡದಾಗುತ್ತಾ ಬಂದಹಾಗೆ ಸುಮಾರು ೧೦೦ ಜನರನ್ನು ಆರಿಸಿಕೊಂಡು ಬೋಧಕರನ್ನಾಗಿ ಮಾಡಿ ಅದು ನ್ಯಾಯಸಮ್ಮತ ವ್ಯವಸ್ಥಿತ ರೀತಿಯಲ್ಲಿ ಸುವಾರ್ತೆಸಾರಲು ಕಳಿಸಿದರು. ಈ ಸುವಾರ್ತಾ ಸೇವಕರನ್ನು 'ಮೆಥೊಡಿಸ್ಟರು' ಎಂದು ಕರೆಯಲಾಯಿತು. ಹೀಗೆ ೧೮೧೭ರಲ್ಲಿ 'ವೆಸ್ಲಿಯನ್ ಮೆಥೊಡಿಸ್ಟ್ ಸೊಸೈಟಿ' ಸ್ಥಾಪಿತವಾಯಿತು.

೩.೧೦ ಕರ್ನಾಟಕದಲ್ಲಿ ಮೆಥೊಡಿಸ್ಟರು

ಸುವಾರ್ತಾಸೇವೆಯನ್ನೇ ಗುರಿಯಾಗಿಟ್ಟುಕೊಂಡು ಭಾರತಕ್ಕೆ ಆಗಮಿಸಿದ ಮೆಥೊಡಿಸ್ಟರು ೧೮೧೪ರಲ್ಲಿ ಮದ್ರಾಸಿನಲ್ಲಿ ತಮ್ಮ ಸೇವಾಕಾರ್ಯ ಪ್ರಾರಂಭಿಸಿದರು. ಪ್ರಾರಂಭದಲ್ಲಿ ೧೮೧೪ರಲ್ಲಿ ಜೇಮ್ಸ್ ಲಿಂಚ್ ಎಂಬುವರು ಮದ್ರಾಸಿಗೆ ಆಗಮಿಸಿದರು. ತಮಿಳು ಜನರ ಆಧ್ಯಾತ್ಮಿಕ ಕಾರ್ಯವನ್ನು ಪೂರೈಸುವ ಉದ್ದೇಶದಿಂದ 'ಈಸ್ಟ್ ಪೆರೇಡ್ ಚರ್ಚ'ನ್ನು ಕಟ್ಟಲಾಯಿತು. ಕೆಲ ಕಾಲದ ನಂತರ ವೆಸ್ಲಿಯನ್ ಮೆಥಾಡಿಸ್ಟ್ ಸೊಸೈಟಿ ತನ್ನ ಸೇವೆಯನ್ನು ಕರ್ನಾಟಕಕ್ಕೆ ಸೀಮಿತಗೊಳಿಸಿಕೊಂಡಿತು. ೧೮೨೦ರ ವೆಸ್ಲಿಯನ್ ಮೆಥೊಡಿಸ್ಟ್ ವಾರ್ಷಿಕ ವರದಿಯಲ್ಲಿ, ಮೈಸೂರು ಪ್ರಾಂತ್ಯದಲ್ಲಿ ಪ್ರಥಮವಾಗಿ ಮೆಥಾಡಿಸ್ಟ್ ಮಿಶನರಿಗಳು ಮೇ ೧೮೨೧ರಲ್ಲಿ ಆಗಮಿಸಿದರು ಎಂದು ತಿಳಿಸುತ್ತದೆ."[೨೨] ಸಮಾಜದ ಕೀಳುವರ್ಗದ ಜನರ ನಡುವೆ ಕೆಲಸ ಮಾಡಲು ಆಶಿಸಿದ ಇವರು ತುಮಕೂರು, ಬೆಂಗಳೂರು, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು ಪ್ರದೇಶಗಳಲ್ಲಿ ಸಕ್ರೀಯವಾಗಿ ಕೆಲಸ ಮಾಡಿದರು. ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಸುವಾರ್ತೆ ಸಾರುವ ಅವಕಾಶವನ್ನು

ಗಮನಿಸಿದ ಜೇಮ್ಸ್ ಲಿಂಚ್ ೧೮೧೯ರಲ್ಲಿ ಇಂಗ್ಲೇಂಡಿನ ಮೆಥೊಡಿಸ್ಟ್ ಸೊಸೈಟಿಗೆ ತಿಳಿಸಿದರು. ಈ ಆಮಂತ್ರಣಕ್ಕೆ ಓಗೊಟ್ಟು ಹೂಲೆ ಮತ್ತು ಮೋವಾಟ ಎಂಬುವರು ಸುವಾರ್ತಾಸೇವೆಗೆ ಬೆಂಗಳೂರಿಗೆ ಆಗಮಿನಿಸಿದರು. ೧೮೨೧ರ ಏಪ್ರಿಲ್ ತಿಂಗಳಿನಲ್ಲಿ ಟೈಟಸ್ ಕ್ಲೋಸ್ ಎಂಬುವರು ಮದ್ರಾಸಿನಿಂದ ಬಂದು ಶ್ರೀರಂಗಪಟ್ಟಣದಲ್ಲಿ ನೆಲೆಸಿ ಅಲ್ಲಿ ಕ್ರೈಸ್ತರ ಆಧ್ಯಾತ್ಮ ಜೀವನದ ಜವಾಬ್ದಾರಿಯನ್ನು ವಹಿಸಿಕೊಂಡರು.

ನಿಷ್ಣಾತ ಮಿಶನರಿಯಾದ ಜೆ.ಎಫ್. ಇಂಗ್ಲಾಂಡ್ ಎಂಬುವರು ೧೮೨೬ರಲ್ಲಿ ಬೆಂಗಳೂರಿಗೆ ಆಗಮಿಸಿದರು. ಸೇವೆಯ ಪರಿಣಾಮವಾಗಿ ಐದು ಮಂದಿಯನ್ನೊಳಗೊಂಡ ಒಂದು ಕುಟುಂಬದ ವ್ಯಕ್ತಿಗಳು ಕ್ರೈಸ್ತತ್ವವನ್ನು ಸ್ವೀಕರಿಸಿದರು. ಇವರ ಸೇವೆ ಶ್ರೀರಂಗಪಟ್ಟಣಕ್ಕೂ ವ್ಯಾಪಿಸಿತು. ಕನ್ನಡ ಕಲಿಯಲು ಬಹು ಆಸಕ್ತಿಯನ್ನು ವಹಿಸಿದ ಮಿಶನರಿಯೇ ಥಾಮಸ್ ಹಡ್ಸನ್‌ರವರು. ಇವರ ಮಹಾನ್‌ಕಾರ್ಯ ಸಾಧನೆಯಿಂದ ೧೮೩೦ರಲ್ಲಿ ಗುಬ್ಬಿ ಸುವಾರ್ತಾ ಕೇಂದ್ರವಾಗಿ ಪರಿಣಮಿಸಿತು. ಈ ಸಂಸ್ಥೆಯ ಮತ್ತೊಂದು ಮಹತ್ತರ ಸಾಧನೆಯೆಂದರೆ ಮೊಟ್ಟಮೊದಲನೆಯದಾಗಿ ಮೈಸೂರಿನಲ್ಲಿ ಮುದ್ರಣಾಲಯವನ್ನು ಸ್ಥಾಪಿಸಿದ್ದು. ಇದರಲ್ಲಿ ಸುವಾರ್ತೆಗೆ ಅಗತ್ಯವಾದ ಬೈಬಲ್ ಹಾಗೂ ಸಂಗೀತ ಪುಸ್ತಕಗಳನ್ನು ಮುದ್ರಿಸಲಾಗುತ್ತಿತ್ತು. ದೇವಾಲಯದಲ್ಲಿ ಸಂಗೀತವು ನಿನದಿಸುತ್ತಿದ್ದು ಅದು ಎಲ್ಲರನ್ನು ಆಕರ್ಷಿಸುತ್ತಿತ್ತು. ಒಮ್ಮೆ ಅವಿಶ್ವಾಸಿಯೊಬ್ಬ (ಗಿರಿಯಪ್ಪಗೌಡ)ಶಿವಮೊಗ್ಗ ಜಿಲ್ಲೆಯ ಸೆಂಟ್ ಥಾಮಸ್ ಚರ್ಚ್‌ನಲ್ಲಿ ಭೇಟಿ ನೀಡಿದಾಗ ಅಲ್ಲಿ ಮೊಳಗುತ್ತಿದ್ದ 'ಬಾ ನಮ್ಮಲ್ಲಿ ದೇವರ ಆತ್ಮ......' ಎಂಬ ಗೀತೆ ಅವರ ಹೃದಯವನ್ನು ಸೆರೆಹಿಡಿಯಿತು. ಅಂದಿನಿಂದ ಕ್ರೈಸ್ತರೊಡನೆ ಸಹಬಾಳ್ವೆ ನಡೆಸತೊಡಗಿದರು. ಇವರೇ ರಚಿಸಿದ ಹಾಡು ಹೀಗಿದೆ. Let us sing to the ಈ ಗೀತೆ ಅವರು ಕ್ರೈಸ್ತ ಮತದ ಕುರಿತು ಎಷ್ಟು ಜ್ಞಾನವನ್ನು ಹೊಂದಿದ್ದರು ಎಂಬುದನ್ನು ತಿಳಿಸುತ್ತದೆ.

೩.೧೧ ಬಾಸೆಲ್ ಇವಾಂಜಲಿಕಲ್ ಮಿಶನ್

ನೀತಿವಂತರ ಪ್ರಾರ್ಥನೆ ಸಮಾಜದಲ್ಲಿ ಶಾಂತಿಸಮಾಧಾನ ಐಕ್ಯತೆಯನ್ನು ತರುತ್ತದೆ, ಎಂಬುದಕ್ಕೆ ಸಾಕ್ಷಿಯಂತೆ "೧೮೧೬ ಆಗಸ್ಟ್ ೨೬ರಂದು ಬಾಸೆಲ್ ಮಿಶನ್ ಸ್ಥಾಪಿತವಾಯಿತು."[೨೩] ಯುರೋಪಿನಲ್ಲಿ ಕಂಡು ಬಂದ ಅಶಾಂತಿಯ ವಾತಾವರಣ ತತ್ವಜ್ಞಾನಿಯಾದ ಒಬ್ಬ ಪ್ರೊಫೆಸರ್ ಮೂರು ಜನ ಅಭಿಷಕ್ತರು, ಒಬ್ಬ ವ್ಯಾಪಾರಿ ಹಾಗೂ ಒಬ್ಬ ನೋಟರಿ ಹೀಗೆ ಆರು ಜನರನ್ನು ಸುವಾರ್ತೆಯ ಶಾಂತಿದೂತರಾಗಲು ಪ್ರೇರೇಪಿಸಿತು. ಈ ಭಕ್ತ ವೃಂದವು ೧೮೧೫ರಲ್ಲಿ ಬಾಸೆಲ್ ನಗರದ ಸೆಂಟ್ ಮಾರ್ಟಿನ್ ದೇವಾಲಯದಲ್ಲಿ ಕೂಡಿಬಂದು ಪ್ರಾರ್ಥನಾ ಪೂರ್ವಕವಾಗಿ ಬಾಸೆಲ್ ಇವಾಂಜಲಿಕಲ್ ಮಿಶನರಿ ಸೊಸೈಟಿಗೆ ಬುನಾದಿಹಾಕಿದರು. ೨ನೇ ಆಗಸ್ಟ್ ೧೮೧೬ರಲ್ಲಿ ೦ಜನ ವಿದ್ಯಾರ್ಥಿಗಳೊಂದಿಗೆ ಸಿ.ಸಿ. ಬ್ಲೂಮ್ ಹಾರ್ಟ್ ಎಂಬುವರ ನಾಯಕತ್ವದಲ್ಲಿ ಈ ಸಂಸ್ಥೆ ಸ್ಥಾಪಿತವಾಯಿತು. ಅನೇಕ ಮಿಶನರಿಗಳಿಗೆ ತರಬೇತಿ ನೀಡಿ ಈ ಸಂಸ್ಥೆ ಯೂರೋಪಿನ ಅನೇಕ ಸ್ಥಳಗಳಿಗೆ ಸುವಾರ್ತಾ ಸೇವೆಗೆ ಇವರನ್ನು ಕಳುಹಿಸ ತೊಡಗಿತು. ಅಂತೆಯೇ ಕರ್ನಾಟಕದಲ್ಲೂ ತನ್ನ ಸೇವಾ ಹಸ್ತವನ್ನು ಚಾಚಿತು.

೩.೧೨ ಕರ್ನಾಟಕಕ್ಕೆ ಬಾಸೆಲ್ ಮಿಶನ್ನಿನ ಆಗಮನ

ಕರ್ನಾಟಕಕ್ಕೆ ಬಾಸೆಲ್ ಮಿಶನ್ ಒಂದು ಶ್ರೇಷ್ಠ ಕೊಡುಗೆ. "೧೨ನೇ ಫೆಬ್ರವರಿ ೧೮೩೪ರಲ್ಲಿ ಬಾಸೆಲ್ ಇವಾಂಜಲಿಕಲ್ ಸೊಸೈಟಿಯ ಮೂರು ಮಿಶನರಿಗಳು ಭಾರತಕ್ಕೆ ಆಗಮಿಸಿದರು. ಈ ಮೂವರು ಮಿಶನರಿಗಳಾದ ಸಾಮ್ವೆಲ್ ಹೆಬಿಕ್, ಯೋಹಾನ್ ಸಿ. ಲೇನ್ಹರ್, ಕ್ರಿಸ್ಟಿಯಾನ್ ಎಲ್.ಗ್ರೇನರ್ ಇವರು ಕೇರಳದ ಕಲ್ಲಿಕೋಟೆಯ ರೇವಿಗೆ ಬಂದಿಳಿದು ಮತ್ತೆ ಅಲ್ಲಿಂದಲೇ ಕರ್ನಾಟಕದ ಮಂಗಳೂರಿಗೆ ಸಮುದ್ರಯಾನದ ಮೂಲಕ ಬಂದರು."[೨೪] ಪ್ರತಿಭಾವಂತರಾದ ಇವರು ಸ್ಥಳೀಯ ಭಾಷೆಗಳ ಕಲಿಕೆಯಲ್ಲಿ ತಮ್ಮನ್ನೇ ತೊಡಗಿಸಿಕೊಂಡರು. ಹೆಬಿಕ್ ಕನ್ನಡ ಸೇವೆಯನ್ನು, ಲೇನರು ಕೊಂಕಣಿಯನ್ನು ಹಾಗೂ ತುಳುವನ್ನು ಕಲಿತು ಈ ಭಾಷೆಗಳಲ್ಲಿ ಪಾಂಡಿತ್ಯವನ್ನು ಗಳಿಸಿದರು. "ಹೆಬಿಕರು ಸುಮಾರು ೨೫ವರ್ಷಗಳ ಕಾಲ ಸಮರ್ಥ ಸುವಾರ್ತಾಸೇವೆ ಸಲ್ಲಿಸಿ ಉತ್ತಮ ಹೆಸರು ಗಳಿಸಿದರು."[೨೫] ಶ್ರೇಷ್ಠ ಸುವಾರ್ತಾಸೇವಕರಾಗಿದ್ದು ರೆ.ಸಾಮುವೆಲ್ ಹೆಬಿಕ್‌ರವರು ೧೮೩೫–೩೬ರಲ್ಲಿ ಧಾರವಾಡಕ್ಕೆ ಭೇಟಿ ನೀಡಿದಾಗ ಅಲ್ಲಿ ಉತ್ತಮ ಸೇವೆ ಗೈಯಬಹುದೆಂದು ಭಾವಿಸಿ ಧಾರವಾಡವನ್ನು ಮುಖ್ಯ ಕೇಂದ್ರವನ್ನಾಗಿ ಮಾಡಿದರು. ೧೮೩೭ರಲ್ಲಿ ಧಾರವಾಡ ಬಾಸೆಲ್ ಮಿಶನ್‌ನ ಅಧಿಕೃತ ಮಿಶನ್ ಠಾಣ್ಯವೆಂದು ನೇಮಕವಾಯಿತು. "ಕರ್ನಾಟಕದ ವಿವಿಧ ಪ್ರಾಂತ್ಯಗಳು ಸುವಾರ್ತೆಗೆ ಬಾಗಿಲು ತೆರೆದಿದೆ ಎಂಬುದನ್ನು ಗಮನಿಸಿದ ಹೆಬಿಕರು ಹುಬ್ಬಳಿಗೆ ಭೇಟಿನೀಡಿ ಅಲ್ಲಿಯೂ ೧೮೪೯ರಲ್ಲಿ ಬಾಸೆಲ್ ಮಿಶನ್‌ನ ೨ನೇ ಠಾಣ್ಯವನ್ನು ತೆರೆದರು."[೨೬] ಈ ಮಿಶನ್‌ಗೆ ಸೇರಿದ ಇತರ ಮಿಶನರಿಗಳೆಂದರೆ ಡಾ. ಮೊಗ್ಲಿಂಗ್. ರೆ. ಜಾನ್ ಲೇಯರ್, ರೆ. ಎಚ್.ಪ್ರೇ.ಲೆಹ್ನೆರ್ ರೆ. ಹಿಲ್ಲರ್ ಮತ್ತಿತರರು. ಡಾ.ಮೋಗ್ಲಿಂಗ್ ಮತ್ತು ಡಾ. ಗುಂಡರ್ಟ್ ಮಂಗಳೂರಿನ ಜನತೆಯೊಂದಿಗೆ ಸಂಪರ್ಕ ಬೆಳೆಸಿ ತಮ್ಮ ಸುವಾರ್ತಾಸೇವೆಗೆ ತಮ್ಮನ್ನೇ ಅರ್ಪಿಸಿಕೊಂಡು ದೇವಭಕ್ತರು ದೇವಜ್ಞಾನದಲ್ಲಿ ಪರಿಣಿತರು ದೇವರಾತ್ಮದಿಂದ ನಡೆಸಲ್ಪಟ್ಟವರು ಆಗಿದ್ದುದ್ದರಿಂದ ಅಮೋಘವಾದ ಸೇವೆ ಮಾಡಲು ಸಾಧ್ಯವಾಯಿತೆಂದು ಇಮ್ಮಾನುವೆಲ್ ಸೋನ್ಸ್‌ರವರು ಅಭಿಪ್ರಾಯಪಡುತ್ತಾರೆ."[೨೭]

"ಪರಲೋಕಲದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಟ್ಟಿದ್ದಾರೆ, ಆದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ, ಅವರಿಗೆ ತಂದೆಯ ಮಗನ ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ ನಾನು ನಿಮಗೆ ಅಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ."[೨೮] ಎಂಬ ಯೇಸುವಿನ ಸಂದೇಶವನ್ನು ಕೈಗೊಂಡು ಶುಭವರ್ತಮಾನದ ಪ್ರಸಾರದ ಕಾರ್ಯದಲ್ಲಿ ತಮ್ಮನ್ನು ಪೂರ್ಣವಾಗಿ ಅರ್ಪಿಸಿಕೊಂಡವರೇ ಮಿಶನರಿಗಳು. ಕ್ರಿಶ ೧ನೇ ಶತಮಾನದಲ್ಲಿಯೇ ಕ್ರೈಸ್ತ ತತ್ವಗಳ ಪ್ರಚಾರ ಕಾರ್ಯ ವಿಶ್ವದ ವಿವಿದೆಡೆಗಳಲ್ಲಿ ನಡೆಯಿತು. ಈ ಕಾಲ ಘಟ್ಟದಲ್ಲಿಯೇ ಈ ಮತ ಪ್ರಚಾರಕ್ಕೆ ಪಾದಾರ್ಪಣೆ ಮಾಡಿತು. ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ಅಡೆತಡೆಗಳು ಇವರ ಮಹತ್‌ಕಾರ್ಯದ ಸಾಧನೆಗೆ ಅಡ್ಡಿಯಾಗಿ ಬಂದರೂ ಅವೆಲ್ಲವುಗಳನ್ನು ಸಾಧನೆಯ ಮೆಟ್ಟಿಲುಗಳನ್ನಾಗಿ

ಮಾರ್ಪಡಿಸಿಕೊಂಡರು. ಕ್ರೈಸ್ತ ಮಿಶನರಿಗಳು ಅವರ ಸಂಸ್ಥೆಗಳು ಭಾರತಕ್ಕೆ ಧರ್ಮ ಪ್ರಚಾರಕ್ಕೆ ಬಂದರೂ ಅವರು ಬರೇ ತಮ್ಮ ಧರ್ಮದ ಪ್ರಚಾರದಲ್ಲಿ ತೊಡಗಿರಲಿಲ್ಲವೆಂಬುದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕಾದ ವಿಚಾರ. ಸುವಾರ್ತಾ ಸೇವೆ ಎಂಬುದನ್ನು ಬಹಳ ವಿಶಾಲಾರ್ಥದಲ್ಲಿ ತಿಳಿದುಕೊಂಡವರಾಗಿದ್ದು, ಸಾಮಾಜಿಕ ಸಮಸ್ಯೆಗಳಾದ ಬಡತನ, ಅನಕ್ಷರತೆ ಹಾಗೂ ಜಾತಿಭೇದ ಮುಂತಾದ ವಿಷಯಗಳ ಕುರಿತು ಅವರ ಕೊಡುಗೆ ಅಪಾರ ಎಂಬುವುದು ಅಧ್ಯಯನದಿಂದ ವಿಧಿತವಾಗುತ್ತದೆ.

ಅಕ್ಷರಜ್ಞಾನ ಜನರನ್ನು ಅವರ ಮೂಢನಂಬಿಕೆಗಳಿಂದಲೂ, ಅಜ್ಞಾನದಿಂದಲೂ ಬಿಡಿಸಿ ಮಾನವೀಯ ಮೌಲ್ಯಗಳನ್ನೊಳಗೊಂಡ ವಿಮೋಚನಾಯುಕ್ತ ಜನರನ್ನಾಗಿಸಬಲ್ಲದು ಎಂಬುದನ್ನರಿತ ಅವರು ಪ್ರಾರಂಭದಲ್ಲಿಯೇ ಶಾಲೆಗಳನ್ನು ತೆರೆದರು. ಇದು ಅಕ್ಷರಜ್ಞಾನ ಪಡೆಯಲು, ಮತ್ತು ಧರ್ಮಗ್ರಂಥವಾದ ಬೈಬಲನ್ನು ಓದಲು ಅವಕಾಶ ಮಾಡಿಕೊಟ್ಟಿತು. ದೈವಶಾಸ್ತ್ರದ ಪ್ರಚಾರಕ್ಕಾಗಿ ಸ್ಥಳೀಯ ಭಾಷೆಗಳಲ್ಲಿ ಇವರು ಬೈಬಲ್‌ನ ಭಾಷಾಂತರ ಹಾಗೂ ಗೀತೆಗಳ ರಚನೆಯಲ್ಲಿ ತೊಡಗಿದರು. ಈ ಮಿಶನರಿಗಳ ಜೀವನ ರೀತಿ ಅವರ ಸಾಧನೆಯ ಕುರಿತು ಮುಂದಿನ ಅಧ್ಯಾಯದಲ್ಲಿ ಅಭ್ಯಸಿಸಲಾಗುವುದು.

ಅಡಿಟಿಪ್ಪಣಿ

೧. ವೇದಕೋಶ: ವ॥ರಾ॥ಚಿಂತಾಮಣಿ ಕೇಬೆಲ್‌ರವರು, ಘನ. ಇ.ಸ್ಟಾಂಲೆ ಎಡ್ವರ್ಡ್ಸ್ ಬೋಧಕರು, ೧೯೨೬, ಪುಟ.೯೮

೨. Lumen Gentium 9-17

೩. ಪೇತ್ರ, ಇವರನ್ನು ಪೀಠರ್ ಹಾಗೂ ಸೀಮೋನ್ ರಾಯಪ್ಪ ಎಂದೂ ಕರೆಯುತ್ತಾರೆ.

೪. ಮತ್ತಾಯ. ೧೬:೧೩–೨೦

೫. ರಕ್ತಸಾಕ್ಷಿ ಎಂದರೆ ಹುತಾತ್ಮ

೬. ಮತ್ತಾಯ, ೨೨:೩೫–೪೦

೭. ಮಿಶನರಿ ಎಂದರೆ ಯೇಸು ಕ್ರಿಸ್ತನ ಮತ್ತು ಆತನ ಉತ್ತಾರಾಧಿಕಾರಿಯಾದ ಧರ್ಮ ಸಭೆಯ ನಿರ್ದೇಶನಕ್ಕೆ ಒಳಪಟ್ಟು ಕ್ರೈಸ್ತಧರ್ಮವನ್ನು ಪ್ರಚಾರ ಮಾಡುವವನು ಎಂದರ್ಥ.

೮. ರೆವೆ. ಡಾ.ವಿಜಯ್‌ಕುಮಾರ್, ಕರ್ನಾಟಕದಲ್ಲಿ ಪ್ರೊತೆಸ್ತಾಂತ ಮಿಶನ್ನುಗಳ ಚರಿತ್ರೆ, ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ, ಮಂಗಳೂರು, ೨೦೦೪, ಪುಟ.೭

೯. Firth.C.B. An Introduction to Indian Church History, Madras, Christian Literature Society, 1961 P. 38-41

೧೦. Abid , p.51

೧೧. Abid , p. 51-53

೧೨. D. Ferroli, Jesuits in Mysore, p.180

೧೩. ಎಡ್ವರ್ಡ್ ನರೋನ, ಕ್ರೈಸ್ತ ಧರ್ಮ ಕರ್ನಾಟಕ ಮಿಶನರಿ ವಿಶ್ವಕೋಶ

೧೪. Severine Silva, History of Christianity in Canara Vol. I (Kumta : Author. 1975), P.38

೧೫. Hand Book

೧೬. Survey p. 58, Handbook the Archives the Catholic mission press News and Notes VI. II(Feb 1941) .1

೧೭. Stephen Weil, the story of Church in India and Pakistan, p. 58

೧೮. Richard Lovett , History of London Missionary Society, 1795-1895 Vol, I p.24

೧೯. Abid, P.30

೨೦. Abid, P.26

೨೧. ಜೇಮ್ಸ್ ಹಾಗ್, ಹಿಸ್ಟರಿ ಆಫ್ ಕ್ರಿಶ್ಚಿಯನ್ ಇನ್ ಇಂಡಿಯಾ ಭಾಗ–೪, ಪುಟ.೨೮೭

೨೨. The Eightieth Annual Report of the Wesleyan Mission in the Mysore Province, 1920

೨೩. Twenty Sixth Annual Report of Basel Mission for the year 1858, P.6

೨೪. ಎಂ. ಗಣಪತಿರಾವ್ ಐಗಳ, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ಮಂಗಳೂರು, ಬಂಟ್ವಾಳ, ೧೯೨೨, ಪುಟ-೨೧೭.

೨೫. A Schosser, A Hundred years of Basel Mission 1834-1934, Basel Mission Report 1934.

೨೬. G.N. Thomssen Samuel, Hebich of India, P.88

೨೭. ರೆವೆ. ಐ.ಎ.ಸೋನ್ಸ್, ಧರ್ಮ ಸಂಸ್ಥಾಪನೆಗಾಗಿ ಗೈದ ಜೀವನ್ಮರಣದ ಹೋರಾಟವೂ ಸುವಾರ್ತಾ ಪ್ರಸರಣೆಯ ದಿಗ್ವಿಜಯವೂ, ಮರ್ಕರಾಹಿಲ್, ೧೯೮೯, ಪುಟ-೧೧

೨೮. ಮತ್ತಾಯ, ೨೮:೧೮-೨೦

ಅಧ್ಯಾಯ – ನಾಲ್ಕು

ಮಿಶನರಿಗಳು ಮತ್ತು ಗೀತ ಸಾಹಿತ್ಯ

ಅಧ್ಯಾಯ – ನಾಲ್ಕು

ಮಿಶನರಿಗಳು ಮತ್ತು ಗೀತ ಸಾಹಿತ್ಯ

ಧಾರ್ಮಿಕ ತತ್ವಗಳು ಮನುಷ್ಯರ ಆಂತರಿಕ ಮತ್ತು ಬಾಹ್ಯ ಜೀವನವನ್ನು ಶುದ್ಧೀಕರಿಸಿ ಅವರ ಜೀವನದ ಅಂತಿಮ ಗುರಿಯಾದ ಮೋಕ್ಷಪ್ರಾಪ್ತಿಗೆ ಅರ್ಹರನ್ನಾಗಿ ಮಾಡುತ್ತದೆ. ಇಂತಹ ಧಾರ್ಮಿಕ ತತ್ವಗಳನ್ನು ಹೊತ್ತು ಜಗತ್ತಿನೆಲ್ಲೆಡೆ ಬಿತ್ತರಿಸಿ ಮಾನವಕೋಟಿಯನ್ನು ಸನ್ಮಾರ್ಗದಲ್ಲಿ ನಡೆಸಲು ಪ್ರಯತ್ನಿಸಿದವರೇ ಮಿಶನರಿಗಳು. 'ಹೋಗಿರಿ ಲೋಕದ ಎಲ್ಲೆಡೆ ಶುಭಸಂದೇಶ ಸಾರಿರಿ' ಎಂಬ ಯೇಸುವಿನ ಕರೆಗೆ ಓಗೊಟ್ಟು ಶುಭಸಂದೇಶ ಕಾರ್ಯವನ್ನೇ ಪ್ರಮುಖ ಧ್ಯೇಯವನ್ನಾಗಿ ಮಾಡಿಕೊಂಡು ಅದರ ಸಫಲತೆಗೆ ತಮ್ಮ ಜೀವವನ್ನೇ ಅರ್ಪಿಸಿಕೊಂಡ ಮಹಾನ್ ಚೇತನಗಳ ಜೀವನ ಶೈಲಿ, ಸಾಧನೆ ರೋಮಾಂಚನಕಾರಿಯಾಗಿದೆ. ಪರನಾಡಿನಿಂದ ಆಗಮಿಸಿ ಕನ್ನಡನಾಡಿನೊಡನೆ ಒಡನಾಟ ಬೆಳೆಸಿ, ಕನ್ನಡ ಭಾಷೆಯ ಸವಿಯನ್ನುಂಡು ಸಾಹಿತ್ಯ ರಚನೆಗೆ ತಮ್ಮನ್ನೇ ತೊಡಗಿಸಿಕೊಂಡ ಅವರ ಪ್ರತಿಭೆ ಅಪೂರ್ವವಾದುದು. ರೋಗ–ರುಜಿನ, ಕಷ್ಟ–ಸಂಕಟ, ಹಿಂಸೆ, ತಿರಸ್ಕಾರಗಳಿಗೆ ಬಗ್ಗದೆ ಪರಮಾತ್ಮನ ರಕ್ಷಣೆಯಲ್ಲಿ ಆಳವಾದ ವಿಶ್ವಾಸವಿಟ್ಟು ಶುಭಸಂದೇಶದ ಪ್ರಚಾರಕ್ಕಾಗಿ ಇವರು ನಡೆಸಿದ ಪ್ರಯತ್ನ ಅಸಾಧಾರಣವಾದುದು. ಸ್ವನಾಡಿನ ಸುಖ ಸಂತೋಷಗಳಿಗೆ ಮಣಿಯದೆ 'ತಾನೊಂದು ಬಗೆದರೆ ದೈವವೊಂದು ಬಗೆದ' ಎಂಬಂತೆ ದೈವವಾಣಿಗೆ ಶಿರಬಾಗಿ ನಡೆಸಿದ ಇವರ ತ್ಯಾಗಮಯ ಜೀವನವು ಒಂದು ರೀತಿಯಲ್ಲಿ ದಿವ್ಯವಾದ ಜೀವನವೇ ಆಗಿತ್ತು. ಆತ್ಮಪ್ರಶಂಸೆಯನ್ನು ಮಾಡಿಕೊಳ್ಳದ ಮಿಶನರಿಗಳು ಸೇವಾ ಮನೋಭಾವನೆಯನ್ನು ಹೊಂದಿ ತಮ್ಮ ಕಾರ್ಯಗಳಿಂದ ದೇವರಿಗೆ

[illegible]

[illegible]

[illegible]

[illegible]

ಮಹಿಮೆ ಉಂಟಾಗಬೇಕೆಂದು ಬಯಸಿದರು. ಇಂತಹ ಮಹನೀಯ ವ್ಯಕ್ತಿಗಳ ರೋಮಾಂಚನಕಾರಿ ಬದುಕಿನತ್ತ ಬೆಳಕು ಚೆಲ್ಲಿವೆ ಪ್ರಸ್ತುತ ಅಧ್ಯಾಯ ಮತ್ತು ಐದನೇ ಅಧ್ಯಾಯ.

"ಪ್ರಭು ಕೀರ್ತಿಸುವೆನು ನಿನ್ನಚಲ ಪ್ರೀತಿಯನು, ಸಾರುವೆನು ತಲತಲಾಂತರಕ್ಕೂ ನಿನ್ನ ಸತ್ಯತೆಯನು."[೧] ಎಂಬ ಕೀರ್ತನೆಯನ್ನು ಸಾಕ್ಷಾತ್ಕರಿಸಿದ ಮಿಶನರಿಗಳ ಧೈರ್ಯ, ಸ್ಥೈರ್ಯ, ಸಾಹಸ ಪ್ರವೃತ್ತಿ ನಿಜಕ್ಕೂ ಮೆಚ್ಚುವಂತಹದ್ದು. ಅಂತರಾಳದಲ್ಲಿ ಈ ಕೀರ್ತನೆ ಬೇರೂರಿದಾಗ ತಮ್ಮನ್ನೇ ಶ್ರೇಷ್ಠಸೇವೆಗೆ ಅರ್ಪಿಸಿಕೊಂಡರು. ಸುವಾರ್ತಾಜೀವನದ ಗುರಿಯನ್ನು ಈಡೇರಿಸಲು ಅಂಜದೆ ಮುನ್ನಡೆದರು. ಸುವಾರ್ತಾಸೇವೆಯಲ್ಲಿ ಗೀತೆಯ ಪ್ರಾಮುಖ್ಯತೆಯನ್ನು ಮನಗಂಡ ಇವರು ಗೀತೆಗಳ ರಚನೆಯಲ್ಲಿ ತೊಡಗಿದರು. ಭಾಷಾಂತರಕಲೆಯಲ್ಲಿ ನಿಪುಣತೆಯನ್ನು ಪಡೆದ ಇವರು ಇಂಗ್ಲೀಷ್, ಗ್ರೀಕ್, ಲ್ಯಾಟಿನ್, ಫ್ರೆಂಚ್ ಗೀತೆಗಳನ್ನು ಕನ್ನಡಕ್ಕೆ ಭಾಷಾಂತರಿಸಿದರು. ಪ್ರಾರಂಭದಲ್ಲಿ ಅನ್ಯ ಧರ್ಮಗಳ, ಕನ್ನಡ ಪಂಡಿತರುಗಳ ನೆರವನ್ನು ಪಡೆದು ಹಾಗೂ ಸ್ಥಳೀಯ ಕವಿಗಳ ಕವಿತೆಗಳಿಂದ, ಕೀರ್ತನೆಗಳಿಂದ ಪ್ರೇರಿತರಾಗಿ ಹಾಡುಗಳ ರಚನೆ ಮಾಡಿದರು. ತಮ್ಮ ದೈವಜ್ಞಾನದ ಅಧ್ಯಯನದ ಕೇಂದ್ರಗಳಲ್ಲಿ ಕನ್ನಡ ಕಾವ್ಯಗಳನ್ನು ಕಲಿಸುವ ವ್ಯವಸ್ಥೆ ಮಾಡಿದರು. ದೇಶೀಯ ಮಟ್ಟುಗಳಲ್ಲಿ ಹಾಡುಗಳನ್ನು ರಚಿಸುವ ಕಾರ್ಯದಲ್ಲಿ ತೊಡಗಿದರು. ಪ್ರಸ್ತುತ ಅಧ್ಯಾಯದಲ್ಲಿ ಕಥೋಲಿಕಾ ಮಿಶನರಿಗಳ ಜೀವನ ಮತ್ತು ಕೊಡುಗೆಯನ್ನು ಅಭ್ಯಸಿಸಲಾಗಿದೆ.

ಕಥೋಲಿಕಾ ಮಿಶನರಿಗಳು ಗೀತಪುಸ್ತಕಗಳನ್ನು ಬರೆದಿರಬಹುದಾದರೂ ಅವು ಇಂದು ಲಭ್ಯವಿಲ್ಲ. ಮತ್ತು ದೊರೆತ ಗೀತಪುಸ್ತಕಗಳಲ್ಲಿ ಕರ್ತೃವಿನ ವಿವರವಿಲ್ಲ. ಈ ಮಾತ್ರಕ್ಕೆ ಅವರು ಗೀತೆಗಳನ್ನು ಬರೆದಿಲ್ಲ ಎಂದು ಹೇಳಲಾಗುವುದಿಲ್ಲ. ಡಾ. ಶ್ರೀನಿವಾಸಹಾವನೂರವರ 'ಡಾ. ಫರ್ಡಿನಾಂಡ್ ಕಿಟಲ್' ಎಂಬ ಕೃತಿಯಲ್ಲಿ ಹೀಗೆ ಉಲ್ಲೇಖಿಸಿದ್ದಾರೆ. "ಆದರೆ ಬಾಸೆಲಿನ ಕೇಂದ್ರ ಕಮಿಟಿಯು ಹಿಂದೂ ರಾಗಗಳು, ಪಕ್ಕ ವಾದ್ಯಗಳು ಮುಂತಾದಕ್ಕೆ ಪ್ರಾಶಸ್ತ್ಯವನ್ನು ಕೊಡಬಾರದು. ಕಥೋಲಿಕರು ಹಾಗೆ ಮಾಡುತ್ತಾರಾದ್ದರಿಂದ ಪ್ರೊಟೆಸ್ಟೆಂಟರಾದ ತಾವು ಬೇರೆ ಎಂಬುದನ್ನು ಜನ ತಿಳಿಯದೇ ಹೋಗಬಹುದು. ಆದ್ದರಿಂದ "Kittle should be warned not to go further"[೨] ಎಂದು ವಿಧಿಸಿದರು. ಈ ಹೇಳಿಕೆಯು ಕಥೋಲಿಕರೇ ಪ್ರಾರಂಭದಲ್ಲಿ ಗೀತ ರಚನೆಯಲ್ಲಿ ತೊಡಗಿದ್ದರೆಂಬುದರ ಬಗ್ಗೆ ಬೆಳಕು ಚೆಲ್ಲುತ್ತದೆ. ಆದ್ದರಿಂದ ದೊರೆತ ಗೀತಪುಸ್ತಕಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

೪.೧ ಕಥೋಲಿಕ ಮಿಶನರಿಗಳ ಕೊಡುಗೆ

ವಿಶ್ವದ ಎಲ್ಲೆಡೆ ಹರಡಿರುವ ಕ್ರೈಸ್ತ ಧರ್ಮ ಆರಂಭದಲ್ಲಿ ಸಮಸ್ತ ಕ್ರೈಸ್ತರಿಗೆ ಒಂದೇ ಆಗಿದ್ದಿತು. ಇದೇ ಕಥೋಲಿಕ ಧರ್ಮಸಭೆ. ಈ ಪದ ಮೊಟ್ಟಮೊದಲು ಹುತಾತ್ಮ ಧರ್ಮಾಧಿಕಾರಿ ಅಂಟಿಯೋಕಿನ ಇಗ್ನೇಷಿಯಸ್ (ಕ್ರಿ.ಶ.೧೧೦) ಬಳಸಿದರು.[೩] ಕಥೋಲಿಕಾ ಧರ್ಮಸಭೆಯ ಮೂಲ ಅರ್ಥ ಸಮಸ್ತ ಧರ್ಮಸಭೆ ಅಥವಾ ಜಾಗತೀಕ ಧರ್ಮಸಭೆ ಎಂದು. ಕ್ರಿಸ್ತರ ನಂತರ ೨ ಅಥವಾ ೩ನೇ ಶತಮಾನದಲ್ಲಿ

ಕ್ರೈಸ್ತಧರ್ಮ ರೋಮ್ ಚಕ್ರಾಧಿಪತ್ಯ ಮತ್ತು ಅದಕ್ಕೂ ಆಚೆಗೆ ಹರಡತೊಡಗಿದಾಗ ಕೆಲವು ಚಿಕ್ಕಸಮುದಾಯಗಳು ಈ ಜಾಗತಿಕ ಧರ್ಮಸಭೆಯ ಬಗೆಗೆ ಭಿನ್ನಾಭಿಪ್ರಾಯತಳೆದರು. ಉದಾ: ಮೊಟಾನಿಷ್ಟರು, ಗ್ನಾಸ್ಟಿಕರು, ನವಾಶೋನಿಷ್ಟರು, ಡೋನಾಡಿಸ್ಟರ್ ಮತ್ತು ಇತರ ಗುಂಪುಗಳು ತಮ್ಮದೇ ನಿಜವಾದ ಧರ್ಮಸಭೆ ಎಂದು ಕರೆದುಕೊಂಡರು. ಯಾಕೆಂದರೆ ತಾವು ಮಾತ್ರ ಯೇಸುಕ್ರಿಸ್ತನ ಭೋದನೆ ಮತ್ತು ಜೀವನ ವಿಧಾನವನ್ನು ವಿಶ್ವಾಸದಿಂದ ರಕ್ಷಿಸಿಕೊಂಡಿರುವರೆಂದು ಅವರ ನಂಬಿದ್ದರು. ಇಂತಹ ಸಣ್ಣಮಟ್ಟ ಗುಂಪುಗಳಿಂದ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಗುರುತಿಸಿಕೊಳ್ಳಲು ಜಾಗತಿಕ ಧರ್ಮಸಭೆಗೆ 'ಕಥೋಲಿಕ ಧರ್ಮಸಭೆ' ಎಂಬ ಹೆಸರನ್ನು ಬಳಸಿಕೊಳ್ಳಲಾಯಿತು. ಹೀಗಾಗಿ "ಜಗತ್ತಿನಾದ್ಯಂತ ಹರಡಿಕೊಂಡಿದ್ದ ಕ್ರೈಸ್ತರ ಜಾಗತಿಕ ಸಮುದಾಯಕ್ಕೆ ಔಪಚಾರಿಕವಾಗಿ 'ಕಥೋಲಿಕಾ' ಎಂಬ ಶಬ್ಧ ಬಳಸಬೇಕಾಯಿತು."[೪] ರೋಮನ್ ಕಥೋಲಿಕರು ಎಂದು ಕರೆಯುವುದು ವಾಡಿಕೆಯಲ್ಲಿದೆ. 'ರೋಮನ್' ಎಂದರೆ ನಿರ್ದಿಷ್ಟ ಪ್ರದೇಶದ ಹೆಸರು. 'ಕಥೋಲಿಕಾ' ಎಂದರೆ ಸಾರ್ವತ್ರಿಕ. ಗ್ರೀಕ್‌ನ (katholikos) Universal[೫] ಎಂಬ ಪದದಿಂದ ಬಂದಿದೆ.

ಈ ಕಥೋಲಿಕಾ ಮತದ ತತ್ವಗಳನ್ನು ಮತ್ತು ಆಚರಣೆಗಳನ್ನು ಕುರಿತು ಡಾ. ಎಡ್ವರ್ಡ್ ನರೋನಾರವರು ತಮ್ಮ 'ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ' ಎಂಬ ಗ್ರಂಥದಲ್ಲಿ(ಪುಟ ೯) ವಿವರವಾಗಿ ತಿಳಿಸಿದ್ದಾರೆ. ಈ ಕಥೋಲಿಕಾ ಕ್ರೈಸ್ತ ಧರ್ಮ ಭಾರತಕ್ಕೆ ಮತ್ತು ಕರ್ನಾಟಕಕ್ಕೆ ಪಾದಾರ್ಪಣೆ ಮಾಡಿದ ವಿಚಾರಗಳನ್ನು ಈಗಾಗಲೇ ಇದೇ ಕೃತಿ (ಪುಟ ೩೩) ತಿಳಿಸಲಾಗಿದೆ. ಕ್ರಿಶ ಒಂದನೇ ಶತಮಾನದಲ್ಲಿಯೇ ಭಾರತಕ್ಕೆ ಆಗಮಿನಿಸದ ಕ್ರೈಸ್ತ ಧರ್ಮ ಕರ್ನಾಟಕದಲ್ಲಿ ಬೇರೂರಲು ಕೆಲವು ಶತಮಾನಗಳೇ ಬೇಕಾದವು. ೧೬೫೧ರಲ್ಲಿ ಲಿಯೋನಾರ್ಡೊಚಿನ್ನಾಮಿ ಎಂಬ ಜೆಸ್ವಿಟ್ ಪಾದ್ರಿಯು ಗೋವೆಯಿಂದ ಶ್ರೀರಂಗಪಟ್ಟಣವನ್ನು ತಲುಪಿ ಧರ್ಮ ಪ್ರಚಾರ ಕಾರ್ಯದಲ್ಲಿ ತೊಡಗಿದರು. ಹೊಸಗನ್ನಡ ಗದ್ಯ ಸಾಹಿತ್ಯದಲ್ಲಿ ಪ್ರಥಮ ಗ್ರಂಥಕಾರ ಎಂಬ ಬಿರುದಿಗೆ ಪಾತ್ರರಾದ ಇವರ ಜೀವನ ಮತ್ತು ಕೊಡುಗೆಯ ಕುರಿತು ಡಾ. ಐ. ಅಂತಪ್ಪ ತಮ್ಮ 'ಹೊಸಗನ್ನಡದ ಪ್ರಥಮ ಗ್ರಂಥಕಾರ' ಎಂಬ ಕೃತಿಯಲ್ಲಿ ಸವಿಸ್ತಾರವಾಗಿ ಹೇಳಿದ್ದಾರೆ. ಈ ಮಿಶನರಿಯ ನಂತರ ಸಾಹಿತ್ಯ ಕಾರ್ಯ ಮಸುಕಾದಂತೆ ಕಾಣುತ್ತದೆ. ಆದರೆ ೧೮೫೦ರಲ್ಲಿ ಮತ್ತೊಬ್ಬ ಶ್ರೇಷ್ಠ ಮಿಶನರಿ ಎಲ್.ಶಾರ್ಬೋನೊ ಅವರ ಸೇವೆ ಅದ್ವಿತೀಯವಾಗಿ ಕಂಡು ಬಂದಿದೆ.

೪.೨ ಎಲ್ ಶಾರ್ಬೋನೊ

ಶ್ರೇಷ್ಠ ಕಥೋಲಿಕಾ ಮಿಶನರಿಯಾದ ಶಾರ್ಬೊನೊ ೧೮೦೬ ಮಾರ್ಚ್ ೨೦ ರಂದು ಫ್ರಾನ್ಸ್‌ನ ಲಾಗೋರೇಕ್ (Laguerche)ನಲ್ಲಿ ಜನಿಸಿದರು. ಆಧ್ಯಾತ್ಮಿಕ ಜೀವನದತ್ತ ಒಲವಿದ್ದ ಇವರು ೧೮೨೪ರಲ್ಲಿ ಕ್ಯಾಂಬ್‌ಬ್ರಿ (Cambree) ಕಾಲೇಜಿನಲ್ಲಿ ಅಧ್ಯಯನ ಮಾಡಿದರು. ಒಬ್ಬ ಮಿಶನರಿಯಾಗಬೇಕೆಂಬ ಮಹದಾಸೆಯನ್ನು ಹೊತ್ತಿದ್ದ ಇವರು ಫ್ರೆಂಚ್ ಫ್ಯಾರಿನ್ ಮಿಶನ್ (MEP) ಸೆಮಿನಾರಿಯನ್ನು ಸೇರಿ ೧೮೩೦

ಜೂನ್ ೫ ರಂದು ಧಾರ್ಮಿಕ ಗುರುವಾದರು. ಫ್ರೆಂಚ್ ಕ್ರಾಂತಿಯ ಗಾಂಭೀರ್ಯತೆ ಶಾರ್ಬೋನೊರವರು ತಮ್ಮ ನಾಡನ್ನು ಬಿಟ್ಟು ವಿದೇಶಗಳಲ್ಲಿ ಸುವಾರ್ತಾಸೇವೆ ಮಾಡುವಂತೆ ಮಾಡಿತು. ೧೮೩೧ರಲ್ಲಿ ಭಾರತದ ಪಾಂಡಿಚೇರಿಯನ್ನು ತಲುಪಿದರು. ಸ್ಥಳೀಯ ಭಾಷೆಗಳನ್ನು ಕಲಿಯುವುದರಲ್ಲಿ ತಮ್ಮನ್ನೇ ತೊಡಗಿಸಿಕೊಂಡರು ಉತ್ತರ ಮದ್ರಾಸಿನ ಭಾಗದಲ್ಲಿದ್ದ ತೆಲುಗು ಜನರ ಸೇವೆಯಲ್ಲಿ ತೊಡಗಿದ ಇವರು ತೆಲುಗು ಭಾಷೆಯನ್ನು ಕಲಿತರು. ಈ ಕಾಲದಲ್ಲಿಯೇ ಕ್ಷಾಮವು ಕಾಣಿಸಿಕೊಂಡಿತು. ಕಾಲರಾ, ಸಿಡುಬು ರೋಗಗಳಿಂದ ನರಳುತ್ತಿದ್ದ ಇಲ್ಲಿನ ಜನರ ಸೇವೆಯನ್ನು ನಿಷ್ಠೆಯಿಂದ ವಹಿಸಿದರು. ಇವರ ಸ್ವಾರ್ಥರಹಿತ ಸೇವೆಯನ್ನು ಕಂಡ ಅಂದಿನ ಅಧಿಕಾರಿಗಳು (Collector of Guntur) ಅವರ ಸೇವಾಮನೋಭಾವನೆಯನ್ನು ಶ್ಲಾಘಿಸಿದರು. 'The Father and benefactor of his people' ಎಂದು ಕರೆದರು.

೧೮೩೧ ಜನವರಿ ೨ರಂದು ಶಾರ್ಬೋನೊ ಮೈಸೂರಿಗೆ ಬಂದು ಇಲ್ಲಿನ ಸ್ಥಳೀಯ ಭಾಷೆಯಾದ ಕನ್ನಡವನ್ನು ಕಲಿತರು. ಮೈಸೂರು ಸಂಸ್ಥಾನದ ಕಥೋಲಿಕರ ಪ್ರಥಮ ಸ್ವತಂತ್ರ ವಿಕಾರ್ ಎಪಾಸ್ತಲಿಕ್ ಎಂದು ೧೮೪೦ರಲ್ಲಿ ನಿಯಮಿತರಾದರು. ಭಾರತ, ಬರ್ಮಾ ದೇಶಗಳ ಸಂದರ್ಶಕರಾಗಿ ನೇಮಕಗೊಂಡರು. ೧೮೭೦ರ ವ್ಯಾಟಿಕನ್ ಎಕ್ಯುಮೆನಿಕಲ್ ಕೌನ್ಸಲಿನ ಸದಸ್ಯರಾದರು. ಇವರ ಆಡಳಿತದ ಸಂದರ್ಭದಲ್ಲಿಯೇ ಕನ್ಯಾಸ್ತ್ರೀ ಸಂಸ್ಥೆ (St. Anne's) ಹಾಗೂ ಹಲವು ಸೇವಾಸಂಸ್ಥೆಗಳು ಸ್ಥಾಪಿತವಾದವು. ಕಥೋಲಿಕಾ ಧರ್ಮಸಭೆಗೆ ಅಪಾರ ಸೇವೆಯನ್ನು ಸಲ್ಲಿಸಿದ ಇವರು ೨೩ ಜೂನ್ ೧೮೭೩ರಲ್ಲಿ ಸ್ವರ್ಗಸ್ಥರಾದರು. ಬಹುಭಾಷಾ ಪಾಂಡಿತ್ಯವನ್ನು ಪಡೆದ ಇವರು ರಚಿಸಿದ, ಭಾಷಾಂತರಿಸಿದ ಮತ್ತು ಪ್ರಕಟಿಸಿದ ಗ್ರಂಥಗಳು ಇಂತಿವೆ.

೧. ಲ್ಯಾಟಿನ್ ಕನ್ನಡ ವ್ಯಾಕರಣ–೧೮೫೧

೨. Sacred History : Epitome Historiac Sacrae (Latin-Kannada 1851)

೩. Latin-Kannada Dictionary : Latin Kannada Akaraadi 1861 (pp.1179)

೪. Marriage : Loka Maduve Prasthada Kramavu

೫. Coutumler de la mission du maissour 1866 (French)

೬. Book of Prayers: Dodda Japada Pusthaka (author not known) revised and enlarged by Bp. Charbonnaux.

೭. Book of Prayer: Sadharana (author unknown) revised and abridged by Bp. Charbonnaux 1-1861?

೮. Useful prayers: Sukrutha Manthragalu, 1866

೯. Text Book for Schools: Modalane Puta (author not known) revised by Bp. Charbonnaux

೧೦. Text book for Schools: Yeradaneya Puta (author Not known) revised by Bp. Charbonnaux.

ತಮಿಳಿನಿಂದ ಭಾಷಾಂತರಿಸಲ್ಪಟ್ಟ ಕೃತಿಗಳು:

೧. ಸತ್ಯವೇದ ಪರೀಕ್ಷೆ , ೧೮೫೨ (ಪುಟ.೩೬೮)

೨. ಪೂರ್ವಿಕ ಮತದ ವ್ಯಾಖ್ಯಾನ, ೧೮೫೮ (ಪುಟ.೨೪೯)

೩. ಜ್ಞಾನ ದರ್ಪಣ, ೧೮೫೮

೪. ಶಿಲುಬೆ ಹಾದಿ, ೧೮೬೦ (ಪುಟ. ೮೨)

೫. ದಿವ್ಯ ಮಾತೃಕೆ, ೧೮೬೨ (ಪುಟ. ೫೪೯)

೬. ದಿವ್ಯ ಪರೀಕ್ಷೆ, ೧೮೬೩ (ಪುಟ. ೫೯೮)

೭. ಅಜ್ಞಾತ ವಾಸದ ಧ್ಯಾನ, ೧೮೬೫ (ಪುಟ. ೨೧೯)

೮. ಪತಿತರ ಮಾರ್ಗ, ೧೮೬೭ (ಪುಟ. ೧೮೭)

೯. ವೇದ ಬೋಧಕರ ಕರ್ಮ, ೧೮೬೧

ಲೂಯಿಸ್ ಶಾರ್ಬೋನೊರವರಿಂದ ಪರಿಷ್ಕೃತ ಹಾಗೂ ವಿಸ್ಕೃತ ಮಾಡಲಾದ ಜಪದ ಪುಸ್ತಕದಲ್ಲಿ ಕಂಡುಬರುವ ಗೀತೆಗಳ ಅಧ್ಯಯನ ಈ ಕೆಳಗಿನಂತಿದೆ.

ಜಪದ ಪುಸ್ತಕ: "ರೋಮನ್ ಕಥೋಲಿಕ ಧಾರ್ಮಿಕ ವಿಧಿನಿಯಮಗಳ ದೊಡ್ಡ ಹೊತ್ತುಗೆ"[೬] ಎಂದು ಶ್ರೀನಿವಾಸ್ ಹಾವನೂರರು ಜಪದ ಪುಸ್ತಕದ ಕುರಿತು ಹೇಳಿರುವ ಮಾತು ಈ ಧಾರ್ಮಿಕ ಗ್ರಂಥಕ್ಕೆ ಸರಿಹೊಂದುವುದಾಗಿದೆ. ಇದರ ಮೊದಲ ಆವೃತ್ತಿ ೧೮೪೮ರಲ್ಲಿ ಕಥೋಲಿಕಾ ಪ್ರೆಸ್‌ನಲ್ಲಿ ಅಚ್ಚಾಯಿತು. ಇದನ್ನು ಪರಿಷ್ಕರಿಸಿ ವಿಸ್ತರಿಸಿ ೧೮೬೫ರಲ್ಲಿ ಶಾರ್ಬೋನೊ ಪ್ರಕಟಿಸಿದರು. ಇದರ ಮೊದಲ ಮುದ್ರಣವು ೧೮೯೭ರಲ್ಲಾಯಿತು. ಈ ಗ್ರಂಥದ ಎರಡನೇ ಮುದ್ರಣದ ಪೀಠಿಕೆಯಲ್ಲಿ ಹೀಗೆಂದು ಬರೆದಿದೆ. "ದೊಡ್ಡ ಪುಸ್ತಕವೆಂದು ಕರೆಯಲ್ಪಡುವ ಈ ಅಮೂಲ್ಯವಾದ ಪಸಂದಾದ, ಮನೋಹರವಾದ, ಪ್ರಯೋಜನಕರವಾದ ಗ್ರಂಥವು ೧೮೯೭ರಲ್ಲಿ ಮಂಗಳೂರಿನಲ್ಲಿರುವ ಕೊಡ್ಯಾಲ್ ಬೈಲ್ ಛಾಪಾ ಖಾನೆಯಲ್ಲಿ ಬ್ರದರ್ ಎಲ್. ಡೊನೆಡಾ ಎಂಬುವರಿಂದ ಬೆಂಗಳೂರು ಕಥೋಲಿಕಾ ಮಿಶನ್ ಡಿಪೋಗಾಗಿ ಛಾಪಿಸಲ್ಪಟ್ಟಿತು. ಬೆಂಗಳೂರಿನಲ್ಲಿರುವ ಕಥೋಲಿಕಾ ಜಪದ ಪುಸ್ತಕಗಳ ಪೈಕಿ ಇದು ಅತ್ಯುತ್ತಮವಾಗಿರುತ್ತದೆಂದು ಇದನ್ನು ಹೊಗಳಿದರೆ ಅತಿಶಯೋಕ್ತಿಯಾಗಲಾರದೆಂದು ಯೋಚಿಸುತ್ತೇವೆ. ಕನ್ನಡ ಭಾಷೆ ಅರಿತಿರುವವರಿಗೆ ಇದು ಅಮೂಲ್ಯವಾದ ದ್ರವ್ಯವೆಂದು ಹೇಳಬೇಕಾಗುತ್ತದೆ.

'ಚಿಕ್ಕ ಜಪದ ಪುಸ್ತಕ' ಮತ್ತು 'ಜ್ಞಾನ ಬೊಕ್ಕಸ' ಎಂಬ ಎರಡು ಸಣ್ಣ ಗ್ರಂಥಗಳು ಪ್ರಚೋದಿಸಲ್ಪಟ್ಟಿದ್ದರೂ, ಅವುಗಳು 'ದೊಡ್ಡ ಜಪದ ಪುಸ್ತಕ'ಕ್ಕೆ ಈಡಾಗಲಿಲ್ಲವೆಂದು ಈ ಪುಸ್ತಕದ ಪ್ರಯೋಜನ ಅರಿತವರು ನುಡಿಯುವುದುಂಟು. ಈ ಗ್ರಂಥವನ್ನು ತಯಾರಿಸುವುದಕ್ಕೆ ಮೈಸೂರು ಮೆತ್ರಾಣಿ

ಸ್ಥಾನದ ಪೂರ್ವ ಕಾಲದ ಕನ್ನಡ ಭಾಷೆಯನ್ನರಿತ ಮಿಶನರಿ ಗುರುಗಳು ಪಟ್ಟ ಪ್ರಯಾಸವು ಅಷ್ಟಿಷ್ಟೆಂದು ಹೇಳಲಸಾಧ್ಯ. ಈ ಗ್ರಂಥದಲ್ಲಿ ದೊಡ್ಡವರಿಗೂ ಚಿಕ್ಕವರಿಗೂ ಬಹಳ ಪ್ರಯೋಜನಕರವಾದ ಜ್ಞಾನಜಪಗಳು, ಪ್ರಾರ್ಥನೆಗಳು ಅಡಗಿರುತ್ತವೆ. ಸಮಸ್ತರು ಸುಲಭವಾಗಿ ಓದಿ ಗ್ರಹಿಸಿಕೊಳ್ಳಬಹುದಾದ ಸುಲಭವಾದ, ರಮ್ಯವಾದ ಭಾಷೆಯಿಂದ ಈ ಜಪ ಧ್ಯಾನಗಳು ನಿರ್ಮಿಸಲ್ಪಟ್ಟಿರುತ್ತವೆ."[೭]

ಪ್ರಾರಂಭದಲ್ಲಿ ಕ್ರೈಸ್ತರು ಉಪಯೋಗಿಸುತ್ತಿದ್ದ ಈ ಕೈಪಿಡಿಯಲ್ಲಿ ಅನೇಕ ವಿಷಯಗಳನ್ನು ಕಾಣುತ್ತೇವೆ. ೭೪೪ ಪುಟಗಳನ್ನು ಒಳಗೊಂಡ ಈ ಪ್ರಾರ್ಥನಾ ಪುಸ್ತಕ ೩೯ ಅಧ್ಯಾಯಗಳನ್ನು ಹೊಂದಿದೆ. ತತ್ವದ ಬೋಧನೆಯ ಅಂಶಗಳಿವೆ. ಆದರೆ ಗ್ರಂಥದ ಬಹುಭಾಗ ಪ್ರಾರ್ಥನೆಗಳ ರೂಪದಲ್ಲಿದೆ. ಇವುಗಳಲ್ಲಿ ಕೆಲವು ದೈನಂದಿನ ಸಂದರ್ಭೋರ್ಜಿತ ಪ್ರಾರ್ಥನೆಗಳು, ಬೆಳಗ್ಗೆ ಎದ್ದು ಹೇಳುವ ಜಪ, ನಿದ್ದೆಮಾಡಲು ಹೋಗುವಾಗ ಹೇಳುವ ಜಪ, ಊಟದ ಮೊದಲಿನ ಮತ್ತು ಅನಂತರರದ ಜಪ ಇತ್ಯಾದಿ. ಕೆಲವು ಕ್ರೈಸ್ತರ ದೈನಂದಿನ ಮತ್ತು ಕಾಲಕಾಲದ ಆಚರಣೆಗಳಿಗೆ ಸಂಬಂಧಿಸಿದವು, ಪೂಜೆಯ ಹೊತ್ತಿನಲ್ಲಿ ಹೇಳುವ ಜಪಗಳು, ತಪಸ್ಸು ಕಾಲದಲ್ಲಿ ಹೇಳುವ ಜಪಗಳು, ವಿವಿಧ ಸಂಸ್ಕಾರಗಳಿಗೆ ಮತ್ತು ಜೀವನಾನುಭವಗಳಿಗೆ ಬೇಕಾದ ಜಪಗಳು ಪಾಪ ಸಂಕೀರ್ತನ ಮಾಡುವ ಜಪಗಳು, ಸತ್ಪ್ರಾಸದಕ್ಕೆ ಆಯತ್ತ, ಸಾವು ಸನ್ನಿಹಿತಿವಾಗುವಾಗ ಹೇಳುವ ಪ್ರಾರ್ಥನೆಗಳು, ಪ್ರೇತದ ಅಡಕದ ವಿಧಾನ; ಭಕ್ತಿಯನ್ನು ಆಚರಿಸುವ ಕೆಲವು ವಿಧಾನಗಳು, ಯೇಸುವಿನ ತಿರುಹೃದಯದ ಭಕ್ತಿ, ಜಪದ ಅಪೋಸ್ತಲತನ, ಉತ್ತರಿಕೆ ದೇವಮಾತೆಯ ಸಭೆ ಇವುಗಳ ಪ್ರಾರ್ಥನೆಗಳು; ವ್ಯಾಕುಲ ದೇವರ ತಾಯಿಯ ಪ್ರಾರ್ಥನೆ, ಅರ್ಚಶಿಷ್ಟ ಅಂತೋಣಿಯವರಿಗೆ ಪ್ರಾರ್ಥನೆ, ಜೇಸುನಾಥರ ತಿರು ಪಾಡುಗಳ ಪ್ರಾರ್ಥನೆ, ಶಿಲುಬೆಯ ಹಾದಿ ಇತ್ಯಾದಿ. ವಿಶಿಷ್ಟ ಸಂದರ್ಭಗಳಿಗೆ ತಕ್ಕ ಪ್ರಾರ್ಥನೆಗಳು, ಅಂಟು ರೋಗದ ಕಾಲದಲ್ಲಿ ಪ್ರಾರ್ಥನೆ, ಮಳೆಗೋಸ್ಕರ ಪ್ರಾರ್ಥನೆ, ಪ್ರಸೂತಿ ಆಗುವರಿಗೋಸ್ಕರ ಪ್ರಾರ್ಥನೆ, ಕನ್ನಡ ನಾಡಿಗಾಗಿ ಪ್ರಾರ್ಥನೆ; ಜ್ಞಾನಫಲವನ್ನು ಪಡೆಯುವ ಪ್ರಾರ್ಥನೆಗಳು, ಸಂಸ್ಕೃತ ಭಾಷೆಯಲ್ಲಿರುವ ಪ್ರಾರ್ಥನೆಗಳು ಇವಲ್ಲದೇ ಹಬ್ಬ ಉತ್ಸವಗಳ ಪಂಚಾಂಗ, ಉಪವಾಸಾದಿಗಳಿಗೆ ನೇಮಿತವಾದ ದಿನಗಳು, ಮದುವೆಯ ಬಗೆಗಿನ ನಿಯಮಗಳು ಇದರಲ್ಲಿದೆ. ಈ ಜಪದ ಪುಸ್ತಕದಲ್ಲಿ ಕಂಡು ಬರುವ ಗೀತೆಗಳು ಯಾರಿಂದ ಬರೆಯಲಾಯಿತೆಂದು ತಿಳಿದು ಬರುವುದಿಲ್ಲ. ಕ್ರೈಸ್ತರ ಪ್ರಾರ್ಥನಾ ಗ್ರಂಥದಲ್ಲಿ ಲಭ್ಯವಿರುವ ಹಾಗೂ ಪ್ರಾರಂಭದಿಂದ ಬಳಕೆಯಲ್ಲಿದ್ದ ಗೀತೆಗಳ ಅಧ್ಯಯನವನ್ನು ಮಾಡಲಾಗಿದೆ.

ಜಪದ ಪುಸ್ತಕದಲ್ಲಿ ಗೀತೆಗಳ ಅಧ್ಯಯನವು ಅಧ್ಯಯನಕ್ಕೆ ತೆಗೆದುಕೊಳ್ಳಲಾದ ವಸ್ತು ವಿಷಯಗಳಿಗೆ ಸಂಬಂಧಿಸಿದಂತೆ ನಡೆದಿದೆ (ವ್ಯಾಪ್ತಿಯನ್ನು ನೋಡಿ). ಇಲ್ಲಿನ ಗೀತೆಗಳು ಯೇಸುವಿನ ವ್ಯಕ್ತಿತ್ವ ಆತನ ಪಾಡು, ಮರಣ, ಸಂಸ್ಕಾರ ಮತ್ತು ಸಂತರುಗಳು ಇವುಗಳ ಕುರಿತಾಗಿ ಕಂಡು ಬರುತ್ತದೆ.

ಸಂತರು: "ಯೇಸುವಿನ ಹಿಂಬಾಲಕರಾಗಿ ಇಹದಲ್ಲಿರುವಾಗಲೇ ಯೇಸುವಿನ ಶ್ರಮ ಪುನರುತ್ಥಾನಗಳಲ್ಲಿ ಭಾಗಿಯಾಗಿ ಒಳ್ಳೆಯ ಮರಣದ ಮೂಲಕ ಹುತಾತ್ಮರಾಗಿ ಯೇಸುವಿನಲ್ಲಿ ಐಕ್ಯರಾದವರೇ ಸಂತರು."[೮] ಸಂತ ಎಂಬ ಪದಕ್ಕೆ ಪರಿಶುದ್ಧ ಅಥವಾ ಪ್ರತ್ಯೇಕಿಸಲ್ಪಟ್ಟವ ಎಂದರ್ಥವಿದೆ. ಪವಿತ್ರ ಗ್ರಂಥದಲ್ಲಿ ಪರಿಶುದ್ಧರಾಗಿರುವುದು

ಎಂದರೆ ನೀತಿವಂತರು ಮತ್ತು ದೇವರಿಗಾಗಿ ಮೀಸಲಾಗಿರುವರು ಎಂದರ್ಥ. ಇಹದಲ್ಲಿ ಪೂಜ್ಯತೆಯನ್ನು, ಸ್ವರ್ಗದಲ್ಲಿ ಉಚ್ಛ ಸ್ಥಾನವನ್ನು ಪಡೆದವನೆಂದು ಕ್ರೈಸ್ತ ಮತ ಅಧಿಕಾರ ಪೂರ್ವಕವಾಗಿ ಅಂಗೀಕರಿಸಿದ ವ್ಯಕ್ತಿಯನ್ನು ಕ್ರೈಸ್ತರು 'ಸಂತ'ಎಂದು ಕರೆಯುತ್ತಾರೆ. ಆದಿ ಕ್ರೈಸ್ತರು ಸಂತರನ್ನು 'ಆರ್ಚ ಶಿಷ್ಟ' ಎಂದು ಕರೆಯುತ್ತಿದ್ದರು. ಆತ ಪುರುಷನಾಗಿರಬಹುದು ಇಲ್ಲವೇ ಮಹಿಳೆಯಾಗಿರಬಹುದು.

ಕಥೋಲಿಕಾ ಕ್ರೈಸ್ತರ ಒಂದು ಪ್ರಮುಖ ಗುಣಲಕ್ಷಣವೆಂದರೆ ಸಂತರುಗಳನ್ನು ಗೌರವಿಸುವುದು. ಕಥೋಲಿಕಾ ಕ್ರೈಸ್ತರು ಸಂತರಲ್ಲಿ ನಂಬಿಕೆ ಇರಿಸಿಕೊಂಡಿರುತ್ತಾರೆ. ಮತ್ತು ಈ ಸಂತರು ಮನುಷ್ಯರ ಮಧ್ಯಸ್ಥಿಕೆವಹಿಸಿ ದೇವರನ್ನು ಪ್ರಾರ್ಥಿಸುತ್ತಾರೆ (ಉಡ್ರೊ ೧೯೮೫:೩೨) ಎಂದು ನಂಬುತ್ತಾರೆ. ಆದರೆ ಪ್ರೊಟೆಸ್ಟೆಂಟ್ ಕ್ರೈಸ್ತರು ಸಂತರನ್ನು ಗೌರವಿಸುವುದಿಲ್ಲ. ಕಥೋಲಿಕಾ ಕ್ರೈಸ್ತ ಸಮುದಾಯದಲ್ಲಿ ಸಾವಿರಾರು ಸಂತರುಗಳಿದ್ದಾರೆ. ಧರ್ಮಸಭೆಯ ಪ್ರಮುಖ ವ್ಯಕ್ತಿಯಾದ ಪೋಪ್ ಜಗದ್ಗುರು ವಿಶೇಷವಾದ ಸಾಕ್ಷ್ಯಾಧಾರಗಳ ಮೂಲಕ ಸಂತ ಪದವಿಯನ್ನು ಪಡೆದುಕೊಂಡವರನ್ನು ಮಾತ್ರ ಕಥೋಲಿಕಾ ಕ್ರೈಸ್ತರು ಸಂತರೆಂದು ಗೌರವಿಸುತ್ತಾರೆ. ಇವರು ಧರ್ಮ ಪಂಡಿತರು, ವಿನಯವನ್ನು ಹೊಂದಿದವರು, ಸಾಧು ಜೀವನವನ್ನು ನಡೆಸಿದವರು, ಧರ್ಮಕ್ಕಾಗಿ ಹುತಾತ್ಮರಾದವರು ಮುಂತಾದವರು ಮರಣ ಹೊಂದಿದ ಮೇಲೆ ಅನೇಕ ಪವಾಡಗಳನ್ನು ಅದ್ಭುತಗಳನ್ನು ಮೆರೆದವರಾಗಿರಬೇಕು. ಅಂತಹ ವ್ಯಕ್ತಿಗಳನ್ನು ಧರ್ಮಸಭೆ ಗುರುತಿಸಿ ಸಂತರ ಸ್ಥಾನಕ್ಕೆ ಏರಿಸುತ್ತದೆ.

ಕಥೋಲಿಕಾ ಕ್ರೈಸ್ತರು ಸಂತರ ಹೆಸರನ್ನು ಇಟ್ಟುಕೊಳ್ಳುವ ಸಂಪ್ರದಾಯವನ್ನು ಹೊಂದಿದ್ದಾರೆ. ಅಲ್ಲದೆ ಅವರು ನಡೆಸುವ ಶಾಲಾ ಕಾಲೇಜುಗಳಿಗೆ, ಸಂಸ್ಥೆಗಳಿಗೆ, ಚರ್ಚುಗಳಿಗೆ ಸಂತರ ಹೆಸರುಗಳನಿಟ್ಟು ಕರೆಯುವುದು ಸರ್ವೇಸಾಮಾನ್ಯವಾಗಿ ನಡೆದು ಬಂದಿರುವ ಪದ್ಧತಿಯಾಗಿದೆ. ಕೆಲವು ಸಂತರನ್ನು 'ಪೋಷಕ ಸಂತ' (Patron saint) ಎಂದು ಗೌರವಿಸುತ್ತಾರೆ. ಉದಾ: ಕಳೆದು ಹೋದ ವಸ್ತುಗಳಿಗೆ ಸಂತ ಅಂತೋಣಿ, ವೈದ್ಯರಿಗೆ ಸಂತ ಲೂಕ, ಬಡವರಿಗೆ ಸಂತ ಲಾರೆನ್ಸ್, ಚಿಕ್ಕ ಮಕ್ಕಳಿಗೆ ಸಂತ ಡೊಮೆನಿಕ್ ಇತ್ಯಾದಿ. ಕೆಲವು ಸಂತರನ್ನು ರೋಗ ನಿವಾರಕರೆಂದು ಗೌರವಿಸಿ ಅವರಿಗೆ ಕೆಲವು ನಿರೋಧಕ ಶಕ್ತಿಯನ್ನು ಆರೋಪಿಸುವುದೂ ಇದೆ. ಉದಾ: ನಾಯಿ ಕಡಿತಕ್ಕೆ ಸಂತ ಹೂಬರ್ಟ್.

ಕಥೋಲಿಕ ಧರ್ಮಸಭೆ ಪ್ರತಿವರ್ಷ ನವೆಂಬರ್ ೧ನೇ ತಾರೀಖು 'ಸಕಲ ಸಂತರ' ಮಹೋತ್ಸವವನ್ನು ಭಕ್ತಿಯಿಂದ ಆಚರಿಸುತ್ತದೆ. ಅಂದು ಪೂಜೆಯ ನಿರೂಪದಲ್ಲಿ ಪವಿತ್ರ ಗ್ರಂಥದ ಈ ಭಾಗವನ್ನು ಓದುತ್ತಾರೆ. ಅದು:

'ಯಾರಿಂದಲೂ ಎಣಿಸಲಾಗದಷ್ಟು ಒಂದು ದೊಡ್ಡ ಜನ ಸಮೂಹವು ನೆರೆದಿತ್ತು. ಅವರು ಎಲ್ಲಾ ದೇಶ, ಭಾಷೆ ಕುಲಗೋತ್ರಗಳಿಂದ ಬಂದವರಾಗಿದ್ದರು. ಶ್ವೇತಾಂಬರರಾಗಿ ಸಿಂಹಾಸನದ ಮತ್ತು ಯಜ್ಞದ ಕುರಿಮರಿಯಾಗಿರುವವನ ಸಾನಿಧ್ಯದಲ್ಲಿ ನಿಂತಿದ್ದರು. ಕೈಗಳಲ್ಲಿ ಖರ್ಜೂರದ ಗರಿಗಳನ್ನು ಹೊಂದಿದ್ದರು' (ಪ್ರಕಟಣೆಗಳು ೭:೯).

ಸಂತರು ಸ್ವರ್ಗೀಯ ಭಾಗ್ಯವನ್ನು ಅನುಭವಿಸುತ್ತಿರುವ ಬಗ್ಗೆ ಈ ವಾಚನವು ನಮ್ಮ ಗಮನ ಸೆಳೆಯುತ್ತದೆ. ಸಂತರು ಸದಾ ಬಿಳಿ ವಸ್ತ್ರವನ್ನುಟ್ಟು, ಗರಿಗಳನ್ನು ಹಿಡಿದುಕೊಂಡು, ಸಂತಸ ಸಂಭ್ರಮದಿಂದ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಾ ತಮ್ಮ ಮಧ್ಯಸ್ಥಿಕೆಯನ್ನು ಬೇಡಿಕೊಂಡವರಿಗಾಗಿ ಸದಾ ಪ್ರಾರ್ಥಿಸುತ್ತಾರೆ ಎಂಬ ನಂಬಿಕೆಯನ್ನು ಇದು ವ್ಯಕ್ತಪಡಿಸುತ್ತದೆ.

ಸಂತ ಸ್ತ್ರೀ ಪುರುಷರು ಶ್ರೀ ಸಾಮಾನ್ಯರಂತೆ ಭೂಮಿಯ ಮೇಲೆ ಜನ್ಮ ತಾಳಿದರೂ ನೀರಿನಲ್ಲಿದ್ದು ನೀರಿಗೆ ಅಂಟಿಕೊಳ್ಳದೇ ಬೆಳೆವ ಸುಂದರ ಕಮಲದಂತೆ ಲೋಕದ ಆಶಾಪಾಶಗಳಿಗೆ ಅಂಟಿಕೊಳ್ಳದೆ ಎಲ್ಲವನ್ನು ತ್ಯಾಗಮಾಡಿ ಧರೆಗೆ ಉಪ್ಪಾಗಿ, ಲೋಕಕ್ಕೆ ಬೆಳಕಾಗಿ ಬಾಳಿ ಬೆಳಗಿದರು. ಇವರು ದೇವ, ಮಾನವ ನಡುವಿನ ನಾಳೆಯ ಸೇತುವೆಯಾಗಿ ಮೆರೆದ ಮಹಿಮಾವಂತರು, ಭಾರತೀಯರಲ್ಲಿ ಸಾಧುಸಂತರ ಬಗ್ಗೆ ಅಪಾರ ಗೌರವವಿದೆ.

ಮಾತೆ ಮರಿಯಮ್ಮನವರಿಗೆ ಸಂಬದಿಸಿದ ಗೀತೆಗಳು: ಜಪದ ಪುಸ್ತಕದಲ್ಲಿ ಮಾತೆ ಮರಿಯಮ್ಮನವರಿಗೆ ಸಂಬಂಧಿಸಿದ ಗೀತೆಗಳು ಕಂಡು ಬರುತ್ತದೆ. ಸಂತ ಮರಿಯಮ್ಮನವರನ್ನು ಹಾಡಿ ಸ್ತುತಿಸುವುದರೊಂದಿಗೆ ಆಕೆಯಲ್ಲಿ ವಿನಯಪೂರ್ವಕವಾಗಿ ಪ್ರಾರ್ಥಿಸುವ ಬಗೆ, ಭಕ್ತರಿಗೆ ಆಕೆಯಲ್ಲಿರುವ ಪ್ರೀತಿ, ವಿಶ್ವಾಸ ವ್ಯಕ್ತವಾಗಿದೆ "ಸಮುದ್ರದ ನಕ್ಷತ್ರವೇ" ಎಂಬ ಗೀತೆಯಲ್ಲಿ. ಇದು Ave maris stella ಎಂಬ ಫ್ರೆಂಚ್ ಗೀತೆಯ ಭಾಷಾಂತರವಾಗಿದೆ.

ಮಾತೆ ಮರಿಯಳು, ದೇವರ ಮಾತೆಯು ಮನುಕುಲದ ಮಾತೆಯೂ ಆಗಿದ್ದಾರೆ. ದೈವ ಯೋಜನೆಗೆ ತಲೆಬಾಗಿ ದೇವರ ಚಿತ್ತದಂತೆ ರಕ್ಷಣಾ ಕಾರ್ಯದಲ್ಲಿ ಯೇಸುವಿನೊಂದಿಗೆ ಸಹಭಾಗಿಯಾದ ಮಾತೆಯಾಗಿದ್ದಾರೆ. ಆದ್ದರಿಂದ ಎಲ್ಲಾ ಮಾನವರು ಇಹಲೋಕದಲ್ಲಿ ದೇವರ ಮಕ್ಕಳಾಗಿ ಜೀವಿಸಿ ಕಷ್ಟ ದುಃಖಗಳಿಂದ ತಮ್ಮನ್ನು ಕಾಪಾಡಿ ಶಾಂತಿಯ ಪಥದಲ್ಲಿ ತಮ್ಮನ್ನು ನಡೆಸುವಂತೆ ಬೇಡಿಕೊಂಡಿದ್ದಾನೆ ಭಕ್ತ ಈ ಗೀತೆಯಲ್ಲಿ.

ಕನ್ನಿಕೆಗಳಲ್ಲಿ ಕನ್ನಿಕೆಯೇ
ಶಾಂತಿಗಳಲ್ಲಿ ಶಾಂತಿಯೇ
ಪಾಪದ ಕ್ಷಯವಂ ಪಾಲಿಸಿ
ಶಾಂತಿಯಂ ಶುದ್ಧಿಯಂ ನಮ್ಮಲ್ಲಿ ಬೆಳೆಸಿರಿ

ಸಮುದ್ರದ ನಕ್ಷತ್ರ: ಹೀಬ್ರು ಭಾಷೆಯಲ್ಲಿ 'ಮಿರಿಯಮ್ಮ' ಎಂದು ಮರಿಯಮ್ಮನವರನ್ನು ಸಂಬೋಧಿಸುತ್ತಾರೆ. ಅದರ ಅರ್ಥ ಸಮುದ್ರದ ನಕ್ಷತ್ರ ಎಂದು. ಸಂತ ಬೆರ್ನಾಡ್‌ರವರು ಸಮುದ್ರದ ನಕ್ಷತ್ರ ಎನ್ನುವ ಅರ್ಥ ಮರಿಯಳಿಗೆ ಸಪೂರ್ಣವಾಗಿ ಒಪ್ಪುತ್ತದೆ ಎಂದು ಹೇಳಿ ಅನಂತರ ಬರೆಯುತ್ತಾ 'ಓ ಪಾಪಾತ್ಮವೇ ನೀನು ಪಾಪದ ಶೋಧನೆಯಲ್ಲಿ ಸಿಲುಕಿಕೊಂಡರೆ, ಸದ್ಗುಣದಿಂದ ದೂರಕ್ಕೆ ತಳ್ಳಲ್ಪಡುವುದಿದ್ದರೆ ನಿನ್ನ ನೇತ್ರಗಳನ್ನು ಸಮುದ್ರ ನಕ್ಷತ್ರದ ಮೇಲೆ ನಾಟಿಸು. ಶೋಧನೆಗಳು ನಿನ್ನನ್ನು ನಾಶದತ್ತ ತಳ್ಳಿದಾಗ, ನೋವು ನಿನ್ನನ್ನು

ದಿಕ್ಕೆಡಿಸಿದಾಗ, ನಿನ್ನ ರಕ್ಷಣೆಯ ಬಗ್ಗೆ ಅನುಮಾನ ಪಟ್ಟು ಭಯಗ್ರಸ್ತನಾದಾಗ ಸಮುದ್ರ ನಕ್ಷತ್ರದತ್ತ ಕಣ್ಣಾಯಿಸು ನೀನು ಕೋಪಗೊಂಡಾಗ, ಲೋಭತನದಿಂದ ತುಂಬಿದನಾದಾಗ, ಆತ್ಮದ ಶಾಂತಿಯನ್ನು ಕಳೆದುಕೊಳ್ಳುವಾಗ ಸಮುದ್ರ ನಕ್ಷತ್ರವೆಂಬ ಮರಿಯಮ್ಮನವರನ್ನು ದಿಟ್ಟಿಸಿನೋಡು ಆಕೆಯ ನಾಮಧ್ಯೇಯವನ್ನು ಸ್ಮರಿಸುವವನಾಗು, ಆಕೆಯು ನಿನ್ನ ಸಹಾಯಕ್ಕೆ ಬಂದು ನೆರವಾಗುವಳು.' ದುರ್ಬಲರಿಗೆ ಆಸೆಯಾಗಿರುವ ಆಕೆಯಲ್ಲಿ ಭಕ್ತ:

ಪಾಪಿಗಳಿಗೆ ಸಂಕೋಲೆ ಬಿಡಿಸಿ
ಅಂಧಕರಿಗೆ ದೃಷ್ಟಿಯಂ ತಂದು
ನಮ್ಮ ಕಷ್ಟಗಳ ನಿವಾರಿಸಿ
ಎಲ್ಲಾ ಮೇಲುಗಳ ಬೇಡಿರಿ .

ಎಂದು ಅಕೆಯಲ್ಲಿ ತಾಯಿ–ಮಗುವಿನ ಸಂಬಂಧವನ್ನು ಹೊಂದಿ ಬೇಡಿದ್ದಾರೆ.

ಗೀತೆಯು ತನ್ನ ಗೇಯತೆಯನ್ನು ಅಲ್ಲಲ್ಲಿ ಕಳೆದುಕೊಂಡಿದೆ. ಇದಕ್ಕೆ ಉದಾಹರಣೆ ಈ ಕೆಳಗಿನ ಚರಣ:

ನೀವು ತಾಯಿಯೆಂದು ತೋರಿಸಿ
ನಮಗಾಗಿ ಉದ್ಭವಿಸಿದಂಥ
ನಿಮಗೆ ಪುತ್ರನಾದವರು
ನಿಮ್ಮಿಂದ ನಮ್ಮ ಜಪ ಕೇಳಿರಿ

ಗದ್ಯ ರೂಪದ ವಾಕ್ಯಗಳು ಕಂಡು ಬಂದಿದ್ದು ಕಾವ್ಯಗುಣ ಕಡಿಮೆಯಾಗಿದೆ.

ಸಂತ ಮರಿಯಮ್ಮ: ಮಾತೆ ಮರಿಯಮ್ಮನವರು ಸಂತ ಜೋಕಿಂ (St. Joachim) ಮತ್ತು ಸಂತ ಅನ್ನಾ (St. Anne) ಎಂಬ ದೈವ ಭಕ್ತ ದಂಪತಿಗಳಿಗೆ ಜನಿಸಿದರು. ದಾವೀದ್ ರಾಜನ ಸಂತತಿಗೆ ಸೇರಿದವರಾಗಿದ್ದರು. ಮಕ್ಕಳಿಲ್ಲದೇ ಬಳಲಿದ ಈ ದಂಪತಿಗಳ ದೀರ್ಘಕಾಲದ ಪ್ರಾರ್ಥನೆಗೆ ಪ್ರತಿಫಲವೋ ಎಂಬಂತೆ ಮರಿಯ ಜನಿಸಿದರು. ಆದರ್ಶ ತಂದೆತಾಯಿಯರ ಸರ್ವ ಗುಣಗಳು ಮರಿಯಳಿಗೆ ಬಳುವಳಿಯಾಗಿ ಬಂದಿದ್ದವು. ದಾವೀದನ ಸಂತತಿಗೆ ಸೇರಿದ ಜೋಸೇಫನೊಂದಿಗೆ ಮದುವೆ ನಿಶ್ಚಯವಾಯಿತು. ಜೂದರ ಅಂದಿನ ಸಂಪ್ರದಾಯದಂತೆ ಮದುವೆ ನಿಶ್ಚಯವಾದ ಮೇಲೆ ಮದುವೆಯಾಗುವವರೆಗೆ ಮಧುಮಗಳಾಗುವವಳು ಮನೆಬಿಟ್ಟು ಹೊರಗೆಲ್ಲು ಹೋಗುವಂತಿರಲಿಲ್ಲ. ಮರಿಯಮ್ಮ ಸಂಪ್ರದಾಯ ಬದ್ಧಳಾದಳು. ಅನಿವಾರ್ಯವಾಗಿ ಹತ್ತಿರದ ಬಾವಿಗೆ ಕುಡಿಯುವ ನೀರುತರಲು ಹೋಗಲೇ ಬೇಕಾಯಿತಂತೆ ಮರಿಯಳಿಗೆ ದೇವ ದೂತನು ಕಾಣಿಸಿಕೊಂಡನು. ಈ ಸನ್ನಿವೇಶವನ್ನು ಮತ್ತಾಯನ ಶುಭಸಂದೇಶದ[()] ಮೊದಲನೇ ಅಧ್ಯಾಯದಲ್ಲಿ ವಿವರಿಸಲಾಗಿದೆ.

"ಸರ್ವ ಶಕ್ತ ದೇವರ ಪರಿಪೂರ್ಣ ಸೃಷ್ಟಿ ಮಾತೆ ಮರಿಯಮ್ಮ."[()] ತಂದೆಯಾದ ದೇವರು ತನ್ನ ಪುತ್ರನನ್ನು ಧಾರೆಯೆರೆಯಲು ಶತಮಾನಗಳಿಂದಲೂ ದೇವರು ಯೆಹೂದ್ಯ ಜನಾಂಗವನ್ನು ಸಿದ್ಧಪಡಿಸಿದ್ದರು.

ಅವರಲ್ಲಿ ಕೆಲವರು ದೇವರ ಚಿತ್ತಕ್ಕೆ ವಿರುದ್ಧವಾಗಿ ನಡೆದು ದ್ರೋಹಿಗಳಾದರು, ಹಲವರು ಪ್ರಾಮಾಣಿಕರಾಗಿ ಬಾಳಿದ್ದರು. ಅಂತವರ ನಿಷ್ಠಾವಂತ ಬಾಳಿನ ಸಾಕಾರ ಮೂರ್ತಿಯಾದ ಮರಿಯಮ್ಮನವರು ದೇವರ ಚಿತ್ತಕ್ಕೆ ಒಡನೆಯೇ ತಲೆಬಾಗಿದರು. John calvin ಹೇಳುವಂತೆ "God saw nothing in Mary besides her poverty and He chose her purely by grace, If was not even her humility but rather her smallness, that God willed to take into account"[೧೨] ಇದು ಮಾತೆ ಮರಿಯಳಲ್ಲಿದ್ದ ಶ್ರೇಷ್ಠ ಗುಣವನ್ನು ವ್ಯಕ್ತಪಡಿಸುತ್ತದೆ. ಆಕೆಯ ಕೌಟುಂಬಿಕ ಹಿನ್ನಲೆ ಕೂಡ ಇದಕ್ಕೆ ಸಹಾಯಕವಾಯಿತು.

ಆಕೆ ಕನ್ಯೆಯಾಗಿ ಉಳಿದು ದೇವರ ಸೇವೆಗೆ ತನ್ನ ಬಾಳನ್ನು ಮುಡಿಪಾಗಿಡಲು ನಿರ್ಧರಿಸಿದ್ದಳೆಂಬುದು ದೇವದೂತರಿಗೆ ಆಕೆ ನೀಡಿದ ಉತ್ತರದಿಂದಲೇ ಸ್ಪಷ್ಟವಾಗಿದೆ. ಹೀಗೆ ಆಕೆಯ ಪೂರ್ಣ ಸಮರ್ಪಣೆಯನ್ನು ಕಾಪಾಡಿ ಆಕೆ ಕನ್ಯೆಯಾಗಿ ಉಳಿದು ದೇವಮಾತೆಯಾಗುವ ಸೌಭಾಗ್ಯವನ್ನು ಒದಗಿಸಿಕೊಟ್ಟ ಪವಿತ್ರಾತ್ಮರು ತಮ್ಮ ಪ್ರೀತಿಯ ಶಕ್ತಿಯಿಂದ ಅವರನ್ನು ತುಂಬುತ್ತಾರೆ. ದೇವದೂತನು ಆಕೆಗೆ ನುಡಿಯುತ್ತಾನೆ 'ಪವಿತ್ರಾತ್ಮರು ನಿನ್ನ ಮೇಲೆ ಇಳಿದು ಬರುವರು, ಪರಾತ್ಪರ ದೇವರ ಶಕ್ತಿಯು ನಿನ್ನನ್ನು ಆವರಿಸುವುದು.' ಹೀಗೆ ಕನ್ಯೆಯಾಗುಳಿದೂ ಮಾತೆಯಾದ ವಿಶಿಷ್ಟ ಸ್ತ್ರೀ ರತ್ನ ಮರಿಯಾ.

ಸಂತ ಮರಿಯಮ್ಮನವರು ತನ್ನ ಮಗನನ್ನು ಲೋಕದ ರಕ್ಷಣೆಗೆ ಕಳಿಸಿ ಸಪ್ತ ದುಃಖ[೧೩] ಗಳನ್ನು ಅನುಭವಿಸಿದರು ಎಂದು ಕಥೋಲಿಕಾ ಕ್ರೈಸ್ತರು ವಿಶ್ವಾಸಿಸುತ್ತಾರೆ. ಮರಿಯಳನ್ನು ಧರ್ಮಸಭೆ ಅನೇಕ ಹೆಸರುಗಳಿಂದ ಕರೆದು ಗೌರವಿಸಿದೆ. ಉದಾ:- ಕನ್ಯಾಮರಿಯಾ, ನಿಷ್ಕಳಂಕ ಮಾತೆ, ಅಮಲೋದ್ಭವ ಮಾತೆ, ಬಡವರ ಮಾತೆ, ಆರೋಗ್ಯ ಮಾತೆ, ಜನ್ಮಪಾಪ ರಹಿತ ಮಾತೆ ಇತ್ಯಾದಿ.

ಕನ್ಯೆ: ಇಬ್ರಿಯ ಭಾಷೆಯಲ್ಲಿ ಕನ್ಯೆಯನ್ನು 'ಅಲ್ಮಾ' ಎಂದು ಕರೆಯುತ್ತಿದ್ದರು. ಮದುವೆಯ ಪ್ರಾಯದ ಕನ್ಯೆ ಅಥವಾ ನವವಧು ಎಂಬುದು ಇದರ ಅರ್ಥವಾಗಿತ್ತು (ಯೆಶಾಯ ೭:೧೪). ಇಬ್ರಿಯ ಭಾಷೆಯಲ್ಲಿದ್ದ ಹಳೆ ಒಡಂಬಡಿಕೆಯನ್ನು ಗ್ರೀಕ್ ಭಾಷೆಗೆ ತರ್ಜುಮೆ ಮಾಡುವಾಗ 'ಕನ್ನಿಕೆ ಅಥವಾ ಕನ್ಯೆ' ಎಂಬ ಪದವನ್ನು (partenos) ಪಾರ್ಕ್ತಿನೋಸ್ ಕುಮಾರಿ/ಕುವರಿ ಎಂದು ಅನುವಾದ ಮಾಡಲಾಯಿತು.

ನಮಃ ಎಂಬುದು ಹಿಂದೂಗಳ ಪೂಜಾ ವೇಳೆಯಲ್ಲಿ ಅಥವಾ ದೇವತಾ ಸ್ತುತಿಯಲ್ಲಿ ಹೇಳುವ ಪದವಾಗಿದೆ. ಇಲ್ಲಿ ಮಾತೆಯಮರಿಯಮ್ಮನನ್ನು ಸ್ತುತಿಸಲು ಬಳಸಲಾಗಿದೆ, ಹಿಂದೂ ಸಂಸ್ಕೃತಿಯ ಅಳವಡಿಕೆಯನ್ನು ಇಲ್ಲಿ ಕಾಣುತ್ತೇವೆ.

ಜಪದ ಪುಸ್ತಕ ಈ ಪ್ರಾರ್ಥನಾ ಪುಸ್ತಕದಲ್ಲಿ ಸಾಹಿತ್ಯಿಕವಾಗಿ ಎರಡು ವಿಷಯಗಳನ್ನು ಗಮನಿಸಬಹುದು. ಲಿಟನಿ (Litany) ಎನ್ನುವ ಪ್ರಾರ್ಥನೆ ಪ್ರಕಾರ ಮತ್ತು ವೈವಿಧ್ಯಮಯವಾದ ಗದ್ಯ ರೂಪದ ಪ್ರಾರ್ಥನೆಗಳು. "ದೇವರ ತಾಯಿಯ ಪ್ರಾರ್ಥನೆ"[೧೪] ಎಂಬುದು ಲಿಟಲಿಯ ರೂಪದಲ್ಲಿದೆ. 'ಲಿಟನಿ' ಎಂದರೆ ದೇವರನ್ನೋ ಒಬ್ಬ ಸಂತನನ್ನೋ ಉದ್ದೇಶಿಸಿ ಹೇಳುವ ಪ್ರಾರ್ಥನೆ. ಅಥವಾ "ಒಬ್ಬ ಉದ್ಧಿಷ್ಟ ವ್ಯಕ್ತಿಯನ್ನು ಹಲವು ನಾಮಗಳಿಂದ ಸ್ತುತಿಸಿ ಮೊರೆಹೊಕ್ಕು ಅವರ ಕರುಣೆಯನ್ನೊ (ದೇವರಾದರೆ) ಅನುಗ್ರಹವನ್ನೋ

(ದೇವರಲ್ಲದಿದ್ದರೆ) ಬೇಡಿಕೊಳ್ಳುವುದು ಕ್ರಮ."[೧೫] ಭಕ್ತರು ತಮಗೆ ದೊರೆತ ಉಪಕಾರಗಳನ್ನು ಸ್ಮರಿಸಿ ಸ್ತುತಿಸುವುದಕ್ಕೂ ತಮ್ಮ ಅಗತ್ಯತೆಗಳನ್ನು ಪೂರೈಸಿಕೊಳ್ಳುವ ಉದ್ದೇಶದಿಂದಲೂ ಲಿಟನಿಯನ್ನು ಜಪಿಸುತ್ತಾರೆ. ಹೀಗಾಗಿ ಲಿಟನಿ ಎಂದರೆ ಭಕ್ತ ತನ್ನ ಭಕ್ತಿ, ಪ್ರೀತಿ ಮತ್ತು ನಂಬಿಕೆ ಆತ್ಮೀಯತೆಯನ್ನು ನಿರ್ಧಿಷ್ಟ ವ್ಯಕ್ತಿಯೊಂದಿಗೆ ಅಭಿವ್ಯಕ್ತ ಪಡಿಸುವ ವಿಧಾನ. ಇಲ್ಲಿಯ ಒಂದೊಂದು ಸ್ತುತಿ ವಚನಗಳು ಮಾತೆ ಮರಿಯಮ್ಮ, ಮಮತೆಯ ತಾಯಿ ಆಕೆಯಂತೆ ಮೌಲ್ಯಯುತ ಬಾಳನ್ನು ಬಾಳಲು ಸಹಾಯ ಮಾಡುವಂತೆ ಕೋರುವ ಹಾಗೂ ಈ ಬದುಕಿನ ಕಷ್ಟ ಸಂಕಷ್ಟಗಳಲ್ಲಿ ನೆರವಾಗಬೇಕೆಂದು ಭಿನ್ನವಿಸುವ ಬಗೆಯನ್ನು ವ್ಯಕ್ತಪಡಿಸುತ್ತದೆ. ಉದಾ: ದೇವರ ಮಾತೆಯ ಲಿಟನಿಯ ಕೆಲವು ಸಾಲುಗಳನ್ನು ನೋಡಬಹುದು (ಒಂದೊಂದು ವಚನದ ಕೊನೆಯಲ್ಲಿ 'ನಮಗಾಗಿ ಬೇಡಿಕೊಳ್ಳಿ' ಎಂಬ ಪ್ರಾರ್ಥನೆಯನ್ನು ಎಲ್ಲರೂ ಸೇರಿ ಹೇಳುವರು)

ನೀತಿಯ ಕನ್ನಡಿಯೇ	ನಮಗಾಗಿ ಬೇಡಿಕೊಳ್ಳಿ
ಜ್ಞಾನಕ್ಕಿರುವ ಸ್ಥಳವೇ	,,
ನಮ್ಮ ಸಂತೋಷಕ್ಕೆ ಕಾರಣವೇ	,,
ಜ್ಞಾನ ಪಾತ್ರೆಯೇ	,,
ಮಹಿಮೆಯಾದ ಪಾತ್ರೆಯೇ	,,

ಜಪದ ಪುಸ್ತಕ ೧೯೩೦, ಪುಟ–೬೨

ಭಕ್ತ, ಮಾತೆ ಮರಿಯಳನ್ನು ಹೊಗಳುವ ಈ ಲಿಟನಿಯಲ್ಲಿ ರೂಪಕಾಲಂಕಾರಗಳ ಬಳಕೆ ಅತಿ ಹೆಚ್ಚಾಗಿ ಬಳಕೆಯಾಗಿದ್ದು ಕೇಳುವ ಕರ್ಣಕ್ಕೆ ಇಂಪನ್ನು, ಆತ್ಮ ತೃಪ್ತಿಯನ್ನು ತಂದುಕೊಡುವ ಒಂದು ವಿಶಿಷ್ಟ ಗೀತೆಯಾಗಿದೆ. ಇಂದು ಭಕ್ತರು ಲಿಟನಿಯನ್ನು ಸಂಧ್ಯಾ ಪ್ರಾರ್ಥನೆಯಲ್ಲಿ ಬಳಸುತ್ತಾರೆ.

ಆತ್ಮ ನಿವೇದನೆ: ಆತ್ಮ ನಿವೇದನೆಗೆ ಸಂಬಂಧಿಸಿದಂತೆ 'ಸ್ವಾಮಿ ದಯತೋರಿ' ಎಂಬ ಮೂರು ಸಾಲಿನ ಗೀತೆಯು ಇದೆ. ಇದು ಲ್ಯಾಟಿನ್ ಭಾಷೆಯ ಕಿರಿಯೇ ಎಲೆಯಿಸೋನ್(Kiri a elison) ಎಂಬ ಗೀತೆಯ ಭಾಷಾಂತರ. ಧರ್ಮಸಭೆಯ ಪ್ರಾರಂಭದಿಂದಲೇ ನಾಮಸ್ಮರಣೆಯ ರೂಪದಲ್ಲಿ ರೂಢಿಯಾಗಿ ಬಂದ ಪ್ರಾರ್ಥನೆಯ ಕಾವ್ಯಾತ್ಮಕ ಅನುವಾದ ಇದು. ಕ್ರಿಸ್ತನ ನಾಮಸ್ಮರಣೆ ಮಾಡಿ, ಕ್ಷಮೆಯನ್ನು ಬೇಡಿ, ಆತ್ಮ ಶುದ್ಧಿಗೊಳಿಸುವುದು ಈ ಗೀತೆಯ ಆಶಯವಾಗಿದೆ.

ಸ್ವಾಮಿ, ದಯವಾಗಿರಿ
ಕ್ರಿಸ್ತುವೆ, ದಯವಾಗಿರಿ
ಸ್ವಾಮಿ, ದಯವಾಗಿರಿ

ಜಪದ ಪುಸ್ತಕ, ಪುಟ–೧೨೧

ಇದರಲ್ಲಿ ಉಲ್ಲೇಖಿಸಿದ ಮೂರು ಉದ್ಗಾರಗಳು ಪರಮ ಪೂಜ್ಯ ತತ್ವದ ಪಿತಾ, ಸುತಾ ಮತ್ತು ಪವಿತ್ರಾತ್ಮ ಎಂಬ ಮೂರು ವ್ಯಕ್ತಿಗಳನ್ನು ಸಂಭೋದಿಸಿ ತೆಗೆದವುಗಳಲ್ಲ, ಮೂರು ಮನುಷ್ಯವತಾರ ತಾಳಿದ

ಯೇಸು ಕ್ರಿಸ್ತರನ್ನೇ ಸಂಬೋಧಿಸಿದಂತವುಗಳಾಗಿವೆ. ಇದು ೨ನೇ ಶತಕದಲ್ಲಿ ಕ್ರೈಸ್ತ ಭಕ್ತಿ ಸಾಹಿತ್ಯದಲ್ಲಿ ಪ್ರವೇಶಿಸಿದ್ದು ಇದನ್ನು ಬಲಿಪೂಜೆಯ ಆರಂಭದ ಹಂತದಲ್ಲಿ ಪಾಪನಿವೇದನ ವಿಧಿಯ ಕೊನೆಗೆ ಹಾಡುವುದು ಧರ್ಮಸಭೆಯಲ್ಲಿ ಆರಂಭದಿಂದಲೇ ರೂಢಿಯಲ್ಲಿದೆ.

ಪ್ರಾರ್ಥನೆ: ಬಲಿಪೂಜೆಗೆ ಭಕ್ತಿ ಮತ್ತು ಗೌರವದಿಂದ ಭಾಗಿಯಾಗುವುದು ಕ್ರೈಸ್ತ ಸಮುದಾಯದಲ್ಲಿ ಪ್ರಾರಂಭದಿಂದಲೂ ರೂಢಿಯಲ್ಲಿದೆ. ಬಲಿಪೂಜೆಯಲ್ಲಿ ಯೇಸುವನ್ನು ಸ್ವೀಕರಿಸುವ ಸಮಯವನ್ನು ಭಕ್ತಿ ಮತ್ತು ಗೌರವದಿಂದ ನಡೆಸಲಾಗುವುದು. ಸ್ವೀಕರಿಸುವ ಪೂರ್ವದಲ್ಲಿ "ಕರ್ತರೇ ತಾವು ನನ್ನ ಮನೆಯೊಳಗೆ ಬರುವುದಕ್ಕೆ ನಾನು ಯೋಗ್ಯನಲ್ಲ. ಆದರೆ ಒಂದು ಮಾತನ್ನು ಮಾತ್ರ ಹೇಳಿ ಆಗ ನನ್ನ ಆತ್ಮವು ಸ್ವಸ್ತವಾಗುವುದು."[೧೬] ಪರಮ ಪ್ರಸಾದವನ್ನು ಸ್ವೀಕರಿಸಿದ ನಂತರ ತನ್ನ ಹೃದಯಕ್ಕೆ ಆಗಮಿನಿಸಿ ಯೇಸುವನ್ನು ವಂದಿಸಿ, ಆರಾಧಿಸುವುದರೊಂದಿಗೆ ಆತನಲ್ಲಿ ತನ್ನ ಬದುಕನ್ನು ಸಂಪೂರ್ಣವಾಗಿ ಬದಲಾಯಿಸುವಂತೆ ಬೇಡಿಕೊಳ್ಳುವ ಗೀತೆ ಇಂತಿದೆ (ಜಪದ ಪುಸ್ತಕ, ೧೯೮೦ ಪುಟ-೨೫೭).

ಈ ಗೀತೆಯು ಸಂತ ಅಗ್ನಿ ಸ್ವಾಮಿಯವರು ಬರೆದ 'ಆತ್ಮೀಕ ಸಾಧನ' (Spiritual Exercise) ಎಂಬ ಗ್ರಂಥದಲ್ಲಿ ಪರಂಪರಾಗತವಾಗಿ ಈ ಪ್ರಾರ್ಥನೆಯು ಮುದ್ರಿಸಲ್ಪಟ್ಟಿದ್ದುಂಟು. ಆದರೆ ೧೫೨೨ರಲ್ಲಿ ಸ್ಪೇನ್ ದೇಶದಲ್ಲಿಯ ಮನ್‌ರೇಸಾ ಎಂಬ ಗುಹೆಯಲ್ಲಿ ಅವರು ಬರೆದ ಸ್ವ ಹಸ್ತ ಪ್ರತಿಯಲ್ಲಾಗಲೀ ಮುಂದೆ ಲ್ಯಾಟಿನ್ ಭಾಷೆಯಲ್ಲಿ ಮುದ್ರಿಸಲ್ಪಟ್ಟ ಭಾಷಾಂತರಗಳಲ್ಲಾಗಲೀ ಇದನ್ನು ಸೇರಿಸಿದ್ದಿಲ್ಲ. ೧೫೪೮ರಲ್ಲಿ ವಿಲ್ಕ ನಗರದಲ್ಲಿ ಮುದ್ರಿಸಿದ 'ಆತ್ಮೀಕ ಸಾಧನೆ'ಯ ಪ್ರತಿಗಳಲ್ಲಿ ಈ ಪ್ರಾರ್ಥನೆಯು ಮೊದಲನೆಯ ಸಲ ಕಾಣುತ್ತದೆ. ಅಂದಿನಿಂದ ಈ ಆತ್ಮೀಕ ಸಾಧನಾ ಗ್ರಂಥದಲ್ಲಿ ಇದನ್ನು ಮುದ್ರಿಸುವುದು ರೂಢಿಯಾಗಿ ಬಂದಿದೆ.

ಇದರ ಉಪಯೋಗದ ಉಲ್ಲೇಖವು ಸದ್ರಿ ಆತ್ಮೀಕ ಸಾಧನೆಯಲ್ಲಿ ನಾಲ್ಕು ಸಲ ಬೇರೆಬೇರೆ ಸಂದರ್ಭಗಳಲ್ಲಿ ಕಂಡುಬರುತ್ತದೆ. ಇದರಿಂದ ಈ ಪ್ರಾರ್ಥನೆಯು ಈಗಿನಂತೆ ಆ ಕಾಲದಲ್ಲಿಯೂ ಎಲ್ಲರಿಗೂ ಗೊತ್ತಿದ್ದದಾಗಿತ್ತು ಎಂಬುದು ಖಚಿತವಾಗುತ್ತದೆ. ಇಂದೂ ಭಕ್ತಜನರ ಮೆಚ್ಚಿನ ಪ್ರಾರ್ಥನೆಯಾಗಿ ಉಳಿದಿದೆ.

ಅರ್ಚ ಶಿಷ್ಟ: ಪವಿತ್ರ ಹಾಗೂ ಸಂತ ಎಂಬ ಅರ್ಥಗಳಲ್ಲಿ ಅರ್ಚ ಶಿಷ್ಟ ಪದ ಬಳಕೆಯಾಗಿದೆ. Saint, Holy (ಇಂಗ್ಲೀಷ್) ಮತ್ತು Sanctus (ಲ್ಯಾಟಿನ್) ಇವು ಈ ಸಮಾನಾರ್ಥಕದ ಮೂಲಪದಗಳು. ಇವುಗಳಲ್ಲಿ Saint ವ್ಯಕ್ತಿಯನ್ನು ಮಾತ್ರ ನಿರ್ದೇಶಿಸುವ ಪದ. Sanctus ಪವಿತ್ರ ಎಂಬರ್ಥದ ವಿಶೇಷಣವಾಗಬಹುದು. 'ಅರ್ಚ' ಎಂಬ ಸಂಸ್ಕೃತ ಮೂಲ ಧಾತುನಿಂದಲೂ, 'ಶಿಷ್ಟ' ಎಂಬ ಸಂಸ್ಕೃತ ಶಬ್ಧದಿಂದಲೂ ಉಂಟು ಮಾಡಲ್ಪಟ್ಟ ಸಮಾನ ಪದವಾಗಿದೆ. ಇಂದು ಈ ಪದವು ಬಳಕೆಯಲ್ಲಿಲ್ಲ. ಆದರೆ ಇದನ್ನು ಸಮನಾರ್ಥಕ ಪದವನ್ನಾಗಿ ಬಳಸಲಾಗಿದೆ.

ಆಮೆನ್: ಇದು ಹೀಬ್ರು ಪದ. ಅರ್ಥ 'ತಥಾಸ್ತು, ಹಾಗೆಯೇ ಆಗಲಿ' ಇದನ್ನು ನಿಶ್ಚಯವಾಗಿ, ನಿಜವಾಗಿ, ಸತ್ಯವಾಗಿ ಎಂದು ಅನುವಾದಿಸಬಹುದು. ಪ್ರಕಟಣೆಯ ಪುಸ್ತಕದಲ್ಲಿ ಪ್ರಭು ಕ್ರಿಸ್ತರ ಹೆಸರಿಗೆ ಬದಲಾಗಿ ಈ

ಪದವನ್ನು ಬಳಸಲಾಗಿದೆ. ಅವರು ತಮ್ಮ ವಚನಕ್ಕೆ ಅನುಗುಣವಾಗಿದ್ದುದರಿಂದ ಈ ಬಿರುದು ಅವರಿಗೆ ಅನ್ವರ್ಥವಾಗಿದೆ (ಪ್ರಕಟಣೆ ೩:೧೪).

ಹಬ್ಬಗಳು: ನಮ್ಮ ಸಮಾಜದಲ್ಲಿ ಕಾಣುವ ಒಂದು ವಿಶಿಷ್ಟ ಸಂಗಂತಿಯೆಂದರೆ ಎಲ್ಲ ಧರ್ಮೀಯರು ತಮ್ಮದೇ ಆದ ಧಾರ್ಮಿಕ ಹಬ್ಬಗಳನ್ನು ಆಚರಿಸುತ್ತಿರುವುದು. ಕ್ರೈಸ್ತ ಮಿಶನರಿಗಳು ಕ್ರೈಸ್ತ ಧಾರ್ಮಿಕ ಹಬ್ಬಗಳಿಗೆ ಸಂಬಂಧಪಟ್ಟ ಗೀತೆಗಳನ್ನು ಬರೆಯುವುದರೊಂದಿಗೆ ಈ ನಾಡಿನ ಸಂಸ್ಕೃತಿಯನ್ನು ಆಧರಿಸಿ ಗೌರವಿಸಿದ್ದರ ಸಂಕೇತವಾಗಿ ಅವರು ಸುಗ್ಗಿಕಾಲಗಳಿಗೆ, ಯುಗಾದಿ, ದೇಶಭಕ್ತಿಗೆ ಸಂಬಂಧಪಟ್ಟ ಹಾಡುಗಳನ್ನು ರಚಿಸಿದ್ದಾರೆ.

ಪಂಚಾಶತ್ತಮದ ಹಬ್ಬಕ್ಕೆ ಸಂಬಂಧಿಸಿದ ಗೀತೆ: ಪಂಚಾಶತ್ತಮ ಇದು ಮೊಟ್ಟಮೊದಲು ಯೆಹೂದ್ಯರು ಏರ್ಪಡಿಸಿದ ಹಬ್ಬ. ಪಸ್ಕ ಹಬ್ಬದ ಮೊದಲನೆಯ ದಿನದಿಂದ ಲೆಕ್ಕ ಮಾಡಿ ಐವತ್ತನೆಯ ದಿನದಲ್ಲಿ ಇದನ್ನು ಆಚರಿಸುತ್ತಿದ್ದರು. ಇದಕ್ಕೆ ವಾರಗಳ ಹಬ್ಬವೆಂಬ ಹೆಸರೂ ಇದ್ದಿತು. ಏಕೆಂದರೆ ಇದು ಪಸ್ಕ ಹಬ್ಬದ ತರುವಾಯ ವಾರಗಳ ಒಂದು ವಾರವು ಎಂದರೆ ಏಳು ವಾರಗಳು ಕಳೆದ ಮೇಲೆ ನಡೆಯುತ್ತಿದ್ದಿತು (ಯಾಜಕಕಾಂಡ ೨೩:೧೫-೨೦). ಹೊಸಒಡಂಬಡಿಕೆಯಲ್ಲಿ ಈ ಹಬ್ಬವು ಯೇಸುವಿನ ಪುನರುತ್ಥಾನದ ಐವತ್ತನೇ ದಿನದಲ್ಲಿ ಯೇಸು ಪವಿತ್ರಾತ್ಮರನ್ನು ಶಿಷ್ಯರ ಮೇಲೆ ಕಳುಹಿಸಿದ ದಿನವನ್ನು ಸ್ಮರಿಸಲು ಆಚರಿಸಲಾಗುತ್ತದೆ. ಈ ಹಬ್ಬದ ಕುರಿತಾದ ಗೀತೆ ಜಪದ ಪುಸ್ತಕದಲ್ಲಿ ಕಂಡು ಬರುತ್ತದೆ.

ಪವಿತ್ರ ಆತ್ಮರು ತನ್ನ ಹೃದಯದಲ್ಲಿ ಬಂದು ನೆಲೆಸಿ ತನ್ನನ್ನು ಸಂಪೂರ್ಣವಾಗಿ ಪರಿವರ್ತಿಸಲಿ ಎಂದು ಬೇಡುವ ಗೀತೆ 'ದಿವ್ಯ ಸ್ಪಿರಿತು ಸಾಂಕ್ತುವಿಗೆ ಸೋತ್ರವಾದ ಮಂತ್ರವು'[೧೬] ಗೀತೆಯಲ್ಲಿ ವ್ಯಕ್ತವಾಗಿದೆ. ಪವಿತ್ರಾತ್ಮರ ಸಪ್ತವರಗಳಿಂದ ಭಕ್ತನ ಹೃದಯವು ತುಂಬಿದಾಗ ತನ್ನ ಇಹದ ಬಾಳು ಸುಗಮವಾಗುತ್ತದೆಂಬ ಆಶಯವನ್ನು ಈ ಗೀತೆ ಹೊಂದಿದೆ.

	ಜಪದ ಪುಸ್ತಕದಲ್ಲಿನ ಗೀತೆ (೧೯೩೦)		**ಚೇತನದಲ್ಲಿನ ಗೀತೆ (೨೦೦೪)**
೧	ಸ್ಪಿರಿತು ಸಾಂಕ್ತುವೇ ಬನ್ನಿ		ಪವಿತ್ರಾತ್ಮರೇ ಬನ್ನಿ
	ನಿಮ್ಮ ತೇಜದ ಪ್ರಭೆಯಂ		ನಿಮ್ಮಯ ತೇಜದ ಪ್ರಭೆಯನು ಬೀರಿ
	ಪರಲೋಕದಿಂದ ಬೀಸಿ ಬಿಡಿರಿ	೧	ಬಡವರ ಪಿತರೇ ದೀನರ ಪಾಲರೇ
೨	ದರಿದ್ರರ ಪಿತನೇ		ವರಗಳ ದಾತರೆ ಹೃದಯದ ದೀಪವೇ
	ದತ್ತಗಳ ದಾಯಕರೇ		ಆತ್ಮದೊಳೆಮ್ಮಯ ಒಲುಮೆಯ ವಾಸಿಯೇ
	ಹೃದಯದ ದೀಪವೇ ಬನ್ನಿ	೨	ದಣಿದರ್ಗೆ ಸುಖವೇ ಬಿಸಲಲಿ ತಣಿವೇ
			ದುಃಖದ ಶಾಂತಿಯೇ ಭಾಗ್ಯದ ಜ್ಯೋತಿಯೇ
			ನಿಮ್ಮಯ ಆಪ್ತರ ಅಂತರ ವಾಸಿಯೇ.

ಜಪದ ಪುಸ್ತಕದಲ್ಲಿ ಈ ಗೀತೆಯು ೯ ಚರಣಗಳನ್ನು ಹೊಂದಿದೆ. ಆದರೆ ಚೇತನ ಗೀತ ಪುಸ್ತಕದಲ್ಲಿ ಕೇವಲ ೫ ಚರಣಗಳನ್ನು ಮಾತ್ರ ಇದು ಹೊಂದಿದೆ. ಬಿಟ್ಟು ಹೋದ ಚರಣಗಳ ಅರ್ಥವನ್ನು ಬೇರೆ

ಚರಣಗಳಲ್ಲಿಯೇ ಪಡೆಯಬಹುದಾದ್ದರಿಂದ ಈ ಚರಣಗಳನ್ನು ಬಿಟ್ಟಿರಬಹುದು ಎಂದು ಊಹಿಸಬಹುದು.

ಜಪದ ಪುಸ್ತಕದಲ್ಲಿನ ಸ್ಪೀರಿತು ಸಾಂಕ್ತು, ದರಿದ್ರರ ಪಿತರೇ, ದತ್ತಗಳ ದಾಯಕರೇ ಎಂಬ ಪದಗಳು ಕ್ರಮವಾಗಿ ಚೇತನದಲ್ಲಿ ಪವಿತ್ರ ಆತ್ಮರೇ, ಬಡವರ ಪಿತರೇ, ವರಗಳ ದಾತರೇ ಎಂದು ಬದಲಾಗಿದೆ.

ಪವಿತ್ರ ಆತ್ಮರನ್ನು ಬಡವರ ಪಿತ, ವರಗಳ ದಾತ, ಭಾಗ್ಯದ ಜ್ಯೋತಿ, ದುಃಖದ ಶಾಂತಿ ಎಂದು ವರ್ಣಿಸಲಾಗಿದೆ.

ಸ್ಪೀರಿತು ಸಾಂಕ್ತು: ಲ್ಯಾಟಿನ್ ಭಾಷೆಯ Spiritus Sanctus (Holy Spirit, Holy Ghost) ಪದವನ್ನು ಸರಳೀಕರಿಸಿ, ಪದಾಂತ್ಯದ 'ಸ'ಕಾರಗಳನ್ನು ಕನ್ನಡದಲ್ಲಿ ಬಿಡಲಾಗಿದೆ. ಆಧುನಿಕ ಸಾಹಿತ್ಯದಲ್ಲಿ ಪವಿತ್ರಾತ್ಮ ಎಂಬ ಸಮನಾರ್ಥಕ ಪದ ಇದಕ್ಕೆ ಸಂವಾದಿಯಾಗಿ ಬಳಕೆಯಲ್ಲಿದೆ.

ಜಪದ ಪುಸ್ತಕದಲ್ಲಿ ಬರುವ ಗೀತೆಗಳ ವೈಶಿಷ್ಟ್ಯತೆಗಳು:

೧. ಮೂಲಭಾಷೆಯ ಪದಗಳಾದ ಸ್ತಿರಿತು ಸಾಂಕ್ತು (Holy Spirit) ಆಮೆನ್ (Amen) ಸಂತ (Saint), ಕಿರಿಯೇ ಪದಗಳನ್ನು ಅಂದರೆ ಲ್ಯಾಟಿನ್, ಹೀಬ್ರೂ ಭಾಷೆಗಳ ಪದವನ್ನು ಕನ್ನಡಕ್ಕೆ ಭಾಷಾಂತರಿಸಿದ್ದರಿಂದ ಕ್ರೈಸ್ತ ಧಾರ್ಮಿಕ ಚಿಂತನೆಗಳನ್ನು ಅರ್ಥೈಸಲು ಸಾಧ್ಯವಾಯಿತು.

೨. ಸಂಸ್ಕೃತ ಪದಗಳನ್ನು ರಚಿಸಿ ಗೀತೆ ರಚಿಸಿದ್ದರಿಂದ ಸಮಾಜದ ಎಲ್ಲಾ ವರ್ಗದ ಜನರು ತಿಳಿದುಕೊಳ್ಳಲು ಸಹಾಯಕವಾಯಿತು. ಉದಾ: ಆರ್ಚ ಶಿಷ್ಟ.

೩. ಸಂಸ್ಕೃತ ಮತ್ತು ಕನ್ನಡವನ್ನು ಸಮ ಪ್ರಮಾಣದಲ್ಲಿ ಬಳಸುವ ಪ್ರತಿಭೆ ಈ ಮಿಶನರಿಗಳಲ್ಲಿತ್ತು.

೪. ಗೀತೆಗಳಲ್ಲಿ ರೂಪಕಗಳ ಬಳಕೆ ಕಂಡು ಬಂದಿದೆ. ಉದಾ: ಸಂತ ಮರಿಯಳನ್ನು ನೀತಿಯ ಕನ್ನಡಿ, ಜ್ಞಾನದ ಪಾತ್ರೆ ಎಂದೆಲ್ಲ ವರ್ಣಿಸಲಾಗಿದೆ.

೫. ಧಾರ್ಮಿಕ ಶಿಸ್ತಿಗೆ ಸಂಬಂಧಪಟ್ಟ ಅಂಶಗಳನ್ನು ಸಾಮಾನ್ಯ ಕ್ರೈಸ್ತರಿಗೆ ತಿಳಿಸುವ ಉದ್ದೇಶ ಈ ಗೀತೆಗಳಲ್ಲಿ ಈಡೇರಿದೆ.

೬. ನವೀನ ಮಾದರಿಯ ಪ್ರಾರ್ಥನಾ ಪ್ರಕಾರದ ಬಳಕೆ. ಉದಾ: ಲಿಟನಿ. ದೇವರನ್ನು, ಒಬ್ಬ ಸಂತನನ್ನು ಉದ್ದೇಶಿಸಿ ಹೇಳುವ ಪ್ರಾರ್ಥನೆ ಅಥವಾ ಒಬ್ಬ ಉದ್ದಿಷ್ಟ ವ್ಯಕ್ತಿಯನ್ನು ಹಲವು ನಾಮಾವಳಿಗಳಿಂದ ಸ್ತುತಿಸಿ, ಬೇಡಿಕೊಳ್ಳುವ ಕ್ರಮ ಒಂದು ವಿಶಿಷ್ಟ ಸ್ತುತಿಯ ಪ್ರಕಾರವಾಗಿದೆ.

೭. ಕಥೋಲಿಕಾ ಧರ್ಮದ ಪ್ರಮುಖ ಗುಣಧರ್ಮಗಳಲ್ಲಿ ಒಂದಾದ ಸಂತರುಗಳನ್ನು ಗೌರವಿಸುವ ವಿಧಾನ ಹಾಗೂ ಈ ಸಂತರುಗಳಲ್ಲಿ ಇವರಿಗಿರುವ ಭಕ್ತಿ ಅವರ ಮೂಲಕ ದೇವರ ಸಹಾಯವನ್ನು ಕೋರುವ ಬಗೆ ಗೀತೆಗಳಲ್ಲಿ ಉತ್ತಮವಾಗಿ ಮೂಡಿ ಬಂದಿದೆ.

೮. ಕೆಲವೊಂದು ಚರಣಗಳನ್ನು ಇಂದಿನ ದಿನಗಳಲ್ಲಿ ಬಳಸದಿರಲು ಕಾರಣ ಆ ಚರಣಗಳಲ್ಲಿನ ಅರ್ಥವು ಇಂದು ಬಳಸುವ ಗೀತೆಗಳಲ್ಲಿನ ಕೆಲವೇ ಚರಣಗಳಲ್ಲಿ ಹಿಡಿದಿಟ್ಟಿರುವುದೇ ಆಗಿದೆ.

೯. ಗೀತೆಗಳಲ್ಲಿ ಕೆಲವೊಂದು ಸಾಲುಗಳು ಗೇಯತೆಯಿಂದ ಕೂಡಿದ್ದರೆ ಮತ್ತೆ ಕೆಲವು ಗೀತೆಗಳು ಗದ್ಯರೂಪವನ್ನು ಹೊಂದಿರುವುದು ಕಂಡು ಬರುತ್ತದೆ.

೧೦. ಕಥೋಲಿಕ ಮತದ ಧಾರ್ಮಿಕ ಮೌಲ್ಯವನ್ನು ಪ್ರಚುರ ಪಡಿಸುವಲ್ಲಿ ಈ ಗೀತೆಗಳು ಯಶಸ್ವಿಯಾಗಿದೆ. ಉದಾ: ಸಂತರ ಮೇಲಿರುವ ಭಕ್ತನ ವಿಶ್ವಾಸ ಪ್ರಕಟಣೆ, ಪರಮ ಪ್ರಸಾದವನ್ನು ಸ್ವೀಕರಿಸಿದಾಗ ಬಳಸುವ ಪ್ರಾರ್ಥನೆ, ಕ್ರಿಸ್ತ ವಿಶ್ವಾಸ ಮತ್ತು ಆಧ್ಯಾತ್ಮಕತೆಯನ್ನು ಎತ್ತಿಹಿಡಿದಿರುವ ಗೀತೆಯಾಗಿದೆ. ಕ್ರಿಸ್ತರ ಶರೀರ, ಆತನ ಪಾಡು ಮರಣ, ರಕ್ತ ಗಾಯಗಳು ಇವುಗಳನ್ನು ಭಕ್ತ ಅತೀ ಭಕ್ತಿಯಿಂದ ವ್ಯಕ್ತಪಡಿಸಿದ್ದಾನೆ.

೧೧. ನಮಃ ಎಂಬುದು ಹಿಂದುಗಳು ಪೂಜಾವಿಧಿಗಳಲ್ಲಿ ಬಳಸುವ ಪದವಾಗಿದೆ. ಭಾರತದ ಸಂಸ್ಕೃತಿಯನ್ನು ಪ್ರಚುರ ಪಡಿಸುವಲ್ಲಿ ಈ ಶಬ್ಧ ಬಳಕೆಯಾಗುತ್ತದೆ. ಉದಾ: ಒಬ್ಬ ಸಂತರ ಗುಣಗಾನ ಮಾಡುವಾಗ ಈ ಪದ ಬಳಕೆಯಾಗಿರುವುದನ್ನು ಕಾಣುತ್ತೇವೆ. ಹಿಂದೂ ಸಂಸ್ಕೃತಿಯ ಅಳವಡಿಕೆ ಇಲ್ಲಿ ಕಾಣಬಹುದು.

೪.೩ ತಿಯೊದೊರ್- ಅಂದ್ರೆ ಜೆರ್ಬಿಯೆರ್ (ಸು.೧೮೫೦-೧೯೧೧)

"ಫ್ರೆಂಚ್ ಮಿಶನರಿಯಾಗಿ ೧೮೭೭ರಲ್ಲಿ ಮೈಸೂರಿಗೆ ಆಗಮಿಸಿದ ಮತ್ತೊರ್ವ ಪ್ರತಿಭಾವಂತ ಮಿಶನರಿಯೇ ತಿಯೊದೊರ್ ಅಂದ್ರೆ ಜೆರ್ಬಿಯೆರ್. ಇವರು ಚಿಕ್ಕಬಳ್ಳಾಪುರ, ಬೆಂಗಳೂರು, ಶಿವಮೊಗ್ಗ, ಶೆಟ್ಟಿಹಳ್ಳಿಗಳಲ್ಲಿ ಧರ್ಮಗುರುವಾಗಿ ಸೇವೆ ಸಲ್ಲಿಸಿದರು. ೧೮೯೪ರಲ್ಲಿ ಬೆಂಗಳೂರಿನ ಮೈನರ್ ಸೆಮಿನರಿಯ ಮೇಲಾಧಿಕಾರಿಯಾಗಿ ನೇಮಕರಾದರು. ಹಲವು ಕನ್ಯಾಸ್ತ್ರೀಯರ ಸಂಸ್ಥೆಗಳ ಧಾರ್ಮಿಕ ಕ್ಷೇಮಪಾಲನೆಯ ಜವಾಬ್ದಾರಿಯೂ ಇವರದ್ದಾಗಿತ್ತು. ಇಂಗ್ಲೀಷ್, ಕನ್ನಡ, ತಮಿಳು ಭಾಷೆಗಳನ್ನು ಇವರು ಚೆನ್ನಾಗಿ ಕಲಿತು ಇಂಗ್ಲೀಷ್, ಫ್ರೆಂಚ್ ಮತ್ತು ಕನ್ನಡ ಭಾಷೆಗಳಲ್ಲಿ ಹಲವು ಪುಸ್ತಕಗಳನ್ನು ರಚಿಸಿದರು."[೧೮]

"ಜೆರ್ಬಿಯೆರ್ ಬರೆದ ಹಲವು ಹಸ್ತ ಪ್ರತಿಗಳನ್ನು ಲೋನೇ (ಮೆಮೊರಿಯಲ್) ಉಲ್ಲೇಖಿಸಿದ್ದರೂ ಅವು ಅನುಪಲಬ್ಧ. ಅವುಗಳ ಹೆಸರುಗಳು ಹೀಗಿವೆ: ಸುವಿಶೇಷವು, ಅಪೋಸ್ತೊಲರ ಕ್ರಿಯೆಗಳು, ಆತ್ಮದ ಆಪತ್ತುಗಳು, ದೇವಭಕ್ತಿಯ ಮಾರ್ಗವು, ದಿವ್ಯ ಬಾಲರಾದ ಯೇಸುವನ್ನು ಕುರಿತು, ಧ್ಯಾನದ ಸಾಧಕವು, ಸತ್ಪ್ರಸಾದ ಆಯತ್ತವು; ಮರಿಯ ಲತಸ್ತೆಂಬಳ ಚರಿತ್ರೆ, ಮರಿಯ ಲತಸ್ತೆಂಬಳು ಬರೆದ ಪುಸ್ತಕ; ಮುಕ್ತಿಹೊಂದಿದ ಮಾರ್ಗರಿತ್ ಮರಿಯವೆಂಬವಳ ಚರಿತ್ರೆ, ಇವುಗಳಲ್ಲಿ ಸುವಿಶೇಷವು ಮತ್ತು ಅಪೋಸ್ತೊಲರ ಕ್ರಿಯೆಗಳು ಬೈಬಲಿನ ಹೊಸಒಡಂಬಡಿಕೆಯ ಭಾಗಗಳಾಗಿವೆ.

ಈತನು ಬರೆದ ಕೃತಿಗಳು ಇಂತಿವೆ.

೧. ಪರಲೋಕರಾಜ್ಯದ ಬೀಗದಕೈ ಆಗಿರುವ ಪಶ್ಚಾತ್ತಾಪವೆಂಬ ದೇವದ್ರವ್ಯ ಅನುಮಾನವು -೧೮೮೧

೨. ಜೇಸುವಿನ ದಿವ್ಯ ಹೃದಯದ ಮಾಸವು-೧೮೮೩

೩. ದೇವರ ತಾಯಿಯ ಮಾಸವು-೧೮೮೫

೪. ಆರ್ಚ ಶಿಷ್ವ ಜೋಸೇಫರ ಮಾಸವು–೧೮೯೭

೫. ದೊಡ್ಡ ಕೇಡಾಗಿರುವ ಸಾವಾದ ಪಾಪ–೧೮೯೯

೬. ರಕ್ಷಣ್ಯದ ಆಪತ್ತುಗಳು–೧೮೯೯

೭. ನರಕವು ಎಂಬ ಸ್ಥಳದ ವಿವರವು ೧೮೯೭

೮. ಸತ್ಯವೇದ ಸಂಬಂಧವಾದ ಕೀರ್ತನೆಗಳು–೧೮೯೭

೯. ಗೃಹಸ್ಥಾಶ್ರಮದ ಉದ್ಯಾನವು – ೧೯೦೫

೧೦. ದಿವ್ಯ ಬಾಲರಾದ ಜೇಸುವಿನ ಮೇಲೆ ಭಕ್ತಿ– ೧೯೦೮

೧೧. ಕಾವಲಾದ ಸಮ್ಮನಸ್ಸಿನ ವಂದನಾರ್ತಿ – ೧೮೯೯

೧೨. ಆತ್ಮದ ಆಪತ್ತುಗಳು

೧೩. ದೇವ ಭಕ್ತಿಯ ಮಾರ್ಗವು

೧೪. ದಿವ್ಯ ಬಾಲರಾದ ಜೇಸುವನ್ನು ಕುರಿತು

೧೫. ಕ್ರಿಸ್ತುವಿನ ಆಯುಧವು

೧೬. ಸತ್ಪ್ರಸಾದದ ಆಯತ್ತವು

೧೭. ಮರಿಯ ಲತಸ್ತೆಂಬವಳ ಚರಿತ್ರೆ

೧೮. ಮರಿಯ ಲತಸ್ತೆಂಬವಳು ಬರೆದ ಪುಸ್ತಕ

೧೯. ಮುಕ್ತಿ ಹೊಂದಿದ ಮಾರ್ಗರಿತವೆಂಬುವಳ ಚರಿತ್ರೆ

೨೦. ಧ್ಯಾನದ ಸಾಧಕವು

೨೧. ಸುವಿಶೇಷವು, ಅಪೋಸ್ತೊಲರ ಕ್ರಿಯೆಗಳು

ಇಂದು ಈ ಕೃತಿಗಳು ಅನುಪಲಬ್ಧವಾಗಿವೆ. ಕ್ರಮಾಂಕ ೧೨ರಿಂದ ೨೧ರವರೆಗಿನ ಕೃತಿಗಳನ್ನು ಲೋನೇ, ಲೋನೇ- ೧ರಲ್ಲಿ ಉಲ್ಲೇಖಿಸುತ್ತಾರೆ. ಇವುಗಳಲ್ಲಿ ಕ್ರಮಾಂಕ ೧೫ರ ಕೃತಿಯನ್ನು ಬಿಟ್ಟು ಉಳಿದವು ಹಸ್ತ ಪ್ರತಿಗಳೆಂದು ಅವರೇ ಹೇಳುತ್ತಾರೆ. ಇವೆಲ್ಲವೂ ಅನುಪಲಬ್ಧ."[೧೯]

ಕೀರ್ತನೆ ಪುಸ್ತಕ (Kanarese Hymns): ಕಥೋಲಿಕ ಮಿಶನರಿಗಳು ರಚಿಸಿದ ಮೊದಲ ಗೀತ ಪುಸ್ತಕವೇ 'ಕೀರ್ತನೆ ಪುಸ್ತಕ' ಎಂದು ಲಭ್ಯವಾಗಿರುವ ಆಧಾರಗಳ ಮೇಲೆ ಹೇಳಬಹುದು. ಇದನ್ನು ತಿಯೊದರ್–ಅಂದ್ರೆ ಜೆರ್ಬಿಯೆರ್[೨೦] ಎಂಬ ಫ್ರೆಂಚ್ ಮಿಶನರಿಯು ಇದನ್ನು ರಚಿಸಿದರು ಎಂಬುದಾಗಿ ಡಾ. ಎಡ್ವರ್ಡ್ ನೊರೋನ ತಮ್ಮ ಕೃತಿಯಲ್ಲಿ ತಿಳಿಸಿದ್ದಾರೆ. ಆದರೆ ಈ ಕೃತಿಯಲ್ಲಿ ಒಬ್ಬ ಕಥೋಲಿಕಾ ಗುರು ಸ್ವಾಮಿಯವರಿಂದ ರಚಿಸಲ್ಪಟ್ಟ ಫ್ರೆಂಚ್ ರಾಗವುಳ್ಳ ಕೀರ್ತನೆಗಳು (Sacred Hymns with French Tunes) ಎಂದು ಮಾತ್ರ ಬರೆಯಲಾಗಿದೆ. ಕಥೋಲಿಕಾ ಮಿಶನರಿಗಳ ಸಾಧನೆಯ ಕುರಿತು ಹೇಳುವಾಗ

ಡಾ. ಐ.ಅಂತಪ್ಪ ತಮ್ಮ ಹೊಸಗನ್ನಡದ ಪ್ರಥಮ ಗ್ರಂಥಕಾರ ಎಂಬ ಕೃತಿಯಲ್ಲಿ "ಮೇಲ್ಕಂಡ ಪುಸ್ತಕಗಳಲ್ಲಿ ಚಿನ್ನಮಿ ತಮ್ಮ ಹೆಸರನ್ನು ರುಜು ಮಾಡಿಲ್ಲ; ಇವು ತಮ್ಮ ಕೃತಿಗಳೆಂದು ಹೇಳಿಕೊಂಡಿಲ್ಲ. ಇದು ಓದುಗರಿಗೆ ಅಚ್ಚರಿಯನ್ನುಟುಮಾಡಬಹುದು. ಆದರೆ ಹೀಗೆ ಅನಾಮಿಕರಾಗಿರಬೇಕೆಂಬ ದೀನ, ನಮ್ರಗುಣ ಚಿನ್ನಾಮಿಯದು ಮಾತ್ರವಲ್ಲ ನೊಬಲಿಯದು ಆಗಿತ್ತು"[೧] ಎಂದು ತಿಳಿಸಿದ್ದಾರೆ. ಈ ವಾಕ್ಯವು ಕೇವಲ ಚಿನ್ನಾಮಿ ಮತ್ತು ನೊಬಲಿಯವರಿಗೆ ಮಾತ್ರ ಹೊಂದುವುದಲ್ಲದೆ ತಿಯೊದೊರ್ ಅಂದ್ರೆ ಜೆರ್ಬಿಯೆರ್‌ರವರಿಗೂ ಸರಿ ಹೊಂದುತ್ತದೆ. ಮಿಶನರಿಗಳಿಗೆ ಸೇವೆಯ ಮಹತ್ವದಾಗಿತ್ತೆಂದು ತಿಳಿಯುತ್ತದೆಯೇ ಹೊರತು ಅವರ ಹಿರಿಮೆ ಕೀರ್ತಿಗಳಲ್ಲ ಎಂಬುದು ವಿಧಿತವಾಗುತ್ತದೆ.

ಈ ಕೀರ್ತನಾ ಪುಸ್ತಕವು ಮೂರು ಭಾಗಗಳನ್ನು ಹೊಂದಿದೆ. ೧. ಸತ್ಯವೇದ ಸಂಬಂಧವಾದ ಫ್ರೆಂಚ್ ರಾಗವುಳ್ಳ ಕೀರ್ತನೆಗಳು, ೨. ಸತ್ಯವೇದ ಸಂಬಂಧವಾದ ಹಿಂದೂ ರಾಗವುಳ್ಳ ಕೀರ್ತನೆಗಳು, ೩. ಲ್ಯಾಟಿನ್ ಕೀರ್ತನೆಗಳು ಎಂದು ವಿಭಾಗಿಸಲಾಗಿದೆ. ಪ್ರತಿ ಹಾಡಿನ ಶೀರ್ಷಿಕೆಯು ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಬರೆಯಲಾಗಿದೆ. ಇದರ ಅರಿಕೆಯಲ್ಲಿ ಹೀಗೆಂದು ಹೇಳಲಾಗಿದೆ.

"ಈ ಭಾಗದಲ್ಲಿ ಬರೆಯಲ್ಪಟ್ಟಿರುವ ಕೀರ್ತನೆಗಳ ವಿಷಯದಲ್ಲಿ ತಿಳಿಯತಕ್ಕದ್ದೇನೆಂದರೆ: ಈ ಕೀರ್ತನೆಗಳು ಕನ್ನಡ ಛಂದೋ ವಿದ್ಯದ ಪ್ರಕಾರವಲ್ಲ. ಆದರೆ ಫ್ರೆಂಚ್ ಛಂದೋವಿದ್ಯಕ್ಕನುಸಾರವಾಗಿ ಕಲ್ಪಿಸಲ್ಪಟ್ಟಿದೆ. ಅದು ಹ್ಯಾಗೆಂದರೆ ಕೆಲವು ವರುಷ ಮೊದಲುಗೊಂಡು ಬೇರೆಬೇರೆ ಕ್ರೀಸ್ತುವರು ಫ್ರೆಂಚ್ ರಾಗವುಳ್ಳ ಕೀರ್ತನೆಗಳನ್ನು ಪಾಡಲಭ್ಯಾಸವುಳ್ಳವರಾಗಿದ್ದಾರೆ; ಮತ್ತು ಫ್ರೆಂಚ್ ರಾಗಗಳನ್ನು ಕನ್ನಡ ಛಂದೋವಿದ್ಯದಿಂದ ಕಲ್ಪಿಸಲ್ಪಟ್ಟ ಕೀರ್ತನೆಗಳಿಗೆ ಹೊಂದಿಸಲಸಾಧ್ಯವಾಗಿರುವ ನಿಮಿತ್ತ, ಇಂಥಾ ರಾಗಗಳನ್ನು ಕಾಪಾಡುವಂತೆ ಈ ಭಾಗದಲ್ಲಿ ದೊರಕುವ ಗೀತೆಗಳನ್ನು ಫ್ರೆಂಚ್ ಛಂದೋವಿದ್ಯದ ಮೇರೆಗೆ ಬರೆಯಲವಸರವಾಯಿತು."[೨] ಫ್ರೆಂಚ್ ರಾಗದಲ್ಲಿ ರಚಿತವಾದ ಗೀತೆಗಳ ಅಧ್ಯಯನ ಆಯ್ದುಕೊಂಡ ವಸ್ತುವಿಷಯಗಳಿಗೆ ಅನುಗುಣವಾಗಿ ಅಧ್ಯಯನ ಮಾಡಲಾಗಿದೆ.

ಕ್ರಿಸ್ತರ ವ್ಯಕ್ತಿತ್ವ: ಯೇಸುವಿನ ವ್ಯಕ್ತಿತ್ವವನ್ನು ತಿಳಿಯಲು ಶುಭಸಂದೇಶ ಆಧಾರವಾಗಿದೆ. ಈ ಪವಿತ್ರಗ್ರಂಥದಲ್ಲಿ ಕಂಡು ಬರುವ ಘಟನೆಗಳನ್ನು ಓದುವಾಗ ವಿವಿಧ ಸಂದರ್ಭಗಳಲ್ಲಿ, ಕ್ಲಿಷ್ಟ ಸನ್ನಿವೇಶಗಳಲ್ಲಿ ಯೇಸುಸ್ವಾಮಿ ಯಾವ ರೀತಿ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಿಪಡಿಸಿದರು ಎಂಬುದನ್ನು ನಾವು ಗಮನಿಸಬೇಕು. ಇಂತಹ ಪರಿಸ್ಥಿತಿಗಳಲ್ಲಿ ಯೇಸುವಿನ ನಡತೆ, ಮನೋಭಾವ, ಮುಖಚರ್ಯೆ, ಹಾವಭಾವ ಮುಂತಾದವುಗಳನ್ನು ಪರಿಶೀಲಿಸಬೇಕು. ಉದಾ: ಯೇಸುಸ್ವಾಮಿ ಹೊಂದಿದ ಶಿಲುಬೆಯ ಮರಣವು ಅವರ ಪರಮಶ್ರೇಷ್ಠ ಗುಣವನ್ನು ಬಹಿರಂಗಗೊಳಿಸುತ್ತದೆ. ತಮ್ಮ ಸ್ವಂತ ಇಚ್ಛೆಯಿಂದ ಅವರು ಆರಿಸಿಕೊಂಡ ಮರಣವದು, ನಮ್ಮ ಪಾಪಕ್ಷಮೆಗಾಗಿ ತಮ್ಮನ್ನೇ ಅವರು ಶಿಲುಬೆಯ ಮೇಲೆ ಬಲಿಯರ್ಪಿಸುತ್ತಾರೆ! ಇದರಿಂದಾಗಿ ಅವರೇ ನುಡಿದ ಮಾತುಗಳು ನೆರವೇರುವಂತಾಯಿತು. 'ಗೆಳೆಯರಿಗಾಗಿ ತನ್ನ ಪ್ರಾಣವನ್ನೇ ಧಾರೆಯೆರೆಯುವ ಪ್ರೀತಿಗಿಂತ ಮಿಗಿಲಾದ ಪ್ರೀತಿ ಯಾರಲ್ಲೂ ಇಲ್ಲ' (ಯೋಹಾನ್ನ ೧೫:೧೩). ಯೇಸುಸ್ವಾಮಿ ಎರಡು ಮಹತ್ವಪೂರ್ಣ

ಪ್ರಬೋಧನೆಗಳನ್ನು ಬೋಧಿಸಿದರು. ಮೊದಲು ಅವರು ಬೋಧಿಸಿದ್ದು 'ಬೆಟ್ಟದ ಮೇಲಿನ ಬೋಧನೆ' ಎಂದು ಪ್ರಖ್ಯಾತವಾಗಿರುವ ಪರ್ವತದ ಮೇಲಿನ ಪ್ರಸಂಗವನ್ನು: ಎರಡನೆಯ ಮಹಾ ಪ್ರಬೋಧನೆಯನ್ನು ಕಲ್ವಾರಿ ಬೆಟ್ಟದಲ್ಲಿ ಶಿಲುಬೆಯ ಮೇಲೆ ತೂಗಾಡುತ್ತಾ ಮೌನವಾಗಿ ಬೋಧಿಸಿದರು. ಈ ಎರಡೂ ಪ್ರಬೋಧನೆಗಳ ಸಾರಾಂಶವಿಷ್ಟೇ; 'ನಾನು ನಿಮ್ಮನ್ನು ಪ್ರೀತಿಸಿರುವಂತೆಯೇ ನೀವೂ ಸಹ ಒಬ್ಬರನ್ನೊಬ್ಬರು ಪ್ರೀತಿಸಿರಿ' (ಯೊಹಾನ್ನ ೧೪:೩೪). ತಾವು ಶಿಲುಬೆಯ ಮೇಲೆ ಅಸಹನೀಯವಾದ ಯಾತನೆ ಪಡುತ್ತಿದ್ದಾಗ ಯೇಸು ತಮ್ಮ ಅಸಾಧಾರಣ ವ್ಯಕ್ತಿತ್ವದ ಘನತೆ, ಆಳ ಮತ್ತು ಹಿರಿಮೆಯನ್ನು ತೋರ್ಪಡಿಸುತ್ತಾರೆ. ದೈವೀಶಕ್ತಿಯಿಂದ ಅವರು ಮಾಡಿದ ಪವಾಡಗಳು, ಅವರ ಅಗಾಧವಾದ ದಯೆ, ಅನುಕಂಪಗಳನ್ನು ಸಾರುತ್ತವೆ. ಮಿಶನರಿಗಳು ರಚಿಸಿದ ಗೀತೆಗಳಲ್ಲಿ ಕೆಲವು ಗೀತೆಗಳು ಯೇಸುವಿನ ವ್ಯಕ್ತಿತ್ವದ ಕುರಿತು ಹೇಳುತ್ತವೆ.

ಕ್ರಿಸ್ತನ ವ್ಯಕ್ತಿತ್ವದ ಕುರಿತು ಜೆರ್ಬಿಯರ್ ರಚಿಸಿದ ಗೀತೆ 'ದೇವರ ಪರಿಪಾಲನೆಯನ್ನು ಕುರಿತು' ಇದು O Douce Providence ಎಂಬ ಫ್ರೆಂಚ್ ರಾಗದಲ್ಲಿದೆ. "ಆಕಾಶದಲ್ಲಿ ಹಾರಾಡುವ ಪಕ್ಷಿಗಳನ್ನು ಗಮನಿಸಿ ಬಿತ್ತುವುದಿಲ್ಲ, ಕೊಯ್ಯುವುದಿಲ್ಲ, ಕಣಜಗಳಲ್ಲಿ ಕೂಡಿಡುವುದೂ ಇಲ್ಲ, ಆದರೂ ಸ್ವರ್ಗದಲ್ಲಿರುವ ನಿಮ್ಮ ತಂದೆ ಅವುಗಳನ್ನು ಪೋಷಿಸುತ್ತಾರೆ"[೨೩] ಎಂಬ ಶುಭಸಂದೇಶದ ವಾಕ್ಯವನ್ನು ನೆನಪಿಸುತ್ತದೆ. ದೇವರು ಪರಿಪಾಲಿಸುವ ವ್ಯಕ್ತಿ. ನಮ್ಮ ಜೀವನದ ಸುಗಮ ಸಾಗುವಿಕೆಗೆ ಆತನ ಪರಿಪಾಲನೆಯೇ ಕಾರಣವಾಗಿದೆ. ದೇವರ ಕೃಪಾವರಗಳು ನಿರಂತರ ಮನುಷ್ಯ ಜೀವನವನ್ನು ಆವರಿಸಲ್ಪಡುತ್ತವೆ. ಈತನ ಕೃಪಾತಿಶಯವು ಮನುಷ್ಯನ ಮೇಲೆ ಅಪಾರವಾಗಿದೆ. ಆದ್ದರಿಂದ ನಾವು ಚಿಂತಿಸುವ ಅಗತ್ಯವಿಲ್ಲ ಎಂಬ ಆಶಯವನ್ನು ಈ ಗೀತೆ ಹೊಂದಿದೆ.

ತಾಯಿಯ ನಂಬುವವನು	ಸರ್ವ ಸ್ವಭಾವವನ್ನು
ಚಿಂತಾಕ್ರಾಂತವೆಲ್ಲ;	ನೀವು ದೃಷ್ಟಿಸಿರಿ;
ಬಿಟ್ಟು ಬಿಡುವುದನ್ನು	ದೇವ ಮೇಲುಗಳನ್ನು
ದರ್ಶಿಸುತ್ತೇವಲ್ಲ;	ಕೂಡ್ಲೆ ಕಾಣುವಿರಿ;
ಪಕ್ಷವುಳ್ಳ ಪಿತನು	ಹೂವಿಗಲಂಕಾರವು
ವಿಚಾರಿಸುವಲ್ಲಿ;	ಪ್ರತಿಪಾದಿಸುತ್ತಾರೆ;
ಒಬ್ಬೊಬ್ಬ ಮನುಷ್ಯನು	ಪಕ್ಷಿಗೆ ಜೇಮನವು
ನಿಮಳ ಪಡಲಿ.	ದೊರಕಿಸುತ್ತಾರೆ.

ಕೀರ್ತನೆ ಪುಸ್ತಕ, ೧೯೪೯, ಗೀತೆ–೧೮

ನಮ್ಮ ಕೊರತೆಗಳಿಗಾಗಿ ನಾವು ಏಕೆ ಚಿಂತಿಸಬೇಕು? ಇದು ಅನಾವಶ್ಯಕವಾಗಿದೆ. ನಮ್ಮ ಅವಶ್ಯಕ್ಕಿಂತಲೂ ಹೆಚ್ಚಾಗಿ ಕೊಡುತ್ತೇನೆಂದು ದೇವರು ವಾಗ್ದಾನ ಮಾಡಿಲ್ಲ. ಆದರೆ ಆತನು ನಮ್ಮ ಅವಶ್ಯಕತೆಗಳನ್ನು ಒದಗಿಸುವವನು ಎಂದು ನಾವು ಆತನ ಮೇಲೆ ಆಧಾರಗೊಂಡಿರಬೇಕು. ಪಕ್ಷಿಗಳಲ್ಲಿಯೂ ಈ ಸಂಗತಿಯು

ನಿಜವಾಗುತ್ತದೆ. ಇವುಗಳಿಗೆ ಆಹಾರವನ್ನು ಸಿದ್ಧಮಾಡಿದ ದೇವರು ಪಕ್ಷಿಗಳಿಗಿಂತ ಎಷ್ಟೋ ಹೆಚ್ಚಿನವರಾದ ನಮಗೆ ಆಹಾರವನ್ನು ಕೊಡದೇ ಇರುವನೋ? (ಮತ್ತಾಯ ೧೦:೩೧). ದೇವರು ಪಕ್ಷಿಗಳಿಗೆ ಆಹಾರವನ್ನು ಕೊಡುತ್ತಾನೆ(ಮತ್ತಾಯ ೬:೨೬) ಹೀಗೆಯೇ ಹೂಗಳಿಗೆ ಸೌಂದರ್ಯವನ್ನು ಕೊಡುತ್ತಾನೆ. ತನ್ನ ಮಕ್ಕಳಲ್ಲದ ಹೂಗಳಿಗೆ ಸೌಂದರ್ಯವನ್ನು ಕೊಡುವುದಾದರೆ ಆತನ ಮಕ್ಕಳಾದ ನಮಗೆ ಖಂಡಿತವಾಗಿಯೂ ಬಟ್ಟೆಯನ್ನು ಕೊಡುವವನಾಗಿದ್ದಾನೆ. ಆದ್ದರಿಂದ ದೇವರ ಪರಿಪಾಲನೆಯಲ್ಲಿ ನಂಬಿಕೆಯನ್ನಿಡಬೇಕೆಂದು ಗೀತಗಾರ ಹೇಳಿದ್ದಾರೆ.

ದಿನನಿತ್ಯದ ಉದಾಹರಣೆಗಳನ್ನು ಬಳಸಿ ದೇವ ಪರಿಪಾಲನೆಯನ್ನು ವರ್ಣಿಸಿರುವುದು ಗೀತೆಯ ವಿಶೇಷತೆಯಾಗಿದೆ. ದೇವರನ್ನು ತಾಯಿಯಂತೆ ಭಾವಿಸುವ ವಿಧಾನ, ನಿಸರ್ಗದ ಪಕ್ಷಿ, ಹೂಗಳ ಉದಾಹರಣೆಯನ್ನು ಬಳಸಿರುವುದರಿಂದ ದೇವಪಾಲನೆಯ ಶ್ರೇಷ್ಟತೆ ಗ್ರಹಿಕೆಗೆ ನಿಲ್ಲುವುದಾಗಿದೆ. ಇಲ್ಲಿ ಗದ್ಯರೂಪದ ಸಾಲುಗಳೇ ಕಂಡುಬರುತ್ತವೆ.

ಯೇಸುವಿನ ಹೃದಯವನ್ನು ವರ್ಣಿಸುವ ಗೀತೆಯೇ 'ಜೇಸುವಿನ ಹೃದಯವನ್ನು ಕುರಿತು' ಎಂಬ ಗೀತೆ. ಇದು Tendre Marie ಎಂಬ ರಾಗದಲ್ಲಿದೆ. ಯೇಸುವಿನ ಪವಿತ್ರ ಹೃದಯದ ವಿಶೇಷತೆಯನ್ನು ವರ್ಣಿಸುವ ಗೀತೆ ಇದಾಗಿದೆ. ಯೇಸುವಿನ ಹೃದಯ ದೀನತೆಯಿಂದ ಕೂಡಿದ್ದು ಪ್ರೀತಿಯ, ಶಾಂತಿಯ ಸಂಕೇತವಾಗಿದೆ. ಇಲ್ಲಿ ಎಲ್ಲಾ ಮಾನವರಿಗೂ ಸ್ಥಾನವಿದೆ ಎಂದು ಭಕ್ತ ಹೇಳುತ್ತಾನೆ.

ತಿರು ಹೃದಯದ ಭಕ್ತರು
ಶಾನೆ ವರ ಹೊಂದುತ್ತಾರೆ;
ಅದನ್ನು ವಂದಿಸುವವರು
ಅನುಕೂಲ ಪಡುತ್ತಾರೆ.

ಕರುಣವುಳ್ಳ ಹೃದಯವು
ದುರ್ಗುಣವನ್ನು ತಿದ್ದುತ್ತೆ
ತನ್ನ ಸರ್ವ ಭಕ್ತರಾತ್ಮವು
ವೇಗ ಶುದ್ಧಿಕರಿಸುತ್ತೆ.

ಕೀರ್ತನೆ ಪುಸ್ತಕ, ಗೀತೆ–೨೯

ಕಷ್ಟ ಸಂಕಟಗಳಿಗೆ ನೋವು ಯಾತನೆಗೆ ಸ್ಪಂದಿಸುವ ಹೃದಯವು ಬದುಕಿಗೆ ನೆಮ್ಮದಿಯನ್ನು ಆಸರೆಯನ್ನು ನೀಡುತ್ತದೆ. "ಭಾರ ಹೊತ್ತು ಬಳಲಿ ಬೆಂಡಾಗಿರುವ ಸರ್ವಜನರೇ ನೀವೆಲ್ಲರು ನನ್ನ ಬಳಿಗೆ ಬನ್ನಿರಿ ನಾನು ನಿಮಗೆ ವಿಶ್ರಾಂತಿ ಕೊಡುವೆನು"[೨೪] ಎಂಬ ಯೇಸುವಿನ ಮಾತನ್ನು ಇಲ್ಲಿ ನೆನೆಸಬಹುದು. ನಿಜವಾದ ಶಾಂತಿಯನ್ನು ಪಡೆಯಬೇಕಾದರೆ ಶಾಂತಿದಾಯಕನಾದ ಯೇಸುವಿನ ಬಳಿಗೆ ಬರಬೇಕು ಎನ್ನುತ್ತಾರೆ ಗೀತಗಾರ.

'ತಿರು' ಎಂದರೆ ಪವಿತ್ರ, ಇದು ತಮಿಳು ಮೂಲದಿಂದ ಬಂದ ಪದವಾಗಿದೆ. ಯೇಸುವಿನ ಹೃದಯವನ್ನು ಕರುಣೆಯುಳ್ಳ ಹೃದಯ, ಪವಿತ್ರ ಹೃದಯ ಎಂದು ಗೀತಕಾರ ಅಲಂಕಾರಿಕವಾಗಿ ವರ್ಣಿಸಿದ್ದಾರೆ.

ಪರಲೋಕ: 'ಧರ್ಮದಿಂದ ಸ್ವರ್ಗ, ಅಧರ್ಮದಿಂದ ನರಕ' ಎಂಬುದು ಸರ್ವೇ ಸಾಮಾನ್ಯವಾದ ಒಂದು

ನಂಬಿಕೆ ಜಗತ್ತಿನ ಎಲ್ಲಾ ಮತಧರ್ಮಗಳಲ್ಲೂ ಇದೆ. ಈ ನಂಬಿಕೆಯ ತಳಹದಿಯಲ್ಲೇ ಧರ್ಮವು ಬೇರೂರಿದೆ ಎಂದರೂ ತಪ್ಪಿಲ್ಲ. ಸ್ವರ್ಗವು ಸುಖದ ಭೂಮಿ, ನರಕವು ಸಂಕಷ್ಟದ ಭೂಮಿ, ಇಲ್ಲೆಲ್ಲು ಸಿಗದ ಸುಖಕ್ಕೆ ಸ್ವರ್ಗ ಸುಖ ಎಂದು ಹೆಸರು. "ಸ್ವರ್ಗವು ಮನುಷ್ಯನಲ್ಲಿ ಆಸೆ ಹುಟ್ಟಿಸುತ್ತದೆ."[೨೫] ಸ್ವರ್ಗವನ್ನು ದೇವರ ರಾಜ್ಯ, ಪರಲೋಕ ರಾಜ್ಯ, ಬೆಳಕಿನ ರಾಜ್ಯ ಎಂದೂ ಕರೆಯುತ್ತಾರೆ. ಪರಲೋಕ ರಾಜ್ಯ ಎಂಬುದು ಒಂದು ನಿರ್ದಿಷ್ಟ ಸ್ಥಳವಲ್ಲ. ಅದು ಭೂಲೋಕದಲ್ಲಿರುವ ರಾಜ್ಯವಲ್ಲ. ದೇವರ ರಾಜ್ಯವು ಒಂದು ಆತ್ಮೀಕವಾದ ರಾಜ್ಯವಾಗಿದ್ದು ಅದರಲ್ಲಿ ದೇವರು ಸಂಪೂರ್ಣ ಅಧಿಕಾರದಿಂದ ಆಳ್ವಿಕೆ ಮಾಡುತ್ತಾರೆ.

ಪರಲೋಕ ರಾಜ್ಯ ಎಂಬುದು ಆತ್ಮೀಕ ರಾಜ್ಯವಾಗಿದೆ. ಆಧ್ಯಾತ್ಮಿಕ ವ್ಯಕ್ತಿಗಳು ನೆಲೆಸುವ ರಾಜ್ಯವಾಗಿದೆ. ಇಹದಲ್ಲಿ ಎಲ್ಲ ನಡತೆಯ ಜನರು ವಾಸವಾಗಿದ್ದಾರೆ. ಪರಲೋಕದಲ್ಲಿ ಕೇವಲ ಸಜ್ಜೀವನ ನಡೆಸಿದ ವ್ಯಕ್ತಿಗಳು ಮಾತ್ರ ವಾಸವಾಗಿರುತ್ತಾರೆ. ದೇವರ ರಾಜ್ಯದಲ್ಲಿನ ಪ್ರಜೆಗಳು ಪರಲೋಕದಲ್ಲಿ ಹೇಗೆ ಬಾಳುತ್ತಾರೆ ಎಂಬುದನ್ನು ವರ್ಣಿಸುವ ಗೀತೆಯೇ 'ಮೋಕ್ಷವನ್ನು ಕುರಿತು' ಎಂಬ ಗೀತೆ. ಇದು Sainte Cite demeure permanente ಎಂಬ ರಾಗದಲ್ಲಿದೆ.

ಓ ಮೋಕ್ಷವೇ, ನೀನು ಭಾಗ್ಯಾಲಯವು
ದೇವರಿಗೆ ತಕ್ಕಂಥಾರಮೆ;
ಪುಣ್ಯಾತ್ಮರ ಚಂದ ವಾಸಸ್ಥಳವು
ಅಲಂಕಾರ ಪ್ರಕಾಶದ ಮನೆ

ಕೀರ್ತನೆ ಪುಸ್ತಕ, ಗೀತೆ–೧೭೭

ಪರಲೋಕವಾಸವನ್ನು ವರ್ಣಿಸುವ ಚರಣ ಇಂತಿದೆ:

ನೀನು ಶುದ್ಧ ತುಷ್ಟಿ ಭಾಗ್ಯಾನಂದವು
ತುಂಬಿರುವ ಮೇಲ್ಮೇಲಾದ ಸ್ಥಳ;
ನಿನ್ನೊಳಗೆ ನೋವು ದುಃಖ ಕಷ್ಟವು
ಕಣ್ಣೀರೊಂದೂ ಕಾಣಿಸುವುದಿಲ್ಲ.

ಮೋಕ್ಷವನ್ನು ಸೇರಿದ ಭಕ್ತರ ಬದುಕು ಹೇಗಿರುತ್ತೆಂದರೆ ಅದು ಶಾಂತಸ್ಥಳವನ್ನು ಕಂಡು ಕೊಂಡಂತೆ, ಭಾಗ್ಯ ಸಮುದ್ರದಲ್ಲಿ ಮುಳುಗಿದಂತೆ, ಅದರ ಮಹಿಮೆಯಾದರೊ ಸೂರ್ಯನಂತೆ ಪ್ರಕಾಶಿಸುವುದಾಗಿದೆ. ಈ ನೀತಿವಂತರಿಗೆ ದೇವರು ತೊಡಿಸುವ ಕಿರೀಟವಾದರೊ ನಕ್ಷತ್ರದಂತೆ ಹೊಳೆಯುತ್ತಿರುತ್ತದೆ. ಇಹದಲ್ಲಿನ ಎಲ್ಲಾ ಕಷ್ಟ ನಷ್ಟ ನೋವುಗಳನ್ನು ಅವರು ಮರೆತು ನಿತ್ಯಾನಂದದಲ್ಲಿ ಬಾಳುತ್ತಾರೆ ಎಂದು ಗೀತಗಾರ ಹೇಳುತ್ತಾರೆ.

ದಿನನಿತ್ಯದ ಭವ್ಯ ಅನುಭವಗಳನ್ನು ಬಳಸಿ ನೀತಿವಂತರಿಗೆ ದೊರಕುವ ಪರಲೋಕದ ಸೌಭಾಗ್ಯವನ್ನು ವರ್ಣಿಸಿರುವ ಬಗೆ ಮನೋಹರವಾಗಿದೆ. ಪರಲೋಕ ರಾಜ್ಯದ ವೈಭವವನ್ನು ಅರ್ಥೈಸಿಕೊಳ್ಳಲು ಕವಿ

ಬಳಸಿರುವ ವಿಷಯಗಳಾದ ಭಾಗ್ಯಸಮುದ್ರ, ಶಾಂತಸ್ಥಳ, ಸೂರ್ಯನಂತೆ ಪ್ರಕಾಶಿಸು ಎಂಬ ಪದಗಳು ಅರ್ಥಗರ್ಭಿತವಾಗಿದ್ದು ಅಲಂಕಾರಯುಕ್ತವಾಗಿದೆ. ಆ ಲೋಕದ ನಿವಾಸಿಗಳಾಗಲು ಪ್ರತಿಯೊಬ್ಬರಿಗೂ ಕರೆ ನೀಡುತ್ತಿದ್ದಾರೆ ಗೀತಗಾರ.

ಸಂತರು: ಸಹನಶೀಲತೆ ಮತ್ತು ಸೇವಾಮನೋಭಾವ ಮರಿಯಮ್ಮನವರಲ್ಲಿ ಕಂಡು ಬರುವ ಅತ್ಯುನ್ನತ ಸದ್ಗುಣಗಳು. ಆಕೆ ಇಂದಿಗೂ ಲೋಕರಕ್ಷಣೆಗಾಗಿ ಅನವರತ ತನ್ನ ಪುತ್ರ ಯೇಸುವಿನಲ್ಲಿ ಪ್ರಾರ್ಥಿಸುವವಳಾಗಿದ್ದಾಳೆ. ಗೀತಗಾರ ತನ್ನ 'ದೇವರ ತಾಯಿಯ ಸಹಾಯವನ್ನು ಬೇಡಿಕೊಳ್ಳುವ' ಎಂಬ ಗೀತೆಯಲ್ಲಿ ಮೇರಿಮಾತೆಯಲ್ಲಿ ತನ್ನ ಬೇಡಿಕೆಗಳನ್ನಿತ್ತು ತನಗಾಗಿ ಪ್ರಾರ್ಥಿಸಬೇಕೆಂದು ಬೇಡಿಕೊಳ್ಳುತ್ತಾರೆ. ಇದು Ave Maris of Lourdes ಎಂಬ ರಾಗದಲ್ಲಿದೆ.

ನಿಮ್ಮ ಮಕ್ಕಳನ್ನು
ಇಲ್ಲಿ ನೋಡಿರಿ;
ಕೇಳಲ್ಪಟ್ಟದನ್ನು
ಪ್ರಸಾದಿಸಿರಿ.

ಶೋಧನೆಗಳೊಳು
ನಮ್ಮ ಕಾಪಾಡಿ;
ಗಂಡಾಂತರದೊಳು
ಸಹಾಯಾಮಾಡಿ

ಕೀರ್ತನೆ ಪುಸ್ತಕ, ಗೀತೆ–೪೯

ಗಬ್ರಿಯೆಲ್ ದೇವ ದೂತನು(ದಾನಿಯೇಲ್ ೮:೧೬)

ಮಾತೆ ಮರಿಯಮ್ಮನವರಿಗಾಗಿಯೇ ಮೀಸಲಾದ ತಿಂಗಳು ಮೇ ತಿಂಗಳು. ಈ ಮಾಸದ ಎಲ್ಲಾ ದಿನಗಳಲ್ಲೂ ಮಾತೆ ಮರಿಯಮ್ಮನವರನ್ನು ಕುರಿತು ಪ್ರತ್ಯೇಕ ಪ್ರಾರ್ಥನೆಗಳು, ಸಮಾರಂಭಗಳು ನಡೆಯುತ್ತಲೇ ಇರುತ್ತವೆ. ಈ ಮಾಸಕ್ಕೆ ಸಂಬಂಧಿಸಿದಂತೆ ಮಾತೆಯ ಗುಣಗಳನ್ನು ಹೊಗಳುವ ಗೀತೆಗಳನ್ನು ರಚಿಸಿದ್ದಾರೆ ಗೀತೆಗಾರ. ಮೇರಿ ಮಾತೆಯನ್ನು ಹೇಗೆ ಪ್ರೀತಿಸಬೇಕೆಂದು ಗೀತಗಾರ 'ದೇವರ ತಾಯಿಯ ಮಾಸವನ್ನು ಕುರಿತು' ಎಂಬ ಗೀತೆಯಲ್ಲಿ ವರ್ಣಿಸಿದ್ದಾರೆ. ಇದು Reunissons nos voix ಎಂಬ ರಾಗದಲ್ಲಿದೆ.

ತೋಟದ ಪುಷ್ಪವನ್ನು
ಕೊಯಿದು ಬೇಗ ತರ್ರಿ;
ಕನ್ನಿಕೆಗೆ ಕುಚ್ಚನ್ನು
ಒಪ್ಪಿಸ ಬನ್ನಿರಿ

ಲೋಕದ ಪಕ್ಷಿಗಳು
ಗೊಜಗುವ ಕಾಲ
ತಾಯಿಯನ್ನೊಳ್ಳೇ ಮಕ್ಕಳು
ಸ್ತುತಿಸಬೇಕಲ್ಲ

ಕೀರ್ತನೆ ಪುಸ್ತಕ, ಗೀತೆ–೫೧

ಗೀತಗಾರನಿಗೆ ಮಾತೆಮೇರಿಯಲ್ಲಿ ಎಷ್ಟು ಗೌರವ, ಪ್ರೀತಿ ಎಂದರೆ ಈ ಭೂಮಿ ನೀಡುವ ಹೂವು ಆಕೆಗಾಗಿ ಅರ್ಪಿತವಾಗಬೇಕು ಎನ್ನುತ್ತಾನೆ. ಹೂವುಗಳನ್ನು ಬೇಗನೆ ತನ್ನಿ, ಆಕೆಗೆ ಕುಚ್ಚನ್ನು ಕಟ್ಟೋಣ, ತಾಯಿಗೆ ಚಂದ ಪದವನ್ನು ಕಟ್ಟಿ ಹಾಡೋಣ ಎನ್ನುವಲ್ಲಿ ಭಕ್ತನ ಮುಗ್ಧ ಭಕ್ತಿ, ಉತ್ಸಾಹಗಳು ಎದ್ದು

ಕಾಣುತ್ತವೆ. ದೇಶೀಯತೆಯನ್ನು ಮರಿಯಮ್ಮನವರಿಗೆ ಆರೋಪಿಸಿರುವುದು ಇಲ್ಲಿ ಗಮನೀಯ ಅಂಶವಾಗಿದೆ.

ಮರಿಯಳ ಮುಖವು ಉದಯದ ನಕ್ಷತ್ರದ ಹಾಗೆ ಮಿಂಚುವುದು, ಆಕೆಯ ದೇವ ಸ್ನೇಹವು ರೋಜ ಪುಷ್ಪದಂತೆ, ಆಕೆಯ ಪವಿತ್ರವು ತೋಟದಲ್ಲಿರುವ ಲೀಲಿ ಹೂವಿನಂತಹುದು ಎಂದು ಅಲಂಕಾರಿಕವಾಗಿ ವರ್ಣಿಸಿದ್ದಾರೆ ಗೀತಗಾರ 'ದೇವತಾಯಿಯ ಮಾಸವನ್ನು ಕುರಿತು' ಎಂಬ ಗೀತೆಯಲ್ಲಿ. ಇದು C'est le mois de marie ಎಂಬ ರಾಗದಲ್ಲಿದೆ.

ದೇವತಾಯಿಯ ಮಾಸವು	ಮರಿಯಮ್ಮನವರು	ಈ ಧಾರಾಳವರಿತು
ಕ್ರೀಸ್ತುವರೇ ನೋಡಿ;	ಸರ್ವೋಪಕಾರಿಯೇ;	ತಾಯಿಯ ಸ್ತುತಿಸೋಣ;
ಆಕೆಯ ಕರುಣವು	ಇದು ದೇವ ಭಕ್ತರು	ಆಕೆಗೆ ಪ್ರಿಯ ಪಟ್ಟು
ಎಲ್ಲರೂ ಕೊಂಡಾಡಿ.	ತಿಳಿದ ಸುದ್ದಿಯೇ.	ನಮಸ್ಕರಿಸೋಣ.

ಕೀರ್ತನೆ ಪುಸ್ತಕ, ಗೀತೆ–೫೦

ಸಂತ ಜೋಸೆಫರಿಗೆ ಸಂಬಂಧಿಸಿದ ಗೀತೆಗಳು: ಯೇಸುವಿನ ಪೋಷಕ ತಂದೆಯೆ ಸಂತ ಜೋಸೆಫರು. ಇವರು ದಾವೀದ್ ರಾಜನ ಮನೆತನಕ್ಕೆ ಸೇರಿದವರು. ತಂದೆ ಯಾಕೋಬ. ಇವರು ಮರಕೆಲಸ ಮಾಡುವ ವ್ಯಕ್ತಿಯಾಗಿದ್ದರು. ಇವರ ವಂಶಸ್ಥರು ಅರಸು ಮನೆತನಕ್ಕೆ ಸೇರಿದವರಾಗಿದ್ದರು. ಬಾಲ್ಯದಿಂದಲೂ ನಿಷ್ಠಾವಂತರಾಗಿದ್ದ ಇವರು ಮರಿಯಮ್ಮನ ಜೊತೆ ವಿವಾಹವಾದರು. ವಿವಾಹ ನಿಶ್ಚಯವಾದಾಗಲೇ ಆಕೆ ಪವಿತ್ರಾತ್ಮರಿಂದ ಗರ್ಭಧರಿಸಿದ್ದಳೆಂದು ತಿಳಿದು ಜೋಸೆಫ್ ಆಕೆಯನ್ನು ಗುಟ್ಟಾಗಿ ಬಿಟ್ಟುಬಿಡಲು ನಿಶ್ಚಯಿಸಿದರು. ದೇವದೂತ ಅವರ ಸಂಶಯವನ್ನು ನಿವಾರಿಸಿದರು. ಅವರಿಗೆ ಮರಿಯಳ ಜೊತೆ ವಿವಾಹವಾಯಿತು. ವಿವಾಹದ ತರುವಾಯ ಈ ಆದರ್ಶ ದಂಪತಿಗಳಿಗೆ ಯೇಸುಕ್ರಿಸ್ತರು ಹುಟ್ಟಿದರು. ಬಡಗಿ ಕೆಲಸದಿಂದ ಬರುತ್ತಿದ್ದ ಅಲ್ಪ ಆದಾಯದಲ್ಲೇ ಜೋಸೆಫ್, ಮರಿಯಮ್ಮ ಮತ್ತು ಮಗನನ್ನು ಸಾಕಿದರು. ಸಹಜವಾದ ಕುಟುಂಬ ಜೀವನ ನಡೆಸಿ ಉಳಿದವರಿಗೆ ಮಾದರಿಯಾಗಿ ಬದುಕಿದರು. ಕುಟುಂಬ ಜೀವನಕ್ಕೆ ಜೋಸೆಫ್ ಪೋಷಕ ಸಂತನೆಂದೆ ಧರ್ಮಸಭೆ ಒಪ್ಪಿಕೊಂಡಿರುವುದರಿಂದ ಕ್ರೈಸ್ತ ಕುಟುಂಬಗಳ ಪ್ರತಿನಿಧಿಯಾಗಿ ಜೋಸೆಫ್ ಕಾಣಿಸಿಕೊಳ್ಳುತ್ತಾರೆ. ಧರ್ಮಸಭೆ ಪ್ರತಿವರ್ಷ ಮಾರ್ಚ್ ೧೯ರಂದು ಇವರ ಹಬ್ಬವನ್ನು ಕೊಂಡಾಡುತ್ತದೆ. ಇಂದು ಅನೇಕ ವ್ಯಕ್ತಿಗಳು ಹಾಗೂ ಸಂಘಸಂಸ್ಥೆಗಳು ಈ ಸಂತರ ಹಬ್ಬವನ್ನು ಕೊಂಡಾಡುತ್ತವೆ. ಮೇ ೧ನೇ ತಾರೀಕನ್ನು ಇವರ ಹೆಸರಿನಲ್ಲಿ ಕಾರ್ಮಿಕರ ದಿನವನ್ನಾಗಿ ಆಚರಿಸಲಾಗುತ್ತಿದೆ. ಆದ್ದರಿಂದಲೇ ಇವರಿಗೆ 'ಕಾರ್ಮಿಕರ ಸಂತ' ಎಂಬ ಬಿರುದೂ ಇದೆ.

ಜೋಸೆಫ್ ಕುಟುಂಬಕ್ಕೆ ಹೇಗೆ ಪೋಷಕರೋ ಹಾಗೆ ಧರ್ಮಸಭೆಗೂ ಪೋಷಕ (Patron) ಆಗಿದ್ದಾರೆ. ೧೫ನೇ ಶತಮಾನದಲ್ಲಿ ಸಂತ ಬೆರ್ನಡಿನ್ (St. Bernardine of Siena) ಮತ್ತು ಜಾನ್ ಗೆರ್ಸನ್ (John Gerson) ಎಂಬವರು ಇವರ ಹಬ್ಬವನ್ನು ಮೊತ್ತಮೊದಲ ಬಾರಿಗೆ ಆಚರಿಸಲು ಪ್ರಾರಂಭಿಸಿದರು.

೧೪ನೇ ಸಿಕ್ಸಟಸ್ (Sixtus) ಎಂಬ ಪೋಪ್ ಜಗದ್ಗುರು ರೋಮ್ ನಗರದಲ್ಲಿ ೧೪೭೯ರಲ್ಲಿ ಈ ಸಂತರ ಹಬ್ಬವನ್ನು ಅಧಿಕೃತವಾಗಿ ಪ್ರಕಟಿಸಿದರು. ೧೫ನೇ ಗ್ರೆಗರಿ (Gregory) ೧೬೨೧ರಲ್ಲಿ ಇಡೀ ಲ್ಯಾಟಿನ್ ಚರ್ಚಿಗೆ ಈ ಹಬ್ಬವನ್ನು ವಿಸ್ತರಿಸಿದರು. "೯ನೇ ಪಾಯಸ್ (Pius) ಜೋಸೆಫ್ ಇಡೀ ಪ್ರಪಂಚದ ಸಾರ್ವತ್ರಿಕ ಧರ್ಮ ಸಭೆಯ (Universal Church) ಪೋಷಕ ತಂದೆ ಎಂದು ಘೋಷಿಸಿದರು."[೨೬]

ಇವರ ಕುರಿತು ಗೀತಗಾರ ರಚಿಸಿದ ಗೀತೆಯೇ 'ಆರ್ಚ ಜೋಸೆಫರನ್ನು ಕುರಿತು' ಎಂಬುದು. ಇದು Chaste Epoux d'ne Vierge mere ಎಂಬ ರಾಗದಲ್ಲಿದೆ.

ನೀವು ಪಡೆದ ಲೀಲಿ ಹೂವು
ಸರ್ವ ಧವಳವಾದದ್ದೇ;
ನಿಮ್ಮ ಮೇಲಾದ ಪವಿತ್ರವು
ಅದರಿಂದ ತೋರುತ್ತದೇ.

ನಮಗೆ ಬರುವ ಕಷ್ಟವು
ತಂತ್ರ ಶೋಧನೆ ಬಲ್ಲಿರಿ;
ನಿರ್ಭಾಗ್ಯಸ್ಥರಿಗೆ ದಯವು
ತೋರಿಸಿ ರಕ್ಷಿಸ ಬರ್ರಿ.

ಕೀರ್ತನೆ ಪುಸ್ತಕ, ಗೀತೆ–೨೩

ಸಂತ ಜೋಸೆಫರು ಇಹದಲ್ಲಿ ತಮ್ಮ ಪವಿತ್ರ ಕುಟುಂಬವನ್ನು, ಯೇಸುಬಾಲರನ್ನು ಬಾಲ್ಯದಲ್ಲಿಯೇ ಸಂರಕ್ಷಿಸಿ ಕಾಪಾಡಿದರು. ಪ್ರಾಮಾಣಿಕ ಬದುಕನ್ನು ನಡೆಸಿ, ದೇವರಿಗೆ ವಿಧೇಯರಾಗಿ ನಡೆದು ನಿಷ್ಠಾವಂತ ಸಂತ ಎಂಬ ಹೆಸರಿಗೆ ಪಾತ್ರರಾದರು. ಅವರ ಸನ್ನಡತೆಯನ್ನು ಕಂಡು ಗೀತಗಾರ ತನಗಾಗಿಯೂ ಪ್ರಾರ್ಥಿಸಬೇಕೆಂದು ಕೇಳಿಕೊಳ್ಳುತ್ತಾರೆ. ಅವರು ಯೇಸುವನ್ನು ಪೋಷಿಸಿ ಬೆಳೆಸಿದಂತೆ ತಮ್ಮನ್ನು ಪೋಷಿಸಿ ಬೆಳೆಸಬೇಕೆಂದು ಬೇಡಿಕೊಳ್ಳುತ್ತಾರೆ. ಉತ್ತಮ ಕುಟುಂಬ ಜೀವನ ನಡೆಸಿ ಆದರ್ಶ ವ್ಯಕ್ತಿಯಾಗಿ ಬಾಳಿ ಬೆಳಗಿದ ಸಂತ ಜೋಸೆಫರ ಬದುಕು ಒಂದು ಸವಾಲಿನಂತಿದೆ. ಗೀತಗಾರರಿಗೆ ಇವರು ಒಬ್ಬ ಮಹಾ ಪುಣ್ಯ ಪುರುಷ. ಅವರ ಪುಣ್ಯದ ಮಾರ್ಗದಲ್ಲಿ ಸಂಚರಿಸಿದರೆ ತಾವು ಉತ್ತಮನಾಗುತ್ತೇವೆಂಬ ನಂಬಿಕೆ ಇಲ್ಲಿದೆ.

ಸಂತ ಜೋಸೆಫರು ಹಿಡಿದಿರುವ ಲೀಲಿ ಹೂವು ಅವರ ಪರಿಶುದ್ಧತೆಯನ್ನು ಸೂಚಿಸುತ್ತದೆ ಎನ್ನುತ್ತಾರೆ ಗೀತಗಾರ. ಅಪಾರ ಕಷ್ಟವನ್ನನುಭವಿಸಿ ಕೊನೆಯಲ್ಲಿ ಕಷ್ಟದಿಂದಲೇ ಸರಳ ಬದುಕನ್ನು ನಡೆಸಿದ ಈ ಸಂತರ ಬದುಕು ನಿಜಕ್ಕೂ ಆದರ್ಶ ಪ್ರಾಯವಾಗಿದೆ.

ಸಂತ ಅಂತೋಣಿಯವರಿಗೆ ಸಂಬಂಧಿಸಿದ ಗೀತೆಗಳು (೧೧೯೫–೧೨೩೧): "ಪೋರ್ಚುಗಲ್ ದೇಶದ ಪ್ರಧಾನ ಪಟ್ಟಣದಿಂದ ಲಿಸ್ಬನ್‌ನಲ್ಲಿ ಕ್ರಿಶ ೧೧೯೫ರಲ್ಲಿ ಸಂತ ಅಂತೋಣಿಯವರು ಜನಿಸಿದರು."[೨೭] ಜ್ಞಾನಸ್ನಾನವೆಂಬ ಸಂಸ್ಕಾರದಲ್ಲಿ ಫರ್ಡಿನಾಂಡ್ ಎಂಬ ಹೆಸರನ್ನಿತ್ತು ಅವರಿಗೆ ನಾಮಕರಣ ಮಾಡಲಾಯಿತು. ತಂದೆ ಮಾರ್ಟಿನ್ ದೆ ಬೊಯಿಲಿಯನ್ ಆ ದೇಶದ ಕೋಶಾಧಿಕಾರಿ. ತಾಯಿ, ಮೇರಿ ದೇವ ಭಕ್ತರು. ತಂದೆತಾಯಿಗಳಿಬ್ಬರು ರಾಜಮನೆತನದ ಗೌರವಕ್ಕಿಂತ ಆಧ್ಯಾತ್ಮಿಕ ಸದ್ಗುಣಗಳಿಗೆ ಹೆಚ್ಚು ಗಮನ ಕೊಡುತ್ತಿದ್ದರು. ಎಂದೇ, ತಮ್ಮ ಕುಮಾರನಿಗೆ ರಾಜಮನೆತನದ ಶಿಕ್ಷಣಕ್ಕಿಂತ, ಕ್ರೈಸ್ತ ಸಭೆಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟರು. ತಮ್ಮ ೧೫ನೇ

ವಯಸ್ಸಿನಲ್ಲಿ ತಮ್ಮ ವಿರಕ್ತವನ್ನೂ ಮನಃಶಾಂತಿಯನ್ನು ಕಾದಿರಿಸಿಕೊಳ್ಳಲು ಈ ಪ್ರಪಂಚದ ಮರಳು ಮಾಯೆಯನ್ನು, ಆಶಾಪಾಶಗಳನ್ನು ತ್ಯಜಿಸಿ ಗುರುಮಠವನ್ನು ಸೇರಲು ನಿರ್ಧರಿಸಿದರು.

ಕ್ರಿಶ ೧೨೧೦ರಲ್ಲಿ ಫರ್ಡಿನಾಂಡರು ತಮ್ಮ ೧೫ನೇ ವಯಸ್ಸಿನಲ್ಲೇ ಸಂತ ಅಗುಸ್ತೀನ್ ಗುರು ಸಭೆಯನ್ನು ಪ್ರವೇಶಿಸಿದರು. ಅಲ್ಲಿ ೧೦ ವರ್ಷ ಕಾಲ ಕಠಿಣ ಏಕಾಂತ ವಾಸವನ್ನು, ಉಗ್ರ ದೇಹ ದಂಡನೆಯನ್ನು ಅನುಸರಿಸಿ ಪರಿಶುದ್ಧ ಗ್ರಂಥಗಳ ಮತ್ತು ಧರ್ಮಸಭೆಯ ಆರಾಧನಾ ವಿಧಿಗಳ ಪಠಣ ಮಾಡಿದರು. ಆಗತಾನೆ ಹೊಸದಾಗಿ ಸ್ಥಾಪಿತವಾದ ಸಂತ ಫ್ರಾನ್ಸಿಸ್ ಸಭೆಯ ಕೆಲವು ಸನ್ಯಾಸಿಗಳು ವೇದಕ್ಕಾಗಿ ಪ್ರಾಣಕೊಟ್ಟ ವಿಚಾರ ಇವರ ಕಿವಿಗೆ ಬಿದ್ದಿತು. ಆ ಸನ್ಯಾಸಿಗಳ ಹಾಗೆ ತಾವು ಅನ್ಯ ದೇಶಗಳಲ್ಲಿ ಮತ ಸತ್ಯವನ್ನು ಸಾರಿ ತಮ್ಮ ಮತಕ್ಕಾಗಿ ಪ್ರಾಣತ್ಯಾಗ ಮಾಡಬೇಕೆಂಬ ಕುತೂಹಲ ಅವರ ಯುವಕ ಹೃದಯಲ್ಲಿ ಮೂಡಿತು. ಅನೇಕ ವಾರಗಳವರೆಗೆ ವಿಶೇಷ ಪ್ರಾರ್ಥನೆ ಮತ್ತು ಧ್ಯಾನಗಳನ್ನು ಮಾಡಿ ಸಂತ ಫ್ರಾನ್ಸಿಸ್ಕನ್‌ರವರ ಸಭೆಯನ್ನು ಸೇರಲು ತಮ್ಮ ಶ್ರೇಷ್ಟರ ಬಳಿ ಹೋಗಿ ಅಪ್ಪಣೆ ಪಡೆದುಕೊಂಡರು. ಫರ್ಡಿನಾಂಡ್‌ರವರ ಸಂತ ಫ್ರಾನ್ಸಿಸ್ಕನ್ ಸಭೆಯ ಸ್ವೀಕಾರ ೧೨೨೦ರಲ್ಲಿ ನಡೆಯಿತು. ಈ ಸಭೆಯಲ್ಲಿ ಅವರಿಗೆ ಅಂತೋಣಿ ಎಂಬ ಹೆಸರನ್ನು ಕೊಡಲಾಯಿತು. ಕೋಯಿಂಬ್ರಾ ದೇಶದ ಬಳಿ ಇದ್ದು ಗುರು ಮಠದಲ್ಲಿ ಗುರು ಪಟ್ಟಕ್ಕೆ ವ್ಯಾಸಂಗ ಮಾಡುತ್ತಿದ್ದಾಗ ಅಂತೋಣಿಯವರು ಪುಣ್ಯಗಳಿಗೆ ಆದರ್ಶಕರೆಂದು ಪರಿಗಣಿಸಲ್ಪಟ್ಟರು.

ಪವಿತ್ರತೆಯಲ್ಲಿ ಮುಂದುವರೆಯುತ್ತಿದ್ದ ಹಾಗೆ ಅಂತೋಣಿಯವರಿಗೆ ವೇದಸಾಕ್ಷಿಯಾಗುವ ಅಭಿಲಾಷೆ ಅಧಿಕಾಧಿಕವಾಗಿ ಹೆಚ್ಚುತ್ತಿತ್ತು. ಪ್ರಸಂಗ ಮಾಡುವುದರಲ್ಲಿ ಹೆಚ್ಚು ಯಶಸ್ಸನ್ನು ಗಳಿಸಿಕೊಂಡರು. ಅವರಿಗೆ ಆರೋಪಿಸಲಾದ ಬಹಳ ಮುಖ್ಯವಾದ ಪವಾಡವೆಂದರೆ ಆತ ಯಾವ ಭಾಷೆಯಲ್ಲೇ ಮಾತಾಡಲಿ ನೆರೆದ ಜನಕ್ಕೆ ಅವರವರ ಭಾಷೆಯಲ್ಲೇ ಬೋಧನೆಯ ಅರ್ಥ ತಿಳಿಯುತ್ತಿದ್ದುದ್ದು. ಸಮುದ್ರದ ಮೀನುಗಳಿಗೆ ಅವರು ಉಪದೇಶ ಮಾಡಲು ಅವು ಏಕಾಗ್ರತೆಯಿಂದ ಆಲಿಸಿದವಂತೆ, ಎಳೆಯ ಮಗು ಮಾತಾಡಿತ್ತಂತೆ, ಸತ್ತವರು ಎದ್ದು ಬರುವ ಹಾಗೆ ಮಾಡಿದರಂತೆ, ನೆಲ, ಜಲ, ಭೂ, ವನ, ಮೃಗ, ಪಕ್ಷಿಗಳೇ ಮುಂತಾದವು ಇವರ ಮಾತನ್ನು ಕೇಳಿ ಆನಂದಿಸುತ್ತಿದ್ದವೆಂದು ಜನ ನಂಬುತ್ತಾರೆ. ಅಷ್ಟೇ ಅಲ್ಲ ಸ್ವತಃ ಯೇಸುಕ್ರಿಸ್ತ ಪುಟ್ಟಬಾಲಕರಾಗಿ ಜಪದ ಪುಸ್ತಕದ ಮೇಲೆ ಬಂದು ಕುಳಿತುಕೊಂಡು ಸಂಭಾಷಿಸುತ್ತಿದ್ದರೆಂದು ಜನ ನಂಬುತ್ತಾರೆ. ಯೇಸುಬಾಲಕ ಪುಸ್ತಕದ ಮೇಲೆ ಕುಳಿತಿರುವ ಅಂತೋಣಿಯ ಪ್ರತಿಮೆಗಳನ್ನು ಇದು ಕ್ರೈಸ್ತ ದೇವಾಲಯಗಳಲ್ಲಿ ಮತ್ತು ಮನೆಗಳಲ್ಲಿ ನೋಡಬಹುದು. 'ಪವಾಡ ಪುರುಷ ಮಹಾ ಸಂತ ಅಂತೋಣಿ' ಎಂಬ ಹೆಸರಿಗೆ ಪಾತ್ರರಾದ ಇವರು ೧೨೩೧ನೇ ಜೂನ್ ೧೩ರಂದು ತಮ್ಮ ೩೬ನೇ ವಯಸ್ಸಿನಲ್ಲಿ ಪಾದುವಾದಲ್ಲಿ ಸ್ವರ್ಗಸ್ಥರಾದರು. ಆದ್ದರಿಂದಲೇ ಅಂತೋಣಿಯನ್ನು ಪಾದುವಾದ ಅಂತೋಣಿ ಎಂದು ಕರೆಯುವುದು ಹೆಚ್ಚು ರೂಢಿಯಲ್ಲಿದೆ. ೯ನೇ ಗ್ರೆಗೋರಿ ಪೋಪ್ ಜಗದ್ಗುರುಗಳು ೧೨೩೨ನೇ ಮೇ ೩೦ರಂದು 'ಸಂತ' ಪದವಿಯನ್ನು ನೀಡಿ ಗೌರವಿಸಿದರು.

ಈ ಸಂತರ ಕುರಿತಾದ ಒಂದು ಗೀತೆ ಮಾತ್ರ ಈ ಗೀತ ಪುಸ್ತಕದಲ್ಲಿದೆ. ಸಂತ ಅಂತೋಣಿಯವರು

ಪವಿತ್ರ ಜೀವನ ನಡೆಸಿ ನಮ್ಮ ಇಹ ಲೋಕದ ಜೀವಿತದಲ್ಲಿ ಅನೇಕ ಪವಾಡಗಳನ್ನು ಮಾಡಿದ್ದಾರೆ. ಗೀತಗಾರ ಆತನಲ್ಲಿ ತನ್ನ ಭಕ್ತಿಯನ್ನು ವ್ಯಕ್ತಪಡಿಸಿದ್ದಾರೆ 'ಆರ್ಚ ಅಂತೋಣಿಯವರ ಕೀರ್ತನೆ' ಎಂಬ ಗೀತೆಯಲ್ಲಿ.

ಆರ್ಚ ಶಿಷ್ಟ ಅಂತೋಣಿಯವರೇ
ಅರ್ಚಕರ ಮುನಿಯಾರಾದವರೇ
ಅದ್ಭುತಶಾಲಿ ಮಹಿಮೆ ಪಡೆದವರೇ
ನಮ್ಮ ಕಾಪಾಡಿ ಪಾಲಕರೇ
ಆರ್ಚ ಶಿಷ್ಟ ಅಂತೋಣಿಯವರೇ

ಕೀರ್ತನೆ ಪುಸ್ತಕ, ಪುಟ–೧೫೮

ಅದ್ಭುತಗಳನ್ನೇ ಮಾಡಿ ಜನರನ್ನು ಸೌಖ್ಯದ, ಜ್ಞಾನದ ಬದುಕಿಗೆ ಯೋಗ್ಯರನ್ನಾಗಿ ಮಾಡುತ್ತಿದ್ದ ಸಂತ ಅಂತೋಣಿಯವರಲ್ಲಿ ಭಕ್ತ ತನ್ನನ್ನು ನಿರಂತರವೂ ಕಾಪಾಡು ಎಂದು ಬೇಡುತ್ತಿದ್ದಾನೆ. ಭಕ್ತನಿಗೆ ಸಂತರಲ್ಲಿರುವ ಭಕ್ತಿ ಭಾವ ವ್ಯಕ್ತವಾಗಿದೆ. ಗೀತೆ ಭಕ್ತಿ ಪ್ರಧಾನವಾಗಿದ್ದು ಅರ್ಥಗರ್ಬಿತವಾಗಿದೆ. ಆದಿ, ಅಂತ್ಯ ಪ್ರಾಸದೊಂದಿಗೆ ಗೇಯತೆಯನ್ನು ಕಾದುಕೊಂಡಿದೆ.

ಸಂತ ಇಗ್ನಾಸಿಗೆ ಸಂಬಂಧಿಸಿದ ಗೀತೆ (೧೪೯೧–೧೫೫೬): ಸಂತ ಇಗ್ನಾಸಿಯವರ ಗೀತೆಯನ್ನು ಅಧ್ಯಯನ ಮಾಡುವ ಪೂರ್ವದಲ್ಲಿ ಆತನ ಜೀವನ ಚರಿತ್ರೆಯತ್ತ ಗಮನ ಹರಿಸೋಣ.

"ಯೇಸು ಸಭೆಯ ಸ್ಥಾಪಕರಾದ ಇವರು ಲಯೋಲಾದ Basque ಪ್ರಾಂತ್ಯದ Guipuzcoa ನಲ್ಲಿ ೧೪೯೧ರಲ್ಲಿ ಜನಿಸಿದರು."[೨೮] ಈತನ ತಂದೆ ಡಾನ್ ಟೆಲ್ಟ್ರಾನ್ ಮನೇಟನ್ ಬಿನೀಸ್ ಇ ಲೊಯೊಲ. ತಾಯಿ ಡೊನಾ ಮನಿಯಾ. ಈ ದಂಪತಿಗಳ ೧೩ನೇ ಮಗ ಇಗ್ನೇಷಿಯಸ್ ಬಾಲ್ಯದಲ್ಲಿ ಸೈನಿಕ ಶಿಕ್ಷಣವನ್ನು ಅಭ್ಯಸಿಸಿ ಕುಶಲ ಯೋಧನಾಗಿ ಬೆಳೆದನು. ೧೫೨೧ ಮೇ ೩೦ರಂದು ನವರ್ರೇಯ ರಾಜಧಾನಿಯಾದ ಪೆಂವಲೋನ ಯುದ್ಧದಲ್ಲಿ ಆತನ ಎಡಗಾಲಿಗೆ ಗುಂಡು ತಗುಲಿತು. ಇಗ್ನಾಸಿ ತನ್ನ ಸ್ವಗೃಹದಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ ಬೇಸರವನ್ನು ಕಳೆಯುವುದಕ್ಕೆಂದು ಓದುವುದಕ್ಕೆ ಏನಾದರೂ ಕೊಡುವಂತೆ ಕೇಳಿಕೊಂಡಾಗ ಆತನ ಅತ್ತಿಗೆ ಸಂತರ ಜೀವನ ಚರಿತ್ರೆ ಎಂಬ ಪುಸ್ತಕವನ್ನು ಕೊಟ್ಟರು. ಸಂತರ ಜೀವನ ಚರಿತ್ರೆ ಅವರ ಮನಸ್ಸಿನ ಮೇಲೆ ಅಗಾಧ ಪ್ರಭಾವ ಬೀರಿತು. ತಾನು ಅವರಂತೆ ಬಾಳಿ ಏಕೆ ಸಂತನಾಗಬಾರದು? ಎಂದು ತಮ್ಮನ್ನೇ ಪ್ರಶ್ನಿಸಿದರು. ಮಸ್ರೆಸಾ ಎಂಬಲ್ಲಿ ಸ್ವಲ್ಪ ಕಾಲ ಪ್ರಾರ್ಥನೆಯಲ್ಲಿ ಕಳೆದು ರೋಮಿಗೆ ಹೋದರು. ಅಲ್ಲಿ ಅನೇಕ ಯುವಕರನ್ನು ಸಂಘಟಿಸಿ ಧರ್ಮಸಭೆಯ ಏಳಿಗೆಗಾಗಿ ದುಡಿಯಲಾರಂಭಿಸಿದರು. ಅವರು ಸ್ಥಾಪಿಸಿದ ಸಭೆಗೆ ೧೫೪೦ರಲ್ಲಿ ಜಗದ್ಗುರುಗಳು ಅಧಿಕೃತವಾಗಿ ಮನ್ನಣೆ ನೀಡಿದರು. ಈ ಸಭೆಯನ್ನು ಯೇಸು ಸ್ವಾಮಿಯ ಸಭೆ (Society of Jesus) ಎಂತಲೂ, ಸದಸ್ಯರನ್ನು ಜೆಸ್ವಿಟ್ಸ್ ಎಂತಲೂ ಕರೆಯುತ್ತಾರೆ. ಈ ಸಭೆಯ ಸದಸ್ಯರು ಕ್ರೈಸ್ತಧರ್ಮ ತತ್ವಗಳನ್ನು, ಬೋಧನೆಗಳನ್ನು

ಅನುಷ್ಠಾನಕ್ಕೆ ತರಲು ಬಹಳ ಶ್ರಮಿಸಿದರು. ಯೂರೋಪಿನ ಅನೇಕ ಕಡೆಗಳಲ್ಲಿ ವಿದ್ಯಾಮಂದಿರಗಳನ್ನು ಕಟ್ಟಿ ಕ್ರೈಸ್ತಧರ್ಮದ ತತ್ವಗಳನ್ನು ಯುವ ಜನಾಂಗ ಸಮರ್ಪಕವಾಗಿ ಗ್ರಹಿಸಿಕೊಳ್ಳುವ ಅವಕಾಶವನ್ನು ಕಲ್ಪಿಸಿಕೊಟ್ಟರು. ತಪ್ಪು ತತ್ವಗಳನ್ನು ಪ್ರತಿಪಾದಿಸುವ ವಿರೋಧಿಗಳನ್ನು ಚಾಣಾಕ್ಷತನದಿಂದ ಎದುರಿಸಿದರು.

೧೫೫೦ನೇ ಜುಲೈ ತಿಂಗಳಲ್ಲಿ ಹಟಯೋಗಿ ಎಂದೇ ಖ್ಯಾತರಾದ ಇವರು ದೈವಾಧೀನರಾದರು. ಇವರ ಕುರಿತಾಗಿ ಗೀತಗಾರ 'ಅರ್ಚ ಇಗ್ನಾಸಿಯವರ ಕೀರ್ತನೆ' ಎಂಬ ಗೀತೆ ರಚಿಸಿದ್ದಾರೆ.

ಅರ್ಚ ಶಿಷ್ಟ ಇಗ್ನಾಸಿಯವರೇ
ಜೇಸು ಸಭೆ ಏರ್ಪಡಿಸಿದವರೇ
ಹೆಚ್ಚಾದ ಸ್ತುತಿ ಮಹಿಮೆ ಪಡೆದವರೇ
ನಮ್ಮ ಕಾಪಾಡಿ ಪಾಲಕರೇ
ಅರ್ಚ ಶಿಷ್ಟ ಇಗ್ನಾಸಿಯವರೇ (ಪಲ್ಲವಿ)

೧. ಪಾಲಕರೇ ತಮ್ಮಾಶ್ರಯವು
ನಮಗೆ ಪ್ರಿಯವಾಗಿದೆ
ನಮ್ಮ ಸ್ತುತಿ ನಮಸ್ಕಾರವು
ತಮಗೆ ಸೇರತಕ್ಕದ್ದೇ
ಅರ್ಚ ಶಿಷ್ಟ ಇಗ್ನಾಸಿಯವರೇ.

೨. ತಮ್ಮ ಪರಿಶುದ್ಧ ಜೀವವು
ದೇವರಿಗೆ ತರ್ಪಣೆಯೇ
ತಮ್ಮ ಧರ್ಮ ಗುಣ ಪುಣ್ಯವು
ನಮಗೆ ಸುಮಾತೃಕೆಯೇ
ಅರ್ಚ ಶಿಷ್ಟ ಇಗ್ನಾಸಿಯವರೇ

೩. ದೇವ ವರ ಪ್ರಸಾದವನ್ನ
ನಮಗೋಸ್ಕರ ಪ್ರಾರ್ಥಿಸಿ
ತಮ್ಮ ಹಾಗೆ ನಾನವರನ್ನ
ಸೇವಿಸಲನುಗ್ರಹಿಸಿ
ಅರ್ಚ ಶಿಷ್ಟ ಇಗ್ನಾಸಿಯವರೇ

ಕೀರ್ತನೆ ಪುಸ್ತಕ, ಪುಟ–೧೫೯

ಸಂತ ಇಗ್ನಾಸಿಯವರ ಪುಣ್ಯ ಬದುಕು ಸಂಗೀತಗಾರರಿಗೆ ಪ್ರೇರಣೆ ನೀಡಿದಂತಿದೆ. ಕ್ರೈಸ್ತ ತತ್ವಗಳನ್ನು ಎಲ್ಲಡೆ ಸಾರಿ ಪರಿಶುದ್ಧ ಬದುಕನ್ನು ನಡೆಸಿ ಇಹದಲ್ಲಿ ಸರ್ವರಿಗೂ ಮಾದರಿಯಾಗಿ ತನ್ನನ್ನೇ ದೇವರಿಗೆ ಅರ್ಪಿಸಿಕೊಟ್ಟ ಮಹಾನುಭವರ ಜೀವನ ಗೀತಗಾರನ ಮನಸ್ಸನ್ನು ಸೆರೆ ಹಿಡಿದಿದೆ. ಸಂತರಲ್ಲಿ ಗೀತಗಾರನಿಗಿರುವ ಭಕ್ತಿ ಗೌರವ, ಸಮಂಜಸವಾಗಿ ಮೂಡಿಬಂದಿರುವುದನ್ನು ಕಾಣುತ್ತೇವೆ. ಸಂತರ ಜೀವನ, ಅವರ ಪ್ರಾರ್ಥನಾ ಬದುಕು ಗೀತಗಾರರನ್ನು ನೇರವಾದ ಮಾರ್ಗದಲ್ಲಿ ಸಾಗಲು ಯೋಗ್ಯರನ್ನಾಗಿರಿಸಿರುವುದು ಕಂಡು ಬಂದಿದೆ.

ಸಂಸ್ಕಾರಗಳು: ನಮ್ಮ ಆತ್ಮವನ್ನು ಪವಿತ್ರಗೊಳಿಸುವುದಕ್ಕೆ ಯೇಸುವು ಸ್ಥಾಪಿಸಿದ ಗುರುತುಗಳೇ ಸಂಸ್ಕಾರಗಳು. ನಾವು ಹುಟ್ಟಿದಂದಿನಿಂದ ಸಾಯುವವರೆಗೂ ಮೋಕ್ಷ ಮಾರ್ಗದಲ್ಲಿ ಯೇಸುವು ನಮ್ಮ ಸಂಗಡ ದಾರಿಯುದ್ದಕ್ಕೂ ಜೊತೆಗಾರರಾಗಿ ಇರುವುದಕ್ಕೆ ನಮ್ಮ ಜೀವನದ ಒಂದೊಂದು ಘಟನೆಗೆ ಒಂದೊಂದು ಸಂಸ್ಕಾರವನ್ನು ತಾವೇ ಏರ್ಪಡಿಸಿದ್ದಾರೆ. ಕ್ರೈಸ್ತ ಧರ್ಮದ ಪ್ರಕಾರ ಸಂಸ್ಕಾರಗಳು ಏಳು. ಅವನ್ನು ದೇವ ದ್ರವ್ಯ ಅನುಮಾನಗಳು (Sacraments) ಎಂದು ಹಿಂದೆ ಕರೆಯುತ್ತಿದ್ದರು. ಕನ್ನಡದಲ್ಲಿ ಇಂದು 'ದಿವ್ಯ ಸಂಸ್ಕಾರಗಳು' ಎಂಬ ಪದ ರೂಢಿಯಲ್ಲಿದೆ. (ಈಚೆಗೆ ಈ ಸಂಸ್ಕಾರಗಳನ್ನು 'ವರ ಸಂಸ್ಕಾರಗಳು' ಎಂದು

ಕರೆಯುತ್ತಾರೆ).

ಕ್ರೈಸ್ತರಲ್ಲಿ ಏಳು ದಿವ್ಯ ಸಂಸ್ಕಾರಗಳಿವೆ:

೧. ನಾವು ಹುಟ್ಟಿದಾಗ ಯೇಸುವಿನ ಜೀವನದಲ್ಲಿ ನಮ್ಮ ಆತ್ಮವನ್ನು ಹುಟ್ಟಿಸಿ ನಮ್ಮನ್ನು ದೇವರಿಗೆ ಮಕ್ಕಳಾಗಿ ಮಾಡುವ ಜ್ಞಾನ ಸ್ನಾನವು.

೨. ನಾವು ಬೆಳೆದು ದೊಡ್ಡವರಾಗುವ ಪ್ರಕಾರ ನಾವು ಉತ್ತಮ ಕ್ರೈಸ್ತವರಾಗಿ ಜೀವಿಸುವುದಕ್ಕೂ ಯೇಸುವನ್ನು ಧೈರ್ಯವಾಗಿ ಹಿಂಬಾಲಿಸುವುದಕ್ಕೂ ನಮಗೆ ಬೇಕಾದ ಶಕ್ತಿ ಕೊಡುವ ಭದ್ರವಾದ ದೃಢೀಕರಣವು.

೩. ನಮ್ಮ ಜೀವನಕ್ಕೆ ಭೋಜನವು ಅವಶ್ಯಕವಾಗಿರುವ ಪ್ರಕಾರ ನಮ್ಮ ಜ್ಞಾನ ಜೀವನಕ್ಕೆ ಭೋಜನವಾಗಿ ಯೇಸುವು ಕೊಡುವ ಸತ್‌ಪ್ರಸಾದವು.

೪. ನಮಗೆ ನೋವು, ಸಾವು ಬಾರದಂತೆ ಮಾಡಲು ಔಷಧಿಗಳು ಇರುವ ಪ್ರಕಾರ ನಮ್ಮ ಆತ್ಮಕ್ಕೆ ಪಾಪದಿಂದಾಗುವ ನೋವು ಸಾವುಗಳನ್ನು ಸರಿಪಡಿಸುವ ಪಾಪ ನಿವೇದನೆ.

೫. ರೋಗಿಷ್ಟನ ಬಲಹೀನತೆಯನ್ನು ಪಥ್ಯದಿಂದ ಬಲಪಡಿಸುವ ಪ್ರಕಾರ ನಮ್ಮ ಮರಣದ ಸಮಯದಲ್ಲಿ ನಮ್ಮಲ್ಲಿ ಉಳಿದಿರುವ ಪಾಪಗಳೆಲ್ಲವನ್ನು ಪರಿಹರಿಸಿ ನಮ್ಮ ಆತ್ಮವನ್ನು ಮೋಕ್ಷಕ್ಕೆ ಒಯ್ಯುವ ಅವಧಿ ವ್ಯಾಧಿಷ್ಟರ ಅಭ್ಯಂಗ.

೬. ಪ್ರಜೆಗಳನ್ನು ನಡೆಸುವುದಕ್ಕೆ ಅಧಿಕಾರಿಗಳು ಇರುವ ಪ್ರಕಾರ ಮನುಷ್ಯರನ್ನು ಮೋಕ್ಷಮಾರ್ಗದಲ್ಲಿ ನಡೆಸುವುದಕ್ಕೆ ಬೇಕಾದ ಗುರುಗಳನ್ನು ಏರ್ಪಡಿಸುವ ಯಾಜಕಾಭಿಷೇಕ.

೭. ಮನುಕುಲವು ಮದುವೆಯಿಂದ ಬೆಳೆದು ಭೂಲೋಕಕ್ಕೆ ಪ್ರಜೆಗಳನ್ನು ಕೊಡುವ ಪ್ರಕಾರ ಮಕ್ಕಳನ್ನು ಸರಿಯಾಗಿ ಬೆಳೆಸಿ ಮೋಕ್ಷ ರಾಜ್ಯದಲ್ಲಿ ಪ್ರಜೆಗಳನ್ನು ವೃದ್ಧಿ ಮಾಡುವ ವಿವಾಹ.

ಸಂಸ್ಕಾರಕ್ಕೆ ಸಂಬಂಧಿಸಿದಂತೆ ರಚಿತವಾಗಿರುವ ಗೀತೆಯೇ 'ಸತ್ಪ್ರಸಾದವನ್ನು ಪರಿಗ್ರಹಿಸಲಭಿಲಾಷೆ.'[೨೯] ಸತ್ಪ್ರಸಾದವನ್ನು ಸ್ವೀಕರಿಸಬೇಕೆಂದು ಅಭಿಲಾಷೆಯನ್ನು ಹೊಂದಿದ ಗೀತಗಾರ ತನ್ನನ್ನೇ ಸಿದ್ಧಪಡಿಸಿಕೊಂಡು ಯೇಸುವಿನ ಆಗಮನಕ್ಕಾಗಿ ಬೇಡುತ್ತಾರೆ. "ಆತ್ಮಗಳಿಗೆ ಸಂಪೂರ್ಣವಾದ ತೃಪ್ತಿಯೇ! ಬನ್ನಿ. ದಾಹಗೊಂಡು ತಾಪಬರಿತವಾದ ಹೃದಯಗಳಿಗೆ ಮಧುರವಾದ ಜಲವೇ! ಅಮೃತವಾದ ರಸವೇ! ನಮ್ಮಲ್ಲಿ ಚಿತ್ತೈಸಿ ಬನ್ನಿ. ತಾಮಸ ಮಾಡದೇ ಶೀಘ್ರವಾಗಿ ಬನ್ನಿ. ಯೇಸುವನ್ನು ಸ್ವೀಕರಿಸಿ ತನ್ನ ಹೃದಯದಲ್ಲಿ ನಿರಂತರವೂ ವಾಸಿಸಬೇಕು ಆತನಿಂದಲೇ ನಿಜವಾದ ಭಕ್ತಿಯು ಜೀವವು ದೊರೆಯುತ್ತದೆ ಎಂದು ನಂಬಿದ ಗೀತಗಾರ ಭಕ್ತಿಪೂರ್ವಕವಾಗಿ ಯೇಸುವಿನ ಬರುವಿಕೆಯನ್ನು ಎದುರುನೋಡುತ್ತಾರೆ.

ಸ್ವಾಮಿ, ನನ್ನ ಭಾಗ್ಯವು
ತಡೆಯಬೇಡಿರಿ, ತಡೆಯ ಬೇಡಿರಿ, ತಡೆಯ ಬೇಡಿರಿ;
ವೇಗ, ವೇಗ, ಬರ್ರಿ;

[illegible]

ತಾವು ನನ್ನ ಜೀವವು, ತಾವು ನನ್ನ ಜೀವವು;

ಸ್ವಾಮಿ, ನನ್ನ ಭಾಗ್ಯವು

ಕೀರ್ತನೆ ಪುಸ್ತಕ, ಪುಟ-೧೭೧

ಒಂದೇ ವಾಕ್ಯದಲ್ಲಿ ಪದಗಳು ಪುನರುಕ್ತಿಯಾಗಿದೆ. ಇಂಥ ರಚನೆಗಳು ಅಭಿವ್ಯಕ್ತಿಗೆ ಅವಧಾರಣೆ ಪ್ರಾಪ್ತವಾಗಿ ಪರಿಣಾಮ ಆಳವಾಗಿ ನಾಟುತ್ತದೆ.

ಸತ್ಪ್ರಸಾದವನ್ನು ಸ್ವೀಕರಿಸಿದ ಭಕ್ತನು ಕೃತಜ್ಞತಾ ಭಾವದಿಂದ "ನಿಜವಾದ ಸರ್ವೇಶ್ವರನು, ನಿಜವಾದ ಮನುಷ್ಯನು ಒಬ್ಬರಾಗಿರುವ ನಮ್ಮ ಜೇಸುವೇ ಪರಮ ಪ್ರಸಾದ ಗುಣಗಳೊಳಗೆ ನಮ್ಮಲ್ಲಿ ಬಂದಿದ್ದೀರಿಯಲ್ಲಾ? ತಮ್ಮ ಅಪರಿಮಿತವಾದ ದಯದ ಕರುಣವನ್ನು ನೋಡಿ ಚೋದ್ಯಪಟ್ಟು ನಿಮ್ಮ ಪಾದಕ್ಕೆ ಸಾಷ್ಟಾಂಗವಾಗಿ ಬಿದ್ದು ಆರಾಧನೆ ನಮಸ್ಕಾರವನ್ನು ಮಾಡುತ್ತಾ ಇದ್ದೇವೆ. ಆದರೆ ನಮ್ಮ ಆರಾಧನೆಯು ನಿಮ್ಮ ಮಟ್ಟಿಲ್ಲದ ಮಹಿಮೆಗೆ ಸಾಲದ್ದರಿಂದ, ಪರಲೋಕದಲ್ಲಿ ನಿಮ್ಮ ಪರಿಶುದ್ಧ ತಾಯಿಯಾದವಳು, ಸಮ್ಮನಸ್ಸುಗಳೂ, ಸಮಸ್ತ ವಾಸಿಗಳೂ ನಿಮಗೆ ಮಾಡುವ ನಿತ್ಯ ಆರಾಧನೆಯನ್ನು ಅದರೊಂದಿಗೆ ಒಪ್ಪಿಸುತ್ತಾ ಇದ್ದೇವೆ. ನಮ್ಮ ಜೇಸುವೇ, ನೀವು ನಮ್ಮ ಪಾಪಗಳಿಗಾಗಿ ಹುಟ್ಟಿ ಕಷ್ಟ ದರಿದ್ರ ಅಪಮಾನವನ್ನು ಅನುಭವಿಸಿ ಶಿಲುಬೆಯಲ್ಲಿ ಪ್ರಾಣವನ್ನು ಕೊಟ್ಟಿದ್ದೀರಿ. ಈಗಲೇ ದೇವ ಪ್ರಸಾದದಲ್ಲಿ ನಮ್ಮ ಆತ್ಮಕ್ಕೆ ದಿವ್ಯ ಭೋಜನವಾಗಿ ಬಂದು ನಿಮ್ಮ ಮರಣದ ಫಲವನ್ನು ನಾವು ಸಂಪೂರ್ಣವಾಗಿ ಹೊಂದುವುದಕ್ಕೆ ಸ್ಥಿರವಾದ ನಂಬಿಕೆಯನ್ನು ನಮಗೆ ಕೊಟ್ಟಿದ್ದೀರಲ್ಲಾ ಈ ಉಪಕಾರಗಳನ್ನು ಅರಿತು ನಿಮಗೆ ಮೇಲರಿತ ಸ್ತೋತ್ರ ಮಾಡುತ್ತಾ ಇದ್ದೇವೆ."[೩೦] ಎಂದು ಹೇಳುವರು. ಯೇಸುವನ್ನು ಸ್ವೀಕರಿಸಿದ ಭಕ್ತ ಆತನನ್ನು ಸ್ತುತಿಸುವ ಬಗೆ ವ್ಯಕ್ತವಾಗಿದೆ 'ಸತ್ಪ್ರಸಾದವನ್ನು ತಕ್ಕೊಂಡ ನಂತರ ಸ್ತೋತ್ರವು' ಎಂಬ ಗೀತೆಯಲ್ಲಿ. ಇದು Je vois s'ouvrir l' uguste tabernacle ಎಂಬ ರಾಗದಲ್ಲಿದೆ. ಕೀರ್ತನೆ ಪುಸ್ತಕ, ಗೀತೆ-೪೪.

ಸ್ತುತಿ: ದೇವರ ಸ್ತುತಿಸ್ತೋತ್ರಗಳನ್ನು ಹಾಡುವುದೇ ಇಸ್ರಾಯೇಲರ ಪ್ರಾರ್ಥನೆಯ ಬಹುಮುಖ್ಯ ಅಂಶವಾಗಿತ್ತು. ಇದಕ್ಕೆ ಅತ್ಯುತ್ತಮ ಉದಾ: ಕೀರ್ತನೆಗಳು.[೩೧] ಇಸ್ರಾಯೇಲರಿಗೆ ದೇವರಿಗೆ ಸ್ತುತಿಸುವುದೇ ಜೀವನದ ಮುಖ್ಯ ಉದ್ದೇಶ. ಜೀವಂತವಾಗಿರುವುದರ ಸಂಕೇತ ದೇವರಿಗೆ ಅರ್ಪಿಸಿದ ಸ್ತುತಿ ಸ್ತೋತ್ರ (ಕೀರ್ತನೆ ೩೦:೧೦). ಕ್ರೈಸ್ತರು ಪ್ರಾರಂಭದಿಂದಲೇ ಯೇಸುಸ್ವಾಮಿಯ ಸ್ತುತಿಸ್ತೋತ್ರಗಳನ್ನು ಹಾಡುತ್ತಿದ್ದರು. ಉದಾ: ದೇವರನ್ನು ಹೊಗಳುವ 'ಮಹೋನ್ನತದಿ ಸ್ತುತಿ' ಎಂಬ ಗೀತೆ ಅತಿ ಪ್ರಾಚೀನ ಕಾಲದಿಂದಲೇ ಧರ್ಮಸಭೆಯಲ್ಲಿ ಪ್ರಚಲಿತವಾಗಿದೆ. ನಮ್ಮನ್ನು ಆವರಿಸಿರುವ ಅತಿಶಯ ವಸ್ತುಗಳನ್ನು ಸೃಷ್ಟಿಸಿದ ದೇವರು ಎಷ್ಟು ಉತ್ತಮರು, ಪ್ರತಿಯೊಂದು ವಸ್ತುವು ಅವರ ಪ್ರೀತಿ ಸೌಂದರ್ಯ ಮತ್ತು ಮಹತ್ವವನ್ನು ಸಾರುತ್ತವೆ. ನಮ್ಮ ಅಕ್ಕಪಕ್ಕದಲ್ಲಿರುವ ವಸ್ತುಗಳು ಸೌಂದರ್ಯವನ್ನು ಸವಿಯುವುದರ ಮುಖಾಂತರ ದೇವರ ಮಹತ್ವವನ್ನು ನಾವು ಅರಿತುಕೊಳ್ಳುತ್ತೇವೆ. ಅವುಗಳನ್ನು ತಿಳಿದುಕೊಂಡಷ್ಟು ಸೃಷ್ಟಿಕರ್ತರ ಹಿರಿತನವನ್ನು ಪ್ರಶಂಸಿಸುತ್ತೇವೆ. ಅವರನ್ನು ಕೊಂಡಾಡುತ್ತೇವೆ.

ಸ್ತುತಿಸುವುದು ಕ್ರೈಸ್ತಸಭೆಯಲ್ಲಿ ಒಂದು ಪ್ರಮುಖವಾದ ಅಂಶವಾಗಿದೆ. ಸ್ತುತಿಸುವುದು ಕ್ರಿಸ್ತೀಯ ಗುಣ. ಭಕ್ತ, ಯೇಸುವಿನ ಮಹತ್ಕಾರ್ಯಗಳನ್ನು ಕಂಡು ಆನಂದದಿಂದ ಸ್ತುತಿಸಿ ಕೊಂಡಾಡುತ್ತಾನೆ 'ಜೇಸುನಾಥರನ್ನು ಕುರಿತು' ಎಂಬ ಗೀತೆಯಲ್ಲಿ. ಇದು Salve Regina Coelitum ಎಂಬ ರಾಗದಲ್ಲಿದೆ. ಭಕ್ತ ಯೇಸುವಿನ ಸಂಪೂರ್ಣ ವ್ಯಕ್ತಿತ್ವವನ್ನು ಹೊಗಳಿರುವ ಬಗೆ ಇಲ್ಲಿ ವ್ಯಕ್ತವಾಗಿದೆ. ರೂಪಕಗಳ ಬಳಕೆ ಗೀತೆಯಲ್ಲಿದೆ.

೧.ತಾವು ಮೋಕ್ಷದ ರಾಯರು
ಓ ಜೇಸುವೇ
ಸರ್ವ ಲೋಕದ ಕರ್ತರು
ಮಂಗಳವೇ

೨.ಸಮಾಧಾನ ದೇವರು
ಓ ಜೇಸುವೇ
ಎಲ್ಲಕ್ಕೂ ಸೃಷ್ಟಿ ಕರ್ತರು
ಮಂಗಳವೇ

೩.ನಿತ್ಯ ಪಿತನ ಸುತನು
ಓ ಜೇಸುವೇ
ನಮ್ಮಾತ್ಮಗಳಸೂರ್ಯನು
ಮಂಗಳವೇ

೪.ವೇದ ಸಾಕ್ಷಿಯ ಒಲವು
ಓ ಜೇಸುವೇ
ಸ್ತುತಿಯವನ ಮಾರ್ಗವೆ
ಮಂಗಳವೇ

ಕೀರ್ತನೆ ಪುಸ್ತಕ, ಗೀತೆ-೩೯

ಯೇಸುವನ್ನು ಮೋಕ್ಷದರಾಯರು, ಸಮಾಧಾನದದೇವರು, ಸೃಷ್ಟಿಕರ್ತರು, ಆತ್ಮಗಳ ಸೂರ್ಯನು, ಪುಣ್ಯಾತ್ಮರಿಗೆನೀತಿ, ವೇದಸಾಕ್ಷಿಯಒಲವು, ಪಾಪಿಗಳಾಸ್ಪದಿಕರು, ಕನ್ನಿಕೆಯ ಸಂತೋಷವು, ದೀನರೂಪ ಕ್ಷಮಿಕರು ಎಂದು ಗೀತಗಾರ ರೂಪಕಗಳ ಮೂಲಕ ವರ್ಣಿಸಿದ್ದಾರೆ. ಗೀತಗಾರನಿಗೆ ಜೇಸುವೇ ಸರ್ವಸ್ವ ಪ್ರತಿಯೊಬ್ಬ ವ್ಯಕ್ತಿಗೂ ಈತನೇ ಆಧಾರನಾಗಿದ್ದಾನೆ ಎಂದು ಭಾವಿಸಿದ್ದಾನೆ ಗೀತಗಾರ. ಪಾಪಿಗಳಿಗೆ ಕನ್ನಿಕೆಗಳಿಗೆ ದೀನರಿಗೆ ಇವರೇ ಆಧಾರಭೂತರು. ಎಲ್ಲರಿಗೂ ಎಲ್ಲ ಸಮಯದಲ್ಲೂ ಎಟುಕುವ ಉದಾರ ವ್ಯಕ್ತಿ ಇವರಾಗಿದ್ದಾರೆ. ಇವರೇ ನಮ್ಮ ಸ್ತುತಿಗೆ ಪಾತ್ರರು. ಸರ್ವ ಜನರು ಇವರ ಮಹಿಮಾ ವ್ಯಕ್ತಿತ್ವವನ್ನು ಕಂಡು ಸ್ತುತಿಸಿ ಕೊಂಡಾಡಬೇಕು ಎಂಬುದೇ ಮೂಲ ಉದ್ದೇಶವಾಗಿದೆ. ಕೇವಲ ಮನುಷ್ಯ ವರ್ಗವಲ್ಲ ದೂತ ಗಣಗಳಿಗೂ ಆತನು ಯೇಸುವನ್ನು ಸ್ತುತಿಸಲು ಕೇಳಿಕೊಂಡಿರುವುದನ್ನು ಕಾಣುತ್ತೇವೆ.

ವೇದಸಾಕ್ಷಿ: ಯೇಸುವಿನ ಅಪ್ಪಣೆಮೇರೆಗೆ ಅಪೋಸ್ತೊಲರೆಲ್ಲರೂ ದೇಶವಿದೇಶಗಳಿಗೆ ಚದುರಿ ಹೋಗಿ ಶುಭಸಂದೇಶವನ್ನು ಸಾರಿ, ಧರ್ಮಸಭೆಯನ್ನು ವಿಸ್ತರಿಸಿ ಧರ್ಮಾಧ್ಯಕ್ಷರುಗಳನ್ನು ನೇಮಿಸಿದರು. ಹೆಚ್ಚುಕಡಿಮೆ ಎಲ್ಲರು ವೇದಸಾಕ್ಷಿಯ ಕಿರೀಟವನ್ನು ಹೊಂದಿದರು. ಸಂತ ಪೇತ್ರ ಭೂಲೋಕಕ್ಕೆ ಆಗ ಪ್ರಧಾನ ಪಟ್ಟಣವಾಗಿದ್ದ ರೋಮ್‌ನಗರದಲ್ಲಿ ತಮ್ಮ ಜ್ಞಾನಾಧಿಕಾರದ ಸಿಂಹಾಸನವನ್ನು ಸ್ಥಾಪಿಸಿ ತಲೆಕೆಳಕಾಗಿ ಶಿಲುಬೆಯಲ್ಲಿ ಜಡಿಯಲ್ಪಟ್ಟು ವೇದಸಾಕ್ಷಿಯಾದರು. ಸಂತ ಥಾಮಸ್ ನಮ್ಮ ದೇಶಕ್ಕೆ ಬಂದು ಶುಭಸಂದೇಶವನ್ನು ಸಾರಿ ನಂತರ ಮೈಲಾಪುರದಲ್ಲಿ ವೇದ ಸಾಕ್ಷಿಯಾದರು. ೧೫೪೨ನೇ ಇಸವಿಯಲ್ಲಿ ಮಹಾತ್ಮರು, ಸತ್ಯಗುರುವು

ಆಗಿದ್ದ ಸಂತ ಫ್ರಾನ್ಸಿಸ್ ಕ್ಸೇವೇರಿಯವರು ನಮ್ಮ ದೇಶಕ್ಕೆ ಬಂದು ಹಲವರಿಗೆ ಜ್ಞಾನೋಪದೇಶ ಮಾಡಿ 'ಹಿಂದೂ ದೇಶಕ್ಕೆ ಪ್ರಕಾಶ'ರಾದರು.

ಹಬ್ಬಗಳು:– ಯೇಸುವಿನ ಜನನಕ್ಕೆ ಸಂಬಂಧಿಸಿದ ಗೀತೆಗಳು: ಯೇಸುವಿನ ಜನನವು ದೇವದೂತಗಣಗಳಿಗು, ಮಾನವಕುಲಕ್ಕೂ ಸಂತಸದ ಸಂಗತಿಯಾಯಿತು. ದೇವದೂತಗಣಗಳು ಯೇಸುವಿನ ಜನನದಲ್ಲಿ ಹಾಡಿದ ಸಾಲುಗಳು ಕ್ರೈಸ್ತ ಮತದಲ್ಲಿ ಮಹತ್ವವನ್ನು ಪಡೆದಿದೆ. ಈ ಗಾನದ ಅರ್ಥವನ್ನು ಹಾಗು ಈ ಗಾನ ಕೇಳಿದಾಗ ಜನರು ಪ್ರತಿಕ್ರಿಯಿಸಿದ ಬಗೆಯನ್ನು 'ಜೇಸು ಕ್ರಿಸ್ತುವಿನ ಜನ್ಮವನ್ನು ಕುರಿತು' ಎಂಬ ಗೀತೆಯಲ್ಲಿ ವರ್ಣಿತವಾಗಿದೆ. ಇದು Les anges dans nos campagnes ಎಂಬ ರಾಗದಲ್ಲಿದೆ.

ಯೇಸುವಿನ ಜನನದ ಸಮಯದಲ್ಲಿ ದೂತರು 'ಮಹೋನ್ನತದಿ ದೇವರಿಗೆ ಮಹಿಮೆ, ಭೂಲೋಕದಿ ಸುಮನಸ್ಕರಿಗೆ ಶಾಂತಿ ಎಂದು ಸಾರಿತು' ಈ ಗಾನದಿಂದ ಎಚ್ಚೆತ್ತ ಕುರುಬರು, ದೀರ್ಘದರ್ಶಿಗಳು ಬಂದು ಮಗುವನ್ನು ಕಂಡು ಆರಾಧಿಸಿದರು. ಇಂದು ನಾವು ಈ ಗೋದಲಿಯಲ್ಲಿ ದಿವ್ಯ ಯೇಸುವನ್ನು ಕಂಡು ಆರಾಧಿಸಬೇಕು ಎಂದು ಕೇಳಿಕೊಳ್ಳುತ್ತಾರೆ ಗೀತಗಾರ.

ಇಗೋ ಸುಮ್ಮನಸುಗಳು
ಗೊಲ್ಲರಿಗೆ ತೋರುತ್ತಾರೆ
ಇಂಪಾಗಿ ಗಗನದೊಳು
ಸಂಗೀತವನ್ ಪಾಡುತ್ತಾರೆ
ಗ್ಲೋರಿಯಾ ಇನ್‌ಕ್ಸೆಲ್ಲಿಸ್‌ದೆಯೋ

ಕೀರ್ತನೆ ಪುಸ್ತಕ, ಗೀತೆ–೨೨

ಗ್ಲೋರಿಯಾ ಇನ್‌ಕ್ಸೆಲ್ಲಿಸ್‌ದೆಯೋ ಇದು ಗ್ರೀಕ್ ಭಾಷೆಯಿಂದ ಲ್ಯಾಟಿನ್ ಭಾಷೆಗೆ ಬಂದದ್ದಾಗಿದೆ. ಕ್ರಿಶ ೩೬೬ನೇ ಇಸವಿಯಲ್ಲಿ ಪೋರ್ಸಿಯೇರ್ಸ್ ಊರಿನ ಸಂತ ಹಿಲರಿಯವರು ಇದನ್ನು ಲ್ಯಾಟಿನ್ ಭಾಷೆಗೆ ಅನುವಾದಿಸಿದ್ದರೆಂದು ನಂಬಲಾಗಿದೆ. ಜಗದ್ಗುರು ತೆಲೆಸ್ಫೋರಸ್ (೧೨೮–೧೩೯) ಎಂಬುವರು ಕ್ರಿಸ್ತ ಜಯಂತಿಯ ಪೂಜೆಯನ್ನು ನಡುರಾತ್ರಿಯಲ್ಲಿ ಜರುಗಿಸಬೇಕೆಂದು ಈ ಗೀತೆಯನ್ನು ಆ ಪೂಜೆಯಲ್ಲಿ ಅರ್ಪಣೆಯ ಮೊದಲು ಹಾಡಬೇಕೆಂದು ಆಜ್ಞಾಪಿಸಿದರು. ಮುಂದೆ ಜಗದ್ಗುರು ಸಿಮ್ಮಕಸ್ ಎಂಬುವರು ಇದನ್ನು ಪ್ರತಿ ಭಾನುವಾರದ ಮತ್ತು ರಕ್ತಸಾಕ್ಷಿಗಳ ಪುಣ್ಯ ತಿಥಿಗಳಲ್ಲಿ ಹಾಡಬೇಕೆಂದು ವಿಧಿಸಿದ್ದರು. ಆದರೆ ಧರ್ಮಾಧ್ಯಕ್ಷರು ಅರ್ಪಿಸುವ ಪೂಜೆಗಳಲ್ಲಿ ಮಾತ್ರ ಇದನ್ನು ಹಾಡಬೇಕೆಂದಿತ್ತು. ೧೧ನೇ ಶತಕದ ಕೊನೆಯ ಹಂತದಲ್ಲಿ ಇದನ್ನು ಎಲ್ಲ ಗುರುಗಳು ಪೂಜಾವಿಧಿಗಳಲ್ಲಿ ಉಪಯೋಗಿಸಿದ್ದು ಕಂಡು ಬರುತ್ತದೆ.

ಸುಮ್ಮನಸ್ಸುಗಳು: ದೇವ ದೂತರಿಗೆ ಉಪಯೋಗಿಸುವ ಸಂವಾದಿ ಪದ. ಗೀತಗಾರ ಗೀತೆಯಲ್ಲಿ ಗೊಲ್ಲರೆ ಗಮನಿಸಿ, ಮನುಷ್ಯರೇ ಲಾಲಿಸಿರಿ ಎಂದು ಹೇಳುತ್ತಾ ಯೇಸುವಿನ ಜನನದ ಶುಭ ಸಮಾಚಾರವನ್ನು ಕೇಳುವುದರೊಂದಿಗೆ ಆ ಶುಭವಾರ್ತೆಯನ್ನು ಎಲ್ಲೆಲ್ಲೂ ಸಾರಿರಿ ಎಂದು ಹೇಳುತ್ತಾರೆ. ಯೇಸು ಹುಟ್ಟಿದ ದಿನ

[illegible]

ಭಾಗ್ಯವುಳ್ಳ ದಿನ ಶುಭದಿನವಾಗಿದೆ ಎನ್ನುತ್ತಾರೆ. ಈ ದಿನದ ಮಹತ್ವವಾದರೂ ಏನು?

ಪಾಪವನ ನಿವಾರಿಸಲು
ಮೋಕ್ಷದಿಂದ ಬಂದಿದ್ದಾರೆ
ನರರನ್ನು ರಕ್ಷಿಸಲು
ನಮ್ಮೊಳು ಜನ್ಮಿಸಿದ್ದಾರೆ.
ಗ್ಲೋರಿಯಾ ಇನ್‌ಕ್ಸೆಲ್ಸಿಸ್‌ದೆಯೊ

ಯೇಸು ಜನಸಿದ್ದು ಈ ಮಹತ್‌ಕಾರ್ಯದ ಸಾಧನೆಗಾಗಿ ಪಾಪಿಮಾನವನನ್ನು ಪಾಪದ ಬಂಧನದಿಂದ ಬಿಡಿಸಿ ಸರಿಯಾದ ಮಾರ್ಗದಲ್ಲಿ ರಕ್ಷಣೆಯ ಮಾರ್ಗದಲ್ಲಿ ನಡೆಸಲು ಎಂದು ಗೀತಗಾರ ಹೇಳುತ್ತಾರೆ.

ಗದ್ಯಮಯ ಸಾಲುಗಳು ಕಂಡು ಬರುತ್ತದೆ. ಉದಾ: ಕೊಂಡಾಡಬೇಕೆನ್ನುತ್ತಾರೆ. ಮೋಕ್ಷದಿಂದ ಬಂದಿದ್ದಾರೆ ಇತ್ಯಾದಿ. ಗೊಲ್ಲರು, ಬೈಲುಮಾಡು ಎಂಬ ಆಡು ಮಾತುಗಳನ್ನು ಬಳಸಿದ್ದಾರೆ.

ಯೇಸುವಿನ ಹುಟ್ಟಿನ ಚಿತ್ರಣವನ್ನು ಕಥನ ರೂಪದಲ್ಲಿ ವರ್ಣಿಸಿರುವುದು ಈ ಗೀತೆಯ ವಿಶೇಷವಾದ ಅಂಶವಾಗಿದೆ. ಯೇಸುವಿನ ಜನನಕ್ಕೆ ಸಂಬಂಧಿಸಿದಂತೆ ನಾವು ಕಾಣುವ ಮತ್ತೊಂದು ಗೀತೆಯೇ 'ದಿವ್ಯ ಬಾಲರನ್ನು ಕುರಿತು' ಎಂಬ ಗೀತೆ. ಇದು Il cst ne le divin enfant ಎಂಬ ರಾಗದಲ್ಲಿದೆ. ಗೀತೆಗಾರ ಯೇಸುವಿನ ಜನನದ ವಾರ್ತೆಯನ್ನು ಎಲ್ಲೆಡೆ ಸಾರಿ ಸಂತೋಷಿಸುವ ಸಂದರ್ಭವನ್ನು ಇಲ್ಲಿ ಕಾಣುತ್ತೇವೆ. ಬಾಲ ಯೇಸುವನ್ನು ಕಂಡಾಗ ಭಕ್ತ ತನ್ನ ಆನಂದವನ್ನು ಹೀಗೆ ವ್ಯಕ್ತಪಡಿಸಿದ್ದಾನೆ.

ಹಾ! ಯೆಷ್ಟೋ ಚೆನ್ನಾಗಿದ್ದಾರೆ
ಅತಿ ಸುರೂಪವುಳ್ಳವರು
ಹಾ! ಯೆಷ್ಟೋ ಚೆನ್ನಾಗಿದ್ದಾರೆ;
ಶಾಂತವ ತೋರಿಸುತ್ತಾರೆ

ಕೀರ್ತನೆ ಪುಸ್ತಕ, ಗೀತೆ-೨೨

ಯೇಸುವು ದೇವಪುತ್ರನಾಗಿದ್ದು ಇಂತಹ ದೀನಸ್ಥಿತಿಯಲ್ಲಿ ಕೊಟ್ಟಿಗೆಯಲ್ಲಿ ಜನಿಸಿದ್ದು ಆತನಿಗೆ ಬೇಸರವನ್ನು ತಂದ ವಿಷಯವಾಗಿದೆ ಆದ್ದರಿಂದ ಗೀತಗಾರ:

ಗವಿಯವರ ಭವನ
ಹುಲ್ಲಿನ ಮೇಲೆ ಬಿದ್ದವರು;
ಗವಿಯವರ ಭವನ
ದೇವರಿಗೆಂಥಾವಮಾನ!

ಎನ್ನುತ್ತಾರೆ. ಆದರೂ ಆತನನ್ನು ಬಡವ, ಗೋದಲಿಯಲ್ಲಿ ಹುಟ್ಟಿದ ವ್ಯಕ್ತಿಯೆಂದು ದೂರ ಸರಿಸುವುದಿಲ್ಲ.

ಬದಲಾಗಿ ಆತನೊಂದಿಗೆ ಸದ್ಭಾವಮೂಡಿ ಆತನಲ್ಲಿ ಯಾವುದೋ ಅಭೂತ ಪೂರ್ವ ಶಕ್ತಿಯಡಗಿದೆ ಎಂದು ಭಾವಿಸಿ ಆತನೇ ನಿಜವಾದ ದೇವರಪುತ್ರ ಎಂದು ನಂಬಿ ಹೀಗೆನ್ನುತ್ತಾನೆ.

ಅವರನ್ ಪ್ರೀತಿ ಮಾಡೋಣ
ಅದಕ್ಕಾಗಿ ಜನ್ಮಿಸಿದರು;
ಅವರನ್ ಪ್ರೀತಿ ಮಾಡೋಣ
ನಮ್ಮ ಹೃದಯ ಕೊಡೋಣ.

ಗೀತೆಯ ಮುಂದಿನ ಚರಣಗಳಲ್ಲಿ ಯೇಸುವಿನ ಪರಿಪಾಲಕ ತಂದೆಯಾದ ಸಂತ ಜೋಸೆಫರ ವ್ಯಕ್ತಿತ್ವವನ್ನು ವರ್ಣಿಸಿದ್ದಾರೆ.

ಜೋಸೇಫರೇ ತಪ್ಪಿಸಿರಿ
ಕೂಸನ್ನು ಕೊಲ್ಲಬೇಕೆಂದರು;
ಜೋಸೇಫರೇ ತಪ್ಪಿಸಿರಿ
ದೂರಕ್ಕೆ ವೈದು ಹೋಗಿರಿ.

ಅವರ ತಾಳ್ಮೆ ನೋಡಿರಿ,
ದೇಶಾಂತ್ರಿಯಾಗಲೊಪ್ಪಿದರು;
ಅವರ ತಾಳ್ಮೆ ನೋಡಿರಿ
ಅದನ್ ಕಂಡು ಭಾವಿಸಿರಿ

ಯೇಸುವಿನ ಜನನದ ವಾರ್ತೆಯನ್ನು ಕೇಳಿದ ಜ್ಞಾನಿಗಳು ಯೇಸುವನ್ನು ನೋಡಲು ಹೊರಡುತ್ತಾರೆ. ಅಂದಿನ ರಾಜನಾದ ಹೆರೋದನು ಯಾವಾಗ ನಕ್ಷತ್ರವನ್ನು ನೋಡಿದರು ಎಂಬುದನ್ನು ಅವರಿಂದ ತಿಳಿದುಕೊಳ್ಳುತ್ತಾನೆ. ಅವನ ವಿನಂತಿಯಂತೆ ಜ್ಞಾನಿಗಳು ತಿರುಗಿ ಬರದೇ ಇದ್ದುದ್ದನ್ನು ಕಂಡು ಹೆರೋದನು ಬೆತ್ಲೆಹೇಮ್ ಸುತ್ತಲಿನ ಎಲ್ಲಾ ಸ್ಥಳಗಳಲ್ಲಿರುವಂತಹ ಎರಡು ವರ್ಷಗಳೊಳಗಿನ ಎಲ್ಲಾ ಗಂಡು ಮಕ್ಕಳನ್ನು ಕೊಲ್ಲಬೇಕೆಂದು ಆಜ್ಞೆಯನ್ನು ಹೊರಡಿಸುತ್ತಾನೆ. ಈ ರೀತಿ ಮಾಡುವುದರಿಂದ ಖಂಡಿತವಾಗಿ ಸತ್ತಂತಹ ಮಕ್ಕಳಲ್ಲಿ ಕ್ರಿಸ್ತನು ಕೂಡ ಒಬ್ಬನಾಗಿರುತ್ತಾನೆ ಎಂದು ಹೆರೋದನು ಯೋಚಿಸುತ್ತಾನೆ. ಈ ಗಂಭೀರ ಘಟನೆಯಿಂದ ಯೇಸುವನ್ನು ಕಾಪಾಡಿದ ಜೋಸೆಫನ ಮಹತ್ಕಾರ್ಯವನ್ನು ಗೀತಗಾರ ಸ್ಮರಿಸಿದ್ದಾನೆ.

ದೇವರು ತನ್ನ ಚಿತ್ತವನ್ನು ಮಾಡುವಂತವರಿಗೆ ಯಾವಾಗಲೂ ಮಾರ್ಗದರ್ಶನ ಮಾಡುತ್ತಾರೆ. ಸಾಮಾನ್ಯವಾಗಿ ದೇವರು ಸತ್ಯವೇದದಲ್ಲಿರುವ ತನ್ನ ಮಾತುಗಳ ಮೂಲಕ ಮತ್ತು ಸ್ನೇಹಿತರ ಮೂಲಕ ಮಾರ್ಗದರ್ಶನ ಮಾಡುತ್ತಾರೆ. ಇಂತಹ ಮಾರ್ಗದರ್ಶನಗಳು ಪವಿತ್ರಾತ್ಮನಿಂದ ಪುಷ್ಟೀಕರಿಸಲ್ಪಡುತ್ತದೆ. ಆದರೆ ಕೆಲವು ಸಮಯಗಳಲ್ಲಿ ಕನಸುಗಳ ಮತ್ತು ದರ್ಶನಗಳ ಮೂಲಕ ನೇರವಾಗಿ ಮಾರ್ಗದರ್ಶನ ಮಾಡುತ್ತಾರೆ.

ಜೋಸೇಫನಿಗೆ ದೇವದೂತರು ಕನಸ್ಸಿನಲ್ಲಿ ಕಾಣಿಸಿಕೊಂಡು ಮಾರ್ಗದರ್ಶನ ಮಾಡಿದರು. ಜೋಸೇಫರು ನೀತಿವಂತ ವ್ಯಕ್ತಿಯಾಗಿದ್ದರು. ದೇವರ ಕರೆಯಂತೆ ಆತನ ಪ್ರೇರಣೆಯಂತೆ ನಡೆದುಕೊಳ್ಳುತ್ತಿದ್ದು ದೇವರಿಗೆ ವಿಧೇಯರಾದ ವ್ಯಕ್ತಿಯಾಗಿದ್ದರು. ಯೇಸುವಿನ ರಕ್ಷಣೆಗಾಗಿ ತನ್ನನ್ನೇ ದೇಶಾಂತರಕ್ಕೆ ಹೋಗಲು ಸಿದ್ಧಮಾಡಿಕೊಳ್ಳುತ್ತಾರೆ. ತನಗರಿವಿಲ್ಲದಿದ್ದ ನಾಡಿಗೆ ಹೋಗಬೇಕಾಗಿ ಬಂದ ಕಷ್ಟದಸಂದರ್ಭಗಳು ಮಗುವಿನ ಜನನಕ್ಕೆ ಉತ್ತಮ ಸ್ಥಳವಾಗಲೀ ಮನೆಯಾಗಲೀ ದೊರೆಯದೇ ಇದ್ದದ್ದು ಕಷ್ಟಕರವಾದ ಸನ್ನಿವೇಶಗಳು.

ಆದರೂ ದೇವರಲ್ಲಿ ವಿಶ್ವಾಸವಿಟ್ಟು ಬಾಳಿನಲ್ಲಿ ಮುನ್ನಡೆದ ಧೀಮಂತ ವ್ಯಕ್ತಿಯಾಗಿ ಕಂಡು ಬರುತ್ತಾರೆ.

ಯೇಸುವಿನ ಯಾತನೆಗೆ ಸಂಬಂಧಿಸಿದ ಗೀತೆಗಳು: ಯೇಸುವಿನ ಯಾತನೆ, ಮರಣ, ನಿಂದೆ, ನೋವು, ಅಳಲನ್ನು ನಮ್ಮ ಮುಂದಿಡುವ ಶಿಲುಬೆಹಾದಿ ಎಂಬ ಪ್ರಮುಖ ಘಟನೆ. ಕ್ರೈಸ್ತ ಸಮುದಾಯದಲ್ಲಿ ಇಂದು ಭಯಭಕ್ತಿಯಿಂದ ಆಚರಿಸುತ್ತಾರೆ. ಒಡೆದು ಹೋಗಿರುವ ಸಮಾಜವನ್ನು ಸರಿಪಡಿಸಲು ಒಬ್ಬನ ರಕ್ತ ಚೆಲ್ಲಾಡಿತು. ಚೂರುಚೂರಾದ ಲೋಕವನ್ನು ಸರಿ ಪಡಿಸಲು ಒಬ್ಬನ ಶರೀರ ಚೂರುಚೂರಾಯಿತು. ಯೇಸುವು ಪಾಪಿಮಾನವನನ್ನು ರಕ್ಷಿಸಲು ತನ್ನ ಶಿಲುಬೆ ಪಯಣವನ್ನು ಧೈರ್ಯದಿಂದ ಎದೆಗುಂದದೆ ಒಪ್ಪಿಕೊಂಡರು.

ನಮ್ಮ ಸಂಕಷ್ಟದ ದಿನಗಳಲ್ಲಿ ಮಾನವ ಶಾಂತಿ, ಸಮಾಧಾನ ಹಾಗೂ ಪ್ರಸನ್ನತೆಯನ್ನು ತನ್ನ ಬಾಳಿನಲ್ಲಿ ಮತ್ತು ಸಮಾಜದಲ್ಲಿ ಬಯಸುತ್ತಾನೆ. ಮನುಷ್ಯನು ಎಲ್ಲಾ ಕಡೆಯಿಂದಲೂ ತೊಂದರೆಗೆ ಈಡಾಗಿದ್ದಾನೆ. ತಾತ್ಕಾಲಿಕವಾದಂತಹ ಈ ನಮ್ಮ ಸಮಾಜ, ದೇಶ, ಜನ ಹಾಗೂ ವಸ್ತು ನಮಗೆ ಶಾರೀರಿಕವಾಗಿ, ಮಾನಸಿಕವಾಗಿ ಅಥವಾ ಆಧ್ಯಾತ್ಮಿಕ ನೆಮ್ಮದಿಯನ್ನು ನೀಡಲು ಸಾಧ್ಯವಿಲ್ಲ. ಇದರಲ್ಲಿನ ಪ್ರಾರ್ಥನೆಗಳಿಂದ, ಜಪ ತಪಗಳಿಂದ, ಧ್ಯಾನದಿಂದ ನಮ್ಮನ್ನು ನಾವೇ ಪರಿವರ್ತಿಸಿಕೊಳ್ಳಬಹುದು. ಇಂತಹ ಶಕ್ತವಾದ ಗೀತೆಗಳತ್ತ ಗೀತಗಾರ ನಮ್ಮ ಗಮನ ಸೆಳೆದಿದ್ದಾರೆ 'ಶಿಲುಬೆಯ ಹಾದಿಯ ಸಾಧಕದ ಸಮಯದಲ್ಲಿ' ಎಂಬ ಗೀತೆಯಲ್ಲಿ.

ಶಿಲುಬೆ ಹಾದಿಯಲ್ಲಿ ೧೪ ಸ್ಥಳಗಳೆಂದು ಗುರುತಿಸಲಾಗಿದೆ. ಈ ಸ್ಥಳಗಳು ಯೇಸುವಿನ ಯಾತನೆ ಸಮಯದಿಂದ ಕಾಲ್ವರಿಬೆಟ್ಟದಲ್ಲಿ ಪ್ರಾಣ ನೀಗುವವರೆಗಿನ ನಡುವೆ ಉಂಟಾದ ಹಿಂಸೆಯ ಘಟ್ಟವನ್ನು ತಿಳಿಸುವುದಾಗಿದೆ. ಈ ಘಟನೆ ನಡೆದ ದಿನವನ್ನು ಶುಭಶುಕ್ರವಾರ ಎಂದು ಕರೆಯುತ್ತಾರೆ. ಮಾನವ ಕೋಟಿಗೆ ಜೀವದಾನವನ್ನೇ ಮಾಡಿದ ಯೇಸುವಿನ ರಕ್ಷಣಾ ಕಾರ್ಯವನ್ನು ಕಂಡು ಈ ದಿನವನ್ನು ಶುಭವಾದ ದಿನವೆಂದು ಕರೆಯಲಾಗಿದೆ. ಪ್ರತಿವರ್ಷವು ತಪಸ್ಸುಕಾಲದಲ್ಲಿ ಕೆಲವರು ಶುಕ್ರವಾರದಂದು ಕೆಲವು ಭಕ್ತರು ಪ್ರತಿದಿನವು ಶಿಲುಬೆ ಹಾದಿಯನ್ನು ಮಾಡುವುದುಂಟು. ಕೆಲವು ಭಕ್ತಾದಿಗಳು ಪ್ರತಿನಿತ್ಯವು ಶಿಲುಬೆಹಾದಿಯನ್ನು ಮಾಡಿ ವಿಶೇಷ ಭಕ್ತಿಯನ್ನು ವ್ಯಕ್ತಪಡಿಸುವವರು ಇದ್ದಾರೆ. ಶಿಲುಬೆಹಾದಿಯನ್ನು ಮಾಡುವುದರಿಂದ ದೈವೀ ವರಪ್ರಸಾದವನ್ನು ನಾವು ಪಡೆಯಬಹುದೆಂಬ ನಂಬಿಕೆ ಅನೇಕರಲ್ಲಿದೆ. ಈ ಶಿಲುಬೆಹಾದಿಯ ಗೀತೆಗಳ ಚಿಂತನೆ ಇಂತಿದೆ.

ಶಿಲುಬೆ ಹಾದಿಗಾಗಿ ಮಾಡಲಾಗಿದ್ದ ಪೀಠದ ಮುಂಭಾಗದಲ್ಲಿ ನಿಂತು ಪ್ರಾರ್ಥಿಸುವಾಗ ಈ ಗೀತೆಯೊಂದಿಗೆ ಶಿಲುಬೆಹಾದಿಯನ್ನು ಪ್ರಾರಂಭಿಸುತ್ತಾರೆ.

ಶಿಲ್ಬೆ ಹೊರುವ ಜೇಸುವನ್ನು
ಭಕ್ತ ದುಃಖದಿಂದ ಬೆನ್ನಟ್ಟೋಣ;
ರಕ್ಷಕರ ಮಾತೃಕೆಯನ್ನು
ನೋಡಿ ಬಾದೆ ಸಹಿಸೋಣ

ಕೀರ್ತನೆ ಪುಸ್ತಕ, ಗೀತೆ–೨೪

ಶಿಲುಬೆ ಹಾದಿಯ ಈ ಹದಿನಾಲ್ಕು ಸ್ಥಳಗಳು ಯೇಸುವಿನ ಕ್ರೂರ ಮರಣವನ್ನು ಅದರ ಪೂರ್ವದಲ್ಲಿ ಆತನನುಭವಿಸಿದ ಯಾತನೆ ಹಿಂಸೆಯನ್ನು ಕಣ್ಣಿಗೆ ಕಟ್ಟುವಂತೆ ಹೃದಯಂಗಮವಾಗಿ ಚಿತ್ರಿಸುವಲ್ಲಿ ಯಶಸ್ವಿಯಾಗಿವೆ. ಕಾವ್ಯಾತ್ಮಕವಾಗಿಯೇ ಮೂಡಿಬಂದಿದ್ದು ಅರ್ಥಗರ್ಭಿತವಾದ ಪದಗಳು, ಸಾಲುಗಳು ಹಿಂಸೆಯನ್ನು ವರ್ಣಿಸಲು ಸಾವಿನ ಭೀಕರ ಚಿತ್ರಣವನ್ನು ನಮ್ಮ ಮುಂದಿಡಲು ಯಶಸ್ವಿಯಾಗಿವೆ. ನಿರಪರಾಧಿಗಳು ಇಂದು ತೀರ್ಪಿಗೆ ಒಳಗಾಗುತ್ತಿದ್ದಾರೆ. ನಾವು ಒಳ್ಳೆಯವರು, ಬೇರೆಯವರು ಕೆಟ್ಟವರು ಎಂಬ ತೀರ್ಪು ಸಹಜವಾದುದ್ದು. ನಮ್ಮ ತಪ್ಪುಗಳನ್ನು ನಾವು ಒಪ್ಪಿಕೊಳ್ಳದೇ ಬೇರೆಯವರ ಮೇಲೆ ಹೊರಿಸಲು ಯತ್ನಿಸುತ್ತೇವೆ. ಪರರನ್ನು ಕೆಳಗೆ ಹಾಕಿ ತಮಾಷೆ ನೋಡುವುದೇ ನಮ್ಮ ಆಟವಾಗಿಬಿಟ್ಟಿದೆ. ಸಮಾಜದಲ್ಲಿ ಜನರು ಭಾರವಾದ ಹೊರೆಯನ್ನು ಹೊತ್ತುಕೊಳ್ಳಲು ತೂರಾಡಿ, ಹಸಿವನ್ನು ನೀಗಿಸಲು ಊಟವಿಲ್ಲದೆ ಮಾನವನ್ನು ಕಾಪಾಡಿಕೊಳ್ಳಲು ಬಟ್ಟೆಯಿಲ್ಲದೆ, ಶೀಲವನ್ನು ರಕ್ಷಿಸಲು ಸಹಾಯವಿಲ್ಲದೆ ಇನ್ನೂ ಹಲವಾರು ಹಾದಿಗಳಲ್ಲಿ ಕಷ್ಟಗಳನ್ನು ಎದುರಿಸುತ್ತಿರುವ ಜನರ ಭಾರವನ್ನು ದಿನೇದಿನೇ ನಾವು ಹೆಚ್ಚು ಮಾಡುತ್ತಿದ್ದೇವೆ. ಅನೇಕ ಬಾರಿ ಒಳ್ಳೆಯಕಾರ್ಯಗಳನ್ನು ಮಾಡದೇ ಬಿಟ್ಟು ಹೋಗುತ್ತೇವೆ. ನ್ಯಾಯವಾಗಿ ಬಾಳುವವರನ್ನು ನಾವು ಗೌರವಿಸುತ್ತಿದ್ದೇವೆಯೆ? ಪ್ರೀತಿಯಿಂದಲೂ ನೀತಿಯಿಂದಲೂ ಬಾಳುತ್ತಿರುವವರನ್ನು ಕೈಲಾಗದವರು ಎಂದು ನಾವು ಭಾವಿಸುತ್ತೇವೆ. ಅನೇಕ ವೇಳೆ ಯೇಸುವಿನ ಮಾನವೀಯ ಮೌಲ್ಯಗಳನ್ನು ಮಣ್ಣಿನಲ್ಲಿ ಮುಚ್ಚಿಟ್ಟು ಬಾಳುತ್ತೇವೆ. ಹೀಗೆ ನಾವು ದಿನನಿತ್ಯ ಮಾಡುವ ಅಪರಾಧಗಳು ಯೇಸುವನ್ನು ಇಂದು ನೋವಿಸುವ, ದುಃಖಿಸುವ ಹಿಂಸಿಸುವ ತಪ್ಪುಗಳಾಗಿವೆ ಎಂದು ನಂಬಿ ಇಂತಹ ಅಮಾನವೀಯ ಚಿಂತನೆಗಳಿಂದ ಚಟುವಟಿಕೆಗಳಿಂದ ವರ್ತನೆಯಿಂದ ದೂರಸರಿದು ಮೌಲ್ಯಯುತ ಬದುಕನ್ನು ನಡೆಸಬೇಕೆಂಬ ಸಂದೇಶ ಈ ಶಿಲುಬೆ ಹಾದಿಯ ಗೀತೆಗಳು ನೀಡುತ್ತವೆ.

ಯೇಸುವಿನ ಮರಣವನ್ನು ವರ್ಣಿಸುವ ಹತ್ತನೇ ಸ್ಥಳದ ಗೀತೆಯ ವಿಶೇಷತೆಯನ್ನು ಗಮನಿಸುವ. ಶಿಲುಬೆಯ ಮೇಲೆ ಮರಣ ವೇದನೆಯಿಂದ ತೂಗಾಡಿದ ಸಮಯದಲ್ಲಿ ಯೇಸು ಏಳು ಹಿತನುಡಿಗಳನ್ನು ನುಡಿದರು. ಅವರು ಸಾಯುವ ಮುನ್ನ ಹೇಳಿದ ಮಾತುಗಳು ಇಂತಿವೆ.

೧. ಪಿತನೆ ಇವರನ್ನು ಕ್ಷಮಿಸಿ – ಲೂಕ ೩:೩೪

೨. ಇಂದೇ ನೀನು ನನ್ನೊಂದಿಗೆ ಪರಂಧಾಮದಲ್ಲಿರುವೇ – ಲೂಕ ೨೩:೪೩

೩. ಅಮ್ಮ ಇಗೋ ನಿನ್ನ ಮಗ, ಇಗೋ ನಿನ್ನ ತಾಯಿ – ಯೋಹಾ ೧೩:೨೭

೪. ದಾಹವಾಗಿದೆ – ಯೋಹಾ ೧೯: ೨೮

೫. ನನ್ನ ದೇವರೆ, ಏಕೆ ನನ್ನನ್ನು ಕೈ ಬಿಟ್ಟಿರುವೆ – ಮತ್ತಾಯ ೨೮:೩೬

೬. ಎಲ್ಲವು ನೆರವೇರಿತು – ಯೋಹಾ ೧೯:೩೦

೭. ತಂದೆಯೇ ನಿನ್ನ ಕೈಯಲ್ಲಿ ನನ್ನ ಆತ್ಮವನ್ನು ಒಪ್ಪಿಸುತ್ತೇನೆ – ಲೂಕ ೧೭:೭

ಶಿಲುಬೆಯಲ್ಲಿ ಕ್ರೂರ ವೇದನೆಯನ್ನು ಅನುಭವಿಸುವಾಗ ಪ್ರಾಣವನ್ನು ಕಳೆದುಕೊಳ್ಳುವ ಕೊನೆಗಳಿಗೆಯಲ್ಲೂ

ಯೇಸುವಿನ ನಡೆನುಡಿಗಳು ನಮ್ಮ ಹೃನ್ಮನಗಳನ್ನು ಸೆರೆಹಿಡಿಯುತ್ತವೆ. ಯೇಸು ಸಾವಿನ ಸಮಯದಲ್ಲೂ ಶಿಕ್ಷಿಸಿದವರಿಗೆ ಒಳಿತನ್ನೇ ಬಗೆದ ಮಹಾನುಭವರ ಸ್ನೇಹ, ಕ್ಷಮಾ ಸ್ನೇಹವಾಗಿದೆ. ಆತನ ನಡೆನುಡಿಗಳು ಬೋಧನೆ ನಮಗೆ ಪ್ರತಿನಿತ್ಯವು ಸದ್ಬಾಳನ್ನು ನಡೆಸಲು ಪ್ರೇರಕಶಕ್ತಿಯಾಗಿದೆ. ಯೇಸುವಿನ ಇಹಲೋಕದ ಪಯಣ ನಮ್ಮೆಲ್ಲರಿಗೂ ನಂಬಿಕೆಯನ್ನು ತರುವ ಪಯಣವಾಗಿದೆ. ಕಥನ ರೂಪದ ನಿರೂಪಣೆ ಈ ಗೀತೆಯ ವೈಶಿಷ್ಟ್ಯವಾಗಿದೆ.

ಯೇಸುವಿನ ಯಾತನೆಯನ್ನು ವರ್ಣಿಸುವ ಮತ್ತೊಂದು ಗೀತೆ 'ಜೇಸುನಾಥರ ಪಾಡುಗಳನ್ನು ಕುರಿತು' ಎಂಬುದು. ಇದು An sang quum dieu va repandre ಎಂಬ ರಾಗದಲ್ಲಿದೆ. ಯೇಸುವು ತನಗುಂಟಾಗುವ ಹಿಂಸೆ ಯಾತನೆಯನ್ನು ಮುಂಚಿತವಾಗಿ ಮನಗಂಡು ಗೆತ್ಸೇಮಿನಿ ತೋಟಕ್ಕೆ ಹೋಗಿ ಪ್ರಾರ್ಥಿಸುವ ಘಟನೆ ಮಾರ್ಕನ ಸುವಾರ್ತೆ ೧೪ನೇ ಅಧ್ಯಾಯದಲ್ಲಿ ತಿಳಿಸಲಾಗಿದೆ. ಕಥನರೂಪದಲ್ಲಿ ನಿರೂಪಿತವಾದ ಈ ಗೀತೆ ಯೇಸುವಿನ ಯಾತನೆಯ ಘಟನೆಯನ್ನು ವಿವರವಾಗಿ ತಿಳಿಸಿಕೊಡುವಲ್ಲಿ ಯಶಸ್ವಿಯಾಗಿದೆ. ಈ ಮಹಾನ್ ಘಟನೆ ಇಂತಿವೆ.

ಯೇಸು ಮತ್ತು ಆತನ ಶಿಷ್ಯರು ಕೆದ್ರೋನ್ ಹೊಳೆಯನ್ನು ದಾಟಿ ಒಲವೆತ್ ಬೆಟ್ಟಕ್ಕೆ ಬಂದರು. ಅದರ ತಪ್ಪಲಲ್ಲೇ 'ಜೆತ್ಸೆಮಿನಿ' ತೋಟವಿತ್ತು. 'ಜೆತ್ಸೆಮಿನಿ' ಎಂದರೆ ಎಣ್ಣೆಯ ಗಾಣ ಎಂದರ್ಥ. ಅಲ್ಲಿ ಗಾಣದಿಂದ ಒಲಿವ್ ಎಣ್ಣೆಯಲ್ಲಿ ತೆಗೆಯುತ್ತಿದ್ದರು. ಇಲ್ಲಿಯೇ ಯೇಸುಸ್ವಾಮಿ ತನ್ನ ಶಿಷ್ಯರಿಂದ ದೂರ ಹೋಗಿ ಪ್ರಾರ್ಥಿಸಲು ಬಯಸಿದರು. ನಾನು ಪ್ರಾರ್ಥನೆಮಾಡಿ ಬರುವವರೆಗೂ ಇಲ್ಲೇ ಕುಳಿತಿರಿ ಎಂದರು. ಆಗಾಗಲೇ ಅವರ ಮುಖ ಮೈಮೇಲೆ ರಕ್ತದ ಬೆವರು ಕಾಣಿಸಿಕೊಂಡಿತು! 'ತಂದೆಯೇ ಸಾಧ್ಯವಾದರೆ ಈ ವಿಷಮಗಳಿಗೆಯು ನನ್ನಿಂದ ದೂರವಾಗಲೀ ನಿನಗೆ ಎಲ್ಲವೂ ಸಾಧ್ಯ, ಆದರೆ ನನ್ನ ಇಷ್ಟದಂತಲ್ಲ, ನಿನ್ನ ಇಷ್ಟದಂತೆ ಮಾಡು' ಎಂದು ಬೇಡಿಕೊಂಡರು. ಪ್ರಾರ್ಥಿಸುತ್ತಿರುವಾಗ ಮಧ್ಯದಲ್ಲಿ ತನ್ನ ಶಿಷ್ಯರ ಬಳಿಗೆ ಮೂರುಸಾರಿ ಬಂದು ಹೋದರು. ಅವರು ನಿದ್ರಿಸುತ್ತಿದ್ದರು. ಮೂರನೆಯ ಬಾರಿ ಬಂದು ಶಿಷ್ಯರನ್ನು ಏಳಿಸುತ್ತಿರಲು, ಜೂದಾಸ್ ಇಸ್ಕರಿಯಾತನು ಜನರ ಜೊತೆ ಬಂದು ಅವರನ್ನು ಮುತ್ತಿದನು. ಆ ಜನರ ಕೈಯಲ್ಲಿ ಕತ್ತಿ, ದೊಣ್ಣೆಗಳಿದ್ದವು. ಜೂದಾಸ್ ಮುಂದೆ ಬಂದು 'ಗುರುವೇ ನಮಸ್ಕಾರ' ಎಂದು ಯೇಸುವಿಗೆ ಮುತ್ತಿಟ್ಟನು. ಅದು ಯೇಸುವಿನ ವೈರಿಗಳಿಗೆ ಜೂದಾಸ್ ಕೊಟ್ಟ ಸಾಂಕೇತಿಕ ಸೂಚನೆಯಾಗಿತ್ತು. ವೈರಿಗಳು ಆತನನ್ನು ಬಂಧಿಸಿ ಎಳೆದೊಯ್ದರು. ಯೇಸುವಿಗೆ ಮರಣ ದಂಡನೆ ಆಗಬೇಕು ಎಂದರು. ಕೆಲವರು ಆತನ ಮುಖಕ್ಕೆ ಉಗುಳಿದರು. ಕೆಲವರು ಗುದ್ದಿದರೆ ಕೆಲವರು ಕೆನ್ನಗೆ ಬಾರಿಸಿದರು. ಮುಖವನ್ನು ಮುಚ್ಚಿ ಹೊಡೆದು ಲೇವಡಿ ಮಾಡಿದರು. ಕೊರಡೆ ಏಟು ಅತ್ಯಂತ ಭಯಂಕರ ಶಿಕ್ಷೆ. ಇದು ಅಪಮಾನಕರ ಶಿಕ್ಷೆಯೂ ಹೌದು. ಇದರಿಂದಲೂ ತೃಪ್ತಿಯಾಗದ ಜನರು ಮುಳ್ಳಿನಿಂದ ಕಿರೀಟ ಮಾಡಿಸಿ ಅದನ್ನು ಯೇಸುವಿನ ತಲೆಯ ಮೇಲಿಟ್ಟು ಹೊಡೆದರು. ಕೆನ್ನೇರಳೆ ಬಣ್ಣದ ಅಂಗಿಯನ್ನು ತೊಡಿಸಿದರು. ಭಾರವಾದ ಶಿಲುಬೆಯನ್ನು ಹೊರುವಂತೆ ಮಾಡಿದರು. ಆ ಶಿಲುಬೆಯನ್ನು ಹೊರಲಾರದೆ ಹೊತ್ತು ಗೋಲ್ಗೊಥ ಬೆಟ್ಟವನ್ನು ಹತ್ತಿದ್ದರು.

ರಣಬಿಸಿಲ ಬೇಗೆಯಲ್ಲಿ ಯೇಸುವನ್ನು ಶಿಲುಬೆಯ ಮೇಲಿಟ್ಟು ಕೈಕಾಲುಗಳಿಗೆ ಮೊಳೆಯನ್ನಿಟ್ಟು ಹೊಡೆದರು. ಶಿಲುಬೆಯನ್ನು ಮೇಲೆತ್ತಿ ನೆಲಕ್ಕೆ ಹೂತರು. ಯೇಸು ನಿಸ್ಸಾಯಕರಾಗಿ ಶಿಲುಬೆಯಲ್ಲಿ ಮೂರು ಗಂಟೆಗಳ ಕಾಲ ತೂಗಿದರು. ಮಧ್ಯಾಹ್ನ ಮೂರುಘಂಟೆಯಲ್ಲಿ ತಮ್ಮ ಆತ್ಮವನ್ನು ತಂದೆಯಾದ ದೇವರಿಗೆ ಅರ್ಪಿಸಿ ಪ್ರಾಣ ಬಿಟ್ಟರು. ಯೇಸುವಿನ ಶಿಲುಬೆಯಡಿಯಲ್ಲಿ ನಾಲ್ಕು ಮಂದಿ ಮಹಿಳೆಯರು ಕಣ್ಣೀರಿಡುತ್ತಾ ನಿಂತಿದ್ದರು.

ಯೇಸುವಿನ ಯಾತನೆ ಮರಣ ಕ್ರೂರವಾಗಿದ್ದು ಅಮಾನವೀಯ ಕೃತ್ಯವಾಗಿತ್ತು. ಆತನ ಯಾತನೆಯನ್ನು ಎಷ್ಟು ವರ್ಣಿಸಿದರೂ ಅಲ್ಪವೇ ! ಹೀಗೆ ನಮಗಾಗಿ ಪ್ರಾಣತ್ಯಾಗ ಮಾಡಿದ ಯೇಸುವನ್ನು ನಾವು ಸ್ನೇಹಿಸಬೇಕೆಂದು ಗೀತಗಾರ ಹೇಳಿದ್ದಾನೆ.

ಶಿಲುಬೆಯ ಬಲಿಯನ್ನು
ನಿಧಾನಿಸಿ ನೋಡಿರಿ;
ಹೊಂದಿದ ವೇದನೆಯನ್ನು
ತಿಳುಕೊಳ್ಳಲಾರಿರಿ

ರಕ್ಷಕರ ಪಕ್ಷವನ್ನು
ಕಂಡ ಸರ್ವ ಜನವೇ
ಯಾವಾಗಲೂ ಜೇಸುವನ್ನು
ಸ್ನೇಹಿಸಬೇಕಲ್ಲವೇ?

ಕೀರ್ತನೆ ಪುಸ್ತಕ, ಗೀತೆ–೨೫

ಯೇಸುವಿನ ಪುನುರುತ್ಥಾನಕ್ಕೆ ಸಂಬಂಧಿಸಿದ ಗೀತೆಗಳು: ಯೇಸು ಸಾವನ್ನು ಜಯಿಸಿ ಜಯ ವೀರರಂತೆ ಪುನರುತ್ಥಾನರಾದರು ಎಂಬುದನ್ನು ವರ್ಣಿಸುವ ಗೀತೆಯೇ "ಜೇಸುನಾಥರ ಪುನರುತ್ಥಾನವನ್ನು ಕುರಿತು"[೩೨] ಎಂಬುದು. ಇದು Jesus parait en vainvueur ಎಂಬ ರಾಗದಲ್ಲಿದೆ. ಒಳ್ಳೆಯದು ಜಯಗಳಿಸುತ್ತದೆ. ಮರಣವನ್ನು ಜಯಿಸಿ, ಯೇಸು ಜಯವೀರರವಾಗಿ ಪುನರುತ್ಥಾನರಾದರು. ಯೇಸುವಿನೊಡನೆ ನೀತಿ, ನ್ಯಾಯ, ಸತ್ಯ, ಪ್ರೇಮ ಎಂಬ ಮೌಲ್ಯಗಳು ನಮ್ಮ ಜೀವನದಲ್ಲಿ ರೂಪುಗೊಳ್ಳುತ್ತದೆ. ಯೇಸುವಿನ ಪುನರುತ್ಥಾನ ನಮ್ಮೆಲ್ಲರಿಗೂ ಹೊಸ ಹುರುಪು, ಯೇಸುವಿನೊಡನೆ ನಾವು ಮರಣ ಹೊಂದಿದ್ದರೆ ಅವರೊಡನೆ ಜೀವಿಸುತ್ತೇವೆ (ರೋಮ ೬:೮) ಎಂಬ ಆಶಯವನ್ನು ಈ ಗೀತೆ ಹೊಂದಿದೆ.

ಈ ಗೀತೆಯ ಮತ್ತೊಂದು ವಿಶೇಷತೆ ಎಂದರೆ ಮರಿಯಳಿಗೆ ಭಕ್ತ ಸಂಭ್ರಮಿಸಲು ಹೇಳಿರುವುದು. ಯೇಸುವಿನ ಪುನರುತ್ಥಾನದಲ್ಲಿ ಉಲ್ಲಾಸಿಸಿ ಎಂದು ಹೇಳಿಕೊಳ್ಳುತ್ತಾನೆ. ಕಥೋಲಿಕಾ ಮತದ ಬರವಣಿಗೆಯ ಶೈಲಿಯ ಒಂದು ವಿಶಿಷ್ಟ ಅಂಶವನ್ನು ನಾವು ಇಲ್ಲಿ ಕಾಣುತ್ತೇವೆ. ಸಂತ ಮರಿಯಳು ತನ್ನ ಸುತನನ್ನು ಕಾಪಾಡಿದಳು. ಲೋಕ ರಕ್ಷಕನ ತಾಯಿ ಎಂದು ನಂಬಿ ಆಕೆಯ ಸಾನಿಧ್ಯವನ್ನು ನಿರತವೂ ಯಾಚಿಸುವ ಸಂಪ್ರದಾಯ ಕಥೋಲಿಕರಲ್ಲಿ ಕಾಣುತ್ತೇವೆ. ಅಂತೆಯೇ ಗೀತೆಯಲ್ಲಿ ಮರಿಯಳ ಹೆಸರನ್ನು ಸೇರಿಸಿ ಆಕೆಯು ನಮ್ಮೊಡನೆ ಇದ್ದಾಳೊ ಎಂಬಂತೆ ಬಹು ಆತ್ಮೀಯತೆಯಿಂದ ಗೀತಗಾರ ಪುತ್ರನ ಪುನರುತ್ಥಾನದಲ್ಲಿ ಸಂತೋಷಿಸಿ ಎಂದು ಕೇಳಿಕೊಳ್ಳುತ್ತಾನೆ.

ಪವಿತ್ರಾತ್ಮರಿಗೆ ಸಂಬಂಧಿಸಿದ ಗೀತೆಗಳು: ಪವಿತ್ರಾತ್ಮರ ಸಪ್ತ ವರದಾನಗಳನ್ನು ಭಕ್ತ ಆಶಿಸಿ ಅದನ್ನು ದಯಪಾಲಿಸಬೇಕೆಂದು ಬೇಡುತ್ತಿದ್ದಾನೆ 'ಸ್ಪಿರಿತು ಸಾಂಕ್ತುವಿನ ವರ ಪ್ರಸಾದಗಳ ವಿಜ್ಞಾಪನೆ' ಎಂಬ

[illegible]

ಗೀತೆಯಲ್ಲಿ. ಇದು Venez chreateur' de nos ames ಎಂಬ ರಾಗದಲ್ಲಿದೆ. ಪವಿತ್ರಾತ್ಮನ ಶಕ್ತಿಯಿಂದಲೇ ತನ್ನ ಬಾಳು ಸರಿಯಾದ ಮಾರ್ಗದಲ್ಲಿ ನಡೆಯಲು ಸಾಧ್ಯ ಎಂದು ಭಕ್ತ ಮನದಾಳದ ಅಳಲನ್ನು ಪವಿತ್ರಾತ್ಮನ ಮುಂದಿಟ್ಟಿದ್ದಾನೆ.

ನಿಮ್ಮ ಸಪ್ತ ವರಗಳನ್ನು	ದಾಸರ ಮಂಡತನವನ್ನು ದೂರ ನೀಗಿಸಿ
ನರರಿಗೆ ಪ್ರಸಾದಿಸಿ;	ಬಿಡಿರಿ;
ಒಳ್ಳೇ ಬುದ್ಧಿ ಸುಗುಣವನ್ನು	ಚುರುಕುಳ್ಳ ಜಾಗೃತೆಯನ್ನು
ಕರ್ತರೇ ದಯಪಾಲಿಸಿ	ನಮ್ಮ ಬುದ್ಧಿಗೆ ಕೊಡಿರಿ

ಕೀರ್ತನೆ ಪುಸ್ತಕ, ಗೀತೆ–೪೭

ಸಪ್ತವರಗಳು: ಕ್ರೈಸ್ತ ಭಕ್ತಿಸಂಪ್ರದಾಯ ಪವಿತ್ರಾತ್ಮರ ಏಳು ವರಗಳನ್ನು ನಮೂದಿಸುತ್ತದೆ.

೧. ಜ್ಞಾನ, ೨. ಬುದ್ಧಿ, ೩. ವಿವೇಕ; ೪. ದೃಢತೆ, ೫. ತಿಳುವಳಿಕೆ, ೬. ಭಕ್ತಿ, ೭. ದೈವಭಯ.

೧. **ಜ್ಞಾನ:** ದೇವರು ಸರ್ವಜ್ಞರು. ಸೂರ್ಯ, ಚಂದ್ರ, ನಕ್ಷತ್ರ, ಮಾನವ ಮತ್ತೆಲ್ಲಾ ಸೃಷ್ಟಿಗಳು ಅವರ ಜ್ಞಾನಕ್ಕೆ ಸಾಕ್ಷಿಯಾಗಿವೆ. ಮನುಷ್ಯನು ದೇವರ ರೂಪದಲ್ಲಿ ಸೃಷ್ಟಿಸಲ್ಪಟ್ಟಿರುವುದರಿಂದ ದೈವಜ್ಞಾನವನ್ನು ಅವರಿಗೆ ವಿಧೇಯನಾಗಿ ನಡೆದು ಗಳಿಸಿಕೊಳ್ಳಬಹುದು. ಸಮಾಜದಲ್ಲಿ ಮುಖಂಡನಾಗಲು ಜ್ಞಾನ ಅತ್ಯಗತ್ಯ. ದೈವಭಕ್ತ ಸೋಲೋಮನ್‌ಗೆ ದೇವರು ದರ್ಶನವಿತ್ತು 'ನಿನಗೆ ಬೇಕಾದ ವರವನ್ನು ಕೇಳಿಕೋ' ಎಂದರು. ದೀನಭಕ್ತನಾದ ಅವನು 'ನಿಮ್ಮಿಂದ ಅರಸನಾಗಿ ನೇಮಕನಾದ ನಾನು ಇನ್ನೂ ಚಿಕ್ಕವನು: ವ್ಯವಹಾರ ಜ್ಞಾನವಿಲ್ಲದವನು, ಆದ್ದರಿಂದ ನಿಮ್ಮ ಪ್ರಜೆಯನ್ನು ಆಳುವುದಕ್ಕೂ ನ್ಯಾಯಾನ್ಯಾಯಗಳನ್ನು ಕಂಡು ಹಿಡಿಯುವುದಕ್ಕೂ ನನಗೆ ವಿವೇಕವನ್ನು ದಯಪಾಲಿಸಿ' ಎಂದು ಬೇಡಿದನು. ಅವನ ಭಿನ್ನಹವನ್ನು ಮೆಚ್ಚಿದ ದೇವರು ಅವರಿಗೆ ವಿವೇಕದ ಜೊತೆಯಲ್ಲಿ ಜ್ಞಾನವನ್ನು, ಅಧಿಕ ಐಶ್ವರ್ಯವನ್ನು, ಕೀರ್ತಿಯನ್ನು ಅನುಗ್ರಹಿಸಿದರು. ಆ ಕಾಲದಲ್ಲಿ ಅವನಂತಹ ಜ್ಞಾನಿ ಇನ್ನೊಬ್ಬನಿರಲಿಲ್ಲ (೧ ಅರಸ ೩–೪:೧೪).

೨. **ಬುದ್ಧಿ:** ಪ್ರತಿಯೊಂದು ವಸ್ತುವಿಗೆ ತಕ್ಕ ಬೆಲೆ ಕಟ್ಟುವುದು, ವಿಷಯಕ್ಕೆ ಮಹತ್ವ ಲಗತ್ತಿಸುವುದು ಬುದ್ಧಿ. ಇಂತಹ ಬುದ್ಧಿಯುಳ್ಳ ಮನುಷ್ಯನಿಗೆ ಇತರ ಜನರ ಸಲಹೆಯ ಅಗತ್ಯವಿರುವುದಿಲ್ಲ. ಪವಿತ್ರಾತ್ಮರಿಂದ ಬುದ್ಧಿವರವನ್ನು ಗಳಿಸಿದ ಮನುಷ್ಯನು ಭಾಗ್ಯವಂತನು. ಮನುಷ್ಯನು ಸ್ವಾರ್ಥಿಯಾಗಿರುವುದರಿಂದ ನಂಬಿಕೆಗೆ ಅನರ್ಹನು. ಈ ಬುದ್ಧಿಯನ್ನು ಗಳಿಸಲು ಭಕ್ತರು ಸಂಪೂರ್ಣವಾಗಿ ದೇವರನ್ನು ಅವಲಂಬಿಸಬೇಕು. "ಸ್ವ ಬುದ್ಧಿಯನ್ನು ಆಧಾರ ಮಾಡಿಕೊಳ್ಳದೇ ಪೂರ್ಣ ಮನಸ್ಸಿನಿಂದ ದೇವರಲ್ಲಿ ಭರವಸೆ ಇಡು"[೩೩] ಎನ್ನುತ್ತದೆ ಜ್ಞಾನೋಕ್ತಿಗಳ ಗ್ರಂಥ.

೩. ವಿವೇಕ: ನಾವು ಎಷ್ಟೇ ಜ್ಞಾನವನ್ನು ಗಳಿಸಿದ್ದರೂ ಅಲ್ಪಮತಿಗಳು. ಜ್ಞಾನದ ಸರೋವರ ವಿಶಾಲವಾದುದು. ಅದನ್ನು ಬರಿದು ಮಾಡಲು ನಮ್ಮ ಜೀವಮಾನ ಕಾಲ ಸಾಲದು. ನಮ್ಮ ಅನುದಿನದ

ವ್ಯವಹಾರದಲ್ಲಿ ನಾವು ಇತರರನ್ನು ಅವಲಂಬಿಸುತ್ತೇವೆ. ಅವರ ನೆರವನ್ನು ಕೋರುತ್ತೇವೆ. ನಾವು ನಂಬಿದ ಮಿತ್ರರು ಸನ್ಮಿತ್ರರಾಗಿರಬಹುದು ಅಥವಾ ದುರ್ಮತಿಗಳಾಗಿರಬಹುದು. ನಾವು ಸನ್ಮಿತ್ರರನ್ನು ಆಯ್ಕೆ ಮಾಡಿದರೆ ನಿಜಕ್ಕೂ ವಿವೇಕಿಗಳು. ದೇವರ ಚಿತ್ತವನ್ನ ಒಳಿತು ಕೆಡಕು, ಸರಿತಪ್ಪು ಎಂಬುದರ ಭೇದಭಾವ ತಿಳಿದುಕೊಂಡರೆ ನಮ್ಮ ನಿರ್ಧಾರಗಳು ನಮಗೂ ಉಪಯುಕ್ತವಾಗುತ್ತದೆ. ಇದೇ ವಿವೇಕ.

೪. **ದೃಢತೆ:** ದೃಢತೆಯನ್ನು ಹೊಂದಿದ ವ್ಯಕ್ತಿ ಸ್ಥಿರಚಿತ್ತವನ್ನು ಹೊಂದಿರುತ್ತಾರೆ. ಎಂತಹ ಸ್ಥಿತಿಯಲ್ಲಿಯೂ ಆಂತರಿಕಶಾಂತಿಯನ್ನು ಅನುಭವಿಸುತ್ತಾನೆ. ಅವನು ಯಾವ ಆಶೆ-ಆಮಿಶಗಳಿಗೂ ಬಲಿಯಾಗಿ ತನ್ನ ನಿರ್ಧಾರವನ್ನು ಬದಲಿಸುವುದಿಲ್ಲ. ಅನಾನುಕೂಲತೆಯನ್ನು ತಪ್ಪಿಸಲು ತನ್ನ ಭಾಷೆಯನ್ನು ಬದಲಿಸುವುದಿಲ್ಲ. ಇಂತಹ ದೃಢತೆಯನ್ನು ಪವಿತ್ರಾತ್ಮರು ತನ್ನ ಭಕ್ತರಿಗೆ ಕೊಡುತ್ತಾರೆ.

೫. **ತಿಳುವಳಿಕೆ:** ಪವಿತ್ರಾತ್ಮರ ತಿಳುವಳಿಕೆಯ ವರ ನಮಗೆ ಒಳಿತು ಕೆಡುಕುಗಳ ಅರಿವನ್ನು ಮೂಡಿಸುತ್ತದೆ. ಒಳಿತನ್ನು ಮಾತ್ರ ಮಾಡಲು ಪ್ರೇರೇಪಿಸುತ್ತದೆ. ನಮ್ಮ ಸ್ವಾತಂತ್ರ್ಯದ ಯೋಗ್ಯ ಉಪಯೋಗವನ್ನು ಮಾರ್ಗದರ್ಶನ ಮಾಡುವ ವರ ಇದಾಗಿದೆ.

೬. **ಭಕ್ತಿ:** ನೀವು ಪ್ರಭುದೇವರನ್ನು ಪೂರ್ಣ ಹೃದಯಗಳಿಂದಲೂ, ಪೂರ್ಣ ಪ್ರಾಣದಿಂದಲೂ, ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು (ಧರ್ಮೋಪದೇಶಕಾಂಡ ೬:೪-೫) ಈ ಮಾತುಗಳು ಪ್ರತಿಯೊಬ್ಬರ ಹೃದಯದಲ್ಲಿರಬೇಕು. ಅದನ್ನು ಭಕ್ತ ಕುಳಿತಿರುವಾಗಲೂ, ಏಳುವಾಗಲು, ಮಲಗುವಾಗಲು, ನಡೆದಾಡುವಾಗಲು ಇದರ ಬಗ್ಗೆ ಮಾತನಾಡಬೇಕು. ಒಂದೇ ಮಾತಿನಲ್ಲಿ ಹೇಳುವುದಾದರೆ ದೇವರ ನಾಮಸ್ಮರಣೆ ನಮ್ಮ ಜೀವನದಲ್ಲಿ ಅವಿರತ ನಡೆಯುತ್ತಿರಬೇಕು. ಈ ಭಕ್ತಗೆ ವಿರಾಮವಿಲ್ಲ.

೭. **ದೈವಭಯ:** ದೇವರಿಗೆ ಸಂಪೂರ್ಣವಾಗಿ ಶರಣಾಗತನಾಗುವುದು, ತನ್ನಲಿರುವುದನ್ನೆಲ್ಲಾ ಸಮರ್ಪಿಸುವುದೇ ದೈವಭಯ. ಭಕ್ತನ ಜೀವಮಾನ ಕಾಲದಲ್ಲಿ ದೇವರ ಪಾಲನೆ ಪೋಷಣೆಗೆ ಇತಿಮಿತಿಗಳಿಲ್ಲ. ಅವರ ಆಜ್ಞಾ ವಿಧಿಗಳಿಗೆ ವಿರೋಧವಾಗಿ ನಡೆದಾಗ ಭಕ್ತನು ತಪ್ಪಿತಸ್ತನಾಗುತ್ತಾನೆ. ಅವರ ಶಿಕ್ಷೆಗೂ ಪಾತ್ರನಾಗುತ್ತಾನೆ. ನೀತಿವಂತ ದೇವರು, ನ್ಯಾಯಾಧೀಶರು ಎಂಬುದನ್ನು ಮರೆಯಲಾಗದು. "ದೇವರಭಯವೇ ಜ್ಞಾನದ ಆರಂಭ"[೩೪] ಎಂದು ಜ್ಞಾನೋಕ್ತಿಯಲ್ಲಿ ಓದುತ್ತೇವೆ.

ದೇವದೂತರಿಗೆ ಸಂಬಂಧಿಸಿದ ಗೀತೆಗಳು: ದೇವದೂತರುಗಳಲ್ಲಿ ಪ್ರಾರ್ಥಿಸುವ ಬಗೆ ಕ್ರೈಸ್ತ ಸಂಪ್ರದಾಯದಲ್ಲಿ ಪ್ರಾರಂಭದಿಂದಲೂ ಬೆಳೆದು ಬಂದಿದೆ. ಒಳ್ಳೆಯ ಸಮ್ಮನಸ್ಸುಗಳು (ದೇವದೂತ) ನಮ್ಮನ್ನು ಕಾಯ್ದು ಒಳ್ಳೆಯದನ್ನು ಮಾಡುವುದಕ್ಕೆ ಕೇಡಿನಿಂದ ತಪ್ಪಿಸಿಕೊಳ್ಳುವುದಕ್ಕೂ ನಮಗೆ ಸಹಾಯ ಮಾಡುತ್ತಾರೆ. ಈ ದೇವದೂತರಲ್ಲಿ ನಿತ್ಯ ಸಹಾಯಕ್ಕಾಗಿ ಬೇಡುವ ಬಗೆ ವ್ಯಕ್ತವಾಗಿದೆ 'ಸುಮ್ಮನಸ್ಸುಗಳನ್ನು ಕುರಿತು' ಎಂಬ ಗೀತೆಯಲ್ಲಿ. ಇದು Devant vour esprits angelique ಎಂಬ ರಾಗದಲ್ಲಿದೆ.

ದೇವದೂತರೇ ನಾವೆಲ್ಲರೂ	ನೀವು ದೇವರ ಮುಖವನ್ನು
ಮಾಡುವ ಜಪ ಕೇಳಿರಿ;	ದರ್ಶಿಸಿ ಭ್ರಮಿಸುತ್ತೀರಿ;
ನೀವು ಮೋಕ್ಷದಲ್ಲಿ ಶಕ್ತರು	ಪರಲೋಕಾನಂದವನ್ನು
ನಮಗಾಗಿ ಪ್ರಾರ್ಥಿಸಿರಿ	ನಮಗಾಗಿ ಪ್ರಾರ್ಥಿಸಿರಿ

ಕೀರ್ತನೆ ಪುಸ್ತಕ, ಗೀತೆ–೭೧

ದೇವದೂತನು: ದೇವದೂತನು ಪರಲೋಕದ ಅಥವಾ ಆತ್ಮಸ್ವರೂಪನಾದ ಸಂದೇಶಕನು ದೇವದೂತರು ಆತ್ಮ ಸ್ವರೂಪಿಗಳಾಗಿದ್ದು ದೇವರಿಂದ ಸೃಷ್ಟಿಸಲ್ಪಟ್ಟವರು (ಕೀರ್ತನೆ ೧೪೮:೨–೫). ಇವರು ಮನುಷ್ಯರಿಗಿಂತಲೂ ಹೆಚ್ಚಿನವರಾಗಿದ್ದಾರೆ (ಇಬ್ರಿಯಾ ೨:೬–೭). ಮನುಷ್ಯರು ಸೃಷ್ಟಿಸ್ಪಡುವುದಕ್ಕಿಂತ ಮುಂಚೆಯೇ ಇವರು ಸೃಷ್ಟಿಸಲ್ಪಟ್ಟರು (ಯೋಬ ೩೮:೭). ಮನುಷ್ಯರಿಗೆ ಇರುವ ಹಾಗೆ ಮಾಂಸದ ಶರೀರ ಇವರಿಗಿಲ್ಲದಿದ್ದರೂ ಇವರು ಈಗಲೂ ಮನುಷ್ಯರಿಗೆ ಶರೀರಧಾರಿಗಳಾಗಿ ಕಾಣಿಸಿಕೊಳ್ಳುವರು (ಲೂಕ ೧:೧೧).

ದೇವದೂತರಲ್ಲಿ ಭಕ್ತಿಯನ್ನು ಹೊಂದಿದ ಭಕ್ತ ತನ್ನ ಬಲಹೀನತೆಯನ್ನು ವ್ಯಕ್ತ ಪಡಿಸುತ್ತಾ ತನಗಾಗಿ ನಿರಂತರ ಪ್ರಾರ್ಥಿಸಬೇಕೆಂದು ವಿನಂತಿಸಿಕೊಂಡಿದ್ದಾನೆ ಗೀತೆಯಲ್ಲಿ. ಪ್ರತಿಚರಣದ ಅಂತ್ಯದಲ್ಲಿ 'ನಮಗಾಗಿ ಪ್ರಾರ್ಥಿಸಿ' ಎಂಬ ಸಾಲು ಬಂದಿದೆ. ಇದು ಭಕ್ತನ ತೀವ್ರ ಭಕ್ತಿಯನ್ನು ವ್ಯಕ್ತಪಡಿಸುವುದಾಗಿದೆ. ಅಂತ್ಯಪ್ರಾಸವನ್ನು ಕೆಲವು ಚರಣಗಳಲ್ಲಿ ಕಾಣುತ್ತೇವೆ. ಭಕ್ತಿರಸ ಹೊರ ಹೊಮ್ಮಿಸುವ ಗೀತೆ ಇದಾಗಿದೆ. ಹಳೆಒಡಂಬಡಿಕೆಯಲ್ಲಿ ಜೂದರನ್ನು ಕಾಪಾಡಿರುವೆ, ಈಗ ನಮ್ಮನ್ನು ಕಾಪಾಡು ಎಂದು ಬೇಡಿಕೊಂಡಿದ್ದಾನೆ ಗೀತೆಯಲ್ಲಿ. ಭಕ್ತಿಭಾವವನ್ನು ನಮ್ಮಲ್ಲಿ ವೃದ್ಧಿಸಲು ಈ ಗೀತೆ ಉತ್ತಮವಾಗಿದೆ.

ಹುಟ್ಟಿನಂದಿನಿಂದ ನಾವು ಸಾಯುವವರೆಗೂ ನಮ್ಮಲ್ಲಿ ಒಬ್ಬೊಬ್ಬರನ್ನು ಕಾಯುವುದಕ್ಕೆ ಕಾವಲು ದೇವದೂತರುಂಟು ಇವರಲ್ಲಿ ಭಿನ್ನವಿಸಿಕೊಳ್ಳುವ ಬಗೆ ವ್ಯಕ್ತವಾಗಿದೆ 'ಕಾವಲಾದ ಸುಮ್ಮನಸ್ಸುವರನ್ನು ಕುರಿತು' ಎಂಬ ಗೀತೆಯಲ್ಲಿ. ಇದು Salut; O vierge immaculate ಎಂಬ ರಾಗದಲ್ಲಿದೆ.

ಈ ನಿರ್ಭಾಗ್ಯ ಕಣಿವೆಯೊಳು	ಜ್ಞಾನಾಪತ್ತು ವಿಪತ್ತಿನೊಳು
ಒಳ್ಳೇದಾರಿ ತೋರಿಸಿರಿ;	ನನ್ನ ಕೈಬಿಡಬೇಡಿರಿ;
ನಾನೆಂದಿಗೂ ದುರ್ಮಾರ್ಗದೊಳು	ಜೀವನ ಪ್ರತಿ ವೇಳೆಯೊಳು
ನಡೆಯದಂತೆ ನೋಡಿರಿ	ನನಗಾಗಿ ಹೋರಾಡಿರಿ

ಕೀರ್ತನೆ ಪುಸ್ತಕ, ಗೀತೆ–೭೨

ಕಾವಲು ದೇವದೂತರು: ಈ ಚಿಕ್ಕವರಲ್ಲಿ ಒಬ್ಬನನ್ನಾದರೂ ತಾತ್ಸಾರ ಮಾಡಬೇಡಿ ಪರಲೋಕದಲ್ಲಿರುವ ನಮ್ಮ ತಂದೆಯ ಮುಖವನ್ನು ಅವರ ದೂತರು ಯಾವಾಗಲೂ ನೋಡುತ್ತಲಿದ್ದಾರೆ (ಮತ್ತಾಯ ೧೮:೧೦). 'ನೀನು ಹೋಗುವ ಕಡೆಯಲ್ಲೆಲ್ಲಾ ನಿನ್ನನ್ನು ಕಾಯುವುದಕ್ಕೆ ದೇವರು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆ ಕೊಡುವನು (ಕೀರ್ತನೆ ೯೦:೧೧). ಈ ವಾಕ್ಯಗಳು ದೇವರು ತನ್ನ ಮಕ್ಕಳೊಂದಿಗೆ ಇಟ್ಟಿರುವ ಪ್ರೀತಿಯನ್ನು

ವ್ಯಕ್ತಪಡಿಸುತ್ತದೆ. ತನ್ನ ಮಕ್ಕಳನ್ನು ಸರ್ವ ವಿಧದಲ್ಲೂ ಕಾಪಾಡಲು ಒಬ್ಬ ಕಾವಲು ದೇವ ದೂತರನ್ನು ಇಟ್ಟಿರುವುದು ನಮ್ಮ ರಕ್ಷಣೆಗಾಗಿ ದೇವರು ನಿಯೋಜಿಸಿರುವ ವ್ಯಕ್ತಿಯಾಗಿದ್ದಾರೆ.

ಕಾವಲಾದ ದೇವದೂತರ ಹಬ್ಬವನ್ನು ಕ್ರೈಸ್ತರು ಅಕ್ಟೋಬರ್ ೨ನೇ ತಾರೀಖಿನಂದು ಕೊಂಡಾಡುತ್ತಾರೆ. ಧರ್ಮಸಭೆಯ ಆಚರಣೆಯಲ್ಲಿರುವ ಭಕ್ತಿಯ ಹಬ್ಬಗಳಲ್ಲಿ ವಿಶೇಷವಾದ ಹಬ್ಬ ಇದಾಗಿದೆ.

ಆದಿ, ಅಂತ್ಯ, ಪ್ರಾಸಗಳನ್ನು ಅಲ್ಲಲ್ಲಿ ಗುರುತಿಸುತ್ತೇವೆ. ಕಾವಲು ದೇವದೂತರಲ್ಲಿ ಭಕ್ತಿಯನ್ನು ಮೂಡಿಸುವಲ್ಲಿ ಈ ಗೀತೆ ಯಶಸ್ವಿಯಾಗಿದೆ.

೪.೪ ದೇಶಿಯರು ರಚಿಸಿದ ಗೀತೆಗಳು

ಕೀರ್ತನೆ ಪುಸ್ತಕದ ೨ನೇ ಭಾಗವು 'ಸತ್ಯವೇದ ಸಂಬಂಧವಾದ ಹಿಂದೂ ರಾಗವುಳ್ಳ ಕೀರ್ತನೆಗಳು (Catholic Hymns in Hindu Tune) ಎಂಬ ಶೀರ್ಷಿಕೆಯನ್ನು ಹೊಂದಿದೆ. ಇದರ ಅರಿಕೆಯಲ್ಲಿ ಇಂತಿದೆ.

"ಈ ೨ನೇ ಭಾಗದಲ್ಲಿ ಕನ್ನಡ ಛಂದೋ ವಿದ್ಯದ ಪ್ರಕಾರ ರಚಿಸಲ್ಪಟ್ಟ ಕೀರ್ತನೆಗಳು ಅಡಗಿರುತ್ತವೆ. ಇವುಗಳೊಳಗೆ ಮುಖ್ಯ ಪಾಲು ಸತ್ಯವೇದಕ್ಕೆ ಸೇರಿದ ಒಬ್ಬ ಬ್ರಾಹ್ಮಣನಿಂದ ಕಲ್ಪಿಸಲ್ಪಟ್ಟಿದೆ. ಮೊದಲನೇ ಭಾಗದ ಕೀರ್ತನೆಗಳು ಕೆಲವರಿಗೆ ತರ್ಪಣೆಯಾಗದಿದ್ದರೆ ಇಲ್ಲಿ ಸಿಕ್ಕುವಂತವುಗಳು ಸರ್ವರಿಗೂ ಪ್ರಿಯಪಡುವವೆಂದು ನಂಬಿಕೊಳ್ಳುತ್ತೇವೆ. ಕ್ರೀಸ್ತುವರು ಈ ಪುಸ್ತಕದಲ್ಲಿರುವ ಸುಕೃತ ಕೀರ್ತನೆಗಳನ್ನು ಕೈಲಾದಷ್ಟು ಕಲಿತುಕೊಂಡು ವೇಳೆವೇಳೆಗೆ ಹಾಡಿದರೆ ಯುಕ್ತವು. ಅದರಿಂದ ಅಜ್ಞಾನಿಗಳ ಕೆಟ್ಟ ಪದಗಳನ್ನು ಹೇಳುವುದಕ್ಕೆ ಅಷ್ಟು ಶೋಧನೆ ಬರಲಾರದು ಮತ್ತು ಸತ್ಯವೇದ ಸಂಬಂಧವಾದ ಗೀತೆಗಳನ್ನು ಹಾಡುವವರಿಗೆ ದೇವರಾಶೀರ್ವಾದವು ಜ್ಞಾನ ಸಂತೋಷವೂ ಒಳ್ಳೇ ಬುದ್ಧಿಯೂ ಬರುವುವೆಂಬುದು ಸಿದ್ಧಾಂತವೇ."[೩೫]

ಒಬ್ಬ ಬ್ರಾಹ್ಮಣನಿಂದ ರಚಿತವಾದ ಗೀತೆಗಳ ಅಧ್ಯಯನ ಇಂತಿವೆ. ಅವರು ರಚಿಸಿದ ಗೀತೆಗಳ ವಸ್ತುವಿಷಯಗಳು ವೈವಿಧ್ಯಮಯವಾಗಿವೆ. ಅಧ್ಯಯನಕ್ಕೆ ಆಯ್ದುಕೊಂಡ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಗೀತೆಗಳ ಅಧ್ಯಯನ ಇಲ್ಲಿದೆ.

ಸಂತರು: ಮಾತೆಮೇರಿಯ ಕುರಿತು ರಚಿಸಿದ ದೇಶಿ ರಾಗದ ಗೀತೆ 'ದೇವಮಾತೆಯನ್ನು ಕುರಿತು' ಎಂಬುದು. ದೇವಮಾತೆಯ ಪರಿಶುದ್ಧ ವ್ಯಕ್ತಿತ್ವವನ್ನು ಹಾಡಿ ಹೊಗಳುವ ಭಕ್ತ ತನ್ನ ಅಲಂಕಾರಿಕ ಭಾಷೆಯಲ್ಲಿ ಆಕೆಯ ದೈವತ್ವವನ್ನು ಕೊಂಡಾಡಿದ್ದಾನೆ. ತನ್ನ ಬಾಳಿಗೆ ತಾಯಿಯಂತೆ ಇರುವ ಈ ಮಾತೆ ತನ್ನನ್ನು ಸನ್ಮಾರ್ಗದಲ್ಲಿ ನಡೆಸಲು ಶಕ್ತಳು ಎಂಬ ಭಾವ ಇಲ್ಲಿ ವ್ಯಕ್ತವಾಗಿದೆ. ಇದು ಜಂಜೂಟಿ ರಾಗದಲ್ಲಿದೆ. ರೂಪಕ ತಾಳವನ್ನು ಹೊಂದಿದೆ.

ಪರಮದೇವ ಮಾತೆ ನಿಮ್ಮ ಚರಣ ಪಿಡಿದೆನೂ
ಕರುಣದಿಂದ ಕಾಯಿರೆಮ್ಮ ಕರವ ಮುಗಿದೆನೂ ॥ಪಲ್ಲವಿ॥

೧ ದೇವಮಾತೆ ಸತ್ಯವಂತೆ ಮೋಕ್ಷ ನಾಯಕೀ
ಜೀವ ವರವ ನೀಡಿರಮ್ಮ ಭಕ್ತ ಪೋಷಕೀ

೨ ಕಾನಾ ನಗರ ಮದಿವೆಯಲ್ಲಿ ಮಾಡಿದಂದದೀ

ಜ್ಞಾನ ಕರವ ನೀಡಿ ಸಲಹಿ ಮರೆಯಂದದೀ

೩ ಪಾಪಿಗಳಿಗೆ ಕೃಪೆಯ ತೋರಿ ಭೂಪ ವಂಶರೇ

ಶಾಪ ಮರಣ ಹರಿಸಿರಮ್ಮ ಪಾಪನಾಶಕೀ

೪ ನೀತಿ ಸೂರ್ಯ ಜೇಸುವನ್ನು ಪಡೆದ ಮಾತೆಯೇ

ದೂತ ರಾಣಿ ಕಾಯಿರಮ್ಮ ಪ್ರೀತಿವಂತೆಯೇ

ಕೀರ್ತನೇ ಪುಸ್ತಕ, ಗೀತೆ–೧೦

ಮಾತೆಮರಿಯ ಇಹಲೋಕದ ಬದುಕಿನಲ್ಲಿ, ಪರಲೋಕದ ಗುಣವನ್ನು ಹೊಂದಿದ್ದರು. ಬೇಡುವ ವ್ಯಕ್ತಿಯ ಆಸೆಆಕಾಂಕ್ಷೆಗಳನ್ನು ಈಡೇರಿಸುವ ಮಾತೆಯಾಗಿದ್ದರು ಎಂಬುದನ್ನು ಭಕ್ತ 'ಕಾನಾ ನಗರದ ಮದುವೆಯ ಪ್ರಸಂಗವನ್ನು' ಎಂಬ ಗೀತೆಯಲ್ಲಿ ನೀಡುತ್ತಾ ಅಂದು ಆ ವ್ಯಕ್ತಿಗಳಿಗೆ ಕಷ್ಟದಲ್ಲಿ ನೆರವಾದ ಮಾತೆ ನಮ್ಮನ್ನಿಂದು ಕಷ್ಟ ಕಾರ್ಪಣ್ಯದಿಂದ ಕಾಪಾಡು ಎಂದು ಬೇಡುವ ಬಗೆ ಇಲ್ಲಿ ವ್ಯಕ್ತವಾಗಿದೆ.

ಕಾನಾ ಎಂಬ ಊರಿನಲ್ಲಿ ಒಂದು ಮದುವೆ ಆಯಿತು. ದೇವಮಾತೆಯು ಅಲ್ಲಿಗೆ ಬಂದಿದ್ದರು. ಯೇಸು ಆತನ ಶಿಷ್ಯರು ಸಹ ಕರೆಯಲ್ಪಟ್ಟಿದ್ದರು. ಔತಣವು ನಡೆಯುತ್ತಿರಲಾಗಿ ದ್ರಾಕ್ಷಾರಸವು ಸಾಲದೇ ಹೋಯಿತು. ಇದನ್ನು ಕಂಡು ಅವಳು ತನ್ನ ಕುಮಾರನನ್ನು ನೋಡಿ 'ಅವರಲ್ಲಿ ದ್ರಾಕ್ಷಾ ರಸವಿಲ್ಲ' ಎಂದು ಹೇಳಲು ಯೇಸುವು 'ಅಮ್ಮ ನನ್ನ ಗೊಡವೇ ನಿನಗೇಕೆ? ನನ್ನ ಸಮಯವು ಇನ್ನೂ ಬಂದಿಲ್ಲ' ಎಂದು ತಿಳಿಸಿದ ನಂತರ ಆಕೆಯು ಸೇವಕರಿಗೆ 'ಆತನು ಹೇಳುವಂತೆ ಮಾಡಿ' ಎಂದು ಹೇಳಿದರು. ಯೇಸುವು ಅಲ್ಲಿದ್ದ ಆರು ಜಾಡಿಗಳನ್ನು ತಣ್ಣೀರಿನಿಂದ ತುಂಬಬೇಕೆಂದು ಸೇವಕರಿಗೆ ಆಜ್ಞಾಪಿಸಿದರು. ಸೇವಕರು ಕಂಠದ ಮಟ್ಟಿಗೂ ತುಂಬಿದರು. ಆಗ ಯೇಸು 'ಈಗ ಅದನ್ನು ತೋಡಿಕೊಂಡು ಹೋಗಿ ಔತಣದ ಪಾರುಪತ್ಯದಾರನಿಗೆ ಕೊಡಿ ಅಂದರು'. ಅವನು ಅದನ್ನು ರುಚಿ ನೋಡಿ ಮದಲಿಂಗನನ್ನು ಕರೆದು 'ಎಲ್ಲರು ಮೊದಲು ಮೇಲುತರದ ದ್ರಾಕ್ಷಾರಸವನ್ನೂ ಅಮಲೇರಿದ ಮೇಲೆ ಕೀಳು ತರದ್ದನ್ನು ಕೊಡುತ್ತಾರೆ ಆದರೆ ಮೇಲಾದುದನ್ನು ಇನ್ನೂ ಇಟ್ಟಿಕೊಂಡಿದ್ದೇಯೆ' ಎಂದು ಮೆಚ್ಚಿದನು (ಯೊಹಾನ ೨:೧–೧೦).

ಮಾತೆಮರಿಯಮ್ಮನವರು ಕುಟುಂಬದ ಸಂಸಾರದ ಅವಶ್ಯಕತೆಗಳಲ್ಲಿ ಸಮಸ್ಯೆಗಳಲ್ಲಿ ನಮಗಾಗಿ ಮಧ್ಯಸ್ಥಿಕೆವಹಿಸಿ ನಮಗಾಗಿ ಪ್ರಾರ್ಥಿಸಿ ಕುಟುಂಬದ ಹಣದ ಕೊರತೆ, ಬಡತನ, ಅವಮಾನ, ಸಾಲದಹೊರೆ ಬಗೆಹರಿಸಿ ಕುಟುಂಬದಲ್ಲಿ ಸುಖ, ಶಾಂತಿ, ಪ್ರೀತಿ ನೆಲೆಸುವಂತೆ ಮಾಡುವವರಾಗಿದ್ದಾರೆ ಎಂಬ ಅರಿವು ಈ ಘಟನೆಯಿಂದ ತಿಳಿದುಬರುತ್ತದೆ. ತಾಯಿಯ ವಿಜ್ಞಾಪನೆಯನ್ನು ತಳ್ಳಿಹಾಕದೆ ಯೇಸುವು ತಮ್ಮ ಮೊಟ್ಟಮೊದಲನೆಯ ಅದ್ಭುತವನ್ನು ನೆರವೇರಿಸಿದರು. ವಧುವರರಿಗೆ ಲಜ್ಜೆಬಾರದ ಹಾಗೆ ದೇವಮಾತೆಯು ಕನಿಕರಪಟ್ಟು ಸಹಾಯ ಮಾಡಿದುದ್ದನ್ನು ಯೋಚಿಸಿ ಭಕ್ತನಿಗೆ ಮಾತೆಯಲ್ಲಿ ಗೌರವ, ಪೂಜ್ಯಭಾವ ಮೂಡಿರುವುದನ್ನು ಕಾಣುತ್ತೇವೆ. ಮಾತೆಯು ಮನುಷ್ಯನ ಎಲ್ಲಾ ಅವಶ್ಯಕತೆಗಳಲ್ಲೂ ಭಾಗಿಯಾಗಿ ಆತನ

ಮನದಿಚ್ಛೆಯನ್ನು ಈಡೇರಿಸಿಕೊಡುವ ತಾಯಿಯಾದ್ದರಿಂದ ಭಕ್ತ ಆಕೆಯಲ್ಲಿ ಆತ್ಮೀಯಭಾವವನ್ನು ಹೊಂದಿ ತನ್ನನ್ನು ಸದಾಕಾಲ ಕಾಪಾಡು ಎಂದು ವಿನಮ್ರತೆಯಿಂದ ಬೇಡಿಕೊಂಡಿದ್ದಾನೆ.

ಕ್ರೈಸ್ತರ ಜೀವನ: ಕ್ರೈಸ್ತರು ಅನುಸರಿಸಬೇಕಾದ ಜೀವನಶೈಲಿಯನ್ನು ತಿಳಿಸುವ ಗೀತೆ 'ಸುಕೃತ ಬುದ್ಧಿಮತಿಗಳು' ಎಂಬುದು. ಇದು ಕಲ್ಯಾಣಿ ರಾಗದಲ್ಲಿದ್ದು, ಆದಿ ತಾಳ ಹೊಂದಿದೆ.

ದೇವ ಧ್ಯಾನವನ್ನು ಮಾಡಿ
ಭಾವ ಶುದ್ಧಿಯೊಳು ಕೂಡಿ ನೀವ್ ॥ಪಲ್ಲವಿ॥

೧. ನಿರುತದಿ ದೇವರ ಕೃಪೆಯನ್ನು ಸ್ಮರಿಸುತ
ಪರಮ ಭಕ್ತಿಯೊಳು ಕೂಡಿ, ನೀವ್ – ದೇವ

೨. ಕಾಮಕ್ರೋಧವ ವರ್ಜಿಸಿ ಮನದೊಳು
ಸ್ವಾಮಿ ಪಾದವ ಕೂಡಿ, ನೀವ್ – ದೇವ

೩. ಮೋಸ ವಂಚನೆ ಕಪಟವ ವರ್ಜಿಸಿ
ಈಶ ಭಜನೆಯ ಹಾಡಿ, ನೀವ್ – ದೇವ

೪. 'ದುಷ್ಟ ಸಂಗವ ತೊರೆಯುತಲಿಂದಿಗೂ
ಸೃಷ್ಟಿ ಕರ್ತನ ಬೇಡಿ ನೀವ್ – ದೇವ

೫. ಹತ್ತು ಕಲ್ಪಣೆ ದೇವರ ನೇಮವು
ಸತ್ಯ ವೇದದೊಳು ನೋಡಿ, ನೀವ್ – ದೇವ

೬. ಮಾತಾ ಪಿತೃರ ಸೇವೆಯ ಮಾಡುತ
ನೀತಿವಂತರ ಕೂಡಿ, ನೀವ್ – ದೇವ

೭. ದಾನಧರ್ಮವ ಮಾಡುತಲನುದಿನ
ದೀನ ಪೋಷಣೆ ಮಾಡಿ, ನೀವ್ – ದೇವ

೮. ಮರ್ಮ ಮತ್ಸರ ದ್ವೇಶವ ಬಿಡಿ ಬಿಡಿ
ಧರ್ಮ ಕೃತ್ಯವ ಮಾಡಿ, ನೀವ್ – ದೇವ

ಕೀರ್ತನೆ ಪುಸ್ತಕ, ಗೀತೆ–೧೨

ಸನ್ಮಾರ್ಗದಲ್ಲಿ ಸಾಗಲು ಮೌಲ್ಯಭರಿತ ಬದುಕನ್ನು ನಡೆಸಲು, ಪ್ರೇರೇಪಿಸುವ ಈ ಗೀತೆ ಕಾವ್ಯಗುಣವನ್ನು, ಸಾಮಾಜಿಕ ಮೌಲ್ಯವನ್ನು ಹೊಂದಿದ ಗೀತೆಯಾಗಿದೆ. ಅಪ್ಪಟ ದೇಶಿ ರಚನೆಗೆ ಉತ್ತಮ ಉದಾಹರಣೆಯಾಗಿದೆ.

ಹತ್ತು ಕಟ್ಟಳೆಗಳು: ದೇವರು ಮೋಸಸ್ ಎಂಬ ಪ್ರವಾದಿಗೆ ಸೀನಾಯಿ ಪರ್ವತದ ಮೇಲೆ ಕೊಟ್ಟ ಹತ್ತು ಕಟ್ಟಳೆಗಳ ಮೂಲಕ ಸನ್ಮಾರ್ಗದಲ್ಲಿ ಸಾಗುವ ಬಗೆಯನ್ನು ತಿಳಿಯಪಡಿಸಿದರು. ವಿಮೋಚನಾಕಾಂಡದ ೨೦ನೇ

ಅಧ್ಯಾಯದಲ್ಲಿ ಹತ್ತು ಆಜ್ಞೆಗಳ ಕುರಿತು ತಿಳಿಸಲಾಗಿದೆ.

ಹತ್ತು ಕಟ್ಟಳೆಗಳು:

೧. ನಿಜವಾದ ಏಕದೇವರನ್ನು ಆರಾಧಿಸು

೨. ದೇವರ ನಾಮವನ್ನು ವ್ಯರ್ಥವಾಗಿ ಉಚ್ಚರಿಸಬೇಡ

೩. ದೇವರ ದಿನವನ್ನು ಪವಿತ್ರವಾಗಿ ಆಚರಿಸು

೪. ನಿನ್ನ ತಂದೆ ತಾಯಿಗಳನ್ನು ಗೌರವಿಸು

೫. ಕೊಲೆ ಮಾಡಬೇಡ

೬. ವ್ಯಭಿಚಾರ ಮಾಡಬೇಡ

೭. ಕದಿಯಬೇಡ

೮. ಸುಳ್ಳು ಸಾಕ್ಷಿ ಹೇಳಬೇಡ

೯. ವ್ಯಭಿಚಾರಕ್ಕೆ ಆಸೆ ಪಡಬೇಡ

೧೦. ಪರರ ವಸ್ತುಗಳಿಗೆ ಆಸೆ ಪಡಬೇಡ

ಈ ಹತ್ತು ಆಜ್ಞೆಗಳು ಎರಡು ಮುಖ್ಯ ಆಜ್ಞೆಗಳಲ್ಲಿ ಅಡಗಿವೆ.

೧. ಎಲ್ಲಕ್ಕಿಂತಲೂ ಹೆಚ್ಚಾಗಿ ದೇವರನ್ನು ಪ್ರೀತಿಸು

೨. ನಿನ್ನಂತೆಯೇ ಪರರನ್ನು ಪ್ರೀತಿಸು.

ದೇವರು ಮಾನವರನ್ನು ಬಹಳವಾಗಿ ಪ್ರೀತಿಸಿದ್ದಾರೆ. ಅವರು ನೀಡಿರುವ ಆಜ್ಞೆಗಳು ನಮ್ಮ ಮೇಲೆ ಅವರಿಗಿರುವ ಪ್ರೀತಿಯನ್ನು ಪ್ರದರ್ಶಿಸುವ ಸಂಕೇತಗಳಾಗಿವೆ. ನಮ್ಮನ್ನು ದಂಡಿಸುವುದಕ್ಕಾಗಿ ಅವರು ಆಜ್ಞೆಗಳನ್ನು ಕೊಡಲಿಲ್ಲ. ಬದಲಾಗಿ ನಮ್ಮ ಬಾಳನ್ನು ಹಸನುಗೊಳಿಸಬೇಕೆಂಬ ಪ್ರೀತಿಯ ಉದ್ದೇಶದಿಂದ ಅವುಗಳನ್ನು ನೀಡಿದರು. ಪ್ರತಿಯೊಬ್ಬ ಮಾನವನ ಅಂತರಂಗದಲ್ಲಿ ದೈವಲಿಖಿತ ಶಾಸನವಿದೆ. ಅದನ್ನು ಅನುಸರಿಸಿ ನಡೆಯುವುದರಲ್ಲಿದೆ ಮಾನವನ ಘನತೆ, ಮಾನವರನ್ನು ಪ್ರೀತಿಸಿದ ದೇವರು ಎಲ್ಲಾ ವಿಧದಲ್ಲೂ ಸಂಪೂರ್ಣವಾಗಿ ನಮ್ಮ ಪ್ರೀತಿಯ ನಿಯಮಗಳನ್ನು ಹಿತೋಪದೇಶಗಳನ್ನು ನೀಡಿದರು. ದೇವರು ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಿ ಪ್ರೇಮಾಜ್ಞೆಗಳನ್ನು ನೀಡಿದ್ದಾರೆ. ಇವುಗಳನ್ನು ಅನುಸರಿಸಿ ನಡೆಯುವುದೇ ಕ್ರೈಸ್ತರ ಕರ್ತವ್ಯವಾಗಿದೆ.

ದಾನಧರ್ಮ: ಪವಿತ್ರ ಗ್ರಂಥವು ನಾವು ಮಾಡಬೇಕಾದ ಏಳು ದಾನಧರ್ಮಗಳನ್ನು ತಿಳಿಸುತ್ತದೆ (ಮತ್ತಾಯ ೨೫:೩೪-೪೦).

೧. ಹಸಿದವರಿಗೆ ಅನ್ನವ ನೀಡುವುದು

೨. ದಾಹವಾದವರಿಗೆ ನೀರು ಕೊಡುವುದು

೩. ಅನಾಥರಿಗೆ ಆಶ್ರಯ ಕೊಡುವುದು

೪. ಬೆತ್ತಲೆಯಾದವರಿಗೆ ಬಟ್ಟೆ ಕೊಡುವುದು

೫. ವ್ಯಾಧಿಷ್ಟರನ್ನು ಸುಧಾರಿಸುವುದು

೬. ಸೆರೆಯಲ್ಲಿರುವವರನ್ನು ಸಂಧಿಸುವುದು

೭. ಸತ್ತವರನ್ನು ಅಡಕ ಮಾಡುವುದು.

ಧರ್ಮ ಕೃತ್ಯ ಅಥವಾ ಕಾರ್ಯ: ಕ್ರೈಸ್ತರು ಮಾಡಬೇಕಾದ ಏಳು ಧರ್ಮ ಕಾರ್ಯಗಳನ್ನು ಕುರಿತು ಧರ್ಮಸಭೆಯು ಬೋಧಿಸುತ್ತದೆ. (ಸಚಿತ್ರ ಜ್ಞಾನೋಪದೇಶವು ೧೯೫೩)

೧. ಪರರ ಸಂಶಯಗಳನ್ನು ನಿವಾರಿಸುವುದು

೨. ತಿಳಿಯದವರಿಗೆ ಜ್ಞಾನೋಪದೇಶ ಮಾಡುವುದು

೩. ಪಾಪಾತ್ಮರನ್ನು ತಿದ್ದುವುದು

೪. ಸಂಕಟಪಡುವವರನ್ನು ಉಪಶಮನಪಡಿಸುವುದು

೫. ನಿಂದೆ, ಅಪದೂರುಗಳನ್ನು ತಾಳಿಕೊಳ್ಳುವುದು

೬. ಕೇಡುಮಾಡಿದವರನ್ನು ಮನ್ನಿಸುವುದು

೭. ಸತ್ತರವರಿಗಾಗಿಯೂ ಜೀವಿತರಿಗಾಗಿಯೂ ಬೇಡಿಕೊಳ್ಳುವುದು.

ಒಬ್ಬ ಕ್ರೈಸ್ತನು ಇಹದಲ್ಲಿ ತನ್ನ ಪ್ರತಿನಿತ್ಯದ ಬದುಕನ್ನು ಹೇಗೆ ನಡೆಸಬೇಕೆಂದು ಉಪದೇಶಿಸುವ ಈ ಗೀತೆ ಬೋಧನಾ ಪ್ರಧಾನ, ಅರ್ಥ ಪ್ರಧಾನ ಮತ್ತು ಕಾವ್ಯ ಗುಣವನ್ನು ಹೊಂದಿದ ಅತ್ಯುತ್ತಮ ಗೀತೆಯಾಗಿದೆ.

ಸ್ತುತಿ: ಯೇಸುವನ್ನು ಸ್ತುತಿಸಿ ಹೊಗಳುವ ಗೀತೆಯು 'ಜೇಸು ನಾಮಸ್ಮರಣೆ' ಎಂಬ ಶೀರ್ಷಿಕೆಯನ್ನು ಹೊಂದಿದೆ. ಇದು ಹಿಂದೂಸ್ತಾನಿ ರಾಗದಲ್ಲಿದೆ.

ಜೇಸು ಪರೇಶಾ, ಶೋಭಿತ ರೂಪನೆ
ಜೇಸು ಜಗದೀಶಾ, ಜಯ ಜಯತು ಪ್ರಭೂ- ಪಲ್ಲವಿ

೧. ದಾಸರ ಪಾಲಾ, ಗುಣವಂತ ಶೀಲಾ
ಆಸರೆ ಹೊಕ್ಕೆವು, ಜಯ ಜಯತು ಪ್ರಭೂ-ಜೇಸು

೨. ಕನ್ಯೆಯ ಪುತ್ರ, ವರತೇಜ ಗಾತ್ರ
ಮನುಜ ಪಾವನ, ಜಯ ಜಯತು ಪ್ರಭೂ-ಜೇಸು

೩. ಕಾರುಣ್ಯ ಶಾಂತಾ, ನವ ವೇದ ದಾತಾ
ನರರ ಪೋಷಕ, ಜಯ ಜಯರು ಪ್ರಭೂ-ಜೇಸು

೪. ಲೋಕದ ಕರ್ತಾ, ಪರಮೇಶಾ ಖ್ಯಾತಾ
ಸಕಲ ರಕ್ಷಕ, ಜಯ ಜಯತು ಪ್ರಭೂ-ಜೇಸು

ಕೀರ್ತನೆ ಪುಸ್ತಕ, ಗೀತೆ-೧೮೦

ಯೇಸುವನ್ನು ದಾಸರ ಪಾಲ, ಗುಣವಂತ ಶೀಲಾ, ಸಜ್ಜನ ಮಿತ್ರಾ, ದೀನರ ಸ್ತುತ್ಯಾ, ಮನಶಾಂತಿ ಸತ್ಯಾ, ನೀತಿ ದೇವಪುತ್ರ ಎಂದೆಲ್ಲಾ ವರ್ಣಿಸಿ ಹೇಳಲಾಗಿದೆ. ರೂಪಕಾಲಂಕಾರ ಮೇಳವಿಸಿರುವ, ದ್ವಿತೀಯ ಪ್ರಾಸದಿಂದ ಕೂಡಿದ ಈ ಗೀತೆಯನ್ನು ಹಾಡುತ್ತಾ ಹೋದಂತೆ ಇದರ ಪದಲಾಲಿತ್ಯ ಕಿವಿಗೆ ಮಾಧುರ್ಯವನ್ನೀಯುತ್ತದೆ. ಗೇಯತೆ ಇದರ ಗುಣ. ಸಂಸ್ಕೃತ ಪದಗಳ ಮಿಶ್ರಣ ಗೀತೆಯ ಮೆರುಗನ್ನು ಹೆಚ್ಚಿಸಿದೆ. ಎರಡೆರಡು ಚರಣಗಳಿಗೆ ಆವರ್ತಗೊಳ್ಳುವ ಪಲ್ಲವಿ ಇತ್ಯಾದಿಗಳಿಂದಾಗಿ ಇದಕ್ಕೆ ದೇಶಿಯ ಸಂಕೀರ್ಣತೆ ಪ್ರಾಪ್ತವಾಗಿದೆ. ಈ ಗೀತೆ ಅಪ್ಪಟ ದೇಶಿಯವಾಗಿದೆ ಎಂದು ಬೇರೆ ಹೇಳಬೇಕಿಲ್ಲ.

ಹಬ್ಬಗಳು: ಯೇಸುವಿನ ಜನನವನ್ನು ವರ್ಣಿಸುವ ಗೀತೆ 'ಜೇಸು ಕ್ರೀಸ್ತುವಿನ ಜನನವನ್ನು ಕುರಿತು' ಎಂಬುದು. ಇದು ಶಂಕರಾಭರಣ ರಾಗದಲ್ಲಿದೆ. ಸರಳ ಪದಬಳಕೆ, ಕಥಾನಿರೂಪಣೆ, ಲಯಬದ್ಧತೆ, ಪ್ರಾದೇಶಿಕ ಭಾಷೆಯ ಸೊಗಡು ಈ ಭಾಷೆಯ ವಿಶೇಷತೆಯಾಗಿದೆ.

ಬನ್ನಿರಿ ನೋಡುವ ಬಾಲಕರೇ
ತನ್ನಿರಿ ಕಾಣಿಕೆ ಚನ್ನಿಗರೇ
ಪರಪುರ ಬೆತ್ಲೆಮ ಗ್ರಾಮದೊಳು
ಮರಿಸುತ ಹುಟ್ಟಿದ ರಾತ್ರಿಯೊಳು
ಸುರನರ ದೂತರ ಗಾನಗಳು
ಮೆರೆವದೆ ಕೇಳಿದೆ ರಾತ್ರಿಯೊಳು
॥ಪಲ್ಲವಿ॥

೧. ದೂತರು ಕೀರ್ತನೆ ಹಾಡುವದ
ಪ್ರೀತಿಸಿ ಸೇವೆಯ ಮಾಡುವದ
ಭಕ್ತರ ಭಾವಿಸಿ ಬೇಡುವದ
ಈತನ ಮಾತೆಯು ನೋಡುವದ

೨. ದಾವೀದ ಗೋತ್ರಕ್ಕೆ ದೀಪಕನು
ದೇವರ ರಾಜ್ಯವ ತೋರುವನು
ಭಾವಿಸಿ ಬೇಡುವ ಭಕ್ತರನು
ಪಾಲಕಿ ಮಾಡುವ ಪೋಷಕನು

೩. ತಪ್ಪದ ಕುರಿಯನು ಹುಡುಕುವನು
ಮುಪ್ಪಿನ ಹಾವನು ಮೆಚ್ಚುವನು
ತಪ್ಪದೇ ಭಕ್ತರ ಕಾಯುವನು
ಅಭ್ರಾಮ ವಂಶದ ತಾರಕನ

ಕೀರ್ತನೆ ಪುಸ್ತಕ, ಗೀತೆ–೩

ಈ ನುಡಿಗಳಲ್ಲಿ ಪಲ್ಲವಿ ಇದೆ. ಪ್ರತಿ ನುಡಿಯಲ್ಲಿಯೂ ನಾಲ್ಕು ಚರಣಗಳು ಬಂದಿವೆ. ಆದಿ ಅಂತ್ಯ ಪ್ರಾಸ ನಿತ್ಯವಾಗಿದೆ. ೨೦ ಚರಣಗಳನ್ನು ಹೊಂದಿದ ದೀರ್ಘಗೀತೆ ಇದಾಗಿದೆ. ಯೇಸುವಿನ ಜನನ ಬೋಧನೆಯನ್ನು ಸವಿಸ್ತಾರವಾಗಿ ವಿವರಿಸುವ ಗೀತೆ ತನ್ನ ಉದ್ದೇಶವನ್ನು ಯಶಸ್ವಿಯಾಗಿ ಈಡೇರಿಸಿಕೊಂಡಿದೆ.

ಅಭ್ರಾಮ: (Abraham) ಅಬ್ರಹಾಮ: ಆದಿಕಾಂಡದಲ್ಲಿ ಹೇಳಿರುವ ಪ್ರಕಾರ ಈ ಹೆಸರಿನ ಅರ್ಥ 'ಅನೇಕ ಜನಾಂಗಗಳ ತಂದೆ' (ಆದಿಕಾಂಡ ೧೭:೧೫) ಈಗಿರುವ ಆಧುನಿಕ ಇರಾಕ್ ದೇಶದ ವುರ್ ಎಂಬ ಪಟ್ಟಣದಲ್ಲಿ ಕ್ರಿಸ್ತನಿಗಿಂತ ೨೦೦೦ ವರ್ಷಗಳ ಹಿಂದೆ ಹುಟ್ಟಿದರು. ದೇವರು ಅಬ್ರಾಹಮನಿಗೆ ಬೇರೊಂದು ಪಟ್ಟಣಕ್ಕೆ ಹೋಗಲು ಹೇಳಿದರು. (ಆದಿ ೧೨:೧) ಆ ದೇಶವನ್ನು ದೇವರು ಅಬ್ರಾಹಮರ ಸಂತತಿಗೆ

ಕೊಡಲು ವಾಗ್ದಾನ ಮಾಡಿದ್ದನು. (ಆದಿ ೧೨:೭) ಆ ದೇಶವೇ ಇಸ್ರಾಯೇಲ್, ಅಬ್ರಾಹಮರ ಸಂತತಿಯು ಬೆಳೆದು ಒಂದು ಪ್ರಸಿದ್ಧ ಜನಾಂಗವೆಂದೆನಿಸಿಕೊಂಡು ಜಗತ್ತಿನ ಎಲ್ಲಾ ಜನರಿಗೂ ಆಶೀರ್ವಾದದಾಯಕವಾಗಿರುತ್ತದೆ ಎಂದು ದೇವರು ಅಬ್ರಾಹಾಮನಿಗೆ ಹೇಳಿದರು (ಆದಿಕಾಂಡ ೧೨:೩). ಆ ಜನಾಂಗವು ಯೆಹೂದ್ಯ ಜನಾಂಗ. ಇವರು ಅತ್ಯಂತ ನಂಬಿಕೆಯುಳ್ಳ ವ್ಯಕ್ತಿಯಾಗಿದ್ದರು. ಯೇಸು ಈ ವಂಶಸ್ಥರಾಗಿ ಜನಿಸಿದರು. ಅಬ್ರಾಹಾಮನ ಜೀವನ ಚರಿತ್ರೆಯು ಸಂಪೂರ್ಣವಾಗಿ ಆದಿಕಾಂಡ ಅಧ್ಯಾಯ ೧೧-೨೫ರಲ್ಲಿ ಕಂಡುಬರುತ್ತದೆ.

ದಾವೀದ: ದಾವೀದನು ಯೆಹೂದ್ಯರ ಮಹಾರಾಜನಾಗಿದ್ದನು. ಆತನು ಕ್ರಿಪೂ, ೧೦೪೦ರಲ್ಲಿ ಜನಿಸಿದನು. ಮತ್ತು ೪೦ ವರ್ಷಗಳು ಅಂದರೆ ಕ್ರಿಪೂ ೧೦೧೦ರಿಂದ ೯೭೦ರವರೆಗೆ ರಾಜ್ಯವಾಳಿದನು. ದಾವೀದನು ಯೆಹೂದ್ಯರಿಗೆ ಯೆರುಸಲೇಮನ್ನು ರಾಜಧಾನಿಯನ್ನಾಗಿ ಸ್ಥಾಪಿಸಿದನು. ಆತನ ಆಡಳಿತ ಕಾಲದಲ್ಲಿ ಯೆಹೂದ್ಯ ಜನಾಂಗವು ಮಹಾ ಬಲಶಾಲಿಯಾದ ರಾಜ್ಯವಾಯಿತು. ದಾವೀದನು ಹಳೆಒಡಂಬಡಿಕೆಯಲ್ಲಿ ನಮೂದಿಸಿರುವ ಕೀರ್ತನೆಗಳಲ್ಲಿ ೭೩ ಕೀರ್ತನೆಗಳನ್ನು ಸ್ವತಃ ಬರೆದನು. ದಾವೀದನ ಜೀವನಚರಿತ್ರೆಯು ೧ನೇ ಸಾಮುವೇಲ ಅಧ್ಯಾಯ ೧೬ರಿಂದ ಒಂದನೇ ಅರಸು ೨ನೇ ಅಧ್ಯಾಯದ ವರೆಗೂ ಮುಂದುವರೆದಿದೆ.

ಬೆತ್ಲಹೇಮ್: ಯುದಾಯದಲ್ಲಿದ್ದ ಬೆತ್ಲೆಹೇಮ್ ಪೂರ್ವದಲ್ಲಿ ಇದಕ್ಕೆ ಎಫ್ರಾತ ಎಂಬ ಹೆಸರಿದ್ದಿತು. ಇದು ಯೆರುಸಲೇಮಿಗೆ ದಕ್ಷಿಣದಲ್ಲಿ ಐದು ಮೈಲುಗಳ ದೂರದಲ್ಲಿದ್ದ ಒಂದೂರು, ಯೇಸುವಿನ ತಂದೆತಾಯಿಗಳು ದಾವೀದನ ಮನೆತನಕ್ಕೆ ಸೇರಿದವರಾದ ಕಾರಣ ಖಾನೇಷುಮಾರಿ ಬರಿಸಿಕೊಳ್ಳುವುದಕ್ಕೆ ಇಲ್ಲಿಗೆ ಬಂದರು. ಆ ಕಾಲದಲ್ಲಿ ಯೇಸು ಇಲ್ಲಿಯೇ ಜನಿಸಿದರು.

ಯೇಸುವಿನ ಜನನದ ಸಂದರ್ಭದಲ್ಲಿ ಮೂವರು ಜ್ಞಾನಿಗಳು (ರಾಯರು) ಯೇಸುವನ್ನು ಕಾಣಲು ಬಂದ ಘಟನೆಯನ್ನು ಗೀತಗಾರ 'ಮೂರು ರಾಯರನ್ನು ಕುರಿತು' ಎಂಬ ಗೀತೆಯಲ್ಲಿ ಕಥನ ರೂಪದಲ್ಲಿ ನಿರೂಪಿಸಿದ್ದಾರೆ. ಇದು ಪಂತುರಾವಳಿ ಎಂಬ ರಾಗದಲ್ಲಿದ್ದು ಆದಿ ತಾಳವನ್ನು ಹೊಂದಿದೆ.

ಕರ್ಣ ಕುಂಡಲ ಮಕುಟವನಿಟ್ಟು – ಆ ಭೂಪತಿಗಳು
ಸ್ವರ್ಣ ಭೂಷಣ ಬಾಪುರಿ ತೊಟ್ಟು,
ಕನ್ನಿಕೆ ಮರಿಸುತ ಕ್ರಿಸ್ತುವ ನೋಡಲು
ಚನ್ನಿಗ ಭೂಪರು ಪ್ರೈಣವ ಗೈದರು – ಮೂರು
ಧೂಪ ಪರಿಮಳ ಕಾಂಚನ ತಂದವರು – ಆ ಭೂಪತಿಗಳು
ಪಾಪ ಪರಿಹರ ಬೇಡುತ ನೀಡಿದರು
ಪಾಪ ವಿಮೋಚಕ ಸುರನರ ಪೋಷಕ
ಭೂಪರ ಭೂಪನೆ ಕಷ್ಟವನಿತರು – ಮೂರು
ಬಂದ ರಾಯರು ಕಂದನ ನೋಡಿದರು – ಆ ಭೂಪತಿಗಳು

ತಂದ ಕಾಣಿಕೆ ವಂದಿಸಿ ನೀಡಿದರು

ಸಂಧಿಸಿ ದೇವರ ಕಂದನ ನಂದನ

ಚಂದದಿ ಹಿಂದಕೆ ಪ್ಯಣವ ಹೊರಟು –ಮೂರು

ಕೀರ್ತನೆ ಪುಸ್ತಕ, ಗೀತೆ–೫

ಯೇಸುವಿನ ಜನನದ ಸಂದರ್ಭದಲ್ಲಿ ಮೂರು ಜ್ಯೋತಿಷಿಗಳು ಯೇಸುವನ್ನು ಕಾಣಲು ಬಂದ ಘಟನೆಯನ್ನು ಮತ್ತಾಯನ ಶುಭಸಂದೇಶದಲ್ಲಿ ೨ನೇ ಅಧ್ಯಾಯದಲ್ಲಿ ತಿಳಿಸಿದ್ದಾರೆ. 'ಜ್ಯೋತಿಗಳು ಆ ಮನೆಯನ್ನು ಪ್ರವೇಶಿಸಿ ಮಗುವನ್ನು, ತಾಯಿ ಮರಿಯಳ ಬಳಿ ಕಂಡು ಅದಕ್ಕೆ ಸಾಷ್ಟಾಂಗವೆರಗಿ ಆರಾಧಿಸಿದರು. ತಮ್ಮತಮ್ಮ ಬೊಕ್ಕಸಗಳನ್ನು ಬಿಚ್ಚಿ ಚಿನ್ನವನ್ನು, ದೂಪವನ್ನು, ಪರಿಮಳ ದ್ರವ್ಯವನ್ನು ಮಗುವಿಗೆ ಪಾದಕಾಣಿಕೆಯಾಗಿ ಸಮರ್ಪಿಸಿದರು. (ಮತ್ತಾಯ ೨:೧೧–೧೨).

ಈ ಮೂರು ಕಾಣಿಕೆಗಳು ಮೂರು ಪ್ರಮುಖ ಅಂಶಗಳನ್ನು ಸೂಚಿಸುತ್ತದೆ. ಅಂದರೆ ಯೇಸುವನ್ನು ಅವರು ೧. ರಾಜಾಧಿರಾಜನೆಂದೂ ೨. ನಿಜವಾದ ದೇವರೆಂದು ೩. ನಿಜವಾದ ಮನುಷ್ಯನೆಂದೂ ಅಂಗೀಕರಿಸಿದರು.

ಸಂಸ್ಕೃತ ಪದಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಲಾಗಿದೆ. ಆದಿ, ಅಂತ್ಯ ಪ್ರಾಸವನ್ನು ಒಳಗೊಂಡ ಈ ಗೀತೆಯನ್ನು ಹಾಡುತ್ತಾ ಹೋದಂಂತೆ ಗೀತೆಯ ಮಾಧುರ್ಯತೆಯು ಹೆಚ್ಚುತ್ತದೆ. ಗೇಯತೆ ಇದರ ಇನ್ನೊಂದು ಗುಣಧರ್ಮವಾಗಿದೆ. ಇಂದು 'ಮೂರು ರಾಯರ' ಹಬ್ಬವು ಕ್ರೈಸ್ತ ಸಮುದಾಯದಲ್ಲಿ ಆಚರಣೆಯಲ್ಲಿದೆ.

ಕರ್ನಾಟಕಕ್ಕೆ ಆಗಮಿಸಿ ಸುವಾರ್ತಾಸೇವೆ ಮಾಡಿದ ಮಿಶನರಿಗಳಲ್ಲಿ ಕಥೋಲಿಕಾ ಮಿಶನರಿಗಳೇ ಮೊದಲಿಗರು. ಪ್ರಾರಂಭದ ದಿನಗಳಲ್ಲಿ ನಡೆದ ಸಾಹಿತ್ಯ ಬೆಳವಣಿಗೆಗೆ ಆಧಾರ ದೊರೆಯದಿದ್ದರೂ ನಂತರದ ಮಿಶನರಿಗಳ ಕೊಡುಗೆ ಅವಿಸ್ಮರಣೀಯವಾದುದು. ಕಥೋಲಿಕಾ ಗುರು ಲಿಯೋನಾಡೊ ಚಿನ್ನಾಮಿ (೧೬೦೭–೧೬೭೬) ಕನ್ನಡದಲ್ಲಿ ಸಾಹಿತ್ಯ ಚಟುವಟಿಕೆಗೆ ತೊಡಗಿದ ಮೊತ್ತಮೊದಲ ವಿದೇಶಿ ವಿದ್ವಾಂಸರಾಗಿದ್ದಾರೆ. 'ಹೊಸಗನ್ನಡ ಗದ್ಯ ಸಾಹಿತ್ಯದಲ್ಲಿ ಪ್ರಥಮ ಗ್ರಂಥಕಾರ' ಎಂಬ ಬಿರುದಿಗೆ ಪಾತ್ರರಾಗಿದ್ದಾರೆ. ಇವರ ನಂತರದಲ್ಲಿ ಕಂಡುಬರುವ ಶ್ರೇಷ್ಟ ಮಿಶನರಿಯೇ ಎಲ್. ಶಾರ್ಬೋನೊ (೧೮೦೬–೧೮೭೩). ಬಹುಭಾಷಾ ಪಾಂಡಿತ್ಯವನ್ನು ಗಳಿಸಿಕೊಂಡಿದ್ದ ಇವರು ಫ್ರೆಂಚ್ ಲ್ಯಾಟಿನ್, ಇಂಗ್ಲೀಷ್, ತಮಿಳಿನಿಂದ ಗ್ರಂಥಗಳನ್ನು ಭಾಷಾಂತರಿಸಿದರಲ್ಲದೇ ಅನೇಕ ಗ್ರಂಥಗಳ ಕರ್ತೃವೂ ಆದರು. 'ಲ್ಯಾಟಿನ್–ಕನ್ನಡ ವ್ಯಾಕರಣ' ಇವರ ಶ್ರೇಷ್ಟ ಕೊಡುಗೆಗಳಲ್ಲೊಂದು. ಕಥೋಲಿಕ ಕ್ರೈಸ್ತರಿಗೆ ಆರಾಧನಾ ವೇಳೆಯಲ್ಲಿ ಉಪಯೋಗವಾಗುವ ಗೀತೆಗಳ ರಚನೆಯು ತಿಯೊದೊರ್–ಅಂದ್ರೆ ಜೆಬ್ರಿಯಿರ್ (೧೮೫೦–೧೯೧೧) ರವರಿಂದ ಆಯಿತು. ಇವರ ಈ 'ಕೀರ್ತನೆ ಪುಸ್ತಕ' ಮೊಟ್ಟಮೊದಲ ಗೀತಪುಸ್ತಕವಾಗಿದೆ. ಫ್ರೆಂಚ್ ಗೀತೆಗಳ ಭಾಷಾಂತರವನ್ನೊಳಗೊಂಡ ಈ ಗೀತಪುಸ್ತಕ ಅನೇಕ ವರ್ಷಗಳವರೆಗೆ ಕಥೋಲಿಕ ಕ್ರೈಸ್ತರ ಗೀತಪುಸ್ತಕವಾಗಿ

ಬಳಕೆಯಲ್ಲಿತ್ತು. ಈ ಗೀತಪುಸ್ತಕದ ಗೀತೆಗಳ ಅಧ್ಯಯನ ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಯಿತು. ಈತನು ಅನೇಕ ಗ್ರಂಥಗಳ ಕರ್ತೃವಾಗಿದ್ದನು.

ಕಥೋಲಿಕ ಮಿಶನರಿಗಳು ಹಾಕಿಕೊಟ್ಟ ಮಾರ್ಗದ ಜಾಡನ್ನು ಹಿಡಿದು ಮುಂದುವರಿದ ಪ್ರೊಟೆಸ್ಟೆಂಟ್ ಪಂಥದ ಲಂಡನ್ ಮಿಶನ್, ವೆಸ್ಲಿಯನ್ ಮಿಶನ್, ಬಾಸೆಲ್ ಮಿಶನ್‌ಗಳಿಗೆ ಸೇರಿದ ಮಿಶನರಿಗಳು ತಮ್ಮ ಅವಿರತ ಶ್ರಮದಿಂದ ಕನ್ನಡ ಸಾಹಿತ್ಯವನ್ನು ಬೆಳೆಸಿದ ಬಗೆ ಪ್ರಮುಖವಾಗಿ ಗೀತಸಾಹಿತ್ಯಕ್ಕೆ ಇವರ ಅದ್ವಿತೀಯ ಕೊಡುಗೆಯನ್ನು ಕುರಿತು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಕಥೋಲಿಕ ಕ್ರೈಸ್ತ ಗೀತೆಗಳ ವಿಶಿಷ್ಟಾಂಶಗಳು:

೧. ಕಥೋಲಿಕ ಮಿಶನರಿಗಳು ತಮ್ಮ ಕೆಲವು ಗೀತೆಗಳಲ್ಲಿ ಕಥನ ಕೌಶಲವನ್ನು ಮರೆದಿದ್ದಾರೆ. ಉದಾ: ಯೇಸುವಿನ ಹುಟ್ಟಿನ ಚಿತ್ರಣ, ಯಾತನೆ, ಮರಣಕ್ಕೆ ಸಂಬಂಧಿಸಿದ ಗೀತೆಗಳು, ಯೇಸುವಿನ ಕ್ರೂಜೆಯಲ್ಲಿನ ಕ್ರೂರ ಮರಣವನ್ನು ಕಣ್ಣಿಗೆ ಕಟ್ಟುವಂತೆ ಹೃದಯಂಗಮವಾಗಿ ಚಿತ್ರಿಸುವಲ್ಲಿ ಯಶಸ್ವಿಯಾಗಿದೆ.

೨. ಕಥೋಲಿಕರಲ್ಲಿ ಸಂತರ ಜೀವನಚರಿತ್ರೆಗಳು, ಅವರಿಗೆ ಗೌರವಾದಿಗಳೂ ಹೆಚ್ಚು. ಇವರನ್ನು ಕುರಿತಾಗಿ ಪ್ರಮುಖವಾಗಿ ಸಂತ ಮರಿಯಮ್ಮ, ಕಾವಲು ದೇವದೂತರು, ಸಂತ ಅಂತೋಣಿ ಮತ್ತು ಸಂತ ಇಗ್ನೇಷಿಯಸ್‌ರವರಿಗೆ ಸಂಬಂಧಿಸಿದಂತೆ ಗೀತೆಗಳ ರಚನೆಯಾಗಿವೆ. ವಿಶೇಷವಾದ ಪುಣ್ಯದಿಂದ ಸ್ವರ್ಗದಲ್ಲಿ ಉಚ್ಚಸ್ಥಾನವನ್ನು, ಭೂಮಿಯಲ್ಲಿ ಪೂಜ್ಯತೆಯನ್ನು ಪಡೆದ ವ್ಯಕ್ತಿಗಳನ್ನು ಸಂತರೆಂದು ಅಂಗೀಕರಿಸಿ ಅವರ ಸಹಾಯವನ್ನು ಯಾಚಿಸಿರುವ ಬಗೆ ನಾವು ಸಂತ ಜೀವನವನ್ನು ನಡೆಸುವಂತೆ ಪ್ರೇರೇಪಿಸುತ್ತದೆ. ಸಂತರುಗಳು ಸಹಜ ಮಾನವರಂತೆ ಬಾಳಿದವರು. ಸಂತ ಎಂದಾಗ ಆತ ನಿಷ್ಕಂಳಕ ಭಾವನೆಯು ಜನಪದರಲ್ಲಿದೆ. ಆದರೆ ಆತನ ಇನ್ನೊಂದು ಮುಖ ಎಂದರೆ ಲೌಕಿಕ ವಿಚಾರಗಳನ್ನು ಈ ಗೀತೆಗಳು ಹೇಳುವುದಿಲ್ಲ. ಇದು ಸಂತರ ಗೀತೆಗಳ ಒಂದು ಕೊರತೆಯೂ ಆಗಿದೆ ಎನ್ನಬಹುದು.

೩. ಭಾರತೀಯ ಆಧ್ಯಾತ್ಮಿಕ ವಿಚಾರಗಳನ್ನು ಕ್ರೈಸ್ತ ಸಂತರ ಜೀವನಕ್ಕೆ ಆರೋಪಿಸಿ ಎರಡು ಸಂಸ್ಕೃತಿಗಳ ಸಂಗಮವನ್ನು ಸಾಧಿಸಿಕೊಂಡಿದ್ದಾರೆ ಸಂಗೀತಗಾರರು. ಉದಾ: ಗೀತೆ ೫೮೮ರಲ್ಲಿ ಮಾತೆ ಮರಿಯಮ್ಮಳನ್ನು 'ಶ್ರೀ ಕನ್ನಿಕೆ' ಎಂದು ಕರೆಯಲಾಗಿದೆ. 'ಶ್ರೀ' ಎಂಬುದು ಭಾರತೀಯ ಸಂಸ್ಕೃತಿಯಲ್ಲಿ ದೇವಾನುದೇವತೆಗಳನ್ನು ಸಂಬೋಧಿಸಲು ಬಳಸಲಾಗುತ್ತದೆ. ಅಂತೆಯೇ ಇಲ್ಲಿ ಮಾತೆಮೇರಿಯನ್ನು ಶ್ರೀ ಎಂದು ಸಂಬೋಧಿಸಿ ದೇಶೀಯತೆಯನ್ನು ಮೂಡಿಸಿರುವುದು ವೈಶಿಷ್ಟ್ಯವಾಗಿದೆ. ನಮಃ ಎಂಬುದು ಪೂಜಾವೇಳೆಯಲ್ಲಿ ಬಳಸುವ ಪದ ಇಲ್ಲಿ ದೇವಮಾತೆಯನ್ನು ಹೊಗಳಲು ಬಳಸಲಾಗಿದೆ. ಉದಾ: ಜಪದ ಪುಸ್ತಕ, ೧೯೩೦, ಪುಟ-೫೯.

೪. ಲ್ಯಾಟಿನ್, ಫ್ರೆಂಚ್, ತಮಿಳು, ಸಿರಿಯನ್, ಹೀಬ್ರೂ ಪದಗಳ ಬಳಕೆಯಾಗಿವೆ.

ಸೀರಿತು ಸಾಂಕ್ತು – ಲ್ಯಾಟಿನ್ ಆರ್ಚ ಶಿಷ್ಟ – ಸಂಸ್ಕೃತ ತಿರು – ತಮಿಳು

ಕಿರಿಯೆ ಎಲೆಯಿಸೊನ್ - ಲ್ಯಾಟಿನ್ ಆಮೆನ್ - ಹೀಬ್ರು

ಶಿಲುಬೋ-ಸಿರಿಯನ್ ಸೈಂಟ್-ಇಂಗ್ಲೀಷ್

೫. ಸಂವಾದಿ ಪದಗಳ ಬಳಕೆ ಕಾಣುತ್ತೇವೆ ಉದಾ: ಸುಮ್ಮನಸುಗಳು ಅಂದರೆ ದೇವ ದೂತರು.

೬. ನವೀನ ಮಾದರಿಯ ಪ್ರಾರ್ಥನಾ ಪ್ರಕಾರ ರಚನೆಯಾಯಿತು. ಉದಾ: ಲಿಟನಿ.

೭. ಕಥೋಲಿಕ ಗೀತಸಾಹಿತ್ಯವು ಫ್ರೆಂಚ್‌ಗೀತೆಗಳ ಭಾಷಾಂತರವಾಗಿದ್ದು ಆ ರಾಗದಲ್ಲಿಯೇ ರಚಿತವಾಗಿದೆ.

೮. ದೇವರನ್ನು ಆತ್ಮೀಯತೆಯಿಂದ ವರ್ಣಿಸಲಾಗಿದೆ. ಉದಾ: ಪವಿತ್ರ ಆತ್ಮರನ್ನು ದರಿದ್ರರಪಿತ, ಬಡವರಪಿತ. ದುಃಖದಶಾಂತಿ, ವರಗಳದಾತ, ಭಾಗ್ಯದಜ್ಯೋತಿ ಎಂದು ವರ್ಣಿಸಲಾಗಿದೆ. ಈ ಹೋಲಿಕೆಗಳು ದೇವರೊಂದಿಗಿನ ನಮ್ಮ ಸಂಬಂಧ ಹತ್ತಿರವಾಗುವಂತೆ ಮಾಡಿದೆ.

೯. ಕಾವ್ಯಗುಣಗಳು ಕಡಿಮೆಯಾಗಿರುವ ಗೀತೆಗಳೇ ಹೆಚ್ಚು, ಗೇಯತೆ ಅಲ್ಲಲ್ಲಿ ಕಂಡು ಬರುತ್ತದೆ. ಅರ್ಥವೇ ಪ್ರಾಮುಖ್ಯತೆಯನ್ನು ಪಡೆದಿರುವ ಗೀತೆಗಳಾಗಿವೆ.

೧೦. ಹಲವು ವರ್ಣನೆಗಳು ವರ್ಣಿತ ವಿಷಯದಲ್ಲಿ ಕರ್ತೃ ತನ್ಮಯನಾಗಿರುವುದನ್ನು ತೋರಿಸುತ್ತದೆ. ಉದಾ: ಮಾತೆಮರಿಯಮ್ಮನ ಲಿಟನಿಯಲ್ಲಿ ಕರ್ತೃ ಮಾತೆಯನ್ನು ಸ್ತುತಿಸಿ ಕೊಂಡಾಡಿಡುವ ಬಗೆ ಹಾಗೂ ಪವಿತ್ರ ಆತ್ಮರ ಗೀತೆಯಲ್ಲಿ ಬರುವ ವರ್ಣನೆಗಳು ಭಕ್ತನಿಗೆ ಉದ್ಧಿಷ್ಟ ವ್ಯಕ್ತಿಗಳಲ್ಲಿರುವ ಭಕ್ತಿ, ಆತ್ಮೀಯತೆಯನ್ನು ಸೂಚಿಸುತ್ತದೆ.

೧೧. ಅಲಂಕಾರಗಳ ಬಳಕೆ ಗೀತೆಯ ವರ್ಣನೆಗೆ ಪುಷ್ಟಿಯನ್ನು ತಂದಿದೆ. ಉದಾ: ಮೋಕ್ಷವನ್ನು ಭಾಗ್ಯಸಮುದ್ರ, ಶಾಂತಸ್ಥಳ, ಸೂರ್ಯನಂತೆ ಪ್ರಕಾಶಿಸುವ ಸ್ಥಳವೆಂದು ವರ್ಣಿಸಿದ್ದಾನೆ. ಯೇಸುವನ್ನು ಮೋಕ್ಷದರಾಯರು, ಸಮಾಧಾನದದೇವರು, ಸೃಷ್ಟಿಕರ್ತರು, ಆತ್ಮಗಳ ಸೂರ್ಯರು ಪುಣ್ಯಾತ್ಮರಿಗೆ ನೀತಿ ವೇದಸಾಕ್ಷಿ, ಪಾಪಿಗಳಾಸ್ಪದಿಕರು, ಕನ್ನಿಕೆಯ ಸಂತೋಷವು, ದೀನರುಪಶಮಿಕರು ಎಂದು ರೂಪಕಗಳ ಮೂಲಕ ವರ್ಣಿಸಿದ್ದಾರೆ ಗೀತಗಾರ. ಸಮಾಜದ ಎಲ್ಲ ವರ್ಗದ ಜನತೆಗೂ ದೇವರು ಕೈಗೆಟಕುವ ವ್ಯಕ್ತಿಯಂತೆ ಚಿತ್ರಿಸಿರುವುದು ಗಮನೀಯ ಅಂಶವಾಗಿದೆ.

೧೨. ದೇವರನ್ನು ಸೇವಿಸುವ ಹಾಗೆ ಪ್ರತಿಜ್ಞೆ (ಗೀತೆ-೧೦) ಎಂಬ ಗೀತೆಯ ಆಶಯ ಸೇವಾ ಮನೋಭಾವ ಮೂಡಿಸಿಕೊಳ್ಳುವಂತೆ ಪ್ರೇರೇಪಿಸುವಲ್ಲಿ ಯಶಸ್ವಿಯಾಗಿದೆ. ಸಹೋದರರೇ ನೀವು ಮುಕ್ತಸ್ವಾತಂತ್ರ್ಯ ಜೀವನವನ್ನು ನಡೆಸಬೇಕೆಂದು ದೇವರು ನಿಮ್ಮನ್ನು ಕರೆದಿದ್ದಾರೆ. ಆದರೆ ಆ ಸ್ವಾತಂತ್ರ್ಯವನ್ನು ದೈಹಿಕ ಬಯಕೆಗಳಿಗೆ ಸಾಧನವಾಗಿ ಮಾಡಿಕೊಳ್ಳಬೇಡಿ ಬದಲಾಗಿ ಒಬ್ಬೊರಿಗೊಬ್ಬರು ಸೇವೆಮಾಡಿ ಎಂಬ ಒಂದೇ ವಚನದಲ್ಲಿ ಇಡೀ ಧರ್ಮ ಶಾಸ್ತ್ರವು ಅಡಗಿದೆ. ಆದರೆ ನೀವು ನಿಮ್ಮ ಕಚ್ಚಾಟ, ಕಿತ್ತಾಟ, ನುಂಗಾಟ- ಇವುಗಳನ್ನು ನಿಲ್ಲಿಸದಿದ್ದರೆ ಒಬ್ಬರಿಂದೊಬ್ಬರು ವಿನಾಶವಾದೀರಿ ಎಂಬ ನುಡಿಗಳು ಪ್ರಸ್ತುತ ಸಮಾಜದ ಪರಿವರ್ತನೆಗೆ ಕರೆನೀಡುತ್ತದೆ.

೧೩. ಕ್ರೈಸ್ತ ಧಾರ್ಮಿಕ ಚಿಂತನೆಯನ್ನು ಅರ್ಥೈಸಿಕೊಳ್ಳಲು ಬಳಸಲಾದ ಪದಗಳು ಅರ್ಥಪೂರ್ಣವಾಗಿವೆ.

ಉದಾ: ಸಪ್ತವರಗಳು (ಗೀತೆ-೪೭), ದೇವದೂತ, ಕಾವಲು ದೇವದೂತ, ವೇದಸಾಕ್ಷಿ.

೧೪. ಕೀರ್ತನ ಪುಸ್ತಕದಲ್ಲಿ ಬರುವ ಗೀತೆಗಳ ಕರ್ತೃಯಾರೆಂದು ಎಲ್ಲಿಯೂ ಕಂಡು ಬರುವುದಿಲ್ಲ. ಒಬ್ಬ ಕಥೋಲಿಕ ಗುರುಸ್ವಾಮಿಯವರಿಂದ ರಚಿಸಲ್ಪಟ್ಟ ಫ್ರೆಂಚ್‌ರಾಗವುಳ್ಳ ಕೀರ್ತನೆಗಳು ಎಂದು ಮಾತ್ರ ಬರೆಯಲಾಗಿದೆ. ಕ್ರೈಸ್ತಗೀತೆಗಳ ರಚನೆ, ಪ್ರಕಟಣೆ, ಪ್ರಮುಖವಾಗಿತ್ತೇ ಹೊರತು ತಮ್ಮ ಕೀರ್ತಿಗಾಗಿ ಬರೆಯುತ್ತಿರಲಿಲ್ಲ ಎಂಬುದು ಇದರಿಂದ ವಿಧಿತವಾಗುತ್ತದೆ.

೧೫. ಕ್ರೈಸ್ತ ಗೀತೆಗಳು ಹಿಂದೂರಾಗದಲ್ಲಿ ಬರೆಯಲಾಗಿದೆ. ಈ ಗೀತೆಗಳು ಲಯಬದ್ಧತೆಯನ್ನು ಹೊಂದಿದ್ದು ದೀರ್ಘವಾದ ಚರಣಗಳನ್ನು ಹೊಂದಿದೆ. ತತ್ವಭೋಧನೆ ಪ್ರಧಾನವಾಗಿದೆ. ಉದಾ: ೧೦ ಕಟ್ಟಳೆಗಳು, ದಾನ-ಧರ್ಮ, ಧರ್ಮಕಾರ್ಯ ಇತ್ಯಾದಿ.

೧೬. ವಿದೇಶಿ ಸ್ಥಳಗಳ ಹಾಗೂ ರಾಜರುಗಳ ಹೆಸರುಗಳನ್ನು ಗೀತೆಯಲ್ಲಿ ಬಳಸಲಾಗಿದೆ. ಯೇಸುವಿನ ವಂಶಸ್ಥರುಗಳ ಪರಿಚಯ ಹಾಗೂ ಜನ್ಮಸ್ಥಳವನ್ನು ತಿಳಿಯಲು ಸಾಧ್ಯವಾಗಿದೆ ಉದಾ: ಗೀತೆ-೩

೧೭. ಸಂಸ್ಕೃತ ಮತ್ತು ಕನ್ನಡ ಪದಗಳನ್ನು ಸಮಪ್ರಮಾಣದಲ್ಲಿ ಬಳಸಿ ಗೀತೆ ರಚಿಸಿದ್ದಾರೆ. ಇದರಿಂದ ಎಲ್ಲ ವರ್ಗದ ಜನರು ಗೀತೆಯನ್ನು ಅದರ ಸಂದೇಶವನ್ನು ತಿಳಿಯಲು ಸಹಾಯಕವಾಗಿದೆ. ಉದಾ: ಮೂಗಜ, ನಿಶೆ, ತೇಜ, ಗೋದಲಿ, ಗೊಲ್ಲರು, ಸುರ ಇತ್ಯಾದಿ. ದೇಶೀಯತೆಯನ್ನು ಮೆರೆಯುವ ಪದಗಳ ಬಳಕೆಯಾಗಿವೆ. ಬನ್ನಿರೈ, ಹೊಗಳಿರೈ, ಬೇಡಿರೈ ಇತ್ಯಾದಿ.

೧೮. ಕ್ರೈಸ್ತ ತತ್ವಗಳನ್ನು ದೇಶೀಛಂದಸ್ಸಿಗೆ ಅಳವಡಿಸಿ ಕಲೆಗೆ ಪ್ರಾಧಾನ್ಯತೆ ನೀಡಿ ಕಲಾ ಮಾಧ್ಯಮದ ಮೂಲಕ ಯೇಸುಕ್ರಿಸ್ತನ ಜೀವನವನ್ನು ಜನರಿಗೆ ಪರಿಚಯಿಸುವ ಪ್ರಯತ್ನ ಯಶಸ್ವಿಯಾಗಿದೆ.

೧೯. ದೇವರಿಗೆ ಮನುಷ್ಯನೊಂದಿಗಿರುವ ಅನಂತ ಪ್ರೀತಿಯನ್ನು ವರ್ಣಿಸಲು ಯೇಸು ಪಕ್ಷಿ ಮತ್ತು ಹೂಗಳ ಉದಾಹರಣೆಯನ್ನು ಬಳಸಿದ್ದಾರೆ. ಈ ಉದಾಹರಣೆಗಳು ಪ್ರಭುಯೇಸುವಿಗೆ ತಮ್ಮ ಸುತ್ತಮುತ್ತಲಿನ ವಿಶ್ವದ ಬಗ್ಗೆ ಇರುವ ಅಪಾರ ಆಸಕ್ತಿಯನ್ನು ವ್ಯಕ್ತಪಡಿಸುತ್ತದೆ. ಈ ಸೃಷ್ಟಿಯಲ್ಲಿ ಅವರು ತಮ್ಮನ್ನು ಮತ್ತು ನಮ್ಮನ್ನು ಪ್ರೀತಿಸುವ ದೇವರಹಸ್ತವನ್ನು ಕಂಡರು. ಸೃಷ್ಟಿಯಲ್ಲಿರುವ ಪ್ರತಿಯೊಂದು ವಸ್ತು ದೇವರ ಸಂದೇಶವನ್ನು ಹೊಂದಿದೆ. ಕಾರಣ ಅದು ದೇವರ ಪ್ರೀತಿಯ ಪರಿಣಾಮವಾಗಿ ಸೃಷ್ಟಿಸಲಾಗಿದೆ ಎಂಬ ಸತ್ಯವನ್ನು ನಮಗೆ ತಿಳಿಸುತ್ತದೆ.

೨೦. ಕೀರ್ತನೆ ಪುಸ್ತಕದ ಗೀತೆಗಳ ಶೀರ್ಷಿಕೆಯನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ನೀಡಲಾಗಿದೆ.

ಅಡಿ ಟಿಪ್ಪಣಿ

೧. ಕೀರ್ತನೆ, ೮೯:೧

೨. ಡಾ. ಶ್ರೀನಿವಾಸ ಹಾವನೂರ, ಡಾ. ಫರ್ಡಿನಾಂಡ್ ಕಿಟಲ್, ೨೦೦೧, ಪುಟ.೩೧

೩. ಚರ್ಚ್ ಇತಿಹಾಸ, ಸಂಚಲನ, ೧೯೯೯, ಪುಟ.೧೦

೪. ಅದೇ, ಪುಟ.೧೧

೫. Jonathan J. Bonk, Encyclopedia of Mission and Missionaries, 2007, P.389

೬. ಡಾ. ಶ್ರೀನಿವಾಸ ಹಾವನೂರ, ಹೊಸಗನ್ನಡದ ಅರುಣೋದಯ, ೧೯೭೪, ಪುಟ.೮೯

೭. ಜಪದ ಪುಸ್ತಕ, ೧೯೩೦, ಪುಟ. XIV

೮. Hans J. Hillerbrand. Oxford Ecncylopedia of the Reformation Vol.3, 1996, P. 472

೯. ಜಪದ ಪುಸ್ತಕ, ಪುಟ.೫೯

೧೦. ಮತ್ತಾಯ, ೧:೧೮–೨೫

೧೧. The Book of Saints, A Dictionary of Servants of God, Canonized by the Catholic Church, Compiled by the Benedictine monks of St. Augustine's Abbey, P. 482

೧೨. Hans J. Hillerbrand, Oxford Encyclopedia of the Reformation Vol.3, 1996, P.13

೧೩. ಜಪದ ಪುಸ್ತಕ, ೧೯೩೦, ಪುಟ.೨೦೭

೧೪. ಅದೇ, ಪುಟ.೬೧

೧೫. ಡಾ. ಎಡ್ವರ್ಡ್ ನರೋನ, ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ, ಪುಟ.೧೩೫

೧೬. ಜಪದ ಪುಸ್ತಕ, ಪುಟ.೨೦೦

೧೭. ಅದೇ, ಪುಟ.೩೮೮

೧೮. ಡಾ. ಎಡ್ವರ್ಡ್ ನರೋನ, ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ, ಪುಟ.೯೮

೧೯. ಅದೇ, ಪುಟ.೧೦೦

೨೦. ಅದೇ, ಪುಟ.೯೯

೨೧. ಡಾ. ಐ. ಅಂತಪ್ಪ, ಹೊಸಗನ್ನಡದ ಪ್ರಥಮ ಗ್ರಂಥಕಾರ, ಪುಟ.೪೫

೨೨. ಕೀರ್ತನೆ ಪುಸ್ತಕ, ೧೯೪೯, ಪುಟ.IV

೨೩. ಮತ್ತಾಯ, ೬:೨೬

೨೪. ಮತ್ತಾಯ, ೧೧:೨೮

೨೫. ಧರ್ಮ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೦, ಪುಟ.೪೯೦

೨೬. Harpercollins, Encyclopedia of Catholism 1995, P.718

೨೭. ಅದೇ, ಪುಟ.೬೩

೨೮. ಅದೇ, ಪುಟ.೬೫೨

೨೯. ಕೀರ್ತನೆ ಪುಸ್ತಕ, ಗೀತೆ ೪೨, ಪುಟ.೮೯

೩೦. ಜಪದ ಪುಸ್ತಕ, ೧೯೪೯, ಪುಟ.೧೭೨

೩೧. ಕೀರ್ತನೆಗಳು, ಪವಿತ್ರ ಗಂಥದ ಒಂದು ಪುಸ್ತಕ

೩೨. ಕೀರ್ತನೆ ಪುಸ್ತಕ, ಗೀತೆ ೨೭, ಪುಟ.೬೦

೩೩. ಜ್ಞಾನೋಕ್ತಿಗಳು, ೩:೫

೩೪. ಅದೇ, ೯:೧೦

೩೫. ಕೀರ್ತನೆ ಪುಸ್ತಕ, ಪುಟ.೧೬೦

ಅಧ್ಯಾಯ - ಐದು

ಪ್ರೊಟೆಸ್ಟೆಂಟ್ ಮಿಶನರಿಗಳ ಕೊಡುಗೆ

ಅಧ್ಯಾಯ – ಐದು

ಪ್ರೊಟೆಸ್ಟೆಂಟ್ ಮಿಶನರಿಗಳ ಕೊಡುಗೆ

೫.೧ ಲಂಡನ್ ಮಿಶನರಿಗಳು

ಕರ್ನಾಟಕಕ್ಕೆ ಮೊಟ್ಟಮೊದಲ ಬಾರಿಗೆ ಆಗಮಿಸಿದ ಪ್ರೊಟೆಸ್ಟೆಂಟ್ ಮಿಶನರಿಗಳೆಂದರೆ ಲಂಡನ್ ಮಿಶನರಿಗಳು. ಗೀತಸಾಹಿತ್ಯಕ್ಕೆ ಕೊಡುಗೆಯನ್ನು ಸಲ್ಲಿಸಿದ ಮಿಶನರಿಗಳಾದ ಬಿ. ರೈಸ್, ಈ.ಪಿ. ರೈಸ್, ಕ್ಯಾಂಪ್‌ಬೆಲ್. ಸಿ, ಕೋಲ್ಸ ಜೆ.ಬಿ, ಮಿಸ್. ಎಲ್.ಎಮ್ ಬುಟ್ಲರ್ ಈ ಮಿಶನರಿಗಳ ಜೀವನಚರಿತ್ರೆ ಮತ್ತು ಗೀತಸಾಹಿತ್ಯಕ್ಕೆ ಇವರ ಕೊಡುಗೆಯನ್ನು ಪ್ರಸ್ತುತ ಭಾಗದಲ್ಲಿ ನಡೆಸಲಾಗಿದೆ.

ಈ ಹಿಂದೆ ಪ್ರಕಟಗೊಂಡ ಲಂಡನ್ ಮಿಶನರಿಗಳ ಮೊದಲ ಗೀತಪುಸ್ತಕ 'ಕನ್ನಡ ಗೀತೆಗಳು' ಇದರ ಒಂಬತ್ತನೇ ಆವೃತ್ತಿ ೧೮೯೮ರಲ್ಲಿ ಬಿ. ರೈಸ್‌ರವರಿಂದ ಪ್ರಕಟವಾಯಿತು. ಈ ಕೃತಿ ಇಂದು ಲಭ್ಯವಿದ್ದು ಇದರಲ್ಲಿ ೨೯೩ ಗೀತೆಗಳಿವೆ. "೧೮೪೫ರಲ್ಲಿ ಬಾಸೆಲ್ ಮಿಶನ್ನಿನವರು ಪ್ರಕಟಿಸಿದ ಗೀತಪುಸ್ತಕದೊಳಗಿನ ಜನಪ್ರಿಯವಾದ ಕೆಲವು ಗೀತೆಗಳನ್ನು ಇದಕ್ಕೆ ಕೂಡಿಸಲಾಯಿತು. ಮುಂದೆ ೧೯೧೩ರಲ್ಲಿ ಇನ್ನು ಕೆಲವು ಗೀತೆಗಳನ್ನು ಈ ಗ್ರಂಥದಲ್ಲಿ ಸೇರಿಸಿಕೊಳ್ಳಲಾಯಿತು."[೧] ೧೯೨೯ರಲ್ಲಿ ಐವತ್ತು, ಅರವತ್ತು ಗೀತೆಗಳನ್ನು ಬಾಸೆಲ್ ಗೀತ ಪುಸ್ತಕದಿಂದಲೇ ತೆಗೆದುಕೊಳ್ಳಲಾಯಿತು. ೧೯೬೧ರ ೨೨ನೇ ಪರಿಷ್ಕೃತಾವೃತ್ತಿಯಲ್ಲಿ ೩೯೯ ಗೀತೆಗಳನ್ನು ಇದು ಹೊಂದಿತ್ತು. ೧೯೬೬ರ ಪುಸ್ತಕದಲ್ಲಿ ೩೮೬ ಗೀತೆಗಳಿದ್ದು ಇಂದೂ ಇದು ಬಳಕೆಯಲ್ಲಿದೆ. (ಈ ಗೀತ ಪುಸ್ತಕದ ಗೀತಗಾರರ ಗೀತೆಗಳ ವರ್ಗೀಕರಣವನ್ನು ಅನುಬಂಧದಲ್ಲಿ ನೀಡಲಾಗಿದೆ). ಈ ಗೀತಪುಸ್ತಕದ ಗೀತೆಗಳ ಅಧ್ಯಯನದೊಂದಿಗೆ ಅರುಣೋದಯ ಪತ್ರಿಕೆಯ ಗೀತೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೫.೧.೧ ಬಿ. ರೈಸ್– B. Rice

ಲಂಡನ್ ಮಿಶನ್ ಸಂಸ್ಥೆಯ ಕ್ರಿಯಾಶೀಲ ಮಿಶನರಿಯೇ ಬೆಂಜಮಿನ್ ರೈಸ್‌ರವರು. ೧೮೧೪ ಮೇ ೨೮ರಲ್ಲಿ ಲಂಡನ್‌ನಲ್ಲಿ ಜನಿಸಿದ ಇವರ ಶಿಕ್ಷಣ Homerton ಕಾಲೇಜಿನಲ್ಲಿ ನಡೆಯಿತು. ಜಾನ್ ಹ್ಯಾಂಡ್ಸ್‌ರವರ ಭಾಷಣದಿಂದ ಪ್ರಭಾವಿತರಾದ ಇವರು ತಾವೊಬ್ಬ ಮಿಶನರಿಯಾಗಲು ಬಯಸಿದರು. ಹೋಮ್‌ಟನ್ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ಡಾ. ಪಾಯ್‌ಸ್ಮಿಥ್ ಎಂಬ ಗುರುವಿನ ಪ್ರಭಾವದಿಂದ ಈ ಹಂಬಲ ಗಟ್ಟಿಗೊಂಡಿತು. ಸುವಾರ್ತಾಸೇವೆಯೇ ಅವರ ಜೀವನದ ಪರಮೋಚ್ಛ ಗುರಿಯಾಗಿದ್ದಿತು. ಧೈರ್ಯವಾದಿಯಾಗಿದ್ದ ಇವರು ಜೀವನದಲ್ಲಿ ಈ ಕಾರ್ಯ ಸಾಧಿಸಲೆಂದೇ ಭಾರತಕ್ಕೆ ಬಂದರು. “ಬುದ್ಧಿವಂತರಾದ ಇವರು ಕೇವಲ ಏಳು ತಿಂಗಳುಗಳಲ್ಲಿಯೇ ಕನ್ನಡವನ್ನು ಕಲಿತು ಜನರೊಡನೆ ಪ್ರಶ್ನೋತ್ತರಗಳನ್ನು ನಡೆಸುತ್ತಿದ್ದರು. ಮತ್ತು ಕನ್ನಡದಲ್ಲಿಯೇ ಪ್ರವಚನವನ್ನು ಮಾಡುತ್ತಿದ್ದರು.”[೨] ೧೮೫೮ರಲ್ಲಿ ಇವರು ಇತರ ಪ್ರೊಟೆಸ್ಟೆಂಟ್ ಮಿಶನರಿಗಳ ಮುಂದೆ ಇರಿಸಿದ ಈ ಕೆಳಗಿನ ವಿಚಾರಗಳು ಅವರ ಪ್ರಗತಿಪರ ಧೋರಣೆಗೆ ನಿದರ್ಶನಗಳಾಗಿವೆ.

“ದೇಶಿಯರಲ್ಲಿ ಜಿಜ್ಞಾಸಾಭಾವ ಬೆಳೆಯುತ್ತಲಿವೆ ಅದನ್ನು ತಣಿಸುವಂತಹ ಪುಸ್ತಕಗಳನ್ನು ಹೊರಡಿಸಬೇಕು. ಆ ದಿಶೆಯಲ್ಲಿ ದೇಶೀಯ ಮತಪ್ರಚಾರಕರು ಉಪಯುಕ್ತ ಸಾಹಿತ್ಯವನ್ನು ರಚಿಸಬಲ್ಲವರಾದ್ದರಿಂದ ಅವರಿಗೆ ಹೆಚ್ಚು ಅವಕಾಶವನ್ನು ಕಲ್ಪಿಸಿಕೊಡಬೇಕು. ವಿಸ್ತಾರವಾದ ಬೈಬಲ್ಲಿನ ಸಾರವನ್ನೊಳಗೊಂಡ ಮತ್ತು ಅದರ ಸತ್ಯಗಳನ್ನು ನೇರವಾಗಿ ಎತ್ತಿ ತೋರಿಸುವ ಅಧಿಕೃತ ಸಂಕ್ಷಿಪ್ತ ಕೃತಿಯೊಂದು ದೇಶಿಯ ಭಾಷೆಯಲ್ಲಿ ಸಿದ್ಧವಾಗಬೇಕು. ಹಿಂದೂ ಧರ್ಮದೊಂದಿಗೆ ಹೋಲಿಸಿ ಕ್ರೈಸ್ತ ತತ್ವಗಳನ್ನು ಪ್ರಕಾಶಿಸಬೇಕು. ಮಹಿಳೆಯರಿಗಾಗಿ ಕ್ರಿಸ್ತೀಯ ಸಾಹಿತ್ಯವು ಇದುವರೆಗೂ ರಚಿತವಾಗಿಲ್ಲ. ಒಂದು ದೇಶ ಭಾಷೆಯಿಂದ ಇನ್ನೊಂದಕ್ಕೆ ಉತ್ತಮ ಕೃತಿಗಳ ಅನುವಾದ ಕಾರ್ಯವು ನಡೆಯಬೇಕಾಗಿದೆ. ಕವಿತೆಯು ದೇಶೀಯರ ನೆಚ್ಚಿನ ಸಾಹಿತ್ಯ ಪ್ರಕಾರವಾಗಿದ್ದು ಅದರ ಮೂಲಕ ನಾವು ಸ್ವಮತ ತತ್ವಗಳನ್ನು ಹರಡಬಹುದಲ್ಲವೇ, ಕ್ರಿಶ್ಚಿನ್ ತತ್ವದ ಪ್ರಚಾರಕ್ಕಾಗಿ, ಸೂಕ್ತವಾದ ಸಾಹಿತ್ಯ ಕೃತಿಯನ್ನು ಹೊರಡಿಸಬೇಕು.”[೩] ಎಂದು ದಕ್ಷಿಣ ಭಾರತದ ಎಲ್ಲಾ ಮಿಶನರಿಗಳಿಗೂ ಅನ್ವಯಿಸುವಂತಹ ಮಾತುಗಳನ್ನು ಹೇಳಿದ್ದಾರೆ. ೧೮೩೭ರ ಜನವರಿಯಲ್ಲಿ[೪] ಬೆಂಗಳೂರಿಗೆ ಬಂದ ಇವರು ಇಲ್ಲಿನ ಕುಂದುಕೊರತೆಗಳನ್ನು ಅರಿತುಕೊಂಡು ಅದರ ನಿವಾರಣೆಗೆ ತಮ್ಮ ಗುರಿಯನ್ನು ನಿರ್ಧರಿಸಿಕೊಂಡರು. “Knowledge is power and especially so when based upon the word of God and imbibed in early life”[೫] ಇವರ ಕಾರ್ಯ ನಿದರ್ಶನದ ಸೂತ್ರವಾಗಿದ್ದಿತು. ಕ್ರೈಸ್ತ ಶಿಕ್ಷಣವನ್ನು ಎಳೆಯರಲ್ಲಿ ರೂಢಿಸಿ ಜ್ಞಾನವಂತರನ್ನಾಗಿ ಮಾಡಬೇಕೆನ್ನುವ ಇವರ ವಿಚಾರದಿಂದಾಗಿ ಶಿಕ್ಷಣ, ಪಠ್ಯಪುಸ್ತಕ ರಚನೆ ಮತ್ತು ಮತೀಯ ಗ್ರಂಥ ನಿರ್ಮಿತಿಗಳು ವಿಶೇಷವಾಗಿ ಕಂಡು ಬಂದವು. ಇವರು ಶಿಕ್ಷಣ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಮೊದಲಿಗೆ ಕನ್ನಡ ವಾಚನ ಪುಸ್ತಕದಿಂದ

ಆರಂಭಿಸಿದ ಮೊದಲಿನ ಮೂರು ವರ್ಗಗಳಿಗಾಗಿ ಪುಸ್ತಕಗಳನ್ನು ಹೊರತಂದರು. (೧೮೩೯–೧೯೪೧) ಗಣಿತ, ಭೂಗೋಳಗಳ ಪ್ರಾರಂಭಿಕ ಪುಸ್ತಕಗಳು ಇವರಿಂದ ರಚಿತವಾದವು (೧೮೪೬–೧೮೪೭) 'ಚಿಕ್ಕವರಿಗಾಗಿ ತಕ್ಕ ಪಾಠಗಳು' ಎಂಬುದು ಇವರು ಸಂಪಾದಿಸಿದ ಇನ್ನೊಂದು 'ವಾಚನ ಮಾಲೆ'ಯಾಗಿದೆ.

ಮತೀಯಸಾಹಿತ್ಯ ನಿರ್ಮಿತಿಯಲ್ಲಿ ತೊಡಗಿದ ಇವರು ಬೈಬಲ್ಲಿನ ಒಂದು ನೂರು ಪ್ರಮುಖ ಅಂಶಗಳನ್ನು ಆಯ್ದು ಟಿಪ್ಪಣಿಗಳೊಡನೆ ಪ್ರಕಟಿಸಿದರು (ವೇದ ಸಂಗ್ರಹ ೧೮೪೪). ಕ್ರೈಸ್ತತತ್ವ ದೃಷ್ಟಿಯಿಂದ 'ಅರುಣೋದಯ' ಎಂಬ ಆಂಗ್ಲ–ಕನ್ನಡ ಸಚಿತ್ರ ಮಾಸಪತ್ರಿಕೆಯನ್ನು ಇವರು ೧೮೬೧ರಿಂದ ಆರು, ಏಳು ವರ್ಷಗಳವರೆಗೆ ನಡೆಸಿಕೊಂಡು ಬಂದರು. ಬನ್ಯನ್‌ರ 'ಯಾತ್ರಿಕ ಸಂಚಾರ' ಇವರು ಪರಿಷ್ಕರಿಸಿ ಬೆಂಗಳೂರು ಬೈಬಲ್ ಸೊಸೈಟಿಯ ವತಿಯಿಂದ ಹೊರತಂದರು. ಕ್ರಿ.ಶ. ೧೮೪೦ರಲ್ಲಿ ಅಸ್ತಿತ್ವದಲ್ಲಿ ಬಂದ ಕನ್ನಡ ಬೈಬಲ್ಲಿನ ಪರಿಷ್ಕರಣ ಸಮಿತಿಯ ಸದಸ್ಯರಾಗಿ ರೈಸ್ ಪ್ರಮುಖಪಾತ್ರವನ್ನು ವಹಿಸಿದರು. ಕ್ರಿ.ಶ. ೧೮೬೦ರಲ್ಲಿ ಹೊರಬಂದ ಬೈಬಲ್ಲಿನ ಅಧಿಕೃತ ಆವೃತ್ತಿಯು ಸಿದ್ಧಗೊಳಿಸುವಲ್ಲಿಯೂ ಇವರು ವಿಶೇಷವಾಗಿ ಪರಿಶ್ರಮಿಸಿದರು.

ಕವಿತ್ವ ರಚನೆ, ಸಂಗೀತಗಳಲ್ಲಿ ಇವರಿಗೆ ಆಸಕ್ತಿ ಇದ್ದಿತು. ತಮಿಳು, ತೆಲಗು ಭಾಷೆಗಳಲ್ಲಿಯೂ ಇವರು ಪ್ರಾವಿಣ್ಯತೆಯನ್ನು ಸಂಪಾದಿಸಿದ್ದರು. ಅನೇಕ ಪ್ರಾರ್ಥನೆಯ ಹಾಡುಗಳನ್ನು ಇಂಗ್ಲೀಷ್ ದಾಟಿಯಲ್ಲಿ ರಚಿಸಿದರು ಮತ್ತು ಪ್ರಾರ್ಥನೆಯ ಕಾಲಕ್ಕೆ ಹಾರ್ಮೋನಿಯಮ್ ಬಾರಿಯಸುತ್ತಾ ಅದನ್ನು ಹಾಡುತ್ತಿದ್ದರು. 'ಕನ್ನಡ ಸಂಗೀತಗಳು' ಎಂಬ ಗೀತಪುಸ್ತಕ ಇವರ ಅದ್ವಿತೀಯ ಕೊಡುಗೆಯಾಗಿದೆ. ಅನೇಕ ಗೀತೆಗಳನ್ನು ಭಾಷಾಂತರಿಸುವುದರೊಂದಿಗೆ ಅನೇಕ ಸ್ವರಚಿತ ಗೀತೆಗಳನ್ನು ರಚಿಸಿದ್ದಾರೆ. ಗೀತಸಾಹಿತ್ಯಕ್ಕೆ ಅಪೂರ್ವ ಕೊಡುಗೆಯನ್ನು ನೀಡಿದ ಇವರು ಬೆಂಗಳೂರಿನಲ್ಲಿ ೧೮೮೭ರಲ್ಲಿ ಫೆಬ್ರವರಿ ೯ರಂದು ಮರಣ ಹೊಂದಿದರು.

ಗೀತೆಗಳ ಅಧ್ಯಯನ: ಬಿ. ರೈಸ್‌ರವರಿಂದ ೧೮೯೮ರಲ್ಲಿ ಪ್ರಕಟವಾದ 'ಕನ್ನಡ ಸಂಗೀತಗಳು' ಎಂಬ ಗೀತಪುಸ್ತಕದಲ್ಲಿ ಒಟ್ಟು ೨೯೩ ಗೀತೆಗಳಿದ್ದು ಇದರಲ್ಲಿ ೧೩೩ ಗೀತೆಗಳು ರೈಸ್‌ರವರಿಂದ ರಚಿತವಾಗಿದೆ. ಈ ಗೀತೆಗಳು ವಿವಿಧ ವಿಷಯಗಳಿಗೆ ಸಂಬಂಧಿಸಿವೆ. ಅವುಗಳ ವರ್ಗೀಕರಣ ಇಂತಿವೆ.

ದೇವರು	೧೪	ಸಭೆಯ ಬದುಕು	೦೧
ಕ್ರಿಸ್ತನು	೪೧	ಸಭೆಯ ವಿಸ್ತರಿಸುವುದು	೦೨
ಪರಿಶುದ್ಧಾತ್ಮ	೦೪	ಚಿಕ್ಕವರಿಗಾಗಿ ಸಂಗೀತ	೧೨
ಮನುಷ್ಯನ ಕೆಟ್ಟತನ	೦೧	ವಿಶೇಷ ಸಮಯಗಳು	೧೮
ಕ್ರೈಸ್ತರ ಬದುಕು	೨೪	ಅಂತ್ಯ ಕಾರ್ಯಗಳು	೦೯
ದೇವರ ಸಭೆಯು	೦೩	ಗೀತಗಳು	೦೪

ಒಟ್ಟು ೧೩೩ ಗೀತೆಗಳು

ಬೈಬಲ್: ಕ್ರೈಸ್ತರ ಪವಿತ್ರ ಗ್ರಂಥವೇ ಬೈಬಲ್. ಈ ಪದವು ಗ್ರೀಕ್ ಮೂಲವಾದ ಬಿಬ್ಲಿಯೋನ್ ಪದದಿಂದ ಬಂದಿದೆ. ಬಿಬ್ಲಿಯೋನ್ ಎಂದರೆ ಒಂದು ಚಿಕ್ಕ ಹಾಳೆ. ಪುಸ್ತಕ ಅಥವಾ ಸುರುಳಿ ಎಂದು ಅರ್ಥ. ಈ ಪದದ

ಬಹುವಚನ 'ಬಿಬ್ಲಿಯೋ' ಲ್ಯಾಟಿನ್ ಭಾಷೆಯಲ್ಲಿ ಈ ಬಹುವಚನದ ಪದವನ್ನು ಏಕವಚನದ ಪದವನ್ನಾಗಿ ಬಳಸಿದ್ದಾರೆ. ಇದರಿಂದ ಲ್ಯಾಟಿನ್‌ನಲ್ಲಿ ಬಿಬ್ಲಿಯೋ ಎಂದರೆ ಪುಸ್ತಕ ಎಂದರ್ಥ.

ಬೈಬಲ್ ಗ್ರಂಥದ ಇತರ ಹೆಸರುಗಳು:

೧. **ಧರ್ಮ ಗ್ರಂಥ:** ಆಂಗ್ಲ ಭಾಷೆಯಲ್ಲಿ Scripture ಎಂಬ ಪದವು Scriptura ಎಂಬ ಲ್ಯಾಟಿನ್ ಭಾಷಾ ಮೂಲದ್ದಾಗಿದೆ. ಇದನ್ನು ಪರಿಶುದ್ಧ ಧರ್ಮಗ್ರಂಥವೆಂದು ಅಂಗೀಕರಿಸಲಾಗಿದೆ.

೨. **ಒಡಂಬಡಿಕೆ:** ಈ ಪದವು ಲ್ಯಾಟಿನ್ ಭಾಷೆಯ Testumentum ಎಂದು ಇಂಗ್ಲೀಷ್‌ನಲ್ಲಿ Testament ಎಂದು ಕನ್ನಡದಲ್ಲಿ ಒಡಂಬಡಿಕೆ ಎಂಬ ಪದವನ್ನು ಬಳಸಲಾಗಿದೆ.

ಬೈಬಲ್‌ನ ಪುಸ್ತಕಗಳ ರಚನೆ: ಬೈಬಲ್‌ನನ್ನು ಹಳೆಒಡಂಬಡಿಕೆ ಮತ್ತು ಹೊಸಒಡಂಬಡಿಕೆ ಎಂದು ವಿಭಾಗಿಸಲಾಗಿದೆ.

ಹಳೆಒಡಂಬಡಿಕೆ: ಬೈಬಲ್ ರಚನೆಯ ಬಗ್ಗೆ ಒಂದು ದೊಡ್ಡ ಇತಿಹಾಸವಿದೆ. ಹಳೆಒಡಂಬಡಿಕೆಯು ಮೊದಲಿಗೆ ಹೆಚ್ಚಾಗಿ ಮೌಖಿಕ ರೂಪದಲ್ಲಿತ್ತು. ಕಾಲಚಕ್ರ ಉರುಳಿತ್ತಿದ್ದಂತೆ ಲಿಖಿತ ರೂಪದಲ್ಲಿ ಬರೆಯಲಾಯಿತು. ಉದಾ: ಆದಿ ಕಾಂಡವು.[೬] ಪೂರ್ವಜರ ಕಾಲದಲ್ಲಿ (ಕ್ರಿಪೂ. ೧೯-೧೭ನೇ ಶತಮಾನ) ಬರೆಯಲಾಗಿದೆ ಎಂದು ಹೇಳಲಾಗಿತ್ತು. ಇದರ ನೈಜ ಬರವಣಿಗೆ ಕಂಡು ಬಂದದ್ದು ಕ್ರಿಪೂ ೬-೫ ನೇ ಶತಮಾನದಲ್ಲಿ ಇದೇ ರೀತಿಯಲ್ಲಿ ಹಳೆಒಡಂಬಡಿಕೆಯ ಅನೇಕ ಪುಸ್ತಕಗಳು ರಚನೆಯಾಗಿವೆ.

ಹೊಸ ಒಡಂಬಡಿಕೆ: ಯೇಸುವು ತಾವೇ ಸ್ವತಃ ಏನನ್ನು ಬರೆಯಲಿಲ್ಲ ಅಥವಾ ತಮ್ಮ ಶಿಷ್ಯರಿಗೆ ಬರೆಯಲು ಹೇಳಲಿಲ್ಲ. ಆದರೆ ಅವರು ಒಂದು ಆಜ್ಞೆಯನ್ನಿತ್ತರು. 'ಹೋಗಿ ಶುಭಸಂದೇಶವನ್ನು ಸಾರಿ' ಎಂಬುದಾಗಿ. ಆ ಆಜ್ಞೆಯ ಮೇರೆಗೆ ಶಿಷ್ಯರು ಶುಭಸಂದೇಶವನ್ನು ಸಾರುವುದರಲ್ಲಿ ನಿರತರಾದರು. ಆದರೆ ಕಾಲಕ್ರಮೇಣ ಅವರು ಮರಣ ಹೊಂದುತ್ತಿರುವುದನ್ನು ಕಂಡು ಆ ನಂತರದ ಜನರು ಯೇಸುವಿನ ಬಗ್ಗೆ ತಿಳಿದುಕೊಳ್ಳಲು ಮೌಖಿಕವಾಗಿದ್ದ ಶುಭಸಂದೇಶಕ್ಕೆ ಲಿಖಿತರೂಪ ನೀಡಿದರು. ಇದನ್ನು ಒಂದನೇ ಶತಮಾನದ ಮಧ್ಯಂತರದಲ್ಲಿ ಆರಂಭಿಸಲಾಯಿತು.

ಮಾನವ ಅನೇಕ ವಿಧದ ಸಂಪತ್ತನ್ನು ಗಳಿಸಿ ಶ್ರೀಮಂತನಾಗಲು ಬಯಸುತ್ತಾನೆ. ಆದರೆ ತಂದೆಯಾದ ದೇವರು ಮಾನವನಿಗೆ ಉಡುಗೊರೆಯಾಗಿ ನೀಡಿದ ಪವಿತ್ರ ವೇದವನ್ನು ಓದಿ ಅರ್ಥೈಸಿ ಆಧ್ಯಾತ್ಮ ಜೀವನವನ್ನು ಲೌಖಿಕ ಜೀವನವನ್ನು ಉತ್ತಮಪಡಿಸಿಕೊಂಡು ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ಬದುಕಲು ಆಧಾರವಾಗಿರುವ ಮಹಾ ಸಂಪತ್ತೇ ಪವಿತ್ರಗ್ರಂಥ ಎಂಬುದನ್ನು 'ಯೆಹೋವ ಕೊಟ್ಟ ವೇದವು' ಎಂಬ ಗೀತೆಯು ದೃಢಪಡಿಸುತ್ತದೆ.

ಯೆಹೋವ ಕೊಟ್ಟ ವೇದವು   ಸೂರ್ಯನಪ್ಪಂದಾ ವಾಕ್ಯವು
ಅಮೂಲ್ಯವಾದ ಸಂಪತ್ತು;   ಪ್ರಕಾಶವಾದ ಜ್ಯೋತಿಯು

ಪವಿತ್ರ ಜೀವ ಜಲಕ್ಕೆ
ಉತ್ಪತ್ತಿ ಸ್ಥಾನವಾಗಿದೆ

ಸಮಸ್ತ ಜನಕ್ಕೆ ಅದು
ಸನ್ಮಾರ್ಗ ತೋರಿಸುವುದು

ಕನ್ನಡ ಸಂಗೀತಗಳು, ೧೮೯೮, ಗೀತೆ-೨

ಯೆಹೋವ: ಈ ಪದವು ತಂದೆಯಾದ ದೇವರಿಗೆ ಬಳಕೆಯಾದದ್ದಾಗಿದೆ. ಇದು ಹೀಬ್ರೂ ಭಾಷೆಯಿಂದ ಬಂದಿದೆ. ಇಂಗ್ಲೀಷಿನಲ್ಲಿ Jehovah[೭] ಎನ್ನುವರು ಯೆಹೂದ್ಯರಿಗೆ ದೇವರನ್ನು ಹೆಸರು ಹಿಡಿದು ಕರೆಯುವುದೆಂದರೆ ಅದು ಅಗೌರವದ ವಿಷಯ ಎಂದೇ ಉಚ್ಚಾರ ಮಾಡಲು ಆಗದಂತ ನಾಲ್ಕು ವ್ಯಂಜನಗಳನ್ನು ಪೋಣಿಸಿ 'ಯಾವ್ಹೆ' ಅಥವಾ 'ಯೆಹೋವಾ' ಎಂದು ಕರೆಯಲಾರಂಭಿಸಿದರು. ಇದೇ ಪದ 'ಕೂರಿಯೋಸ್' ಎಂದು ಗ್ರೀಕ್ ಭಾಷೆಗೂ The Lord ಎಂದು ಆಂಗ್ಲ ಭಾಷೆಗೂ ತರ್ಜುಮೆಯಾಯಿತು.

ವೇದ: ಕ್ರೈಸ್ತರ ಪವಿತ್ರ ಗ್ರಂಥವಾದ ಬೈಬಲ್ ಇದು ಗ್ರೀಕ್ ಭಾಷೆಯಿಂದ ಬಂದಿದೆ. ಇದನ್ನು ಭಾರತೀಕರಣಗೊಳಿಸಿ ಹಿಂದೂ ಪವಿತ್ರ ಗ್ರಂಥವಾದ ವೇದಗಳಿಗೆ ಸಂವಾದಿಯಾಗಿ ಬಳಸಿದರು.

ಅರ್ಥ ಪ್ರಧಾನವನ್ನು ಹೊಂದಿದ ಈ ಗೀತೆ, ದೇವವಾಕ್ಯವು ಒಂದು ಸಂಪತ್ತಾಗಿದೆ ಅದನ್ನು ನಾವು ನಮ್ಮ ಬಾಳಿನಲ್ಲಿ ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು ಎಂದು ಗೀತಗಾರ ಹೇಳುವಾಗ ವೇದವಾಕ್ಯದ ಪ್ರಾಮುಖ್ಯತೆಯನ್ನು ತಿಳಿಸುವಲ್ಲಿ ಈ ಗೀತೆ ಯಶಸ್ವಿಯಾಗಿದೆ.

ಕ್ರಿಸ್ತರ ವ್ಯಕ್ತಿತ್ವ: ಬಿ.ರೈಸ್‌ರು 'ಕ್ರಿಸ್ತನು' ಎಂಬ ಗೀತೆಯ ಭಾಗದಲ್ಲಿ ಯೇಸುವಿನ ವ್ಯಕ್ತಿತ್ವವನ್ನು ವರ್ಣಿಸಿದ್ದಾರೆ. ಯೇಸುವಿನ ಇಹಲೋಕದ ಜೀವನ ಉಪದೇಶಗಳಿಂದಲೂ ಸುವಾರ್ತೆಯನ್ನು ಸಾರುವುದರಿಂದಲೂ ಸಾಗಿತ್ತು. ಜನರಿಗೆ ಅರ್ಥವಾಗುವ ರೀತಿಯಲ್ಲಿ ಸಾಮಿತಿಗಳನ್ನು ಉಪಯೋಗಿಸಿ ತತ್ವಬೋಧನೆಯನ್ನು ಮಾಡುತ್ತಿದ್ದರು. ರೈಸರು ಪವಿತ್ರಗ್ರಂಥದಲ್ಲಿ ಬರುವ 'ಉತ್ತಮ ಕುರಿಗಾಹಿ' ಎಂಬ ಸಾಮಿತಿಯನ್ನು ಬಳಸಿ ಗೀತೆ ರಚಿಸಿದ್ದಾರೆ.

ಒಬ್ಬ ಮನುಷ್ಯ ಸನ್ಮಾರ್ಗವನ್ನು ಬಿಟ್ಟು ಪಾಪಾಂಧಕಾರದಲ್ಲಿ ಜೀವಿಸುವಾಗ ನೊಂದ ದೇವರು ಹೇಗೆ ಆ ಪಾಪಿಮಾನವನನ್ನೇ ಹುಡುಕಿ ಸರಿದಾರಿಗೆ ತರುತ್ತಾನೆ, ಒಬ್ಬ ಪಾಪಿ ತನ್ನ ಪಾಪಮಾರ್ಗವನ್ನು ಬಿಟ್ಟು ಜೀವಿಸುವಾಗ ದೇವರಿಗೆ ಉಂಟಾಗುವ ಸಂತೋಷದ ಕುರಿತು 'ಕುರುಬ ಮತ್ತು ಕುರಿ'ಯ ಉಪಮೇಯದ ಮೂಲಕ ವ್ಯಕ್ತವಾಗಿದೆ. "ನಾನೇ ಉತ್ತಮ ಕುರಿಗಾಹಿ ಉತ್ತಮ ಕುರಿಗಾಹಿಯು ಕುರಿಗಳಿಗೋಸ್ಕರ ತನ್ನ ಪ್ರಾಣವನ್ನೇ ಕೊಡುತ್ತಾನೆ"[೮] ಎಂದು ಯೋಹಾನ್ನನ ಶುಭಸಂದೇಶದಲ್ಲಿ ಕಾಣುತ್ತೇವೆ. ಒಳ್ಳೆಯ ಕುರುಬನಿಗೆ ತನ್ನ ಕುರಿಯೊಂದಿಗಿರುವ ಪ್ರೀತಿಯನ್ನು ವ್ಯಕ್ತಪಡಿಸುವ 'ಮಂದೆ ಸೇರಿದ ತೊಂಭತ್ತೊಂಭತ್ತು' ಎಂಬ ಗೀತೆ ಪ್ರಶ್ನೋತ್ತರ ರೂಪದಲ್ಲಿ ವ್ಯಕ್ತವಾಗಿದೆ.

ಒಳ್ಳೇ ಕುರುಬನೇ ತೊಂಭತ್ತೊಂಬತ್ತು
ನಿಂಗೆ ಸಾಕು ಅಲ್ಲವೇ?
ಇವೆಲ್ಲಾ ಸಾಲದು ಅಂದನು

ನನ್ನದೊಂದು ತಪ್ಪಿದೆ

ಮತ್ತಿಷ್ಟು ಪ್ರಯಾಸವಾದರೂ

ನಾ ಹೋಗಿ ಹುಡುಕುವೆನು

ಕನ್ನಡ ಸಂಗೀತಗಳು, ಗೀತೆ–೧೦೩

ಒಬ್ಬ ಉತ್ತಮ ನಾಯಕನಲ್ಲಿರಬೇಕಾದ ಗುಣಗಳತ್ತ ಈ ಸಾಲುಗಳು ಬೆಳಕು ಚೆಲ್ಲುತ್ತವೆ. ಒಳ್ಳೆಯ ಕುರಿಗಾಗಿ ತನ್ನ ಕುರಿಗಳನ್ನು ಹುಲ್ಲುಗಾವಲಿಗೆ ಕೊಂಡೊಯ್ಯುತ್ತಾನೆ, ಜೊತೆ ಇರುತ್ತಾನೆ, ಹುಡುಕಿ ತರುತ್ತಾನೆ, ಪರಿಚಯಿಸುತ್ತಾನೆ, ಎಚ್ಚರಿಕೆ ವಹಿಸುತ್ತಾನೆ, ಎತ್ತಿಕೊಳ್ಳುತ್ತಾನೆ, ಕೇಡಿನಿಂದ ರಕ್ಷಿಸುತ್ತಾನೆ, ಆರೈಕೆಮಾಡುತ್ತಾನೆ. ಯೇಸುವಿಗೆ ಪಾಪಿಮಾನವನ ಮೇಲಿರುವ ಪ್ರೀತಿ ಕರುಣೆಯನ್ನು ಈ ಗೀತೆ ವ್ಯಕ್ತಪಡಿಸುತ್ತದೆ. ಯಾವೊಬ್ಬ ವ್ಯಕ್ತಿಯು ದುರ್ಮಾರ್ಗದಲ್ಲಿ ಸಂಚರಿಸುತ್ತಿದ್ದರೂ ಆತನನ್ನು ಹುಡುಕಿ ಸರಿದಾರಿಗೆ ಕಳುಹಿಸುವ ವ್ಯಕ್ತಿ ಯೇಸುವಾಗಿದ್ದಾರೆ ಎಂದು ಗೀತಗಾರ ತಿಳಿಸುತ್ತಾನೆ.

ಕುರುಬ: "ಪಾಲಸ್ತೀನ್ ದೇಶದಲ್ಲಿ ಕುರಿಗಳನ್ನು ಸಾಕುವ ಗ್ರಾಮವಾಸಿಗಳಲ್ಲದೇ ಈ ದೇಶದಲ್ಲಿ ಬರೀ ಕುರಿಗಳನ್ನೇ ಸಾಕಿ ಕಾಲವ್ಯಯ ಮಾಡುತ್ತಿರುವ ಕುರುಬನಂತೆ ಅನೇಕ ಮಂದಿಯಿದ್ದರು. ಇವರು ಒಂದೆಡೆಯಲ್ಲೇ ವಾಸಮಾಡದೇ ತಮ್ಮ ಮಂದೆಗಳಿಗೆ ಅನುಕೂಲವಾದ ಮೇವು ಸಿಕ್ಕುವ ಅನೇಕ ಸ್ಥಳಗಳಿಗೆ ಹೋಗುವರು. ಐಗುಪ್ತದೇಶದ ಕುರುಬರು ಹೀನಕುಲದವರಾಗಿದ್ದುದರಿಂದ ಐಗುಪ್ತರು ಎಲ್ಲಾ ಕುರುಬರನ್ನು ಕನಿಷ್ಟರೆಂದು ಭಾವಿಸುತ್ತಿದ್ದರು. ಆದರೂ ದೇವದೂತರು ಯೇಸುವಿನ ಜನನವಾರ್ತೆಯನ್ನು ಕುರುಬರಿಗೆ ತಿಳಿಸಿದರು."[೯] ದೇವರು ಇಸ್ರಯೇಲರ ಕುರಬನು (ಕೀರ್ತನೆ ೫೦–೭) ಅರಸರು ತಮ್ಮ ಪ್ರಜೆಗಳಿಗೆ ಕುರುಬರು ಮೆಸ್ಸೀಯನು ಇಸ್ರಯೇಲರ ಕುರಬನು (ಜಕರ್ಯ ೧೩:೭) ಎಂದು ಬರೆದಿದೆ.

ಪಾಲಸ್ತೀನ್ ದೇಶದ ಕುರುಬರು ತಮ್ಮ ಮಂದೆಗಳನ್ನು ಬಹಳ ಪ್ರೀತಿಯಿಂದ ಕಾಪಾಡಿ ಇವುಗಳಿಗೆ ದುಷ್ಟ ಮೃಗಗಳಿಂದ ಬಾಧೆ ಉಂಟಾಗದಂತೆ ಎಚ್ಚರಿಕೆಯಾಗಿರುವರು (ಆದಿಕಾಂಡ ೩೧–೩೯), ಕರೆಯುವ ಕುರಿಗಳನ್ನು ಮೆತ್ತಗೆ ನಡೆಸಿ ಕೈಗಳಲ್ಲಿ ಎತ್ತಿಕೊಂಡು ಹೋಗುವರು (ಆದಿಕಾಂಡ ೩೩–೧೩), ಕಳೆದುಹೋದ ಕುರಿಗಳನ್ನು ಹುಡುಕುವರು (ಕೀರ್ತನೆ ೨೩), ಇದರಿಂದ ಕುರಿಗಳು ಕುರುಬನ ಶಬ್ಧಕ್ಕೆ ಕಿವಿಕೊಡುತ್ತವೆ. ಅವನು ಅವುಗಳ ಮುಂದೆ ನಡೆದುಹೋಗುವಾಗ ಅವುಗಳು ಅವನನ್ನು ಹಿಂಬಾಲಿಸುತ್ತವೆ. ಕೂಲಿ ಆಳುಗಳ ಮೇಲೆ ಕುರಿಗಳಿಗೆ ನಂಬಿಕೆಯಿಲ್ಲ. ಇದರಂತೆಯೇ ಒಳ್ಳೆಯ ಕುರುಬರಾದ ಯೇಸುಸ್ವಾಮಿಯು ನಮ್ಮನ್ನು ಪ್ರೀತಿಸಿ ಸನ್ಮಾರ್ಗದಲ್ಲಿ ನಡೆಸಿ ನಮಗೋಸ್ಕರವಾಗಿಯೇ ಸತ್ತರು (ಯೋಹ ೧೦–೧:೧೬).

ತೊಂಭತ್ತೊಂಬತ್ತು (೧೯೮೮) ತೊಂಬತ್ತೊಂಬತ್ತು (೧೯೨೯ ಮತ್ತು ೧೯೬೬) ಎಂದು ಬದಲಾಗಿದೆ. ಮಹಾಪ್ರಾಣಾಕ್ಷರಗಳಲ್ಲಿ ಬದಲಾವಣೆ ಕಂಡು ಬರುತ್ತದೆ.

ಯೇಸುವಿನ ವ್ಯಕ್ತಿತ್ವದಲ್ಲಿ ಎದ್ದುಕಾಣುವ ಮತ್ತೊಂದು ವಿಶಿಷ್ಟ ಗುಣವೆಂದರೆ ಎಲ್ಲರನ್ನು ಮಿತ್ರರಂತೆ ಕಾಣುವುದು. "ನಾನಿನ್ನು ನಿಮ್ಮನ್ನು ದಾಸರೆಂದು ಕರೆಯುವುದಿಲ್ಲ, ದಣಿಯ ಕೆಲಸ ಕಾರ್ಯಗಳು ದಾಸನಿಗೆ

ತಿಳಿಯವು. ನಾನಾದರೂ ಪಿತನಿಂದ ಕೇಳಿಸಿಕೊಂಡದ್ದನ್ನೆಲ್ಲಾ ನಿಮಗೆ ತಿಳಿಸಿದ್ದೇನೆ. ಈ ಕಾರಣ ನಿಮ್ಮನ್ನು ಗೆಳೆಯರೆಂದು ಕರೆದಿದ್ದೇನೆ."[೧೦] ಪ್ರತಿಯೊಬ್ಬರಿಗೂ ಅಮೂಲ್ಯ ಮಿತ್ರರಾಗಿದ್ದಾರೆ ಯೇಸು ಎಂಬುದನ್ನು 'ಹಾ ಎಂಥ ಅಮೂಲ್ಯ ಮಿತ್ರ' ಎಂಬ ಗೀತೆಯಲ್ಲಿ ತಿಳಿಸಿದ್ದಾರೆ. ಇದು What a friend we have in Jesus ಎಂಬ ಆಂಗ್ಲ ಗೀತೆಯಿಂದ ಭಾಷಾಂತರಿಸಲಾಗಿದೆ. ಸ್ನೇಹಿತನಲ್ಲಿ ಹೇಗೆ ನಮ್ಮ ಅಂತರಂಗವನ್ನು ಬಿಚ್ಚಿಡುತ್ತೇವೋ ಹಾಗೆಯೇ ಯೇಸುವಿನಲ್ಲಿ ನಮ್ಮ ಸಂಬಂಧ ಇದ್ದಾಗ ಬದುಕಿನಲ್ಲಿ ಸರ್ವಕೋಟಲೆಗಳನ್ನು ಜಯಿಸಿ ಯಶಸ್ವಿಯಾಗಲು ಸಾಧ್ಯ ಎಂಬ ಸತ್ಯದತ್ತ ನಮ್ಮ ಗಮನ ಸೆಳೆದಿದ್ದಾರೆ ಗೀತಗಾರ.

ಹಾ,ಎಂಥಾ ಅಮೂಲ್ಯ ಮಿತ್ರ
ನಮಗೀಗ ಸಿಕ್ಕಿದ!
ಪಾಪ, ದುಃಖ, ಭಯವೆಲ್ಲಾ
ಪರಿಹಾರ ಮಾಡಿದ
ಸ್ಥಿರಾನಂದ ಸಮಾಧಾನ
ಹೊಂದಲಾಶಿಸಿದರೆ
ಯೇಸು ಸ್ವಾಮಿಯನ್ನು ನಿತ್ಯ
ಬೇಡುತ್ತಿರು ಮನವೇ!

ಶೋಧನೆ ಉಂಟಾಗುವಾಗ
ತಾಪತ್ರಯದಲ್ಲಿಯೂ
ಮನದಲ್ಲಿ ಕುಗ್ಗಬೇಡ;
ಜಪ ಮಾಡುತ್ತಾ ಇರು;
ನಂಬತಕ್ಕ ಇಂಥ ಮಿತ್ರ
ಬೇರೆ ಒಬ್ಬರಿಲ್ಲವು;
ನಿನ್ನ ದುಃಖವೆಲ್ಲಾ ಬಲ್ಲ
ಆತುಕೊಳ್ಳುತ್ತಾ ಇರು

ಕನ್ನಡ ಸಂಗೀತಗಳು, ಗೀತೆ–೧೧೪

ಗೆಳೆಯನು ತನ್ನ ಮಿತ್ರನೊಂದಿಗೆ ಸರಿಸಮನಾಗಿ ಬೆರೆಯುತ್ತಾನೆ. ಮೇಲು–ಕೀಳು ಎಂಬ ಬೇಧ ಭಾವಗಳನ್ನು ತೊರೆದು ಪ್ರೀತಿಸುತ್ತಾನೆ. ಅವನಲ್ಲಿ ನಂಬಿಕೆಯನ್ನಿಡುತ್ತಾನೆ. ಗೆಳೆತನದಲ್ಲಿ ಇಬ್ಬರೂ ಸಂತೋಷಪಡುತ್ತಾರೆ. ಅವರು ತಮ್ಮಲ್ಲಿ ಇದ್ದುದ್ದನ್ನು ಹಂಚಿಕೊಳ್ಳುತ್ತಾರೆ. ಅವರ ಯೋಚನೆ, ಯೋಜನೆಗಳು ಪರಸ್ಪರ ಸಂಭಾಷಣೆಯಲ್ಲಿ ಇತ್ಯರ್ಥವಾಗುತ್ತದೆ. ಎಂತಹ ತ್ಯಾಗಕ್ಕೂ, ಗೆಳೆಯರು ಸಿದ್ಧರಾಗಿರುತ್ತಾರೆ. ಅವರಲ್ಲಿ ವಂಚನೆ ಅಪನಂಬಿಕೆ ಇರುವುದಿಲ್ಲ. ತಪ್ಪುನೆಪ್ಪುಗಳನ್ನು ಗೆಳೆತನ ತಕ್ಷಣ ಕ್ಷಮಿಸುತ್ತದೆ. ಗೆಳೆಯನನ್ನು ಸಂತೋಷಪಡಿಸಲು ಅವನು ಎಂತಹ ತ್ಯಾಗವನ್ನು ಮಾಡುತ್ತಾನೆ. ಈ ಎಲ್ಲ ಗುಣಲಕ್ಷಣಗಳನ್ನು ನಾವು ಯೇಸುವಿನಲ್ಲಿ ಕಾಣುತ್ತೇವೆ. ಯೇಸು ನಾವು ಕಷ್ಟಕಾರ್ಪಣ್ಯಗಳ ಕುಲುಮೆಯಲ್ಲಿ ಬೇಯುತ್ತಿರುವಾಗ ನಮಗೆ ಸಾಂತ್ವನನೀಡಿ ನಮ್ಮನ್ನು ಕಾಪಾಡುವನಾಗಿದ್ದಾರೆ ಎಂದು ಗೀತಗಾರ ಈ ಗೀತೆಯಲ್ಲಿ ಹೇಳಿದ್ದಾರೆ.

ಜೋಸೆಫ್ ಸ್ಕ್ರಿವನ್ (Joseph Scrievn–೧೮೮೯–೧೮೮೦) ಈ ಸಂಗೀತದ ಮೂಲಕ ಕರ್ತೃ. ಈ ಗೀತೆಯ ಆಧಾರ ವಾಕ್ಯ 'ಬಹುಮಂದಿ ಗೆಳೆಯರನ್ನು ಸೇರಿಸಿಕೊಂಡವನಿಗೆ ನಾಶನ; ಸಹೋದರಿನಿಂತಲೂ ಹತ್ತಿರ ಹೊಂದಿಕೊಳ್ಳುವ ಮಿತ್ರನುಂಟು' (ಜ್ಞಾನೋಕ್ತಿ ೧೮:೨೪). "ಜೋಸೆಫ್ ಸ್ಕ್ರೀವನ್ ೧೮೧೯ರಲ್ಲಿ ಐರ್ಲೆಂಡಿನ ಡಬ್ಲಿನ್ ಪಟ್ಟಣದಲ್ಲಿ ಜನಿಸಿದರು. ಡಬ್ಲಿನ್ನಿನ ಟ್ರಿನಿಟಿ ಕಾಲೇಜಿನಲ್ಲಿ ವ್ಯಾಸಂಗಮಾಡಿ

ಪದವೀಧರರಾದರು. ತನ್ನ ೨೫ ವರ್ಷ ವಯಸ್ಸಿಗೆ ತನ್ನ ಸ್ಥಳವನ್ನು ಬಿಟ್ಟು ಕೆನಡಾ ದೇಶಕ್ಕೆ ಹೋಗುವ ನಿರ್ಧಾರ ಮಾಡಿದರು. ಈ ನಿರ್ಧಾರಕ್ಕೆ ಬರಲು ಒಂದೆರಡು ಕಾರಣಗಳೂ ಇದ್ದವು. ಪ್ಲೆಮತ್ ಬ್ರದರನ್ ಎಂಬ ಒಂದು ಗುಂಪಿಗೆ ಜೋಸೆಫ್ ಸೇರಿದ್ದು ಆತನ ಕುಟುಂಬದವರು ಒಪ್ಪಲಿಲ್ಲ. ಇದು ಜೋಸೆಫನಿಗೆ ಬೇಸರವನ್ನುಂಟುಮಾಡಿತು. ಮತ್ತೊಂದು ಕಾರಣ ಆತನು ಮದುವೆಯಾಗಲಿದ್ದ ಹುಡುಗಿ ಮದುವೆಯ ಹಿಂದಿನ ದಿನ ಆಕಸ್ಮಾತಾಗಿ ಮುಳುಗಿ ಮೃತಳಾದಳು. ಈ ಎರಡು ಕಾರಣಗಳಿಂದ ಜೋಸೆಫನ ಮುಂದಿನ ಜೀವನವೇ ಬದಲಾಯಿತು. ಈತನಿಗೆ ಸತ್ಯವೇದದಲ್ಲಿ ಯೇಸುಕ್ರಿಸ್ತನ ಪರ್ವತ ಪ್ರಸಂಗವು ಬಹಳವಾಗಿ ಹಿಡಿಸಿತು. ಮತ್ತು ಅದನ್ನು ಕಾರ್ಯರೂಪಕ್ಕೆ ತುರುವುದನ್ನು ಅಭ್ಯಸಿಸಿದರು. ಆತನು ತನ್ನಲ್ಲಿದ್ದದ್ದನ್ನು ಅಂದರೆ ತನ್ನ ಬಟ್ಟೆಗಳನ್ನು ಸಹ ಇತರರಿಗೆ ಹಂಚುತ್ತಾ ಅವಶ್ಯಕತೆ ಇರುವವರಿಗೆ ಒಂದು ಸಲವಾದರೂ ಇಲ್ಲವೆನ್ನದೆ ತನ್ನದ್ದನ್ನು ಕೊಡುತ್ತಿದ್ದನು. ವಿಧವೆಯರಿಗೂ, ಖಾಯಿಲೆಯವರಿಗೂ, ಬಡವರಿಗೂ ಬೇಸರಗೊಳ್ಳದೇ ಸಹಾಯ ಮಾಡುತ್ತಿದ್ದರು. ಹೀಗೆ ಹೆಸರುವಾಸಿಯಾದ ಜೋಸೆಫ್ ಸ್ಕ್ರೀವನ್‌ನನ್ನು ಜನರು ಗೌರವಿಸುತ್ತಿದ್ದರು. ಮಾತ್ರವಲ್ಲದೇ ಈತನು ಒಬ್ಬ ವಿಚಿತ್ರ ಪುರುಷನೆಂದು ಕರೆಯುತ್ತಿದ್ದರು. ಈತನು ರಚಿಸಿದ 'ಹಾ ಎಂಥ ಅಮೂಲ್ಯ ಮಿತ್ರ'! ಎಂಬ ಹಾಡು ಮುದ್ರಿತವಾಗಿ ಪ್ರಕಾಶಕ್ಕೆ ಬರಬೇಕೆಂಬ ಉದ್ದಿಷ್ಟದಿಂದ ಬರೆದಿದ್ದಲ್ಲ! ಒಂದು ಸಲ ಈತನು ಕೆನಡಾದಲ್ಲಿರುವಾಗ ದೂರದ ಡಬ್ಲಿನ್‌ನಲ್ಲಿ ತನ್ನ ತಾಯಿ ಬಹಳ ಕಾಯಿಲೆಯಾಗಿರುವರೆಂಬ ಸುದ್ದಿ ಬಂದಾಗ ಜೋಸೆಫ್ ತಾಯಿಯ ಬಳಿ ತಾನೂ ಇರಲಿಕ್ಕಾಗುವುದಿಲ್ಲವಲ್ಲ ಎಂದು ಬಹಳವಾಗಿ ಪರಿತಪಿಸಿದರು. ಅಲ್ಲಿಗೆ ಹೋಗಲಿಕ್ಕಾಗುವುದಿಲ್ಲ ಎಂಬ ವ್ಯಥೆಯಿಂದ ಆಕೆಯನ್ನು ಆಧರಿಸುವ, ಧೈರ್ಯಪಡಿಸುವ ಎಂಬ ಪತ್ರವನ್ನೂ ಅದರ ಜೊತೆಗೆ ಈ ಹಾಡಿನ ಮಾತುಗಳನ್ನೂ ಬರೆದು ಯೇಸುಕ್ರಿಸ್ತನೆಂಬ ಅಮೂಲ್ಯ ಮಿತ್ರನನ್ನು ಆತುಕೊಳ್ಳುವುದೇ ನಮ್ಮ ಸರ್ವಸ್ವವೆಂದು ಬರೆದು ಕಳುಹಿಸಿದನು. ಇದು ಆತನ ತಾಯಿಗೆ ಎಷ್ಟೋ ಆದರಣೆಯನ್ನು ತಂದಿರಬೇಕು. ಕೆಲವು ಕಾಲದ ನಂತರ ಒಂದು ಸಲ ಜೋಸೆಫ್ ಕಾಯಿಲೆ ಮಲಗಿದನು. ಆತನನ್ನು ನೋಡಲು ಸ್ನೇಹಿತರೊಬ್ಬರು ಬಂದರು. ಆಗ ಹಾಸಿಗೆ ಪಕ್ಕದಲಿದ್ದ ಮೇಜಿನ ಮೇಲೆ ಒಂದು ಹಳೆ ಕಾಗದವನ್ನು ನೋಡಿ ಅದನ್ನು ತೆಗೆದು ಓದಿ ನೋಡಿದರು. ಆಗ 'ಹಾ! ಎಂಥ ಅಮೂಲ್ಯ ಮಿತ್ರ' ಎಂಬ ಕಾವ್ಯವಾಗಿತ್ತು. ಜೋಸೆಫ್‌ನನ್ನು ಉದ್ದೇಶಿಸಿ 'ಇದನ್ನು ನೀನು ಬರೆದೆಯಾ?' ಎಂದುಕೇಳಿದರು. ಸ್ಕ್ರೀವನ್ ಬಹಳ ದೀನತೆಯಿಂದ 'ಕರ್ತನೂ, ತಾನೂ ಸೇರಿ ಬರೆದೆವು' ಎಂದನು. ಬಂದಿದ್ದ ಸ್ನೇಹಿತನು ಅವನ ಮಾತುಗಳನ್ನು ಬಹಳ ಮೆಚ್ಚಿದರು. ಜೋಸೆಫ್ ಸ್ಕ್ರೀವನ್‌ರವರು ೧೮೮೬ ಅಕಸ್ಮಾತ್ತಾಗಿ ಮುಳುಗಿ ಮರಣ ಹೊಂದಿದರು. ಇವರ ಸ್ಮರಣಾರ್ಥವಾಗಿ ಆಂಬೇರಿಯಲ್ಲಿ ಒಂದು ಸ್ಮಾರಕ ಸ್ತಂಭ ಸ್ಥಾಪಿಸಲಾಗಿದೆ."[೧೧]

ಯೇಸುವಿನ ವ್ಯಕ್ತಿತ್ವದ ಮತ್ತೊಂದು ಗುಣಲಕ್ಷಣವೇ ಆತ ವೈದ್ಯನಾಗಿರುವುದು. ಶಾರೀರಿಕ, ಮಾನಸಿಕ, ಮತ್ತು ಆಧ್ಯಾತ್ಮಿಕ ಆರೋಗ್ಯವನ್ನು ದಯಪಾಲಿಸುವ ಘನವೈದ್ಯನಾಗಿದ್ದಾನೆ. 'ಇದ್ದಾನೆ ಘನವೈದ್ಯನು' ಎಂಬ ಗೀತೆಯನ್ನು The great physician now is near' ಎಂಬ ಆಂಗ್ಲಭಾಷೆಯ ಗೀತೆಯಿಂದ

ಭಾಷಾಂತರಿಸಿದ್ದಾರೆ.

ಯೇಸುವಿನ ನಿಜವಾದ ಪ್ರೇಮ ಅವರ ಸೃಷ್ಟಿಯಲ್ಲಿ ಒಂದಾಗಿರುವ ಯಾವುದೇ ಒಬ್ಬ ವ್ಯಕ್ತಿಯು ಖಾಯಿಲೆಯನ್ನು ಹೊಂದಿ ನರಳುತ್ತಿರುವಾಗ ಅದಕ್ಕೆ ವಿಮುಖನಾಗದೆ ಆತನನ್ನು ಗುಣಪಡಿಸುವದಲ್ಲಿ ಕಂಡು ಬರುತ್ತದೆ. ಯೇಸುವಿನ ಸೌಖ್ಯದಾಯಕ ಗುಣವನ್ನು ಅನುಭವಿಸಿದ ಗೀತಗಾರ ಯೇಸುವನ್ನು 'ಘನವೈದ್ಯನು' ಎಂದು ಕರೆದಿದ್ದಾರೆ. ಅವರ ಸೌಖ್ಯ ಮಾಡುವ ಗುಣವನ್ನು ಹೊಗಳಿ ಸ್ತುತಿಸುವ ಬಗೆ ಈ ಗೀತೆಯಲ್ಲಿದೆ.

ಇದ್ದಾನೆ ಘನವೈದ್ಯನು
ಕಟಾಕ್ಷವುಳ್ಳ ಯೇಸು
ಆರೋಗ್ಯ ಮಾಡಬಲ್ಲನು
ಸುಕ್ಷೇಮ ಇಲ್ಲಿ ಕೇಳು

ಹಾ! ಇಂಪಾದ ಸ್ವರವೇ
ಅತಿ ರಮ್ಯ ರಾಗವೇ
ಮುದ್ದು ಮುದ್ದು ಹೆಸರೇ
ಯೇಸು ಪ್ರಿಯ ಯೇಸು

ಕನ್ನಡ ಸಂಗೀತಗಳು, ಗೀತೆ-೧೦೫

ರೋಗಿಗಳನ್ನು ಗುಣಪಡಿಸುವ ಎಲ್ಲಾ ಪವಾಡಗಳಲ್ಲಿ ಯೇಸು ನೈಜ ದೈವಿಕ ಜೀವನವನ್ನು ರೋಗಿಗಳಿಗೆ ನೀಡುವುದನ್ನು ಶುಭಸಂದೇಶದಲ್ಲಿ ಕಾಣುತ್ತೇವೆ. ಯೇಸುವಿನ ದೈವೀ ಶಕ್ತಿಯಲ್ಲಿ ಭರವಸೆಯನ್ನು ಹೊಂದಿದ್ದ ಗೀತಗಾರ ಸೌಖ್ಯದಾಯಕ ಯೇಸುವು ತನಗೆ ಆರೋಗ್ಯವನ್ನು ಕೊಡಬೇಕೆಂದು ಬೇಡುವ ಬಗೆಯಲ್ಲಿ ಗೀತಗಾರನಿಗೆ ಯೇಸುವಿನಲ್ಲಿರುವ ದೈವೀ ಶಕ್ತಿಗೆ ತಮ್ಮನ್ನೇ ಅರ್ಪಿಸಿಕೊಂಡಿದ್ದಾರೆ. ಸರಳವಾದ ಸಾಲುಗಳು ಗದ್ಯರೂಪವನ್ನು ತಾಳಿವೆ. ದೇವರಲ್ಲಿ ವಿಶ್ವಾಸವನ್ನು ವೃದ್ಧಿಸಲು ಇವು ಸಹಕಾರಿಯಾಗಿವೆ.

ಸಂಸ್ಕಾರಗಳು: ಕಥೋಲಿಕ ಕ್ರೈಸ್ತರು ಏಳು ಸಂಸ್ಕಾರಗಳನ್ನು ಹೊಂದಿದ್ದಾರೆ. ಪ್ರೊಟೆಸ್ಟೆಂಟರು ಎರಡು ಸಂಸ್ಕಾರಗಳನ್ನು ಹೊಂದಿದ್ದಾರೆ. ಅವುಗಳೆಂದರೆ ೧. ಜ್ಞಾನಸ್ನಾನ ಅಥವಾ ದೀಕ್ಷಾಸ್ನಾನ ೨. ಕರ್ತರ ಭೋಜನ ಅಥವಾ ಪರಮಪ್ರಸಾದ.

೧. ಜ್ಞಾನಸ್ನಾನ: ದೀಕ್ಷಾಸ್ನಾನದ ಕುರಿತು ರೈಸರ್‌ರವರು ಬರೆದ ಗೀತೆಯೇ 'ಕಟಾಕ್ಷವುಳ್ಳ ತಂದೆಯೇ' ಎಂಬುದು. ಇದು ಸ್ವರಚಿತ ಗೀತೆಯಾಗಿದ್ದು Warcham or melcombe ಎಂಬ ರಾಗದಲ್ಲಿದೆ.

ಕಟಾಕ್ಷವುಳ್ಳ ತಂದೆಯೇ
ನಿನ್ ದಾಸವನ್ನು ದೃಷ್ಟಿಸು;
ನಿನ್ನಾಶೀರ್ವಾದ ಈತಗೆ
ಈವಾಗ ದಯಪಾಲಿಸು.

ಆಸಕ್ತಿಯಿಂದ ಈತನು
ನಿನ್ನನ್ನು ಸೇವೆ ಮಾಡಲಿ;
ದೇಹಾತ್ಮ ಸ್ಥಿತಿ ಯಾವತ್ತು
ನಿರಂತರ ನಿನ್ನವಾಗಲಿ.

ಕನ್ನಡ ಗೀತಗಳು, ಗೀತೆ-೨೦೭

ದೀಕ್ಷಾಸ್ನಾನ ಪದವು ಬಾಪ್ಟೈಸ್ ಎಂಬ ಗ್ರೀಕ್ ಪದದಿಂದ ಬಂದಿದ್ದು ಅದರ ಅರ್ಥ ಅದ್ದು ಎಂದಾಗಿದೆ. ಹಳೆಒಡಂಬಡಿಕೆಯಲ್ಲಿ ದೀಕ್ಷಾಸ್ನಾವೆಂದರೆ ತೊಳೆಯುವುದು ಅಥವಾ ಶುದ್ಧಗೊಳಿಸುವುದು.[೨೨] ಹೊಸಒಡಂಬಡಿಕೆಯಲ್ಲಿ ದೀಕ್ಷಾಸ್ನಾನವು ತಂದೆ, ಮಗ ಮತ್ತು ಪವಿತ್ರಾತ್ಮರ ಹೆಸರಿನಲ್ಲಿ ನೀರಿನಲ್ಲಿ ಮುಳುಗಿಸು

ಎಂದಾಗುತ್ತದೆ. ಸ್ನಾನಾದೀಕ್ಷೆಯ ಮೂಲಕ ಒಬ್ಬ ವ್ಯಕ್ತಿ ಕ್ರೈಸ್ತನಾಗುತ್ತಾನೆ.

೨. ಕರ್ತನ ಭೋಜನ: ಪ್ರೊಟೆಸ್ಟೆಂಟ್ ಸಭೆಯ ಪ್ರಕಾರ ಅವರು ಸ್ವೀಕರಿಸಿದ ಎರಡನೇ ಸಂಸ್ಕಾರವೇ ಕರ್ತನ ಭೋಜನ ಅಥವಾ ಪರಮಪ್ರಸಾದ. ಈ ಸಂಸ್ಕಾರದಲ್ಲಿ ಯೇಸುವು ಮಾನವನ ಹೃದಯಕ್ಕೆ ಆಗಮಿಸುವುದನ್ನು ಕಾಣುತ್ತೇವೆ. ಯೇಸು ಮಾನವಕೋಟಿಗೆ ಅರ್ಪಿಸಿಕೊಂಡ ಬಗೆಯನ್ನು ಭಾವನಾತ್ಮಕವಾಗಿ ವರ್ಣಿಸುವ ಗೀತೆಯೇ ರೈಸ್‌ರವರ 'ತನ್ನನ್ನು ಪ್ರಿಯ ಯೇಸುವು' ಎಂಬುದು.

ಇಂದೂ ಯೇಸುವು ಪರಮಪ್ರಸಾದ ಸಂಸ್ಕಾರದಲ್ಲಿ ತನ್ನ ಶರೀರ ಮತ್ತು ರಕ್ತವನ್ನು ನಮಗೆ ನೀಡುತ್ತಾರೆ. ಅಂದರೆ ಅವರು ತಮ್ಮನ್ನೇ ಸಂಪೂರ್ಣವಾಗಿ ನೀಡುತ್ತಾರೆ. ಯೇಸುವು ದೇವರು, ಮಾನವರು ಎಂಬುದನ್ನು ಅರ್ಥೈಸಲು ಈ ಗೀತೆ ನೆರವಾಗಿದೆ.

೧. ತನ್ನನ್ನು ಪ್ರಿಯ ಯೇಸುವು
ಅರ್ಪಿಸಿಕೊಟ್ಟ ಇರುಳು
ಕೈಯಲ್ಲಿ ರೊಟ್ಟಿ ತೆಗೆದು
ತನ್ನಾಶೀರ್ವಾದ ಕೊಟ್ಟನು

೨. ಈ ರೊಟ್ಟಿ ನನ್ನ ದೇಹವು
ನಿಮ್ಮ ನಿಮಿತ್ತ ಮುರಿದ್ದು
ನನ್ನನ್ನು ಜ್ಞಪ್ತಿ ಮಾಡಲು
ಭೋಜನ ಮಾಡಿರೆಂದನು

೩. ಆಮೇಲೆ ಆತ ಹೇಳಿದ್ದು
ಈ ಪಾತ್ರೆ ನನ್ನ ರಕ್ತವು
ಪಾಪಾರ್ಥಕ್ಕಾಗಿ ಚೆಲ್ಲಿದ್ದು
ಪಾವನ ಮಾಡಿ ಎಲ್ಲರೂ

೪. ಓ ಯೇಸು ನಿನ್ನ ಆಜ್ಞೆಯ
ಕೈಗೊಳ್ಳ ಶಕ್ತಿ ಕೊಡೀಗ
ಸ್ವಮುಖವನ್ನು ತೋರಿಸು
ನಮ್ಮನ್ನು ಆಶೀರ್ವದಿಸು

ಕನ್ನಡ ಸಂಗೀತಗಳು, ಗೀತೆ-೨೦೮

ಯೇಸು ಮರಣಕ್ಕೆ ಒಪ್ಪಿಸಲ್ಪಡುವ ಹಿಂದಿನ ದಿನವೇ ಆತನು ಮತ್ತು ಆತನ ಶಿಷ್ಯರುಗಳು ಮೊದಲನೇ ಕರ್ತನ ರಾತ್ರಿಭೋಜನವನ್ನು ಮಾಡಿದರು (ಮಾರ್ಕ್ ೧೪:೨೨). ಆತನ ಮರಣವನ್ನು ನೆನಪು ಮಾಡಿಕೊಳ್ಳುವಕ್ಕೋಸ್ಕರವಾಗಿ ಯೇಸುವು ತಾವೇ ಕ್ರೈಸ್ತರೆಲ್ಲರು ಕರ್ತನಭೋಜವನ್ನು ಆಚರಿಸಬೇಕೆಂದು ಅಪ್ಪಣೆಕೊಟ್ಟರು (೨ನೇ ಕೋರಿಂಥ ೧೧:೨೩-೨೬).

ಕ್ರೈಸ್ತರ ಜೀವನ: ದೇವರಲ್ಲಿ ನಂಬಿಕೆ ಇಟ್ಟು ಮುನ್ನಡೆದಾಗ ಶೋಧಕ ನಮ್ಮನ್ನು ಜೈಯಿಸಲಾರ ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸುತ್ತದೆ. 'ಹೌದೌದು ಭದ್ರವಾದೆ' ಎಂಬ ಗೀತೆ. ಇದು Safe in the arms of Jesus ಎಂಬ ಗೀತೆಯ ಭಾಷಾಂತರವಾಗಿದೆ.

ಹೌದೌದು ಭದ್ರವಾದೆ ಯೇಸುವಿನಲ್ಲಿಯೇ
ಆ ಪ್ರೀತಿಯುಳ್ಳ ಎದೆ ಆಶ್ರಯ ಮಾಡಿದೆ
ದೂತರ ಶಬ್ಧ ಕೇಳು: ಆನಂದ ಸ್ವರವೇ

ಮೇಲಾದ ಲೋಕದಿಂದ ಇಂಪಾಗಿ ಬರುತ್ತೆ

ಕನ್ನಡ ಸಂಗೀತಗಳು, ಗೀತೆ-೧೦೮

ಈ ಗೀತೆಯ ಆಧಾರ ವಾಕ್ಯವಾಗಿರುವುದು "ಯೆಹೋವನು ನನ್ನ ಬಂಡೆಯೂ, ನನ್ನ ಕೋಟೆಯು, ನನ್ನ ವಿಮೋಚಕನು, ನನ್ನ ದೇವರು, ನನ್ನ ಆಶ್ರಯ ಗಿರಿಯು, ನನ್ನ ಗುರಾಣಿಯು, ನನ್ನ ರಕ್ಷಣೆಯ ಕೊಂಬು, ನನ್ನ ದುರ್ಗವು ಆಗಿದ್ದಾರೆ."[೧೩] ಯೆಹೋವನಲ್ಲಿ ತನ್ನ ಆಶ್ರಯ ಎಂದು ನಂಬಿದ ಗೀತಗಾರ ಆತನಿರುವ ಸ್ಥಳಕ್ಕೆ ಹೋಗಲು ಆಶಿಸುತ್ತಾನೆ. ಆ ಸ್ಥಳವಾದರು ಆತನಿಗೆ ಸುರ್ವಣವಿದ್ದಂತೆ ಮೌಲ್ಯಯುತವಾದುದ್ದು. ಶ್ರೇಷ್ಟವಾದ ಸ್ಥಳವೆಂದು ಆತನು ಭಾವಿಸಿದ್ದಾನೆ. ಅಲಂಕಾರಿಕವಾಗಿ ಸ್ವರ್ಗವನ್ನು ಸುವರ್ಣದೇಶ ಎಂದು ವರ್ಣಿಸುತ್ತಾನೆ. ದಿನನಿತ್ಯದ ಬಳಕೆಯಲ್ಲಿರುವ ಶ್ರೇಷ್ಟ ವಸ್ತುವನ್ನು ಉದಾಹರಣೆಯಾಗಿ ತೆಗೆದುಕೊಂಡು ಸ್ವರ್ಗವನ್ನು ಅದಕ್ಕೆ ಹೋಲಿಸಿರುವುದು ಗೀತಗಾರನು ಸೃಜನಶೀಲತೆಗೆ ಹಿಡಿದ ಕೈಗನ್ನಡಿಯಾಗಿದೆ.

"ಈ ಗೀತೆಯ ಕವಿಯತ್ರಿಯಾದ ಫ್ಯಾನ್ ಕ್ರಿಸ್ಟಿಲ್ ತನ್ನ ಚಿಕ್ಕಪ್ರಾಯದಲ್ಲೇ ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡಳು. ಆದುದರಿಂದ ತನ್ನ ೧೧ನೇ ವಯಸ್ಸಿನಲ್ಲಿ ನ್ಯೂಯಾರ್ಕ್ ಪಟ್ಟಣದ ಕುರುಡರ ಶಾಲೆಯಲ್ಲಿ ಹೀಗೆಯೇ ಸೇರಿಕೊಂಡು ವಿದ್ಯಾರ್ಥಿನಿಯಾಗಿ ಆಧ್ಯಾಪಕಳಾಗಿ ೨೩ ವರ್ಷಗಳು ಕಳೆದಳು. ೧೮೫೮ರಲ್ಲಿ ಕರುಡ ಕವಿಯು ಆಗಿದ್ದ ಅಲೆಕ್ಸಾಂಡರ್ ವಾನ್ ಅಲೆಸ್ಟ್ರೈನ್ ಎಂಬುವನು ಈಕೆಯನ್ನು ವಿವಾಹವಾದನು. ಈ ದಂಪತಿಗಳ ಜೀವನವು ಬಹಳ ಸಂತೋಷ ನೆಮ್ಮದಿಗಳಿಂದ ಕೂಡಿತ್ತೆಂದು ತಿಳಿದುಬರುತ್ತದೆ. ಈಕೆಯು ೨೦೦೦ಕ್ಕೆ ಕಡಿಮೆ ಇಲ್ಲದಷ್ಟು ಸಂಗೀತಗಳನ್ನು ರಚಿಸಿದ್ದಾಳೆಂದು ಹೇಳಲಾಗಿದೆ."[೧೪]

ಮೊದಲನೇ ಚರಣದಲ್ಲಿ ಈಕೆಯು ಪರಲೋಕದ ಒಂದು ದೃಶ್ಯವನ್ನು ಭಾವನಾ ರೂಪದಲ್ಲಿ ವಿವರಿಸಿ 'ಮೇಲಾದ ಲೋಕದಿಂದ ಇಂಪಾಗಿ ಬರುವ ದೂತರ ಆನಂದ ಸ್ವರಕ್ಕೆ ಕಿವಿಗೊಡು' ಎಂದು ಭಕ್ತಳು ನಮಗೆ ಕರೆ ನೀಡುತ್ತಾಳೆ.

ಎರಡನೇ ಚರಣದಲ್ಲಿ ಮುಂದಣ ಲೋಕದ ಭಾಗ್ಯಕರವಾದ ಸ್ಥಿತಿಯನ್ನು ವರ್ಣಿಸಿದ್ದಾಳೆ. ಈ ಸಾಲುಗಳು ಪ್ರಕಟಣೆ ೨೧:೩-೪ ರ ವಚನಗಳನ್ನು ನಮ್ಮ ನೆನಪಿಗೆ ತರುತ್ತದೆ. 'ಇಗೋ ದೇವರ ನಿವಾಸವು ಮನುಷ್ಯರಿಲ್ಲಿದೆ. ಆತನು ಅವರ ಸಂಗಡ ಇರುವನು. ಅವರ ಕಣ್ಣೀರನ್ನೆಲ್ಲಾ ಒರೆಸಿ ಬಿಡುವನು. ಇನ್ನು ಮರಣವಿರುವುದಿಲ್ಲ. ಇನ್ನು ದುಃಖವಾಗಲಿ, ಗೋಳಾಟವಾಗಲೀ, ಕಷ್ಟವಾಗಲೀ ಇರುವುದಿಲ್ಲ' ಎಂಬುದೇ. ಈ ಜೀವಿತದಲ್ಲಿ ಯಾರು ಯೇಸುವನ್ನು ತನ್ನ ಆತ್ಮದ ಆಪ್ತನನ್ನಾಗಿ ಮಾಡಿಕೊಳ್ಳುತ್ತಾರೋ ಅವರು ಹೇಗೆ ಸಂತೃಪ್ತಿಯನ್ನು ಹೊಂದುತ್ತಾರೆ ಎಂಬುದನ್ನು ಈ ಸಾಲುಗಳಲ್ಲಿ ವ್ಯಕ್ತಪಡಿಸಿದ್ದಾಳೆ.

ಯೇಸು ನನ್ನಾತ್ಮದಾಪ್ತ ವ್ಯಾಕುಲ ಹೋಯಿತು;
ಶೋಧಕ ಜೈಸಲಾರ ಪಾಪಕೆ ಇಲ್ಲವು;
ಕಣ್ಣೀರು ಈಗ ಇಲ್ಲಿ ದಿಗಿಲು ಹೋಯಿತು

ಉಪದ್ರವ ಬಂದರೇನು? ತತ್ಕಾಲ ಮಾತ್ರದ್ದು

ಕವಿಗೆ ಶಾರೀರಿಕ ದೃಷ್ಟಿ ಇಲ್ಲದಿದ್ದರು ಈಕೆಯ ಮಾನಸಿಕ ಆತ್ಮೀಕ ದೃಷ್ಟಿಯು ಎಷ್ಟು ಚುರುಕಾಗಿತ್ತೆಂಬುದನ್ನು ತಿಳಿಸುವುದು ಈ ಅನುಭವ ಗೀತೆಯ ವಿಶೇಷತೆಯಾಗಿದೆ. ಯಾವುದೇ ಕಷ್ಟ ವೇಳೆಯಲ್ಲಿ ಆತ್ಮಧೈರ್ಯದಿಂದ ಮುನ್ನುಗ್ಗಿ ಕಾರ್ಯ ಸಾಧಿಸಬೇಕೆಂಬ ಕವಿಯತ್ರಿಯ ಬಯಕೆ ಆದರ್ಶಪ್ರದವಾದದ್ದು.

"ದೇವರೇ ಬಾಯಾರಿದ ಜಿಂಕೆಯು ನೀರಿನ ತೊರೆಗಳನ್ನು ಹುಡುಕುತ್ತದೆಯೋ ಹಾಗೆ ನನ್ನ ಮನವು ನಿನ್ನನ್ನು ಬಯಸುತ್ತದೆ."[೧೫] ಎಂಬ ವಾಕ್ಯವು ಪ್ರತಿಧ್ವನಿಸುವಂತೆ ಕಾಣುತ್ತದೆ. 'ನಿನ್ನ ಹತ್ರ ದೇವರೇ ಎಂಬ ಗೀತೆ. ಇದು Nearer my God to thee ಎಂಬ ಗೀತೆಯ ಭಾಷಾಂತರವಾಗಿದೆ ಅನೇಕ ವ್ಯಕ್ತಿಗಳಿಂದ ಮೆಚ್ಚುಗೆ ಪಡೆದ ಈ ಗೀತೆ ಪ್ರಪಂಚದ ಶ್ರೇಷ್ಟಗೀತೆಗಳಲ್ಲಿ ಒಂದಾಗಿದೆ. ಅನೇಕ ವ್ಯಕ್ತಿಗಳ ಬದುಕಿನಲ್ಲಿ ಶಾಂತಿ, ಸಮಾಧಾನ ತೃಪ್ತಿಯನ್ನು ಮೂಡಿಸುವ ಈ ಗೀತೆ ಅತ್ಯುನ್ನತ ಆಧ್ಯಾತ್ಮ ಗೀತೆಯಲ್ಲಿ ಪರಿಗಣಿಸಿದೆ.

೧. ನಿನ್ ಹತ್ರ ದೇವರೆ, ನಿನ್ ಹತ್ರಕ್ಕೆ
ನನ್ನಾತ್ಮ ಏರುತ್ತೆ ಓ ತಂದೆಯೇ
ಇಷ್ಟಾರ್ಥ ತೀರಿಸ ನನ್ನೊಂದೇ ಆಸ್ಪದ
ನಿನ್ನಲ್ಲಿಯೇ

೨. ಈ ಭೂಪ್ರಯಣವು ಪ್ರಯಾಸವು
ಎಲ್ಲೆಲ್ಲೂ ಕತ್ತಲು ಉಂಟಾಗಿದೆ;
ನಿನ್ ಹತ್ರವಿದ್ದರೆ ನಿರ್ಭಯವಾಗುತ್ತೆ
ಎನ್ ದೇವರೇ

೩. ಉಪದ್ರವ ಬಂದರೂ ನಿರ್ಭಯವೇ;
ಇದು ಮೇಲ್ಲೋಕಕ್ಕೆ
ನಿಚ್ಚಣಿಯೇ; ಪ್ರಪಂಚ ತಪ್ಪಿಸ
ಸದ್ಗತಿ ಯೋಚಿಸ ಸಹಾಯವೇ

೪. ಮಾರ್ಗದ ಲಕ್ಷಣ ಕೇಡಾದರು
ಅಘೋರ ಸಂಕಟ ಬಂದಿದ್ದರೂ
ನಿನ್ ಹತ್ರವಿದ್ದರೆ ಸಂತೋಷವಾಗುತ್ತೆ
ಎನ್ ದೇವರೇ

ಕನ್ನಡ ಸಂಗೀತಗಳು, ಗೀತೆ-೧೪೮

ಕವಿಯತ್ರಿಯು ಮೊದಲನೇ ಚರಣದಲ್ಲಿ 'ಜೀವಾತ್ಮನು ಪರಮಾತ್ಮನು ಅನ್ಯೋನ್ಯದಲ್ಲಿ ಜೀವಿಸಿದರೆ ಹೊರತು ಮಾನವನ ಇಷ್ಟಾರ್ಥಗಳು ಈಡೇರುವಂತಿಲ್ಲ' 'ಇಷ್ಟಾರ್ಥ ತೀರಿಸ ನನ್ನೊಂದೇ ಆಸ್ಪದ ನಿನ್ನಲ್ಲಿಯೇ ಆದ್ದರಿಂದಲೇ 'ನಿನ್ನ ಹತ್ರಕ್ಕೆ ನನ್ನಾತ್ಮ ಏರುತ್ತೇ ಓ ತಂದೆಯೇ' ಎಂಬುದಾಗಿ ಹಾಡಿದ್ದಾರೆ.

ಈ ಭೂ ಪ್ರಯಣವು, ಪ್ರಯಾಸವೆ ಎಲ್ಲೆಲ್ಲೂ ಕತ್ತಲು ಉಂಟಾಗಿದೆ. ಅಂದರೆ ಈ ಜೀವವು ಕಷ್ಟ, ಬಡತನ, ನಿಂದನೆ, ತಾಪತ್ರಯಗಳಿಂದ ಕೂಡಿದ್ದಾಗಿದೆ ಮತ್ತು ಶೋಧಕನ ಕುಯುಕ್ತಿ ಶೋಧನೆ ಇತ್ಯಾದಿಗಳಿಂದ ಮತ್ತು ಪಾಪದ ಅಂಧಕಾರದಿಂದ ತುಂಬಿದೆ. ದೇವರು ತನ್ನ ಹತ್ತಿರ ಇರುವುದರಿಂದ ಯಾವುದಕ್ಕೂ ಹೆದರಲಾನು ಎಂದು ತನ್ನ ನಂಬಿಕೆಯನ್ನು ವ್ಯಕ್ತಪಡಿಸಿದ್ದಾಳೆ ಎರಡನೇ ಚರಣದಲ್ಲಿ. ಭಕ್ತರಿಗೆ 'ಉಪದ್ರವಗಳು ಬಂದರು ನಿರ್ಭಯವೇ ಯಾಕೆಂದರೆ ಅವುಗಳು ಭಕ್ತರ ಪಟದಂತಿರುತ್ತದೆ. ಇಹಲೋಕದಿಂದ ಪರಲೋಕಕ್ಕೆ ನಮ್ಮನ್ನು ಏರಿಸಲು ಉಪದ್ರವಗಳು ನಿಚ್ಚಣಿಯಂತಿರುತ್ತವೆ. ನಮಗೆ ಬರುವ ಉಪದ್ರವಗಳಿಂದ

ತಪ್ಪಿಸಿಕೊಳ್ಳುವಂತೆ ಇಹಲೋಕವನ್ನೇ ತ್ಯಜಿಸಬೇಕಂತಲ್ಲ ಆದರೆ ಈ ಲೋಕದಲ್ಲಿದ್ದುಕೊಂಡೇ ಉಪದ್ರವಗಳಲ್ಲಿ ಸಹನವನ್ನು ಅಭ್ಯಸಿಸುವುದರಿಂಲೇ ನಿಜವಾದ ಮುಕ್ತಿಯ ಆನಂದ ಲಭಿಸುವುದು ಇದು ಭಕ್ತರೆಲ್ಲರ ಅನುಭವವಾಗಿದೆ.

ಭಕ್ತನಿಗೆ ದೇವರ ವಿಷಯವಾದ ನೆನಪು ಆತನನ್ನು ಕಷ್ಟಗಳಿಂದ ತ್ಯಜಿಸಿ ಉಲ್ಲಾಸಪಡಿಸುತ್ತದೆ. ಈ ಕಷ್ಟ ಪರಂಪರೆಗಳೇ ನಮ್ಮನ್ನು ದೇವರ ಅನ್ಯೋನ್ಯತೆಗೆ ನಡಿಸುವಂತವುಗಳಾಗಿವೆ ಎಂಬ ಭಾವ ಈ ಗೀತೆಯಲ್ಲಿದೆ.

ಕೇಂಬ್ರಿಡ್ಜ್ ನಗರಲ್ಲಿ ವಾಸವಾಗಿದ್ದ ಶ್ರೀಮತಿ ಸೇರಾ ಆಡಮ್ಸ್ (೧೮೦೫-೧೮೪೮) ಈ ಸಂಗೀತವನ್ನು ರಚಿಸಿದರು. ಈ ಸಂಗೀತದಲ್ಲಿ ಕ್ರಿಸ್ತನ ಹೆಸರೇ ಇಲ್ಲದಿದ್ದರೂ ಅರೆಕಾಲೀಕ ಭಕ್ತ ಭಕ್ತೆಯರಿಗೆ ಈ ಸಂಗೀತವು ಸಂತೃಪ್ತಿ ಆಧರಣೆಯನ್ನು ನೀಡಿದೆ. ೭ನೇ ಎಡ್ವರ್ಡ್ ರಾಜನು ಸಾಯುವ ಸಮಯದಲ್ಲಿ ಈ ಸಂಗೀತವನ್ನೇ ಹಾಡಿಸಿ ಆನಂದದಿಂದ ಕಣ್ಮುಚ್ಚಿದರಂತೆ ಮತ್ತೆ "ಟೈಟಾನಿಕ್ ಎಂಬ ಭಾರಿ ಹಡಗು ೧೯೧೨ರಲ್ಲಿ ಅಟ್ಲಾಂಟಿಕ್ (Atlantic) ಸಮುದ್ರ ಪಾಲಾದಾಗ ಮೃತಪಟ್ಟವರ ಅಂತ್ಯ ಸಂಸ್ಕಾರದಲ್ಲಿ ಈ ಗೀತೆಯನ್ನೇ ಹಾಡಲಾಯಿತು.'[೧೬] ಕ್ರೈಸ್ತ ಸಮುದಾಯದಲ್ಲಿ ಇಂದು ಈ ಗೀತೆಯನ್ನು ಶವ ಸಂಸ್ಕಾರಗಳ ಸಂದರ್ಭದಲ್ಲಿ ಇನ್ನಿತರ ದುಃಖಿತ ವೇಳೆಯಲ್ಲಿ ಹಾಡುತ್ತಾರೆ.

ಆಂಗ್ಲಭಾಷೆಯಲ್ಲಿ ಈ ಗೀತೆ ಅರ್ಥ ಗಾಂಭೀರ್ಯತೆಯನ್ನು ಹೊಂದಿ ಭಕ್ತನನ್ನು ಭಾವ ಪೂರಿತನನ್ನಾಗಿ ಮಾಡುತ್ತದೆ. ಕನ್ನಡದಲ್ಲಿ ಭಾಷಾಂತರ ಅಷ್ಟು ಸ್ಪಷ್ಟವಾಗಿಲ್ಲ. ಇಂಗ್ಲೀಷ್‌ನಲ್ಲಿ ಒಟ್ಟು ೫ ಚರಣಗಳಿವೆ ಕನ್ನಡದಲ್ಲಿ ಕೇವಲ ೪ ಚರಣಗಳಿವೆ.

"ಆನಂದವೇ ಆನಂದವೇ"[೧೭] ಎಂಬ ಗೀತೆಯು ಪ್ರಾರಂಭದಲ್ಲಿ ಫಿಲಿಪ್ ಡಾಡ್ರಿಡ್ಜ್ ಎಂಬಾತನು ರಚಿಸಿದನು. ಈ ಸಂಗೀತವು ಪ್ರಪಂಚದ ಅನೇಕ ಭಾಷೆಗಳಲ್ಲಿ ಭಾಷಾಂತರವಾಗಿದೆ. ಕೆಲವು ಇಂಗ್ಲೀಷ್ ಸಂಗೀತ ಪುಸ್ತಕಗಳಲ್ಲಿ ಕವಿಯು ರಚಿಸಿದ ಒಂದು ಶ್ಲೋಕವು ಇಲ್ಲವಾಗಿದೆ. ಕನ್ನಡ ಸಂಗೀತದಲ್ಲೂ ಇಲ್ಲ. ಆ ಚರಣವನ್ನು ಇಂಗ್ಲೀಷಿನಲ್ಲಿಯೇ ನೀಡಲಾಗಿದೆ.

Tis done, the great transactions done
I 'am my Lord's and He is mine
He drew me, and I followed on
Charmed to confess the voice divine

ಆ ಚರಣದ ಆಶಯ ಇಂತಿದೆ 'ಅತ್ಯಂತ ಮಹಾ ರಕ್ಷಣೆಯ ಸಿದ್ಧಿಯಾಯಿತು. ನಾನು ಕರ್ತನವ, ಆತ ನನ್ನವ, ನನ್ನನ್ನು ಆತನು ಎಳೆದನು. ನಾನು ಆತನನ್ನು ಹಿಂಬಾಲಿಸಿದೆನು. ಹೀಗೆ ದೈವವಾಣಿಗೆ ತಾನೇ ವಿದೇಯನಾದೆನು.

ರಕ್ಷಣೆಯ ಮಾರ್ಗದಲ್ಲಿ ಭಕ್ತನು ಹತ್ತಬೇಕಾದ ಕ್ರಮವಾದ ಮೆಟ್ಟಿಲುಗಳನ್ನು ಈ ಗೀತೆಯಲ್ಲಿ ನಾವು

ಗಮನಿಸಬಹುದು. ಮೊದಲನೇ ಚರಣದಲ್ಲಿ ಪಾಪಿಯು ಎಲ್ಲಾ ಮಲಿನತ್ವಗಳಿಂದ ಶುದ್ಧಿ ಹೊಂದುವುದಕ್ಕಾಗಿ ಕ್ರಿಸ್ತನು ತನ್ನ ಪವಿತ್ರ ರಕ್ತವನ್ನು ಸುರಿಸಿದ. ಹೀಗೆ ಶುದ್ಧೀಕರಿಸಲ್ಪಟ್ಟ ಪಾಪಿಯನ್ನು ಕ್ರಿಸ್ತನು ವಿರೋಧಿಯಾದ ಸೈತಾನನ ಪಾಶಗಳಿಂದ ಬಿಡಿಸಿ ಮನಃಶಾಂತಿಯನ್ನು ಕೊಟ್ಟು ಆತ್ಮಾನಂದವನ್ನು ಉಂಟುಮಾಡುತ್ತಾನೆ. ಈ ರೀತಿ ರಕ್ಷಿಸಲ್ಪಟ್ಟ ಭಕ್ತರಲ್ಲಿ 'ಇನ್ನು ಬೇರೆ ಆಸೆಗಳು ಇರುವುದಿಲ್ಲ ರಕ್ಷಣಾಮೃತವನ್ನು ಪಾನಮಾಡಿ ಯಾವಾಗಲೂ ಸಂತೃಪ್ತರಾಗಿರುವರು. ರಕ್ಷಣೆಯ ಮಾರ್ಗದ ಕಡೆಯ ಮೆಟ್ಟಿಲು ಯಾವುದೆಂದರೆ ಹೀಗೆ ರಕ್ಷಿಸಲ್ಪಟ್ಟ ಭಕ್ತರು ತನ್ನನ್ನು ದೇವರ ಕಡೆಗೆ ಪ್ರತಿಷ್ಠೆ ಮಾಡಿಕೊಂಡು ತಮ್ಮ ವಾಗ್ದಾನದಂತೆ ನಡೆಕೊಳ್ಳುತ್ತೇವೆಂದು ಕರ್ತನೊಂದಿಗೆ ಒಡಂಬಡಿಕೆ ಮಾಡಿಕೊಳ್ಳುತ್ತಾರೆ. 'ನನ್ನನ್ನು ದೈವ ಸೇವೆಗೆ ಪ್ರತಿಷ್ಠೆ ಮಾಡಿಕೊಂಡನು. ಎಂದೆದೂ ಈ ಒಡಂಬಡಿಕೆ ಕಾಪಾಡಿ ಸೇವಿಸುವೆನು. ಸಂಭ್ರಮಪಡು ಮನವೇ ನಾ ಭಾಗ್ಯವಂತನಾದೆನು ಎಂದು ಗೀತಗಾರ ತನ್ನ ಆತ್ಮಸಂತೋಷವನ್ನು ಹೇಳಿಕೊಂಡಿದ್ದಾನೆ.

ನಿತ್ಯನಾಶನದ ಹಾದಿಯಲ್ಲಿ ಸಂಚರಿಸಿದೆ ಪರಮಂಡಲಕ್ಕೆ ಹೋಗುವ ಇಕ್ಕಟ್ಟಾದ ಹಾದಿಯಲ್ಲಿ ತನ್ನನ್ನು ನಡೆಸಬೇಕು ಎಂದು ನಿವೇದಿಸಿಕೊಳ್ಳುವ ಸಂಗೀತ 'ನಿತ್ಯ ನಾಶನದ ಹಾದಿ' ಎಂಬುದು. ಈ ಗೀತೆ ನಮ್ಮಲ್ಲಿ ದೀನ ಭಾವವನ್ನು ಮೂಡಿಸುತ್ತದೆ.

ನಿತ್ಯ ನಾಶನದ ಹಾದಿ ಸವಿಸ್ತಾರವಾಗಿದೆ. ಓಟಗಾರ ನಡುಕಟ್ಟಿ ಓಡುವ ಪ್ರಕಾರವೇ
ಪರಮಂಡಲದ ದಾರಿ ಬಹು ಇಕ್ಕಟ್ಟಾಗಿದೆ ದೇವ ಭಕ್ತ ಗುರಿನೋಡಿ ಪಡಬೇಕು ಜಾಗ್ರತೆ
ಶ್ರೇಷ್ಠ ಭಾಗ್ಯ ಜೈಸುವಂಗೆ ಸಿಕ್ಕುತ್ತೆ ಹೀಗೆ ಮಾತ್ರ ಪರಲೋಕವಾಗುತ್ತೆ

ಕನ್ನಡ ಸಂಗೀತಗಳು, ಗೀತೆ–೧೪೪

ಕ್ರಿಸ್ತನು ನಮಗೆ ಹೇಳುತ್ತಾನೆ "ಇಕ್ಕಟ್ಟಾದ ದ್ವಾರದಿಂದ ಅಥವಾ ಅಗಲವಾದ ದ್ವಾರದಿಂದ ಹೋಗುತ್ತಿರೋ ಎರಡು ದ್ವಾರಗಳು ಮಾತ್ರ ಇವೆ, ಒಂದನ್ನು ನೀವು ಆರಿಸಿಕೊಳ್ಳಲೇ ಬೇಕು"[೧೮] ಕ್ರಿಸ್ತನನ್ನು ಹಿಂಬಾಲಿಸುವವರು ಇಕ್ಕಾಟ್ಟಾದ ಬಾಗಿಲಿನಿಂದ ಪ್ರವೇಶಿಸಬೇಕು. ಅಂದರೆ ಜನಸ್ತೋಮದಿಂದ ದೂರವಿರಬೇಕು. ನಾವು ಲೋಕದ ಸಂಪ್ರದಾಯಗಳಿಂದ ತಿರುಗಿಕೊಳ್ಳಲೇ ಬೇಕು. ಕ್ರಿಸ್ತನನ್ನು ಹಿಂಬಾಲಿಸಲಿಕ್ಕಾಗಿ ಗೆಳೆಯರನ್ನು ಮತ್ತು ಕುಟುಂಬವನ್ನು ಬಿಡುವುದು ಎಷ್ಟೋ ಕಷ್ಟಕರವಲ್ಲವೇ? (ಮತ್ತಾಯ ೧೦:೩೫–೩೭). ಇಕ್ಕಟ್ಟಾದದ್ವಾರದಿಂದ ಪ್ರವೇಶಿಸಬೇಕು. ಇಕ್ಕಟ್ಟಾದದಾರಿಯು ಬಲು ಕಷ್ಟ. ಹಿಂಸೆ ಉಂಟು, ನಾವು ಅನೇಕ ಹಿಂಸೆ ಮತ್ತು ಕಷ್ಟಗಳನ್ನು ಸಂದಿಸುವೆವು (೨ನೇ ತಿಮೋಥಿ ೩:೧೨). ಸೈತಾನನು ನಾನಾ ರೀತಿಯಾದ ತೊಂದರೆಗಳನ್ನು ಶೋಧನೆಗಳನ್ನು ನಮ್ಮ ದಾರಿಯಲ್ಲಿ ಕೊಡುವನು. ಇಲ್ಲಿ ಕೆಲವೊಂದು ಅನುಕೂಲತೆಗಳು ಇರುವವು. (ಮತ್ತಾಯ ೮:೯–೨೦) ಈ ದಾರಿಯು ಅಷ್ಟು ಸುಲಭವಾಗಿರುವುದಿಲ್ಲ. ನಮ್ಮ ಜೀವಿತದ ಪ್ರತಿಯೊಂದು ಘಟ್ಟದಲ್ಲಿಯೂ ಸೈತಾನನು ನಮಗೆ ಹೊಸಹೊಸ ಶೋಧನೆಯನ್ನು ಕೊಡುವನು. ಆದಾಗ್ಯೂ ಇಂತಹ ಮಾರ್ಗದಿಂದ ಜನರು ಯಾಕೆ ಹೋಗುತ್ತಾರೆ? ಯಾಕೆಂದರೆ ಈ ಇಕ್ಕಟ್ಟಾದದಾರಿಯು ನಮ್ಮನ್ನು ನಿತ್ಯಜೀವಕ್ಕೆ ನಡೆಸುವುದು. ಅಗಲವಾದ ದಾರಿಯು

ನಮ್ಮನ್ನು ನಾಶಕ್ಕೆ ಕರೆಯುತ್ತದೆ (ಯೆರೆಮಿಯಾ ೨೧:೮).

ಆತ್ಮ ನಿವೇದನೆ: 'ಕಾಪಾಡುವ ದೇವರೇ' ಎಂಬ ಗೀತೆಯನ್ನು ಜೋಸೆಫ್ ಹೆಚ್. ಗಿಲ್ ಮೋರ್ (Joseph H. Gilmore ೧೮೩೪-೧೯೧೮) ರಚಿಸಿದರು. ಇದರ ಆಧಾರ ವಾಕ್ಯ "ಆತನು ಹಸಿರು ಗಾವಲುಗಳಲ್ಲಿ ನನ್ನನ್ನು ತಂಗಿಸುತ್ತಾನೆ, ವಿಶ್ರಾಂತಿಕರವಾದ ನೀರುಗಳ ಬಳಿಗೆ ಬರಮಾಡುತ್ತಾನೆ"[೧೯]

ಕಾಪಾಡುವ ದೇವರೇ ಸಂತೋಷವುಳ್ಳ ಯೋಚನೆ
ನಾನೆಲ್ಲಿ ಹೇಗೆ ಇದ್ದರು ಕಾಪಾಡುವವನಾತನು
ಕಾಪಾಡುವವ ದೇವರೇ ತನ್ನ ಸ್ವ ಹಸ್ತದಿಂದಲೇ
ಅಧೈರ್ಯ ಬಿಟ್ಟು ನಂಬುವೆ ಕಾಪಾಡುವವ ದೇವರೇ

ಕನ್ನಡ ಸಂಗೀತಗಳು, ಗೀತೆ-೧೫೨

ಈ ಗೀತೆಯ ಬಹಳ ಇಂಪಾದ ಸುಮಧುರವಾದ ಒಂದು ಚಿಕ್ಕ ಪದವೆಂದರೆ 'ನನ್ನ' ದೇವರು ನಾವೆಲ್ಲ ಹೇಗೆ ಇದ್ದರು ಆತನು ನನ್ನನು ಕಾಪಾಡುತ್ತಾನೆ. ನಾನು ಧೈರ್ಯಗೆಡುವುದಿಲ್ಲ ನಿಶ್ಚಿಂತೆಯಾಗಿರುತ್ತೇನೆ. ಯಾಕೆಂದರೆ ಆತನೇ ನನ್ನನ್ನು ಕಾಪಾಡುತ್ತಾನೆ. ಏನೆಲ್ಲಾ ಪ್ರಾಪ್ತವಾದರು ನಾನು ಗುಣಗುಟ್ಟದೇ ಸಂತೃಪ್ತನಾಗಿರುತ್ತೇನೆ. ಯಾಕೆಂದರೆ ಆತನೇ ನನ್ನನ್ನು ಕಾಪಾಡುತ್ತಾನೆ. ನನ್ನ ಜೀವದಂತ್ಯ ಬಂದರು ನಿರ್ಭಯವಾಗಿರುವೆನು ಯಾಕೆಂದರೆ ದೇವರೇ ನನ್ನನ್ನು ಕಾಪಾಡುತ್ತಾರೆ. ಹೀಗೆ ಪದಗಳು ವರ್ತಮಾನ ಕಾಲದಲ್ಲಿದೆ.

ಸ್ತುತಿ: 'ಶುದ್ಧ ಶುದ್ಧ ಶುದ್ಧ' ಎಂಬ ಗೀತೆಯನ್ನು ರೆಜಿನಾಲ್ಡ್ ಹೆಬರ್ (೧೭೮೩-೧೮೨೬) ಎಂಬುವರು ರಚಿಸಿದರು. ಇದರ ಆಧಾರ ವಾಕ್ಯ 'ಬನ್ನಿರಿ ನಮ್ಮ ....ಆನು ದೇವರು. ನಾವು ಆತನು ಪಾಲಿಸುವ ಪ್ರಜೆಯು, ಆತನ ಕೈಕೆಳಗಿರುವ ಹಿಂಡೂ ಆಗಿದ್ದೇವೆ.[೨೦]

ಶುದ್ಧ ಶುದ್ಧ ಶುದ್ಧ ಸರ್ವ ಶಕ್ತ ದೈವ!
ಹರ್ಷದಿಂದ ಹಾಡಿ ಕೊಂಡಾಡಿಕೊಳ್ಳಲೇ
ಶುದ್ಧ ಶುದ್ಧ ಶುದ್ಧ ಕೃಪಾಪೂರ್ಣ ಸಾಗರ
ಓ ತ್ರಯ್ಯೇಕ ದೇವ ಸ್ತುತಿ ನಿನಗೆ

ಕನ್ನಡ ಸಂಗೀತಗಳು, ಗೀತೆ-೨೩೧

ಕ್ರೈಸ್ತರು ನಂಬಿ ಆರಾಧಿಸುವ ದೇವರು ತ್ರಿಯೇಕರಾಗಿದ್ದಾರೆ. ತಂದೆ ಮಗ ಮತ್ತು ಪವಿತ್ರಾತ್ಮನೆಂಬ ದೇವರು ಬೇರೆಬೇರೆಯಲ್ಲ. ಒಬ್ಬನೇ ದೇವರು. ಮನುಷ್ಯರಲ್ಲಿ ಶರೀರ, ಮನಸ್ಸು, ಆತ್ಮ ಇವು ಬೇರೆಬೇರೆಯಾದ ತತ್ವಗಳಾದರೂ ಹೇಗೆ ಒಂದೇ ವ್ಯಕ್ತಿ ಆಗಿದೆಯೋ ಹಾಗೆಯೇ ದೇವರ ತ್ರೀಕತ್ವ ಸಿದ್ಧಾಂತವು ಆಗಿರುತ್ತದೆ. ಆತನ ಗುಣಸ್ವಭಾಗಳಲ್ಲಿ ಪವಿತ್ರತೆಯು ಒಂದು ವಿಶೇಷವಾದ ಅಂಶ. ದೇವರಾದ ಕರ್ತನು

ಪರಿಶುದ್ಧನು ಪರಿಶುದ್ಧನು ಪರಿಶುದ್ಧನು ಆತನು ಶುದ್ಧನು ಸರ್ವ ಶಕ್ತನು ಕೃಪಾಪೂರ್ಣಸಾಗ್ರನು ಆಗಿರುತ್ತಾನೆ. ಇಂತಹ ದೇವರನ್ನು ಗೀತಗಾರ ಪ್ರಾರಂಭದಲ್ಲಿಯೇ ಹರ್ಷದಿಂದ ಹಾಡಿ ಕೊಂಡಾಡಿದ್ದಾರೆ.

"ನಿನ್ನನ್ನು ಕರೆದಾತನು ಪರಿಶುದ್ಧನಾಗಿರುವ ಪ್ರಕಾರವೇ ನೀವು ವಿಧೇಯರಾಗಿ ತಕ್ಕಂತೆ ನಿಮ್ಮ ಎಲ್ಲಾ ನಡವಳಿಕೆಗಳಲ್ಲಿ ಪರಿಶುದ್ಧರಾಗಿರಿ"[೨೧] ಎಂದು ಪೇತ್ರನು ಬರೆಯುತ್ತಾನೆ. ದೇವರನ್ನು ಆರಾಧಿಸುವರೆಲ್ಲರೂ ಆತನನ್ನು ಪ್ರೀತಿಯುಳ್ಳ ತಂದೆಯೆಂದು ಮಾತ್ರವಲ್ಲದೆ ಪಾಪವನ್ನು ವಿರೋಧಿಸುವ ಪರಿಶುದ್ಧ ದೇವರು ಆಗಿದ್ದಾನೆ ಎಂಬುದನ್ನು ಯಾವಾಗಲೂ ಮನಸ್ಸಿನಲ್ಲಿಟ್ಟುಕೊಂಡು ಆತನನ್ನು ಗಂಭೀರದಿಂದಲೂ, ನಯವಿನಯ, ಭಕ್ತಿಗಳಿಂದಲೂ ಆರಾಧಿಸುವಂತವರಾಗಿರಬೇಕೆಂದು ಗೀತಗಾರ ಹೇಳುತ್ತಾರೆ.

ಈ ಗೀತೆಯ ಕರ್ತೃ ೧೭೮೩ರಲ್ಲಿ ಜನಿಸಿದರು. ಆಕ್ಸಫರ್ಡಿನಲ್ಲಿ ವಿದ್ಯಾಭ್ಯಾಸ ಮಾಡಿದನು. ಆತನು ಇನ್ನೂ ವಿದ್ಯಾರ್ಥಿಯಾಗಿದ್ದಾಗಲೇ ಕವನ ರಚಿಸುವುದರಲ್ಲಿ ಚತುರನಾಗಿದ್ದನು. ೧೮೦೭ರಲ್ಲಿ ಬೋಧಕನಾದನು. ೧೮೨೦ರಲ್ಲಿ ಹೇಬರನು ತಾನು ನಮ್ಮ ದೇಶಕ್ಕೆ ಮಿಶನರಿಯಾಗಿ ಬಂದನು. ಕಲ್ಕತ್ತಾದಲ್ಲಿ ಆತನು ಬಿಷಪರಾಗಿದ್ದ ಕಾಲದಲ್ಲಿ ಭಾರತೀಯ ಕ್ರೈಸ್ತನೊಬ್ಬನನ್ನು ಮೊಟ್ಟಮೊದಲನೆಯದಾಗಿ ಬೋಧಕೋದ್ಯೋಗಕ್ಕೆ ಪ್ರತಿಷ್ಠಿಸಿದನು. ೧೮೨೬ರಲ್ಲಿ ದೈವಾಧೀನನಾದನು. ಗೀತೆಯ ೩ನೇ ಚರಣದಲ್ಲಿನ ಮಾತುಗಳು ಯೇಶಾಯನು ಕಂಡ ದರ್ಶನವನ್ನು ನೆನಪಿಗೆ ತರುತ್ತದೆ. 'ನಿನ್ನ ಸುತ್ತಮುತ್ತು ಮೋಡ ಅಂಧಕಾರ ವಸ್ತ್ರದಂತೆ ಬಂದು ಆವರಿಸಿದರೂ ಶುದ್ಧ ನೀತಿಪ್ರೀತಿ ನಿನ್ನಲ್ಲುಂಟು ನಿತ್ಯ' ಸೂರ್ಯನನ್ನು ಮೋಡಗಳು ಕವಿದ ಮಾತ್ರಕ್ಕೆ ಅದರ ಪ್ರಕಾಶವಾಗಲೀ ಉಷ್ಣಾಂಶವಾಗಲೀ ಯಾವ ರೀತಿಯಲ್ಲೂ ಕುಂದಿಹೋಗುವುದಿಲ್ಲ. ಅದರಂತೆ ಶುದ್ಧವಾದ ನೀತಿ ಮತ್ತು ಪ್ರೀತಿ ಎಂಬ ದೇವರಸ್ವಭಾವಗಳು ಅಮರವಾದವು. ದೇವರು ಪಾಪವನ್ನು ವಿರೋಧಿಸುವ ನೀತಿವಂತನಾಗಿದ್ದರೂ ಪಾಪಿಯನ್ನು ಸದಾ ಪ್ರೀತಿಸುವ ತಂದೆಯಾಗಿದ್ದಾರೆ. ಆದ್ದರಿಂದ ನಿನ್ನ ಭಕ್ತರ್ಗೆಲ್ಲಾ ಭೀತಿಯಿಲ್ಲವೋ ಎಂಬುದಾಗಿ ಸಂಗೀತಗಾರನು ಬರೆದಿದ್ದಾನೆ.

ಪ್ರಾರ್ಥನೆ: ದೇವರ ಮತ್ತು ಮನುಷ್ಯನ ನಡುವಿನ ಸಂಭಾಷಣೆಯೇ ಪ್ರಾರ್ಥನೆ. ದಿನದಿಂದ ದಿನಕ್ಕೆ ಆಧ್ಯಾತ್ಮಿಕ ಬದುಕಿನಲ್ಲಿ ಬೇರೂರಲು ಪ್ರಾರ್ಥನೆ ಅಗತ್ಯ. ವಿಶ್ವಾಸಭರಿತ ಪ್ರಾರ್ಥನೆಯ ಕುರಿತು ಯೇಸು ಹೇಳಿದ ಮಾತು ಏನೆಂದರೆ "ಯಾವನಾದರೂ ಈ ಬೆಟ್ಟಕ್ಕೆ ನೀನು ಇಲ್ಲಿಂದ ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿ ಮನಸ್ಸಿನಲ್ಲಿ ಸಂದೇಹ ಪಡದೆ ಅದು ಸಂಭವಿಸುವುದೆಂದು ವಿಶ್ವಾಸಿಸಿದರೆ ನಾನು ನಿಮಗೆ ನಿಶ್ಚಯವಾಗಿ ಹೇಳುತ್ತೇನೆ, ಅವರು ಹೇಳಿದಂತೆಯೇ ಆಗುವುದು. ಯೇಸು ಮುಂದುವರೆದು ಹೀಗೆ ಹೇಳುತ್ತಾರೆ. 'ನೀನು ಪ್ರಾರ್ಥನೆ ಮಾಡುವಾಗಲೆಲ್ಲಾ ಯಾರಿಗಾದರೂ ವಿರೋಧವಾಗಿ ನಿಮ್ಮ ಮನಸ್ಸಿನಲ್ಲಿ ಏನಾದರೂ ಇದ್ದರೆ ಅದನ್ನು ಕ್ಷಮಿಸಿಬಿಡಿ ಆಗ ಸ್ವರ್ಗದಲ್ಲಿರುವ ನಿಮ್ಮ ತಂದೆಯು ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸಿಬಿಡುವರು."[೨೨]

'ಕರ್ತನ ಪ್ರಾರ್ಥನೆ' ಎಂಬ ಗೀತೆಯು ಸಂತ ಮತ್ತಾಯನ ಶುಭಸಂದೇಶದ ೬:೧೦-೧೩

[illegible]

ವಾಕ್ಯಗಳನ್ನು ಆಧರಿಸಿ ರಚಿಸಿದ್ದಾಗಿದೆ. ಈ ಪ್ರಾರ್ಥನೆಯು ಯೇಸುವೇ ತನ್ನ ಶಿಷ್ಯರಿಗೆ ಕಲಿಸಿಕೊಟ್ಟ ಪ್ರಾರ್ಥನೆಯಾಗಿದೆ.

೧. ಆಕಾಶ ವಾಸ ಮಾಡುವ
ನಮ್ಮಪ್ಪಾ ತಂದೆಯೇ
ಎಲ್ಲರು ನಿನ್ನ ನಾಮವ
ಪವಿತ್ರ ಮಾಡ

೨. ಸಾಂರಾಜ್ಯ ನಿನ್ನದಾಗಿದೆ
ಆ ರಾಜ್ಯಗಳಲ್ಲಿ
ಭೂ ಪ್ರಜೆ ದೂತರಂತೆಯೇ
ವಿಧೇಯರಾಗಲಿ

೩. ಬೇಕಾದಾಹಾರ ನಿತ್ಯವು ಸಾಕಷ್ಟು
ಕೊಡಿಸು ವಿರೋಧಿಯಕ್ಷಮಿಪೆವು
ನಮಗೂ ಕ್ಷಮಿಸು

೪. ನಮ್ಮಾತ್ಮಕ್ಕೆಂದು ತಪ್ಪಿಸು
ಸೈತಾನ ಶೋಧನೆ
ಸಮಸ್ತ ಕೇಡಿನಿಂದಲೂ
ಕಾಪಾಡು ಕರ್ತನೆ

೫. ಪ್ರಭಾವ ತ್ರಾಣ, ಮಹಿಮೆ
ರಾಜ್ಯದ ಆಳಿಕೆ
ಯುಗಾಂತ್ರಗಳವರೆಗೆ
ಓ ಸ್ವಾಮಿ! ನಿನ್ನವೇ

ಕನ್ನಡ ಸಂಗೀತಗಳು, ಗೀತೆ–೨೪

ಈ ಪ್ರಾರ್ಥನೆಯ ಪ್ರಾಮುಖ್ಯವಾದ ಲಕ್ಷಣವೇನೆಂದರೆ ಇದು ಸಾಮಾಜಿಕ ಪ್ರಾರ್ಥನೆಯಾಗಿರುತ್ತದೆ. ಇಲ್ಲಿ ನಾವು ನಮ್ಮ ಎಲ್ಲಾ ಕೊರತೆಗಳಲ್ಲಿ ನಮ್ಮ ಜೊತೆ ಸೃಷ್ಟಿಗಳೊಡನೆ ಏಕೀಭವಿಸಿರುತ್ತೇವೆ. ಇದೇ ಈ ಪ್ರಾರ್ಥನೆಗೆ ಅಸ್ತಿವಾರವಾಗಿದೆ. ನಾವು ಈ ಪ್ರಾರ್ಥನೆಯನ್ನು ಮಾಡುವಲ್ಲಿ ಒಬ್ಬೊಂಟಿಗರಾಗಿದ್ದರೂ, ಜನ ಸಮೂಹದ ಮಧ್ಯದಲ್ಲಿದ್ದರೂ ಭ್ರಾತೃಭಾವದಿಂದ ನಮ್ಮ ಸಹೋದರರ ಕೈಗಳನ್ನು ಹಿಡಿದುಕೊಂಡು ಪರಮ ತಂದೆಯ ಸಮಕ್ಷಮಕ್ಕೆ ಬರುವವರೆಗೂ ಈ ಪ್ರಾರ್ಥನೆಯನ್ನು ಯಥಾರ್ಥವಾಗಿ ಮಾಡಲಾರೆವು. 'ಪ್ರಾರಂಭದಲ್ಲಿ ಪರಲೋಕದಲ್ಲಿರುವ ನಮ್ಮ ತಂದೆಯೇ' ಎಂದು ಬರೆದಿದೆ. ಈ ರೀತಿಯ ಸಂಬೋಧನೆ ಹಳೆಒಡಂಬಡಿಕೆಯಲ್ಲಿ ವ್ಯಕ್ತವಾಗಿರುವ ದೇವರ ಚಿತ್ರಣವನ್ನು ಬದಲಿಸುತ್ತದೆ. ಹೊಸಒಡಂಬಡಿಕೆಯಲ್ಲಿ ದೇವರನ್ನು ನಂಬಿಕೆಯಿಂದಲೂ ಭರವಸೆಯಿಂದಲೂ ಮತ್ತು ಆಪ್ತ ಪ್ರೀತಿಯಿಂದಲೂ ಸಂಬೋಧಿಸಬಹುದಾಗಿದೆ (ರೋಮ ೫:೨).

ಈ ಪ್ರಾರ್ಥನೆಯ ಮೊದಲನೆಯ ಮೂರು ಭಿನ್ನಹಗಳು ಎಂದರೆ 'ನಿನ್ನ ನಾಮವು ಪರಲೋಕದಲ್ಲಿ ಹೇಗೋ ಹಾಗೇ ಭೂಲೋಕದಲ್ಲಿಯು ಪರಿಶುದ್ಧವೆಂದು ಎಣಿಸಲ್ಪಡಲಿ. ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ನೆರವೇರಲಿ ಎಂಬಿವುಗಳು ಕ್ರಿಸ್ತನ ಮನಸ್ಸಿನಲ್ಲಿದ್ದ ಕಾಂಕ್ಷೆಯನ್ನು ನಮಗೆ ಪ್ರದರ್ಶನಪಡಿಸುತ್ತದೆ. ಇವುಗಳು ದೇವರು ಈ ಲೋಕದ ಮೇಲೆ ದೊರೆತನ ಮಾಡಲೆಂದು ಪ್ರಾರ್ಥನೆಯಾಗಿರುತ್ತದೆ. ಇವುಗಳು ಈ ಲೋಕದಲ್ಲಿ ಸಾಧಾರಣವಾಗಿರುವ ಜೀವ ಮಾನವು ಪೂರ್ಣಸಿದ್ಧಿಗೆ ಬರುವ ಆ ಕಾಲವನ್ನು ನಿರೀಕ್ಷಿಸುತ್ತದೆ.

ಇವುಗಳು ಕ್ರಿಸ್ತರು ಈ ಲೋಕದಿಂದ ಬಿಡುಗಡೆಯಾಗಿ ಪರಲೋಕಕ್ಕೆ ಹೋಗಬೇಕೆಂಬ ಪ್ರಾರ್ಥನೆಯಾಗಿರುವುದಿಲ್ಲ. ಪರಲೋಕದ ಜೀವಮಾನವು ಈ ಲೋಕದ ಮೇಲೆ ಬರಲೆಂದು ಮಾಡುವ ಪ್ರಾರ್ಥನೆಯಾಗಿರುತ್ತದೆ.

ತರುವಾಯ ಮಾನವ ಕೊರತೆಯನ್ನು ವ್ಯಕ್ತಪಡಿಸುವ ಭಿನ್ನಹಗಳು ಬರುತ್ತವೆ. ಮೊದಲನೆಯದು ಈಗ ನಮಗಿರುವ ಆಹಾರದ ಅವಶ್ಯಕತೆ. ಪ್ರಾಪಂಚಿಕ ವಿಷಯಗಳಿಗಾಗಿ ಪ್ರಾರ್ಥನೆ ಮಾಡುವುದು ತಪ್ಪೆಂದು ಕ್ರಿಸ್ತನು ಎಂದಾದರೂ ಬೋಧನೆ ಮಾಡಿರುವುದಿಲ್ಲ. ಯಾವುದು ನಮಗೆ ಅವಶ್ಯಕವೋ ಅದನ್ನು ಬೇಡಿಕೊಳ್ಳುವುದಕ್ಕೆ ಆತನು ನಮಗೆ ಅವಕಾಶ ಕೊಡುತ್ತಾನೆ. ಆದರೆ ನಾವು ಆಹಾರಕ್ಕಾಗಿ ದೇವರನ್ನು ಬೇಡಿಕೊಳ್ಳುವಾಗ ನಮ್ಮ ಪಾಲಿಗಿಂತಲೂ ಹೆಚ್ಚಾಗಿ ಬೇಡಿಕೊಳ್ಳಲಾರೆವು. ನಮಗೋಸ್ಕರವಾಗಿಯೇ ಯಾವುದನ್ನು ಬೇಡುತ್ತೇವೋ ಅದನ್ನು ಎಲ್ಲರಿಗೋಸ್ಕರವಾಗಿಯೂ ಬೇಡುತ್ತೇವೆ.

ನಾವು ಒಬ್ಬರನ್ನೊಬ್ಬರ ತಪ್ಪುಗಳನ್ನು ಕ್ಷಮಿಸಬೇಕು. ನಾವು ಇತರರನ್ನು ಕ್ಷಮಿಸಿದರೆ ಮಾತ್ರ ನಮಗೂ ಕ್ಷಮೆ ದೊರೆಯುವುದೆಂಬ ಶರತ್ತುಗಳನ್ನು ಇಡಲಾಗಿದೆ. ಆದರೆ ದೇವರು ನಮಗಿಂತಲೂ ದಯಾಮಯಿ ಹಾಗೂ ಉದಾರಮನಸ್ಸಿನವರು (ಮತ್ತಾಯ ೧೮:೨೧–೩೫) ದೇವರ ಈ ಕ್ಷಮಾಗುಣವನ್ನು ನಾವು ಅನುಸರಿಸಬೇಕು.

ಕೆಡುಕನ ಕೈಯಿಂದ ನಮ್ಮನ್ನು ತಪ್ಪಿಸು ಎಂಬ ಈ ಮಾತುಗಳು ರಣರಂಗದ ಕೂಗು. ದೇವರಿಗೂ ಮಾನವನಲ್ಲಿರುವ ಕೆಡುಕನ ಶಕ್ತಿಗಳಿಗೆ ಒಂದು ಹೋರಾಟವು ನಡೆಯುತ್ತದೆಂಬುದನ್ನು ನಮ್ಮ ಸ್ಮರಣೆಗೆ ತರುತ್ತದೆ. ನಾವು ಈ ಪ್ರಾರ್ಥನೆ ಮಾಡುವಾಗೆಲ್ಲ ದೇವರ ಪಕ್ಷದಲ್ಲಿ ನಿಂತುಕೊಂಡು ಕೆಡುಕನಿಗೆ ವಿರೋಧವಾಗಿ ಯುದ್ಧ ಮಾಡುವುದಕ್ಕೆ ಪ್ರತಿಜ್ಞೆ ಮಾಡಿಕೊಳ್ಳುತ್ತೇವೆ.

ಸೈತಾನನು ಒಡ್ಡುವ ಕೇಡುಗಳಿಂದ ನಮ್ಮನ್ನು ರಕ್ಷಿಸುವವರು ದೇವರು ಮಾತ್ರ. ಯೇಸು ಕಲಿಸಿಕೊಟ್ಟ ಪ್ರಾರ್ಥನೆಯನ್ನು ಪಾಲಿಸುವ ಪ್ರತಿಯೊಬ್ಬನು ಎಲ್ಲಾ ಮಾನವಕೋಟಿಗಾಗಿ ಪ್ರಾರ್ಥಿಸುತ್ತಾನೆ. ಒಬ್ಬನೇ ಪ್ರಾರ್ಥಿಸುತ್ತಿರುವಾಗಲು ಆತ ಇತರರಿಗೂ ಪ್ರಾರ್ಥಿಸುವುದು ಯೇಸು ಕಲಿಸಿಕೊಟ್ಟ ಪ್ರಾರ್ಥನೆಯ ವಿಶೇಷತೆಯಾಗಿದೆ.

ಹಬ್ಬಗಳು:– ಯೇಸುವಿನ ಜನನಕ್ಕೆ ಸಂಬಂಧಿಸಿದ ಗೀತೆಗಳು: ಯೇಸುವಿನ ಜನನಕ್ಕೆ ಸಂಬಂಧಿಸಿದಂತೆ ನಾಲ್ಕು ಗೀತೆಗಳು ಆಂಗ್ಲ ಭಾಷೆಯಿಂದ ಭಾಷಾಂತರವಾಗಿದ್ದು ಇದರಲ್ಲಿ 'ಕೇಳು ದೂತರ್ಗಾನವ' Hark the herald Angels sing 'ಓ ಬನ್ನಿರೀ ಈಗ' O Come all ye faithful ಗೀತೆಗಳು ಕ್ರೈಸ್ತ ಜಯಂತಿಯ ಸಮಯದಲ್ಲಿ ದೇವಾಲಯಗಳಲ್ಲಿ ಮತ್ತು ಗೋದಲಿಯ ಮುಂದೆ ನಿಂತು ಹಾಡುವ ಈ ಗೀತೆಗಳು ಆಂಗ್ಲ ಭಾಷೆಯಲ್ಲಿಯೂ ಅತೀ ಜನಪ್ರೀಯವಾಗಿದೆ. ಯೇಸು ದೀನನಾಗಿ ಇಹ ಲೋಕದಲ್ಲಿ ಜನಿಸಿದ ಬಗೆ, ದೇವಪುತ್ರರ ಜನನದಿಂದ ದೂತಗಣ ಹರ್ಷಿಸಿದ ರೀತಿ ಮನೋಜ್ಞವಾಗಿ ವರ್ಣಿತವಾಗಿದೆ.

ಬೆತ್ಲಹೇಮಿಗೆ ಬಂದು ಅಲ್ಲಿ ಜನಿಸಿದ ರಾಜಾಧಿರಾಜರಾದ ಕ್ರಿಸ್ತನನ್ನು ನಮಸ್ಕರಿಸಿ ಆರಾಧಿಸುವಂತೆ ಭಕ್ತಾದಿಗಳನ್ನು ಕವಿಯು ಆಹ್ವಾನಿಸುತ್ತಾರೆ ಈ ಗೀತೆಯಲ್ಲಿ.

ಕೇಳು ದೂತರ್ಗಾನವ;	ಈಗ ಹುಟ್ಟಿದಾತನು
ಘನರಾಜ ಹುಟ್ಟಿದ	ಪರಲೋಕದರಸು:
'ಸ್ವರ್ಗದಲ್ಲಿ ಮಹಿಮೆ	ಮೇಲಿನಿಂದ ಇಳಿದು
ಭೂಮಿಯಲ್ಲಿ ಕುರಣೆ'	ನರನಾಗಿ ಬಂದನು;
ಎಲ್ಲಾ ಜನ ಹರ್ಷಿಸಿ	ಪ್ರೀತಿಯಿಂದ ತನ್ನನ್ನು
ದೂತರ್ಕೂಡ ಹಾಡು;	ದೀನಮಾಡಿಕೊಂಡನು
ಬೇತ್ಲಹೇಮಿನೊಳು	ದೇವರ ಕುಮಾರನು;
ಪರಂಜ್ಯೋತಿ ತೋರಿದೆ	ಇಲ್ಲಿ ವಾಸಿಸಿದನು

ಕನ್ನಡ ಗೀತೆಗಳು, ಗೀತೆ–೩೫

ಈ ಗೀತೆಯ ಆಧಾರ ವಾಕ್ಯ 'ಫಕ್ಕನೇ ದೂತನ ಸಂಗಡ ....' ಎಂದು ದೇವರನ್ನು ಕೊಂಡಾಡುತ್ತಾ ಹೇಳಿದರು (ಲೂಕ ೨:೧೩). ಇದನ್ನು ಬರೆದವರು ಘನ ಚಾರ್ಲ್ಸ್ ವೆಸ್ಲಿ ಬೋಧಕರು. ಈ ಗೀತೆಯು ೧೭೩೯ರಲ್ಲಿ ರಚಿತವಾಯಿತು. ಇವರು ರಚಿಸಿದ ಸುಮಾರು ೬೦೦೦ ಗೀತೆಗಳಲ್ಲಿ ಇದು ಒಂದಾಗಿದೆ. ಇಲ್ಲಿ ಕವಿಯು ಭಕ್ತರನ್ನು 'ಕೇಳಿರಿ' ಎಂಬುದಾಗಿ ಕೂಗಿ ಅನಂತರ ಅವರು ಕೇಳಬೇಕಾದ ವಿಷಯವನ್ನು ಉಲ್ಲೇಖಿಸಿ 'ಎಲ್ಲಾ ಜನ ಹರ್ಷಿಸಿ, ದೂತರ ಕೂಡ ಹಾಡಲಿ' ಎಂದು ಗೀತಗಾರನು ಕರೆಯುತ್ತಾನೆ. ಗೀತಗಾರ ಈ ಸಂಗೀತವನ್ನು ರಚಿಸುವಾಗ ಆತನ ಮನಸ್ಸಿನಲ್ಲಿ ಕೆಲವು ವೇದವಾಕ್ಯಗಳು ನೆನಪಿಗೆ ಬಂದಿರಬೇಕು. 'ಆತನು ಐಶ್ವರ್ಯವಂತನಾಗಿದ್ದು ತಾನು ಬಡತನದಲ್ಲಿ ಸೇರುವುದರಿಂದ ನೀವು ಐಶ್ವರ್ಯವಂತರಾಗಬೇಕೆಂದು ನಿಮಗೋಸ್ಕರ ಬಡವನಾದನು (೨ ಕೋರಿಂಥ ೮–೯). ಆತನು ದೇವ ಸ್ವರೂಪನಾಗಿದ್ದರು ದೇವರಿಗೆ ಸರಿಸಮನನಾಗಿರುವೆನೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲನು ಎಂದೆಣಿಸಿ, ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು (ಫಿಲಿಪ್ ೨:೬–೧೧). 'ಆ ವಾಕ್ಯವೆಂಬಾತನು ನರಾವತಾರವೆತ್ತಿ ನಮ್ಮ ಮಧ್ಯದಲ್ಲಿ ವಾಸ ಮಾಡಿದನು' (ಯೋಹಾನ ೧:೧೪).

ಮೂರನೇ ಚರಣದಲ್ಲಿ ಕವಿಯು ದೀನಾವತಾರ ಎತ್ತಿದ ಯೇಸುಸ್ವಾಮಿಯನ್ನು ನಾನಾ ರೀತಿಯಲ್ಲಿ ಸಂಬೋಧಿಸಿ ವಂದಿಸುತ್ತಾರೆ. ಮಹತ್ವದರಸಾ, ಸರ್ವಲೋಕರಕ್ಷಕಾ, ಸಮಾಧಾನಗುರುವೇ, ನೀತಿಸೂರ್ಯಕ್ರಿಸ್ತನೇ, ಮನಃಶಾಂತಿ ಹುಟ್ಟಿಸಿ ಮೋಕ್ಷಾನಂದ ತಂದಿದ್ದೀ ನಮಸ್ಕಾರ ಯೇಸುವೇ ನಿತ್ಯಮಾನ ನಿನಗೆ ಉಂಟಾಗಲಿ ಎಂಬುದೇ.

ಅಂದು ದೂತರು ಕುರುಬರಿಗೆ ಕಾಣಿಸಿಕೊಂಡು ಹಾಡಿದ ಗೀತದಲ್ಲೂ ಸಾರಿದ ಸುವಾರ್ತೆಯಲ್ಲೂ

ಹುಟ್ಟಿದ ಮಗುವು ಘನರಾಜನು ರಾಜಾಧಿರಾಜನು ಮಾತ್ರವಲ್ಲದೇ ಮಾನವ ಕೋಟಿಯನ್ನು ರಕ್ಷಿಸಲು ಬಂದವರೆಂದು, ಸಮಾಧಾನವನ್ನು ಸಾರಿದ್ದು ಮಾತ್ರವಲ್ಲದೇ ಸಮಾಧಾನ ಪುರುಷನು ತಾನಾಗಿಯೇ ಆಗಿದ್ದು ಪಾಪಾಂಧಕಾರದಲ್ಲಿ ಪ್ರಕಾಶಿಸುವ ಪಾಪಿಗೆ ತನ್ನ ಪಾಪಗಳನ್ನು ತೋರಿಸಿಕೊಡುವ ನೀತಿಸೂರ್ಯನಾಗಿಯೂ ಅಶಾಂತತೆಯಿಂದ ಕೂಡಿದ ಮಾನವರಿಗೆಲ್ಲಾ ಮನಃಶಾಂತಿಯನ್ನು ಹುಟ್ಟಿಸುವವನು ತನ್ಮೂಲಕ ಮೋಕ್ಷಾನಂದವನ್ನು ಕೊಡುವ ಪರಮ ಗುರುವಾಗಿಯೂ ಇದ್ದಾನೆಂಬ ವಿಷಯಗಳು ಸ್ಪಷ್ಟವಾಗಿದೆ. ಅಮೂಲ್ಯವಾದ ಮತ್ತು ಅರ್ಥ ಗರ್ಭಿತವಾದ ಮಾತುಗಳಿಂದ ಒಳಗೂಡಿದ ಈ ಸಂಗೀತಕ್ಕೆ ತಕ್ಕ ರಾಗವೂ ಇದೆ.

'ಓ ಬನ್ನಿರಿ ಈಗ' ಎಂಬ ಗೀತೆಯಲ್ಲಿ ಗೀತಗಾರ ಯೇಸುವಿನ ಜನನದ ವಿಷಯದಲ್ಲಿ ಮೂರು ಪಂಡಿತರು ಮೂರು ದಿಕ್ಕುಗಳಿಂದ ಬಂದು ಆರಾಧಿಸಿದಂತೆ ಯೇಸುವನ್ನು ಆರಾಧಿಸಲು ಬನ್ನಿ ಎಂದು ಕೇಳಿಕೊಂಡಿದ್ದಾರೆ. ಇಂಗ್ಲೀಷಿನಲ್ಲಿರುವ ನಾಲ್ಕನೇ ಚರಣವು ಕನ್ನಡ ಭಾಷಾಂತರದಲ್ಲಿ ಮೂರನೇ ಚರಣದೊಂದಿಗೆ ಬೆರಿಕೆಯಾಗಿರುತ್ತದೆ. ಇಂಗ್ಲೀಷ್ ಸಂಗೀತದ ಮೂರನೇ ಚರಣದಲ್ಲಿ ಕವಿಯು ಪರಲೋಕದ ಸೈನ್ಯದವರನ್ನು ಆರಾಧಿಸುವಂತೆ ಕರೆಯುತ್ತಾರೆ.

ಓ ದೂತರ ಸೈನ್ಯ
ನಮ್ಮೊಂದಿಗೆ ಕೂಡ
ಸುರಾಗವನ್ನೆತ್ತಿ ಸಂಭ್ರಮಿಸಿರಿ
ಈ ರಕ್ಷಕನನ್ನು
ಈ ಭೂಪತಿಯನ್ನು
ಆರಾಧನೆ ಮಾಡಿ
ಶ್ರೇಷ್ಠಾತ್ಮಗಳೇ!

ಕನ್ನಡ ಸಂಗೀತಗಳು, ಗೀತೆ-೩೬

ಈ ಗೀತೆಯ ಆಧಾರ ವಾಕ್ಯ "ಆ ಕುರುಬರು ತಾವು ಈಗಾಗಲೇ ಬೆತ್ಲಹೇಮಿಗೆ ಹೋಗಿ ಕರ್ತನು ನಮಗೆ ತಿಳಿಯಪಡಿಸಿದ ಈ ಸಂಗತಿಯನ್ನು ನೋಡೋಣ ನಡೆಯಿರಿ."[೨೩] ಎಂಬುದಾಗಿದೆ. "ಈ ಸಂಗೀತವು ಲ್ಯಾಟಿನ್ ಭಾಷೆಯಲ್ಲಿ ರಚಿತವಾಗಿದೆ. ಇದನ್ನು ಕ್ಯಾನನ್ ಫ್ರೆಡರಿಕ್ ಓಕ್ಲೆ ಎಂಬುವರು ಆಂಗ್ಲ ಭಾಷೆಗೆ ಪರಿವರ್ತಿಸಿದರು. ಇವರು ೧೮೦೨ರಲ್ಲಿ ಹುಟ್ಟಿ ಆಕ್ಸ್‌ಫರ್ಡ್‌ನಲ್ಲಿದ್ದ Christ Church ಎಂಬಲ್ಲಿ ವ್ಯಾಸಂಗ ಮಾಡಿದರು. ಕಾಲಾನಂತರ ೧೮೨೮ರಿಂದ ೧೮೩೯ರವರೆಗೆ ಸಭೆಯಲ್ಲಿ ದೊಡ್ಡ ಉದ್ಯೋಗದಲ್ಲಿದ್ದು ೧೮೪೫ರಲ್ಲಿ ರೋಮನ್ ಸಭೆಗೆ ಸೇರಿಕೊಂಡರು. ಆದರೂ ಅನೇಕ ವರ್ಷಗಳು West Minister ನಲ್ಲಿನ ಬಡತನ ಮಧ್ಯದಲ್ಲಿದ್ದುಕೊಂಡು ಅವರಿಗೆ ಸೇವೆ ಮಾಡುತ್ತಿದ್ದು ತನ್ನ ೭೮ನೇ ಪ್ರಾಯದಲ್ಲಿ ೧೮೮೦ರಲ್ಲಿ

ಕಾಲವಾದರು."[೨೪]

ಯೇಸುವಿನ ಯಾತನೆಗೆ ಸಂಬಂಧಿಸಿದ ಗೀತೆಗಳು: ಯೇಸುವಿನ ಉಪದೇಶ, ತತ್ವಬೋಧನೆ ಇಹಲೋಕದ ಜನತೆಗೆ ಅಂಗೀಕರಿಸಲು ಅಸಾಧ್ಯವಾದ ಸಂಗತಿಯಾಗಿತ್ತು. ಆತನನ್ನು ಹಿಂಸಿಸಿ ಶಿಲುಬೆಗೆ ಹಾಕಿದ ಕ್ರೂರಘಟನೆಯನ್ನು ರೈಸ್ ತನ್ನ 'ಕಣ್ಣೆತ್ತಿ ಕ್ರೂಜೆಯನ್ನು' ಎಂಬ ಗೀತೆಯಲ್ಲಿ ಭಾವಪೂರ್ಣವಾಗಿ ಹಿಡಿದಿಟ್ಟಿದ್ದಾರೆ. Come to the blood stained tree ಎಂಬ ಗೀತೆಯ ಭಾಷಾಂತರವಾಗಿದೆ. ಯೇಸು ತನ್ನನ್ನು ಹಿಂಸಿಸಿದವರನ್ನು ಶಪಿಸದೆ ಅವರಿಗಾಗಿಯೂ ತನ್ನ ಪ್ರಾಣನೀಗಿದ ಇಂತಹ ಮಹಾಗುಣ ಯೇಸುವಿನಲ್ಲಿತ್ತು.

ಕಣ್ಣೆತ್ತಿ ಕ್ರೂಜೆಯನ್ನು
ಪಾಪಾತ್ಮ ದೃಷ್ಟಿಸು
ಸ್ವಾಮಿಯ ಪ್ರೀತಿಯನ್ನು
ಎಷ್ಟೆಂದು ಧ್ಯಾನಿಸು

ಆ ಶ್ರಮ ನಿನಗಾಗಿ
ಕ್ರಿಸ್ತೇಸು ತಾಳಿದ
ನಿನ್ನ ಆಶ್ರಮಕ್ಕಾಗಿ
ಸ್ವ ರಕ್ತ ಚೆಲ್ಲಿದ

ಕನ್ನಡ ಸಂಗೀತಗಳು, ಗೀತೆ–೯೬

ಕ್ರೂಜೆ, ಶಿಲುಬೆ ಸಮನಾರ್ಥಕ ಪದಗಳು. ಇದು ಸಿರಿಯಕ್ ಭಾಷೆಯ 'ಶ್ಲಿಬೋ'ದಿಂದ ಬಂದಿದೆ. ಶಿಲುಬೆಯೆಂದರೆ ಉದ್ದಕ್ಕೆ ಮತ್ತು ಅಡ್ಡಕ್ಕೆ ಇಟ್ಟು ಕಟ್ಟಿದ + ಆಕಾರಲ್ಲಿ ದಿಮ್ಮಿಯಿಂದ ಮಾಡಿದ ವಸ್ತು. ಇದು ಬಹಳ ಭಾರವಾದದ್ದು, ಹೊರಲು ಕಷ್ಟವಾದದ್ದು, ಶಿಲುಬೆಯ ಶಿಕ್ಷೆಯನ್ನು ರೋಮನ್ನರು ದಂಗೆಯೆದ್ದವರಿಗೆ, ಕ್ರಾಂತಿಕಾರಿಗಳಿಗೆ, ಗುಲಾಮರಿಗೆ ರೋಮ್‌ಪ್ರಜೆಗಳಲ್ಲದವರಿಗೆ ವಿಧಿಸುತ್ತಿದ್ದರು. ಯೆಹೂದ್ಯ ಇತಿಹಾಸಗಾರನು ಹೇಳುವ ಪ್ರಕಾರ ಜೆರುಸಲೇಮನ್ನು ಸ್ವಾಧೀನಪಡಿಸಿಕೊಳ್ಳುವ ಸಮಯದಲ್ಲಿ ಸಾವಿರಾರು ಯೆಹೂದ್ಯರನ್ನು ಶಿಲುಬೆಗಳ ಮೇಲೆ ಜಡಿಯಲಾಗಿತ್ತು. ಆಪಾದಿತನು ಶಿಲುಬೆಯಲ್ಲಿ ಅಡ್ಡವಾದ ಮರದ ತುಂಡನ್ನು ಹೊತ್ತು ಸಾಗಬೇಕಿತ್ತು. ಲಂಬವಾದ ಮರದ ತುಂಡನ್ನು ಮೊದಲೇ ನೆಲದಲ್ಲಿ ನೆಡಲಾಗಿತ್ತು. ಆತ ಶಿಲುಬೆಗೆ ಏರಿಸಲ್ಪಡುವ ಸ್ಥಳವನ್ನು ಸೇರಿದಾಗ ಆತನ ವಸ್ತ್ರಗಳನ್ನು ಸುಲಿಯಲಾಗುತ್ತಿತ್ತು ಮತ್ತು ಕೈಗಳನ್ನು ಅಡ್ಡಗಲವಾದ ಮರದ ತುಂಡಿಗೆ ಹಗ್ಗದಿಂದ ಬಿಗಿಯಲಾಗುತ್ತಿತ್ತು, ಆತನ ತೊಡೆಗಳ ಕೆಳಗೆ ಮರದ ತುಂಡವನ್ನು ಆಧಾರಕ್ಕೆ ಇಡಲಾಗುತ್ತಿತ್ತು, ಕಾಲುಗಳನ್ನು ಒಳಗೆ ತಿರುಗಿಸಿ ಮೊಳೆಗಳಿಂದ ಜಡಿಯಲಾಗುತ್ತಿತ್ತು. ದೇಹದ ಭಾಗಗಳಿಗೆ ರಕ್ತವು ಸರಿಯಾಗಿ ಹರಿಯಬಿಡದಂತೆ ಹೀಗೆಲ್ಲಾ ಮಾಡುತ್ತಿದ್ದರು. ನೀರಿನ ದಾಹದಿಂದ ಸುಡುಬಿಸಿಲಿನ ತಾಪದಿಂದ ಈ ಖೈದಿಗಳು ಶಿಲುಬೆಯ ಮೇಲೆ ಪರಿತಪಿಸುತ್ತಿದ್ದರು. ಕೆಲವು ಬಾರಿ ಶಿಲುಬೆಯ ಮೇಲೆ ಜಡಿಯಲ್ಪಟ್ಟ ಕೈದಿಗಳು ಸುಮಾರು ತಾಸುಗಳವರೆಗೆ ಈ ಘೋರವಾದ ನೋಟವನ್ನು ಅನುಭವಿಸುತ್ತಿದ್ದರು.

ಯೇಸುವು ಮನುಜಕುಲವನ್ನು ಎಷ್ಟು ಪ್ರೀತಿಸಿದರೆಂದರೆ ಮಾನವರಾಗಿ ಜನಿಸಿ ನಮ್ಮ ರಕ್ಷಣೆಗಾಗಿ ದೇವರಇಚ್ಛೆಯಂತೆ ವಿಧೇಯರಾಗಿ ನಡೆದು ಶಿಲುಬೆಯಲ್ಲಿ ತಮ್ಮ ಪ್ರಾಣವನ್ನು ಅರ್ಪಿಸಿದರು. ಇಂತಹ ಕ್ಷಮಾಪ್ರೀತಿಗೆ ಮೂರ್ತಿಯಾದ ಯೇಸುವಿನ ಶಿಲುಬೆಮರಣವನ್ನು ಧ್ಯಾನಿಸಿ ಸನ್ಮಾರ್ಗದಲ್ಲಿ ನಡೆ ಎಂದು

[illegible]

ಗೀತಗಾರ ಕರೆ ನೀಡುತ್ತಿದ್ದಾನೆ.

ಯೇಸುವಿನ ತ್ಯಾಗವನ್ನು ವರ್ಣಿಸುವ ಸಾಲುಗಳು 'ಪಾಪ ಹ್ಯಾಗೆ ಹೋದಿತು' ಎಂಬ ಗೀತೆಯಲ್ಲಿ ಮೂಡಿಬಂದಿದೆ. ಇದು Nothing but blood of Jesus ಎಂಬ ಗೀತೆಯ ಭಾಷಾಂತರವಾಗಿದೆ. ಸ್ವಪ್ರಾಣವನ್ನು ಮಾನವಕೋಟಿಯ ಪಾಪಪರಿಹಾರಕ್ಕಾಗಿ ನೀಡಿದ ಯೇಸುವಿನ ತ್ಯಾಗಜೀವನವನ್ನು ಸಂಗೀತಗಾರ ಶ್ರೇಷ್ಟವಾದ ಯಜ್ಞ ಎಂದು ಹೇಳುತ್ತಾ ಈ ಯಜ್ಞವು ನಮ್ಮನ್ನು ಶುಚಿಮಾಡುವಂತದ್ದು ಎಂದು ತನ್ನ ವಿಶ್ವಾಸವನ್ನು ವ್ಯಕ್ತಪಡಿಸುತ್ತಾನೆ.

ಪಾಪ ಹೇಗೆ ಹೋದೀತು?	ಓ ದಿವ್ಯ ಕರ್ತನೇ
ಯೇಸು ಪರಿಹರಿಸಬಲ್ಲ:	ಸ್ವ ಪ್ರಾಣದಾನಿಯೇ
ಶುದ್ಧಿ ಹೇಗೆ ಸಿಕ್ಕೀತು?	ನಿನ್ ಯಜ್ಞ ಬಿಟ್ಟರೆ
ಯೇಸು ಶುದ್ಧಮಾಡಬಲ್ಲ	ಬೇರೆ ಗತಿ ಎಲ್ಲೂ ಇಲ್ಲ

ಕನ್ನಡ ಸಂಗೀತಗಳು, ಗೀತೆ–೨೫೧

ಯಜ್ಞ: ಹಳೆಒಡಂಬಡಿಕೆಯಲ್ಲಿಯೂ ಹೊಸಒಡಂಬಡಿಕೆಯಲ್ಲಿಯೂ ಯಜ್ಞವು ಒಂದು ವಿಶೇಷವಾದ ಕಾರ್ಯವೆಂದು ಭಾವಿಸಲಾಗಿದೆ. ಹಳೆಒಡಂಬಡಿಕೆಯಲ್ಲಿ ಯಜ್ಞವನ್ನರ್ಪಿಸುವುದು ದೇವಾರಾಧನೆಯಲ್ಲಿ ಒಂದು ಪ್ರಾಮುಖ್ಯವಾದ ಭಾಗವಾಗಿದ್ದಿತ್ತು. ಹೊಸಒಡಂಬಡಿಕೆಯಲ್ಲಿ ಯೇಸು ಮಾಡಿದ ರಕ್ಷಣಾಕಾರ್ಯವು ಯಜ್ಞವೆಂದೇ ಭಾವಿಸಲಾಗಿದೆ.

ಕ್ರೈಸ್ತ ಬೋಧನೆ: ವಿಶ್ವಾಸಿಗಳು ಅರ್ಪಿಸಬೇಕಾದ ಯಜ್ಞಗಳು ಯಾವುವೆಂದರೆ ಆತ್ಮೀಯ ಯಜ್ಞಗಳೇ (೧. ಪೇತ್ರ ೨–೫) ದೃಷ್ಟಾಂತವಾಗಿ,

೧. ತಮ್ಮ ದೇಹಗಳು (ರೋಮ ೧೨–೧)

೨. ತಮ್ಮ ಮೂಲಕವಾಗಿ ಗುಣಪಟ್ಟವರು (೧೫–೧೬)

೩. ಸ್ತೋತ್ರವೂ ಪ್ರಾರ್ಥನೆಯು (ಇಬ್ರಿ. ೧೩–೨೩)

೪. ಸತ್ಕಾರ್ಯಗಳು (ಇಬ್ರಿ ೧೩–೧೬)

೫. ನಂಬಿಕೆಯೂ ಸೇವೆಯೇ (ಫಿಲಿ ೨–೫)

ಪುನರುತ್ಥಾನಕ್ಕೆ ಸಂಬಂಧಿಸಿದ ಗೀತೆಗಳು: ಯೇಸುವಿನ ಪುನುರುತ್ಥಾನಕ್ಕೆ ಸಂಬಂಧಿಸಿದ ಗೀತೆಯೇ 'ಯೇಸು ಕ್ರಿಸ್ತನೆದ್ದನು' ಎಂಬುದು. ಈ ಗೀತೆಯು Jesus Christ is risen today' ಎಂಬ ರಾಗದಲ್ಲಿದೆ.

ಮರಣದಿಂದೆದ್ದ ಯೇಸುವು ಲೋಕರಕ್ಷಕ ಆತನು ನಮ್ಮ ಅರಸು ಆತನಿಗೆ ಸ್ತುತಿಸ್ತೋತ್ರ ಅರ್ಪಿಸಿ ಎಂದು ಗೀತಗಾರ ಹೇಳುವ ಬಗೆ ವಿಶಿಷ್ಟರೀತಿಯಲ್ಲಿ ಮೂಡಿಬಂದಿದೆ.

ಯೇಸು ಕ್ರಿಸ್ತನೆದ್ದನು ಹಲ್ಲೆಲೂಯ!

ಮೃತ್ಯು ಸೋತು ಹೋಯಿತು ಹಲ್ಲೆಲೂಯ!

ಜೀವಿ ಸಾವಿಂದದ್ದುಟ್ಟಿದೆ; ಹಲ್ಲೆಲೂಯ!

ಜಯಪ್ರದ ಕ್ರಿಸ್ತಿಗೆ ಹಲ್ಲೆಲೂಯ!

ಕನ್ನಡ ಸಂಗೀತಗಳು, ಗೀತೆ-೪೨

ಹಲ್ಲೆಲೂಯ: ಇದು ಹೀಬ್ರು ಭಾಷೆಯ ಪದ. ಇದರ ಅರ್ಥ ಸ್ತೋತ್ರ ಮಾಡುವುದು.[೨೫] ನಾವು ಅಪೋಸ್ತೊಲರ ಕೃತ್ಯಗಳ ಮೊದಲನೆಯ ಕೆಲವು ಅಧ್ಯಾಯಗಳನ್ನು ನೋಡಿದರೆ ಸ್ತೋತ್ರ ಮಾಡುವುದು. ಆದಿ ಕ್ರೈಸ್ತ ಸಭೆಯವರಲ್ಲಿ ಎಷ್ಟು ಹೆಚ್ಚಾಗಿದ್ದಿತೆಂಬುದು ನಮಗೆ ಕಂಡು ಬರುವುದು. ಅಪೋಸ್ತೊಲರು ಪವಿತ್ರಾತ್ಮರಿಗಾಗಿ ಕಾದುಕೊಂಡಿದ್ದಾಗ ಯಾವಾಗಲು ದೇವರನ್ನು ಹಾಡುತ್ತಿದ್ದರು. ದೇವಾಲಯದಲ್ಲಿ ಹಾಡುತ್ತಿದ್ದ ಪದ್ದತಿಯನ್ನು ನೋಡಿ ಆದಿಕ್ರೈಸ್ತರು ಅದನು ಅನುಸರಿಸುತ್ತಾ ಬಂದರೆಂಬ ವಿಷಯದಲ್ಲಿ ಅನುಮಾನವೇ ಇರುವುದಿಲ್ಲ.

ಹಲ್ಲಿಲೂಯ (೧೮೯೮), ಹಲ್ಲೆಲೂಯ (೧೯೨೯ ಮತ್ತು ೨೦೦೭)

ಸಾವಿಂಧುಟ್ಟಿದೆ (೧೮೯೮). ಸಾವಿಂದ್ದುಟ್ಟಿದೆ (೧೯೨೯ ಮತ್ತು ೨೦೦೭).

೧೮೯೮ರ ಗೀತಪುಸ್ತಕದಲ್ಲಿ ಈ ಗೀತೆಯ ಕೊನೆಗೆ 'ಆಮೆನ್' ಎಂದಿದೆ. ಆದರೆ ಅನಂತರದ ಮುದ್ರಣದಲ್ಲಿ ಇಲ್ಲವಾಗಿದೆ. ಕಾಲದಿಂದ ಕಾಲಕ್ಕೆ ಶಿಷ್ಟಭಾಷೆಯ ಬಳಕೆಯಾಗಿರುವುದನ್ನು ಕಾಣುತ್ತೇವೆ. ಮಹಾಪ್ರಾಣಕ್ಷರಕ್ಕೆ ಬದಲಿಗೆ 'ಹ' ಕಾರವನ್ನು ಬಳಸಿರುವುದನ್ನು ಕಾಣುತ್ತೇವೆ. ಹಾಡುವ ಸೌಲಭ್ಯಕ್ಕಾಗಿ ಪದಗಳನ್ನು ಮಿತವಾಗಿ ಬಳಸಲಾಗಿದೆ.

ಗೀತೆಯಲ್ಲಿ ಪಲ್ಲವಿಯ ಪುನರುಕ್ತಿಯ ಮೂಲಕ ಹಾಡಿನ ಮುಖ್ಯ ಸಂದೇಶ ಮತ್ತೆ ಕಿವಿಗೆ ಬೀಳುತ್ತದೆ. ಇದರಿಂದ ಹಾಡುಗಳ ಉಳಿದಭಾಗ ಮರೆತರೂ ಪಲ್ಲವಿ, ಅನುಪಲ್ಲವಿಗಳು ಮಾತ್ರ ನೆನಪಿನಲ್ಲಿ ನಿಲ್ಲುತ್ತದೆ. ಇದಕ್ಕೆ ರೈಸ್‌ರವರ 'ಓ ಒಳ್ಳೆಸುದ್ದಿ ರಕ್ಷಣೆ' ಎಂಬ ಗೀತೆ ನಿದರ್ಶನವಾಗಿದೆ. ಇದು Salvation o joyful sound ಎಂಬ ಆಂಗ್ಲ ಗೀತೆಯ ಭಾಷಾಂತರವಾಗಿದ್ದು ಇದು Ashely ಎಂಬ ರಾಗದಲ್ಲಿದೆ. ಪುನರಾವರ್ತನೆಯಾದ ಸಾಲುಗಳು ಇಂತಿವೆ.

ಘನ, ಮಾನ, ಸ್ತುತಿ, ತ್ರಾಣ

ಕುರಿಮರಿಗಾಗಲೆಂದೂ

ಯೇಸು ನಮ್ಮ ರಕ್ಷಕಾದ

ಹಲ್ಲಿಲೂಯ ! ಸ್ತುತಿಸಿರಿ.

ಕನ್ನಡ ಸಂಗೀತಗಳು, ಗೀತೆ-೪೭

ಅರುಣೋದಯ ಪತ್ರಿಕೆಯಲ್ಲಿನ ಗೀತೆ: ಯೇಸುವಿನ ಪುನರುತ್ಥಾನಕ್ಕೆ ಸಂಬಂದಿಸಿದ ಗೀತೆ, ದೇಶೀ ಛಂದಸ್ಸಿನಲ್ಲಿ ಅರುಣೋದಯ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಕ್ರಿಸ್ತನ ಎರಡನೇ ಬರುವಿಕೆ

(ರಾಗ ಮುಖಾರಿ, ಆದಿತಾಳ)

ಮೇಘಾರೂಢನಾಗಿ ಹೋದ ಯೇಸು ಕ್ರಿಸ್ತನು । ತಿರುಗಿ
ಮೇಘಾರೂಢನಾಗಿ ಲೋಕಕಿಳಿದು ಬರುವನು ॥ ಮೇಘಾ–
ದೂತಸೈನ್ಯ ಸಹಿತವಾಗಿ ಪ್ರಭು ಬರುವನು। ಮಹಾ
ನೀತಿ ನ್ಯಾಯದಿಂದಲವನು ತೀರ್ಪುಕೊಡುವನು ॥ ಮೇಘಾ–
ಕೊಳಿವಿ ಶಬ್ದದಿಂದ ದೂತರಾ (ರ್ಸಾ)ರಿ ಬರುವರು । ಶಬ್ದ
ಕೇಳಿ ಸತ್ತ ಜನ್ಯರೆಲ್ಲರೆದ್ದು ನಿಲ್ವರು ॥ ಮೇಘಾ–
ನಿಂತ ಜನ್ಯರೆಲ್ಲರೆದ್ದು ದಿವದೂತರು। ಕುರುಬ
ರಂತೆ ಹೊರಟು ಭಾಗವಾಗಿ ವಿಂಗಡಿಸುವರು ॥ ಮೇಘಾ–

ಶ್ರೀನಿವಾಸ ಹಾವನೂರ, ಹೊಸಗನ್ನಡದ ಅರುಣೋದಯ, ೧೯೭೪,
(ಅರುಣೋದಯ ಸಂಚಿಕೆ.೨ ಪುಟ.೬೨ ವರ್ಷ ೧೮೬೩).

ದ್ವಿತೀಯಪ್ರಾಸದಿಂದ ಕೂಡಿದ ಈ ಪದ್ಯ ಕಾವ್ಯಮಯಾಗಿದೆ. ಗೇಯತೆ ಇದರ ಇನ್ನೊಂದು ಗುಣಧರ್ಮವಾಗಿದೆ. ಗೀತೆಯ ವೈಶಿಷ್ಟವನ್ನು ವರ್ಣಿಸಲು ಮುಖಾರಿ ರಾಗದಲ್ಲಿ ಬರೆಯಲಾಗಿದೆ.

ಮತ್ತಾಯನು ಬರೆದ ಶುಭಸಂದೇಶದ ೨೪ನೇ ಅಧ್ಯಾಯದ ೨೯ರಿಂದ ೩೧ರವರೆಗಿನ ವಾಕ್ಯಗಳನ್ನು ಆದರಿಸಿ ಈ ಗೀತೆ ರಚಿತವಾಗಿರುವುದನ್ನು ಕಾಣುತ್ತೇವೆ.

ಲಂಡನ್ ಮಿಶನರಿಗಳು ರಚಿಸಿದ ಗೀತೆಗಳನ್ನು ಬಾಸೆಲ್ ಮಿಶನ್ ಗೀತಪುಸ್ತಕದಲ್ಲಿ ಕಾಣುತ್ತೇವೆ. ಆದರೆ ಹೀಗೆ ಗೀತೆಗಳನ್ನು ಬಾಸೆಲ್ ಮಿಶನ್ ಬಳಸಿಕೊಳ್ಳುವಾಗ ಸ್ವಲ್ಪಮಟ್ಟಿನ ವ್ಯತ್ಯಾಸವನ್ನು ಮಾಡಿ ಬಳಸಿದ್ದಾರೆ.

ಲಂಡನ್ ಮಿಶನ್ ಗೀತೆ (ಬಿ. ರೈಸ್)	**ಬಾಸೆಲ್ ಮಿಶನ್ ಗೀತೆ**
ನಿನ್ನ ಹೊರ್ತು ನನ್ನ ಮನ	ನಿನ್ನ ಹೊರ್ತು ನನ್ನ ಪ್ರಾಣ
ಭೂಮಿಗ್ಹತ್ತಿಕೊಳ್ಳುತ್ತೆ;	ಭೂಮಿಗಂಟಿಕೊಳ್ಳುತೆ;
ನಿನ್ನ ಕೃಪೆ ಹೊಂದಿದಾಗ	ನಿನ್ನ ಕೃಪೆ ಹೊಂದಿದಾಗ
ಮೇಲಕ್ಕೇರಿ ಹೋಗುತ್ತೆ:	ಮೇಲಕೇರಿ ಹೋಗುತೆ.
ದಿವ್ಯ ಆತ್ಮ	ದಿವ್ಯ ಆತ್ಮ
ಬಾ ನಮ್ಮೊಳಗೀಗಲೇ.	ಬಾ ನಮ್ಮೆಲ್ಲರೊಳಗೆ!
ಕನ್ನಡ ಸಂಗೀತಗಳು, ಗೀತೆ– ೧೧೯.	ಕನ್ನಡ ಗೀತೆಗಳು, ಗೀತೆ–೧೧೩.

ಲಂಡನ್ ಮಿಶನ್ ಗೀತೆಯಲ್ಲಿನ ಮನ, ಭೂಮಿಗ್ಹತ್ತಿಕೊಳ್ಳುತ್ತೆ, ನಮ್ಮೊಳಗೀಗಲೇ ಎಂಬ ಪದಗಳು ಕ್ರಮವಾಗಿ ಪ್ರಾಣ, ಭೂಮಿಗಂಟಿಕೊಳ್ಳುತೆ, ನಮ್ಮೆಲ್ಲರೊಳಗೆ ಎಂದು ಬದಲಾಗಿದೆ. ಲಂಡನ್ ಮಿಶನರಿಗಳು ಬೆಂಗಳೂರು, ಮೈಸೂರು ಭಾಗದಲ್ಲಿನ ಕನ್ನಡವನ್ನು ಬಳಸಿದರೆ ಬಾಸೆಲ್ ಮಿಶನರಿಗಳು ಮಂಗಳೂರು ಭಾಗದ ಕನ್ನಡವನ್ನು ಬಳಸಿ ಅದಕ್ಕೆ ಹೊಂದುವಂತೆ ಗೀತೆಗಳನ್ನು ರಚಿಸಿದ್ದಾರೆ.

ಛಂದಸ್ಸು: ಕ್ರೈಸ್ತ ಮಿನಶನರಿಗಳು ಮತಪ್ರಚಾರವನ್ನು ಮಾಡಬೇಕೆಂಬ ಉದ್ದೇಶವನ್ನುಟ್ಟುಕೊಂಡಿದ್ದರೂ ಕನ್ನಡ ಸಾಹಿತ್ಯವನ್ನು ಬೆಳೆಸಿದರು ಎಂಬುವುದು ನಿಜಸಂಗತಿ. ದೇವಾಲಯಗಳಲ್ಲಿ ಅರಾಧನೆಗಾಗಿ ಮತ್ತು ಬೀದಿಬೋಧನೆಗಾಗಿ ಕನ್ನಡಗೀತೆಗಳ ಅವಶ್ಯಕತೆ ಇದ್ದ ಕಾರಣ ಮಿಶನರಿಗಳು ಜರ್ಮನ್ ಮತ್ತು ಇಂಗ್ಲೀಷ್ ಭಾಷೆಯಲ್ಲಿದ್ದ ದೇವ ಸ್ತೋತ್ರಗಳನ್ನು ಕನ್ನಡಕ್ಕೆ ಅದೇ ಟ್ಯುಟೋನಿಕ್ ಧಾಟಿಯಲ್ಲಿ ಅನುವಾದಿಸಿದ್ದರು. ಯಾವುದೇ ಅನ್ಯ ಭಾಷಾಸಾಹಿತ್ಯ ಇನ್ನೊಂದು ಭಾಷೆಯಲ್ಲಿ ಪ್ರವೇಶಸುವುದಕ್ಕಾಗಿ ಮೊದಲು ಅನುವಾದ ಮಾರ್ಗವನ್ನೇ ಅನುಸರಿಸುತ್ತದೆ. ಇದು ಜಾಗತಿಕ ಸಹಜಕ್ರಿಯೆ. ಹೀಗೆ ಟ್ಯುಟೋನಿಕ್ ಧಾಟಿಯಲ್ಲೇ ಗೀತೆಗಳನ್ನು ರಚಿಸಲು ಪ್ರಾರಂಭಿಸಿದರು.

ಟ್ಯುಟೋನಿಕ್ ಗೀತೆಯ ಒಂದು ಪಾದದಲ್ಲಿ ಇಂತಿಷ್ಟೇ ವರ್ಣಗಳಿರಬೇಕೆಂದು ನಿಯಮವಿದೆ. ಒಂದು ಪದ್ಯದಲ್ಲಿ ಮೂರು, ನಾಲ್ಕು, ಆರು, ಪಾದಗಳಿರುತ್ತವೆ. ಕೆಲವೊಮ್ಮೆ ಎಂಟು ಹತ್ತು ಪಾದಗಳಿರುತ್ತದೆ.

ನಾಲ್ಕು ಪಾದಗಳ ಪದ್ಯದಲ್ಲಿ ಮಾತ್ರ ಲಾಂಗ್ ಮೀಟರ್ (L.M), ಕಾಮನ್ ಮೀಟರ್ (C.M), ಸ್ಮಾಲ್ ಮೀಟರ್ (S.M) ಎಂದು ಮೂರು ಭಾಗಗಳು ಉಂಟು. L.M ದ ನಾಲ್ಕು ಪಾದದಲ್ಲಿ ಕ್ರಮವಾಗಿ ೮.೮.೮.೮. C.M ನಾಲ್ಕು ಪಾದದಲ್ಲಿ ಕ್ರಮವಾಗಿ ೮.೬.೮.೬ ಮತ್ತು S.M ನಾಲ್ಕು ಪಾದದಲ್ಲಿ ಕ್ರಮವಾಗಿ ೬.೬.೮.೬ ವರ್ಣಗಳಿರುತ್ತವೆ.

ಲಾಂಗ್ ಮೀಟರ (L.M) ೮.೮.೮.೮.

ಆನಂದ ಸ್ವರ ಕರ್ತಗೆ
ಎಲ್ಲರು ಎತ್ತಿ ಜನರೇ
ಆಸಕ್ತಿಯಿಂದ ಸೇವಿಸಿ
ವಿನಯ ಜಪ ಮಾಡಿರಿ.

ಯೆಹೋವ ನಮ್ಮ ದೇವರು
ನಿರ್ಮಾಣ ಕರ್ತನಾತನು
ಯೆಹೋವ ನಮ್ಮ ತಂದೆಯು
ಸಂತೋಷಪಡಿರೆಲ್ಲರೂ

ಕನ್ನಡ ಸಂಗೀತಗಳು, ಗೀತೆ-೨೦೨

ಇವು ನಾಲ್ಕು ಪಾದಗಳ ಪದ್ಯಗಳು. ಪ್ರತಿಯೊಂದು ಪಾದದಲ್ಲಿ ೮ ವರ್ಣಗಳಂತೆ ಒಂದು ಪದ್ಯದಲ್ಲಿ ೩೨ ವರ್ಣಗಳಿವೆ.

ಕಾಮನ್ ಮೀಟರ (C.M) ೮.೬.೮.೬

ಯೆಹೋವ ನೀನು ಎಲ್ಲರ
ಕರ್ತಾದಿಕರ್ತನು
ಪ್ರಪಂಚವೆಲ್ಲಾ ನಿನ್ನನ್ನ
ಸ್ತೋತ್ರದತಕ್ಕದ್ದು

ಪ್ರಧಾನ ದೂತರೆಂದಿಗೂ
ಕೊಂಡಾಡುತ್ತಿರ್ಪರು
ಆಕಾಶ ಸೈನ್ಯ ಯಾವತ್ತೂ
ಆರ್ಭಟಿಸುವರು

ಕನ್ನಡ ಸಂಗೀತೆಗಳು, ಗೀತೆ-೨೨೭

ಇವು ನಾಲ್ಕುಪಾದಗಳ ಪದ್ಯಗಳು. ಪದ್ಯದ ಒಂದು ಮತ್ತು ಮೂರನೇ ಪಾದಗಳಲ್ಲಿ ೮ ವರ್ಣ, ೨ ಮತ್ತು ೪ನೇ ಪಾದಗಳಲ್ಲಿ ೬ ವರ್ಣ ಹೀಗೆ ಒಟ್ಟು ೨೮ ವರ್ಣಗಳಿವೆ.

ಸ್ಮಾಲ್ ಮೀಟರ (S.M) ೬.೬.೮.೬

ನನ್ನಾತ್ಮಾ! ಹರ್ಷಿಸು
ದೇವರು ಪ್ರೀತಿಯೇ
ಅತ್ಯಂತ ದೀರ್ಘ ಶಾಂತನು
ಕೃಪಾ ಸಮುದ್ರನೇ

ಆಕಾಶ ಭೂಮಿಗೆ
ಅತ್ಯಂತ ದೂರವೇ
ಪರಾತ್ಪರನ ಕರುಣೆ
ಅಷ್ಟಾಗಿ ಎತ್ತರವೇ

ಕನ್ನಡ ಸಂಗೀತಗಳು, ಗೀತೆ-೧೩

ಇವು ನಾಲ್ಕುಪಾದಗಳ ಪದ್ಯಗಳು. ಪದ್ಯದ ಒಂದನೆಯ, ಎರಡನೆಯ ಮತ್ತು ನಾಲ್ಕನೆಯ ಪಾದಗಳಲ್ಲಿ ೬.೬ ವರ್ಣಗಳು, ಮೂರನೇ ಪಾದದಲ್ಲಿ ೮ ವರ್ಣಗಳಿವೆ. ಒಟ್ಟು ೨೬ ವರ್ಣಗಳು ಒಂದೊಂದು ಪದ್ಯದಲ್ಲಿವೆ. ಈ ಪದ್ಯಗಳನ್ನೆ ದ್ವಿಗುಣಿಸಿಕೊಂಡು ಡಬಲ್ ಕಾಮನ್‌ಮೀಟರ್ (D.C.M), ಡಬಲ್ ಸ್ಮಾಲ್‌ಮೀಟರ್ (D.S.M), ಡಬಲ್ ಲಾಂಗ್‌ಮೀಟರ್ (D.L.M), ಎಂದು ಕರೆಯುತ್ತಾರೆ.

ಡಬಲ್ ಲಾಂಗ್‌ಮೀಟರ್ ೮.೮.೮.೮.೮.೮.೮.೮

ಸು ಕಾಲವೇ! ಸು ಕಾಲವೇ!

ಆನಂದ ದೇವಾರಾಧನೆ

ಪ್ರಪಂಚ ಚಿಂತೆ ಬಿಡುವೆ

ಕೃಪಾಸನ ನಾ ಸೇರುವೆ

ಇಷ್ಟಾರ್ಥ ಹೇಳಿ ತಂದೆಗೆ

ದಿವ್ಯಾಶೀರ್ವಾದ ಬೇಡುವೆ

ಹಾ! ಶುಭಕಾಲವಾಗಿದೆ

ಒಳ್ಳೇದು ದೇವಾರಾಧನೆ

ಕನ್ನಡ ಸಂಗೀತಗಳು, ಗೀತೆಗಳು–೧೯೬

ಇದು ೮ ಪಾದಗಳ ಪದ್ಯ. ಪದ್ಯದ ಪ್ರತಿಯೊಂದು ಪಾದಗಳಲ್ಲಿ ೮ ವರ್ಣಗಳಂತೆ ಒಟ್ಟು ೬೪ ವರ್ಣಗಳಿವೆ.

ಡಬಲ್ ಕಾಮನ್‌ಮೀಟರ್ ೮.೬.೮.೬.೮.೬.೮.೬

ಓ ಬನ್ನಿ. ಹಿರಿಕಿರ್ಯರೇ

ಸುರಾಗವೆತ್ತರಿ

ಹೊಸನ್ನ ಎಂದು ಕ್ರಿಸ್ತಗೆ

ಇಂಪಾಗಿ ಹಾಡಿರಿ

ದೇವಾವತಾರ ಆತನೇ

ಸಂತೋಷಪಡಿರಿ

ರಾಜಾಧಿರಾಜ ಪ್ರಭುವೇ

ಸಾಷ್ಟಾಂಗ ಬೀಳಿರಿ

ಕನ್ನಡ ಸಂಗೀತಗಳು, ಗೀತೆ–೧೧೬

ಇದು ೮ ಪಾದಗಳ ಪದ್ಯ. ಪದ್ಯದ ಪ್ರತಿಯೊಂದು ಪಾದಗಳಲ್ಲಿ ೮,೬ ವರ್ಣಗಳಂತೆ ಒಟ್ಟು ೫೬ ವರ್ಣಗಳಿವೆ.

ಪ್ರಸ್ತಾರ ಸೂಚನೆಯಾಗಿ ಪದ್ಯದ ತಲೆಯ ಮೇಲೆ ಅದರ ಪ್ರತಿಯೊಂದು ಪಾದದಲ್ಲಿರುವ ಅಕ್ಷರಗಳ ಸಂಖ್ಯೆಯ ಸೂಚನೆಯೆಂಬಂತೆ ಅಂಕಿಗಳನ್ನು ಇಡುವ ವಾಡಿಕೆ ಇದೆ.

ಉದಾ:–೮. ೭. ೮. ೭

ಯೇಸು ಕ್ರಿಸ್ತ ನನ್ನ ಜೀವ

ಆತನನ್ನು ನಂಬಿದೆ

ಮನಶಾಂತಿ ನಿತ್ಯಾನಂದ

ಆತನಿಂದ ಸಿಕ್ಕುತ್ತೆ.

ಕನ್ನಡ ಸಂಗೀತೆಗಳು, ಗೀತೆ-೯೦

ದೇಶೀ ಛಂದಸ್ಸಿನಲ್ಲಿ ಗೀತ ರಚನೆ:

೧. ನಿನ್ನ ಪಾಪ
ಪರಿಹಾರ
ಮಾಡಬಲ್ಲ

೨. ಬಾರ್ರೈ, ಬಾರ್ರೈ
ಈ ವಾಗಲೇ ಬಾರ್ರೈ,
ಬಾರ್ರೈ ಈವಾಗಲೇ

೩ ತಡೆ ಮಾಡೆ,
ಬಂದೆ, ಬಂದೆ,
ನಂಬುತ್ತೇನೆ.

೪ ಈಗ. ಈಗ
ಈವಾಗಲೇ ಬಂದು,
ನಂಬುತ್ತೇನೀಗಲೇ

ಕನ್ನಡ ಸಂಗೀತೆಗಳು, ಗೀತೆ-೨೪೧

ಟ್ಯುಟೋನಿಕ್ ಛಂದೋನಿಯಮಕ್ಕೆನುಸರಿಸಿ ಈ ಗೀತೆ ರಚನೆಯಾಗಿದೆಯಾದರೂ ನಮ್ಮ ಪದ್ದತಿಯಂತೆ ಬಾರ್ರೈ ಬಾರ್ರೈ, ಬಂದೆ ಬಂದೆ, ಈಗ ಈಗ ಎಂಬಂತಹ ದ್ವಿರುಕ್ತಿ ಪದಗಳ ಬಳಕೆ. ಸರಳವಾದ ಸಣ್ಣವಾಕ್ಯಗಳು. ಮೃದು ಭಾಷಾನಿರೂಪಣೆ ಇತ್ಯಾದಿಗಳು ಇದರ ವಿದೇಶಿಯತೆಯನ್ನು ಒಂದಿಷ್ಟು ದೂರಮಾಡಿ ದೇಶೀಯತೆಗೆ ಒಗ್ಗಿಸಿಕೊಂಡಿದೆ.

ಬಿ. ರೈಸ್ ರವರ ಗೀತೆಗಳ ವೈಶಿಷ್ಟ್ಯತೆಗಳು:

೧. ಲಂಡನ್ ಮಿಶನರಿಗಳಲ್ಲಿ ಅತಿ ಹೆಚ್ಚಿನ ಗೀತೆಗಳನ್ನು ರಚಿಸಿದ ಕೀರ್ತಿ ಬಿ. ರೈಸ್ ರವರಿಗೆ ಸಲ್ಲುತ್ತದೆ. ಹೆಚ್ಚಿನ ಗೀತೆಗಳನ್ನು ಕ್ರಿಸ್ತನ ಜನನ, ಶ್ರಮ-ಮರಣ, ಬೋಧನೆ, ಪುನರುತ್ಥಾನ ಇವುಗಳ ಕುರಿತಾಗಿ ಒಟ್ಟು ೪೧ ಗೀತೆಗಳಿವೆ.

೨. ಧಾರ್ಮಿಕ ಸಿದ್ಧಾಂತವನ್ನು ಪ್ರತಿಪಾದಿಸುವ ಗೀತೆಗಳಾಗಿದ್ದು ಯೇಸುವಿನ ತತ್ವಗಳನ್ನು ಆತನ ಜೀವನರೀತಿಯನ್ನು ವರ್ಣಿಸಲು ಕ್ರೈಸ್ತ ಧಾರ್ಮಿಕಪದಗಳನ್ನು ಭಾರತೀಕರಣಗೊಳಿಸಿರುವುದು ಗಮನಿಸಬೇಕಾದ ವಿಷಯ. ಉದಾ: ಯಜ್ಞ, ಹಲ್ಲೆಲೂಯ, ಕುರುಬ, ಜ್ಞಾನಸ್ನಾನ, ಯೆಹೋವ, ಬೈಬಲ್ ಇತ್ಯಾದಿ.

೩. ದೈವೀ ಶಕ್ತಿಯಲ್ಲಿ ನಂಬಿಕೆಯಿಡಬೇಕೆಂದು ಪ್ರೇರೇಪಿಸುವ ಗೀತೆಗಳು ಅರ್ಥಪೂರ್ಣವಾಗಿದೆ. ದಿನನಿತ್ಯದ ಅನುಭವದ ವಿಚಾರಗಳನ್ನು ಗೀತೆಯಲ್ಲಿ ಬಳಸಿರುವುದು ಮೆಚ್ಚುಗೆಗೆ ಪಾತ್ರವಾಗಿದೆ. ಉದಾ: ಯೇಸುವನ್ನು ವೈದ್ಯನೆಂದು ಭಾವಿಸಿರುವುದು, ದೈಹಿಕ ಮಾನಸಿಕ ಬಲಹೀನತೆಯನ್ನು ಹೋಗಲಾಡಿಸುವ ವೈದ್ಯ ಯೇಸುವಾಗಿದ್ದಾನೆ ಎಂದು ಹೇಳುವಲ್ಲಿ ಆತನೊಂದಿಗೆ ಭಕ್ತಿನಿಗಿರುವ ಪೂಜ್ಯಭಾವ ವ್ಯಕ್ತವಾಗಿದೆ.

೪. ಯೇಸುವಿನ ವ್ಯಕ್ತಿತ್ವದಲ್ಲಿ ಎದ್ದುಕಾಣುವ ಪ್ರಮುಖ ಗುಣವೆಂದರೆ ಎಲ್ಲರನ್ನು ಮಿತ್ರನಂತೆ ಕಾಣುವುದು. ಗೀತಗಾರ ಯೇಸುವಿನ ಆ ಪ್ರಮುಖ ಗುಣವನ್ನು ಮೆಚ್ಚಿ ಯೇಸು ಅಮೂಲ್ಯ ಮಿತ್ರನಾಗಿದ್ದಾನೆ, ಆತನಲ್ಲಿ ಸುಖ, ದುಃಖ ಅಳಲನ್ನು ಬಿಚ್ಚಿಟ್ಟಾಗ ಆತ ಸಾಂತ್ವನ ನೀಡುವವನಾಗಿದ್ದಾನೆ ಎಂಬ ಗೀತೆಯನ್ನು ಭಾಷಾಂತರಿಸಿ ಭಕ್ತವೃಂದದ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

೫. ದೇಶವಿದೇಶಗಳಲ್ಲಿ ಜನಪ್ರಿಯವಾದ ಗೀತೆಗಳಾದ Come all ye faithful, Hark the herald Angels sing , What a friend we have in Jesus, Abide with me, Nearer my God to thee ಎಂಬ ಗೀತೆಗಳು ಕ್ರಮವಾಗಿ ಓ ಬನ್ನಿರಿ ಈಗ, ಕೇಳು ದೂತರ್ಗಾನವ, ಎಂಥಾ ಅಮೂಲ್ಯಮಿತ್ರ, ನಿನ್ ಹತ್ರ ದೇವರೆ ಎಂದು ಭಾಷಾಂತಾರಿಸಿ ರಚಿಸಿದ್ದು ಇವರ ಸೃಜನಶೀಲತೆ ಹಾಗೂ ಕಾವ್ಯಪ್ರತಿಭೆಗೆ ನಿದರ್ಶನಗಳಾಗಿವೆ.

೬. ಕ್ರಿಸ್ತನ ಹೆಸರನ್ನು ಬಳಸದ ಗೀತೆಯ ಭಾಷಾಂತರ ಇಲ್ಲದೆ. ಉದಾ: ನಿನ್ ಹತ್ರ ದೇವರೆ. ಕ್ರಿಸ್ತನ ಹೆಸರಿಲ್ಲದಿದ್ದರೂ ಕ್ರಿಸ್ತೀಯ ಮೌಲ್ಯಗಳನ್ನು ಬೆಳೆಸುವಲ್ಲಿ ಸಹಕಾರಿಯಾಗಿದೆ. ಭಕ್ತಿ, ಅರ್ಪಣಾಭಾವ, ನಂಬಿಕೆ, ಮೋಕ್ಷಾಕಾಂಕ್ಷೆ ಈ ಮೌಲ್ಯಗಳತ್ತ ನಮ್ಮ ಗಮನ ಸೆಳೆದಿರುವುದು ಗಮನಿಸಬೇಕಾದ ಅಂಶವಾಗಿದೆ.

೭. ಶ್ರೀಸಾಮಾನ್ಯರನ್ನು ಗಮನದಲ್ಲಿಟ್ಟುಕೊಂಡು ಗೀತೆ ರಚಿಸಿದ್ದಾರೆಂದು ಕಾಣುತ್ತದೆ. ಅರ್ಥಪ್ರಧಾನತೆಯೆ ಮುಖ್ಯವಾಗಿತ್ತೆ ಹೊರತು, ಕಾವ್ಯದ ಗುಣಮಟ್ಟವನ್ನು ಕಾಪಾಡುವುದಾಗಿರಲಿಲ್ಲ. ಸಮಾಜದಲ್ಲಿನ ಜನರಲ್ಲಿ ಹೊಸ ಧಾರ್ಮಿಕ ದೃಷ್ಟಿಕೋನವನ್ನು ಬೆಳೆಸುವ ದೃಷ್ಟಿಯಿಂದ ಗೀತೆ ರಚನೆಯಾಗಿದೆ. ಉದಾ: ಯಜ್ಞ ಎನ್ನುವುದು ಕೇವಲ ಪ್ರಾಣಿ ಅಥವಾ ವಸ್ತುಗಳ ಅರ್ಪಣೆಯಲ್ಲ ಬದಲಾಗಿ ನಮ್ಮ ಒಳ್ಳೆಯ ಕಾರ್ಯಗಳನ್ನೆ ದೇವರಿಗೆ ಅರ್ಪಿಸಬೇಕೆಂದು ತಿಳಿಸಿರುವುದು ಸತ್ಯ ಸಂಗತಿಯಾಗಿದೆ.

೮. ಗೀತೆಗಳು ಕಾವ್ಯಗುಣದಿಂದ ಕೂಡಿರದೆ ಇರುವುದು ಕಂಡುಬರುತ್ತದೆ. ಗದ್ಯಕ್ಕೆ ಹೊರಳದ, ಪದ್ಯಕ್ಕೂ ಉರುಳದ ಶೈಲಿಯನ್ನು ಹೊಂದಿದೆ. ಲಯ, ಗೇಯತೆ ಹೊಂದಿರದ ಗೀತೆಗಳೇ ಹೆಚ್ಚು.

೯. ಬಿ. ರೈಸ್‌ರವರ ಗೀತೆಗಳನ್ನು ಬಾಸೆಲ್ ಮಿಶನರಿಗಳು ಬಳಸಿಕೊಂಡಾಗ ಕೆಲವು ವ್ಯತ್ಯಾಸಗಳನ್ನು ಮಾಡಿ ಬಳಸಿಕೊಂಡಿದ್ದಾರೆ.

೫.೧.೨ ಈ.ಪಿ. ರೈಸ್ – E.P. Rice

"ಬೆಂಗಳೂರಿನಲ್ಲಿ ೧೮೪೯ ಏಪ್ರಿಲ್ ೨೬ರಂದು ಜನಿಸಿದರು."[೨೬] ತಂದೆ ಬೆಂಜಮಿನ್ ರೈಸ್. ಇವರು ಬೆಂಗಳೂರಿನ Presbyterian churchನ ಸದಸ್ಯರಾಗಿದ್ದರು. Cheshunt ಕಾಲೇಜಿನಲ್ಲಿ ಕಲಿತರು. ೧೮೭೩ ನವೆಂಬರ್ ೪ರಂದು ದೀಕ್ಷೆಯನ್ನು Islingtonನಲ್ಲಿ ಪಡೆದರು. ೧೮೭೩ ನವೆಂಬರ್ ೭ರಂದು ಭಾರತಕ್ಕೆ ನೌಕಾಯಾನಮಾಡಿ ಡಿಸೆಂಬರ್ ೧೩ರಂದು ತಲುಪಿದರು. ಬೆಂಗಳೂರಿಗೆ ಸುವಾರ್ತಾಸೇವೆ ಹಾಗೂ ಮಿಶನ್‌ನ ಕಾರ್ಯದಲ್ಲಿ ತೊಡಗಿದರು. ೧೮೮೪ರಲ್ಲಿ ಇಂಗ್ಲೇಂಡಿಗೆ ಹಿಂದಿರುಗಿದರು. ೧೮೮೫ ಅಕ್ಟೋಬರ್

೨೮ ರಂದು ಭಾರತಕ್ಕೆ ಮರುಳಿದರು. ಮತ್ತೆ ಬೆಂಗಳೂರು ಮಿಶನ್ ಕಾರ್ಯದಲ್ಲಿ ತೊಡಗಿದರು. ೧೮೯೧ ಜೂಲೈ ೧೪ರಂದು ಚಿಕ್ಕ ಬಳ್ಳಾಪುರದಲ್ಲಿ ಹೊಸಕಾರ್ಯಕ್ಷೇತ್ರವನ್ನು ಆರಂಭಿಸಿದರು. ೧೮೯೨ ಜನವರಿ ೧ರಂದು ನಿರ್ದೇಶಕರಾಗಿ ಎಲ್ಲ ಕೆಲಸಕಾರ್ಯಗಳನ್ನು ನಡೆಸಿದರು. ಜೂನ್ ೧೫ನೇ ೧೮೯೬ರಂದು Congregational churchನ ಸದಸ್ಯೆಯಾಗಿದ್ದ Lillian Edgar ರವರನ್ನು ವಿವಾಹವಾದರು. ಧಾರ್ಮಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ ಈ.ಪಿ.ರೈಸ್‌ರವರು "ಹಾರ್ಮೋನಿಯಂ ನುಡಿಸುತ್ತಿದ್ದರು."[೨೭] ೧೯೧೫ರಲ್ಲಿ ಇಂಗ್ಲೇಂಡಿಗೆ ಹಿಂದಿರುಗಿದಾಗ ಇಂಗ್ಲೀಷ್‌ನಲ್ಲಿ ಕನ್ನಡಸಾಹಿತ್ಯದ ಒಂದು ಸಂಕ್ಷಿಪ್ತ ಚರಿತ್ರೆಯನ್ನು 'ಹೆರಿಟೇಜ್ ಆಫ್ ಇಂಡಿಯಾ' ಎಂಬ ಗ್ರಂಥ ರಚಿಸಿದರು. ಇವರು ೧೯೩೫ರಲ್ಲಿ ಇಂಗ್ಲೇಂಡಿನಲ್ಲಿ ಸ್ವರ್ಗಸ್ಥರಾದರು.

ಗೀತೆಗಳ ಅಧ್ಯಯನ: 'ಕನ್ನಡ ಸಂಗೀತಗಳು' ಎಂಬ ಗೀತಪುಸ್ತಕದಲ್ಲಿ ಇವರ ಎರಡು ಗೀತೆಗಳಿವೆ. ಇವು ಸ್ವರಚಿತ ಗೀತೆಗಳಾಗಿವೆ.

ಕ್ರಿಸ್ತರ ವ್ಯಕ್ತಿತ್ವ: ಯೇಸುವಿನ ಶ್ರಮ, ಮರಣ ಹಾಗೂ ಪುರುತ್ಥಾನವನ್ನು ಎಳೆಎಳೆಯಾಗಿ ಬಿಚ್ಚಿಡುವ ರೀತಿ ಈ ಗೀತಗಾರರ ಗೀತೆಯಲ್ಲಿ ಮೂಡಿಬಂದಿದೆ. ದೇಶೀಯ ಛಂದಸ್ಸಿನಲ್ಲಿ ರಚಿತವಾದ ಈ ಗೀತೆ ಎರಡೆರಡು ಸಾಲುಗಳನ್ನು ಹೊಂದಿದೆ. ಪ್ರಾರಂಭದಲ್ಲಿ ನಾಲ್ಕು ಸಾಲುಗಳ ಚರಣ ಪಲ್ಲವಿಯಂತೆ ರಚಿತವಾಗಿದೆ. ಆದಿ, ಅಂತ್ಯ, ಮಧ್ಯಪ್ರಾಸಗಳು ಗೀತೆಗೆ ಸೊಗಸನ್ನು ತಂದು ಲಯಬದ್ಧವಾಗಿದೆ.

ಜಯ ಜಯ ವಿಜಯ ಸ್ವಾಮಿಗೆ
ಜಯ ಜಯ ವಿಜಯ ಕ್ರಿಸ್ತನಿಗೆ
ಜಯ ಜಯ ವಿಜಯ ಸ್ವಾಮಿಯೇ
ಜಯ ಕಾಲ ಯೇಸು ಸ್ವಾಮಿಯೇ

೧. ಪಾಪಾತ್ಮರು ಆತನ್ನ ತಾತ್ಸಾರಗೈದರು:
ಈಗ ಸ್ವರ್ಗ ಪತಿಯಾದನು.

೨. ಕಿರೀಟ ಮುಳ್ಳಿನಿಂದ ಹೆಣೆದು ಕೊಟ್ಟರು
ಮಹಿಮಾ ಕಿರೀಟವಾಯಿತು.

೩. ಪಾಪಿಷ್ಟ ಮಿತ್ರನೆಂದು ಹೆಸರಿಟ್ಟು ನಕ್ಕರು:
ಆ ನಾಮ ಮಾನ ಹೊಂದಿತು

೪. ವಿರೋಧಿಗಳಿಗಾಗಿ ಸ್ವ ಪ್ರಾಣ ಕೊಟ್ಟನು.
ಕರುಣಾ ಸಮುದ್ರನಾದನು.

೫. ಭೂಲೋಕದಲ್ಲಿ ಕಷ್ಟ ಸಹಿಸಿಕೊಂಡನು
ಪರಲೋಕದರಸಾದನು.

೬. ಅಧೈರ್ಯ ಪಡದಿರು, ಓ ಕ್ರಿಸ್ತ ಭಕ್ತನೇ!

ರಾಜಾಧಿರಾಜ ಯೇಸುವೇ

೭. ಲೋಕಾಪವಾದವೇನು? ತತ್ಕಾಲ ಮಾತ್ರವೇ

ವಿಜಯ ದಿನ ಬರುತ್ತೆ.

ಕನ್ನಡ ಸಂಗೀತಗಳು, ೧೮೯೮, ಗೀತೆ–೨೫೫

ಯೇಸುವಿಗಿರುವ ಸಮನಾಂತರ ಬಿರುದುಗಳು ಸ್ವರ್ಗಪತಿ, ರಾಜಾಧಿರಾಜ, ಪರಲೋಕದರಸ, ಯೇಸು ಕರುಣೆವುಳ್ಳವನು ಎಂಬುದನ್ನು ಸೂಚಿಸಲು ಕರುಣಾಸಮುದ್ರ ಯೇಸುವಿನ ಪ್ರೀತಿಯನ್ನು ಸೂಚಿಸಲು ಪಾಪಿಷ್ಟಮಿತ್ರ ಎಂದು ಗೀತಗಾರ ಬಳಸಿದ್ದಾರೆ.

ಯೇಸು ಈ ರೀತಿಯ ಬಿರುದುಗಳನ್ನು ಪಡೆಯಲು ಕಾರಣ ಆತನು ನಡೆಸಿದ ಇಹಲೋಕದ ಅರ್ಥಪೂರ್ಣ ಬದುಕು. ತಾನು ತಂದೆಯಾದ ದೇವರಿಂದ ಪಡೆದುಕೊಂಡಿದ್ದ ಶ್ರೇಷ್ಠ ಕೆಲಸವನ್ನು ಪೂರ್ತಿಗೊಳಿಸಲು ಆತನು ತನ್ನನ್ನೇ ಮುಡಿಪಾಗಿಟ್ಟನು. ಆತನ ನಿಸ್ವಾರ್ಥ ಜೀವನ, ಸದ್ ಬೋಧನೆ ಪಾಪಿಮಾನವನೊಂದಿಗೆ ಆತನಿಗಿದ್ದ ಸ್ನೇಹ, ನೊಂದು ಬೆಂದ ವ್ಯಕ್ತಿಗಳನ್ನು ಕಂಡಾಗ ಆತನು ತೋರಿದ ಪ್ರೀತಿ, ಈ ರೀತಿಯ ಬದುಕು ಆತನು ಅಸಂಖ್ಯ ಬಿರುದನ್ನು ಹೊಂದಲು ಎಡೆಮಾಡಿಕೊಟ್ಟಿತು.

ಈ.ಪಿ. ರೈಸ್ ರವರ ಗೀತೆಗಳ ವೈಶಿಷ್ಟತೆಗಳು: ಇವರು ದೇಶೀ ಶೈಲಿಯಲ್ಲಿ ಗೀತೆಗಳ ರಚನೆ ಮಾಡಿದರು. ಯೇಸುವಿನ ಪುನರುತ್ಥಾನವನ್ನು ವರ್ಣಿಸಲು ಇವರು ಬಳಸಿಕೊಂಡ ದೇಶೀಯ ಮಟ್ಟು ಯಶಸ್ವಿಯಾಗಿ ಬಳಕೆಯಾಗಿದೆ. ಗೀತೆಯಲ್ಲಿ ಕಾವ್ಯಗುಣ, ಗೇಯತೆ, ಲಯ ಗೀತೆ ಓದಲು ಮತ್ತು ಮಧುರತೆಯನ್ನು ಆಸ್ವಾದಿಸಲು ನೆರವಾಗಿದೆ.

ಯೇಸುವಿನ ಬಿರುದುಗಳನ್ನು ಗೀತೆಯಲ್ಲಿ ಬಳಸಿದ್ದಾರೆ. ಗೀತೆ ೨೨೫ ರಲ್ಲಿ ಯೇಸುವನ್ನು ಸ್ವರ್ಗಪತಿ, ಪಾಪಿಷ್ಟಮಿತ್ರ, ಕರುಣಾಸಮುದ್ರ, ಪರಲೋಕದರಸ, ರಾಜಾಧಿರಾಜ ಇತ್ಯಾದಿಯಾಗಿ ವರ್ಣಿಸಿದ್ದಾರೆ.

೫.೧.೩ ಕ್ಯಾಂಪ್‌ಬೆಲ್. ಸಿ – Compbell. C

ಇಂಗ್ಲೇಡಿನ ಪೆಯಿಸಲಿ (Paisley) ಎಂಬಲ್ಲಿ ೧೮೧೦ ಡಿಸೆಂಬರ್‌ನಲ್ಲಿ ಜನಿಸಿದರು.[೨೮] Homerton ಕಾಲೇಜಿನಲ್ಲಿ ಕಲಿತರು. ೧೮೩೫ ಏಪ್ರಿಲ್ ೧೦ರಂದು ದೀಕ್ಷೆಯನ್ನು ಲಂಡನ್‌ಲ್ಲಿ ಪಡೆದರು. Jane melerieರವನ್ನು ವಿವಾಹವಾದರು. ೧೮೩೫ ಮೇ ೬ರಂದು ಭಾರತಕ್ಕೆ ಪ್ರಯಾಣಿಸಿದರು. ಸೆಪ್ಟಂಬರ್ ೩ರಂದು ಮದ್ರಾಸ್‌ಗೆ ಬಂದರು. ಬೆಂಗಳೂರಿನಲ್ಲಿ ಮಿಶನ್ ಕಾರ್ಯದಲ್ಲಿ ತೊಡಗಿದರು. ಮೈಸೂರಿನಲ್ಲಿ ಹೊಸ ಮಿಶನ್ ಕೇಂದ್ರವನ್ನು ಪ್ರಾರಂಭಿಸಲು ಮಿಸಸ್ ಕ್ಯಾಂಪ್‌ಬೆಲ್‌ರವರೊಂದಿಗೆ ಫೆಬ್ರವರಿ ೧ರಂದು ಹೋದರು. ೧೮೪೧ರಲ್ಲಿ ಮಿಸಸ್ ಕ್ಯಾಂಪ್‌ಬೆಲ್ ಇಂಗ್ಲೇಂಡಿಗೆ ಭೇಟಿನೀಡಿದರು. ೧೮೪೩ರಲ್ಲಿ ಭಾರತಕ್ಕೆ ಹಿಂದಿರುಗಿ ಕ್ಯಾಂಪ್‌ಬೆಲ್‌ರವರು ಬೆಂಗಳೂರಿಗೆ ಬಂದರು. ಸೇವಾಕಾರ್ಯಕ್ಕೆ ತಮ್ಮನ್ನೆ ಅರ್ಪಿಸಿಕೊಂಡರು.

ಕನ್ನಡ ಬೈಬಲ್‌ನ ಕಾರ್ಯದಲ್ಲಿ ತೊಡಗಿದರು. ೧೮೫೭ರಲ್ಲಿ Daily Bread ಎಂಬ ಇಂಗ್ಲೀಷ್‌ನಲ್ಲಿದ್ದ ಒಂದು ಚಿಕ್ಕ ಬೈಬಲ್ ಸೂಕ್ತಿಯನ್ನೊಳಗೊಂಡ ಗ್ರಂಥವನ್ನು ಕನ್ನಡದಲ್ಲಿ ಬರೆದರು. ಅಷ್ಟೇ ಅಲ್ಲ ೧೮೬೦ರಲ್ಲಿ ಬೈಬಲ್‌ನಿಂದ ನೂರಾರೂ ಉತ್ತಮ ಸೂಕ್ತಿಗಳನ್ನು ಪ್ರಸಂಗಗಳನ್ನು ಹೆಕ್ಕಿ ಕನ್ನಡಿಸಿದ ಇವರ ಪುಸ್ತಕವು ಎಲ್ಲಾ ಕ್ರೈಸ್ತಗುರುಗಳ ಪ್ರಶಂಸೆಗೆ ಒಳಗಾದವು. ೧೮೭೫ ರಲ್ಲಿ ಕ್ಯಾಂಪ್‌ಬೆಲ್‌ರವರು ಇಂಗ್ಲೇಂಡಿಗೆ ಹೋಗಿ ಅಲ್ಲಿ ಸೇವಾನಿವೃತಿ ಪಡೆದರು. ೧೮೮೭ ಮೇ ೨೩ರಂದು Gourock ನಲ್ಲಿ ಮರಣಹೊಂದಿದರು.

ಗೀತೆಗಳ ಅಧ್ಯಯನ: ಕ್ಯಾಂಪ್‌ಬೆಲ್ 'ಕನ್ನಡ ಸಂಗೀತಗಳು' ಗೀತಪುಸ್ತಕದಲ್ಲಿ ೨೨ ಗೀತೆಗಳನ್ನು ಬರೆದಿದ್ದಾರೆ. ಅದರಲ್ಲಿ ಹೆಚ್ಚಿನ ಗೀತೆಗಳು ದೇವರ ಕುರಿತಾಗಿದೆ. ಗೀತೆಗಳ ವರ್ಗಿಕರಣ ಇಂತಿದೆ.

ದೇವರು	೧೨	ಕ್ರಿಸ್ತನ ಬದುಕು	೦೧
ಕ್ರಿಸ್ತನು	೦೪	ಅಂತ್ಯ ಕಾರ್ಯಗಳು	೦೧
ಪರಿಶುದ್ಧಾತ್ಮ	೦೧	ವಿಶೇಷ ಕಾರ್ಯಗಳು	೦೧
ಸಭೆಯ ವಿಸ್ತರಿಸುವುದು	೦೧	ಚಿಕ್ಕವರಿಗಾಗಿ ಸಂಗೀತ	೦೧

ಒಟ್ಟು ೨೨ ಗೀತೆಗಳು

ಕ್ರೈಸ್ತರ ಜೀವನ: ಕ್ರಿಸ್ತರು ಪುನರುತ್ಥಾನ ಹೊಂದಿದ ಮೇಲೆ ತಮ್ಮ ಶಿಷ್ಯನಾದ ಸಿಮೋನ್ ಪೇತ್ರನಿಗೆ ಹಾಕಿದ ಒಂದು ಪ್ರಶ್ನೆಯೇ, ನೀನು ನನ್ನನ್ನು ಪ್ರೀತಿಸುತ್ತೀಯೋ? (ಯೋಹಾನಾ ೨೧-೧೫:೧೭) ಎಂಬುದು. ಇದೇ ಪ್ರಶ್ನೆಯನ್ನು 'ಆತ್ಮ ನಿನ್ನ ಕರ್ತನ' ಎಂಬ ಗೀತೆಯಲ್ಲಿ ನೋಡಬಹುದಾಗಿದೆ.

ಪಾಪಿಯೇ! ನಾನು ನಿನ್ನನ್ನು!
ಎಷ್ಟೋ ಸ್ನೇಹಿಸಿದೆನು
ಪ್ರೀತಿ ನನ್ನಲ್ಲಿಲ್ಲವೇ?
ನಿನ್ನ ರಕ್ಷಕ ನಾನೇ

ಹೌದು ಯೇಸು! ನಿನ್ನನ್ನೇ
ಎಂದೂ ಪ್ರೀತಿ ಮಾಡುವೆ
ನನ್ನ ಪ್ರೀತಿ ಕಡಿಮೆ
ವೃದ್ಧಿಮಾಡು ಕರ್ತನೇ!

ಕನ್ನಡ ಸಂಗೀತಗಳು, ಗೀತೆ-೮೮

ಇದನ್ನು ವಿಲ್ಲಿಯಂ ಕೌಫರ್ ಎಂಬಾತನು ರಚಿಸಿದನು. ಈತನು ೧೭೩೧ರಲ್ಲಿ ಜನಿಸಿದನು. ತನ್ನ ಬಾಳಿನ ಅನೇಕ ವರ್ಷಗಳವರೆಗೆ ಅವಿವೇಕನಾಗಿ ನಡೆದುಕೊಂಡು ಅತ್ಯಂದಲ್ಲಿ ಪಶ್ಚಾತಾಪದಿಂದ ದೇವರ ಕಡೆಗೆ ತಿರುಗಿ ಆತನು ಹೇಳುವ ಸ್ವರಕ್ಕೆ ಕಿವಿಗೊಟ್ಟನು. ೧೭೬೫ರಲ್ಲಿ ಈ ಪ್ರಶ್ನೋತ್ತರದಿಂದ ಕೂಡಿದ ಸಂಗೀತವನ್ನು ಕೌಫರ್‌ನು ರಚಿಸಿದನು. ಇಂಗ್ಲೀಷ್‌ನಲ್ಲಿ ೮ ಚರಣಗಳು ಇದ್ದು ಕನ್ನಡ ಭಾಷಾಂತರದಲ್ಲಿ ಕೇವಲ ೭ ಚರಣಗಳಿವೆ. ಬಿಟ್ಟು ಹೋದ ಚರಣ ಇಂತಿದೆ.

Can a woman's tender care
Cease toward the child she bore?

Yes she may forgeteful be

Yet will I remember thee

ಯೇಶಾಯ ೪೯:೧೫-೧೬ರ ಈ ವಾಕ್ಯಗಳನ್ನೊಳಗೊಂಡ ಈ ಚರಣವು ಕನ್ನಡದಲ್ಲಿ ಇಲ್ಲದೇ ಇರುವುದು ಒಂದು ವಿಷಾದಕರವಾದ ಸಂಗತಿ.

ಪ್ರಪಂಚದ ನಾನಾ ಗದ್ದಲದಲ್ಲಿ ದೇವರ ಶಬ್ಧ ನಮಗೆ ಕೇಳಿಸದಿರಬಹುದು. ಯೋಹಾನನ ಮಗನಾದ ಸಿಮೋನನೇ ನನ್ನ ಮೇಲೆ ಪ್ರೀತಿ ಇಟ್ಟಿದ್ದೀಯಾ? ಎಂಬುದಾಗಿ ಪೇತ್ರನಿಗೆ ಯೇಸು ಹಾಕಿದ ಪ್ರಶ್ನೆ ನಮ್ಮ ನೆನಪಿಗೆ ಬರುತ್ತದೆ. ಆತನ ಈ ಪ್ರಶ್ನೆಗೆ ನಾವು ಉತ್ತರ ನೀಡುವ ಹಂಗಿನಲ್ಲಿದ್ದೇವೆ. ಈ ಚರಣವು ಕ್ರಿಸ್ತನ ಪ್ರಶ್ನೆಗೆ ಉತ್ತರಿಸಲು ನಮ್ಮನ್ನು ಪ್ರೇರೇಪಿಸುತ್ತದೆ.

'ಪಾಪಿಯೇ ನಾ ನಿನ್ನನ್ನು ಎಷ್ಟೋ ಸ್ನೇಹಿಸಿದೆನು ಎಷ್ಟರ ಮಟ್ಟಿಗೆ ಅಂದರೆ, ಸೆರೆಯಲ್ಲಿದ್ದಾಗಲು ನಿನ್ನ ಬಿಡಿಸಿದೆನು; ರೋಗದೊಳ್ ಬಿದ್ದಿರಲು ಬಂದು ದೃಷ್ಟಿಕೊಟ್ಟನು: ಮಾರ್ಗಬಿಟ್ಟು ದೂರವೇ ಅಲೆದಾಡುವಾಗಲೇ ನಿನ್ನ ಹುಡುಕಿದನು; ಮಾರ್ಗದಲ್ಲಿ ತಂದೆನು: ನಿನ್ನ ಕತ್ತಲೆಯನ್ನು ಬೆಳಕನ್ನಾಗಿ ಮಾರ್ಪಡಿಸುತ್ತೇನೆ, ಪ್ರೀತಿ ನಿನ್ನಲಿಲ್ಲವೇ? ನಿನ್ನ ರಕ್ಷಕ ನಾನೇ ಹೌದು'. ಅಯೋಗ್ಯರಾದ ನಮ್ಮನ್ನು ಪ್ರೀತಿಮಾಡ ಅಗತ್ಯವೇ ಇಲ್ಲ ಆದರೂ ಆತನು ಪ್ರೀತಿಸ್ವರೂಪನಾಗಿರುವದರಿಂದ ನಮ್ಮನ್ನು ಆತನು ಪ್ರೀತಿಸುತ್ತಿದ್ದಾನೆ. 'ನಾವು ದೇವರನ್ನು ಪ್ರೀತಿಸಿದ್ದರಲ್ಲಿ ಅಲ್ಲ ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪ ನಿವಾರಣೆಗಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟದ್ದರಲ್ಲಿಯೇ ಪ್ರೀತಿಯ ನಿಜಗುಣವು ತೋರಿಬರುತ್ತೆ (೧ಯೋಹಾನ ೪:೧೦) ನೂರು ಕುರಿಗಳಲ್ಲಿ ಒಂದು ಕುರಿಯು ತಪ್ಪಿಸಿಕೊಂಡು ಹೋದಂತೆಯೇ, ಮಾರ್ಗ ಬಿಟ್ಟು ದೂರ ಅಲೆದಾಡುವಾಗಲೇ ಆತನು ನಮ್ಮನ್ನು ಹುಡುಕಿದನು, "ಮನುಷ್ಯ ಕುಮಾರನು ಕೆಟ್ಟು ಹೋಗಿರುವುದನ್ನು ಹುಡುಕಿ ರಕ್ಷಿಸುವುದಕ್ಕೆ ಬಂದನು" (ಲೂಕ ೧೯:೧೦).

ದೇವರ ಪ್ರೀತಿಯು 'ಸಾಗ್ರಜಲದಂತೆಯೇ ಮಿತಿಯಿಲ್ಲದ್ದಾಗಿದೆ' ಇಂಗ್ಲೀಷ್ ಚರಣದಲ್ಲಿ 'ಆತನ ಪ್ರೀತಿಯು ಬದಲಾಗದಂತದ್ದು ಉನ್ನತವಾದವುಗಳಿಂತಲೂ ಉನ್ನತವಾದದ್ದು ಆಳವಾದವುಗಳಿಗಿಂತಲೂ ಆಳವಾದದ್ದು ಉದಾರವಾದದ್ದು ಭರವಸೆ ಉಳ್ಳದ್ದು ಆಗಿದೆ' ಎಂದೂ ಬರೆದಿದೆ.

ಭಕ್ತಳಾದ ಕವಿಯು ಯೇಸುವಿನ ಪ್ರಶ್ನೆಗೆ ತನ್ನ ಉತ್ತರವನ್ನು ಕೊಡುತ್ತಾಳೆ. 'ಹೌದು ಯೇಸು ನಿನ್ನನ್ನು ಎಂದೂ ಪ್ರೀತಿ ಮಾಡುವೆ, ನನ್ನ ಪ್ರೀತಿ ಕಡಿಮೆ; ವೃದ್ಧಿ ಮಾಡು ನನ್ನಲ್ಲಿ ಪ್ರಿಯ ಕರ್ತನೆ' ಎಂದು. ಈ ಲೋಕದಲ್ಲಿ ನಮಗೆ ಪ್ರೀತಿ ಪಾತ್ರರೂ ನಮ್ಮನ್ನು ಪ್ರೀತಿಸುವವರು ಅನೇಕ ಮಂದಿ ಇರಬಹುದು. ಒಬ್ಬೊಬ್ಬರ ಪ್ರೀತಿ ಒಂದೊಂದು ವಿಧವಾಗಿರಬಹುದು. ಆದರೆ ದೇವರ ಮತ್ತು ನಮ್ಮ ಪ್ರೀತಿ ಸಂಬಂಧ ವಿಧಾನವೇ ಬೇರೆ. ಆತನ ಪ್ರೀತಿಯು ಶಿಕ್ಷಣ ಮತ್ತು ರಕ್ಷಣೆಯಿಂದ ಕೂಡಿದ್ದೂ ನಿತ್ಯವೂ ಪರಿಪಾಲಿಸಿ ನಿತ್ಯಜೀವಕ್ಕೆ ನಮ್ಮನ್ನು ಸೇರಿಸುವಂಥದ್ದೂ ಆಗಿದೆ. ಇಂತಹ ಪ್ರೀತಿಗೆ ನಾವು ತುಂಬು ಹೃದಯದಿಂದ ಪೇತ್ರನಂತೆಯೂ ಈ ಸಂಗೀತದ ಕವಿಯಂತೆಯೂ ಪ್ರಾರ್ಥನಾರೂಪದಲ್ಲಿ ಅರಿಕೆ ಮಾಡಿಕೊಳ್ಳಬಹುದಾಗಿದೆ.

ಸ್ತುತಿ: "ಹೆಚ್ಚು ಕಡಿಮೆ ಏನೂ ಇಲ್ಲ ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ."[೨೯] ಎಂದು ಸಂತ ಪೌಲನು ಹೇಳುತ್ತಾನೆ. ಆದರೆ ದೇವರ ಕೃಪೆಯು ಮಾನವನಿಗೆ ಅನಂತವಾಗಿ ದೊರಕಿದೆ. ಆದ್ದರಿಂದ ಆತನಿಗೆ ನಿರಂತರವು ಸ್ತೋತ್ರ ಸಲ್ಲಿಸಬೇಕು ಎಂದು ಸಂಗೀತಗಾರ ತನ್ನ 'ಅತ್ಯಂತ ಕೃಪೆ ತುಂಬಿದ' ಎಂಬ ಗೀತೆಯಲ್ಲಿ ಹೇಳುತ್ತಾನೆ.

ಕಠಿಣವಾದ ಹೃದಯವನ್ನು ಮಾರ್ಪಡಿಸಿದ ದೇವರಿಗೆ ಸ್ತೋತ್ರವನ್ನರ್ಪಿಸುತ್ತಿದ್ದಾನೆ ಸಂಗೀತಗಾರ ಇಲ್ಲಿ.

ಕಠಿಣವಾದ ಹೃದಯ	ಎನ್ ದುಃಖವುಳ್ಳ ಆತ್ಮಕ್ಕೆ
ಮಾರ್ಪಡಿಸಿದನು;	ಸಂತೋಷವಿತ್ತನು;
ಅಪಾರವಾದ ಆ ಕ್ರಮ	ಸ್ವಕೀಯ ಜನರೊಂದಿಗೆ
ಮನ್ನಿಸಿಬಿಟ್ಟನು	ಸ್ವತಂತ್ರ ಕೊಟ್ಟನು

ಕನ್ನಡ ಸಂಗೀತಗಳು, ಗೀತೆ–೧೪೦

ಹೃದಯ: "ಇದು ಎಲ್ಲಾ ಆಸೆಗಳಿಗೂ ಮೂಲಸ್ಥಾನ (ಧರ್ಮೋ ೧೯:೬). ಬುದ್ಧಿ, ಚಿತ್ತ, ಸುಖ, ದುಃಖ ಅರಿವು, ಮನಃಸಾಕ್ಷಿ ಮೊದಲಾದವುಗಳು ಹೃದಯದಿಂದ ಹುಟ್ಟುತ್ತವೆ (ವಿಮೋಚನಾ ೧೪.೫, ಜ್ಞಾನೋ ೧೪:೧೦). ಈ ಕಾರಣದಿಂದ ಪ್ರವಾದಿಗಳು ದೇವರ ಕೃಪಾಕಟಾಕ್ಷವನ್ನು ಸಂಪೂರ್ಣವಾಗಿ ಪಡೆದುಕೊಳ್ಳುವುದಕ್ಕೆ ಅಪೇಕ್ಷೆ ಪಡುವವರಿಗೆ ನೂತನ ಹೃದಯವು ಅವಶ್ಯಕತೆ ಇದೆ ಎಂದು ಬೋಧಿಸುತ್ತಾರೆ. ಹೊಸಒಡಂಬಡಿಕೆಯಲ್ಲಿ ನಿರ್ಮಲ ಚಿತ್ತರು ದೇವರನ್ನು ನೋಡುವರೆಂದು (ಮತ್ತಾಯ ೫:೮), ಹೃದಯವು ಬೀಜ ಬಿತ್ತಿದ ಭೂಮಿಯಂತಿದೆಯೆಂದು (ಲೂಕ ೮:೧೫), ಆತ್ಮೀಯ ಜ್ಞಾನವು ಹೃದಯಲ್ಲಿದೆಯೆಂದೂ (ಮತ್ತಾಯ ೧೩:೧೯), ಹೃದಯವೂ ಹೇಗಿರುತ್ತದೋ ನಡತೆಯೂ ಹಾಗೆಯೇ ಇರುವುದೆಂದು (ಲೂಕ ೬:೪೫), ದೇವರು ಹೃದಯಗಳನ್ನು ಪರಿಶೋಧಿಸಿ ನೋಡುತ್ತಾನೆಂದು (ರೋಮಾ ೮:೨೭) ಹೇಳಿದೆ. ಹೃದಯವು ಶಾರೀರಿಕ ಜೀವಕ್ಕೆ ಆಧಾರವಾಗಿ ಇರುವುದರಿಂದ ಅದು ಆತ್ಮೀಯ ಜೀವಕ್ಕೆ ಹಾಗೆಯೇ ಇದೆಯೆಂದು ಹೇಳುವುದು ವಾಡಿಕೆ.

ಮಾನವನ ಅಂತರಿಂದ್ರಕ್ಕೂ ಅವನ ಹೃದಯದಲ್ಲಿರುವ ವಿವಿಧವಾದ ಬಾಹ್ಯೇಂದ್ರಗಳಿಗೂ ಸಂಬಂಧವಿದೆಯೆಂದೂ ಬೇರೆಬೇರೆ ಜನಾಂಗಗಳವರು ಅಭಿಪ್ರಾಯಪಡುತ್ತಾ ಬಂದಿರುತ್ತಾರೆ. ಯೆಹೂದ್ಯರು ತಮ್ಮಲ್ಲಿ ಹುಟ್ಟುವ ಮನೋವಿಕಾರಗಳಿಗೆ ತಮ್ಮ ಅಂತರಿಂದ್ರಯವೇ ಮೂಲ ಕಾರಣವೆಂದೂ ಭಾವಿಸಿದ್ದರು (ಕೀರ್ತನೆ ೭:೯). ಈಗಿನ ಶಾಸ್ತ್ರಜ್ಞರಾದರೂ ನಮ್ಮ ಮೆದುಳಿಗೂ, ನಮ್ಮ ಯೋಚನೆಗಳಿಗೂ ಕೇವಲ ಹತ್ತಿರದ ಸಂಬಂಧವಿದೆಯೆಂದು ತಿಳಿಸುತ್ತಾರೆ. ಯೆಹೂದ್ಯರು ತಮ್ಮ ಅಂತರಿದ್ರಕ್ಕೂ, ರಕ್ತ ಕೋಶಕ್ಕೂ ಹತ್ತಿರದ ಸಂಬಂಧವಿರುತ್ತದೆಂದು ನಂಬಿದ್ದರು. ಆದ ಕಾರಣ ಹೃದಯವೆಂಬ ಮಾತು ಯೋಚನೆಯನ್ನು (ಮತ್ತಾ ೯:೪), ಪ್ರೀತಿಯನ್ನು (ಮತ್ತಾ ೨೨:೩೭), ಚಿತ್ತವನ್ನು (ಲೂಕ ೨೧:೧೪), ಮನಸಾಕ್ಷಿಯನ್ನು (ಮಾರ್ಕ ೧೬:೧೪) ಸೂಚಿಸುವುದಕ್ಕಾಗಿ ಉಪಮಾನವಾಗಿ ಹೇಳಲಾಗಿದೆ."[೩೦]

ಹಬ್ಬಗಳು: ಸಬ್ಬತ್ ದಿನವೆಂದು ಕರೆಸಿಕೊಳ್ಳುವ ಭಾನುವಾರವನ್ನು ಏಕೆ ಆಚರಿಸಬೇಕು ಅದರ ಪ್ರಾಧಾನ್ಯತೆ ಅಥವಾ ಮಹತ್ವವೇನು ಎಂಬುದನ್ನು ಸಂಗೀತಗಾರ 'ಕಟಾಕ್ಷದಿಂದ ಕರ್ತನು ಈ ದಿನ ನೇಮಿಸಿದನು' ಎಂಬ ಗೀತೆಯಲ್ಲಿ ವರ್ಣಿಸಿದ್ದಾನೆ. ಈ ದಿನದಂದು ಭಕ್ತಾದಿಗಳು ಯೇಸುವಿನ ಶ್ರಮ ಮರಣ, ಪುನರುತ್ಥಾನಗಳ ಸ್ಮರಣೆಯನ್ನು ಆಚರಿಸುವರು. ಯೇಸು ಸುರಿಸಿದ ಪವಿತ್ರ ರಕ್ತದ ಕುರಿತು ಧ್ಯಾನಿಸುವರು. ಈ ರಕ್ತದ ಪ್ರಾಧಾನ್ಯತೆ ಏನು ಎಂಬುದನ್ನು ಆಲೋಚಿಸುವ.

ಕಟಾಕ್ಷದಿಂದ ಕರ್ತನು
ಈ ದಿನ ನೇಮಿಸಿದನು;
ಈ ಹೊತ್ತು ಎಲ್ಲಾ ಜನರು
ಸಂತೋಷಪಡತಕ್ಕದ್ದು

ಸ್ವರಕ್ತ ಚೆಲ್ಲಿ ಯೇಸುವು
ನಮ್ಮನ್ನು ರಕ್ಷಿಸಿದನು
ಸಮಾಧಿ ಜಯಿಸಿದನು
ಈ ದಿನದಲ್ಲಿ ಎದ್ದನು

ಕನ್ನಡ ಸಂಗೀತಗಳು, ೧೮೯೮, ಗೀತೆ–೧೯೨

"ರಕ್ತ ಎಂಬ ಮಾತಿನ ಅತ್ಯಂತ ಪ್ರಾಮುಖ್ಯವಾದ ಪ್ರಯೋಗವು ಯೇಸುಸ್ವಾಮಿಯು ಮಾಡಿದ ರಕ್ಷಣಾಕಾರ್ಯವನ್ನು ಕುರಿತು ವಿಚಾರಮಾಡುವಲ್ಲಿ ನಮಗೆ ಸಿಗುತ್ತದೆ. ದೇವಾಲಯದಲ್ಲಿ ಯಜ್ಞಗಳನ್ನರ್ಪಿಸುವುದು ಯೆಹೂದ್ಯರಿಗೆ ವಾಡಿಕೆಯಾಗಿದ್ದಿತು. ಆದಕಾರಣ ಅವರು ಯೇಸು ಸ್ವಾಮಿಯು ಮಾಡಿದ ರಕ್ಷಣಾಕಾರ್ಯವನ್ನು ಕುರಿತು ಮಾತನಾಡುವಲ್ಲಿ ಪದೇಪದೇ ಆತನ ರಕ್ತವನ್ನು ಸೂಚಿಸುವುದು ಅವರಿಗೆ ಸ್ವಾಭಾವಿಕವಾಗಿಯೇ ಇದ್ದಿತು. ಸ್ವಾಮಿಯೇಸುವು ಸಮರ್ಪಿಸಿದ ಯಜ್ಞಕ್ಕೂ ಪಾಪನಿವಾರಣೆಯ ದಿನದಲ್ಲಿ ಸಮರ್ಪಿತವಾದ ಆ ಯಜ್ಞಕ್ಕೂ ಸಂಬಂಧಿಸಿದ್ದಿತು (ರೋಮ ೩:೨೫). ಪಾಪದ ನಿಮಿತ್ತವಾಗಿ ದೇವರಿಗೂ ಮಾನವರಿಗೂ ಉಂಟಾಗಿದ್ದ ವಿಯೋಗವು ಈ ಯಜ್ಞದ ಮೂಲಕವಾಗಿ ಪರಿಹಾರವಾಗಿ ಸಮಾಧಾನ ಉಂಟಾಯಿತು. ಯೇಸು ಸ್ವಾಮಿಯು ಮಾಡಿದ ಯಜ್ಞವು ಪೂರ್ಣ ಶಕ್ತಿಯುಳ್ಳದ್ದು (ಇಬ್ರಿ ೧೦:೪), ಮಾನವನ ಪಾಪವು ಅದೃಶ್ಯವಾದ ಲೋಕವನ್ನು ಸಹ ಅಪವಿತ್ರಮಾಡಿದ್ದಂತೆಯೂ ಅದನ್ನೂ ಕೂಡ ಶುದ್ಧೀಕರಿಸುವುದಕ್ಕೆ ಕ್ರಿಸ್ತನ ರಕ್ತವು ಅವಶ್ಯಕವಾಗಿದ್ದಂತೆಯೇ ಕೆಲವು ಸಂದರ್ಭಗಳಲ್ಲಿ ಕಂಡುಬರುತ್ತದೆ (ಇಬ್ರಿ ೯:೨೨). ಯೇಸು ಸ್ವಾಮಿಯು ತನ್ನ ರಕ್ತವನ್ನು ಸುರಿಸಿದುದು ಪಾಪಾತ್ಮರಾದ ನಮಗೋಸ್ಕರವಾಗಿ ತನ್ನನ್ನೇ ಸ್ವ ಅರ್ಪಣೆ ಮಾಡಿಕೊಂಡಿದ್ದಕ್ಕೆ ಒಂದು ಗುರುತಾಗಿರುತ್ತದೆ (ಇಬ್ರಿ ೯:೧–೧೪).

ಹೊಸಒಡಂಬಡಿಕೆಯಲ್ಲಿ ಯೇಸುಸ್ವಾಮಿಯ ರಕ್ತವು ಆತನ ಅಮೂಲ್ಯವಾದ ಜೀವಕ್ಕೆ ಗುರುತಾಗಿರುತ್ತದೆ. ಆತನು ಒಂದೇ ಸಾರಿ ಸುರಿಸಿದ ಆತನ ಅಮೂಲ್ಯವಾದ ರಕ್ತವು ರಕ್ಷಣಾ ಕಾರ್ಯವನ್ನು ಸಿದ್ಧಿಗೆ ತರುವ ಮಹಾಶಕ್ತಿಯಾಗಿಯೂ ಕ್ಷಣಿಕವಾದ ಪ್ರಯೋಜನವನ್ನಲ್ಲ ಶಾಶ್ವತವಾದ ಪ್ರಯೋಜನವನ್ನುಂಟು ಮಾಡುವಂಥದ್ದಾಗಿಯೂ ಇರುತ್ತದೆ."[೩೧]

ಛಂದಸ್ಸು: ಕ್ಯಾಂಬೆಲ್‌ರವರು ತಮ್ಮ ಗೀತೆಗಳನ್ನು ಟ್ಯೂಟೋನಿಕ್ ರಾಗದಲ್ಲಿಯೇ ರಚಿಸಿದ್ದಾರೆ.

ಲಾಂಗ್ ಮೀಟರ್ (L.M.)

ಸಜ್ಯೋತಿಯಾದ ಯೇಸುವೇ!	ಪಾಸಾಧಿಕಾರ ತೆಗೆದು
ಪ್ರಕಾಶಕೊಡು ಲೋಕಕ್ಕೆ	ಪರಿಶುದ್ಧತ್ವ ಹುಟ್ಟಿಸು;
ಪ್ರಪಂಚದ ಕಾರ್ಗತ್ತಲು	ಭೂಪ್ರಜೆ ನಿನಗೆರಗಿ
ಸಂಪೂರ್ಣವಾಗಿ ಹರಿದು	ನಿನ್ನಲ್ಲಾನಂದ ಪಡಲಿ

ಕನ್ನಡ ಸಂಗೀತಗಳು, ಗೀತೆ–೧೮೫

ಇವು ನಾಲ್ಕು ಪಾದಗಳ ಪದ್ಯವು ಪ್ರತಿಯೊಂದು ಪಾದದಲ್ಲಿ ೮ ವರ್ಣಗಳಿವೆ. ಒಂದು ಪದ್ಯದಲ್ಲಿ ಒಟ್ಟು ೩೨ ವರ್ಣಗಳಿವೆ.

ಕಾಮನ್ ಮೀಟರ್ (C.M.)

ಯಹೋವಾ ಜಗದೀಶನೇ	ನಮ್ಮಂತರಂಗ ಕರ್ತನೆ
ನೀನಾತ್ಮನಾಗಿದ್ದೀ;	ಪರೀಕ್ಷೆ ಮಾಡುತ್ತೀ
ಸಂಪೂರ್ಣ ಆತ್ಮ ಸೇವೆಯೇ	ನಮ್ಮಲ್ಲಿ ಮೋಸಕಂಡರೆ
ನಮ್ಮಿಂದ ಕೋರುತ್ತೆ	ಅಸಹ್ಯ ಪಡುವೆ

ಕನ್ನಡ ಸಂಗೀತಗಳು, ಗೀತೆ–೬

ಕ್ಯಾಂಪ್‌ಬೆಲ್‌ರವರ ಗೀತೆಗಳ ವೈಶಿಷ್ಟ್ಯತೆಗಳು: ಕ್ಯಾಂಪ್‌ಬೆಲ್ ಕನ್ನಡ ಸಂಗೀತಗಳು ಗೀತಪುಸ್ತಕದಲ್ಲಿ ೨೨ ಗೀತೆಗಳನ್ನು ಬರೆದಿದ್ದಾರೆ. ಕ್ರೈಸ್ತ ಧಾರ್ಮಿಕ ಪದಗಳನ್ನು ಉತ್ತಮ ರೀತಿಯಲ್ಲಿ ಬಳಸಿರುವುದನ್ನು ಕಾಣುತ್ತೇವೆ. ಉದಾ: ಹೃದಯ ಎಂಬ ಪದವನ್ನು ನಾವು ಸಾಧಾರಣ ಅರ್ಥದಲ್ಲಿ ಕೇವಲ ಭಾವನೆಗಳ ಮತ್ತು ದೇಹದ ಒಂದು ಪ್ರಮುಖ ಅಂಗವಾಗಿ ಮಾತ್ರ ಪರಿಗಣಿಸುತ್ತೇವೆ. ಆದರೆ ಗೀತೆಯಲ್ಲಿ ಇದು ಒಂದು ಮಹತ್ವದ ಅರ್ಥವನ್ನು ಪಡೆದಿರುವುದನ್ನು ಕಾಣುತ್ತೇವೆ. ಅಲಂಕಾರಗಳ ಬಳಕೆ ಕಡಿಮೆಯಾಗಿರುವುದನ್ನು ಕಾಣುತ್ತೇವೆ. ಹೆಚ್ಚಿನ ಗೀತೆಗಳು ಕ್ರೈಸ್ತ ಧಾರ್ಮಿಕ ಪದಗಳನ್ನು ಹೆಚ್ಚಾಗಿ ಹೊಂದಿದ್ದು ಅವುಗಳನ್ನು ಅರ್ಥೈಸಿಕೊಳ್ಳಲು ವಿವರಣೆಯ ಅಗತ್ಯವಿದೆ ಎಂದೆನಿಸಿತು. ಉದಾ: ಕ್ರಿಸ್ತನ ಶರೀರ, ರಕ್ತ.

ಇಂಗ್ಲೀಷ್‌ನಿಂದ ಗೀತೆಗಳನ್ನು ಭಾಷಾಂತರ ಮಾಡುವಾಗ ಎಲ್ಲಾ ಚರಣಗಳನ್ನು ಭಾಷಾಂತರಿಸದೆಇರುವುದನ್ನು ಕಾಣುತ್ತೇವೆ. ಉದಾ: ಆತ್ಮ ನಿನ್ನ ಕರ್ತನ (ಗೀತೆ ೮೮) ಎಂಬ ಗೀತೆಯ ಇಂಗ್ಲೀಷ್‌ನ ಕೊನೆಯ ಚರಣ ಉತ್ತಮವಾಗಿದ್ದರೂ ಅದನ್ನು ಭಾಷಾಂತರಿಸಲಿಲ್ಲ.

೫.೧.೪ ಕೋಲ್ಸ್ ಜೆ.ಬಿ – Coles J.B

೧೮೮೯ ಡಿಸೆಂಬರ್ ೨೨ ರಂದು ಲಂಡನ್‌ನಲ್ಲಿ ಜನಿಸಿದರು. Spring Hill College ನಲ್ಲಿ ಶಿಕ್ಷಣ ಪಡೆದು ೧೮೪೪ ಫೆಬ್ರವರಿ ೧೫ರಂದು ಮೈಸೂರಿಗೆ ತಲುಪಿದರು. ೧೮೪೬ರಲ್ಲಿ ಬೆಂಗಳೂರಿನಲ್ಲಿ

ಸುವಾರ್ತಾಸೇವೆಯಲ್ಲಿ ನಿರತರಾದರು. ೧೮೪೫ರಲ್ಲಿ ಬಳ್ಳಾರಿಗೆ ವರ್ಗವಾದಾಗ ಅಲ್ಲಿ ಶ್ರೀಮತಿ ಕೋಲ್ಸ್ ಮರಣ ಹೊಂದಿದರು. ೧೮೫೨ರಲ್ಲಿ ಲಿಡಿಯಾ ಕರೊಲಿನ್ ರೆನಿವುಸ್ (Lydia Caroline Rhenius) ಎಂಬುವವಳನ್ನು ಮದುವೆಯಾದರು. ೧೮೫೯ರಲ್ಲಿ ಇಂಗ್ಲೇಂಡಿಗೆ ಹಿಂದಿರುಗಿದರು. ಮತ್ತೆ ೧೮೬೧ರಲ್ಲಿ ಭಾರತಕ್ಕೆ ಬಂದು ಬಳ್ಳಾರಿಯಲ್ಲಿ ಧಾರ್ಮಿಕ ಕೆಲಸದಲ್ಲಿ ತೊಡಗಿದರು. ಇವರು ಬೆಂಗಳೂರಿನಲ್ಲಿ ೧೮೯೧ರ ಜನವರಿ ೨ ರಂದು ಮರಣ ಹೊಂದಿದರು.

ಗೀತೆಗಳ ಅಧ್ಯಯನ: ರೈಸ್‌ರವರಿಂದ ರಚಿತವಾದ 'ಕನ್ನಡ ಸಂಗೀತಗಳು' ಕೃತಿಯಲ್ಲಿ ಇವರ ೧೦ ಗೀತೆಗಳಿವೆ. ಈ ಗೀತೆಗಳು ವಿವಿಧ ವಿಷಯಗಳಿಗೆ ಸೇರಿವೆ.

ದೇವರು	೦೩
ಕ್ರಿಸ್ತನು	೦೨
ಪರಿಶುದ್ಧಾತ್ಮ	೦೧
ಕ್ರೈಸ್ತರ ಬದುಕು	೦೩
ಅಂತ್ಯ ಕಾರ್ಯಗಳು	೦೧
ಒಟ್ಟು	೧೦ ಗೀತೆಗಳು

ಕ್ರಿಸ್ತರ ವ್ಯಕ್ತಿತ್ವ: ಯೇಸು ಸಮಾಜದಲ್ಲಿ ತತ್ತರಿಸುವ ಜನರನ್ನು ಶಾಂತಿ ಮತ್ತು ಸಾಂತ್ವನವನ್ನು ಪಡೆಯಲು ತಮ್ಮ ಬಳಿಗೆ ಬರಲು ಹೀಗೆಂದು ಆಹ್ವಾನ ನೀಡುತ್ತಾರೆ. 'ದುಡಿದು ಭಾರ ಹೊತ್ತು ಬಳಲಿ ಬೆಂಡಾಗಿರುವ ಸರ್ವ ಜನರೇ ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ ನಾನು ನಿಮಗೆ ವಿಶ್ರಾಂತಿ ಕೊಡುವೆನು' (ಮತ್ತಾಯ ೧೧:೨೮-೨೯). ಈ ವಾಕ್ಯವನ್ನು ನೆನಪಿಸುತ್ತದೆ 'ಉಂಟೋ ನಿನಗೆ ಆಯಾಸ ಬೇಸರಿಕೆಯು' ಎಂಬ ಗೀತೆ. ಗೀತಗಾರ ಪ್ರತಿ ಚರಣದಲ್ಲೂ ನಮ್ಮನ್ನು ಪ್ರಶ್ನಿಸುತ್ತಾ ಅದಕ್ಕೆ ಉತ್ತರ ರೂಪದಲ್ಲಿ ಯೇಸುವಿನ ಬಳಿಗೆ ಬರಬೇಕು ಆತ ನಿಜವಾದ ಸಾಂತ್ವನ ನೀಡುತ್ತಾನೆ ಎಂದಿದ್ದಾನೆ.

ಯೇಸುವಿನ ಬಾಹ್ಯ ವ್ಯಕ್ತಿತ್ವದತ್ತ ನಮ್ಮ ಗಮನ ಸೆಳೆದಿದ್ದಾನೆ ಈ ಗೀತೆಯಲ್ಲಿ. ಯೇಸುವನ್ನು ಅರಿಯದೇ ಇರುವ ಜನರು ಆತನನ್ನು ಗುರುತಿಸುವುದು ಹೇಗೆ? ಆತನ ಪಕ್ಕೆ ಮತ್ತು ಕಾಲು ಕೈಗಳಲ್ಲಿ ಗಾಯಗಳಿವೆ. ಆತನ ಶಿರದಲ್ಲಿ ಇರುವುದು ರಾಜನ ಶಿರದ ಕಿರೀಟವಲ್ಲ ಬದಲಿಗೆ ಮುಳ್ಳಿನ ಕಿರೀಟವಾಗಿದೆ. ಯೇಸುವಿನ ದೀನ ಅವಸ್ಥೆಯನ್ನು ವರ್ಣಿಸಿದ ಸಂಗೀತಗಾರ ನಂತರದ ಚರಣದಲ್ಲಿ ಯೇಸುವು ಕೊಡಬಹುದಾದ ಪ್ರೀತಿ, ಶಾಂತಿ, ಸಮಾಧಾನಗಳ ಕುರಿತು ವರ್ಣಿಸುತ್ತಾರೆ. ಆತನೊಂದಿಗಿನ ಒಡನಾಟವನ್ನು ವರ್ಣಿಸುತ್ತಾ ಹೀಗೆನ್ನುತ್ತಾರೆ.

ನನ್ನ ತಳ್ಳಿಬಟ್ಟಾನೇನೋ
ಹರಸೆನನ್ನು ?

ಭೂಮ್ಯಾಕಾಶ ಬಿದ್ದೋದಾಗ್ಯೂ

ತಳ್ಳನು

ಕನ್ನಡ ಸಂಗೀತಗಳು, ಗೀತೆ–೧೧೩

ಯೇಸುವಿನ ಸಾಂತ್ವನದ ವಚನ ಇದಾಗಿದೆ. 'ಭೂಮ್ಯಾಕಾಶ ಬಿದ್ದೋದ್ದಾಗ್ಯೂ ತಳ್ಳನು' ಎಂಬ ನುಡಿ ಕಷ್ಟದ ಕಣಿವೆಯಲ್ಲಿ ನೊಂದ ಮನಗಳಿಗೆ, ಆಶಾರಹಿತ ಬಾಳನ್ನು ನಡೆಸುವರಿಗೆ ಶಕ್ತಿಯನ್ನು ಉತ್ತೇಜನವನ್ನು ನೀಡುವ ನುಡಿಯಾಗಿದೆ. ಲೋಕಾಂತ್ಯದವರೆಗೂ ನಾನು ನಿಮ್ಮೊಡನೆ ಇರುತ್ತೇನೆ. ಮತ್ತಾಯ (೨೮:೨೦) ಎಂಬ ವಾಕ್ಯವನ್ನು ಇಲ್ಲಿ ನೆನಸಬಹುದು.

ಆತ್ಮ ನಿವೇದನೆ: ಯೇಸುವು ತನ್ನ ಬಾಳನ್ನು ನಡೆಸಬೇಕೆಂದು ಸಂಗೀತಗಾರ ದಾಸ ಭಾವದಿಂದ 'ಯೇಸುವೇ! ನೀನು ಎಂದೂ ನಡಿಸು' ಎಂಬ ಸಂಗೀತದಲ್ಲಿ ವ್ಯಕ್ತಪಡಿಸಿದ್ದಾರೆ. ಇದು Jesus still lead me on ಎಂಬ ಗೀತೆಯ ಭಾಷಾಂತರ ಇದು Arnstadt ಎಂಬ ರಾಗದಲ್ಲಿದೆ.

ಯೇಸುವೇ! ಎಂದೂ ನಡಿಸು;	ದುಃಖ ಬರಲು ಶಾಂತಿ ನೀ ನೀಡು
ಮಾರ್ಗಾಯಾಸವಾಗಿದ್ದಾಗ್ಯೂ	ಎಲ್ಲಾ ಶೋಧನೆಗಳನ್ನು
ಶತ್ರು ಎದುರಿಸಿದ್ದಾಗ್ಯೂ	ಸಹಿಸುವ ತಾಳ್ಮೆಯನ್ನು
ಭಯವಿಲ್ಲದೆ ಮುಂದೆ ಹೋಗುವೆ	ದಯಪಾಲಿಸು ಮೋಕ್ಷ ಸೇರಿಸು

ಕನ್ನಡ ಸಂಗೀತಗಳು, ಗೀತೆ–೧೧೧

ಸಂಗೀತಗಾರ ದೇವರಲ್ಲಿ ತನ್ನನ್ನು ಕೈಹಿಡಿದು ನಡೆಸು ಇಹಲೋಕದ ಯಾತ್ರೆ ಭಯ ಹುಟ್ಟಿಸುವಂತದ್ದಾಗಿದೆ. ಶತ್ರುಸೈನ್ಯ ತನ್ನನ್ನು ಸುತ್ತಿದೆ ಆದ್ದರಿಂದ ತನ್ನನ್ನು ಬಿಡಿಸು ಇಹದ ಶೋಧನೆ ತನ್ನನ್ನು ಮುತ್ತಿದೆ ಇದರಿಂದ ಬಿಡುಗಡೆ ಪಡೆಯಲು ನಿನ್ನ ಹಸ್ತವನ್ನು ನೀಡಿ ಕಾಪಾಡು ಎಂದು ದೀನತೆಯಿಂದ ಬೇಡುತ್ತಾನೆ.

ಶೋಧನೆ: ಇದಕ್ಕೆ ಪರೀಕ್ಷೆ ಅಥವಾ ಪರಿಶೀಲನೆ ಎಂಬ ಅರ್ಥವಿದೆ. ದೇವರು ತನ್ನ ಜನರನ್ನು ವಿಚಾರಿಸಿ ಪರೀಕ್ಷಿಸಿ ಅವರನ್ನು ಸುಧಾರಣೆಗೆ ಒಳಪಡಿಸಿ ಬಲಪಡಿಸಿ ಅವರಲ್ಲಿ ಶಿಸ್ತನ್ನು ಬರಮಾಡುತ್ತಾರೆ. ಈ ಕಾರ್ಯಗಳನ್ನು ಮಾಡಲು ಅನೇಕ ಸಂಕಷ್ಟಗಳನ್ನು ಅವರ ಮೇಲೆ ಬರಗೊಳಿಸುತ್ತಾರೆ. ಅಥವಾ ಕಠಿಣವಾದ ಸಮಸ್ಯೆಗಳಲ್ಲಿ ಅವರನ್ನು ಸಿಲುಕಿಸುತ್ತಾರೆ. ಹಳೆಒಡಂಬಡಿಕೆಯಲ್ಲಿ ದೇವರು ಅಬ್ರಹಾಮನನ್ನು ಆತನ ಒಬ್ಬನೇ ಮಗನಾದ ಇಸಾಕನನ್ನು ಬಲಿಕೊಡಲು ತಿಳಿಸುವ ಮೂಲಕ ಪರೀಕ್ಷೆಗೆ ಒಡ್ಡಿದರು (ಆದಿ ೨೨:೧:೯). ಯೋಬನ ಗ್ರಂಥದಲ್ಲಿ ಯೋಬನಿಗೆ ಬಂದ ಪರೀಕ್ಷೆಯ ವಿವರಗಳಿವೆ. ದೇವರ ವಿಷಯವಾಗಿ ಯೋಬನು ಹೀಗೆ ಹೇಳಿದನು 'ಆತನು ನನ್ನನ್ನು ಶೋಧಿಸಿದಾಗ ನಾನು ಚಿನ್ನದಂತೆ ಹೊರಬಂದನು' (ಯೋಹಾ ೨೩:೧೦) ಈ ರೀತಿಯಾಗಿ ದೇವರು ಎಲ್ಲಾ ಕ್ರೈಸ್ತರನ್ನು ಶೋಧಿಸಿ ಶಿಸ್ತಿಗೆ ಒಳಪಡಿಸುತ್ತಾನೆ

(೧ ಕೊರಿಂಥ ೧೧:೩೨), ಈ ಉದಾಹರಣೆಗಳಲ್ಲಿ ನಾವು ಹೆಚ್ಚು ಪರಿಶುದ್ಧರಾಗಿರಬೇಕೆಂತಲೂ ಮತ್ತು ನಮ್ಮಲ್ಲಿ ಆತ್ಮೀಯತೆಯು ಒಳ್ಳೆಯತನಕ್ಕಾಗಿ ದೇವರು ಶೋಧಿಸುತ್ತಾನೆ. ನಮ್ಮನ್ನು ಶೋಧಿಸುವಾಗ ದೇವರು ತಾನೇ ತನ್ನ ಮಕ್ಕಳ ಮೇಲೆ ಕೆಡುಕನ್ನು ಕಳುಹಿಸುವುದಿಲ್ಲ ಬದಲಾಗಿ ಸೈತಾನನು ಹೀಗೆ ಮಾಡಲು ಅನುಮತಿಸುತ್ತಾನೆ.

ಪವಿತ್ರ ಗ್ರಂಥದಲ್ಲಿ ಕಂಡು ಬರುವ ಶೋಧನೆಗೆ ಎರಡನೇ ಅರ್ಥವು ಕೆಡಕು ಮಾಡುವ ಇಚ್ಛೆ. ಪಾಪ ಮಾಡುವ ಆಸೆಯಾಗಿದೆ. ಮನುಷ್ಯನು ಪಾಪ ಸ್ವಭಾವನಾದುದರಿಂದ ಅಥವಾ ಆತನ ಆತ್ಮದಲ್ಲಿ ದುಷ್ಟ ಆಸೆಗಳು ಉಂಟಾಗುತ್ತದೆ. (ಯಾಕೋಬ ೧:೧೩-೧೫) ದೇವರಿಗೆ ವಿಮುಖರಾಗಲು, ಪಾಪವನ್ನು ಮಾಡಲು ಸೈತನನು ಯಾವಾಗಲೂ ನಮ್ಮ ಹೃದಯದಲ್ಲಿ ದುರಾಸೆಯನ್ನುಂಟು ಮಾಡುತ್ತಾನೆ. ಸೈತಾನನು ಶೋಧಕ ಎಂದು ಕರೆಯಲ್ಪಟ್ಟಿದ್ದಾನೆ. ಈ ಎರಡನೇ ತರಹದ ಶೋಧನೆ ದೇವರಿಂದ ಎಂದಿಗೂ ಬರುವುದಿಲ್ಲ, ಮತ್ತೇ ಅದು ನಮ್ಮ ಒಳ್ಳೆಯದಕ್ಕೂ ಅಲ್ಲ, ಕೆಟ್ಟದ್ದನ್ನು ಮಾಡ ಬಯಸುವ ಶೋಧನೆಗಳು ಯಾವಾಗಲೂ ಸೈತಾನನಿಂದ ಬರುವಂತಹವು. ಈ ಶೋಧನೆಗಳಿಂದ ನಾವು ತಪ್ಪಿಸಿಕೊಳ್ಳುವಂತೆ ಪ್ರಾರ್ಥಿಸುವುದು ಅಗತ್ಯ.

ಭಕ್ತನು ದುರ್ಮಾಗದಿಂದ ಹೊರಬಂದು ಸನ್ಮಾಗದಲ್ಲಿ ನಡೆಯಲು ಬಯಸಿದಾಗ ಆತನ ಅಂತರಾಳದಲ್ಲಿ ಮೂಡುವ ಒಂದು ಭಾವವೇ ಪಶ್ಚಾತ್ತಾಪ. ದೇವರ ಕೃಪೆಯಿಂದ ಪ್ರೀತಿಯಿಂದ ದೂರ ಸರಿದುದ್ದಕ್ಕಾಗಿ ಆತನ ಹೃದಯ ನೊಂದುಕೊಳ್ಳುತ್ತದೆ. ಇಂದಿನಿಂದಾದರೂ ಒಳ್ಳೆಯ ಜೀವನ ನಡೆಸಬೇಕೆಂದು ಆತ ಆಶಿಸುತ್ತಾನೆ. ಈ ಅಂಶವನ್ನೇ ಕೇಂದ್ರವಾಗಿಟ್ಟುಕೊಂಡು ಬರೆದ ಗೀತೆಯೇ 'ಬನ್ನಿ ಪಶ್ಚಾತಾಪದಿಂದ' ಇದು St. Oswald ಎಂಬ ರಾಗದಲ್ಲಿದೆ.

ಬನ್ನಿ ಪಶ್ಚಾತಾಪದಿಂದ	ಹೇಗೆ ಮೊಳಕೆಯ ಮೇಲೆ	ಮಳೆಯಿಂದ ಅಂದ ಪುಷ್ಪ
ಸ್ವಾಮಿ ಹತ್ರ ಬರುವ;	ತಿಳಿ ಮಂಜು ಬೀಳುತ್ತದೋ	ವಿಕಸಿಸ್ವ ಮೇರೆಗೆ
ಆತನಲ್ಲಿ ಕೃಪೆಯುಂಟು	ಹಾಗೆ ನಮ್ಮ ಮೇಲೆ ಕೃಪೆ	ನಮ್ಮ ಮನದೊಳಾನಂದ
ಆತ ಶಾಂತಿ ಕೊಡುವ	ಸುರಿಸುವನಲ್ಲವೋ?	ಹುಟ್ಟಿ ತೃಪ್ತಿಯಾಗುತ್ತೆ

ಕನ್ನಡ ಗೀತೆಗಳು, ಗೀತೆ-೧೨೪

ಇಲ್ಲಿ ಯೇಸುವಿನ ನೀತಿಗುಣವನ್ನು ನೀತಿಸೂರ್ಯ ಎಂಬ ಬಿರುದಿನಿಂದ ಹೊಗಳಿದ್ದಾನೆ. ಯೇಸುವು ಬದುಕಿನಲ್ಲಿ ಉದಯಿಸಿದಾಗ ದುಃಖ ತಾಪತ್ರಯಗಳೆಂಬ ರಾತ್ರಿ ಬಹುದೂರ ಸರಿಯಿತು. ಹಾಗೆಯೇ ಯೇಸುವಿನ ಕೃಪೆಯನ್ನು ಅಲಂಕಾರಿಕ ಭಾಷೆಯಲ್ಲಿ ಮೊಳಕೆಯ ಮೇಲೆ ಹೇಗೆ ಮಂಜು ಬೀಳುತ್ತದೆಯೋ ಹಾಗು ಮಳೆಯಿಂದ ಸುಂದರ ಪುಷ್ಪ ವಿಕಸಿಸುತ್ತದೆಯೋ ಹಾಗೆ ಮನದೊಳಗೆ ದೇವರಕೃಪೆ ಆನಂದವನ್ನು ಹುಟ್ಟಿಸುತ್ತದೆ ಎಂಬ ಹೋಲಿಕೆ ಸಮಂಜಸವಾಗಿದೆ.

ಕವಿಯ ಕಲ್ಪನಾಶಕ್ತಿಗೆ ಹಿಡಿದಿಟ್ಟ ಕನ್ನಂಡಿಯಂತಿದೆ ಈ ಹೋಲಿಕೆ. ಪ್ರಕೃತಿ ಸಹಜವಾದ ಮಂಜು, ಹೂವು, ಮಳೆ ಉದಾಪರಣೆಯಾಗಿ ತೆಗೆದುಕೊಳ್ಳುವುದರ ಮೂಲಕ ದೇವರ ಕೃಪೆಯನ್ನು ವರ್ಣಿಸುವಲ್ಲಿ ಕವಿ

ಯಶಸ್ವಿಯಾಗಿದ್ದಾನೆ. ಪ್ರಕೃತಿಗೂ ಧರ್ಮಕ್ಕೂ ನಿಕಟ ಸಂಬಂಧವಿದೆ. ದೇವರ ಮಹತ್ಕಾರ್ಯಗಳನ್ನು ಪ್ರಕೃತಿಯಲ್ಲಿನ ಸೃಷ್ಟಿಗಳಲ್ಲೂ ಕಾಣುತ್ತಿದ್ದಾನೆ ಗೀತಗಾರ. ಪ್ರಕೃತಿಯ ಮಹತ್ಕಾರ್ಯಗಳನ್ನು ಸೃಷ್ಟಿಗಳಲ್ಲೂ ಕಾಣುತ್ತಿದ್ದಾನೆ. ಪ್ರಕೃತಿಯ ಸೃಷ್ಟಿಗಳಲ್ಲಿ ದೇವರ ಸಾನಿಧ್ಯವನ್ನು ಕಾಣುತ್ತಿದ್ದಾನೆ. ಮಳೆಯಿಂದ ಭೂಮಿ ತಣಿದು ಗಿಡಮರಗಳು ಸುಂದರ ಪುಷ್ಪವನ್ನು ನೀಡುವಂತೆ ಎಂಬ ಹೋಲಿಕೆಯಲ್ಲಿ ಮನುಷ್ಯ ಮನಸ್ಸಿನಲ್ಲಿ ಸುಂದರ ಭಾವಗಳು ಅರಳುವುದಕ್ಕೆ ಸಾಧ್ಯವಿದ್ದು ಅದು ಫಲಕೊಡುತ್ತದೆ ಎಂಬ ಭಾವನೆಯನ್ನು ವ್ಯಕ್ತ ಪಡಿಸುತ್ತದೆ. ದೇವರ ವರದಾನಗಳು, ಕೃಪಾವರಗಳು ಮನುಷ್ಯ ಮನಸ್ಸನ್ನು ತಾಗಿದಾಗ ಆತನು ಒಬ್ಬ ಸುಂದರ ಸೃಷ್ಟಿಯಾಗುತ್ತಾನೆ. ಇಂತಹ ಪರಿಶುದ್ಧ ಜೀವನ ನಡೆಸಿದಾಗ ಅದು ಸಾಧ್ಯ ಎಂಬ ಮಹಾನ್ ಸತ್ಯದತ್ತ ನಮ್ಮ ಗಮನ ಸೆಳೆದಿದೆ ಈ ಗೀತೆ. ಧಾರ್ಮಿಕ ಅಂಶಗಳನ್ನು ನಿಸರ್ಗಕ್ಕೆ ಹೋಲಿಸಿ ವರ್ಣಿಸುವುದರಿಂದ ಸಾಧಾರಣ ಮನುಷ್ಯನು ಅದನ್ನು ಅರ್ಥೈಸಿಕೊಳ್ಳಲು ಸಾಧ್ಯವಾಯಿತು. ಮಿಶನರಿಗಳು ಸಾಧಾರಣ ವ್ಯಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಗೀತೆ ರಚಿಸಿದ್ದರಿಂದ ಎಲ್ಲ ವರ್ಗದ ವ್ಯಕ್ತಿಗಳು ಅದನ್ನು ಅರ್ಥೈಸಿಕೊಳ್ಳಲು ಸಾಧ್ಯವಾಯಿತು.

ಸ್ತುತಿ: ಯೇಸುವನ್ನು ಒಡೆಯನೆಂದು ಕರೆದು ಆತನಿಗೆ ಸ್ತುತಿ ಸಲ್ಲಿಸುವ ಬಗೆ 'ದೇವರಿಗೆ ಸ್ತೋತ್ರವು' ಎಂಬ ಗೀತೆಯಲ್ಲಿ ಸರಳವಾಗಿ ವ್ಯಕ್ತವಾಗಿದೆ.

ಎನ್ ದೇವರೇ!
ನಾನ್ ಹಾಡುವೆ
ಎನ್ ಒಡೆಯ ನೀನು;
ಎನ್ ಪ್ರಾಣವ
ಎನ್ ಕಾಲವ
ನಿನ್ಗರ್ಪಿಸುವೆನು

ಎನ್ ನಾಲಗೇ!
ಎನ್ ಆತ್ಮವೇ!
ಸಂಗೀತ ಹಾಡಿರಿ;
ಎನ್ನೊಡನೆ
ಸಮಸ್ತರೇ
ಸಂಸ್ತುತಿ ಮಾಡಿರಿ

ಕನ್ನಡ ಸಂಗೀತಗಳು, ಗೀತೆ–೨೬

ಸರಳ ಪದಗಳ ಜೋಡಣೆ, ಆದಿಪ್ರಾಸ ಮೂರು ಮೂರು ಸಾಲುಗಳ ರಚನೆ ದೇಶೀಯತೆಯನ್ನು ವ್ಯಕ್ತಪಡಿಸುತ್ತದೆ.

ಛಂದಸ್ಸು: ಜೆ.ಬಿ. ಕೋಲ್ಸನು ಪಾಶ್ಚಾತ್ಯ ರಾಗವಾದ ಟ್ಯೂಟೋನಿಕ್ ರಾಗದಲ್ಲಿ ಗೀತೆಗಳನ್ನು ರಚಿಸುವುದರೊಂದಿಗೆ ದೇಶಿಯ ಲಯದಲ್ಲಿಯೂ ಬರೆಯಲು ಪ್ರಯತ್ನಿಸಿದರು. ಉದಾ:

ಎನ್ ದೇವರೇ!
ನಾನ್ ಹಾಡುವೆ
ಎನ್ ಒಡೆಯ ನೀನು;

ಎನ್ ಪ್ರಾಣವ
ಎನ್ ಕಾಲವ
ನಿನ್ಗರ್ಪಿಸುವೆನು

ಕನ್ನಡ ಸಂಗೀತಗಳು, ಗೀತೆ–೨೬

ಜೆ.ಬಿ ಕೋಲ್ಸ್‌ರವರ ಗೀತೆಗಳ ವೈಶಿಷ್ಟ್ಯತೆಗಳು: ಇವರ ಹೆಚ್ಚಿನ ಗೀತೆಗಳು ಸ್ವರಚಿತವಾಗಿದೆ. ಧಾರ್ಮಿಕ ವಿಚಾರಗಳನ್ನು ಪ್ರಕೃತಿಯೊಂದಿಗೆ ಹೋಲಿಸಿ ವರ್ಣಿಸಿರುವ ಬಗೆ, ಗೀತೆ ೧೨೪ರಲ್ಲಿ ಸಮಂಜಸವಾಗಿ ಮೂಡಿ ಬಂದಿದೆ. ಪ್ರಕೃತಿ ದತ್ತವಾದ ಮಂಜು, ಹೂವು, ಮಳೆಗಳನ್ನು ಉದಾಹರಣೆಯಾಗಿ ಬಳಸುತ್ತಾ ದೇವರಕೃಪೆಯನ್ನು ವರ್ಣಿಸಿರುವ ರೀತಿ ಅರ್ಥಗರ್ಭಿತವಾಗಿದೆ. ದೇವಕೃಪೆ ಮನುಷ್ಯ ಬದುಕನ್ನು ಮುಟ್ಟಿದಾಗ ಉತ್ತಮ ಭಾವನೆಗಳು ನಮ್ಮಲ್ಲರಳಿ ಸುಂದರ ಪುಷ್ಪದಂತೆ ಅದು ಅರಳುತ್ತದೆ ಎಂಬ ಕವಿಯ ಕಲ್ಪನೆ, ನಿಜಕ್ಕೂ ಆತನ ಸೃಜನಶೀಲತೆಯನ್ನು ಬಿಂಬಿಸುವುದಾಗಿದೆ.

ಸಮಾಜದ ದುಃಖಿತ ದುಡಿತದ ಭವಣೆಪಡುವ ಜನರನ್ನು ಸಾಂತ್ವನಗೊಳಿಸಬಲ್ಲ ಗೀತೆಗಳು ಅರ್ಥಗರ್ಭಿತವಾಗಿ ರಚನೆಯಾಗಿದೆ.

ಗೀತೆಗಳಲ್ಲಿ ಕಾವ್ಯಗುಣ ಕಡಿಮೆಯಾಗಿದ್ದರೂ ಎಲ್ಲಾ ಗೀತೆಗಳು ಧಾರ್ಮಿಕ ಮನೋಭಾವ ಮೂಡಿಸುವಲ್ಲಿ ಯಶಸ್ವಿಯಾಗಿವೆ. ಅರ್ಥ ಪ್ರಧಾನವೇ ಹೊರತು ಗೇಯತೆಗೆ ಪ್ರಾಮುಖ್ಯತೆ ನೀಡದೆ ಗದ್ಯಮಯವಾಗಿವೆ.

೫.೧.೫ ಮಿಸ್.ಎಲ್.ಎಮ್ ಬುಟ್ಲರ್– Miss. L. M. Butler

ಲಂಡನ್ ಮಿಶನರಿಗಳಲ್ಲಿ ಮಹಿಳಾ ಮಿಶನರಿಗಳು ಶೈಕ್ಷಣಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಗೀತಸಾಹಿತ್ಯಕ್ಕೆ ಕೊಡುಗೆಯನ್ನು ನೀಡಿದ ಮಿಸ್. ಎಲ್.ಎಮ್ ಬುಟ್ಲರ್‌ರ ಸೇವೆ ಸ್ಮರಣೀಯ.

"ಬಾಲಕರಿಗಾಗಿ ಗಂಗಸಮುದ್ರದಲ್ಲಿ ಹೊಸದಾಗಿ ಪ್ರಾರಂಭಿಸಿದ್ದ Village Homeನಲ್ಲಿ ಸೇವೆ ಸಲ್ಲಿಸುತ್ತಿದ್ದರು. ಹೊಸ ಯೋಜನೆಯ ಪ್ರಕಾರ ಬಾಲಕರಿಗೆ ಹಾಡುಗಳನ್ನು ಕಲಿಯುವ ಅವಕಾಶ ಮಾಡಿಕೊಡಲಾಗಿತ್ತು. ಬೈಬಲ್‌ನ ನೀತಿಕತೆಗಳನ್ನು ಬಾಲಕರು ಪ್ರದರ್ಶಿಸುತ್ತಿದ್ದರು. ಮಿಸಸ್ ಬುಟ್ಲರ್, ಮಿಸಸ್ ಟೆಡಿಬಾಲ್, ಮಿಸ್ಟರ್ ಜೈಪಾಲ್‌ರವರು ಬಾಲಕರಿಗೆ ಹಾಡಲು ಮತ್ತು ನಟಿಸಲು ತರಬೇತಿಯನ್ನು ಕೊಡುತ್ತಿದ್ದರು. ಶೈಕ್ಷಣಿಕ ಕಾರ್ಯಗಳಲ್ಲಿ ಹಾಗೂ ಸುವಾರ್ತಾ ಸೇವೆಗಳಲ್ಲಿ ಮೌಲ್ಯಯುತ ಸೇವೆಸಲ್ಲಿಸಿದರು."[೩೨] "ಬೆಂಗಳೂರು ಸಿಟಿಯ ಗರ್ಲ್ಸ್ ಹೈಸ್ಕೂಲ್ ಮತ್ತು ಬೋರ್ಡಿಂಗ್ ಹೋಂನ ಪ್ರಿನ್ಸಿಪಾಲರಾಗಿದ್ದರು."[೩೩] "ಇಲ್ಲಿ ಮೂವತ್ತೆರಡು ವರ್ಷಗಳ ದೀರ್ಘಕಾಲಗಳವರೆಗೆ ಸೇವೆ ಸಲ್ಲಿಸಿ ನಿವೃತ್ತರಾದರು. ಇವರ ತರುವಾಯ ಮಿಸಸ್ ಮತ್ತಾಯಿರವರು ಕಾರ್ಯ ನಿರ್ವಹಿಸತೊಡಗಿದರು."[೩೪]

ಗೀತೆಗಳ ಅಧ್ಯಯನ: 'ಕನ್ನಡ ಸಂಗೀತ ಸಂಗ್ರಹ' (೨೦೦೭) ಗೀತಪುಸ್ತಕದಲ್ಲಿ ಇವರ ಒಂದು ಗೀತೆಯು ಕಂಡು ಬರುತ್ತದೆ. ಆಯ್ದುಕೊಂಡ ವಸ್ತು ವಿಷಯಗಳಿಗೆ ಸಂಬಂಧಿಸಿದಂತೆ ಗೀತೆಯ ಅಧ್ಯಯನ ನಡೆದಿದೆ.

ಕ್ರೈಸ್ತರ ಜೀವನ: ಭಕ್ತನ ಶತ್ರುಗಳು ದೇವರು ಆತನನ್ನು ರಕ್ಷಿಸಲಾರನೆಂದು ಹೇಳಿದ್ದಕ್ಕೆ ಅವನು, 'ರಕ್ಷಣೆಯು ದೇವರಿಂದಲೇ ಹೊರತು ಇನ್ಯಾರಿಂದಲೂ ಉಂಟಾಗುವುದಿಲ್ಲವೆಂದು ಉಜ್ವಲವಾದ ಉತ್ತರವನ್ನು

ಕೊಡುತ್ತಿದ್ದಾನೆ' (ಕೀರ್ತನೆ ೩:೬). ಈ ವಾಕ್ಯವನ್ನು ನೆನಪಿಸುತ್ತದೆ 'ನೋಡು ಕ್ರಿಸ್ತ ಭಕ್ತ ನಿನ್ನ ಸುತ್ತಲು' ಎಂಬುದು. ಕ್ರೈಸ್ತರ ಬದುಕು ಹೋರಾಟದ ಬದುಕೇ ಆಗಿದೆ.

ನೋಡು ಕ್ರಿಸ್ತ ಭಕ್ತ ನಿನ್ನ ಸುತ್ತಲು
ಅಂಧಕಾರ ಸೈನ್ಯ ವರ್ತಿಸಿರ್ಪುದು:
ಸೈನಿಕ ಎದ್ದೇಳು; ಸುಖವೇತಕ್ಕೆ ?
ಜಯ ಪ್ರದಾಯುಧ ದಿವ್ಯ ಶಿಲೆಯು

ಕನ್ನಡ ಸಂಗೀತಗಳು, ಗೀತೆ–೨೦೦೪

ಅಂಧಕಾರ ಶಕ್ತಿಯು ಭಕ್ತನನ್ನು ಪೀಡಿಸಿ ಆತನನ್ನು ಉಪದೇಶಿಸುವ ಬಗೆಯನ್ನು ಗೀತಗಾರ ಈ ಚರಣದಲ್ಲಿ ಹೀಗೆಂದಿದ್ದಾನೆ.

ಉಪವಾಸ, ಜಪ, ಎಲ್ಲಾ ವ್ಯರ್ಥವು
ಎಂಬ ವಂಚಕನ ಮಾತುಂಟಾಗಲು
ಹೇಳು ಧೈರ್ಯದಿಂದ ನಿತ್ಯ ಪ್ರಾರ್ಥಿಪೆ
ತೀರುತ್ತದೆ ಯುದ್ಧ ಶಾಂತಿ ಸಿಕ್ಕುತ್ತೆ

ಉಪವಾಸ: ಉಪವಾಸ ಮಾಡುವುದು ಕ್ರೈಸ್ತಸಭೆಯಲ್ಲಿ ಮೊದಲನೆಯ ಎರಡು ಶತಮಾನಗಳಲ್ಲಿ ಪ್ರತಿಯೊಬ್ಬನ ಇಷ್ಟಕ್ಕೆ ಬಿಡಲ್ಪಟ್ಟಿದ್ದಿತು. ಮೂರನೇ ಶತಮಾನದ ಲಾಗಾಯಿತು, ಕ್ರೈಸ್ತಸಭೆಯಲ್ಲಿ ಉಪವಾಸ ಮಾಡುವುದು ವಿಧಿಯಾಯಿತು. ೪ನೇಯ ಶತಮಾನದಲ್ಲಿ ಹಲವು ಮಂದಿ ಬೋಧಕರು ಉಪವಾಸದಲ್ಲಿ ಪಾಪವನ್ನು ನಿವಾರಣೆ ಮಾಡುವ ಪುಣ್ಯವಿದೆಯೆಂದು ಬೋಧಿಸುವುದಕ್ಕೆ ಪ್ರಾರಂಭಿಸಿದರು. ಈ ಅಭಿಪ್ರಾಯವು ರೋಮನ್ ಸಭೆಯಲ್ಲಿಯೂ, ಗ್ರೀಕ್ ಸಭೆಯಲ್ಲಿಯೂ ನೆಲೆಯಾಗಿ ನಿಂತಿತು. ಯೆಹೂದ್ಯರು ಯೇಸುವನ್ನು ಕೊಲ್ಲಬೇಕೆಂದು ತೀರ್ಮಾನಿಸಿದ ಆ ಬುಧುವಾರವು ಆತನು ಸತ್ತ ಆ ಶುಕ್ರವಾರವು ಆ ಕಾಲದ ಲಗಾಯಿತು ಉಪವಾಸ ದಿನಗಳಾಗಿದ್ದವು. ಯೇಸುವಿನ ಮರಣವನ್ನು ಜ್ಞಾಪಕ ಮಾಡುವ ಆ ಶುಕ್ರವಾರಕ್ಕೆ ಹಿಂದಿನ ನಲವತ್ತು ದಿನಗಳು ಉಪವಾಸದ ದಿನಗಳಾಗಿದ್ದರು ಮೋಶೆಯ ೪೦ ದಿನಗಳವರೆಗೂ ಉಪವಾಸ ಮಾಡುವುದರಿಂದಲೂ (ವಿಮೋಚನೆ ೩೪–೨೮) ಇಸ್ರಯೇಲ್ಯರು ೪೦ ವರ್ಷ ಅರಣ್ಯದಲ್ಲಿ ಪ್ರಯಾಣ ಮಾಡಿದುದರಿಂದಲೂ ಕ್ರಿಸ್ತನು ಅಡವಿಯಲ್ಲಿ ನಲವತ್ತು ದಿನಗಳು ಉಪವಾಸವಾಗಿದ್ದುದರಿಂದಲೂ ನಲವತ್ತು ದಿನಗಳವರೆಗೆ ಒಪ್ಪತ್ತು ಉಪವಾಸವಾಗಿರಬೇಕೆಂದು ಹೇಳುವುದುಂಟು. ಇದಲ್ಲದೇ ಒಪ್ಪತ್ತಿರಬೇಕಾದ ಬೇರೆ ಕಾಲಗಳನ್ನು ಏರ್ಪಡಿಸಿರುವುದುಂಟು.

ಯೇಸು ಒಬ್ಬ ಮೂರ್ಛಾ ರೋಗಿಯನ್ನು ಗುಣಪಡಿಸಿದಾಗ ಆತನ ಶಿಷ್ಯರು ಪ್ರತ್ಯೇಕವಾಗಿ ಯೇಸುವಿನ ಬಳಿಗೆ ಬಂದು 'ಆ ದೆವ್ವವನ್ನು ಬಿಡಿಸಲು ನಮ್ಮಿಂದಾಗಲಿಲ್ಲವಲ್ಲ ಅದೇಕೆ? ಎಂದು ಕೇಳಿದರು.

ಆಗ ಯೇಸು 'ಉಪವಾಸ ಮತ್ತು ಪ್ರಾರ್ಥನೆಯಿಂದ ಮಾತ್ರ ಇದನ್ನು ಗುಣಪಡಿಸಲು ಸಾಧ್ಯವೆಂದು ಹೇಳಿದರು' (ಮತ್ತಾಯ ೧೭:೨೧).

ಉಪವಾಸ ಮತ್ತು ಪ್ರಾರ್ಥನೆಗಳು ಬಲಯುತವಾದ ಅಸ್ತ್ರಗಳಾಗಿದ್ದು ಇದರಿಂದ ಶತ್ರುವನ್ನು ಜಯಿಸಲು ಸಾಧ್ಯವಿದೆ ಎಂಬ ಮಹತ್ವದ ಅಂಶದತ್ತ ಗೀತೆ ನಮ್ಮ ಗಮನ ಹರಿಸಿರುವುದು ವಿಶಿಷ್ಟವಾಗಿದೆ.

ಮಿಸ್. ಎಲ್. ಎಮ್. ಬುಟ್ಲರ್‌ರವರ ಗೀತೆಗಳು ವೈಶಿಷ್ಟ್ಯತೆಗಳು: ಇವರು ಕೇವಲ ಒಂದೇ ಒಂದು ಗೀತೆಯನ್ನು ಬರೆದರೂ ಮಹತ್ವ ಪೂರ್ಣ ಅಂಶವಾದ ಉಪವಾಸ, ಪ್ರಾರ್ಥನೆ, ಅಂಧಕಾರದ ಶಕ್ತಿಯ ವಿರುದ್ಧ ಹೋರಾಟ ಎಂಬ ಅಂಶಗಳತ್ತ ನಮ್ಮ ಗಮನ ಹರಿಸಿವೆ. ಕ್ರೈಸ್ತರ ಬದುಕು ನಿರಂತರ ಸಾಹಸದ ಬದುಕಾಗಿದೆ. ಪೈಶಾಚಿಕ ಶಕ್ತಿಗಳಿಂದ ಶತ್ರು ಸೈನ್ಯದಿಂದ ಬಿಡುಗಡೆ ಹೊಂದಿ ಶಾಂತಿಯ ಬಾಳನ್ನು ನಡೆಸಲು ಪ್ರೇರಣೆ ನೀಡುವ ಗೀತೆ ಇದಾಗಿದೆ.

ಶತ್ರುವು ನಮ್ಮನ್ನು ಕೆಟ್ಟ ದಾರಿಯಲ್ಲಿ ಸಾಗಿಸಲು ನಿರಂತರ ಪ್ರೇರೇಪಿಸುತ್ತದೆ. ಉದಾ: ಉಪವಾಸ, ಜಪ ಎಲ್ಲಾ ವ್ಯರ್ಥವು ಎನ್ನುತ್ತದೆ. ನೈತಿಕವಾದ ಶಕ್ತಿ ಇಲ್ಲದಿದ್ದಾಗ ಸಹಜವಾಗಿಯೇ ನಾವು ಸೈತಾನನ ಪ್ರಲೋಭನೆಗಳಿಗೆ ಒಳಗಾಗಿ ಉತ್ತಮ ಆಚಾರಗಳನ್ನು ಬಿಟ್ಟು ಆತನ ವಶಕ್ಕೆ ಸೇರಿಕೊಳ್ಳುತ್ತೇವೆ. ಇಂತಹ ಸಂದರ್ಭದಲ್ಲೂ ಸೈತಾನನ ಪ್ರೇರಣೆಯನ್ನು ಮೀರುವ ಆತನ ದಾರಿಯನ್ನು ತ್ಯಜಿಸುವ ಆತ್ಮಶಕ್ತಿ ನಮಗೆ ಅಗತ್ಯವಾಗಿ ಬೇಕಾಗಿದೆ. ಗೀತಗಾರ ತಾನಂತೂ ಆತನ ವಶಕ್ಕೆ ಬೀಳಲಾರೆ ಬದಲಾಗಿ ನಿತ್ಯ ಪ್ರಾರ್ಥಿಪೆ ಎಂಬ ನಿರ್ಧಾರಕ್ಕೆ ಬರುವುದರ ಮೂಲಕ ಆತನನ್ನು ಸಂಪೂರ್ಣವಾಗಿ ವಿರೋಧಿಸಿದ್ದೇನೆ ಎಂದು ಹೇಳುತ್ತಾನೆ. ಗೀತಗಾರನ ಈ ನಿರ್ಧಾರವು ಪ್ರತಿಯೊಬ್ಬರ ನಿರ್ಧಾರವಾದಾಗ ಬಾಳು ಶಾಂತಿಯುತವಾಗುತ್ತದೆಂದು ಭಾವಿಸುವ ಗೀತಗಾರನ ನಿಲುವು ಆದರ್ಶಪ್ರದವಾಗಿದೆ.

ಲಂಡನ್ ಮಿಶನರಿಗಳ ಗೀತೆಗಳ ವಿಶಿಷ್ಟಾಂಶಗಳು: ಲಂಡನ್ ಮಿಶನರಿಗಳು ರಚಿಸಿದ ಕ್ರೈಸ್ತಗೀತೆಗಳ ವಿಷಯವು ಶ್ರೀಮಂತವಾಗಿದ್ದು ವಿಶಿಷ್ಟವೂ ಆಗಿದೆ. ಈ ಗೀತೆಗಳು ಕ್ರಿಸ್ತನ ಆಗಮನ, ಆತನ ವ್ಯಕ್ತಿತ್ವ, ತತ್ವಬೋಧನೆಗಳ ಸಮಗ್ರ ಚಿತ್ರಣವನ್ನು ಕೊಡುವಲ್ಲಿ ಯಶಸ್ವಿಯಾಗಿದೆ. ಸಹೋದರರೇ ಎಲ್ಲರೂ ಹರ್ಷಿಸಿ (ಗೀತೆ ೩೪), ಇದ್ದಾನೆ ಘನವೈದ್ಯನು (ಗೀತೆ ೧೦೫), ಆಶ್ಚರ್ಯಕರವಾದ ಶಿಲುಬೆ (ಗೀತೆ ೯೪), ಯೇಸು ಕರ್ತನೆದ್ದನು (ಗೀತೆ ೪೨) ಇತ್ಯಾದಿ ಗೀತೆಗಳು ಕ್ರಿಸ್ತನ ಒಟ್ಟಾರೆ ವ್ಯಕ್ತಿತ್ವವನ್ನು ನಮ್ಮ ಕಣ್ಣು ಮುಂದೆ ತರುತ್ತದೆ. ಈ ಗೀತೆಗಳು ಧಾರ್ಮಿಕ ಹಿನ್ನಲೆಯ ಘನತೆಯಿಂದ ಅತಿ ಮುಖ್ಯವೆನಿಸಿವೆ. ಈ ಮಿಶನರಿಗಳು ಬರೆದ ಗೀತೆಗಳ ಒಟ್ಟು ವೈಶಿಷ್ಟ್ಯವನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ದೇವರ ಕರುಣೆ, ಪ್ರೀತಿ, ಕೃಪೆ ಹಾಗೂ ಆತನ ಕ್ಷಮಾಗುಣವನ್ನು ವರ್ಣಿಸುವ ಹೇಳಿಕೆಗಳಾಗಿದ್ದು ದೇವ ಮತ್ತು ಮಾನವನ ಅನ್ಯೋನ್ಯ ಸಂಬಂಧವನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

೨. ಕ್ರೈಸ್ತ ಧಾರ್ಮಿಕ ಪದಗಳನ್ನು ಭಾರತೀಕರಣಗೊಳಿಸಿದ್ದರಿಂದ ಕ್ರೈಸ್ತ ತತ್ವಗಳನ್ನು ಬೇಗನೆ ಅರ್ಥೈಸಿಕೊಳ್ಳಲು ಸಾಧ್ಯವಾಗಿದೆ.

೩. ಗೀತೆಗಳು ಬೈಬಲ್ ಆಧಾರಿತ ವಾಕ್ಯಗಳೊಂದಿಗೆ ಹೋಲಿಕೆಯಾಗಿರುವುದರಿಂದ ದೇವ ವಾಕ್ಯಗಳ ಕಲಿಯುವಿಕೆಗೆ ಸುಲಭ ಮಾರ್ಗವಾಯಿತು.

೪. ಕ್ರೈಸ್ತ ಪಾರಿಭಾಷಿಕ ಪದಗಳಾದ ಕುರುಬ, ತ್ರೈಯೇಕ, ಬಂಡೆ ಯೇಸುವಿನ ರಕ್ತ, ಚಿಯೋನಾ, ಪುನರುತ್ಥಾನ, ಹೃದಯ ಇತ್ಯಾದಿ ಪದಗಳು ಕ್ರೈಸ್ತ ಧಾರ್ಮಿಕ ಚೌಕಟ್ಟಿನಲ್ಲಿ ವಿಶೇಷ ಅರ್ಥವನ್ನು ಪಡೆದುಕೊಂಡಿದೆ.

೫. ಗೀತೆಗಳ ಮೂಲ ಕರ್ತೃಗಳು ಗೀತ ರಚಿಸಲು ಪ್ರೇರಿತವಾದ ರೀತಿ ಎಲ್ಲರಿಗೂ ಸ್ಫೂರ್ತಿ ನೀಡುವುದಾಗಿದೆ.

೬. ಕೆಲವು ವಿಶೇಷ ಸಂದರ್ಭಗಳಲ್ಲಿ ಬಳಸುವ ಗೀತೆಗಳು ಇಂದು ಆಂಗ್ಲ ಮತ್ತು ಕನ್ನಡದಲ್ಲಿ ಜನಪ್ರಿಯವಾಗಿದೆ. ಉದಾ: ಹಾ! ಎಂಥಹಾ ಅಮೂಲ್ಯ ಮಿತ್ರ (ಗೀತೆ ೧೧೪), ಆಕಾಶ ವಾಸ ಮಾಡುವ (ಗೀತೆ ೨೪), ಎಲ್ಲಾ ಒಳ್ಳೆಯ ದಾನಗಳು (ಗೀತೆ ೧೫೫), ಕೇಳು ದೂತರ್ಗಾನವ (ಗೀತೆ ೩೫) ಇತ್ಯಾದಿ.

೭. ಪದಗಳ ಬಳಕೆ ಕಾಲದಿಂದ ಕಾಲಕ್ಕೆ ಬದಲಾಗುತ್ತ ಶಿಷ್ಟ ಭಾಷೆಯನ್ನು ಬಳಸಿಕೊಂಡಿದೆ.

೮. ಪ್ರಾರಂಭದಲ್ಲಿ ಭಾಷಾಂತರ ಗೀತೆಗಳಲ್ಲಿ ತೊಡಗಿದ ಮಿಶನರಿಗಳು ಕಾಲ ಕ್ರಮೇಣ ಸ್ವರಚಿತ ಗೀತೆಗಳ ರಚನೆಯಲ್ಲಿ ತೊಡಗಿದ್ದು ಅವರ ಪ್ರತಿಭೆಗೆ ಹಿಡಿದ ಕೈಗನ್ನಡಿಯಾಗಿದೆ.

೯. ಪಾಶ್ಚಾತ್ಯ ರಾಗವಾದ ಟ್ಯುಟೋನಿಕ್ ರಾಗದ ಬದಲಾಗಿ ದೇಶಿರಾಗದಿಂದ ಕೂಡಿದ ಗೀತೆಗಳು ರಚಿತವಾಗಿದ್ದು ಇವರ ದೇಶೀ ಪ್ರೇಮವನ್ನು ವ್ಯಕ್ತಪಡಿಸುತ್ತದೆ.

೧೦. ೧೮೯೮ರಲ್ಲಿ ಪ್ರಕಟವಾದ ಗೀತಪುಸ್ತಕದಲ್ಲಿ ಬಳಸಲಾದ ಚಿಹ್ನೆಗಳು ಇಂತಿವೆ. *, +, ಬ, ┐┌, ಇತ್ಯಾದಿ ೧೯೨೯ರಲ್ಲಿ ಈ ಚಿನ್ಹೆಗಳ ಬದಲಿಗೆ ಸಂಖ್ಯೆಗಳನ್ನು ಅಂದರೆ ೧, ೨, ೩ ಎಂದು ಬಳಸಲಾಗಿದೆ.

೧೧. ಧಾರ್ಮಿಕ ಅಂಶಗಳನ್ನು ವಿವರಿಸಲು ಪ್ರಕೃತಿಯ ವಿಷಯಗಳನ್ನು ಬಳಸುವುದರಿಂದ ಅರ್ಥಗ್ರಹಿಕೆಗೆ ಅನುಕೂಲವಾಗುವಂತೆ ಗೀತೆ ರಚಿಸಿದ್ದಾರೆ. ಉದಾ: ಗೀತೆ ೧೨೪ರಲ್ಲಿ ಹೂ, ಮಳೆ, ಮಂಜು ಇವುಗಳನ್ನು ಬಳಸಿ ದೇವಕೃಪಾವರವನ್ನು ವರ್ಣಿಸಲು ಬಳಸಿರುವುದು ಗೀತಗಾರನ ಸೃಜನಶೀಲತೆಗೆ ನಿದರ್ಶನವಾಗಿದೆ.

೧೨. ಯೇಸುವಿಗಿರುವ ಬಿರುದುಗಳನ್ನು ಕವಿ ಗೀತೆಗಳಲ್ಲಿ ಬಳಸಿದ್ದಾನೆ. ಗೀತೆ ೨೨೫ರಲ್ಲಿ ಯೇಸುವಿಗೆ ಗೀತಗಾರ ಪರಲೋಕದರಸ, ರಾಜಾಧಿರಾಜ, ಕರುಣಾಸಮುದ್ರ, ಪಾಪಿಷ್ಟಮಿತ್ರ, ಸ್ವರ್ಗಪತಿ ಎಂದೆಲ್ಲಾ

ಬಳಸಿ ಹೊಗಳಿದ್ದಾನೆ.

೧೩. ಇಂಗ್ಲೀಷ್‌ನಿಂದ ಗೀತೆಗಳನ್ನು ಭಾಷಾಂತರಿಸುವಾಗ ಎಲ್ಲಾ ಚರಣಗಳನ್ನು ಭಾಷಾಂತರಿಸದೆ ಇರುವುದನ್ನು ಕಾಣುತ್ತೇವೆ. ಉದಾ: ಗೀತೆ ೮೮ರಲ್ಲಿ ಇಂಗ್ಲೀಷ್‌ನ ಕೊನೆಯ ಚರಣ ಅರ್ಥ ಪೂರ್ಣವಾಗಿದ್ದರೂ ಅದನ್ನು ಭಾಷಾಂತರಿಸದೇ ಇರುವುದನ್ನು ಕಾಣುತ್ತೇವೆ.

೧೪. ಅನೇಕ ಗೀತೆಗಳು ಕಾವ್ಯಗುಣಹೊಂದದೆ ಇದೆ. ಗೀತಗಾರನಿಗೆ ಅರ್ಥವೇ ಪ್ರಧಾನವಾಗಿ ಕಂಡಿರಬೇಕು. ವಿದೇಶಿಯರಾಗಿದ್ದು ಇಂತಹ ಗೀತೆ ರಚಿಸಿದ್ದು ಅವರ ಕಾವ್ಯ ಪ್ರತಿಭೆಗೆ ನಿದರ್ಶನವಾಗಿದೆ.

೧೫. ಗೀತೆಗಳಲ್ಲಿ ಪಲ್ಲವಿಯ ಪುನರುಕ್ತಿಯ ಮೂಲಕ ಹಾಡಿನ ಸಂದೇಶ ಮತ್ತೇ ಮತ್ತೇ ಕಿವಿಗೆ ಬೀಳುತ್ತದೆ. ಇದರಿಂದ ಹಾಡುಗಳ ಉಳಿದ ಭಾಗ ಮರೆತರೂ ಪಲ್ಲವಿ ಅನುಪಲ್ಲವಿಗಳು ಮಾತ್ರ ನೆನಪಿನಲ್ಲಿ ನಿಲ್ಲುತ್ತದೆ.

೧೬. ಪದ್ಯಗಳ ಮೊದಲ ಸಾಲಿನ ಮೇಲೆ ಪ್ರಸ್ತಾರ ಸೂಚನೆಯಾಗಿ ಗೀತೆಯ ಪಾದದಲ್ಲಿರುವ ಅಕ್ಷರಗಳ ಸಂಖ್ಯೆಯ ಸೂಚನೆ ಎಂಬಂತೆ ಅಂಕಿಗಳನ್ನು ಇಡುವ ವಾಡಿಕೆ ಕಂಡು ಬಂದಿದೆ.

೧೭. ಲಂಡನ್ ಮಿಶನರಿಗಳ ಗೀತೆಗಳನ್ನು ಬಾಸೆಲ್ ಮಿಶನರಿಗಳು ಅಳವಡಿಸಿಕೊಂಡಾಗ ಭಾಷೆಯಲ್ಲಿ ಬದಲಾವಣೆಯನ್ನು ಮಾಡಿ ಬಳಸಿದ್ದಾರೆ.

೧೮. ಲಂಡನ್ ಮಹಿಳಾ ಮಿಶನರಿಗಳು ಧಾರ್ಮಿಕ ಶೈಕ್ಷಣಿಕ ಕ್ಷೇತ್ರದಲ್ಲಿ ಕೊಡುಗೆಯನ್ನು ನೀಡಿದ್ದಾರೆ.

೫.೨ ವೆಸ್ಲಿಯನ್ ಮೆಥೊಡಿಸ್ಟ್ ಮಿಶನರಿಗಳು

ಕರ್ನಾಟಕಕ್ಕೆ ೧೮೩೬ರಲ್ಲಿ ಆಗಮಿಸಿದ ವೆಸ್ಲಿಯನ್ ಮೆಥೋಡಿಸ್ಟ್ ಮಿಶನರಿಗಳು ಸುವಾರ್ತಾಸೇವೆಗಾಗಿ ಸಂಗೀತಗಳನ್ನು ರಚಿಸಿದರು. ವೆಸ್ಲಿಯನ್ ಮಿಶನರಿಗಳಲ್ಲಿ ಗೀತಕ್ಷೇತ್ರಕ್ಕೆ ಟಾಮ್ಲಿನ್ಸನ್ ಡಬ್ಲ್ಯೂ.ಇ, ಎ.ಡುಂಬರ್‌ಟನ್ ಮತ್ತು ಮಹಿಳಾ ಮಿಶನರಿ ಮಿಸಸ್ ಹೊನ್‌ಬಯ್‌ರವರು ಪ್ರಮುಖರು. ಇವರು ಗೀತೆಗಳು ಲಂಡನ್ ಮಿಶನ್ ಗೀತ ಪುಸ್ತಕದಲ್ಲಿ(ಕನ್ನಡ ಸಂಗೀತಗಳು) ಕಂಡು ಬರುತ್ತದೆ.

ಈ ಸಭೆಗೆ ತಮ್ಮದೇ ಆದ ಗೀತಪುಸ್ತಕ ಇದೆ ಎಂದು ಕಂಡುಬರುವುದಿಲ್ಲ. ಕನ್ನಡ ಸಭೆಗಳಲ್ಲಿ ಹಾಡುತ್ತಿದ್ದ ಹಾಡುಗಳನ್ನೇ ಇವರು ಬಳಸುತ್ತಿದ್ದರು. ಲಂಡನ್ ಮಿಶನ್ ತನ್ನ ಸೇವೆಯ ಪ್ರಾರಂಭದಿಂದಲೂ ಕರ್ನಾಟಕದಲ್ಲಿ ವೆಸ್ಲಿಯನ್ ಮೆಥಾಡಿಸ್ಟ್ ಸಭೆಯೊಂದಿಗೆ ಉತ್ತಮ ಸಂಬಂಧವನ್ನು ಹೊಂದಿತ್ತು. ೧೯೨೪ರಲ್ಲಿ ಇದು ವೆಸ್ಲಿಯನ್ ಸಭೆಯೊಂದಿಗೆ ಸಹ ಭಾಗಿತ್ವದಲ್ಲಿ ಬೆಂಗಳೂರಿನಲ್ಲಿ ಶಾಲೆಗಳನ್ನು ತೆರೆಯಿತು. ೧೯೩೫ ಜನವರಿ ೭ರಲ್ಲಿ ಬೆಂಗಳೂರಿನಲ್ಲಿ "ಯುನೈಟೆಡ್ ಮಿಶನ್ ಹೈಸ್ಕೂಲ್' ಎಂಬ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದಿತು. ಹಾಗೂ ಈ ಎರಡೂ ಮಿಶನ್‌ಗಳು ಜೊತೆಗೂಡಿ 'ಕರ್ನಾಟಕ ಕ್ರೈಸ್ತ ಕೂಟ (ಕೆ.ಸಿ.ಸಿ) ಸ್ಥಾಪಿಸಿದವು."[೩೫] ಹೀಗೆ ಲಂಡನ್ ಮತ್ತು ವೆಸ್ಲಿಯನ್ ಮಿಶನ್‌ಗಳು ಸೇವೆ ಸಲ್ಲಿಸುತ್ತಿದ್ದರಿಂದ ಇವೆರಡೂ ಸಭೆಗಳು ಒಂದೇ ಗೀತ ಪುಸ್ತಕವನ್ನು ಹೊಂದಿತ್ತು.

೫.೨.೧ ಟಾಮ್ಲಿನ್ಸನ್ ಡಬ್ಲ್ಯೂ.ಇ – Tomlinson W.E

ಟಾಮ್ಲಿನ್ಸನ್ ಡಬ್ಲ್ಯೂ.ಇ. ವೆಸ್ಲಿಯನ್ ಮೆಥೋಡಿಸ್ಟ್‌ನ ಪ್ರಮುಖ ವ್ಯಕ್ತಿಯಾಗಿದ್ದು ಈ ಮಿಶನ್‌ನ ಉನ್ನತಿಗೂ ಹಾಗೂ ಇತರ ಮಿಶನ್‌ಗಳೊಡನೆ ಇರಿಸಿಕೊಳ್ಳಬೇಕಾಗಿದ್ದ ಸಂಬಂಧಕ್ಕೂ ಉತ್ತಮ ಮಾರ್ಗವನ್ನು ಹಾಕಿದರು. ಇವರು ೧೯೨೦ರಲ್ಲಿ ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿದ್ದ ಜರ್ಮನ್ ಮಿಶನರಿಗಳು ಸ್ವದೇಶಕ್ಕೆ ಹಿಂತಿರುಗಿ ಹೋಗಬೇಕಾಗಿ ಬಂದಾಗ ಈ ಪ್ರದೇಶದಲ್ಲಿ ತಮ್ಮ ಉತ್ತಮ ಸೇವೆಯನ್ನು ಮಾಡಿದರು. ಇಂಗ್ಲೇಂಡಿನ Hankow ಎಂಬಲ್ಲಿ ೧೮೭೭ರಲ್ಲಿ ಜನಿಸಿದರು. ತಂದೆ ರೆವರೆಂಡ್ ಡಬ್ಲ್ಯೂ.ಎಸ್ ಟಾಮ್ಲಿನ್ಸನ್ ಚೈನಾದಲ್ಲಿ ಒಬ್ಬ ಮಿಶನರಿಯಾಗಿ ೮ ವರ್ಷಗಳ ಕಾಲ ಸೇವೆ ಮಾಡಿ ಮಂಡಾರಿನ್ (Mandarin) ಎಂಬಲ್ಲಿ ಬೋಧಕರಾಗಿ ಸೇವೆ ಸಲ್ಲಿಸಿದರು. ತಾಯಿಯು ಒಬ್ಬ ಧರ್ಮ ಬೋಧಕರ ಮಗಳಾಗಿದ್ದರು. ತಾಯಿಯ ಅನಾರೋಗ್ಯದ ನಿಮಿತ್ತ ಇಂಗ್ಲೇಂಡಿಗೆ ಮರಳಿ ಬಂದರು ಟಾಮ್ಲಿನ್ಸನ್ ತಮ್ಮ ಕಾಲೇಜು ಶಿಕ್ಷಣವನ್ನು Didsbary College Manchester ನಲ್ಲಿ ನಡೆಸಿದರು. ಅಸಾಧಾರಣ ವ್ಯಕ್ತಿತ್ವವನ್ನು ಹೊಂದಿದ್ದ ಇವರು ಬುದ್ಧಿಶಾಲಿಗಳಾಗಿದ್ದರು ಮತ್ತು ಉತ್ತಮ ಆಟಗಾರರಾಗಿದ್ದರು.

ಕನ್ನಡ ಕಲಿಕೆಗಾಗಿ ಹಾಸನ್‌ಗೆ ಅವರನ್ನು ಕಳುಹಿಸಲಾಯಿತು. ಆತನು ಅವರು ಬಹು ಬೇಗನೆ ಕನ್ನಡ ಭಾಷೆಯನ್ನು ಕಲಿತು ಕವಿತೆ ಮತ್ತು ಲೇಖನಗಳನ್ನು ಬರೆಯತೊಡಗಿದರು. ಇದು ಅವರ ಶಿಕ್ಷಣ ಕ್ಷೇತ್ರದಲ್ಲಿ ಉಪಯುಕ್ತವಾಯಿತು. ಮೈಸೂರು ಮತ್ತು ಬೆಂಗಳೂರು ನಗರದಲ್ಲಿ ಇವರು ಶಾಲೆಗಳಲ್ಲಿ ಶಿಕ್ಷಣ ವೃತ್ತಿಯನ್ನು ಕೈಗೊಂಡರು. ಅಪೂರ್ವ ಗುಣಗಳು ಎಲ್ಲರಿಂದಲೂ ಮೆಚ್ಚುಗೆಯನ್ನು ಪಡೆಯಲು ಕಾರಣವಾಯಿತು. ಅವರ ಗುಣಗಳೆಂದರೆ ಶಾಲೆಯಲ್ಲಿದ್ದ ಸುಮಾರು ೬೦೦ ವಿದ್ಯಾರ್ಥಿಗಳ ಹೆಸರುಗಳನ್ನು ಸರಿಯಾಗಿ ಉಚ್ಚರಿಸಿಸುತ್ತಿದ್ದುದರಿಲ್ಲದೇ ಅವರ ಹೆಸರುಗಳನ್ನು ಅವರು ತೇರ್ಗಡೆಯಾಗಿ ಹೋದ ಮೇಲೆ ನೆನಪಿನಲ್ಲಿರುತ್ತಿತ್ತು. ಪೂರ್ವ ತಯಾರಿಕೆಯಿಂದಲೇ ತರಗತಿಗೆ ಹೋಗುವ ಪರಿಪಾಟವನ್ನು ಹೊಂದಿದ್ದರು. ಫುಟ್‌ಬಾಲ್ ತಂಡದ ನಾಯಕರಾಗಿದ್ದು ಶ್ರೇಷ್ಠ ಆಟಗಾರರೆಂದು ಹೆಸರು ಪಡೆದರು.

೧೯೦೪ರಲ್ಲಿ ಇವರು ಮಿಸ್ ದೊರೊತಿ ವಿಕ್‌ರ್ಸ್‌ರವನ್ನು ವಿವಾಹವಾದರು. ಶಾಂತರಾದ ಮತ್ತು ಕಠಿಣ ಪರಿಶ್ರಮಿಗಳಾಗಿದ್ದರು. ಹಿಂದೂ ಮತ್ತು ಕ್ರಿಶ್ಚಿಯನ್ ಮನೆಗಳನ್ನು ಸಂದರ್ಶಿಸಿ ಔಷಧಿಗಳನ್ನಿಟ್ಟು ಅವರ ಆರೋಗ್ಯದತ್ತ ಹೆಚ್ಚು ಗಮನ ಹರಿಸಿದರು. ಬರಹಗಾರ್ತಿಯಾದ ಇವರು ಪತ್ರಿಕೆಗಳಲ್ಲಿ ಸ್ತ್ರೀ ಕುರಿತಾದ ಲೇಖನಗಳನ್ನು ಪ್ರಕಟಿಸಿದರು. ತನ್ನ ಪತಿಯು ಮೈಸೂರಿನಲ್ಲಿ ಸುವಾರ್ತಾ ಸೇವೆಯಲ್ಲಿ ನಿರತರಾಗಿದ್ದಾಗ ಗುಬ್ಬಿಯಲ್ಲಿ ತಾವೊಬ್ಬರಾಗಿಯೇ ಇದ್ದು ಜನಗಳೊಂದಿಗೆ ಸ್ನೇಹ ಪರತೆ ಹಾಗೂ ಅವರಿಗೆ ಅಗತ್ಯವಾದ ಸಹಾಯವನ್ನು ಮಾಡುವುದರಲ್ಲಿ ನಿರತರಾಗಿದ್ದರು.

ಟಾಮ್ಲಿನ್ಸನ್‌ರವರು ಬೋಧಕ ಬೋಧಿನಿ ಎಂಬ ಪತ್ರಿಕೆಯನ್ನು ಬೋಧಕರಿಗಾಗಿ ಪ್ರಾರಂಭಿಸಿದರು. ೧೯೦೫ರಲ್ಲಿ ಪ್ರಾರಂಭವಾದ ಈ ಪತ್ರಿಕೆಯು ಅನೇಕ ವರ್ಷಗಳವರೆಗೆ ಟಾಮ್ಲಿನ್ಸನ್‌ರನ್ನೇ ಸಂಪಾದಕರನ್ನಾಗಿ ಹೊಂದಿತ್ತು. ಉತ್ತಮ ಬರಹದ ಸಾಮರ್ಥ್ಯ ಹೊಂದಿದ ಮಿಶನರಿಯಾದರು. ಸಂತ ಮಾರ್ಕ್ ಶುಭ

ಸಂದೇಶಕ್ಕೆ ವ್ಯಾಖ್ಯಾನವನ್ನು 'The king of Truth' ಇಂಗ್ಲೀಷ್ ಮತ್ತು ಕನ್ನಡದಲ್ಲಿ ರಚಿಸಿದರು. ವರುಷದ ಸುಮಾರು ೨೦೦ ದಿನಗಳನ್ನು ಪ್ರವಾಸಿಗಳ ಗೃಹ ಅಥವಾ Canvas ನಲ್ಲಿ ತಂಗಿ ಸೇವಾ ಕಾರ್ಯದಯಲ್ಲಿ ನಿರತರಾಗಿದ್ದರು. ಎಲ್ಲಿ ಹೋದರು ಸರ್ವರನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳುವ ಗುಣ ಅವರಲ್ಲಿತ್ತು. ರೋಗಿಗಳನ್ನು ಭೇಟಿ ಮಾಡುವ ಹಾಗೂ ಮರಣ ಹೊಂದಿದ ಕುಟುಂಬಗಳನ್ನು ಸಂದರ್ಶಿಸುವುದು ಅವರಿಗೆ ಸಹಜವಾಗಿತ್ತು. ೧೯೪೪ ಆಗಸ್ಟ್ ೨೯ರಂದು ತಮ್ಮ ಇಹಲೋಕದ ಯಾತ್ರೆಯನ್ನು ಕೊನೆಗೊಳಿಸಿದರು. ಅವರ ಮರಣದ ಸಂದರ್ಭದಲ್ಲಿ ಅವರ ಮೇಜಿನ ಮೇಲೆ The Idea of the Holy ಎಂಬ ಪುಸ್ತಕವು ತೆರೆದಿಡಲಾಗಿತ್ತು. ಮೈಸೂರಿನ ಮೊದಲನೇ ಬಿಷಪ್‌ರಾದ ಅತೀ ವಂದನೀಯ ಪಿ. ಗುರುಶಾಂತ್ ಹೀಗೆ ಹೇಳುತ್ತಾರೆ. "He made our country his mother country. He counted our people as his own, he laid down his life in our midst and we can never forget him" [೩೬] ಶ್ರೇಷ್ಠ ಮಿಶನರಿಗಳ ಸಾಲಿನಲ್ಲಿ ನಿಲ್ಲಬಹುದಾದ ವ್ಯಕ್ತಿತ್ವ ಇವರದ್ದಾಗಿದೆ.

ಗೀತೆಗಳ ಅಧ್ಯಯನ: ಟಾಮ್ಲಿನ್ಸ್‌ನ್‌ರವರು ರಚಿಸಿದ ಗೀತೆಗಳು ಬಿ.ರೈಸ್ ರಚಿಸಿ ಪ್ರಕಟಿಸಿದ 'ಕನ್ನಡ ಸಂಗೀತಗಳು (೧೯೨೯) ಎಂಬ ಗೀತ ಪುಸ್ತಕದಲ್ಲಿ ಕಂಡು ಬರುತ್ತದೆ. ಇವರು ಒಟ್ಟು ೮ ಗೀತೆಗಳನ್ನು ರಚಿಸಿದ್ದಾರೆ.

ಕ್ರೈಸ್ತರ ಜೀವನ: ಕ್ರೈಸ್ತರ ಬಾಳು ಹೇಗಿರಬೇಕೆಂದು ವರ್ಣಿಸುತ್ತಾ ನಂಬಿಕೆಗೆ ಹೆಚ್ಚಿನ ಮಹತ್ವವನ್ನು ನೀಡಿ 'ನಿನ್ನ ನಂಬಿದ್ದೇನೆ ಸ್ವಾಮಿ' ಎಂಬ ಗೀತೆಯನ್ನು ರಚಿಸಿದ್ದಾರೆ.

ನಿನ್ನ ನಂಬಿದ್ದೇನೆ, ಸ್ವಾಮೀ
ನಿನ್ನ ಮಾತ್ರವೇ
ನಿನ್ನ ಮಾತ್ರವೇ
ರಕ್ಷಣೆ

ಮಾರ್ಗದರ್ಶಿ ನಿನ್ನ ವಿನಾ
ನನಗಿಲ್ಲವು
ಯೇಸುವೇ ನೀ ನನುದಿನ
ನಡಿಸು

ಕನ್ನಡ ಸಂಗೀತಗಳು, ಗೀತೆ-೨೧೭

ಗೀತಗಾರ ಭಕ್ತನಲ್ಲಿ ನಂಬಿಕೆ ಎಂಬ ಗುಣವನ್ನು ಕಾಣಲು ಬಯಸುತ್ತಾನೆ. ದೇವರಲ್ಲಿ ನಂಬಿಕೆಯನ್ನಿಟ್ಟಾಗ ಆತನಿಗೆ ರಕ್ಷಣೆ ಉಂಟೆಂದು ಆತನ ಮಾರ್ಗದರ್ಶನದಲ್ಲಿ ನಡೆದಾಗ ಜೀವನ ಸುಗಮವಾಗುತ್ತದೆಂದು ಗೀತಗಾರ ಹೇಳಿದ್ದಾನೆ. ಗೀತೆ ಸರಳವಾಗಿದ್ದು ಮುಗ್ಧಭಾವ ವ್ಯಕ್ತವಾಗಿದೆ.

ಟಾಮ್ಲಿನ್ಸ್‌ನ್‌ರವರ ಗೀತೆಗಳ ವೈಶಿಷ್ಟ್ಯತೆಗಳು: ಟಾಮ್ಲಿನ್ಸ್‌ನ್‌ರವರು ಕೆಲವೇ ಗೀತೆಗಳನ್ನು ಬರೆದರೂ ಅವು ಅರ್ಥ ಪೂರ್ಣವಾಗಿವೆ. ಒಬ್ಬ ವ್ಯಕ್ತಿಯ ಬಾಳು ಇಹಲೋಕದಲ್ಲಿ ಹೇಗಿರಬೇಕು ಆತನು ಜೀವನದಲ್ಲಿ ರೂಢಿಸಿಕೊಳ್ಳಬೇಕಾದ ಗುಣಗಳು ಯಾವುವು ಎಂಬುದರ ಕುರಿತೇ ಹೆಚ್ಚಾಗಿ ಗೀತೆಗಳನ್ನು ಬರೆದಿದ್ದಾರೆ. ಒಬ್ಬ ವ್ಯಕ್ತಿಯಲ್ಲಿ ಆಂತರಿಕವಾಗಿ ಬದಲಾವಣೆಗಳನ್ನು ತರಲು ಈತನ ಗೀತೆಗಳು ಸಹಾಯಕವಾಗಿವೆ. ದೇವ

ಸಹಾಯದಿಂದಲೇ ವ್ಯಕ್ತಿಯು ಒಬ್ಬ ಉತ್ತಮ ವ್ಯಕ್ತಿಯಾಗಲು ಪಾಪದಿಂದ ದೂರ ಸರಿಯಲು ಬದುಕಿನಲ್ಲಿ ಉನ್ನತವಾದವುಗಳನ್ನು ಸಾಧಿಸಲು ಸಾಧ್ಯವಿದೆ ಎಂದು ಗೀತಗಾರ ಹೇಳುವ ವಾಕ್ಯಗಳಲ್ಲಿ ಜನರನ್ನು ತಿದ್ದುವ ಹಾಗೂ ದೇವರಲ್ಲಿ ಸಂಪೂರ್ಣ ನಂಬಿಕೆಯನ್ನು ಇಟ್ಟುಕೊಳ್ಳಬೇಕೆಂಬ ಭಾವ ವ್ಯಕ್ತವಾಗಿವೆ. ಗೀತೆಗಳಲ್ಲಿ ಕಾವ್ಯ ಗುಣಕ್ಕಿಂತ ಧಾರ್ಮಿಕ ಮನೋಭಾವ ಭಯಭಕ್ತಿ ಹೆಚ್ಚಾಗಿ ವ್ಯಕ್ತವಾಗಿದೆ.

೫.೨.೨ ಎ. ಡುಂಬರಟನ್ – A. Dumbarton

ಡುಂಬರಟನ್‌ರವರ ಸೇವಾ ನೇಮಕಾತಿಯ ಕುರಿತು ವೆಸ್ಲಿಯನ್ ಮಿಶನ್‌ನ ೧೮೯೮ರ ವರದಿ [೩೭] ಯಲ್ಲಿ ಕಾಣುತ್ತೇವೆ. ಪ್ರಾರಂಭದಲ್ಲಿ ಶಿವಮೊಗ್ಗದಲ್ಲಿ ಸೇವಾ ನಿರತರಾಗಿದ್ದ ಇವರು ಕಾಲ ಕ್ರಮೇಣ ಗುಬ್ಬಿ ಕ್ಷೇತ್ರಕ್ಕೆ ವರ್ಗಾವಣೆಯಾದುದರ ಕುರಿತು ವರದಿ ಹೀಗೆ ತಿಳಿಸುತ್ತದೆ. It has been desirable to grounds of health that Mr. Dumbarbon should leave the Malnad or Rain country, and he is transferred to the dry healthy of Gubbi"[೩೮]

ಗೀತೆಗಳ ಅಧ್ಯಯನ: ರೈಸ್‌ಬಿ.ರವರಿಂದ ೧೮೯೮ ರಲ್ಲಿ ಪ್ರಕಟವಾದ ಕನ್ನಡ ಸಂಗೀತಗಳು ಎಂಬ ಗೀತ ಪುಸ್ತಕದಲ್ಲಿ ಡುಂಬರ್‌ಟನ್‌ರವರ ೧ ಗೀತೆ ಇದೆ. ಆಯ್ದ ವಸ್ತು ವಿಷಯಗಳಿಗೆ ಸಂಬಂಧಿಸಿದಂತೆ ಗೀತೆಯ ಅಧ್ಯಯನ ನಡೆದಿದೆ.

ಸ್ತುತಿ: ದೇವರ ಸಕಲ ಉಪಕಾರಗಳನ್ನು ಸ್ಮರಿಸಿ ಗೀತಗಾರ ದೇವರಿಗೆ ಸ್ತುತಿಯರ್ಪಿಸುತ್ತಿದ್ದಾನೆ. 'ಭೂಪರಲೋಕ ಪ್ರಭುವೇ ಎಂಬ ಗೀತೆಯಲ್ಲಿ ಇದು ಸ್ವರಚಿತ ಗೀತೆಯಾಗಿದ್ದು Almsgiving or Meyer ಎಂಬ ರಾಗದಲ್ಲಿದೆ.

ಭೂಪರಲೋಕ ಪ್ರಭುವೇ	ನಮ್ಮೆಲ್ಲರನ್ನು ಸೃಷ್ಟಿಸಿ	ಸುಜ್ಞಾನ ಕೊಟ್ಟು ರಕ್ಷಿಸಿ
ಅನಾದಿ ನೀತಿ ಸೂರ್ಯನೇ	ದೇಹಾತ್ಮವನ್ನು ಕಾಯುತ್ತೀ;	ನಿನ್ನವರಲ್ಲಿ ಇಟ್ಟಿದ್ದೀ
ಅನಂತ ಸ್ತೋತ್ರ ನಿನಗೆ,	ಅನಂತ ಸ್ತೋತ್ರ ನಿನಗೆ,	ಅನಂತ ಸ್ತೋತ್ರ ನಿನಗೆ,
ದಯಾಳುವೇ,	ದಯಾಳುವೇ	ದಯಾಳುವೇ

ಕನ್ನಡ ಸಂಗೀತಗಳು, ಗೀತೆ–೨೮೪

ಗೀತಗಾರನ ಕೃತಜ್ಞತಾ ಭಾವ ವ್ಯಕ್ತವಾಗಿದೆ ಗೀತೆಯ ಪ್ರತಿ ಚರಣದಲ್ಲಿ. ದೇವರು ಭೂಪರ ಲೋಕಗಳ ಒಡೆಯನು, ತನ್ನನ್ನು ಸೃಷ್ಟಿಸಿದ ಕರ್ತ, ತನಗೆ ಸುಜ್ಞಾನ ನೀಡಿದ ದೇವರು, ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಲು ಸಹಾಯ ನೀಡಿದ ಗುರು, ಆತನನ್ನು ಆರಾಧಿಸಲು ನೀಡಿದ ಸರ್ವ ಕ್ಷಣಕ್ಕಾಗಿ ಆತನಿಗೆ ಸ್ತೋತ್ರವನ್ನರ್ಪಿಸುತ್ತಿದ್ದಾನೆ. ಆತನ ಅನಂತ ಕೃಪೆಗೆ ಸದಾ ಕಾಲ ಸ್ತುತಿ ಸ್ತೋತ್ರವನ್ನು ಅರ್ಪಿಸಬೇಕೆಂದು ಎಲ್ಲರಲ್ಲಿ ಕೇಳಿಕೊಂಡಿದ್ದಾನೆ ಗೀತಗಾರ. ಚರಣದ ಕೊನೆಯ ೨ ಸಾಲುಗಳು ಪುನರುಕ್ತಿಯಾಗಿರುವುದನ್ನು ಕಾಣುತ್ತೇವೆ. ಈ ಸಾಲುಗಳು ಸ್ತುತಿಯ ಮಹತ್ವವನ್ನು ತಿಳಿಸುತ್ತದೆ. ದೇವರ

ದಯಾಳುತನಕ್ಕೆ ಆತನಿಗೆ ಸ್ತುತಿ ಸಲ್ಲಿಸಬೇಕೆಂಬ ಭಾವ ಮೂಡಿಸುತ್ತದೆ.

ಡುಂಬರ್‌ಟನ್. ಎ ಇವರ ಗೀತೆಯ ವೈಶಿಷ್ಟ್ಯತೆಗಳು: ಸರ್ವರದಲ್ಲಿ ಸ್ತುತಿಯ, ಕೃತಜ್ಞತೆಯ ಭಾವವನ್ನು ಮೂಡಿಸಲು ಗೀತೆಯು ತನ್ನ ಉದ್ದೇಶವನ್ನು ಯಶಸ್ವಿಯಾಗಿಸಿಕೊಂಡಿದೆ. ಜೀವನದ ಪ್ರತಿ ನಿಮಿಷವು ಅನಂತ ವರವನ್ನು ನಾವು ದೇವರಿಂದ ಪಡೆಯುತ್ತೇವೆ. ಇವುಗಳಿಗೆ ಸ್ತುತಿ ಅರ್ಪಿಸುತ್ತೇವೆಯೇ? ಕೀರ್ತನಾಗಾರ, "ಹೊಗಳಲಿ ಪ್ರಭುವಿನಚಲ ಪ್ರೀತಿಯನು, ಜನರಿಗಾತ ಎಸಗಿದ ಅತಿಶಯಗಳನು"[೩೯] ಎಂದಿದ್ದಾನೆ. ಗೀತಗಾರ ತನ್ನ ಬದುಕಿನಲ್ಲಿ ಅನುಭವಿಸಿದ ದೇವರ ಕೃಪೆಯನ್ನು ಸ್ಮರಿಸಿಕೊಂಡು ಸ್ತುತಿ ಅರ್ಪಿಸಿರುವ ಬಗೆ ಎಲ್ಲರಿಗೂ ಪ್ರೇರಕವಾಗಿದೆ. ಬದುಕಿನ ಸರ್ವ ಕ್ಷಣಗಳನ್ನು ಯೋಚಿಸಿದಾಗ ಸಾಗಿಬಂದ ಬಗೆ ವಿಸ್ಮಯಕಾರಿಯಾಗಿರುವುದು. ಈ ಎಲ್ಲಾ ಅದ್ಭುತ ಕಾರ್ಯಗಳಿಗಾಗಿ ಕೃತಜ್ಞತೆವುಳ್ಳವರಾಗಿರಬೇಕು ಎಂದು ಗೀತಗಾರ ಗೀತೆಯಲ್ಲಿ ವ್ಯಕ್ತಪಡಿಸಿರುವುದು ವಿಶಿಷ್ಟವಾಗಿದೆ.

೫.೨.೩ ಮಿಸ್. ಒ. ಇ. ಹೊರ್ನ್‌ಬಯ್ – Miss. O. E. Hornby

ಗುಬ್ಬಿ ಕ್ಷೇತ್ರದಲ್ಲಿ ಸೇವಾ ನಿರತರಾಗಿದ್ದರು ಎಂದು ೧೯೧೮ರ ವೆಸ್ಲಿಯನ್ ಮಿಶನ್‌ನ ವಾರ್ಷಿಕ ವರದಿಯಲ್ಲಿ[೪೦] ಕಂಡು ಬರುತ್ತದೆ. ಕನ್ನಡ ಭಾಷೆಯಲ್ಲಿ ಪರಿಣಿತರಾಗದಿದ್ದರೂ ಉತ್ತಮ ಕಾರ್ಯದಕ್ಷತೆಯನ್ನು ಹೊಂದಿದ ವ್ಯಕ್ತಿಯಾಗಿದ್ದರು. ಹೆಣ್ಣುಮಕ್ಕಳ ಶಿಕ್ಷಣದಲ್ಲಿ ಹೆಚ್ಚು ಗಮನಹರಿಸಿದವರಾಗಿದ್ದರು. ಇವರು ನೀಡಿದ ವರದಿಯಲ್ಲಿ ಇಂತಿದೆ. "Of the Four day schools under my supervision the Gubbi Girl's School is the most important. The chief event of the year was the passing of the Lower Secondary of examination by a Hindu girl – the first time in the history of convservative Gubbi that a girl has taken a public examination the girl Lingait is now married, but has been allowed to join the staff of the school as teacher of class II." [೪೧]

ಗೀತೆಗಳ ಅಧ್ಯಯನ: ಮಿಸ್ ಒ.ಇ. ಹೊರ್ನ್‌ಬಯ್‌ರವರು ಒಂದು ಗೀತೆಯು 'ಕನ್ನಡ ಸಂಗೀತ ಸಂಗ್ರಹ ೨೦೦೭ ಎಂಬ ಗೀತ ಪುಸ್ತಕದಲ್ಲಿಕಂಡು ಬರುತ್ತದೆ.

ಸ್ತುತಿ: ಮಕ್ಕಳಲ್ಲಿ ಸ್ತುತಿಯ ಮನೋಭಾವ ಬೆಳೆಸಲು ಅವರು ರಚಿಸಿದ ಗೀತೆಯೇ ಪೂರ್ವದಲ್ಲಿ ಮಕ್ಕಳು ಎಂಬ ಗೀತೆ ಇದು Children of Jerusalem ಎಂಬ ರಾಗದಲ್ಲಿದೆ.

ಪೂರ್ವದಲ್ಲಿ ಮಕ್ಕಳು	ಜಯ, ಜಯ, ಜಯ, ಜಯ	ಕೇಳಿ, ಕೇಳಿ, ಚಿಕ್ಕಮಕ್ಕಳೇ..
ಸ್ತೋತ್ರ ಮಾಡುತ್ತಿದ್ದರು	ಜಯ, ಪ್ರಿಯ ಕರ್ತಗೆ	ಬಾಲ ವೃದ್ಧರೆಲ್ಲರೇ
ನಾವು ಕೂಡ ಹಾಡುವ	ನಾವು ದೇವ ಪ್ರೀತಿಯ	ಪ್ರಿಯ ತಂದೆ ತಾಯಿಗಳೇ
ಯೇಸುವಿನ ಸ್ತೋತ್ರವ	ದಿವ್ಯ ಸತ್ಯವೇದದ	ನಮ್ಮ ಕೂಡ ಹಾಡಿರಿ,
ಕೇಳಿ, ಕೇಳಿ, ಚಿಕ್ಕಮಕ್ಕಳೇ	ಮುಕ್ತಿ ಮಾರ್ಗ ಕಂಡೆದು;	ಯೇಸುವನ್ನು ಸ್ತುತಿಸಿರಿ

ಕೇಳಿ, ಕೇಳಿ, ಚಿಕ್ಕಮಕ್ಕಳೇ ಸ್ತೋತ್ರ ಮಾಡತಕ್ಕದ್ದು ಕೇಳಿ, ಕೇಳಿ, ಚಿಕ್ಕಮಕ್ಕಳೇ.

ಕನ್ನಡ ಸಂಗೀತ ಸಂಗ್ರಹ, ೨೦೦೭, ಗೀತೆ-೩೨೯

ಬಾಲ್ಯದಲ್ಲಿಯೇ ಮಕ್ಕಳು ದೇವರನ್ನು ನೆನೆದು ಅವರಿಗೆ ಎಡಬಿಡದೆ ಸ್ತುತಿಯನ್ನು ಅರ್ಪಿಸುವ ಮನೋಭಾವ ಬೆಳೆಸಬೇಕು ಎಂಬ ಉತ್ತಮ ಭಾವ ಗೀತೆಯಲ್ಲಿ ವ್ಯಕ್ತವಾಗಿದೆ. ದೇವರ ಸಾನಿಧ್ಯ ಅವರ ಅಸ್ತಿತ್ವದ ಅರಿವನ್ನು ಮಕ್ಕಳಲ್ಲಿ ಮೂಡಿಸುವುದು ಅಗತ್ಯ. ಮಕ್ಕಳು ದೇವ ಭಯದಲ್ಲಿ ಬೆಳೆದಾಗ ಅನ್ಯೆತಿಕತೆಯ ಬದುಕಿನಿಂದ ದೂರ ಸರಿದು ಉತ್ತಮ ಆಧ್ಯಾತ್ಮ ವ್ಯಕ್ತಿಗಳಾಗಿ ಬೆಳೆಯಲು ಸಾಧ್ಯವಿದೆ ಎಂಬುದು ನೈಜ ಸಂಗತಿ. ದೇವರು ಮಾಡಿದ ಸಕಲ ಉಪಕಾರಗಳಿಗಾಗಿ ಕೃತಜ್ಞತೆಯ ಬಾಳನ್ನು ನಡೆಸಬೇಕು. ಎಂಬ ಸತ್ಯಾಂಶವನ್ನು ಬಾಲ್ಯದಲ್ಲಿಯೇ ಮಕ್ಕಳ ಮನಸ್ಸಿನಲ್ಲಿ ಮೂಡಿಸಬೇಕು ಎಂಬ ಗುರಿಯನ್ನು ಈ ಗೀತೆ ಹೊಂದಿದೆ.

ಮಿಸ್. ಒ.ಇ. ಹೊನ್‌ಬಯ್‌ರವರ ಗೀತೆಗಳ ವೈಶಿಷ್ಟ್ಯತೆಗಳು: ಮಕ್ಕಳಲ್ಲಿ ಸ್ತುತಿಯ ಮನೋಭಾವ ಬೆಳೆಸುವುದೇ ಇವರ ಗೀತೆಯ ವೈಶಿಷ್ಟ್ಯವಾಗಿದೆ. ಚಿಕ್ಕಂದಿನಲ್ಲಿಯೇ ಎಳೆಯ ಮನಸ್ಸಿನಲ್ಲಿ ಉದಾತ್ತ ಚಿಂತನೆಗಳನ್ನು ಬಿತ್ತಿದಾಗ ಅವು ಬೆಳೆದು ಮೊಳಕೆಯೊಡೆದು ಚಿಗುರಿ ಹೆಮ್ಮರವಾದಾಗ ಮನುಷ್ಯ ಬಾಳು ಸಮಾಜದಲ್ಲಿ ಸಾರ್ಥಕವಾಗಿ ನಿಲ್ಲುತ್ತದೆ. ಬದುಕಿನ ಯಶಸ್ಸು ನೆಲೆಗೊಂಡಿರುವುದು ಸಾಧಾರಣವಾಗಿ ಬಾಲ್ಯದ ಶಿಕ್ಷಣದ ಸ್ಥಿರತೆಯಿಂದ. ಜ್ಞಾನೋಕ್ತಿಗಳ ಗ್ರಂಥದಲ್ಲಿ ಹೀಗೆಂದು ಓದುತ್ತೇವೆ. 'ಮಕ್ಕಳನ್ನು ದಂಡಿಸಿ ತಿದ್ದಲು ಹಿಂಜರಿಯಬೇಕಾಗಿಲ್ಲ. ಬೆತ್ತದ ಪೆಟ್ಟಿಗೆ ಅವರು ಸತ್ತು ಹೋಗುವುದಿಲ್ಲ ಬೆತ್ತದಿಂದ ಬೇಕಾದರೆ ಹೊಡೆ ಮಗುವಿನ ಆತ್ಮ ಪಾತಾಳಕ್ಕೆ ಬೀಳದಂತೆ ತಡೆ' [೪೨] ಮಗುವನ್ನು ಹೀಗೆ ತಕ್ಕ ಶಿಕ್ಷೆಯೊಂದಿಗೆ ಬೆಳೆಸಬೇಕು ಎಂಬುದನ್ನು ಈ ವಾಕ್ಯಗಳು ಬೋಧಿಸುತ್ತವೆ. ಅಂತೆಯೇ ದೇವರ ಭಯದಲ್ಲಿ ಭಕ್ತಿಯಲ್ಲಿ ಸ್ತುತಿ ಸ್ತೋತ್ರಗಳಲ್ಲಿ ಮಗು ಬೆಳೆದಾಗ ಅದು ಉತ್ತಮ ಪ್ರಜೆಯಾಗಿ ಫಲದಾಯಕವಾದ ಬದುಕನ್ನು ನಡೆಸಲು ಸಾಧ್ಯವಾಗುತ್ತದೆ. ಈ ದೃಷ್ಟಿ ಕೋನದಿಂದ ಹೊನ್‌ಬಯ್‌ರವರು ರಚಿಸಿದ ಗೀತೆ ವಿಶಿಷ್ಟ ಪೂರ್ಣವಾಗಿದೆ.

ಸರಳ ವಾಕ್ಯಗಳು. ಅರ್ಥ ಪೂರ್ಣ ಪದಗಳು, ಕಾವ್ಯಮಯತೆ ಗೀತೆಯ ಸೊಗಸನ್ನು ಹೆಚ್ಚಿಸಿದೆ. ಮಕ್ಕಳಲ್ಲಿ ಧಾರ್ಮಿಕ ಮನೋಭಾವ ಬೆಳೆಸುವಲ್ಲಿ ಯಶಸ್ವಿ ಗೀತೆಯಾಗಿದೆ.

ವೆಸ್ಲಿಯನ್ ಮಿಶನರಿಗಳ ಗೀತೆಗಳ ವಿಶಿಷ್ಟಾಂಶಗಳು:

೧. ವೆಸ್ಲಿಯನ್ ಮಿಶನರಿಗಳು ರಚಿಸಿದ ಗೀತೆಗಳಲ್ಲಿ ಅರ್ಥ ಪ್ರಧಾನವಾದ ಭಕ್ತಿ ಪ್ರಧಾನವಾದ ಮಾರ್ಗದರ್ಶನ ನೀಡುವ ಗೀತೆಗಳು ಕಂಡು ಬರುತ್ತವೆ. ಉದಾ: ಗೀತೆ ೨೧೮ ಮತ್ತು ೨೧೫ ಮಾನವ ಸ್ವಸಾಮರ್ಥ್ಯದಿಂದ ಏನನ್ನಾದರೂ ಗಳಿಸಲು ಯತ್ನಿಸಿದರೆ ಅದು ವ್ಯರ್ಥವಾಗುವುದು. ದೇವರ ಸಹಾಯದಿಂದ ಆತನೇನಾದರೂ ಪ್ರಯತ್ನಿಸಿದರೆ ಯಶಸ್ಸು ಆತನಿಗೆ ಕಟ್ಟಿಟ್ಟ ಬುತ್ತಿಯಾಗುವುದು ದೇವರಲ್ಲಿ ಸದಾ ನಂಬಿಕೆಯನ್ನಿಟ್ಟ ವ್ಯಕ್ತಿಗೆ 'ದುರ್ಭಿಕ್ಷದೊಳ್ ಸುಭಿಕ್ಷವೇ' ಎಂದು ಹೇಳಿರುವಾಗ ಜನರಲ್ಲಿ ಭಕ್ತಿಯನ್ನು ಬೆಳೆಸಲು ಈ ಗೀತೆಗಳು ಯಶಸ್ವಿಯಾಗಿವೆ.

೨. ದೇವರ ಸೃಷ್ಟಿಯಾದ ಮಾನವ ತನ್ನ ಕೀಳು ಭಾವನೆಯನ್ನು ಬಿಟ್ಟು ತಾನು ಯೋಗ್ಯನು ಸಹಾಯಕ್ಕಾಗಿ ದೇವರಿದ್ದಾರೆ ಎಂಬ ಧನಾತ್ಮಕ ಭಾವನೆಯನ್ನು ಹೊತ್ತು ಜೀವಿಸಲು ಗೀತೆಗಳು ಸಹಕರಿಸುತ್ತವೆ.

೩. ಮನುಷ್ಯನಲ್ಲಿ ಸ್ತುತಿಯ ಮನೋಭಾವ ಮೂಡಿಸಲು ರಚಿಸಿದ ಗೀತೆಗಳು ಅರ್ಥಪೂರ್ಣವಾಗಿವೆ. ಗೀತೆ ೨೮೪ರಲ್ಲಿ ಗೀತಗಾರ ದೇಹಾತ್ಮಗಳ ಸೃಷ್ಟಿಕರ್ತನನ್ನು ಸ್ತುತಿಸುವ ಬಗೆ ವಿಶಿಷ್ಟವಾಗಿ ಮೂಡಿ ಬಂದಿದ್ದು ಅನುದಿನವು ದೇವರನ್ನು ಸ್ತುತಿಸಿ ಕೊಂಡಾಡಲು ಪ್ರೇರೇಪಿಸುವಂತದ್ದಾಗಿದೆ.

೪. ವೆಸ್ಲಿಯನ್ ಮಿಶನರಿಗಳು ಮಕ್ಕಳಲ್ಲಿ ಧಾರ್ಮಿಕ ಮೌಲ್ಯವನ್ನು ಬೆಳೆಸಲು ಸಹಾಯಕವಾಗುವ ಗೀತೆಗಳನ್ನು ರಚಿಸಿರುವುದು ಗಮನಾರ್ಹವಾಗಿದೆ. ಬಾಲ್ಯದಲ್ಲಿಯೇ ಮಕ್ಕಳು ದೇವ ಸ್ತುತಿಗಳಲ್ಲಿ ತೊಡಗಿದಾಗ ಉತ್ತಮ ನಡವಳಿಕೆಗಳಾದ ಕೃತಜ್ಞತೆ, ಗೌರವ, ಗುರುಹಿರಿಯರಲ್ಲಿ ಭಕ್ತಿ, ಸನ್ನುಡಿ, ಪ್ರಮಾಣಿಕ ಬದುಕಿನೆಡೆ ಗಮನ ಹರಿಸಿ ಸದ್ ಚಾರಿತ್ರ್ಯವನ್ನು ಅಳವಡಿಸಿಕೊಂಡು ಬೆಳೆದು ಸಮಾಜದ ಉತ್ತಮ ಪ್ರಜೆಗಳಾಗಿ ಬೆಳೆಯಲು ಕಾರಣವಾಗುವ ಪ್ರಮುಖ ಅಂಶದತ್ತ ಇವರು ಗಮನಹರಿಸಿರುವುದು ಕಂಡು ಬರುತ್ತದೆ.

೫. ವೆಸ್ಲಿನ್ ಮಿಶನರಿಗಳು ರಚಿಸಿದ ಗೀತೆಗಳು ಸರಳವಾಗಿದೆ. ಮುಗ್ಧ ಭಾವನೆಗಳು ವ್ಯಕ್ತವಾಗಿವೆ. ಕಾವ್ಯಗುಣ, ಲಯ ಇಲ್ಲದಿರುವುದು ಕಂಡು ಬರುತ್ತದೆ.

೬. ಮಹಿಳಾ ಮಿಶನರಿಗಳ ಸೇವೆಯಲ್ಲಿ ಗಮನಯೋಗ್ಯ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಹಗಲಿರುಳು ಸೇವೆ ಸಲ್ಲಿಸಿದ ವೀರಮಹಿಳೆಯರನ್ನು ಕಾಣುತ್ತೇವೆ.

೭. ವೆಸ್ಲಿಯನ್ ಮಿಶನರಿಗಳೇ ಮೈಸೂರು ಪ್ರಾಂತ್ಯಕ್ಕೆ ಆಗಮಿಸಿದ ಮೊದಲ ಮಿಶನರಿಗಳಾಗಿದ್ದಾರೆ.

೫.೩ ಬಾಸೆಲ್ ಮಿಶನರಿಗಳು:

ಕರ್ನಾಟಕಕ್ಕೆ ೧೮೩೪ ರಲ್ಲಿ ಆಗಮಿಸಿ ಸುವಾರ್ತಾ ಕಾರ್ಯದಲ್ಲಿ ತೊಡಗಿದ ಬಾಸೆಲ್ ಮಿಶನರಿಗಳು ಗೀತ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅದ್ವಿತೀಯವಾದದ್ದು. ಶ್ರೇಷ್ಠ ಮಿಶನರಿಗಳು ಧಾರ್ಮಿಕ ಸಾಹಿತ್ಯ ಕೃತಿ ರಚನೆಯಲ್ಲಿ ತೊಡಗುವುದರ ಜೊತೆಗೆ ಗೀತ ಕ್ಷೇತ್ರದಲ್ಲೂ ಅವರ ಪ್ರತಿಭೆ ಬೆಳಗಲಾರಂಭಿಸಿತು. ಬಹು ಭಾಷಾ ಪಾಂಡಿತ್ಯವನ್ನು ಗಳಿಸಕೊಂಡಿದ್ದ ಇವರು ಸೃಜನಶೀಲತೆಯಿಂದ ಗೀತೆಗಳನ್ನು ರಚಿಸಿದ್ದಾರೆ. ಈ ಭಾಗದಲ್ಲಿ ಮೊಗ್ಲಿಂಗ್.ಎಚ್, ವೈಗಲ್.ಜೆ, ಬಿ.ಲೂತಿ, ಬಿ.ಗ್ರೇಟರ್, ಎ.ಗ್ರೇಟರ್, ಜೆ.ಲೇಯರ್, ಮ್ಯಾಕ್.ಜೆ, ಕಿಟಲ್ ಎಫ್, ಕಾಫಮನ್.ಓ, ರಿಸ್ಷ್.ಎಚ್, ಮೆಟ್ಜ.ಎಫ್, ಬೊಮ್ಮರ್.ಇ, ಮನ್ನರ್.ಎ, ಸೊನ್ನಾ.ಜೆ, ಗ್ರೈನರ್.ಚಿ.ಎಲ್, ರ್ಊಥರ್.ಚಿ, ಕೋಸ್ಟಾಟಿ, ಸ್ಟೋಲ್ಜ.ಸಿ, ಸ್ಪ್ರಿಂಗ್.ಎ, ಹೊಚ್.ಎಮ್, ಹರ್ಲಿನ್.ಇ, ಮುಲ್ಲರ್.ಜೆ, ತ್ರಿಗ್ಲರ್.ಎಫ್, ವುರ್ತ.ಜಿ, ವಾಲ್ಜ್ ಥಾಮಸ್, ಮಿಸಸ್ ತ್ರಿಗ್ಲರ್.ಎಫ್. ಈ ಮಿಶನರಿಗಳ ಜೀವನ ಚರಿತ್ರೆಯೊಂದಿಗೆ ಅವರ ಗೀತೆಗಳ ಅಧ್ಯಯನ ನಡೆದಿದೆ. ಈ ಮಿಶನರಿಗಳ ಗೀತೆಗಳು 'ಕನ್ನಡ ಗೀತೆಗಳು' ಎಂಬ ಗೀತ ಪುಸ್ತಕದಲ್ಲಿ ಕಂಡು ಬರುತ್ತವೆ (ಗೀತೆಗಳ ವರ್ಗೀಕರಣವನ್ನು ಅನುಬಂಧದಲ್ಲಿ ನೀಡಲಾಗಿದೆ).

ಬಾಸೆಲ್ ಮಿಶನರಿಗಳು ೫೦ ಗೀತೆಗಳನ್ನೊಳಗೊಂಡ 'ಗೀತೆಗಳು' ಎಂಬ ಹೆಸರಿನ ಪುಸ್ತಕವನ್ನು ೧೮೪೧[೪೩] ರಲ್ಲಿ ಪ್ರಕಟಿಸಿದರು. ಮೊಗ್ಲಿಂಗರ ಗೀತೆಗಳೇ ಹೆಚ್ಚಾಗಿ ಕಂಡು ಬರುತ್ತವೆ. ಮೊಗ್ಲಿಂಗ್.ಎಚ್ (ಸುಮಾರು ೧೬), ವೈಗಲ್.ಜೆ (ಸುಮಾರು ೧೦), ಜೆ.ಲೇಯರ್ (೨), ಕೆಲವು ಗೀತೆಗಳ ರಚನಾಕಾರರ ಕುರಿತು ತಿಳಿದು ಬರುವುದಿಲ್ಲ. ಅಂದು ಮಂಗಳೂರಿನಲ್ಲಿ ಮುದ್ರಣ ವ್ಯವಸ್ಥೆ ಇರದಿದ್ದ ಕಾರಣ ವೈಗಲ್‌ರವರ ನೇತೃತ್ವದಲ್ಲಿ ಬೊಂಬೆಯಲ್ಲಿ ಕಲ್ಲಿಚ್ಚು ಮುದ್ರಣ (Lithography) ಮಾಡಿದರು. ಇದರ ಪರಿಷ್ಕೃತ ಮುದ್ರಣವು ೧೮೪೫ ರಲ್ಲಿ ೬೮ ಗೀತೆಗಳನ್ನು ಹೊಂದಿ 'ಕ್ರೈಸ್ತ ಗೀತೆಗಳು' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಯಿತು.[೪೪] ಇದರ ಮುದ್ರಣವನ್ನು ಪುನಃ ಪುನಃ ಮಾಡಲಾಯಿತು. ೧೮೬೭ ರಲ್ಲಿ ೫ನೇ ಮುದ್ರಣದಲ್ಲಿ ೧೬೮ ಹಾಡುಗಳು ಕಂಡು ಬಂದವು. ಇದರಲ್ಲಿ ಹೆಚ್ಚಿನವುಗಳನ್ನು ಬಾಸೆಲ್ ಮಿಶನರಿಗಳಾದ ಮೋಗ್ಲಿಂಗ್.ಎಚ್, ವೈಗಲ್.ಜೆ, ಜೆ. ಲೇಯರ್, ಮೆಟ್ಜ್.ಎಫ್, ಮತ್ತಿತರರು ರಚಿಸಿದರು. ೭ನೇ ಮುದ್ರಣವು ೧೮೮೫ ರಲ್ಲಿ ಪ್ರಕಟವಾಯಿತು. ಇಲ್ಲಿ ೧೬೮ ಹಾಡುಗಳು ಮೊದಲನೇ ಭಾಗವೆಂದು, ೨ನೇ ಭಾಗದಲ್ಲಿ ೧೦೨ ಹಾಡುಗಳನ್ನು ಹೊಸದಾಗಿ ಸೇರಿಸಲಾಯಿತು. ಒಟ್ಟು ೨೧೦ ಹಾಡುಗಳು ಪ್ರಕಟವಾದವು. ಆದರೆ ೧೯೧೩ರ ೧೧ನೇ ಮುದ್ರಣವು ೪೧೦ ಹಾಡುಗಳನ್ನು ಒಳಗೊಂಡಿದೆ. ಈ ಸಂಗೀತ ಪುಸ್ತಕದಲ್ಲಿ ಬಿ. ರೈಸ್‌ರವರ 'ಕನ್ನಡ ಸಂಗೀತಗಳು" (೧೮೯೮, ೯ನೇ ಆವೃತ್ತಿ) ಗೀತ ಪುಸ್ತಕದ ೨೪ ಗೀತೆಗಳನ್ನು ದಕ್ಷಿಣ ಕನ್ನಡದ ಆಡು ಭಾಷೆಗೆ ಬದಲಾಯಿಸಿಕೊಂಡು ಇದಕ್ಕೆ ಸೇರಿಸಲಾಯಿತು.[೪೫] ಇಂದೂ ಈ ಗೀತೆಗಳು ಬಳಕೆಯಲ್ಲಿವೆ. ಈ ಗೀತ ಪುಸ್ತಕದಲ್ಲಿ ಬರುವ ಗೀತೆಯೊಂದಿಗೆ ಬಾಸೆಲ್ ಮಿಶನ್ ಪ್ರೆಸ್‌ನಿಂದ ಪ್ರಕಟವಾದ ಅಭಿನಯ ಗೀತೆಗಳು, ಬಾಲಕರ ಗೀತೆ, ಸುರಾರಿ ಕೀರ್ತನೆಗಳು, ಕಥಾಮಾಲೆ, ಯಾತ್ರಿಕನ ಸಂಚಾರ, ಪತ್ರಿಕೆಗಳು (ಇವುಗಳ ವಿವರವನ್ನು ಅನುಬಂಧದಲ್ಲಿ ತಿಳಿಸಲಾಗಿದೆ) ಇವುಗಳಲ್ಲಿ ಕಂಡು ಬರುವ ಗೀತೆಗಳ ಅಧ್ಯಯನ ಇಲ್ಲಿ ನಡೆದಿದೆ.

೫.೩.೧ ಮೊಗ್ಲಿಂಗ್. ಎಚ್ – Moegling. H

ಬಾಸೆಲ್ ಮಿಶನ್ನಿನ ಒಬ್ಬ ಪ್ರಮುಖ ಮಿಶನರಿಯೆ ಹೆರ್ಮನ್ ಮೊಗ್ಲಿಂಗ್. ಇವರು ಗುಗ್ಲಿಂಗನ್‌ನಲ್ಲಿ ಜನಿಸಿದೆನೆಂದು ಹೇಳುತ್ತಿದ್ದರಾಗಿ ಡಾ. ಗುಂಡರ್ಟ ಬರೆಯುತ್ತಾರೆ.[೪೬] ಇವರ ಮಾತಾಪಿತೃಗಳೆ ವಿಲ್ ಹೆಲ್ಮ ಲಡವಿಗ್ ಫೆಡ್ರಿಕ್ ಮೊಗ್ಲಿಂಗ್ ಹಾಗೂ ತಾಯಿ ರೀಕೆ. ತಂದೆ ಪಾದ್ರಿಯಾಗಿದ್ದು ಭಾವುಕನಾಗಿದ್ದನು. ಪ್ರಾರ್ಥನಾ ಬದುಕಿಗೆ ತನ್ನನ್ನೇ ಒಡ್ಡಿಕೊಂಡಿದ್ದ ತಾಯಿ ಮೊಗ್ಲಿಂಗರ ಮೇಲೆ ಬಾಲ್ಯದಲ್ಲಿಯೇ ಪ್ರಭಾವ ಬೀರಿದರು. ಅವರು ಕಲಿಸಿಕೊಟ್ಟ ಪ್ರಾರ್ಥನೆಗಳು ಅವರ ಚಿತ್ತ ಬಿತ್ತಿಯಲ್ಲಿ ಚೆನ್ನಾಗಿ ನೆಲೆಗೊಂಡಿದ್ದವು. ತಮ್ಮ ಎಳೆಯ ಮೂರು ವರ್ಷದಲ್ಲಿಯೇ ತಾಯಿಯನ್ನು ಕಳೆದುಕೊಂಡರೂ ಅವರು ಆ ದಿನಗಳಲ್ಲಿ ಕಲಿಸಿದ ಬೈಬಲ್ ಪ್ರವಚನಗಳು ಹಾಗೂ ತಾಯಿಯೊಂದಿಗೆ ಮಾಳಿಗೆಯ ಮೇಲೆ ಮೊಣಕಾಲೂರಿ ಮಾಡಿದ ಪ್ರಾರ್ಥನೆ ಅವರ ಮುಪ್ಪಿನ ವಯಸ್ಸಿನಲ್ಲಿಯೂ ನೆನೆಪಿನಂಗಳದಲ್ಲಿತ್ತು.

ಬಹು ಭಾಷಾ ಪ್ರಭುತ್ವವನ್ನು ಪಡೆದುಕೊಂಡಿದ್ದ ಇವರು ಗ್ರೀಕ್, ಲ್ಯಾಟಿನ್, ಜರ್ಮನ್ ಕವಿಗಳನ್ನು ಮೆಚ್ಚಿಕೊಳ್ಳುವುದರೊಂದಿಗೆ ನಸುಕಿನಲ್ಲಿಯೇ ಎದ್ದು ಲ್ಯಾಟಿನ್ ಕವಿತೆಗಳನ್ನು ಅಭ್ಯಾಸ ಮಾಡುತ್ತ ಕಾವ್ಯದಲ್ಲಿ ತಲ್ಲೀನರಾಗಿರುತ್ತಿದ್ದರು. ೧೮೨೯ ರಲ್ಲಿ ಟ್ಯುಬಿಂಗನ್ ವಿಶ್ವ ವಿದ್ಯಾಲಯದಲ್ಲಿ ವ್ಯಾಸಂಗವನ್ನು ಮುಂದುವರೆಸಿ ಡಾಕ್ಟರೇಟ್ ಪದವಿಯನ್ನು ಪಡೆದ ಇವರು ಸಾಹಿತ್ಯದ ಕಡೆಗೆ ಒಲವನ್ನು ತೋರಿಸಿ ಆಧ್ಯಾತ್ಮಿಕ ಜ್ಞಾನೋದಯವಾದಾಗ ಅವರು 'ತಂದೆಗೆ ತಾಯಿಗೆ ಮತ್ತು ದೇವರಿಗೆ' ಎಂಬ ಕವಿತೆಯನ್ನು ಬರೆದರು. ಇವರು ತಮ್ಮ ತಂದೆಯೊಡನೆ ಸಭಾಪಾಲಕರಾಗಿ ಸೇವೆ ಮಾಡುತ್ತಿದ್ದಾಗ ತಾವೂ ಒಬ್ಬ ಮಿಶನರಿಯಾಗಬೇಕೆಂಬ ಹಂಬಲವನ್ನು ವ್ಯಕ್ತಪಡಿಸಿದರು. ತಂದೆಯ ಸಂಪೂರ್ಣ ಪ್ರೋತ್ಸಾಹ ದೊರೆತ ಇವರು ಕ್ರಿ.ಶ. ೧೮೩೬ ರಲ್ಲಿ ಬಾಸೆಲ್ ಸಮಿತಿಯ ಅನುಮತಿಯೊಂದಿಗೆ ಭಾರತಕ್ಕೆ ಬಂದರು. ಸಹಯಾತ್ರಿಕರೊಂದಿಗೆ ಇವರು ಮಂಗಳೂರನ್ನು ತಲುಪಿದಾಗ ರೆ. ಹೆಬಿಕರು ಇವರನ್ನು ಸ್ವಾಗತಿಸಿದರು.[೪೭] ಸರಳ ಜೀವಿಯಾಗಿದ್ದ ಇವರು ಪ್ರಾರಂಭದಲ್ಲಿ ಬೆಳಿಗ್ಗೆ ೩ ಗಂಟೆಯಿಂದ ಸಾಯಂಕಾಲದವರೆಗೆ ಕನ್ನಡ ಕಲಿಯುತ್ತಿದ್ದರು. ಕನ್ನಡ ಭಾಷೆಯ ಕಲಿಕೆಯ ಕುರಿತು ಇವರೇ ಹೇಳುವಂತೆ 'I find the kanarese language both easy and difficult I do not findit difficult to understand the written words. But the pronunciation will give me some hard time yet of realize now that I have difficulties with speaking foreign language I have never noticed that before' ಹೀಗೆ ಅವರಿಗೆ ಓದಿ ಅರ್ಥೈಸುವುದು ಸುಲಭವಾಗುತ್ತೆ ಹೊರತು ವ್ಯವಹರಿಸುವುದು ಕಷ್ಟವಾಗಿ ತೋರಿತು.

ಇವರ ಪ್ರಾರ್ಥನಾ ಬದುಕು, ಪ್ರಬೋಧನೆ, ಸರಳ ಜೀವನ ಶೈಲಿ ಎಲ್ಲರನ್ನು ಆಕರ್ಷಿಸಿತು. ಕರಪತ್ರಗಳ ವಿತರಣೆ, ಧರ್ಮ ಪ್ರಸಾರ, ಮನೆಗಳಲ್ಲಿ ಪ್ರಾರ್ಥನೆ ಹಾಗೂ ದೇವಾಲಯಗಳಲ್ಲಿ ಆರಾಧನೆ ನಡೆಸುತ್ತಿದ್ದರು. ಧಾರ್ಮಿಕ ಚಿಂತನೆಗಳಲ್ಲಿಯೆ ದಿನ ಕಳೆಯುತ್ತಿದ್ದ ಇವರು 'ಕ್ರೈಸ್ತ ಸಭಾ ಪತ್ರ' ಎಂಬ ಗ್ರಂಥ ರಚಿಸಿದರು. ಉತ್ತಮ ನಡತೆಯನ್ನು ಹೊಂದಿದ ಇವರು ಮಂಗಳೂರಿನಲ್ಲಿ ಉಪದೇಶಕರನ್ನು ತರಬೇತುಗೊಳಿಸುವ ಸೆಮಿನರಿಯಲ್ಲಿ ಸೇವೆ ಸಲ್ಲಿಸಿದರು.

ಹೊಸಗನ್ನಡದ ಆದ್ಯ ಪ್ರಬಂಧಗಳೆಂದು ಗುರುತಿಸಲಾಗುವ 'ಜಾತಿ ವಿಚಾರಣೆ (೧೮೪೫), ದೇವರ ವಿಚಾರಣೆ (೧೮೫೨) ಇವರ ಬರಹಗಳೆ ಆಗಿವೆ. ಯಾತ್ರಿಕನ ಸಂಚಾರ (ವೈಗಲ್‌ನೊಡನೆ) ಚಿಕ್ಕವನಾದ ಹೆನ್ರಿಯೂ ಅವನ ಬೋಯಿಯೂ (೧೮೪೯) ದೇವವಾಕ್ಯ ವ್ಯಾಖ್ಯಾನ, ಬಾಸೆಲ್ ಮಿಶನ್ನಿನ ಸಭಾ ಕ್ರಮ ಇವು ಇವರ ಇತರ ಕೃತಿಗಳು, ಕನ್ನಡ ಪತ್ರಿಕಾ ಪ್ರಪಂಚಕ್ಕೂ ಇವರೇ ಮೊದಲಿಗರು. ೧೮೪೩-೪೪ರ 'ಮಂಗಳೂರು ಸಮಾಚಾರ' 'ಕನ್ನಡ ಸಮಾಚಾರ'ಗಳ ಸಂಪಾದನೆ-ಪ್ರಕಟಣೆ ಇವರದೇ ಆಗಿದೆ. ಕನ್ನಡದ ಎರಡನೇ ಪತ್ರಿಕೆಯೆನಿಸಿದ 'ಕನ್ನಡ ಸುವಾರ್ತಿಕ'ವನ್ನೂ ಇವರೇ ಸಂಪಾದಿಸಿದರು (೧೮೫೭) ಬಿಬ್ಲಿಯಾಥಿಕಾ ಕರ್ನಾಟಿಕಾ ೧೮೪೮ ರಲ್ಲಿ ಹೊರ ಬಂದಿತು. ೧೮೪೫ ರಲ್ಲಿ 'ದಾಸರ ಪದಗಳು ಎಂಬ ನೂರು ಹಾಡುಗಳ ಸಂಕಲನವು ಹೊರ ಬಂದಿತು.

ಮೊಗ್ಲಿಂಗರು ಹೊಸಗನ್ನಡಕ್ಕೆ ಹಾಗೂ ಕ್ರೈಸ್ತರಿಗೆ ಕೊಟ್ಟ ಅನುಪಮ ಕಾಣಿಕೆ ಎಂದರೆ ಸಂಗೀತಗಳು. ೨೪ ದಾಸರ ಪದಗಳನ್ನು ಜರ್ಮನ್ ಭಾಷೆಯಲ್ಲಿ ಪದ್ಯ ರೂಪದಲ್ಲಿಯೇ ಅನುವಾದಿಸಿದರು. ಇದನ್ನು ಜರ್ಮನಿಯ ಪ್ರಾಚ್ಯ ವಿದ್ಯಾ ವಿಷಯಕವಾದ ZDMG ಪತ್ರಿಕೆಯಲ್ಲಿ ಪ್ರಕಟಿಸಿದರು (೧೮೪೪) ಇವರ ಅಮೋಘ ಸೇವೆಯನ್ನು ಕುರಿತು ರಾ.ಯ. ಧಾರವಾಡಕರರು "ಒಂದು ವಿಧದಲ್ಲಿ ಇವರ ಸೇವೆ ಡಾ. ಕಿಟಲ್‌ರ ಸೇವೆಗಿಂತ ಹೆಚ್ಚೇನೂ ಎನಿಸುತ್ತದೆ"[೮೮] ಎಂದಿದ್ದಾರೆ. ೧೮೮೧ ಮೇ ೧೧ ರಂದು ಇಹಲೋಕದಿಂದ ಅವರು ತೆರಳಿದಾಗ ಅವರ ನಿಸ್ವಾರ್ಥ ಸೇವೆಯನ್ನು ಸ್ಮರಿಸಿ ಜನರು ದೇವಾಲಯಕ್ಕೆ ಹೋಗಿ ಅಂತಹ ಶ್ರೇಷ್ಠ ವ್ಯಕ್ತಿಯನ್ನು ತಮ್ಮ ಬಳಿಗೆ ಕಳುಹಿಸಿದ್ದಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿದರು. ಎಲ್ಲಿಯೊ ಹುಟ್ಟಿ ಆಕಸ್ಮಿಕವಾಗಿ ನಮ್ಮ ನಾಡಿಗೆ ಬಂದು ಓ ನಾಮದಿಂದ ಹಳಗನ್ನಡ ಕಾವ್ಯದವರೆಗೆ ಕನ್ನಡವನ್ನು ಅಭ್ಯಾಸ ಮಾಡಿ ಇಂದಿನ ಕನ್ನಡ ಸಾಹಿತ್ಯಕ್ಕೆ ಅಸ್ತಿವಾರವನ್ನು ಹಾಕಿದವರಲ್ಲಿ ಮುಖ್ಯರಾದರು.[೮೯]

ಗೀತೆಗಳ ಅಧ್ಯಯನ: ಬಾಸೆಲ್ ಮಿಶನ್ ಗೀತ ಪುಸ್ತಕದಲ್ಲಿ ಅತಿ ಹೆಚ್ಚು ಸಂಗೀತಗಳನ್ನು ಕನ್ನಡಕ್ಕೆ ಭಾಷಾಂತರಿಸಿದ ಆದ್ಯ ಭಾಷಾಂತರ ಪ್ರವರ್ತಕರೆಂದರೆ ಮೊಗ್ಲಿಂಗ್. ಒಟ್ಟು ೪೧೦ ಗೀತೆಗಳಲ್ಲಿ ಇವರು ೧೦೭ ಗೀತೆಗಳನ್ನು ರಚಿಸಿದ್ದಾರೆ. ಜರ್ಮನ್ ಭಾಷೆಯಲ್ಲಿ ೧೦೨ ಗೀತೆಗಳನ್ನು ಹಾಗೂ ಇಂಗ್ಲೀಷ್‌ನಲ್ಲಿ ೫ ಗೀತೆಗಳನ್ನು ಭಾಷಾಂತರಿಸಿದ್ದಾರೆ. ಈ ೧೦೭ ಗೀತೆಗಳು ವಿವಿಧ ಭಾಗಗಳಿಗೆ ಸೇರಿವೆ.

ದೇವ ಭಜನೆ	೧೫	ದೇವ ಪ್ರಾರ್ಥನೆ	೦೭
ಸಭೋತ್ಸವಗಳು	೨೭	ಕ್ರೈಸ್ತ ಮನಶ್ಯಾಂತಿ	೦೭
ದೇವ ರಾಜ್ಯ	೦೨	ದೇವ ಸ್ತೋತ್ರ	೦೪
ಕ್ರೈಸ್ತ ಸಭಾಚಾರ ಕೃಪಾಕರಣಗಳು	೧೮	ವಿಶೇಷ ಕಾಲಗಳಿಗೆ ತಕ್ಕ ಗೀತೆಗಳು	೦೪
ರಕ್ಷಣಾ ಮಾರ್ಗ	೧೩	ಸ್ವರ್ಗಾ ಮಹಿಮಾಭಿಲಾಷೆ	೧೦

ಒಟ್ಟು ೧೦೭ಗೀತೆಗಳು

ಮೊಗ್ಲಿಂಗರು ಲೂತಿಯವರೊಡನೆ ೨ ಹಾಡುಗಳನ್ನು ರಚಿಸಿದ್ದಾರೆ. ಈ ನಿಬಂಧದ ಅಧ್ಯಯನಕ್ಕೆ ತೆಗೆದುಕೊಂಡ ವಿಷಯಗಳನ್ನಾಧರಿಸಿ ಮೊಗ್ಲಿಂಗರ ಗೀತೆಗಳ ಅಧ್ಯಯನ ನಡೆದಿದೆ.

ಬೈಬಲ್: ಮೊಗ್ಲಿಂಗರು ಬೈಬಲ್ಲಿನ ವಾಕ್ಯಗಳನ್ನು ಆಧರಿಸಿ ಗೀತೆಗಳನ್ನು ರಚಿಸಿದ್ದಾರೆ. ಪವಿತ್ರ ಗ್ರಂಥದ ಯೋಹಾನ್‌ನ ಸುವಾರ್ತೆ ೧೪ನೇ ಅಧ್ಯಾಯದ ೬ನೇ ವಾಕ್ಯವನ್ನು ಆಧರಿಸಿ "ನೀ ಮಾರ್ಗ, ಕರ್ತ ನಿನ್ನನ್ನೆ ಆಶ್ರಯಿಸಿದೆವು"[೫೦] ಎಂಬ ಗೀತೆಯನ್ನು ರಚಿಸಿದ್ದಾರೆ. ಇವರು ರಚಿಸಿದ ೪ ಇಂಗ್ಲೀಷ್ ಗೀತೆಗಳಲ್ಲಿ ಇದೂ ಒಂದಾಗಿದೆ. ಇದು Thou art the way by thee alone' ಎಂಬ ಗೀತೆಯ ಭಾಷಾಂತರವಾಗಿದೆ.

ಯೇಸುವು ತನ್ನ ಶಿಷ್ಯರಿಗೆ "ನಾನು ತಂದೆಯ ಮನೆಗೆ ಹೋಗುತ್ತಿದ್ದೇನೆ. ನಾನು ಹೋಗುವ ಮಾರ್ಗವು ನಿಮಗೆ ತಿಳಿದೇ ಇದೆ' ಎಂದು ಹೇಳಿದರು. ಆಗ ತೋಮನು 'ಪ್ರಭುವೇ ನೀವು ಎಲ್ಲಿಗೆ ಹೋಗುತ್ತೀರೆಂದು ನಮಗೆ ತಿಳಿಯದು ಅಂದ ಮೇಲೆ ಅಲ್ಲಿಗೆ ಹೋಗುವ ಮಾರ್ಗವು ಹೇಗೆ ತಿಳಿದೀತು?

ಎಂದು ಕೇಳಿದನು. ಆಗ ಯೇಸುವು ನಾನೇ ಮಾರ್ಗವು, ಸತ್ಯವೂ, ಜೀವವೂ ಆಗಿದ್ದೇನೆ ಎಂದು ಹೇಳಿದರು."[೫೧] ಯೇಸು ಮಾನವರಿಗೆ ಪರಲೋಕದ ಮಾರ್ಗವನ್ನು ತೋರಿಸಿದರು.

ನಾನೇ ಸತ್ಯವೂ ಆಗಿದ್ದೇನೆ. ಯೇಸು ಸತ್ಯವನ್ನು ಬೋಧಿಸುವುದು ಮಾತ್ರವಲ್ಲ ಆತನು ಸ್ವತ: ಸತ್ಯವಾಗಿದ್ದಾನೆ. ಅವನು ಸಂಪೂರ್ಣ ನಂಬಿಕೆಗೆ ಯೋಗ್ಯವಾಗಿದ್ದಾನೆ. ಆತನ ಸುವಾರ್ತೆಯು ಸತ್ಯವಾಗಿದೆ. ನಾವು ಯೇಸುವಿನ ಸತ್ಯದಲ್ಲಿ ನಂಬಿಕೆಯಿಡುವಾಗ ನಾವು ಆತನ ಬೋಧನೆಯನ್ನು ಸ್ವೀಕರಿಸಿಕೊಳ್ಳುವಾಗ ರಕ್ಷಣೆಯನ್ನು ಪಡೆದುಕೊಳ್ಳುತ್ತೇವೆ.

ನಾನೇ ಜೀವವೂ ಆಗಿದ್ದೇನೆ. ಯೇಸು ಜೀವವನ್ನು ಕೊಡುವವರು ಮಾತ್ರವಲ್ಲ ಸ್ವತ: ಆತನೇ ಜೀವವಾಗಿದ್ದಾರೆ. ಆತನಲ್ಲಿ ಜೀವವಿತ್ತು (ಯೋಹಾ ೧:೪) ಯೇಸುವನ್ನು ತಿಳಿಯುವುದೆಂದರೆ ನಿತ್ಯ ಜೀವವನ್ನು ಹೊಂದುವುದೇ ಆಗಿದೆ (ಯೋಹಾ ೧೭:೩).

ಮಾರ್ಗವನ್ನು ತೋರಿಸುವುದು ಸತ್ಯವನ್ನು ಬೋಧಿಸುವುದು ಹಾಗೂ ಜೀವವನ್ನು ಕೊಡುವುದು ಇವೆಲ್ಲವುಗಳು ಮಾನವರನ್ನು ರಕ್ಷಿಸುವ ಯೇಸುವಿನ ಮಹಾಕಾರ್ಯದ ವಿವಿಧ ಮಾರ್ಗಗಳಾಗಿವೆ ಎಂದು ಗೀತಗಾರ ಹೇಳಿರುವುದೇ ಗೀತೆಯ ಆಶಯವಾಗಿದೆ.

ಈ ಗೀತೆಯಲ್ಲಿ ರೂಪಕವಾಗಿ ಉಪಯೋಗವಾದ ನಾಮವಾಚಕಗಳಿಗೆ ಉದಾಹರಣೆಗಳು ಮಾರ್ಗ, ಸತ್ಯ ಮತ್ತು ಜೀವ, ಯೇಸು ಈ ಹೆಸರುಗಳಿಂದಲೂ ಕರೆಸಿಕೊಂಡಿದ್ದಾರೆ. ಯೇಸುವಿಗೆ ಸಂವಾದಿಯಾಗಿರುವ ಪದಗಳಾಗಿವೆ. ರೂಪಕವಾಗಿ ಉಪಯೋಗವಾದ ನಾಮವಾಚಕಗಳಿಗೆ ಉದಾಹರಣೆಗಳು ಕುರುಬ ಯೇಸುವನ್ನು ಕುರುಬನೆಂದೂ ಕರೆಯಲಾಗಿದೆ.

ಬೈಬಲ್‌ಗೆ ಸಂಬಂಧಿಸಿದಂತೆ ಮೊಗ್ಲಿಂಗರು ರಚಿಸಿದ ಮೊತ್ತೊಂದು ಗೀತೆ 'ಯೇಸುವಿನ ಕುರಿತು' ಎಂಬುದು. ಇದು Weil ich Jesu sohuflein bin ಎಂಬ ಜರ್ಮನ್ ಗೀತೆಯ ಭಾಷಾಂತರ. ಸಂತ ಯೋಹಾನನ ಸುವಾರ್ತೆಯ ೧೦ನೇ ಅಧ್ಯಾಯವನ್ನು ಆಧಾರವಾಗಿಟ್ಟುಕೊಂಡು ಬರೆದ ಗೀತೆಯಾಗಿದೆ.

ಒಳ್ಳೆಯ ಕುರುಬನು ಯೇಸುವಾಗಿದ್ದಾನೆ. ಆತನು ತನ್ನ ಕುರಿ ಹಿಂಡನ್ನು ಪ್ರೀತಿಸುತ್ತಾನೆ. ನಿಜವಾದ ಕುರುಬನಾದ ಯೇಸು ತನ್ನ ಕುರಿಗಳಿಗೆ ಜೀವವಿರಬೇಕೆಂತಲೂ ಆ ಜೀವವು ಸಮ್ಮೃದ್ಧಿಯಾಗಿರಬೇಕೆಂತಲೂ ಬಂದನು. ಆತನು ತನ್ನ ಕುರಿಗಳನ್ನು ಮೇವಿರುವ ಸ್ಥಳಕ್ಕೆ ನಡೆಸುತ್ತವೆ. ಆದ್ದರಿಂದ ತಾನು ಚಿಂತಿಸುವ ಅಗತ್ಯವಿಲ್ಲ ಎಂಬ ಆಶಯವನ್ನು ಈ ಗೀತೆ ಹೊಂದಿದೆ.

ಯೇಸುವಿನ ಕುರಿಯು	ಕೋಲು ಹಿಡಿದೆನ್ನನ್ನು
ನಾನು ಚಿಂತೆ ಪಡೆನು	ಶಾಂತಿಯಿಂದ ಕಾಯು
ನಂಗೆ ನಿತ್ಯಕ್ಕೂ ಸಂತೋಷ	ಸುಖ ಕ್ಷೇಮದಲ್ಲಿದ್ದೇನೆ
ಪ್ರೀತಿಯಿಂದ ಒಳ್ಳೇ ಘೋಷ	ಒಳ್ಳೇ ಮೇವು ಮೆಲ್ಲುತೇನೆ
ಕೊಟ್ಟು ಕಾಯ್ವ ಯೇಸುವು	ದಾಹವಾಗೆ ಕುರುಬ

ನನ್ನ ನಾಮ ಬಲ್ಲನು   ತೋರಿಸೋನು ಬುಗ್ಗೆಯ

ಕನ್ನಡ ಗೀತೆಗಳು ೧೯೬೬, ಗೀತೆ-೨೩

'ಹುಟ್ಟಿಸಿದ ದೇವ ಹುಲ್ಲು ಮೇಯಿಸಿದಿರುವನೆ? ಎಂಬ ವರದಿಯನ್ನು ನೆನಪಿಸುವಂತಿದೆ ಈ ಗೀತೆ. ದೇವರೊಂದಿಗಿನ ನಮ್ಮ ಸಂಬಂಧ ನೂರರಷ್ಟು ಫಲ ದೊರೆಯುವಂತೆ ಮಾಡುತ್ತದೆ. ಆದ್ದರಿಂದ ನಂಬಿಕೆಯು ಅಗತ್ಯ ಎಂಬ ಧ್ವನಿ ಇಲ್ಲಿದೆ.

ಕ್ರಿಸ್ತರ ವ್ಯಕ್ತಿತ್ವ: ಯೇಸುವಿನ ವ್ಯಕ್ತಿತ್ವವನ್ನು ವರ್ಣಿಸುವ ಗೀತಗಾರ ಆತನ ಶುದ್ಧ ತೇಜಸ್ಸನ್ನು ಅನೇಕ ರೂಪಕಗಳ ಮೂಲಕ ವರ್ಣಿಸಿದ್ದಾನೆ. 'ಸುಂದರ ಯೇಸು' ಎಂಬ ಗೀತೆಯಲ್ಲಿ ಇದು Schonster Herr Jesu ಎಂಬ ಜರ್ಮನ್ ಗೀತೆಯ ಭಾಷಾಂತರವಾಗಿದೆ.

ಸುಮಧುರ ಯೇಸು
ಸರ್ವ ಲೋಕ ಕರ್ತ
ನಾರಿ ಪುತ್ರ ದೇವವಜ
ಆತ್ಮದ ಮೋದ
ಆತ್ಮದ ಕಿರೀಟ
ಪ್ರೀತಿಸುತ್ತಿರ್ವೆ ನಿನ್ನನ್ನು

ಕನ್ನಡ ಗೀತೆಗಳು, ಗೀತೆ-೧೧

ಈ ಗೀತೆಯಲ್ಲಿ ರೂಪಕಗಳಾಗಿ ಉಪಯೋಗವಾದ ನಾಮವಾಚಕಗಳಿಗೆ ಉದಾಹರಣೆಗಳು ಇಂತಿವೆ. 'ಆತ್ಮ ಕಿರೀಟ, ಆತ್ಮದ ಮೋದ, ನಾರೀಪುತ್ರ, ಸರ್ವಲೋಕ ಕರ್ತ ಇವು ಯೇಸುವನ್ನು ಸೂಚಿಸುವ ಪದಗಳಾಗಿವೆ.

ಮೊಗ್ಲಿಂಗ್ ಸುಲಭವಾದ ಕನ್ನಡ ಪದವಿದ್ದರೂ ಸಂಸ್ಕೃತದ ಪದಗಳನ್ನು ಉಪಯೋಗಿಸಿದ್ದಾರೆ. ಉದಾ: ನಾರೀಪುತ್ರ-ಹೆಣ್ಣು, ಹೆಂಗಸು, ವಿಶೇಷವಾಗಿ ರೂಢಿಯಲ್ಲಿರುವ ಪದಕ್ಕಿರುವ ಮಟ್ಟಕ್ಕಿಂತ ಹೆಚ್ಚಿನ ಗೌರವವನ್ನು ನೀಡುವಾಗ ಈ ಪದಗಳನ್ನು ಉಪಯೋಗ ಮಾಡಿದ್ದಾರೆ. ಯೇಸುವು ಸಂತ ಮರಿಯಳ ಮಗನಾಗಿ ಜನಿಸಿದ. ಇಲ್ಲಿ ಮರಿಯಳು ಅಸಾಧಾರಣ ಹೆಂಗಸು ಪವಿತ್ರತೆಗೆ ಹೆಸರನ್ನು ಪಡೆದವಳಾಗಿದ್ದಳು. ಆಕೆ ಸಾಮಾನ್ಯ ಹೆಂಗಸಿಗಿಂತ ಅತಿ ಶ್ರೇಷ್ಠಳು ಎಂದು ಹೇಳಲಾಗಿದೆ. ಸಂಸ್ಕೃತ ಪದಗಳನ್ನು ಬಳಸಿರುವುದು ಎದ್ದು ಕಾಣುವ ಅಂಶವಾಗಿದೆ.

ಯೇಸುವಿನಲ್ಲಿ ಕಂಡು ಬರುವ ಅತಿ ಶ್ರೇಷ್ಟ ಗುಣವೇ 'ಪ್ರೀತಿ'. ಪ್ರೀತಿಯ ಕುರಿತು ಆತನು ನುಡಿದುದ್ದೆನೆಂದರೆ "ನಿನ್ನನ್ನು ನೀನೇ ಪ್ರೀತಿಸಿಕೊಳ್ಳುವಂತೆ ನಿನ್ನ ನೆರೆಯವನನ್ನೂ ಪ್ರೀತಿಸು"[೫೨] ದೇವರು ಪ್ರೀತಿ ಸ್ವರೂಪಿಯಾಗಿದ್ದಾರೆ (೧ಯೋಹಾನ ೪:೮) ಅಂದರೆ ಇಲ್ಲಿ ದೇವರು ಪ್ರೀತಿಸುತ್ತಾನೆಂದಷ್ಟೇ ಹೇಳುವುದಿಲ್ಲ. ಆದರೆ ದೇವರು ಸ್ವತ: ಪ್ರೀತಿ ಸ್ವರೂಪಿ ಎಂದು ಹೇಳುತ್ತಾರೆ. ಅವರ ಸ್ವಭಾವವು ಪ್ರೀತಿಯೇ.

ಈ ಮಹಾ ಪ್ರೀತಿಗೆ ತನು ದಾಸನಾಗಿದ್ದಾನೆಂದು ಗೀತಗಾರ 'ಪ್ರೀತಿ ದಿವ್ಯ ರೂಪವಾಗಿ' ಎಂಬ ಗೀತೆಯಲ್ಲಿ ಹೇಳಿದ್ದಾರೆ. ಇದನ್ನು ಮೂಲದಲ್ಲಿ J. Scheffer[೫೩] (೧೬೫೭) ಎಂಬುವವರು ರಚಿಸಿದರು. ಇದು Liebe, die du mich zum bilde ಗೀತೆಯ ಭಾಷಾಂತರವಾಗಿದೆ.

೧೮೭೪ ರಲ್ಲಿನ ಗೀತೆ	೧೯೬೬ ರಲ್ಲಿನ ಗೀತೆ
ಪ್ರೀತಿ ನೀ ಸಮಾಧಿ ಬಿಟ್ಟು	ಪ್ರೀತಿ ನಂಗೆ ಗೋರಿ ಬಿಟ್ಟು
ಏಳ ಹೇಳಲೆನಗೆ	ಏಳ ನೀನು ಹೇಳಲೆ
ಜೀವಮಾಲೆಯೆನಗಿಟ್ಟು	ಜೀವಮಾಲೆಯೆನಗಿಟ್ಟು
ಕೊಟ್ಟ ನಿನಗೆರ್ಗುವೆ।	ಕೊಟ್ಟ ನಿನಗೆರ್ಗುವೆ।
ಪ್ರೀತಿ ಸರ್ವಕಾಲಕೆ	ಪ್ರೀತಿ ಸರ್ವಕಾಲಕೆ
ದಾಸನಾದೆ ನಿನಗೆ।	ದಾಸನಾದೆ ನಿನಗೆ।

ಕನ್ನಡ ಗೀತೆಗಳು, ಗೀತೆ-೧೫

೧೮೭೪ರ ಕೃತಿಯಲ್ಲಿ ಪ್ರೀತಿ ನೀ ಸಮಾಧಿ ಬಿಟ್ಟು ಮತ್ತು ಏಳ ಹೇಳಲೆನಗೆ ಎಂಬ ಪದಗಳು ೧೯೬೬ ರಲ್ಲಿ ಕ್ರಮವಾಗಿ ಪ್ರೀತಿ ನಂಗೆ ಗೋರಿ ಬಿಟ್ಟು, ಏಳ ನೀನು ಹೇಳಲೆ ಎಂದು ಬಳಕೆಯಾಗಿದೆ.

ಚರಣದ ಪ್ರತಿ ಸಾಲಿನ ಅಂತ್ಯದಲ್ಲಿ 'ದಾಸನಾದೆ ನಿನಗೆ' ಎಂಬ ಸಾಲು ಪುನರಾವರ್ತನೆಯಾಗಿದೆ. ಗೀತಗಾರನ ವಿನಮ್ರ ಮನೋಭಾವ ಹಾಗೂ ಆತನಿಗೆ ದೇವರ ಅನಂತ ಪ್ರೀತಿಯಲ್ಲಿರುವ ನಂಬಿಕೆಯನ್ನು ಇದು ವ್ಯಕ್ತಪಡಿಸುವುದು ಹಾಗೂ 'ಪ್ರೀತಿ' ಎಂಬ ಪದ ೨೦ ಬಾರಿ ಪುನರಾವರ್ತನೆಯಾಗಿರುವುದು ಗೀತೆಯ ವಿಶೇಷತೆಯಾಗಿದೆ.


ಸಂವಾದಿ ಪದದ ಬಳಕೆ ಇಲ್ಲಿದೆ. ಉದಾ: ಯೇಸುವನ್ನು 'ಪ್ರೀತಿ' ಎಂದು ಕರೆಯಲಾಗಿದೆ.

ದಾಸ: ಇದು ಡೊಲೊಸ ಎಂಬ ಗ್ರೀಕ್ ಪದ. ಇದರ ಅರ್ಥ 'ಗುಲಾಮ' ಗುಲಾಮನಿಗೆ ತನ್ನ ಸ್ವಂತ ಚಿತ್ತವಿಲ್ಲ. ಆತನು ಸಂಪೂರ್ಣವಾಗಿ ತನ್ನ ಯಜಮಾನನ ಅಂಕಿತದಲ್ಲಿದ್ದಾನೆ. ನಾವು ಪಾಪಕ್ಕೆ ದಾಸರಾಗಿದ್ದೆವು. ಆದರೆ ಈಗ ನಾನು ದೇವರ ದಾಸರಾಗಿದ್ದೇವೆ.

ಯೇಸುವಿನ ವ್ಯಕ್ತಿತ್ವದ ಶ್ರೇಷ್ಠ ಗುಣವೆ 'ಶಾಂತತೆ' ಯೇಸುವಿನ ಇಹಲೋಕದ ೩೩ ವರ್ಷಗಳ ಪಯಣದಲ್ಲಿ ಆತನು ಶಾಂತತೆಯಿಂದಲೇ ವರ್ತಿಸಿದನು. ಯೇಸುವೆ ಮಹಾ ಶಾಂತಿ ಸ್ಥಾಪಕನಾಗಿದ್ದಾನೆ (ಎಫೆ.ಸ ೨:೧೭). ಆತನು ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆ ನಿಮಗೆ ಸಮಾಧಾನವಾಗಲಿ ತಂದೆ ನನ್ನನ್ನು ಕಳಿಸಿಕೊಟ್ಟ ಹಾಗೆಯೇ ನಾನು ನಿಮ್ಮನ್ನು ಕಳುಹಿಸಿಕೊಡುತ್ತೇನೆ (ಯೇಹಾನ ೨೦:೨೧) ಯೇಸುವು ತನ್ನ ಶಿಷ್ಯರನ್ನು ಸಮಾಧಾನ ಪಡಿಸುವವರನ್ನಾಗಿ ಕಳಿಸಿದ್ದಾನೆ. ಆತನ ಶಿಷ್ಯರು ಆತನ ರಾಯಬಾರಿಗಳಾಗಿದ್ದಾರೆ. ಕ್ರಿಸ್ತನು ಲೋಕಕ್ಕೆ ಸಮಾಧಾನಪಡಿಸುವವನಾಗಿ ಬಂದನು. ಆದರೂ ಆತನು ಹಿಂಸೆಯನ್ನು ಅನುಭವಿಸಿದನು ಮತ್ತು ವೈರಿಗಳಿಂದ ಕೊಲ್ಲಲ್ಪಟ್ಟನು. ಇಂತಹ ಯೇಸುವನ್ನು ಗೀತಗಾರ ಹಿಂಬಾಲಿಸಲು ಬಯಸಿರುವ ಬಗೆ

ಶಾಂತ ಯೇಸುವೆ ಎಂಬ ಗೀತೆಯಲ್ಲಿ ವ್ಯಕ್ತವಾಗಿದೆ. ಇದು Wer ist wohl wie du ಎಂಬ ಗೀತೆಯ ಭಾಷಾಂತರವಾಗಿದೆ. ಇದನ್ನು ಯೇಹಾನ ಅನಸ್ತಾಸಿಯುಸ್ ಫ್ರೆಲಿಂಗ್ ಹೌಸನ್ (೧೬೭೦-೧೭೩೯) ಎಂಬಾತನು ಜರ್ಮನ್ ಭಾಷೆಯಲ್ಲಿ ರಚಿಸಿದನು.

೧೮೪೧ರಲ್ಲಿನ ಗೀತೆ



೧೯೬೬ ರಲ್ಲಿನ ಗೀತೆ

ಶಾಂತ ಯೇಸುವೇ
ನಿನ್ನ ಹಾಗೆಯೇ
ಯಾರು ಸರ್ವಲೋಕದಲ್ಲಿ?
ಎಲ್ಲ ನರ ಪುತ್ರರರಲ್ಲಿ
ಅತಿ ಶ್ರೇಷ್ಠನೇ
ಶಾಂತ ಯೇಸುವೇ

ಕನ್ನಡ ಗೀತೆಗಳು, ಗೀತೆ–೧೮

೧೮೪೧ ರ ಗೀತೆಯಲ್ಲಿ 'ಶಾಂತ ಯೇಸುವೇ' ಎಂಬ ಸಾಲು ಇಲ್ಲವಾಗಿದೆ. ೧೯೬೬ರ ಗೀತೆಯಲ್ಲಿ ಈ ಸಾಲು ಪ್ರಾರಂಭದಲ್ಲಿಯೇ ಇದ್ದು ಯೇಸುವಿನ 'ಶಾಂತ' ವ್ಯಕ್ತಿತ್ವದತ್ತ ದೃಷ್ಟಿ ಹರಿಸಿದೆ.

ಶಾಂತತೆ: ಹೊಸಒಡಂಬಡಿಕೆಯಲ್ಲಿ ಈ ಗುಣವನ್ನು ಪ್ರೀತಿಯೊಂದಿಗೆ ಸೇರಿಸಲಾಗಿದೆ. ೨ ಕೋರಿ ೧೦–೧ ರಲ್ಲಿ ಇದು ಯೇಸುವಿನಲ್ಲಿದ್ದಿರೆಂದು ಹೇಳಿದೆ. ಗಲಾತ್ಯ ೫:೨೨ರಲ್ಲಿ ದೇವರಾತ್ಮನಿಂದುಂಟಾಗುವ ಫಲಗಳಲ್ಲೊಂದಾಗಿದೆಯೆಂದು ಹೇಳಿದೆ. ಎಫೆಸ ೪:೨ ರಲ್ಲಿ ಇದು ಸಾತ್ವಿಕತ್ವದೊಡನೆ ಸಂಬಂಧಿಸಿಕೊಂಡಿದೆ. ಗಲಾತ್ಯ ೬:೧ ರಲ್ಲಿ ಕ್ಷಮಾಗುಣವನ್ನು ಕುರಿತು ಪ್ರಸ್ತಾಪ ಮಾಡುವಲ್ಲಿ ಈ ಮಾತನ್ನು ಪ್ರಯೋಗಿಸಲಾಗಿದೆ. ಇವೇ ಶಾಂತತೆಯ ಲಕ್ಷಣಗಳು. ಈ ಸುಗುಣವನ್ನು ಸಂಪಾದಿಸಿಕೊಳ್ಳುವುದಕ್ಕೆ ಪ್ರತಿಯೊಬ್ಬ ಕ್ರಿಸ್ತನು ಪ್ರಯತ್ನಿಸಬೇಕು ಎಂಬ ಭಾವ ಈ ಗೀತೆಯಲ್ಲಿ ವ್ಯಕ್ತವಾಗಿದೆ.


ಗೀತೆಯಲ್ಲಿ ಯೇಸುವನ್ನು 'ಆದಿ ತೇಜ' 'ದಿವ್ಯ ಶೂರ' 'ಶಾಂತ ಯೇಸು' 'ಸತ್ಪ್ರವಾದಿ' ಎಂದು ಸೂಚಿಸಿ ಹೇಳಲಾಗಿದೆ. ಇವು ಯೇಸುವಿಗೆ ರೂಪಕಗಳಾಗಿ ಬಳಸಲಾದ ಪದಗಳಾಗಿವೆ.

ಉಪಮೆಗಳ ಬಳಕೆ ಮೇಲುಗೈ ಹೊಂದಿರುವ ಗೀತ "ನನ್ನತಿ ಪ್ರಿಯ ನಿಜತ್ರಾಣ"[೫೪] ಎಂಬುದು. ಇದು Ich will dich lieben meine starke[೫೫] ಎಂಬ ಜರ್ಮನ್ ಗೀತೆಯ ಭಾಷಾಂತರವಾಗಿದೆ. ಇದನ್ನು ಯೋಹಾನ್ ಶೈಫ್ಲರ್ ಎಂಬುವರು ರಚಿಸಿದರು.

ಇಲ್ಲಿ ಗೀತಗಾರ ಯೇಸುವನ್ನು 'ಜೀವ ಜ್ಯೋತಿ' 'ಮದಲಿಂಗ' 'ರಮಣೀಯ ಕಾಂತಿ 'ಪ್ರಭಾಮಯ ಸತ್ಯಾದಿತ್ಯ, ಸ್ವರ್ಗೀಯ ಭಾಸ್ಕರ ಎಂದು ವರ್ಣಿಸಿದ್ದಾರೆ.

ಪರಲೋಕ: ಪರಲೋಕಕ್ಕೆ ಸಂಬಂಧಿಸಿದ ಮೊಗ್ಲಿಂಗರ ಗೀತೆ 'ಉಂಟು ಒಂದು ದೇಶವು' ಇದು ಸ್ವರಚಿತ ಗೀತೆಯಾಗಿದ್ದು Meine Lebenszeit Verstreicht ಎಂಬ ರಾಗದಲ್ಲಿದೆ. ಯೇಸುವು ವೈದ್ಯನಾಗಿದ್ದು ಆತನ ಪರಲೋಕದಲ್ಲಿ ವಾಸಿಸುತ್ತಿದ್ದಾರೆ. ಅವರಿಂದ ನಾವು ಗುಣಮುಖರಾಗುತ್ತೇವೆ ಎಂಬ ಭಾವ ವ್ಯಕ್ತವಾಗಿದೆ ಗೀತೆಯಲ್ಲಿ.

೧೮೪೧ ರಲ್ಲಿನ ಗೀತೆ



೧೯೬೬ ರಲ್ಲಿನ ಗೀತೆ

ಅಲ್ಲಿ ನಮಗುತ್ತಮ
ವೈದ್ಯಗಾರನಿದ್ದಾನಲ್ಲ?
ಎಲ್ಲಿ ರೋಗಕೌಷಧ
ಕೊಟ್ಟು, ಸ್ವಸ್ಥ ಮಾಡಬಲ್ಲ
ಬನ್ನಿ ಭ್ರಾತೃಗಳಿರಾ
ಅಲ್ಲೆ ಸ್ವಸ್ಥರಾಗುವಾ!

ಕನ್ನಡ ಗೀತೆಗಳು, ಗೀತೆ–೩೯೨

ಗೀತೆಯ ಎರಡನೇ ಚರಣದ ಈ ಸಾಲುಗಳನ್ನು ಗಮನಿಸಿದಾಗ ೧೮೪೧ ರ ಸಾಲುಗಳಲ್ಲಿ ರೋಗದ ಪಟ್ಟಿಯನ್ನೇ ಕೊಡಲಾಗಿದೆ. ೧೯೬೬ರ ಗೀತೆಯಲ್ಲಿ ಸಂಕ್ಷಿಪ್ತವಾಗಿ ರೋಗವೆಂದು ಬಳಸಿದ್ದಾನೆ.

ಸಂಸ್ಕಾರಗಳು:

೧. ಸ್ನಾನ ದೀಕ್ಷೆ: ಕ್ರೈಸ್ತ ಧರ್ಮದಲ್ಲಿ ಸ್ನಾನಾದೀಕ್ಷೆ ಒಂದು ಪ್ರಮುಖವಾದ ಸಮಾರಂಭ. ಈ ದೀಕ್ಷೆಯ ಮೂಲಕ ವ್ಯಕ್ತಿ "ಸ್ವರ್ಗ ರಾಜ್ಯದ ಅಂಗವಾಗಿ ಕ್ರೈಸ್ತ ಸಭೆಯ ಸದಸ್ಯನಾಗುತ್ತಾನೆ."[೫೬] ಮಗು ಹುಟ್ಟಿದ ೪೦ ದಿವಸದಲ್ಲಿ ಮಗುವನ್ನು ದೇವಾಲಯಕ್ಕೆ ಕರೆದುಕೊಂಡು ಹೋಗುತ್ತಾರೆ. ಆ ದಿನದ ಆರಾಧನೆಯಲ್ಲಿ ಮಗುವಿಗೆ ನಾಮಕರಣವಾಗುತ್ತದೆ. ಈ ಸಮಾರಂಭವನ್ನು ಸ್ನಾನದೀಕ್ಷೆ ಎಂದು ಕ್ರೈಸ್ತರು ಹೇಳುತ್ತಾರೆ. ಸ್ನಾನ ದೀಕ್ಷೆಗೆ ಸಂಬಂಧಿಸಿದಂತೆ ಮೊಗ್ಲಿಂಗ್ ೩ ಗೀತೆಗಳನ್ನು ರಚಿಸಿದ್ದಾರೆ.

ಸ್ನಾನದೀಕ್ಷೆಗೆ ಸಂಬಂಧಿಸಿದ ಗೀತೆ 'ಸರ್ವಾಧಿಕಾರ ನನ್ನದೇ' ಎಂಬ ಗೀತೆ Christ unser herr lum Jordan ಎಂಬ ಗೀತೆಯ ಭಾಷಾಂತರವಾಗಿದೆ. ಇದನ್ನು ಎಮ್. ಲೂಥರ್[೫೭] (೧೫೪೧) ರಚಿಸಿದರು. ಕ್ರಿಸ್ತನಾಗ ಬಯಸುವ ವ್ಯಕ್ತಿಯನ್ನು ಪಿತಾ, ಪುತ್ರ, ಪವಿತ್ರಾತ್ಮನ ನಾಮದಲ್ಲಿ ದೀಕ್ಷೆ ಕೊಡಲಾಗುವುದು ಇದೇ ಆಜ್ಞೆಯನ್ನು ಯೇಸು ತನ್ನ ಶಿಷ್ಯರಿಗೆ ನೀಡಿದ್ದರು ಎಂಬ ಆಶಯವನ್ನು ಗೀತೆ–೧೭೦ ಹೊಂದಿದೆ.

"ಚಿಕ್ಕ ಮಕ್ಕಳನ್ನು ನನ್ನ ಬಳಿಗೆ ಬರಲು ಬಿಡಿ ಅವುಗಳನ್ನು ತಡೆಯ ಬೇಡಿ. ಸ್ವರ್ಗರಾಜ್ಯ ಇಂಥವರದೆ"[೫೮] ಎಂಬ ವಾಕ್ಯವನ್ನು ಆಧರಿಸಿ ರಚಿತವಾಗಿದೆ "ಬಪ್ಪ ಬಾಲರನ್ನು ಕಂಡು"[೫೯] ಎಂಬ ಗೀತೆಯು. ಇದು Hub ich recht und wahr vernomen ಗೀತೆಯ ಭಾಷಾಂತರವಾಗಿದೆ. ಮಗುವಿನಂತೆ

ಯೇಸುವಿನ ಬಳಿಗೆ ಬಂದಿದ್ದೇನೆ, ನನ್ನನ್ನು ಸ್ವೀಕರಿಸು, ಸಕಲ ವರಗಳನ್ನು ಸುರಿಸು ಎಂದು ಗೀತಗಾರ ತನ್ನ ಅಂತರಾಳದ ಕೋರಿಕೆಯನ್ನು ಮುಂದಿಟ್ಟಿದ್ದಾರೆ ಗೀತೆಯಲ್ಲಿ.

೨. ಕರ್ತನ ಭೋಜನಕ್ಕೆ ಸಂಬಂಧಿಸಿದಂತೆ ಗೀತೆಗಳು: ಕರ್ತನ ಭೋಜನಕ್ಕೆ ಸಂಬಂಧಿಸಿದಂತೆ ೫ ಗೀತೆಗಳಿದ್ದು ೧ ಗೀತೆಯನ್ನು ಮೊಗ್ಲಿಂಗರು ಬರೆದಿದ್ದಾರೆ. "ಕರ್ತ ನಮ್ಮ ಮಧ್ಯದಲ್ಲಿ"[೬೦] ಎಂಬ ಗೀತೆ. ಇದು Herrr, du, wollst uns vorbereiten ಎಂಬ ಗೀತೆಯ ಭಾಷಾಂತರವಾಗಿದೆ. ಯೇಸುವು ಪ್ರತಿ ಬಲಿಪೂಜೆಯಲ್ಲಿ ರೊಟ್ಟಿಯ ರೂಪದಲ್ಲಿ ತನ್ನ ಆತ್ಮಕ್ಕೆ ಬಂದು ಆತನನ್ನು ಶಕ್ತಿ ಪಡಿಸುತ್ತಾನೆ ಎಂಬ ಆಶಯ ಈ ಗೀತೆಯಲ್ಲಿದೆ. ಪರಮ ಪ್ರಸಾದವನ್ನು ಕಥೋಲಿಕ ಸಭೆಯಲ್ಲಿ ಪ್ರತಿ ಬಲಿ ಪೂಜೆಯಲ್ಲಿ ಸ್ವೀಕರಿಸುತ್ತಾರೆ. ಆದರೆ ಪ್ರೊಟೆಸ್ಟೆಂಟ್ ಕ್ರೈಸ್ತರು ವರ್ಷಕ್ಕೆ ೫ ಬಾರಿ ಆಚರಿಸುತ್ತಾರೆ. ಕ್ರಿಸ್ತನ ದೇಹ ಮತ್ತು ರಕ್ತವನ್ನು ಸೂಚಿಸುವ ಸಲುವಾಗಿ ಈ ಆಚರಣೆ ಇದೆ.

ಆತ್ಮ ನಿವೇದನೆ: ಭಕ್ತ ತನ್ನ ಪಾಪದ ಬಾಳನ್ನು ಕುರಿತು ಪರಿತಪಿಸುತ್ತ ಈ ಅವಸ್ಥೆಯಿಂದ ಹೊರ ಬರಲು ಯತ್ನಿಸುತ್ತಾನೆ. ಪಾಪ ವಿಮೋಚನೆಗಾಗಿ ದೇವರಲ್ಲಿ ಬೇಡುತ್ತಾನೆ. ನಿಜವಾದ ಶಾಂತಿ, ಬಿಡುಗಡೆ ದೊರೆಯುವುದು ಯೇಸುವಲ್ಲಿ ಎಂದು ಭಾವಿಸಿದ ಭಕ್ತ ತನ್ನನ್ನು ಪಾಪ ಬಂಧನದಿಂದ ವಿಮೋಚಿಸು ಎಂದು ಬೇಡುತ್ತಿದ್ದಾನೆ. ದೇವರೊಬ್ಬನೆ ತನ್ನ ಪಾಪಗಳನ್ನು ಮನ್ನಿಸಲು ಪವಿತ್ರನು, ಯೋಗ್ಯನು ಎಂಬ ಭಾವ 'ಪವಿತ್ರನೆ' ಎಂಬ ಗೀತೆಯಲ್ಲಿದೆ. ಇದು Ach Gott und Herr ಎಂಬ ಗೀತೆಯ ಭಾಷಾಂತರವಾಗಿದೆ.

೧. ಪವಿತ್ರನೇ	೨. ಯಾರಿಂದಲು
ಅಪಾರವೇ	ಅದಾಗದು
ನಾ ಮಾಡಿದಂಥ ಪಾಪ	ನೀ ನೊಬ್ಬನೆನ್ನ ತಂದೆ
ಸೃಷ್ಟ್ಯೊಳಗೆ	ನೀ ನೆನ್ನನು
ಯಾರೆನಗೆ	ಐ ಮನ್ನಿಸು
ಸಹಾಯ ಮಾಡಲಾಪ?	ನಿನ್ನಾಪರಕ್ಕೆ ಬಂದೆ

ಕನ್ನಡ ಗೀತೆಗಳು, ಗೀತೆ–೨೨೦

ಟ್ಯುಟೋನಿಕ್ ಅನುವಾದ ಪದ್ಯಗಳಲ್ಲಿ ಪರಕೀಯ ಲಯ ಕಡಿಮೆಯಾಗತೊಡಗಿತೆಂದು ಕಾಣುತ್ತದೆ. ಈ ಮಾತಿಗೆ ಮೊಗ್ಲಿಂಗರ ಈ ಗೀತೆ ಉದಾಹರಣೆಯಾಗಿದೆ. ಟ್ಯುಟೋನಿಕ್ ಛಂದೋನಿಯಮಕ್ಕನುಸರಿಸಿ ಈ ಗೀತೆ ರಚನೆಯಾಗಿದೆಯಾದರೂ ನಮ್ಮ ಪದ್ಧತಿಯಂತೆ ಆಡಂಬರವಿಲ್ಲದ ಕೆಲವೇ ಶಬ್ದಗಳ ಸಣ್ಣ ವಾಕ್ಯಗಳು ಮೃದು ಭಾಷಾ ನಿರೂಪಣೆ ಇತ್ಯಾದಿಗಳು ಇದರ ವಿದೇಶಿಯತೆಯನ್ನು ಒಂದಿಷ್ಟು ದೂರ ಮಾಡಿ ದೇಶೀಯತೆಗೆ ಒಗ್ಗಿಸಿಕೊಂಡಿವೆ.

ಇಹಲೋಕದ ಬದುಕು ಕ್ಷಣಿಕ, ಚಿಂತೆಯಿಂದ ಯಾವ ದು:ಖವು ಹೋಗಲಾರದು. ಎಲ್ಲವೂ ದೇವರ ದಾನವಾಗಿದೆ. ಆತನಲ್ಲಿ ವಿಶ್ವಾಸವಿಟ್ಟದ್ದೇ ಆದರೆ ಬದುಕು ಸಾರ್ಥಕವಾಗುವುದು ಎಂಬ ಆಶಯವನ್ನು

ಹೊಂದಿದೆ. 'ಚಿಂತೆ ಯಾಕೆ' ಯಾಕೆ ದು:ಖ? ಎಂಬ ಗೀತೆ ಇದು Warum sollt ich mich denn gramen? ಎಂಬ ಗೀತೆಯ ಭಾಷಾಂತರವಾಗಿದೆ.

ಹುಟ್ಟುವಾಗ ಏನು ತಂದೆ?	ತೀರಿ ಹೋಗುವಾಗಲೇನು
ಕೂಸಿಗೆ	ಹಿಡಿದು
ಏನಿದೆ	ಹೊರಟು
ಬತ್ತಲಾಗಿ ಬಂದೆ	ಅಲ್ಲಿ ತೋರಿಸೇನು?


ಕನ್ನಡ ಗೀತೆಗಳು, ಗೀತೆ–೩೦೭

ಹಳೆಒಡಂಬಡಿಕೆಯ ಜೋಬ್ ಪುಸ್ತಕದಲ್ಲಿ ಜೋಬ್ ಎಂಬ ವ್ಯಕ್ತಿಯು ತನ್ನ ಸಂಪತ್ತು, ಮಕ್ಕಳು ಎಲ್ಲರನ್ನು ಕಳೆದುಕೊಂಡು ನಿರಾಶೆಯಲ್ಲಿರುತ್ತಾನೆ. ಅತಿ ಶ್ರೀಮಂತ ವ್ಯಕ್ತಿಯಾಗಿದ್ದ ಈತ ದೇವರಲ್ಲಿ ವಿಶ್ವಾಸವುಳ್ಳ ವ್ಯಕ್ತಿಯಾಗಿದ್ದನು. ತನ್ನ ದುರಂತದ ಕ್ಷಣದಲ್ಲೂ ದೇವರಲ್ಲಿ ಇಟ್ಟ ನಂಬಿಕೆ ಎಲ್ಲ ಕಷ್ಟಗಳನ್ನು ಸಹಿಸಿಕೊಳ್ಳಲು ಆತನಿಗೆ ದೇವರಲ್ಲಿ ನಂಬಿಕೆಯನ್ನು ಬಿಟ್ಟು ಬಿಡು ಎಂದು ಒತ್ತಾಯಿಸುತ್ತಾರೆ. ಆದರೆ ಜೋಬ್ ಯಾವುದಕ್ಕೂ ಹೆದರದೆ ಹಾಗೆಯೇ ಸ್ಥಿರವಾಗಿ ನಿಲ್ಲುತ್ತಾನೆ. ಆತನ ವಿಶ್ವಾಸವನ್ನು ಕಂಡ ದೇವರು ಆತನು ಕಳೆದುಕೊಂಡ ಆಸ್ತಿಪಾಸ್ತಿಯನ್ನು ಕಂಡ ಜೋಬ್ ಈ ಮೇಲಿನ ಚರಣದಂತೆ ನುಡಿಯುತ್ತಾರೆ. ಇಹದಲ್ಲಿ ಸಂಪತ್ತನ್ನು ಕೂಡಿಸಿಟ್ಟುಕೊಳ್ಳುವುದು ಮುಖ್ಯವಲ್ಲ ಎಂಬ ಧ್ವನಿ ಇಲ್ಲಿದೆ. ಗೀತೆಯು ಸರಳವಾಗಿದ್ದು ಪ್ರೇರಕ ಶಕ್ತಿಯನ್ನು ಹೊಂದಿದೆ.

ಕ್ರೈಸ್ತರ ಜೀವನ: ಕ್ರೈಸ್ತರ ಬದುಕು ಇಹದಲ್ಲಿ ದೈವ ಮೆಚ್ಚುಗೆಗೆ ಪಾತ್ರವಾಗಿರಬೇಕು ಎಂಬುದನ್ನು ತಿಳಿಸುತ್ತದೆ. "ಕ್ರಿಸ್ತನು ನಿನ್ನ ನೀತಿ"[೬೧] ಎಂಬ ಗೀತೆ. ಇದು Christu Blut und Gerechtigkeit ಎಂಬ ಗೀತೆಯ ಭಾಷಾಂತರವಾಗಿದೆ. ಇದನ್ನು ನಿಕೋಲಾಸ್ ಲುದ್ವಿಗ್ ತ್ಸಿಂತ್ಸೆಂದೋರ್ಫ್ ಪ್ರಭುವು ಬರೆದ ಜರ್ಮನ್ ಗೀತೆಯ ಭಾಷಾಂತರವಾಗಿದೆ. ಈ ಪ್ರಭುವು ಈ ಗೀತವನ್ನು ೧೭೩೯ ನೆಯ ಇಸ್ವಿ ಮಾರ್ಚ ೨೯ ರಂದು ರಚಿಸಿದರು. ಸ್ಯಾಕ್ಸನೀಯ ಪ್ರಧಾನ ಮಂತ್ರಿಯ ಮಗನಾದ ಈತನು ಡ್ರೆಸ್ಡನ್ ಎಂಬಲ್ಲಿ ಜನಿಸಿ ಹಲ್ಲೆ ಮತ್ತು ವಿಬೆನ್‌ಬರ್ಗ್ ಎಂಬ ಸ್ಥಳಗಳಲ್ಲಿ ವಿದ್ಯಾಭ್ಯಾಸ ಮಾಡಿ ೧೭೨೧ ರಲ್ಲಿ ಡ್ರೆಸ್ಡೆನಿನ್ ಪ್ರೀವಿ ಕಾನ್ಸಿಲದ ಸದಸ್ಯನಾದನು. ಭಕ್ತನಾದ ಮೊದಲನೆಯ ಮೊರೇವಿಯನ್ ಪ್ರವಾಸಿಗಳು ಈತನ ಜಮೀನಿನಲ್ಲಿಯೇ ಆಶ್ರಯ ಪಡೆದರು. ಇವರೇ 'ಹರ್ನ್ಸ್ ಹೂಟ್ ಸಹೋದರ ಸಂಘದ ಸ್ಥಾಪಕರೆಂದು ಹೇಳಬಹುದು ೧೭೨೭ ರಲ್ಲಿ ತ್ಸಿಂತ್ಸೆಂದೊರ್ಫನು ವೃದ್ಧಿಯಾಗುತ್ತಿದ್ದ ಈ ಮಂಡಳಿಯ ಪಾಲನೆಗಾಗಿ ತನ್ನನ್ನು ಒಪ್ಪಿಸಿಕೊಟ್ಟು ೧೭೩೭ ರಲ್ಲಿ ಅವರ ಮೊದಲನೆಯ ಬಿಷಪ್‌ನಾದನು. ಈತನು ೧೭೬೦ ರಲ್ಲಿ ಹರ್ನ್ ಹೂಟ್ ಎಂಬಲ್ಲಿ ಮೃತನಾದನು.

ನಿನ್ನ ಕರ್ತರಾದ ದೇವರನ್ನು, ನಿನ್ನ ಪೂರ್ಣ ಆತ್ಮದಿಂದಲೂ, ಶಕ್ತಿಯಿಂದಲೂ ಪ್ರೀತಿಸಬೇಕು[೭೨] ಎಂಬ ಸಂದೇಶವನ್ನು ಹೊಂದಿದೆ 'ಯೇಸು ಕ್ರಿಸ್ತಗೆನ್ನ ಪ್ರಾಣ' ಎಂಬ ಗೀತೆ.

೧೮೪೧ರ ಗೀತೆ



೧೯೬೬ ರಲ್ಲಿನ ಗೀತೆ

ಬುದ್ಧಿಕೆಟ್ಟ ಶತೃವನ್ನು
ಸ್ನೇಹ ಮಾಡಲೊಲೆದ
ತಪ್ಪಿ ಹೋದ ಕುರಿಯನ್ನು
ಹುಡುಕುತ್ತಲಿದ್ದನು
ಆತ್ಮ ಪೂರ್ಣ ಸ್ನೇಹದಿಂದ
ಯೇಸುವನ್ನು ಹುಡುಕು
ನಿನ್ನ ಪೂರ್ಣ ಶಕ್ತಿಯಿಂದ
ಆತನನ್ನು ಸೇವಿಸು

ಕನ್ನಡ ಗೀತೆಗಳು, ಗೀತೆ-೩೨

ತಪ್ಪಿ ಹೋದ ಕುರಿಯನ್ನು ಕುರುಬನು ಹುಡುಕುವಂತೆ ದೇವರು ಕೆಟ್ಟದಾರಿಯಲ್ಲಿ ಸಂಚರಿಸುತ್ತಿರುವ ಮಾನವನನ್ನು ಸರಿದಾರಿಗೆ ತರಲು ಆತನ ಹಿಂದೆಯೆ ನಡೆಯುತ್ತಿದ್ದಾನೆ. ಅಂತಹ ಪ್ರೀತಿಮಯ ದೇವರನ್ನು ನಿನ್ನ ಪೂರ್ಣ ಶಕ್ತಿಯಿಂದ ಆರಾಧಿಸಬೇಕು ಎಂಬ ಆಶಯ ಈ ಗೀತೆಯಲ್ಲಿದೆ. ಈ ಎರಡು ಚರಣಗಳ ಅರ್ಥ ಒಂದೇ ಆದರೂ ನೇರ ಬದಲಾವಣೆಯನ್ನು ನಾವು ಕಾಣುವುದಿಲ್ಲ. ಮೂಲದಲ್ಲಿ ತಪ್ಪಿಹೋದ ಕುರಿಯಂತೆ ಎಂಬ ಸಾಲು ಬದಲಾವಣೆಯಲ್ಲಿ ೩ನೇ ಸಾಲಿನಲ್ಲಿ ಬಂದಿರುವುದನ್ನು ಕಾಣುತ್ತೇವೆ.

ಸ್ತುತಿ: ಪ್ರೀತಿಸುವುದು ಪ್ರಾರ್ಥನೆಯಾಗಿದೆ. ದೇವರ ಸಮ್ಮುಖದಲ್ಲಿ ಹಾಡುತ್ತಿರುವಾಗ ನಾವು ನಮ್ಮ ಅಂತರಂಗದ ಆಳಕ್ಕೆ ಇಳಿದು ಅದರ ಸಂಪರ್ಕದಲ್ಲಿರುತ್ತೇವೆ. ಅಲ್ಲಿನ ಎಲ್ಲಾ ಸ್ಪಂದನಗಳೂ ನಮ್ಮ ಸೃಷ್ಟಿಕರ್ತನ ಮುಂದೆ ಅವರಿಗೆ ಪ್ರೇಮದ ಕಾಣಿಕೆಯಾಗಿ ಹೊರ ಹೊಮ್ಮುವುದು. ಹರ್ಷದ ಆವೇಶ, ನೋವು, ಕೋಪ ಹಾಗೂ ನಿರಾಶೆಗಳು ದೇವರ ಆ ಸನ್ನಿಧಾನದಲ್ಲಿ ಆತ್ಮೀಯ ನಂಬಿಕೆ ಹಾಗೂ ಸಂಪೂರ್ಣ ಸ್ವ ಸಮರ್ಪಣೆಯಾಗಿ ಹೊರ ಹರಿದು ಸುರಿಯಲಾಗುತ್ತದೆ. ಆ ಪರಮಾನಂದಪ್ರದ ಸಂದರ್ಭದಲ್ಲಿ ನಮ್ಮ ಕಣ್ಣುಗಳಿಂದ ಕಣ್ಣೀರು ದೈವಿಕ ಮೃದು ಸ್ಪರ್ಶಾನುಭವದೊಡನೆ ಒರೆಸಲ್ಪಡುವುದು ನಮಗನುಭವವಾಗುತ್ತದೆ. ಪರಮೋನ್ನತರಲ್ಲಿ ಒಂದು ಹೊಸ ನಿರೀಕ್ಷೆ ನಮ್ಮಲ್ಲಿ ತುಂಬಿಕೊಳ್ಳುವುದು. ನಮ್ಮ ಪಾಪಮಯ ರೀತಿ

ನೀತಿಗಳಿಗಾಗಿ ಪಶ್ಚಾತ್ತಪಗಳ ಪರಿವರ್ತನಾ ಕೃಪೆ ನಮಗೆ ಪ್ರಧಾನವಾಗುತ್ತದೆ. ನಾವು ನಮ್ಮ ದೇವರ ಪ್ರೇಮಾಲಂಗದಲ್ಲಿ ಮೈಮರೆಯುತ್ತೇವೆ.

ದೇವರ ಅಮರ ಪ್ರೀತಿಯನ್ನು ವರ್ಣಿಸಿ ಸ್ತುತಿಸುವ ಗೀತೆಯೆ ನನ್ನ ದೇವರೊಲ್ಮೆಯನ್ನು ಎಂಬುದು. ಇದು Wollt ich meinem Gott hieht ಎಂಬ ಗೀತೆಯ ಭಾಷಾಂತರವಾಗಿದೆ. ದೇವರ ಅಮರ ಪ್ರೀತಿಯನ್ನು ಇಲ್ಲಿ ಗೀತಗಾರ ಅನೇಕ ಉಪಮೆಗಳ ಮೂಲಕ ವರ್ಣಿಸಿದ್ದಾನೆ.

ಹದ್ದು ತನ್ನ ಮರಿ ಮೇಲೆ	ಭೂಮ್ಯಾಕಾಶ ಬಲ ಸೇನೆ
ರೆಕ್ಕೆ ಹೊದಿಯುತ್ತದೆ	ನನ್ನ ಸೇವೆಗಿಟ್ಟನು
ಹಾಗೆ ನನ್ನನ್ನು ಎಷ್ಟೋ ವೇಳೆ	ತುಂಬಾ ತೃಪ್ತನಾಗುತೇನೆ
ದೇವ ಹಸ್ತ ಮುಚ್ಚುತೆ	ಕಂಡದೆಲ್ಲ ನನ್ನದು
ಆತ ತಾಯ್ಯ ಗರ್ಭದಲ್ಲಿ	ಗುಡ್ಡ, ಹಳ್ಳಿ, ಕಡಲ, ರೇವು
ನನ್ನನುಂಟು ಮಾಡಿದ	ಪೃಥ್ವಿ, ಅಂತರಿಕ್ಷವು
ಇಂದಿಗೆ ನನಗಿರುವ	ಎಲ್ಲ ನನ್ನದೆಲ್ಲಯೂ
ಜೀವವಿಹುದಾತನಲ್ಲಿ	ದೇವರಿತ್ತನೆಂಗೆ ಮೇವು
ಎಲ್ಲಾ ತೀರಿ ಹೋದರು	ಎಲ್ಲಾ ತೀರಿ ಹೋದರು
ದೇವ ಪ್ರೀತಿ ತೀರದು	ದೇವ ಪ್ರೀತಿ ತೀರದು

ಕನ್ನಡ ಗೀತೆಗಳು, ಗೀತೆ–೩೧೯

ದೇವರ ಅಮರ ಪ್ರೀತಿಯನ್ನು ೧೧ ಚರಣಗಳಲ್ಲಿ ೧೧೦ ಸಾಲುಗಳನ್ನೊಳಗೊಂಡು ವರ್ಣಿಸಿದ್ದಾನೆ ಗೀತಗಾರ. ಈ ಗೀತೆಯೂ ದಿನನಿತ್ಯದ ಅನುಭವಕ್ಕೆ ಬರುವ ನಿಸರ್ಗದ ಒಂದು ಉದಾಹರಣೆಯನ್ನು ತೆಗೆದುಕೊಂಡು ದೇವ ಪ್ರೀತಿಯನ್ನು ಅರ್ಥೈಸುವಂತೆ ಮಾಡಿರುವ ಬಗೆ ಕವಿಯ ಸೃಜನಶೀಲತೆಯನ್ನು ಬಿಂಬಿಸುತ್ತದೆ. ದೇವ ಪ್ರೀತಿಯನ್ನು ಊಹೆಗೆ ನಿಲುಕುವ ರೀತಿಯಲ್ಲಿ ಕವಿ ಇಲ್ಲಿ ವರ್ಣಿಸಿರುವುದರಿಂದ ಪ್ರತಿಯೊಬ್ಬ ವ್ಯಕ್ತಿಗೂ ದೇವರ ವ್ಯಕ್ತಿತ್ವ ಆತನ ಪ್ರೀತಿಯ ಆಳ ಅಗಲಗಳನ್ನು ತಿಳಿದುಕೊಳ್ಳಲು ಸಾಧ್ಯವಾಗಿದೆ. ನಾವು ದಿನನಿತ್ಯ ಸ್ವೀಕರಿಸುವ ಮನುಷ್ಯ ಪ್ರೀತಿಗಿಂತ ಮಿಗಿಲಾದ ಪ್ರೀತಿ ದೇವ ಪ್ರೀತಿಯಾಗಿದೆ. ಅದು ಶಾಶ್ವತವಾದ ಪ್ರೀತಿಯಾಗಿದೆ ಅದು ಎಂದೂ ಮುಗಿಯದ ನಿಷ್ಕಳಂಕ ಪ್ರೀತಿಯಾಗಿದೆ ಎಂದು ವರ್ಣಿಸಿ ಸ್ತುತಿಸುತ್ತಾನೆ.

ಹದ್ದು ತನ್ನ ಮರಿ ಮೇಲೆ ರೆಕ್ಕೆ ಹೊದಿಯುತ್ತದೆ ಹಾಗೆ ಎನ್ನ ಮೇಲೆ ದೇವ ಹಸ್ತ ಮುಚ್ಚುತ್ತೆ. ಇಲ್ಲಿ ಉಪಮೇಯವನ್ನು ಕಾಣುತ್ತೇವೆ. ದೇವರ ಸಹಾಯ ಹಸ್ತ ಸದಾ ತನ್ನೊಂದಿಗಿರುವ ಭವ್ಯ ಅನುಭವ. ಇದನ್ನು ಹದ್ದು ತನ್ನ ವಿಶಾಲವಾದ ರೆಕ್ಕೆಯನ್ನು ತನ್ನ ಮರಿಗಳ ಮೇಲೆ ಹರಡುವುದಕ್ಕೆ ಹೋಲಿಸಲಾಗಿದೆ. ಭೀಕರ ಗಾಳಿ, ಚಳಿ, ಮಳೆಯ ಸಂದರ್ಭಗಳಲ್ಲಿ ಇದು ಹದ್ದಿಗೆ ತನ್ನ ಮರಿಗಳೊಂದಿಗಿರುವ ಪ್ರೀತಿಯನ್ನು

ವ್ಯಕ್ತಪಡಿಸುತ್ತದೆ. ಯಾವುದೇ ವೇಳೆಯಲ್ಲಿ ತನ್ನ ಮರಿಗಳ ರಕ್ಷಣೆ ಪೋಷಣೆಗೆ ಸಿದ್ಧವಾಗಿದೆ ಹದ್ದು. ದೇವರ ಅಮರ ಪ್ರೀತಿಯು ಇದಕ್ಕಿಂತಲೂ ಮಿಗಿಲು. ದೇವರು ನಮಗೆ ಇಹಲೋಕದಲ್ಲಿ ಅಸ್ತಿತ್ವವನ್ನು ನೀಡಿದರು. ನಮ್ಮ ಜೀವನ ರಕ್ಷಣೆಗೆ ಒಬ್ಬ ತಾಯಿಯನ್ನು ನೇಮಿಸಿದರು. ಆಕೆಯ ಉದರದಲ್ಲಿ ನಮ್ಮ ಜೀವವಿರಿಸಿ ಅದನ್ನು ಪೋಷಿಸಿ ಬೆಳೆಸಿದರು. ನಾವು ಇದಕ್ಕೆ ಬರುವ ಪೂರ್ವದಲ್ಲಿಯೇ ನಮ್ಮ ಜೀವದ ಕುರಿತು ದೇವರಿಗೆ ಒಂದು ಯೋಜನೆ ಇದ್ದಿತು. ಆ ಯೋಜನೆಯನ್ನು ಪೂರ್ಣಗೊಳಿಸಲು ಕೃಪಾವರಗಳ ಹಸ್ತದಿಂದ ನಮ್ಮನ್ನು ಪೋಷಿಸಿ ಬೆಳೆಸಿದರು. ಅಗತ್ಯವಿರುವ ಬೌದ್ಧಿಕ, ಆಧ್ಯಾತ್ಮಿಕ ವರಗಳೆಲ್ಲವನ್ನು ಸುಂದರ ಪ್ರಪಂಚವನ್ನು ನಮಗೆ ನೀಡಿ ಮುನ್ನೆಡೆಸಿದರು. ಈ ರೀತಿಯಲ್ಲಿ ದೇವರ ಅನಂತ ಪ್ರೀತಿ ನಮ್ಮ ದಿನನಿತ್ಯದ ಬದುಕಿನಲ್ಲಿ ಅನುಭವಿಸುತ್ತೇವೆ ಎಂಬುದನ್ನು ಸಂಗೀತಗಾರ ವರ್ಣಿಸಿರುವ ಬಗೆ ಹೃದಯಸ್ಪರ್ಶಿತವಾಗಿದೆ. "ಹುದುಗಿಸುವನು ನಿನ್ನನು ತನ್ನ ಗರಿಗಳ ತೆಕ್ಕೆಯಲ್ಲಿ ಆಶ್ರಯ ಪಡೆಯವಿವೆ ನೀ ಆತನ ರೆಕ್ಕೆಗಳಡಿಯಲಿ ರಕ್ಷಣೆಯ ಕವಚವಿದೆ ಆತನು ಕೊಟ್ಟ ಮಾತಿನಲಿ"[೬೩] ಎಂಬ ಪವಿತ್ರ ಗ್ರಂಥದ ವಚನವನ್ನು ಇಲ್ಲಿ ನೆನಸಬಹುದು.

ದೇವರ ಪ್ರೀತಿಯು ಅನೇಕ ವಿಧಗಳಲ್ಲಿ ವ್ಯಕ್ತವಾಗಿದೆ ಗೀತೆಯಲ್ಲಿ ತಂದೆಯು ಮಗುವನ್ನು ತಿದ್ದುವಾಗ ಆತನ ತಪ್ಪನ್ನು ಕಂಡು ಅದನ್ನು ಕೊಲ್ಲುವುದಿಲ್ಲ. ಕ್ರೂರ ಕತ್ತಿಯಿಂದ ಶಿಕ್ಷಿಸುವುದಿಲ್ಲ. ಆದರೆ ಪ್ರೀತಿಯಿಂದ ಮಗನನ್ನು ಕ್ಷಮಿಸಿ ತಿದ್ದಿ ಸನ್ಮಾರ್ಗಕ್ಕೆ ನಡೆಸುತ್ತಾನೆ. ಅಂತೆಯೇ, ದೇವರು ತನ್ನ ಮಕ್ಕಳನ್ನು ತಿದ್ದುತ್ತಾನೆ.

ದೇವ ಪ್ರೀತಿಗೆ ಉದ್ದ, ಅಗಲ, ಆಳ, ಎತ್ತರಗಳಿಲ್ಲ. ಆತನ ಪ್ರೀತಿ ವಿಶಾಲವಾಗಿದೆ. ಆತನ್ನು ಅರಿತಷ್ಟು ಆತನ ಪ್ರೀತಿ ಹೆಚ್ಚಾಗಿ ಅನುಭವಿಸುತ್ತೇವೆ. ಆ ದಿವ್ಯ ಪ್ರೀತಿಯೇ ಮನುಷ್ಯನು ದೇವರಲ್ಲಿ ಐಕ್ಯಗೊಳ್ಳಲು ಅವಕಾಶವನ್ನು ನೀಡಿತು. ಸೃಷ್ಟಿಯಲ್ಲಿ ಕಾಣುವ ಹಳ್ಳ, ಕೊಳ್ಳ, ಕಡಲು, ರೇವು, ಬೆಟ್ಟ ಎಲ್ಲವೂ ತನ್ನ ಮಕ್ಕಳಿಗಾಗಿ ದೇವರು ಸೃಷ್ಟಿಸಿದರು. ಈತನು ತನ್ನ ಪ್ರಜೆಗಳನ್ನು ಮೇವಿರುವ ಸ್ಥಳಕ್ಕೆ ನಡೆಸುತ್ತಾನೆ. ಆತನ ಅನಂತ ಪ್ರೀತಿಯನ್ನು ಕಂಡು ಆತನ ಪ್ರೀತಿಯಲ್ಲಿ ಐಕ್ಯವಾಗಬೇಕೆಂದು ಹೇಳುವ ಚರಣ ಇಂತಿದೆ.

ನಿನ್ನ ಪ್ರೀತಿಗಳವಿಲ್ಲ
ನಾನು ಹ್ಯಾಗು ಬಿಡೊದಿಲ್ಲ
ಮಗನನ್ನು ತಂದೆಯೆ।
ಜೀವವೆನಗಿರುವಲ್ಲಿ
ದಯೆಯಿಂದ ನನ್ನನು
ಗಟ್ಟಿ ನೆಲೆಗೊಳ್ಳಿಸು
ನಿನ್ನ ದಿವ್ಯ ಪ್ರೀತಿಯಲ್ಲಿ।
ಇಹ ಕಳೆಯುತ್ತಲೆ
ಪ್ರೀತಿಯೈಕ್ಯಕ್ಹೋಗುವೆ


ಕನ್ನಡ ಗೀತೆಗಳು, ಗೀತೆ–೩೦೯

ಮೊಗ್ಲಿಂಗರು ಆಂಗ್ಲ ಭಾಷೆಯ To bless thy chosen race ಎಂಬ ಗೀತೆಯನ್ನು 'ಸ್ವಕೀಯ ಪ್ರಜೆಯ' ಎಂದು ಭಾಷಾಂತರಿಸಿದರು. ದೇವರಿಂದ ಆಯ್ಕೆಯಾದ ಜನಾಂಗ ದೇವರನ್ನು ಸ್ತುತಿಸುವ ಕರ್ತವ್ಯವನ್ನು ಹೊಂದಿದೆ ಎಂಬ ಆಶಯವನ್ನು ಈ ಗೀತೆ ಹೊಂದಿದೆ.

ಸಮಸ್ತ ಲೋಕವು
ಹೃದ್ಹರ್ಷ ಸ್ತೋತ್ರದಿ
ನಿಂಗಯ್ಯ ಸರ್ವಕಾಲಕ್ಕೂ
ಸಂ ಸೇವೆ ಮಾಡಲಿ

ಕನ್ನಡ ಗೀತೆಗಳು, ಗೀತೆ–೧೫೮

ಮೊಗ್ಲಿಂಗರು ಸ್ತುತಿಯ ಕುರಿತು ರಚಿಸಿದ ಅತಿ ಚಿಕ್ಕ ಗೀತೆಯೆ ಸಮಸ್ತ ಜೀವರಾಶಿಯೆ ಎಂಬುದು. ಇದು Herr Gott dich loben alle ಎಂಬ ರಾಗದಲ್ಲಿದೆ.



೧೯೬೬ ರಲ್ಲಿನ ಗೀತೆ
ಸಮಸ್ತ ಜೀವರಾಶಿಯೆ
ಸಮಸ್ತ ದೂತ ಸೈನ್ಯವೇ
ಪಿತಾ ಪುತ್ರಾತ್ಮಕೆರಗಿ
ಅನಂತ ಸ್ತೋತ್ರ ಮಾಡಿರಿ

ಕನ್ನಡ ಗೀತೆಗಳು, ಗೀತೆ–೧೬೨

೧೮೪೧ ರಲ್ಲಿನ ಭೂನಿವಾಸಿಯೆಲ್ಲರೆ, ಸಮಸ್ತ ದೂತ ಸೈನ್ಯವೆ ಎಂಬ ಸಾಲುಗಳು ಕ್ರಮವಾಗಿ ಸಮಸ್ತ ಜೀವರಾಶಿಯೆ, ಅನಂತ ಸ್ತೋತ್ರ ಮಾಡಿರಿ ಎಂದು ಬದಲಾಗಿದೆ. ಈ ಗೀತೆಯನ್ನು ಕ್ರೈಸ್ತ ದೇವಾಲಯಗಳಲ್ಲಿ ಪ್ರತಿ ವಾರದ ಆರಾಧನೆಯಲ್ಲಿ ಹಾಡಲಾಗುತ್ತದೆ.

ಪ್ರಾರ್ಥನೆ: ಯೇಸುವಿನ ಸ್ಪರ್ಶ ಬಾಳಿಗೆ ಹೊಸ ಚೇತನ ನೀಡುತ್ತದೆ ಎಂದು ನಂಬಿದ ಗೀತಗಾರ ಆತನ ಸ್ಪರ್ಶಕ್ಕಾಗಿ ಬೇಡಿಕೊಂಡಿದ್ದಾರೆ. 'ನಿತ್ಯ ಲೋಕ ಕಾಂತಿಯೆ' ಎಂಬ ಗೀತೆಯಲ್ಲಿ ಇದು Morgenglanz der Ewigkeit ಎಂಬ ಗೀತೆಯ ಭಾಷಾಂತರವಾಗಿದೆ.

ಬೀಜ ಮೊಳೆಯುತ್ತದೆ
ಮಳೆ ಬಿದ್ದ ಭೂಮಿಯಲ್ಲಿ
ನಿನ್ನ ಮಂಜು ಬಿದ್ದರೆ
ನನ್ನ ಒಣ ಆತ್ಮದಲ್ಲಿ
ಹೊಸ ಜೀವ ತ್ರಾಣವು
ಬಪ್ಪುದು

ಕನ್ನಡ ಗೀತೆಗಳು, ಗೀತೆ–೩೩೨

ಉಪಮೇಯ ಮೂಲಕ ಗೀತಗಾರ ಸ್ವರ್ಗವನ್ನು ವರ್ಣಿಸಿದ್ದಾರೆ. ಬೀಜ ಮೊಳೆಯುತ್ತದೆ, ಮಳೆ ಬಿದ್ದ ಭೂಮಿಯಲ್ಲಿ, ನಿನ್ನ ಮಂಜು ಬಿದ್ದರೆ, ನನ್ನ ಒಣ ಆತ್ಮದಲ್ಲಿ ಹೊಸ ಜೀವ ತ್ರಾಣವು ಬರುವುದು. ಕವಿಯ ಸೃಜನಶೀಲತೆ ಈ ಗೀತೆಯಲ್ಲಿ ವ್ಯಕ್ತವಾಗಿದೆ.

ಹಬ್ಬಗಳು:- ಯೇಸುವಿನ ಜನನಕ್ಕೆ ಸಂಬಂಧಿಸಿದ ಗೀತೆಗಳು: ಮೊಗ್ಲಿಂಗರು ಯೇಸುವಿನ ಜನನ ವೇಳೆಯಲ್ಲಿ ದೇವದೂತನು ನೀಡಿದ ಸಂದೇಶವನ್ನು ಆಧರಿಸಿ 'ಆಕಾಶದಿಂದ ಬಂದೆನು' ಎಂಬ ಗೀತೆಯನ್ನು ರಚಿಸಿದರು. ಇದು Vom Himmel hoch da komm ich her ಎಂಬ ಗೀತೆಯ ಭಾಷಾಂತರವಾಗಿದೆ.

ಮಾತೆ ಮರಿಯಮ್ಮನವರಿಗೆ ಗಬ್ರಿಯೆಲ್ ಎಂಬ ದೇವದೂತ ಕಾಣಿಸಿಕೊಂಡು 'ಅಭಿನಂದನೆಗಳು'! ದೇವರ ಅನುಗ್ರಹ ನಿನಗೆ ಲಭಿಸಿದೆ' ಎಂದನು. ಮರಿಯಳಿಗೆ ಭಯವಾಯಿತು ಆಗ ದೂತ ಆಕೆಗೆ ಧೈರ್ಯ ಹೇಳಿದನು. 'ನೀನು ದೇವರ ಕೃಪೆಯಿಂದ ಗರ್ಭವತಿಯಾಗಿ ಮಗನನ್ನು ಪಡೆಯುವಳು. ಆತನಿಗೆ 'ಇಮ್ಮಾನುವೇಲ್' ಎಂದು ಹೆಸರಿಡು ಆತ ಮಹಾ ಪುರುಷನಾಗುವನು. ಮಹಾ ಉನ್ನತ ದೇವರ ಕುಮಾರ ಎಂದು ಕರೆಸಿಕೊಳ್ಳುವನು ತನ್ನ ಪಿತಾಪಿತೃವಾದ ದಾವೀದರಸನಂತೆ ಅರಸನಾಗುವನು. ಇಸ್ರಾಯೇಲರನ್ನು ಸದಾ ಆಳುವನು' ಎಂದನು.

ದೇವದೂತನ ಮಾತು ಕೇಳಿ ಮರಿಯಳಿಗೆ ಹೆದರಿಕೆಯಾಯಿತು. ಭಯದಿಂದಲೇ ಅವಳು 'ಅದು ಹೇಗೆ ಸಾಧ್ಯ? ನನಗಿನ್ನೂ ಮದುವೆಯಾಗಿಲ್ಲ' ಎಂದಳು. ಪವಿತ್ರಾತ್ಮನ ಕೃಪೆ ನಿನಗೆ ಒದಗುವುದು, ದೇವರ ಶಕ್ತಿ ನಿನ್ನ ಸಂಗಡ ಇರುವುದು ಎಂದನು ದೇವದೂತ ಆಗ ಮರಿಯಳು 'ಇಗೋ ನಾನು ಪ್ರಭುವಿನ ದಾಸಿ ಅವನ ಇಷ್ಟದಂತೆ ಆಗಲಿ' ಎಂದಳು.

ಒಂದು ದಿನ ರಾತ್ರಿ ಜೋಸೆಫನಿಗೆ ಒಂದು ಕನಸು ಬಿತ್ತು. ಆ ಕನಸಿನಲ್ಲಿ ದೇವದೂತ ಕಾಣಿಸಿಕೊಂಡನು. 'ಮರಿಯಾ, ಪವಿತ್ರಾತ್ಮನ ಕೃಪೆಯಿಂದ ಗರ್ಭಧರಿಸಿದ್ದಾಳೆ' ಎಂದು ಹೇಳಿದನು. ಅವಳಲ್ಲಿ ಹುಟ್ಟುವ ಮಗುವೇ ಲೋಕ ರಕ್ಷಕ. ಆ ದೇವ ಪುತ್ರನನ್ನು ಬೆಳೆಸುವ ಭಾರ ನಿನ್ನದು' ಎಂದು ತಿಳಿಸಿದನು. ಮಗುವಿಗೆ ಇಮ್ಮಾನುವೇಲ್ ಎಂದು ಹೆಸರಿಡು ಆತ ಲೋಕ ಕಲ್ಯಾಣಕ್ಕಾಗಿ ದುಡಿಯುವನು. ಮಾನವ ಕುಲದ ರಕ್ಷಣೆಗಾಗಿ ದುಡಿಯುವನು ಎಂದು ಹೇಳಿದನು.

ಜೋಸೆಫ್ ಮತ್ತು ಮರಿಯಾ ಜನಗಣತಿಗಾಗಿ ಜುದೇಯ ನಾಡಿನ ಬೆತ್ಲೇಹೇಮ್‌ಗೆ ಹೋಗಬೇಕಾಯಿತು. ಈ ದಂಪತಿಗಳು ಬೆತ್ಲೇಹೇಮ್ ಹಳ್ಳಿಯನ್ನು ತಲುಪಿದಾಗ ಮರಿಯಳಿಗೆ ಹೆರಿಗೆ ನೋವಾಯಿತು. ಅಲ್ಲಿ ಹಟ್ಟಿಯೊಂದರಲ್ಲಿ ಮಗುವಿಗೆ ಜನ್ಮ ನೀಡಿದಳು. ಅದರಲ್ಲಿದ್ದ ಚಿಂದಿ ಬಟ್ಟೆಯಲ್ಲಿ ಮಗುವನ್ನು ಸುತ್ತಿ ಗೋದಲಿಯಲ್ಲಿ ಮಲಗಿಸಿದರು ಆ ಮಗುವೇ ಲೋಕ ರಕ್ಷಕ.

ದೀನನಾಗಿ ಧರೆಯಲ್ಲಿ ಜನಿಸಿ ಮೋಕ್ಷ ಮಾರ್ಗವನ್ನು ತೋರಿಸಿದ ಯೇಸುವಿನ ಹುಟ್ಟಿನ ಚಿತ್ರಣ ಅರ್ಥಗರ್ಭಿತವಾಗಿ ಮೂಡಿ ಬಂದಿದೆ. ಸಮುದ್ರ ನೀರನ್ನೆಲ್ಲ ಬೊಗಸೆಯಲ್ಲಿ ಹಿಡಿದಿಡುವ ಕೆಲಸವನ್ನು ಈ ಗೀತೆ ಮಾಡಿದೆ.

೧. 'ಆಕಾಶದಿಂದ ಬಂದೆನು
ಸುವರ್ತಮಾನ ತಂದೆನು;
ನಾ ಸಾರುವೀ ಸುವಾರ್ತೆಯು
ವಿಶೇಷವಾಗಿ ದೊಡ್ಡದು'

೨. 'ಕನ್ಯಾಸ್ತ್ರೀಯಿಂದ ನಿಮಗೆ
ಈ ಹೊತ್ತು ಕೂಸು ಹುಟ್ಟಿದೆ
ಸೌಂದರ್ಯವಾದ ಮಗುವು;
ಆದಾತ್ಮ ತೃಪ್ತಿ ಮೂಲವು'

೩. 'ಅದಾರು? ಕ್ರಿಸ್ತ ಯೇಸುವು
ಪರಾತ್ಪರೈಕ ಪುತ್ರನು:
ಸಮಸ್ತ ಪಾಪ ಕಷ್ಟವ
ಕೊಂಡ್ಹೋಗುವಂಥ ರಕ್ಷಕ'

೪. 'ಸೌಭಾಗ್ಯ ನಿಮಗೋಸ್ಕರ
ಯೆಹೋವ ಸಿದ್ಧ ಮಾಡಿದ:
ನಮ್ಮಂತೆ ನೀವು ದಿವದಿ
ನಿರಂತ್ರ ಬಾಳುತಿರ್ವಿರಿ'

೫. 'ಆ ಗುರುತನ್ನು ನೋಡಿರಿ!
ಆ ಬಟ್ಟೆಯುಳ್ಳ ಗೋದಲಿ!
ಸಮಸ್ತ ಲೋಕದೊಡೆಯ
ಅಲ್ಲೃವತಾರ ಮಾಡಿದ'

೬. 'ನಾವೀಗಲೆದ್ದು ಕುರ್ಬರ
ಹಿಂದಟ್ಟಿ ಅಲ್ಲಿ ಗ್ಹೋಗುವ!
ಆಶ್ಚರ್ಯವನ್ನು ಕಾಣ್ಬರೆ
ನಿಮ್ಮಳಗಿಚ್ಚೆ ಇರದೆ?

೭. 'ಚೆನ್ನಾಗಿ ನೋಡು ಮನವೆ!
ಆ ಗೋದಲೀಲಿ ಏನದೆ?
ಆ ಚೆಲ್ವ ಕೂಸು ಯಾರದು?
ಸರ್ವೇಶ ಪ್ರಿಯ ಪುತ್ರನು.

೮. ರಾಜಾಧಿರಾಜ ವಂದನೆ!
ನೀ ಪಾಪಿ ಬೇಡವೆನ್ನದೆ
ನರಾವತಾರ ಎತ್ತಿದ್ದು
ಮಹಾಂತ ಪ್ರೇಮ ಸಾಕ್ಷಿಯು

೯. ಸಮಸ್ತ ಲೋಕದೊಡೆಯ
ಏನಾದಿ ನನಗೋಸ್ಕರ!
ರಾಜತ್ವ ಸ್ಥಾನವಾಗಲಿ
ದೀನತ್ವದಲ್ಲಿ ಸೇರದಿ.

೧೦. ಈ ಲೋಕವೆಲ್ಲ ರತ್ನದ್ದು
ಭಂಗಾರ ತುಂಬಿದ್ದಾದರು,
ಶ್ರೀ ದೇವಪುತ್ರ ನಿನಗೆ
ಅದೇನು? ಬರೆ ಕಸವೆ!

೧೧. ಪ್ರಪಂಚ ಘನ ಮಹಿಮೆ
ಅಬದ್ಧವೆಂತ ತೋರಿಸ
ಲೋಕೇಶ ಗೋದ್ಲಿ ಹುಲ್ಲಲಿ
ನೀ ಮಲ್ಗಿಕೊಂಡು ಇರುತಿ

೧೨. ಹೃತ್ಪ್ರಿಯವಾದ ಮಗುವೆ
ನಿವಾಸ ಮಾಡೆನ್ನೊಳಗೆ!
ನಿನ್ನನ್ನು ಮರ್ಯದೆಂದಿಗು
ಕೊಂಡಾಡಿ ಹರ್ಷಗೊಂಬೆನು

೧೩. ಸ್ವ ಪುತ್ರನನ್ನು ನಮಗೆ
ಕೊಟ್ಟೊಡೆಯಂಗೆ ಮಹಿಮೆ!
ಸುಕಾಲ ಸುರುವಾಯಿತು:
ಜಗತ್ತಿ ಸಲೆ ಹರ್ಷಿಸು!

ಕನ್ನಡ ಗೀತೆಗಳು, ಗೀತೆ–೪೬

ಈ ಗೀತೆಯನ್ನು M. Luther (೧೫೩೫) ಮಕ್ಕಳಿಗಾಗಿ ಬರೆದರು. "ಕ್ರಿಸ್‌ಮಸ್ ರಾತ್ರಿಯಲ್ಲಿ ಹಾಡುವುದಕ್ಕಾಗಿ ಈತ ಪ್ರತಿ ವರ್ಷವು ಗೀತೆಗಳನ್ನು ರಚಿಸುತ್ತಿದ್ದರು."[೬೪] ಈ ಜರ್ಮನ್ ಗೀತೆಯನ್ನು ಮೊಗ್ಲಿಂಗ್ ಕನ್ನಡಕ್ಕೆ ಭಾಷಾಂತರಿಸಿದರು.

೧೮೭೪ ರ ಆವೃತ್ತಿಯಲ್ಲಿ ಕೊಂಡೋಗು. ಅಲ್ಲಿ ಘೋಗು, ತತ್ಸಂಜ್ಞೆ, ಘನರಾಜ ಎಂಬ ಪದಗಳು ಕ್ರಮವಾಗಿ ೧೯೬೬ರ ಪುಸ್ತಕದಲ್ಲಿ ಕೊಂಡ್ಹೋಗು. ಅಲ್ಲಿಗ್ಹೋಗು ಆ ಗುರುತು. ರಾಜಾಧಿರಾಜ ಎಂದು ಬಳಕೆಯಾಗಿದೆ.

ಯೆಶಾಯ ಪ್ರವಾದಿ (ಕ್ರಿ.ಪೂ. ೮೦೦–೭೫೦) ಯ ಪ್ರವಾದನೆಯನ್ನು ಗೀತಗಾರ ಯೇಸುವಿನ ಗೋತ್ರವನ್ನು ತಿಳಿಸಲು ಬಳಸಿದ್ದಾರೆ. 'ಕೋಮಲ ಬೇರಿನಿಂದ' ಎಂಬ ಗೀತೆಯಲ್ಲಿ "ಜೆಸ್ಸೆಯನ ಬುಡದಿಂದ ಒಡೆಯುವುದೊಂದು ಚಿಗುರು. ಅದರ ಬೇರಿನಿಂದ ಫಲಿಸುವುದೊಂದು"[೬೫] ತಳಿರು ಎಂಬ ಪ್ರವಾದನೆಯನ್ನು ಒಳಗೊಂಡಿದ್ದು ಇದು Es ist ein Reis entsprungen ಎಂಬ ಜರ್ಮನ ಗೀತೆಯ ಭಾಷಾಂತರವಾಗಿದೆ.

ಕೋಮಲ ಬೇರಿನಿಂದ
ಶಾವಂತಿ ಪುಷ್ಪವು
ಆ ಯೆಸ್ಸೇ ಜಾತಿಯಿಂದ
ಉತ್ತೇವ ಹುಟ್ಟಿತು

ಹೊತ್ಹೋದ ಇರ್ಳೊಳು
ಹೇಮಂತ ಕಾಲದಲ್ಲಿ
ಸು ಪುಷ್ಪವರ್ಳಿತು.

ಕನ್ನಡ ಗೀತೆಗಳು, ಗೀತೆ–೪೯

ಈ ಗೀತೆಯಲ್ಲಿ ಯೇಸುವು ಜೆಸ್ಸೆ ಎಂಬ ಗೋತ್ರದಲ್ಲಿ ಹುಟ್ಟುವರು. ಆ ಗೋತ್ರದಲ್ಲಿ ಹುಟ್ಟಿದ ಯೇಸು ಮಾನವ ಕುಲವನ್ನು ರಕ್ಷಿಸುತ್ತಾರೆ ಎಂಬ ನುಡಿಯನ್ನು ಗೀತಗಾರ ಬಳಸಿದ್ದರಿಂದ ಇದು ಪ್ರಮಾಣಾಲಂಕಾರವಾಗಿದೆ.

ಯೇಸು ಧರೆಗೆ ಬಂದ ರೀತಿಯನ್ನು ಸುಜ್ಞಾನ ಸೂರ್ಯನಿಗೆ ಹೋಲಿಸಿದ್ದಾರೆ. 'ಮಹಾ ಸಂತೋಷವೇ' ಎಂಬ ಗೀತೆಯಲ್ಲಿ ಇದು In dulei jubilo ಎಂಬ ಗೀತೆಯ ಭಾಷಾಂತರವಾಗಿದೆ.

ಸ್ವರ್ಗೀಯ ಶಿಶುವೆ
ಹೃತ್ಪ್ರೀಯ ಕರ್ತನೆ!
ಸತ್ಯ ಕ್ಷೇಮವನ್ನು
ಕೊಡಯ್ಯ ನನೆಗೆ!

ನೀ ಎಳೆ ಹಾಸನನ್ನು
ನಿನ್ನಿಷ್ಟ ಪಾದಕೆ!
ಘನ ಪತಿಯೆ
ನಿತ್ಯ ವಂದನೆ

ಕನ್ನಡ ಗೀತೆಗಳು, ಗೀತೆ–೫೧

'ಶಿಶು' ಎಂಬ ಪರ್ಯಾಯಲಂಕಾರವನ್ನು 'ಯೇಸು' ಎಂಬ ಪದಕ್ಕೆ ಬದಲಾಗಿ ಪ್ರಯೋಗಿಸಿದ್ದಾನೆ ಗೀತಗಾರ. ಯಾವುದಾದರೂ ಒಂದು ಸಂಗತಿಯನ್ನು ನೆಟ್ಟಗೆ ಹೇಳುವುದಕ್ಕೆ ಬದಲಾಗಿ ಪರ್ಯಾಯವಾಗಿ ನುಡಿದರೆ ಪರ್ಯಾಯಲಂಕಾರ (Periphrasis of Circumlocution).

ಯೇಸುವಿನ ಯಾತನೆಯನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುವ ಗೀತೆ 'ಇಗೋ ಮನುಷ್ಯನು' ಇದು Seht welch ein mensch ist das! ಎಂಬ ಗೀತೆಯ ಭಾಷಾಂತರವಾಗಿದೆ.

೧. ಇಗೋ ಮನುಷ್ಯನು!
ಕಣ್ಣಲ್ಲಿ ದು:ಖಜಲ
ಮೊರೇಲಿ ಟಜ್ಜೆಯು;
ತುಟೀಲಿ ಶೋಕಜಲ;
ಹಣೇಲಿ ಬೆವರು;
ಸಂಕಷ್ಟ ಮನದಿ;
ಎದೆಲಿ ತಾಳ್ಮೆಯು
ಈ ರೂಪ ನೋಡಿರಿ!

೨. ಇಗೋ, ಮನುಷ್ಯನು!
ತುಂಬಾಯ್ತು ಗಾಯದಿಂದ
ಶರೀರವೆಲ್ಲವು
ಈ ಶ್ರಮವೇತರಿಂದ?
ಪವಿತ್ರನೇತಕೆ
ಪ್ರಯಾಸಪಟ್ಟನು?
ನಮ್ಮ ಪರಾಧವೆ
ಆತನ್ನ ಕೊಂದಿತು!

೩. ಇಗೋ ಮನುಷ್ಯನು!
ನೀ ಪಟ್ಟ ಶ್ರಮೆಯನ್ನು
ನಾವೆಂದು ಮರ್ಯೆವು
ಈ ಶ್ರಮೆ ಧ್ಯಾನವನ್ನು
ನೀ ವರ್ಧಿಸೈಸುವೆ
ನಮ್ಮನ್ನು ದೃಷ್ಟಿಸು!
ನೀನೊಬ್ಬ ನಮಗೆ
ಮಧ್ಯಸ್ಥಗಾರನು!

೪. ಇಗೋ ಮನುಷ್ಯನು!
ನಿನ್ನಲ್ಲಿ ನಂಬುತ್ತೇವೆ
ಅನಂತ ಜೀವವು
ಕ್ರೈಸ್ತೈಸು ನಿನ್ನ ಸೇವೆ
ನೀ ಶಾಪ ತಾಳಿದೆ
ಅಭಯ ವಾಯಿತು
ಸಮಾಧಿ ನಮಗೆ
ವಿಶ್ರಾಂತಿ ಸ್ಥಳವು!

ಕನ್ನಡ ಗೀತೆಗಳು, ಗೀತೆ–೬೯

ಕೊರಡೆಯೇಟು ಅತ್ಯಂತ ಭಯಂಕರ ಶಿಕ್ಷೆ! ಈ ಶಿಕ್ಷೆಯ ಹೆಸರು ಕೇಳಿದರೆ ಅಪರಾಧಿಗಳು ನಡುಗುತ್ತಿದ್ದರು. ಇದು ಅವಮಾನಕರ ಶಿಕ್ಷೆಯೂ ಹೌದು. ಇದು ರೋಮನರು ಗುಲಾಮರಿಗೆ ಕೊಡುತ್ತಿದ್ದ ಶಿಕ್ಷೆ. ಕೊರಡೆ ಎಂದರೆ ಚಾವಟಿ, ಇದರಲ್ಲಿ ಎರಡು ರೀತಿಯಿದ್ದವು. ಚರ್ಮದಿಂದ ಮಾಡಿದ ಚಾವಟಿಗೆ ಚೂಪಾದ ಮೊಳೆಗಳನ್ನು ಕಟ್ಟಿರುತ್ತಿದ್ದರು. ಇನ್ನೊಂದು ಲೋಹದ ಸರಪಳಿಯ ಚಾವಟಿ. ಅದರ ತುದಿಗೆ ಲೋಹದ ಚೂಪಾದ ಚೂರುಗಳನ್ನು ಪೋಣಿಸುತ್ತಿದ್ದರು. ಈ ಎರಡೂ ಬಗೆಯ ಚಾವಟಿ ಏಟು ಸಹಿಸಲಸಾಧ್ಯ.

[illegible]

ಯೇಸುವಿಗೆ ಇಂಥ ಕೊರಡೆಯ ಏಟಿನ ಶಿಕ್ಷೆಯಾಯಿತು. ಆತನನ್ನು ಶಿಲುಬೆಗೆ ಕಟ್ಟಿದರು. ಆತನ ಬೆನ್ನು ಬಗ್ಗಿಸಿ ಕೈಗಳನ್ನು ಮುಂದಕ್ಕೆ ಕಟ್ಟಿದರು. ಇದರಿಂದ ಯೇಸು ತನ್ನ ಕಾಲಿನ ತುದಿ ಬೆರಳುಗಳ ಮೇಲೆ ನಿಲ್ಲಬೇಕಾಯಿತು. ಹೀಗೆ ಕಟ್ಟಿ ಆತನ ಬಟ್ಟೆ ಬಿಚ್ಚಿದರು. ಆತನನ್ನು ಕೊರಡೆಯಿಂದ ಹೊಡೆದರು. ಆತನ ದೇಹದಿಂದ ಮಾಂಸ ಕಿತ್ತಿ ಬರುತ್ತಿತ್ತು. ರಕ್ತದ ಓಕುಳಿಯಾಡುತ್ತಿತ್ತು. ಯೆಹೂದಿಯರ ಕಾನೂನಿನ ಪ್ರಕಾರ ೪೦ ಕ್ಕಿಂತ ಹೆಚ್ಚು ಏಟು ಕೊಡುವಂತಿರಲಿಲ್ಲ. ರೋಮನರ ಕಾನೂನಿನಂತೆ ೬೬ ಏಟುಗಳನ್ನು ಕೊಡಲು ಅವಕಾಶವಿತ್ತು. ಆದರೆ ಯೇಸುವಿಗೆ ಇವೆರಡೂ ನಿಯಮಗಳನ್ನು ಮೀರಿದಷ್ಟು ಏಟು ಕೊಟ್ಟರು. ಮುಳ್ಳಿನ ಕಿರೀಟ ಮಾಡಿಸಿ ತಲೆಯ ಮೇಲಿಟ್ಟು ಹೊಡೆದರು. ಪಿಲಾತ ಯೇಸುವಿಗೆ ಮರಣ ದಂಡನೆ ವಿಧಿಸಿದರು. ಉರಿಯುವ ಸುಡು ಬಿಸಿಲು, ಧರೆಹತ್ತಿ ಉರಿಯುತ್ತಿತ್ತು. ಕಾಲು ಕಿತ್ತಿ ನೆತ್ತಿ ಸುಡುತ್ತಿತ್ತು. ಯೇಸುವು ರಣ ಬಿಸಿಲ ಬೇಗೆಯಲ್ಲಿ ಶಿಲುಬೆಯನ್ನು ಹೊತ್ತು ಕಷ್ಟದಿಂದ ಗೋಲ್ಗೊಥವನ್ನು[೬೬] ತಲುಪಿದರು. ಸೈನಿಕರು ಆತನ ಬಟ್ಟೆಗಳನ್ನು ಹರಿದು ಹಂಚಿಕೊಂಡರು. ಶಿಲುಬೆಯ ಮೇಲೆ ಆತನನ್ನು ಮಲಗಿಸಿದರು. ಅಡ್ಡ ದಿಮ್ಮಿಯ ಮೇಲೆ ಎಡಬಲ ಕೈಯಿರಿಸಿ ಮೊಳೆ ಹೊಡೆದರು. ಕಾಲುಗಳನ್ನು ಸೇರಿಸಿ ಉದ್ದದ ದಿಮ್ಮಿಯ ತುದಿಗೆ ಕಟ್ಟಿದರು. ಶಿಲುಬೆಯನ್ನು ಮೇಲೆತ್ತಿನೆಲಕ್ಕೆ ಹೂತರು. ಯೇಸು ಶಿಲುಬೆಯ ಮೇಲೆ ತೂಗಾಡಿದ. ಈ ರೀತಿಯ ಶಿಕ್ಷೆ ಉಂಟಾಗಲು ಕಾರಣ ಹಾಗೂ ಕ್ರೂರ ಮರಣವನ್ನು ಕವಿ ಗೀತೆಯಲ್ಲಿ ವರ್ಣಿಸಿದ್ದಾನೆ. ಕಥನ ಶೈಲಿ ಗೀತೆಯ ವೈಶಿಷ್ಟ್ಯವಾಗಿದೆ.

ಈ ಗೀತೆಯಲ್ಲಿ 'ಮನುಷ್ಯನು' ಎಂಬ ಪದವು ಯೇಸುವನ್ನು ತೋರಿಸುತ್ತಾರೆ. ಆತನ ಕಣ್ಣಿನಿಂದ ದು:ಖದ ಕಣ್ಣೀರು ಮುಖದಲ್ಲಿ ತುಟಿಯಲ್ಲಿ ದು:ಖ ತುಂಬಿದ ಚಿತ್ರಣ. ಹಗೆಯಲ್ಲಿ ಬೆವರು ಈ ಸ್ಥಿತಿಯೇ ಮಾನವರನ್ನು ಪ್ರತಿನಿಧಿಸುತ್ತದೆ.

ಯೇಸುವಿನೊಂದಿಗೆ ಮತ್ತಿಬ್ಬರು ಕಳ್ಳರನ್ನು ಶಿಲುಬೆಗೆ ಹಾಕಲಾಯಿತು. ಅದರಲ್ಲಿ ಒಬ್ಬ ಕಳ್ಳನು "ಸ್ವಾಮಿ ಯೇಸುವೇ ನೀವು ರಾಜ್ಯಾಧಿಕಾರದೊಡನೆ ಬರುವಾಗ ನನ್ನನ್ನು ಜ್ಞಾಪಿಸಿಕೊಳ್ಳಿ"[೬೭] ಎಂದು ಭಿನ್ನವಿಸಿಕೊಂಡು ಮೋಕ್ಷ ಪ್ರಾಪ್ತಿಗೆ ಅರ್ಹನಾದ. ಆ ಮನುಷ್ಯ ಪೂರ್ಣವಾಗಿ ಕೃಪೆಯ ಮೂಲಕ ರಕ್ಷಿಸಲ್ಪಟ್ಟನು. ಅಂತೆಯೇ ಭಕ್ತರು ಮಾಡುವ ಅಪರಾಧಗಳನ್ನು ಕ್ಷಮಿಸಿ ದಯ ತೋರಿಸಿ ಪಾಪ ಪರಿಹಾರ ಹೊಂದಲು ಬೇಡಿಕೊಂಡಿದ್ದಾನೆ. ಗೀತಗಾರ ಆ ಕಳ್ಳ ಕ್ರೂಜೆಯಲ್ಲಿ ಎಂಬ ಗೀತೆಯಲ್ಲಿ ಇದು Der Schacher fluchbela den ಎಂಬ ಗೀತೆಯ ಭಾಷಾಂತರವಾಗಿದೆ.

ಆ ಕಳ್ಳ ಕ್ರೂಜೆಯಲ್ಲಿ	ಕ್ರಿಸ್ತೊಡೆಯಂಗೆ ಬಾಗಿ
ತನ್ನಂತ್ಯ ಕ್ಷಣದಲ್ಲಿ	ಕಟಾಕ್ಷ ಬೇಡಲಾಗಿ
ವಿಶ್ವಾಸಿಸುತ್ತಲೇ	ಕೃತಾರ್ಥನಾದನಲ್ಲವೇ

ಕನ್ನಡ ಗೀತೆಗಳು, ಗೀತೆ-೭೧


ಜೀವನದ ಮರಣಾವಸ್ಥೆಯಲ್ಲಿ ಕಳ್ಳನು ತನ್ನ ಪಾಪಗಳಿಗೆ ಪಶ್ಚಾತ್ತಾಪಪಟ್ಟು ಯೇಸುವಲ್ಲಿ ದಯೆಯನ್ನು ಕೋರಿ ಮೋಕ್ಷ ಪ್ರಾಪ್ತಿಗೆ ಅರ್ಹನಾಗುತ್ತಾನೆ. ಆದರೆ ಮತ್ತೊಬ್ಬ ಕಳ್ಳ ತನ್ನ ಪಾಪಗಳಿಗೆ ಕ್ಷಮೆ ಬೇಡದೆ ಮರಣ ಹೊಂದಿದ ಬಗೆಯನ್ನು ಗೀತಗಾರ ಮುಂದಿನ ಚರಣದಲ್ಲಿ ಹೇಳಿದ್ದಾರೆ.

ಅದಾಗ್ಯೂ ಒಂದೆ ಭಯ
ಪ್ರತ್ಯಕ್ಷವಾದ ದಯ
ಆ ಒಬ್ಬ ಹೊಂದಲು
ಮೊತ್ತೊಬ್ಬ ಕಳ್ಳ ತೀರಿ
ಸಂರಕ್ಷ ಕಾಲ ಮೀರಿ
ಅಂತ್ಯಾಜ್ಞೆ ಹೊಂದಿ ಕೆಟ್ಟನು

'ಪಾಪ ಮಾಡುವುದು ಸಹಜ ಆದರೆ ತಿದ್ದಿ ನಡೆಯುವುದು ದೈವಿ ಗುಣ' ಎಂಬಂತೆ ತಪ್ಪುಗಳಿಗೆ ಮರುಗಿ ದೇವರೆಡೆಗೆ ಹೆಜ್ಜೆಯಿಟ್ಟು ನಡೆದಾಗ ಆತನು ನಮ್ಮನ್ನು ರಕ್ಷಿಸುತ್ತಾನೆ ಎಂಬ ಸತ್ಯ ಸಂಗತಿ ಪ್ರಕಟವಾಗಿದೆ. ಮೊದಲನೇ ಚರಣದಲ್ಲಿನ ಕಳ್ಳನ ಪಶ್ಚಾತ್ತಾಪ ಮನೋಭಾವ ತಪ್ಪಿನ ಅರಿವು ಅಂತ್ಯಕ್ಷಣದಲ್ಲೂ ಬಾರದಿದ್ದಾಗ ಬದುಕು ನಿರರ್ಥಕವಾಗುತ್ತದೆ ಎಂಬ ನಿಜಾಂಶ ವ್ಯಕ್ತವಾಗಿದೆ. ಆದ್ದರಿಂದ ಬದುಕಿನಲ್ಲಿ ಅಗತ್ಯವಿರುವುದು ತಿದ್ದಿ ನಡೆಯುವ ಬಗೆ. ಜೀವನ ಸಾರ್ಥಕವಾಗುವುದು ಇದರಿಂದಲೇ. ಕಥನ ರೂಪವೇ ಗೀತೆಯ ವೈಶಿಷ್ಟ್ಯವಾಗಿದೆ.

ಯೇಸುವನ್ನು ಶಿಲುಬೆಗೇರಿಸಿದಾಗ ನಟ್ಟನಡು ಮಧ್ಯಾಹ್ನ. ಆಗಿನಿಂದ ಸುಮಾರು ೩ ಗಂಟೆಗಳ ಕಾಲ ಆತ ಶಿಲುಬೆಯಲ್ಲಿ ತೂಗಿ ಯಾತನೆ ಅನುಭವಿಸಿದ ಬಗೆಯನ್ನು ಗೀತಗಾರ 'ಯೇಸು ಕ್ರೂಜೆ ವೃಕ್ಷದಲ್ಲಿ' ಎಂಬ ಗೀತೆಯಲ್ಲಿ ವರ್ಣಿಸಿದ್ದಾನೆ. ಮಾನವ ಕುಲದ ರಕ್ಷಣೆಗಾಗಿ ತನ್ನ ಪ್ರಾಣವನ್ನೇ ನೀಡಿದ ಯೇಸುವನ್ನು ವಂದಿಸಬೇಕು ಎನ್ನುತ್ತಾನೆ ಗೀತಗಾರ.

೧೮೪೧ ರಲ್ಲಿನ ಗೀತೆ



೧೯೬೬ ರಲ್ಲಿನ ಗೀತೆ

ಮುಂಚೆ ಜ್ಞಾನ ವೃಕ್ಷದಿಂದ
ಮೃತ್ಯುಫಲ ಹುಟ್ಟಿತು
ಈಗ ಕ್ರೂಜೆ ತರುವಿಂದ
ಜೀವ ಫಲವಹುದು


ಕನ್ನಡ ಗೀತೆಗಳು, ಗೀತೆ–೭೩

೧೮೪೧ ರ ಗೀತೆಯಲ್ಲಿ ಆದಿ ತಂದೆಯಾದ ಅದಾಮನ ಹೆಸರನ್ನು ಸೂಚಿಸುವುದರೊಂದಿಗೆ ಆತನು ಮಾಡಿದ ಪಾಪದ ಪರಿಣಾಮವನ್ನು ಹೇಳಲಾಗಿದೆ. ೧೯೬೬ರ ಗೀತೆಯಲ್ಲಿ ಆದಾಮನ ಹೆಸರಿನ ಬದಲು ಜ್ಞಾನ ವೃಕ್ಷ ಎಂದು ಬಳಸಲಾಗಿದೆ. ಹಳೆಒಡಂಬಡಿಕೆಯ ಆದಿಕಾಂಡದಲ್ಲಿ (ಆದಿ ೨:೫–೧೭) ದೇವರು

ಆದಾಮನಿಗೆ ಜ್ಞಾನ ವೃಕ್ಷದ ಫಲವನ್ನು ತಿನ್ನಬಾರದೆಂದು ಹೇಳಿದ್ದರು. ಆದರೆ ಅವಿಧೇಯನಾದ ಆದಾಮ ಮತ್ತು ಹವ್ವಳು ಆಜ್ಞೆಯನ್ನು ಮೀರಿ ಹಣ್ಣನ್ನು ತಿಂದದ್ದಕ್ಕಾಗಿ ಪಾಪ ಉಂಟಾಗಿ ಮರಣವು ಸಂಬಂಧಿಸಿತು. ಆದರೆ ಯೇಸುವಿನ ಕ್ರೂಜೆಯ ಮರಣವು ಮನುಕುಲಕ್ಕೆ ಜೀವವನ್ನು ತಂದಿತು. ಆದ್ದರಿಂದ ಆತನ ತ್ಯಾಗವನ್ನು ಸ್ಮರಿಸಿ ಸ್ತೋತ್ರ ಮಾಡಬೇಕೆಂದು ಗೀತಗಾರ ಬೇಡಿಕೊಂಡಿದ್ದಾನೆ.

ಯೇಸುವಿನ ಮರಣ ಭಕ್ತನಿಗೆ ಸೌಖ್ಯವನ್ನೀಯುತ್ತದೆ ಎಂಬುದಕ್ಕೆ ಮತ್ತೊಂದು ಗೀತೆ 'ಯೇಸು ಕ್ರಿಸ್ತನೆ' ಎಂಬುದು ಇದು O sanctissima ಎಂಬ ರಾಗದಲ್ಲಿದೆ.

೧೮೪೧ ರಲ್ಲಿನ ಗೀತೆ



೧೯೬೬ ರಲ್ಲಿನ ಗೀತೆ

ಬಡ ಪಾಪಿಗೆ
ನಿನ್ನ ಕ್ರೂಜೆಯೆ
ಜೀವ ವೃಕ್ಷವಾಗಿದೆ
ನಿನ್ನ ದು:ಖ ನಮ್ಮ ಸುಖ
ಕಾಯಿ, ಕಾಯಿ ನಮ್ಮನ್ನು ।

ಕನ್ನಡ ಗೀತೆಗಳು, ಗೀತೆ–೭೪

೧೮೪೧ರ ಗೀತೆಯಲ್ಲಿ ಮೊದಲೆರಡು ಸಾಲುಗಳು ಸಂಪೂರ್ಣವಾಗಿ ಬದಲಾಗಿ ನಾನು ಆಜ್ಞೆಯ ಮೀರಿದ್ದರಿಂದ ಶಿಕ್ಷೆ ನಿನಗಾಯಿತು ಎಂಬುದು ಬಡ ಪಾಪಿಗೆ ನಿನ್ನ ಕ್ರೂಜೆಯೆ ಜೀವ ವೃಕ್ಷವಾಗಿದೆ ಎಂದು ಬದಲಾಗಿದೆ. ಅಲಂಕಾರದ ಬಳಕೆ ೧೯೬೬ರ ಗೀತೆಯಲ್ಲಿ ಕಾಣುತ್ತೇವೆ. ಪ್ರತಿ ಸಾಲಿನ ಅಂತ್ಯದಲ್ಲಿ ನಿನಗೆ ನಿತ್ಯ ಸ್ತೋತ್ರ ಮಾಡುವೆ ಎಂಬ ಸಾಲು ಬಂದಿದೆ. ೧೯೬೬ರ ಗೀತೆಯಲ್ಲಿ ಕಾಯಿ ನಮ್ಮನ್ನು ಎಂದಿದೆ. ಅಲ್ಲಿ ಸ್ತೋತ್ರದ ಭಾವವಾದರೆ ಇಲ್ಲಿ ಪ್ರಾರ್ಥನಾ ಭಾವ ವ್ಯಕ್ತವಾಗಿದೆ.

'ಓ ಲೋಕ ನೋಡು! ಅಲ್ಲಿ ಎಂಬ ಗೀತೆಯು O weit. sieh hier dein leben ಎಂಬ ಜರ್ಮನ್ ಗೀತೆಯ ಭಾಷಾಂತರವಾಗಿದೆ. ಇದನ್ನು ಪಾಲಗೆಡ್ಹಾರ್ಟ್ ಎಂಬುವರು ರಚಿಸಿದರು. ಈ ಗೀತೆಯು ಜೆಕರ್ಯ ೧೨:೧೦ ರಲ್ಲಿರುವ 'ತಾವು ಇರಿದವನನ್ನು ದಿಟ್ಟಿಸಿ ನೋಡುವರು' ಎಂಬ ವಾಕ್ಯವನ್ನು ಮುಂದಿಟ್ಟುಕೊಂಡು ರಚಿಸಿದ್ದಾಗಿದೆ.

ಓ ಲೋಕ ನೋಡು ಅಲ್ಲಿ!
ಆ ಕ್ರೂಜೆ ವೃಕ್ಷದಲ್ಲಿ
ಅಘೋರ ನೋಟವೇ!

ಆ ಕಷ್ಟದಾಳು ಯಾರು?
ಆ ನಿಂದೆದಾಸನಾರು?
ಪ್ರಶಸ್ತ ಜೀವರಾಜನೇ!

ಕನ್ನಡ ಗೀತೆಗಳು, ಗೀತೆ–೭೦

ಈ ಗೀತೆಯಲ್ಲಿ ಸಂಭೋಧನಾಲಂಕಾರ (Apostrophe) ಬಳಕೆಯಾಗಿದೆ. 'ಓ ಲೋಕ ನೋಡು' ಎಂದು ಲೋಕದಲ್ಲಿರುವ ಎಲ್ಲಾ ಜನರನ್ನೂ ಕರೆಯುತ್ತಾರೆ ಗೀತಗಾರ. ಅವರಿಗೆ ಕ್ರೂಜೆಯ ಅಘೋರ ನೋಟವನ್ನು ತೋರಿಸುತ್ತಾರೆ. 'ಆ ಕಷ್ಟದಾಳು ಯಾರು? ಆ ನಿಂದೆ ದಾಸನಾರು' ಎಂದು ಅವರು ಮಾಡುವ ಪ್ರಶ್ನೆಗಳಿಗೆ 'ಆತನು ಪ್ರಶಸ್ತ ಜೀವ ರಾಜನು' ಎಂಬ ಉತ್ತರ ಕೊಡುತ್ತಾನೆ. ಪುನ: ಈ ದೊಡ್ಡ ಪೀಡೆಯನ್ನು ಈ ರಕ್ತ ಬೆವರನ್ನು ನೋಡಬೇಕೆಂಬುದಾಗಿ ನೋಟಕರನ್ನು ಸಂಬೋಧಿಸಿ ಅಗಾಧ ಶೋಕದಿಂದ ಈತನ ಎದೆ ಭಿನ್ನವಾಯಿತೆಂದು ಅರಹುತ್ತಾನೆ. ನೋಟಕರು ಎದೆ ಕರಗಿ ಆತನನ್ನು ನೋಡಿ, ಯಾರಿಂದ ಪೆಟ್ಟು ತಿಂದೆ? ಈ ಕ್ರೂರವಾದ ನಿಂದೆ ನೀನೇಕೆ ತಾಳಿದೆ? ನೀನ್ ಅಪರಾಧಿಯಲ್ಲ ನಮ್ಮಂತೆ ದುಷ್ಟನಲ್ಲ' ಎಂದು ಹೇಳುತ್ತಾರೆ. ಈ ಸಂಗತಿ ಅವರಿಗೆ ಮನದಟ್ಟಾದ ಮೇಲೆ ಆತನ ಪರಿಶುದ್ಧ ಸ್ಥಿತಿಯನ್ನು ತಮ್ಮ ಪಾಪ ಸ್ಥಿತಿಯನ್ನು ತಿಳಿದುಕೊಂಡವರಾಗಿ ಆತನು ತಮ್ಮ ಹಿತಕ್ಕಾಗಿ ಇದನ್ನೆಲ್ಲಾ ತಾಳಿದನೆಂಬುದಾಗಿ ಅರಿಕೆ ಮಾಡಿ ಕಟ್ಟಕಡೆಯಲ್ಲಿ ಈ ಪವಿತ್ರ ದೇವ ಪುತ್ರರಿಗೆ ತಾವು ಸೇವೆ ಮಾಡಬೇಕೆಂಬ ಮನೋನಿರ್ಧಾರ ಮಾಡಿಕೊಂಡವರಾಗಿ ತಾವು ಈ ನೋಟವನ್ನು ಎಂದೂ ಮರೆತು ಬಿಡಲಕ್ಕಿಲ್ಲವೆಂದು ಹೇಳಿ ಕ್ರೂಜೆಯ ಸ್ಥಳದಿಂದ ತೆರಳುತ್ತಾರೆ. ಇದು ನಿಜವಾದ ಪದ್ಮ ಶೈಲಿ. ಇಲ್ಲಿ ಕವಿಯು ಒಂದಾನೊಂದು ಸಮಯದಲ್ಲಿ ಈ ಸಂಗತಿಯು ನಡೆಯಿತು ಎಂಬಂತೆ ಅಲ್ಲ. ಹಾಡುವವರ ಸಮಕ್ಷಮದಲ್ಲಿ ಆಗಲೇ ಅದು ನಡೆಯುತ್ತದೆ ಎಂಬ ರೀತಿಯಲ್ಲಿ ತೋರಿಸಿಕೊಡುತ್ತಾರೆ.

ಯೇಸು ಕ್ರೂಜೆ ವೃಕ್ಷದಲ್ಲಿ ತೂಗಾಡಿದ್ದನ್ನೂ, ಮೈಯೊಳಗಿಂದ ರಕ್ತ ಬೆವರು ಸುರಿಯುವುದನ್ನೂ, ನಿಟ್ಟುಸುರಾವರ್ತಿಯಿಂದ ಎದೆ ಭಿನ್ನವಾಗುವುದನ್ನೂ ನಾವು ಕಣ್ಣಾರೆ ಕಂಡ ಹಾಗೆ ಅನುಭವವಾಗುತ್ತದೆ. ದೃಷ್ಟಿಗೋಚರವಾಗುವ ರೀತಿಯಲ್ಲಿ ಪದಗಳ ಬಳಕೆಯಾಗಿದೆ.

ಕ್ರಿಯಾರೂಪ ರೂಪಕವಾಗಿ ಬಳಕೆಯಾಗಿರುವುದಕ್ಕೆ ಉದಾ: ಎದೆ ಭಿನ್ನವಾಯಿತು. ಸಮುಚ್ಚಾಯಗಳನ್ನು ಲುಪ್ತ ಮಾಡುವ (Asyndeton) ರೀತಿಗೆ ಉದಾಹರಣೆಯಾಗಿದೆ "ನನ್ನ ಪ್ರೀತಿ ಕ್ರೂಜೆಯಲ್ಲಿ ಎಂಬ ಗೀತೆ. ಇದು Der am kreuz ist meine Liebe ಎಂಬ ಗೀತೆಯ ಭಾಷಾಂತರ. ಸಮುಚ್ಚಯ ಪದಗಳಾದ ಆದರೆ ಮತ್ತು ಕಾರಣ ಹೀಗಿದ್ದರೂ ಇತ್ಯಾದಿಗಳನ್ನು ಬಳಸದೆ ಗೀತ ರಚನೆಯಾಗಿದೆ.

ನನ್ನ ಪ್ರೀತಿ ಕ್ರೂಜೆಯಲ್ಲಿ!
ಬೇರೆ ಆಶೆ ಇರದು
ಅತಿ ಪ್ರೀತಿ ಯೇಸುವಲ್ಲಿ
ಹೃತ್ತು ದೃಢವಾಯಿತು

ನಿತ್ಯ ಒಂದೆ ವಾಕ್ಯವು
ಹೃತ್ಸಂಗೀತವಹುದು
'ಸುಖ ದು:ಖ ಕಾಲದಲ್ಲಿ
ಪ್ರೀತಿ ಕ್ರೂಜೆಯಾತನಲ್ಲಿ!'

ಕನ್ನಡ ಗೀತೆಗಳು, ಗೀತೆ-೮೨

[illegible]

[illegible]

[illegible]

[illegible]	[illegible]

[illegible]

ಈ ಗೀತೆಯಲ್ಲಿ ಸಮಾಪ್ತ ಭೂತ ಕಾಲವನ್ನು ಉಪಯೋಗಿಸಿ ಮಾತಾಡದೆ ವರ್ತಮಾನ ಕಾಲವನ್ನೇ ಉಪಯೋಗಿಸಿ ವಿವರಿಸಿದ್ದಾನೆ.

ಬಾಲಕರ ಗೀತೆಯಲ್ಲಿ ಪುನರುತ್ಥಾನಕ್ಕೆ ಸಂಬಂಧಿಸಿದ ಗೀತೆ: ಯೇಸುವು ಗೋಲ್ಗಥ ಗಿರಿಗೆ ಶಿಲುಬೆ ಹೊತ್ತುಕೊಂಡು ಹೋಗಿ ಅಲ್ಲಿ ಮರಣ ಹೊಂದಿ ೩ನೇ ದಿನ ಪುನರುತ್ಥಾನರಾದ ಬಗೆಯನ್ನು ವರ್ಣಿಸುತ್ತಾ ಗೀತಗಾರ ಮೃತ್ಯುಂಜಯರಾದ ಯೇಸುವನ್ನು ಸ್ತುತಿಸಬೇಕೆಂದು ಹೇಳುತ್ತಾರೆ. ತಮ್ಮ 'ಸ್ತುತಿ ಗೋಲ್ಗಥದ್ರಿಯಲ್ಲಿ' ಎಂಬ ಗೀತೆಯಲ್ಲಿ "ಒಬ್ಬ ವ್ಯಕ್ತಿಯು ತನ್ನ ಸ್ನೇಹಿತನಿಗೋಸ್ಕರ ಪ್ರಾಣ ನೀಡುವುದಕ್ಕಿಂತ ಮಿಗಿಲಾದ ಪ್ರೀತಿ ಮತ್ತೊಂದಿಲ್ಲ."[೬೮] ಯೇಸು ಸ್ನೇಹತರಿಗಾಗಿ ಮಾತ್ರವಲ್ಲ ತನ್ನನ್ನು ಹಿಂಸಿಸಿದವರಿಗಾಗಿಯೂ ಪ್ರಾಣವನ್ನು ನೀಡಿದರು. ಇಂತಹ ಮಹಾನ್ ಚೇತನರನ್ನು ಸ್ತುತಿಸಿ ಹಾಡುವುದು ನಮ್ಮ ಕರ್ತವ್ಯವಾಗಿದೆ ಎಂಬ ಆಶಯವನ್ನು ಹೊಂದಿದೆ ಈ ಗೀತೆ.

ಬಾಲಕರ ಗೀತೆಯಲ್ಲಿನ ಗೀತೆ (೧೯೦೪)	**೧೯೬೬ ರಲ್ಲಿನ ಗೀತೆ**
ಸ್ತೋತ್ರದಲ್ಲಿ ಒಡನಾಡಿ	ಸ್ತೋತ್ರದಲ್ಲಿ ಒಡನಾಡಿ
ಮನ: ಪೂರ್ಣ ಹರ್ಷದಿ	ಮನಪೂರ್ಣ ಹರ್ಷದಿ
ಮೃತಿಂಜಯವನ್ನು ಹಾಡಿ	ಮೃತಿಂಜಯ ಗೀತೆ ಮಾಡಿ
ಅಡ್ಡ ಬಿದ್ದು ಸೇವಿಸಿ!	ಅಡ್ಡಬಿದ್ದು ಹಾಡಿರಿ!
ವಾದ್ಯವೆಲ್ಲ ನುಡಿಸಿ	ವಾದ್ಯವೆಲ್ಲ ನುಡಿಸಿ
ಧ್ವನಿಯೆತ್ತಿ ಕೊಂಡು ಆಡಿ	ಗಟ್ಟಿ ಧ್ವನಿಯಿಂದ ಹಾಡಿ
ಘನವುಳ್ಳ ಕರ್ತಗೆ	ಘನವುಳ್ಳ ಕರ್ತಗೆ
ಎರ್ಗಿರೆಲ್ಲ ಭಕ್ತರೆ!	ಎರ್ಗಿರೆಲ್ಲ ಭಕ್ತರೆ!

ಬಾಲಕರ ಗೀತೆಗಳು, ೧೯೦೪, ಗೀತೆ-೧೧೫ ಪುಟ, ೧೨೪

ಬಾಲಕರ ಗೀತೆಯಲ್ಲಿ ಕೃಪೆ ಪಟ್ಟ ಯೇಸುವೆ ಮೃತಿಂಜಯವನ್ನು ಸೇವಿಸಿ, ಧ್ವನಿಯೆತ್ತಿಕೊಂಡು ತೇಜವಾಗಲೇ, ಏಳುವಾಗ ಎಂಬ ಪದಗಳು ೧೯೬೬ ರಲ್ಲಿ ಕೃಪೆತೋರ್ದ, ಮೃತಿಂಜಯ ಗೀತೆ, ಗಟ್ಟಿಧ್ವನಿಯಿಂದ, ತೇಜವಾಗಲೇ ಎಚ್ಚರ್ತಾಗ ಎಂದು ಬಳಕೆಯಾಗಿದೆ.

ಯೇಸುವಿನ ದಿವ್ಯಾರೋಹಣಕ್ಕೆ ಸಂಬಂಧಿಸಿದ ಗೀತೆಗಳು: ಯೇಸು ಪುನರುತ್ಥಾನರಾಗಿ ೪೦ನೇ ದಿನ ಮೋಕ್ಷಕ್ಕೆ ಆರೋಹಣರಾದ ದಿನವೆ ಯೇಸುವಿನ ದಿವಾರೋಹಣ. ಇದು ವಿಶ್ವಾಸದ ಪೌರಾಣಿಕ ತತ್ವದ ಮೇಲೆ ಆಧಾರಿತವಾಗಿದೆ. ದಿವಾರೋಹಣದ ನಂತರ ಕ್ರಿಸ್ತನು ತಂದೆಯಾದ ದೇವರ ಬಲಗಡೆಯಲ್ಲಿ ತನ್ನ ಸ್ಥಾನವನ್ನು ಪಡೆದುಕೊಂಡನು. ದಿವಾರೋಹಣದ ರಹಸ್ಯವು ಪುನರುತ್ಥಾನದ ಅರ್ಥವನ್ನು ಎಳೆಯುವ ಕಾರ್ಯವನ್ನು ಮಾಡುತ್ತದೆ. ಸಮಯ ಮತ್ತು ಸ್ಥಳಗಳ ಮಿತಿಯಲ್ಲಿ ಕಾಣಿಸಿಕೊಳ್ಳುತ್ತಿದ್ದ ಕ್ರಿಸ್ತನು ದಿವಾರೋಹಣದ ಸಮಯದಲ್ಲಿ ದೇವರ ಬಲಗಡೆ ಏರಿಸಲ್ಪಟ್ಟಿದ್ದನ್ನು ತಿಳಿಸುತ್ತದೆ. "ಯೇಸುಸ್ವಾಮಿ ಶಿಷ್ಯರೊಡನೆ ಮಾತನಾಡಿದ

ಮೇಲೆ ಸ್ವರ್ಗಾರೋಹಣವಾಗಿ ದೇವರ ಬಲಪಾರ್ಶ್ವದಲ್ಲಿ ಅಸೀನರಾದನು.೯೮ ಆತನು ಈಗ ದೇವರೊಂದಿಗಿದ್ದಾನೆ ಮತ್ತು ಜೀವವು ದೇವರ ಜೀವದೊಳಗೆ ಸೇರಿದೆ. ಯೇಸುವಿನ ದಿವಾರೋಹಣಕ್ಕೆ ಸಂಬಂಧಿಸಿದಂತೆ ೫ ಗೀತೆಗಳಿದ್ದು ೨ ಗೀತೆಗಳನ್ನು ಮೊಗ್ಲಿಂಗ್ ರಚಿಸಿದ್ದಾರೆ.

ಬಾಲಕರ ಗೀತೆಯಲ್ಲಿ ಪರಿಶುದ್ಧಾತ್ಮರಿಗೆ ಸಂಬಂಧಿಸಿದ ಗೀತೆ: ಪರಿಶುದ್ಧಾತ್ಮರಿಗೆ ಸಂಬಂಧಿಸಿದಂತೆ ಮೊಗ್ಲಿಂಗರ ಗೀತೆ ಬಾಲಕರ ಗೀತೆಯಲ್ಲಿ ಪ್ರಕಟವಾಗಿದೆ. ಪರಿಶುದ್ಧ ಆತ್ಮನು ನಮ್ಮ ಆತ್ಮಕ್ಕೆ ಆಗಮಿಸಿದಾಗ ಪರಸೇವೆ ಮಾಡಲು ಪ್ರೇರಣೆ ನೀಡುತ್ತಾನೆ. ಎಲ್ಲ ವಿಧವಾದ ತಾರತಮ್ಯಗಳು ದೂರ ಸರಿದು ಐಕ್ಯತೆಯಿಂದ ಬಾಳಲು ಸಾಧ್ಯವಿದೆ. ಈ ವರಗಳನ್ನು ತನಗೆ ನೀಡೆಂದು ಗೀತಗಾರ ಆತ್ಮನಲ್ಲಿ ಮೊರೆಯಿಟ್ಟು ಬೇಡುತ್ತಿದ್ದಾರೆ. 'ಪವಿತ್ರ ದೇವರಾತ್ಮನೆ' ಎಂಬ ಗೀತೆಯಲ್ಲಿ

ಪವಿತ್ರವಾದ ಅಗ್ನಿಯೆ!	ನೀ ದಿವ್ಯ ಜ್ವಾಲೆಯಿಂದ
ನಮ್ಮೊಳಗಿರ್ವ ಮೈಲಿಗೆ	ಭಿನ್ನ ಭಿನ್ನ
ಸುಟ್ಟಾಕು ವೇಗದಿಂದ!	ಸ್ಥಿರವಾಗಿ
ಸೈತಾನನಧಿಕಾರವಂ	ನಿನ್ನ ಸೇವೆ
ನಮ್ಮೊಳಗಿರ್ವ ರಾತ್ರಿಯಂ	ಮಾಡ ತ್ವರೆ ಪಡುತ್ತೇವೆ

ಬಾಲಕರ ಗೀತೆಗಳು, ಗೀತೆ–೧೧೯,ಪುಟ, ೧೨೮

ರೂಪಕಗಳಾಗಿ ಉಪಯೋಗವಾದ ನಾಮ ವಾಚಕಗಳಿಗೆ ಉದಾಹರಣೆಗಳು. ಪರಿಶುದ್ಧಾತ್ಮನನ್ನು ಸೂರ್ಯ, ಅಗ್ನಿ, ಬುಗ್ಗೆ ಎಂದು ಹೋಲಿಸಿ ವರ್ಣಿಸಿದ್ದಾನೆ.

ದೇವ ತ್ರಯೈಕತ್ವಕ್ಕೆ ಸಂಬಂಧಿಸಿದ ಗೀತೆಗಳು: ತ್ರಯೈಕತ್ವ (Trinity) ಎಂಬ ಶಬ್ದವು ತ್ರ (Tri) ಎಂದರೆ ಮೂರು ಮತ್ತು ಐಕ್ಯತೆ ಅಂದರೆ ಏಕತ್ವ (Unity) ಎಂಬ ಶಬ್ದಗಳ ಸಂಕಲನವಾಗಿರುತ್ತದೆ. ಹೀಗೆ 'ತ್ರಯೈಕತ್ವ'ವು ಮೂರರಲ್ಲಿ ಒಂದು ಅಥವಾ ಒಂದರಲ್ಲಿ ಮೂರು ಎಂಬುದಾಗಿದೆ. ಮೂರು ದೇವರುಗಳು ಇರುವರೆಂದು ಕ್ರೈಸ್ತರು ನಂಬುವುದಿಲ್ಲ. ತಂದೆ, ಮಗ, ಪವಿತ್ರಾತ್ಮ ಎಂಬ ಮೂರು ವ್ಯಕ್ತಿಗಳಲ್ಲಿರುವ ಒಬ್ಬ ದೇವರನ್ನು ನಂಬುತ್ತಾರೆ. ದೇವರೊಬ್ಬರಾದರೂ ಆತನಲ್ಲಿ ಮೂರು ವ್ಯಕ್ತಿಗಳನ್ನು ಕಾಣುತ್ತೇವೆ. ಪಿತ, ಪುತ್ರ ಮತ್ತು ಪವಿತ್ರಾತ್ಮ ಪಿತನು ಸೃಷ್ಟಿ ಕರ್ತನಾದರೆ ಸುತನು ಲೋಕರಕ್ಷಕನಾಗಿದ್ದಾನೆ. ಪವಿತ್ರಾತ್ಮನ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಾರೆ ಎಂಬುದೆ ಕ್ರಿಸ್ತೀಯ ವಿಶ್ವಾಸ. ಈ ವಿಷಯಕ್ಕೆ ಸಮಬಂಧಿಸಿದಂತೆ ೪ ಗೀತೆಗಳಿದ್ದು ಅದರಲ್ಲಿ ಮೂರು ಗೀತೆಗಳನ್ನು ಮೊಗ್ಲಿಂಗ್ ಬರೆದಿದ್ದಾರೆ.

ಕ್ರೈತ ವಿಶ್ವಾಸವನ್ನು ಪ್ರಕಟಿಸುವ ಈ ಗೀತೆ ಮೊದಲನೆ ಶತಮಾನಕ್ಕಿಂತ ಪೂರ್ವಕ್ಕೆ ಸೇರಿದ್ದಾಗಿದ್ದು ಇಂದೂ ಕ್ರೈಸ್ತರು ಹೇಳುವ ಪ್ರಾರ್ಥನೆಯಾಗಿದೆ. ಇಲ್ಲಿ ಗೀತಗಾರ ಪಿತ, ಪುತ್ರ ಪವಿತ್ರಾತ್ಮರಲ್ಲಿ ಸಂಪೂರ್ಣ

ವಿಶ್ವಾಸವನ್ನು ಹೊಂದಿರುವುದನ್ನು ಕಾಣುತ್ತೇವೆ. 'ನಾವೇಕೆ ದೇವರಲ್ಲಿಯೆ' ಈ ಗೀತೆ Wir glauben all an einen Gott ಎಂಬ ಗೀತೆಯ ಭಾಷಾಂತರವಾಗಿದೆ. ಕನ್ನಡ ಗೀತೆಗಳು, ಗೀತಗೆ-೧೧೭.

ತ್ರಯ್ಯೇಕ, ದೇವರಲ್ಲಿನ ವಿಶ್ವಾಸವನ್ನು ಪ್ರಕಟಿಸುವ ಮತ್ತೊಂದು ಗೀತೆ "ತಂದೆಯಾದ ದೇವರೆ"[೨೦] ಇದು Gottdervater wohn' ans bei ಎಂಬ ಗೀತೆಯ ಭಾಷಾಂತರವಾಗಿದೆ. ಇದು ೧ನೇ ಶತಮಾನಕ್ಕಿಂತ ಪೂರ್ವದಲ್ಲಿ ಬಳಕೆಯಲ್ಲಿದ್ದ ಈ ಗೀತೆಯನ್ನು M. Lulther ಪುನರ್ ರಚಿಸಿದರು[೨೧] ಇಲ್ಲಿ ಗೀತಗಾರ ಪಿತ, ಪುತ್ರ, ಪವಿತ್ರಾತ್ಮನಿಗೆ ಸ್ತೋತ್ರ ಉಂಟಾಗಲಿ ಎಂದು ಆಶಿಸಿದ್ದಾರೆ. ತಂದೆಯಾದ ದೇವರು ಪಾಪವನ್ನು ಮನ್ನಿಸಿ ಭಕ್ತರನ್ನು ಕಾಪಾಡಿ ಮುಕ್ತಿಯನ್ನು ಕೊಡು ಎಂದು ಗೀತಗಾರ ತಂದೆಯಲ್ಲಿ ಬೇಡಿದ್ದಾನೆ.

ಕ್ರಿಸ್ತನಲ್ಲಿಯೇ ಜೀವಕಾಂತಿ, ಸತ್ಯಶಾಂತಿ, ನೀತಿಜ್ಞಾನ, ಸಮಾಧಾನ ಎಂದೆಲ್ಲ ಹೇಳಿ ಆತನನ್ನು ಹೊಗಳಿದ್ದಾನೆ ಗೀತಗಾರ. ಆತ್ಮನು ತನ್ನ ವಿಶ್ವಾಸವನ್ನು ವೃದ್ಧಿಪಡಿಸಲಿ, ಉತ್ತಮ ಕಾರ್ಯ ಮಾಡಲು ಪ್ರೇರೇಪಿಸಲಿ ಎಂದು ಬೇಡಿಕೊಂಡಿರುವುದೇ ಈ ಗೀತೆಯ ಆಶಯವಾಗಿದೆ.

ಯುಗಾದಿಗೆ ಸಂಬಂಧಿಸಿದಂತೆ ಗೀತೆ: ಧಾರ್ಮಿಕ ಹಬ್ಬಗಳಿಗೆ ಹೊರತಾಗಿ ಮೊಗ್ಲಿಂಗ್ ಗೀತೆ ರಚಿಸಿರುವುದು ವಿಶಿಷ್ಟ ಅಂಶವಾಗಿದೆ. ಸ್ಥಳೀಯ ಸಂಸ್ಕೃತಿಯನ್ನು ಗೌರವಿಸಲು ಅವರು ರಚಿಸಿದ ಗೀತೆಯೆ 'ಯುಗಾದಿ' ಸ್ಥಳೀಯ ಸಂಸ್ಕೃತಿಗೆ ಸ್ಪಂದಿಸಿರುವ ಬಗೆ ಅಭಿನಂದನಾರ್ಹವಾಗಿದೆ. ವರುಷಗಳು ಉರುಳುತ್ತಿದ್ದರು ಯುಗಾದಿ ಪ್ರತಿ ವರ್ಷವು ಬರುವುದಾಗಿದೆ. ಈ ದಿನದಲ್ಲಿ ಕೃತಜ್ಞತಾಭಾವದಿಂದ ಗೀತಗಾರ ತನ್ನ ಜೀವಕ್ಕಾಗಿ ಹಾಗೂ ಹೊಸ ವರುಷಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸುವುದನ್ನು ಇಲ್ಲಿ ಕಾಣುತ್ತೇವೆ. ಗೀತಗಾರನ ಧನ್ಯತಾಭಾವ ವ್ಯಕ್ತವಾಗಿದೆ. 'ಯುಗಾದಿ' ಎಂಬ ಗೀತೆಯಲ್ಲಿ ಇದು Sogent's von schrilt zu schrift ಎಂಬ ಗೀತೆಯ ಭಾಷಾಂತರವಾಗಿದೆ. ೬೪ ಸಾಲುಗಳನ್ನು ಹೊಂದಿದ ಈ ಗೀತೆ ಧೀರ್ಘವಾಗಿದೆ.

ಈ ಜೀವವೆನಗೆ	ನಿಂಗಾಗಿ ಬದುಕಿ
ಒಲ್ದಿತ್ತ ದೇವರೇ	ನಿಂಗಾಗಿ ಸಾಯುವೆ
ಅದನ್ನು ತಿರಿಗಿ	ನಾ ನಿತ್ಯ ಕಾಲಕು
ತಂದೀಯ್ವೆ ನಿನಗೆ	ನಿನ್ನಾಳು, ಕರ್ತನೆ!

ಕನ್ನಡ ಗೀತೆಗಳು, ಗೀತೆ-೩೪೭

ಛಂದಸ್ಸು: ಈ ಗೀತೆಯ ಪದದ ಪ್ರಸ್ತಾರ

ಉಂಟು ನಿಷ್ಕಳಂಕದೇಶ	__U/__U/__U/__U
ಅಲ್ಲಿ ನಮಗೇ ಪ್ರವೇಶ	__U/__U/__U/__U
ಅಲ್ಲಿ ನಾವು ಶೇರೋದು	__U/__U/__U/__
ನಿತ್ಯ ಕ್ಷೇಮ ಸಿಕ್ಕೋದು	__U/__U/__U/__

೧, ೨ ಚರಣಗಳ ಅಂತ್ಯದಲ್ಲಿ ಒಂದೇ ಪ್ರಾಸ ಮತ್ತು ೩.೪ ಚರಣಗಳ ಅಂತ್ಯದಲ್ಲಿ ಒಂದೇ ಪ್ರಾಸ ಇರಬೇಕು. ಈ ಗೀತ ಎರಡು ಅಕ್ಷರವುಳ್ಳ ಗಣಗಳಿಂದ ರಚಿಸಿದ್ದು, ಆ ಛಂದಸ್ಸಿನಲ್ಲಿ ಎರಡು ಅಕ್ಷರವುಳ್ಳ ನಾಲ್ಕು ಗಣಗಳು, ಮೂರು ಅಕ್ಷರಗಳುಳ್ಳ ಎಂಟು ಚರಣಗಳು, ನಾಲ್ಕು ಅಕ್ಷರಗಳುಳ್ಳ ಹದಿನಾರು ಗಣಗಳು ಇವೆ[೭].

ಮೊಗ್ಲಿಂಗರ ಗೀತೆಗಳ ವೈಶಿಷ್ಟ್ಯತೆಗಳು: ಪಾಶ್ಚತ್ಯ ಮಿಶನರಿಯಾದ ಮೊಗ್ಲಿಂಗ್ ಕನ್ನಡ ಕ್ರೈಸ್ತ ಗೀತೆಗಳನ್ನು ಪ್ರಥಮ ಬಾರಿಗೆ ಭಾಷಾಂತರಿಸಿ ಪುಸ್ತಕ ರೂಪದಲ್ಲಿ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ. 'ಕನ್ನಡ ಗೀತೆಗಳು" ಎಂಬ ಗೀತ ಪುಸ್ತಕದಲ್ಲಿ (೧೯೬೬) ೧೦೫ ಗೀತೆಗಳನ್ನು ಜರ್ಮನ್ (೧೦೧) ಇಂಗ್ಲೀಷ್ (೪) ಭಾಷೆಯಿಂದ ಭಾಷಾಂತರಿಸಿ ದೇವಾರಾಧನೆಗೆ ಸುಲಭವಾದ ಮಾರ್ಗವನ್ನು ತೋರಿಸಿದರು. ಈ ಗೀತೆಗಳಲ್ಲಿ ಭಾಷಾಂತರ ಹಾಗೂ ಸ್ವರಚಿತ ಗೀತೆಗಳಿವೆ. 'ಮಂಗಳೂರು ಕನ್ನಡ' ವನ್ನು ಬಳಸಿ ಗೀತೆ ರಚಿಸಿದ್ದಾರೆ.

ಯೇಸುವಿಗೆ ಸಂವಾದಿಯಾಗಿ ಬಳಕೆಯಾದ ಪದಗಳು ಗೀತೆಗಳಲ್ಲಿವೆ. ಉದಾ: ಯೇಸುವನ್ನು ಮಾರ್ಗ, ಸತ್ಯ, ಜೀವ, ಪ್ರೀತಿ ಮನುಷ್ಯನು ಎಂದು ಹೆಸರಿಸಿದ್ದಾರೆ.

ಮೊಗ್ಲಿಂಗರು ಸುಲಭವಾದ ಕನ್ನಡ ಪದವಿದ್ದರೂ ಸಂಸ್ಕೃತದ ಪದಗಳನ್ನು ಉಪಯೋಗಿಸಿದ್ದಾರೆ. ಉದಾ: ನಾರೀಪುತ್ರ

ರೂಪಕಾಲಂಕಾರಗಳ ಬಳಕೆಯನ್ನು ಕಾಣುತ್ತೇವೆ. ಉದಾ: ಯೇಸುವನ್ನು ಆದಿತೇಜ, ದಿವ್ಯಶೂರ, ಶಾಂತಯೇಸು, ಸತ್ತ್ರವಾದಿ, ಸ್ವರ್ಗೀಯ ಭಾಸ್ಕರ, ಸತ್ಯಾದಿತ್ಯ, ಪ್ರಭಾಮಯ, ರಮಣೀಯ ಕಾಂತಿ, ಮದಲಿಂಗ, ಜೀವಜ್ಯೋತಿ ಎಂದು ವರ್ಣಿಸಿದ್ದಾರೆ.

ದಾಸ್ಯ ಭಕ್ತಿಯನ್ನು ಪ್ರಕಟಿಸುವ ಗೀತೆಗಳನ್ನು ಕಾಣುತ್ತೇವೆ. ಗೀತೆ ೩೫ ರಲ್ಲಿ ಯೇಸುವಿಗೆ ತನ್ನನ್ನೇ ಅರ್ಪಿಸಿಕೊಂಡು, ತಾನು ಆತನ ದಾಸ ಎಂದು ಭಾವಿಸಿ ದೇವರನ್ನು ರಾಜ ಎಂದು ವಿಶೇಷಣದಿಂದ ಸಂಬೋಧಿಸಿರುವಲ್ಲಿ ದಾಸ್ಯ ಭಕ್ತಿ ಅವಿರ್ಭಾವವಾಗಿದೆ.

ಮೊಗ್ಲಿಂಗರು ಕೇವಲ ಜರ್ಮನ್ ದಾಟಿಯಲ್ಲೇ ಗೀತೆಗಳನ್ನು ರಚಿಸಲಿಲ್ಲ. ಬದಲಾಗಿ ದೇಶೀಯತೆಯನ್ನು ಮೆಚ್ಚಿಕೊಂಡಿದ್ದಾರೆ ಎಂಬುದನ್ನು ವ್ಯಕ್ತ ಪಡಿಸುವ ಗೀತೆಗಳೂ ಇವೆ. ಗೀತೆ ೩೦೯ ದೇಶೀ ಶೈಲಿಯನ್ನು ರೂಢಿಸಿಕೊಂಡಿದೆ. ೩ ಸಾಲುಗಳನ್ನು ಒಳಗೊಂಡು ರಚಿತವಾಗಿದ್ದು ಸರಳವಾಗಿದೆ. ಗೀತೆ ೩೧೦ ಆದಿ ಅಂತ್ಯ ಪ್ರಾಸವನ್ನು ಹೊಂದಿ ದೇಶೀಯತೆಯನ್ನು ಬಿಂಬಿಸುತ್ತದೆ. ಚಿಕ್ಕ ವಾಕ್ಯ ರಚನೆ ಅರ್ಥ ಗ್ರಹಿಕೆಗೆ ಸುಲಭವಾಗಿದೆ. ಜನಸಾಮಾನ್ಯರನ್ನೇ ಗಮನದಲ್ಲಿಟ್ಟುಕೊಂಡು ರಚಿತವಾಗಿದೆ.

ಬದುಕಿನಲ್ಲಿ ಕಷ್ಟಕಾರ್ಪಣ್ಯಗಳೇ ಮೇಲುಗೈ ಸಾಧಿಸಿದಾಗ ಅಂಜದೆ ಅಳುಕದೆ ಮುನ್ನುಗ್ಗುವಂತೆ ಪ್ರೇರೇಪಿಸುವ ಗೀತೆಗಳು ಅನೇಕ ಇವೆ. ಉದಾ: ಗೀತೆ ೩೦೭, ೨೪೪ ಇವು ಶಾಂತಿ, ಸಮಾಧಾನವನ್ನು ಮಾಡಿಸುವಲ್ಲಿ ಸಹಾಯಕವಾಗಿವೆ. ಉಪಮಾಲಂಕಾರಗಳ ಬಳಕೆಯನ್ನು ಗೀತೆಯಲ್ಲಿ ಕಾಣುತ್ತೇವೆ. ಗೀತೆ ೩೯ ರಲ್ಲಿ ದೇವರ ಅಮರ ಪ್ರೀತಿಯನ್ನು ವರ್ಣಿಸಲು, ಅರ್ಥೈಸಲು ಹದ್ದು ತನ್ನ ಮರಿಯನ್ನು ಸಂರಕ್ಷಿಸುವ ರೀತಿಗೆ ಹೋಲಿಸಿ ದೇವರ ಪ್ರೀತಿಯನ್ನು ಅದರ ಮಹಿಮೆಯನ್ನು ತಿಳಿಯಲು ಸಹಕರಿಸುತ್ತದೆ.

ಕಾಲದಿಂದ ಕಾಲಕ್ಕೆ ಶಿಷ್ಟ ಪದಗಳ ಬಳಕೆಯಾಗಿರುವುದನ್ನು ಕಾಣುತ್ತೇವೆ. ೧೮೬೬ ರಲ್ಲಿ ಪ್ರಕಟವಾದ ಪ್ರಾಕ್ಕಾವ್ಯಮಾಲಿಕೆಯಲ್ಲಿ ಬಳಕೆಯಾದ ಪದಗಳಿಗೂ ಪ್ರಸ್ತುತ ಗೀತಗಳಲ್ಲಿ ಬಳಸಿರುವ ಪದಗಳಿಗೂ ವ್ಯತ್ಯಾಸಗಳಿವೆ.

ಪರ್ಯಾಯಾಲಂಕಾರ (Periphrasis of Circumlocution), ಭಾವಿಕಾಲಂಕಾರ, (Prosopopeia) ಅಲಂಕಾರಿಕ ಗುಣವಾಚಕ (Ornamental Epithet), ಪ್ರಮಾಣಾಲಂಕಾರ (Allusion) ಗಳ ಬಳಕೆಯನ್ನು ಕಾಣುತ್ತೇವೆ.

ಕಥನ ಶೈಲಿಯಲ್ಲಿ ಗೀತ ರಚನೆ ಮಾಡಿರುವುದು ಇವರ ರಚನೆಯ ವಿಶಿಷ್ಟಾಂಶವಾಗಿದೆ. ಯೇಸುವಿನ ಜನನಕ್ಕೆ ಸಂಬಂಧಿಸಿದ ಗೀತೆಗಳು (ಗೀತೆ ೪೬) ಯೇಸುವಿನ ಯಾಚನೆಗೆ ಸಂಬಂಧಿಸಿ (ಗೀತೆ ೬೯) ಕಥನ ರೂಪ ಹೊಂದಿದೆ.

ಯೇಸು ದೇವ ಪುತ್ರನಾಗಿದ್ದು ಆತನು ಅನುಭವಿಸಬೇಕಾಗಿ ಬಂದ ಯಾತನೆಯನ್ನು ಒಬ್ಬ ಸಾಧಾರಣ ವ್ಯಕ್ತಿಯ ಜೀವನದಲ್ಲಿ ಅನುಭವಿಸಬಹುದಾದ ಕಷ್ಟಕ್ಕೆ, ನೋವು, ಹಿಂಸೆಗೆ ಹೋಲಿಸಿ ವರ್ಣಿಸಿದ್ದಾರೆ. ಉದಾ: ಗೀತೆ ೬೯ ರಲ್ಲಿ ಯೇಸುವಿಗೆ ಸಂವಾದಿಯಾಗಿ 'ಮನುಷ್ಯನು' ಎಂದು ಹೆಸರಿಸಿ ಆತನ ಕಣ್ಣಿನಿಂದ ದು:ಖದ ಕಣ್ಣೀರು, ಮುಖದಲ್ಲಿ ತುಟಿಯಲ್ಲಿ ದು:ಖ ತುಂಬಿದ ಚಿತ್ರಣ, ಹಣೆಯಲ್ಲಿ ಬೆವರು ಎಂದು ಯೇಸುವಿನ ಯಾತನೆಯನ್ನು ವರ್ಣಿಸಿ ಒಬ್ಬ ಸಾಧಾರಣ ವ್ಯಕ್ತಿಯ ಬದುಕಿಗೆ ಹೋಲಿಸಿರುವುದು ಯಾತನೆಯ ಭೀಕರತೆಯನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗಿದೆ.

ಸ್ಥಳೀಯ ಸಂಸ್ಕೃತಿಗೆ ಸ್ಪಂದಿಸಿರುವಂತೆ ಮೊಗ್ಲಿಂಗರು ಇಲ್ಲಿನ ಹಬ್ಬಗಳ ಕುರಿತು ಗೀತೆ ರಚಿಸಿದ್ದಾರೆ. ಉದಾ: ಯುಗಾದಿ ಗೀತೆ ಅವರ ದೇಶೀ ಪ್ರೇಮವನ್ನು ವ್ಯಕ್ತಿಪಡಿಸುತ್ತದೆ.

ಮೊಗ್ಲಿಂಗರ ಪದ ಬಳಕೆಯ ಸಾಮರ್ಥ್ಯವನ್ನು ಮೆಚ್ಚುವಂತಹದ್ದಾಗಿದೆ. ದೃಷ್ಟಿಗೋಚರವಾಗುವ ರೀತಿ ಪದಗಳನ್ನು ಚಿತ್ರೀಕರಿಸಿರುವ ಗೀತೆಗಳು ಇಲ್ಲಿವೆ. ಉದಾ: ಗೀತೆ ೭೦, ಯೇಸು ಕ್ರೂಜೆ ವೃಕ್ಷದಲ್ಲಿ ತೂಗಾಡಿದ್ದನ್ನು ಮೈಯೊಳಗಿನ ರಕ್ತ ಬೆವರಾಗಿ ಸುರಿಯುವುದನ್ನು ನಿಟ್ಟುಸುರಾವರ್ತಿಯಿಂದ ಎದೆ ಭಿನ್ನವಾಗುವುದನ್ನೂ (ನಾವು ಕಣ್ಣಾರೆ ಕಂಡ ಹಾಗೆ) ನಮ್ಮ ಕಣ್ಣಿಗೆ ಕಟ್ಟುವ ಹಾಗೆ ವರ್ಣಿಸಿದ್ದಾರೆ.

ಉಪಮೆಗಳ ಮೂಲಕ ಯೇಸುವಿನ ಸಾನಿಧ್ಯ. ಸ್ಪರ್ಶದ ಶ್ರೇಷ್ಠತೆಯನ್ನು ವರ್ಣಿಸಿದ್ದಾನೆ. ಉದಾ: ಬೀಜ ಮೊಳೆಯುತ್ತದೆ, ಮಳೆ ಬಿದ್ದ ಭೂಮಿಯಲ್ಲಿ, ನಿನ್ನ ಮಂಜು ಬಿದ್ದರೆ, ನನ್ನ ಒಣ ಆತ್ಮದಲ್ಲಿ, ಹೊಸ ಜೀವ ತ್ರಾಣವು ಬಹುದು.

ಗೇಯತೆ, ಪ್ರಾಸ, ಉತ್ತಮ ಕಾವ್ಯ ಗುಣದಿಂದ ಕೂಡದೆ ಇರುವ ಗೀತೆಗಳು ಕಂಡು ಬರುತ್ತವೆ. ಕೆಲವು ಗೀತೆಗಳು ತೀರ ಸರಳವಾಗಿವೆ. ಉದಾ: ಗೀತೆ ೧೧೯, ಚಿಕ್ಕ ವಾಕ್ಯಗಳು, ಕಾವ್ಯ ಗುಣವಿಲ್ಲದಿದ್ದರೂ ಅರ್ಥ ಪ್ರಧಾನವಾಗಿದೆ.

೫.೩.೨ ವೈಗಲ್. ಜೆ – Weigle. J

ದಕ್ಷಿಣ ಭಾರತದಲ್ಲಿಯೇ ಶ್ರೇಷ್ಠ ಮುದ್ರಣಾಲಯ ಎಂಬ ಖ್ಯಾತಿ ಪಡೆದ ಬಾಸೆಲ್ ಮಿಶನಿನ ಮುದ್ರಣಾಲಯದ ಸ್ಥಾಪನೆಗೆ ಕಾರಣರಾದವರು ರೆ. ವೈಗಲ್‌ರವರು. ಇವರು ೧೮೧೬ ರಲ್ಲಿ ತ್ಸೆಲ್ ಎಂಬ ಗ್ರಾಮದಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ಅವರು ಪಡೆದ ಕ್ರೈಸ್ತ ಶಿಕ್ಷಣ ಒಬ್ಬ ಪ್ರಭಾವ ಶಾಲಿ ಮಿಶನರಿಯಾಗುವಂತೆ ಪ್ರೇರೇಪಿಸಿತು. ಕ್ರಿ.ಶ. ೧೮೩೫ ರಿಂದ ೧೮೩೮ ರವರೆಗೆ ಟ್ಯುಬಂಗನ್ ವಿಶ್ವ ವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದರು. ಅಲ್ಲಿ ಅರಬ್ಬೀ ಹಾಗೂ ಸಂಸ್ಕೃತ ವಿಷಯಗಳನ್ನು ಕಲಿತರು. ಬಾಸೆಲ್ ಮಿಶನ್‌ನಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಇವರು ಕ್ರಿ.ಶ. ೧೮೪೦ ರಲ್ಲಿ ಭಾರತಕ್ಕೆ ಬಂದರು.

ರೆ. ಮೋಗ್ಲಿಂಗರು ವೈಗಲ್‌ರ ಆಪ್ತ ಸ್ನೇಹಿತ ಹಾಗೂ ಸಂಬಂಧಿಯಾಗಿದ್ದರು. ಕಠಿಣ ಪರಿಶ್ರಮಿಗಳಾದ ಇವರು ಮಂಗಳೂರಿಗೆ ಬಂದು ಕೆಲವೇ ತಿಂಗಳಿನಲ್ಲಿ ಇಂಗ್ಲೀಷ್ ಶಾಲೆಯ ಜವಾಬ್ದಾರಿಯನ್ನು ವಹಿಸಿಕೊಂಡರು. ಅಂದು ಪ್ರಚಾರ ಕಾರ್ಯಕ್ಕೆ ಅಗತ್ಯವಾಗಿ ಬೇಕಿದ್ದ ಮುದ್ರಣ ಯಂತ್ರವನ್ನು ದಾನವಾಗಿ ಪಡೆದರು.[೭೩] ಬಡಗು ಮಿಶನ್ ಸ್ಥಾಪನೆಯನ್ನು ನೀಲಗಿರಿಯಲ್ಲಿ ಸ್ಥಾಪಿಸಿದರು. ಬಹುಮುಖ ಪ್ರತಿಭೆಯನ್ನು ಹೊಂದಿದ್ದ ಇವರು ಗಣಿತ, ಸಂಗೀತ ಹಾಗೂ ವೈದ್ಯಕೀಯದಲ್ಲಿ ಆಸಕ್ತಿ ಹೊಂದಿದ್ದರು. ಹೊಸಗನ್ನಡದ ಪ್ರಾರಂಭದ ಪದ್ಯಗಳೆನಿಸುವಂತೆ ಇವರು ಬನ್ಯನ್ನನ 'ಯಾತ್ರಿಕನ ಸಂಚಾರ' ಕೃತಿಯನ್ನು ಅನುವಾದ ಮಾಡಿ ಅದರಲ್ಲಿನ ಪದ್ಯಗಳನ್ನು ಕನ್ನಡದ ವೃತ್ತಗಳಲ್ಲಿ ಅನುವಾದಿಸಿದ್ದಾರೆ. ಇದರ ಮಹತ್ವವನ್ನು ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ರಂ. ಶ್ರೀ ಮುಗುಳಿಯವರು ಹೇಳಿದ್ದಾರೆ.[೭೪] ವೈಗಲ್ ಅನುವಾದ ಕಲೆಯ ವಿಶೇಷ ವರ ಪಡೆದಿದ್ದರೆಂದು ರೆ. ಮೋಗ್ಲಿಂಗ್‌ರೂ ಹೇಳುತ್ತಾರೆ.

ರೆ. ವೈಗಲ್‌ರವರು ಜರ್ಮನಿಯ ಪಂಡಿತ ಪತ್ರಿಕೆಯಾದ ZDMG ಯಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಕುರಿತು ಲೇಖನ ಪ್ರಕಟಿಸಿದರು. ಜನಪದ ಸಾಹಿತ್ಯವು ಸ್ವತಂತ್ರ ಶುದ್ಧ ಕಾವ್ಯ ಎಂದು ಹೇಳುತ್ತಾ ಯಕ್ಷಗಾನ ಪ್ರಸಂಗಗಳು ಹಾಗೂ ಜನಪದ ಹಾಡುಗಳನ್ನು ಸಾಹಿತ್ಯದ ಅಂಗವಾಗಿಯೇ ಪರಿಗಣಿಸಿದ್ದು ಅದರಲ್ಲಿಯ ವೈಶಿಷ್ಟ್ಯಯ[೭೫] ಎಂಬುದು ಗಮನಾರ್ಹವಾದುದು.


ವೈಗಲ್‌ರವರನ್ನು ಹತ್ತಿರದಿಂದ ಅರಿತಿದ್ದ ರೆ. ಮೋಗ್ಲಿಂಗರು ಹೀಗೆ ಬರೆಯುತ್ತಾರೆ. "He was a thoughtful earnest paint taking and edifying preacher who seldom with drew the attention of his hearers from the grand thems of the Gospel. His Canarese preaching was decidely superior to his English sermons"[೭೬] ವೈಗಲ್‌ರು ೧೮೫೫ ರಲ್ಲಿ ಕೇವಲ ೩೯ ವರ್ಷ ವಯಸ್ಸಾಗಿದ್ದಾಗ ಅನಾರೋಗ್ಯದ ನಿಮಿತ್ತ ಮರಣ ಹೊಂದಿದರು.[೭೭]

ಗೀತೆಗಳ ಅಧ್ಯಯನ: ಆದ್ಯ ಭಾಷಾಂತರ ಪ್ರವರ್ತಕರಲ್ಲಿ ಒಬ್ಬರಾದ ಡಾ. ವೈಗಲ್‌ರವರು ಬಾಸೆಲ್ ಗೀತ ಪುಸ್ತಕದಲ್ಲಿ ಒಟ್ಟು ೨೪ ಗೀತೆಗಳನ್ನು ರಚಿಸಿದ್ದಾರೆ. ೮ ಭಾಷಾಂತರ ಗೀತೆಗಳನ್ನು ೧೬ ಸ್ವರಚಿತ ಗೀತೆಗಳು ರಚಿಸಿದ್ದಾರೆ. ಇವರ ಗೀತೆಗಳು ವಿವಿಧ ಭಾಗಗಳಿಗೆ ಸೇರಿವೆ.

ಯೇಸುವಿನ ಭಜನೆ	೦೨	ಕ್ರೈಸ್ತ ಮನಶ್ಶಾಂತಿ	೦೨
ಸಭೋತ್ಸವಗಳು	೦೬	ದೇವ ಸ್ತೋತ್ರ	೦೧
ದೇವರಾಜ್ಯ	೦೧	ಸ್ವರ್ಗ ಮಹಿಮಾಭಿಲಾಷೆ	೦೧
ಕ್ರೈಸ್ತ ಸಭಾ ಕೃಪಾಕರಣಗಳು	೦೩	ವಿಶೇಷ ಕಾಲಗಳಿಗೆ ತಕ್ಕ ಗೀತೆಗಳು	೦೪
ರಕ್ಷಣಾ ಮಾರ್ಗ	೦೪		ಒಟ್ಟು ೨೪ ಗೀತೆಗಳು

ಬೈಬಲ್: ದೇವರ ವಾಕ್ಯವನ್ನು ದಿನನಿತ್ಯವು ಪಠಿಸಿ, ಧ್ಯಾನಿಸಿ, ಅನುಕರಿಸಿ ಬಾಳಿದರೆ ನಮ್ಮ ಜೀವನವು ಪಾವನವಾಗುವುದು. ದೇವರ ವಾಕ್ಯವೇ ನಮ್ಮ ಬಾಳಿಗೆ ಪ್ರತಿಯೊಂದು ಹಂತಗಳಲ್ಲಿ ನಮಗೆ ಪ್ರೇರಣೆ ಮತ್ತು ಉಪಶಮನ ನೀಡುವುದು. 'ದೇವರ ವಾಕ್ಯವು ನಮ್ಮ ಬಾಳಿಗೆ ದಾರಿದೀಪವಾಗಿದೆ'[೭೮] ಎಷ್ಟು ಶಕ್ತಿಯುತವಾದದ್ದು ಎಂದರೆ – ಈ ವಾಕ್ಯವೇ ಮಾನವ ರೂಪವನ್ನುನ್ನು ತಾಳಿ ನಮ್ಮ ಮಧ್ಯೆ ನೆಲೆಸಿತು.[೭೯] ಇಂದು ನಮ್ಮ ಬಾಳಿಗೆ ಆಧಾರವಾಗಿರುವ ದೇವವಾಕ್ಯದ ಮಹಿಮೆಯ ಕುರಿತು ವೈಗಲ್ ಅಲಂಕಾರಿಕವಾಗಿ ವರ್ಣಿಸಿದ್ದಾರೆ. 'ದೇವರ ವಾಕ್ಯ ನಿನಗೆ' ಎಂಬ ಗೀತೆಯಲ್ಲಿ ಇದು ಸ್ವರಚಿತ ಗೀತೆಯಾಗಿದ್ದು Meinen jesum lass'ich nicht ಎಂಬ ರಾಗದಲ್ಲಿದೆ. ರೂಪಕಾಲಂಕಾರ ಮೇಲುಗೈ ಪಡೆದ ಗೀತೆ ಇದಾಗಿದೆ.

೧೮೪೧ ರಲ್ಲಿನ ಗೀತೆ



೧೯೬೬ ರಲ್ಲಿನ ಗೀತೆ

೧. ದೇವವಾಕ್ಯ ನಿನಗೆ
ಕೊಡೊದೆಂತು ಯೋಗ್ಯ ಘನ?
ನಿನ್ನ ಹಾಲು ಕುಡಿದೆ;
ಉಣ್ಣಿಸಿದ್ದಿ ನಿನ್ನ ಮನ್ನ
ಕ್ಷೇಮಕರ ಔಷಧಿ
ನನ್ನ ಆತ್ಮಕೀಯುತಿ

ಕನ್ನಡ ಗೀತೆಗಳು, ಗೀತೆ–೧೬೪

೧೮೪೧ ರ ಗೀತೆಯಲ್ಲಿ ದೇವವಾಕ್ಯವನ್ನು ಪ್ರಿಯವಾದ ವಾಕ್ಯವೆಂದು ಸಂಬೋಧಿಸಿ ಅದು ರೋಗಕ್ಕೆ ಸಾವಿಗೆ, ಔಷಧಿಯಾಗಿದೆ ಎಂದಿದ್ದಾರೆ.

ದೇವವಾಕ್ಯದ ಮಹಿಮೆಯನ್ನು ವರ್ಣಿಸುತ್ತಾ ಹೀಗೆನ್ನುತ್ತಾರೆ,

ತುಂಬಿದೆ ಸಮುದ್ರವೇ
ಮುತ್ತು ನಿನ್ನ ಒಡಲಲ್ಲಿ!
ಎಷ್ಟೊ ಹೊನ್ನು ಶೈಲವೇ
ಉಂಟು ನಿನ್ನ ಗರ್ಭದಲ್ಲಿ!
ಹೊಲ ನಿನ್ನ ಬೆಳೆಯು
ಹೊಟ್ಟು ಸೂಡು ಇಲ್ಲದ್ದು!

ಒಬ್ಬ ಆಂಗ್ಲ ಕವಿಯಾಗಿದ್ದು ದೇಶಿಯರೊಬ್ಬರಿಂದ ರಚಿತವಾದ ಗೀತೆಯಂತಿದೆ ಇದು. ಕವಿಯ ಕಲ್ಪನಾಶಕ್ತಿ, ಪದಗಳ ಬಳಕೆಯಲ್ಲಿ ಆತನ ಜಾಣ್ಮೆ, ದೇವ ವಾಕ್ಯವು ಆತನ ಬದುಕಿನಲ್ಲಿ ಪಡೆದುಕೊಂಡ ಸ್ಥಾನ, ಆತನ ಬದುಕನ್ನೆ ಬದಲಿಸಿದ ದೇವರ ವಾಕ್ಯದ ಮಹಿಮೆಯನ್ನು ವರ್ಣಿಸಿರುವ ಬಗೆ ಆಶ್ಚರ್ಯವನ್ನುಂಟು ಮಾಡುತ್ತದೆ. ಒಂದು ಚಿತ್ರ ಪುಸ್ತಕವನ್ನು ನೋಡುವಾಗ ಒಂದು ವಸ್ತುವಿನ ಸೌಂದರ್ಯವು ಬಗೆಬಗೆಯಾದ ವಿಧಾನಗಳ ಮೂಲಕ ಹೇಗೆ ತೋರಿಬರುವದೋ ಹಾಗೆಯೇ ಪವಿತ್ರ ಗ್ರಂಥವು ಕುಡಿಯತಕ್ಕ ಹಾಲು, ಆತ್ಮಕ್ಕೆ ಕ್ಷೇಮಕರ ಔಷಧ, ಶತೃಬಾಣವ ಹಿಂದ್ಹಾಕುವಂಥ ಡಾಲು, ಉಕ್ಕಿಗಿಂತ ಹದವಾದ ವಿಚ್ಛೇಧಿಸುವ ಖಡ್ಗ, ಆತ್ಮಗಳನ್ನು ತುಂಬಿಸಿಕೊಂಡ ಸಾಗರ, ಗರ್ಭಗೃಹದಲ್ಲಿ ಹೊನ್ನು ತುಂಬಿಸಿಕೊಂಡ ಪರ್ವತ, ಶ್ರೇಷ್ಠ ಹೂವು ಮಿಂಚೋ ರಮ್ಯವಾದ ವನ, ನಕ್ಷತ್ರ ರಾಶಿಗಳಿಂದೊಡಗೂಡಿದ ಬೆಳಕುಳ್ಳಾಕಾಶ ಎಂದು ಬಗೆಬಗೆಯಾದ ಸಾಧನಗಳ ಮೂಲಕ ದೇವರ ವಾಕ್ಯದ ಅಂದ ಚಂದವು ವರ್ಣಿತವಾಗಿದೆ. ದೃಷ್ಟಿಗೋಚರವಾಗುವ ರೀತಿಯ ಪದಗಳ ಬಳಕೆ ಇಲ್ಲಿದೆ.

ಮನ್ನ (Manna): ಮರಳುಗಾಡಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಇಸ್ರಯೇಲರು ಭುಜಿಸಿದ ದೈವದತ್ತ ಆಹಾರ. ಇದು ರವೆರವೆಯಾಗಿ ಬಣ್ಣದಲ್ಲಿ ಬಿಳುಪಾಗಿ, ಗಾತ್ರದಲ್ಲಿ ಕೊತ್ತಂಬರಿ ಕಾಳಿನಂತೆ ಇತ್ತು (ವಿಮೋಚನ ೧೬, ಸಂಖ್ಯೆ ೧೧:೭-೯).

ವೈಗಲ್‌ರವರು ಕೀರ್ತನೆ ೪೬ ನ್ನು ಆಧಾರವಾಗಿಟ್ಟುಕೊಂಡು ಯೆಹೋವ ಪ್ರಾಪ್ತಕಾಲದ ಎಂಬ ಗೀತೆಯನ್ನು ರಚಿಸಿದ್ದಾರೆ. ಇದು ಮಾರ್ಟಿನ್ ಲೂಥರ್ ಬರೆದ Ein feste Burg ist unser Gott ಎಂಬ ಜರ್ಮನ್ ಗೀತೆಯ ಭಾಷಾಂತರವಾಗಿದೆ. ದೇವರು ಸರ್ವ ಕಾಲಕ್ಕೂ ನಮ್ಮ ಆಶ್ರಯವಾಗಿದ್ದಾನೆ. ಆತನು ಸರ್ವಶಕ್ತನು ಆತನಿಂದಲೇ ಜಯವು ದೊರೆಯುವುದು ಎಂಬ ಆಶಯವನ್ನು ಹೊಂದಿದೆ ಈ ಗೀತೆ.

ಭೂ ದೆವ್ವ ತುಂಬಿದ್ದಾದರು
ನಮ್ಮನ್ನು ನುಂಗೊದಿಲ್ಲ
ವಿಜಯಗತಿ ನಮ್ಮದು!
ನಮ್ಮಲ್ಲಿ ಭಯವಿಲ್ಲ
ಈ ಲೋಕೇಶನು
ಸಿಟ್ಟಿಗೆದ್ದರು
ಹ್ಯಾಗೂ ನಿಲ್ಲನು
'ಅಂತ್ಯಾಜ್ಞೆಯಾಯಿತು!'
ಈ ಒಂದೆ ಮಾತು ಸಾಕು


ಕನ್ನಡ ಗೀತೆಗಳು, ಗೀತೆ-೩೬೧

ಕ್ರಿಯಾಪದಗಳು ರೂಪಕವಾಗಿ ಬಳಕೆಯಾಗಿರುವುದಕ್ಕೆ ಉದಾ: ದೆವ್ವ ನಮ್ಮ ನುಂಗೋದಿಲ್ಲ ಸಮುಚ್ಚಾಯಗಳನ್ನು ಲುಪ್ತ ಮಾಡಿರುವುದು (Asyndeton) ಇಲ್ಲಿ ಕಂಡು ಬರುತ್ತದೆ. ಈ ಗೀತವು ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಇಲ್ಲಿ ಸಮುಚ್ಚಾಯಕಗಳಿಲ್ಲದೆ ಸಣ್ಣಸಣ್ಣ ವಾಕ್ಯಗಳನ್ನು ಕವಿಯು ಅನ್ವಯಿಸುತ್ತಾನೆ. ಈ ಗೀತದ ಪ್ರಸ್ತಾಪವನ್ನು ಗದ್ಯ ರೂಪದಲ್ಲಿ ಬರೆಯುವುದಾದರೆ ಮತ್ತು, ಕಾರಣ,

ಹೀಗಿದ್ದರೂ, ಆದರೆ, ಯಾಕೆಂದರೆ ಈ ಮುಂತಾದ ಸಮುಚ್ಚಾಯಗಳ ಮೂಲಕ ಆಯಾ ಭಾವಗಳನ್ನು ಒಂದಕ್ಕೊಂದು ಕೂಡಿಸಬೇಕಾಗುತ್ತಿತ್ತು. ಆದರೆ ಕಾವ್ಯದಲ್ಲಿ ಇದು ನಡೆದಿಲ್ಲ. ಕವಿಯು ಅಂತಹ ಮಾತುಗಳನ್ನು ಉಪಯೋಗಿಸುವುದಾದರೆ ವಾಚಕನ ಲಕ್ಷ್ಯ ಕುಂದಿ ಹೋಗುತ್ತಿತ್ತು. ಈ ಕಾರಣವೇ ಸಮುಚ್ಚಾಗಳ ಪ್ರಯೋಗ ಕಾವ್ಯದಲ್ಲಿ ಕಡಿಮೆ.

ಕ್ರಿಸ್ತರ ವ್ಯಕ್ತಿತ್ವ: ಯೇಸುವಿಗೆ ಪಾಪಿ ಮಾನವನ ಮೇಲಿರುವ ಪ್ರೀತಿಯನ್ನು ವ್ಯಕ್ತಪಡಿಸುವ ಗೀತೆಯೆ 'ಯೇಸು ಕ್ರಿಸ್ತ ನಿನಗೆ' ಇದು ಸ್ವರಚಿತ ಗೀತೆಯಾಗಿದ್ದು Meinen Jesum lass'ich nicht ಎಂಬ ರಾಗದಲ್ಲಿದೆ. ಯೇಸು ಇಹಲೋಕವನ್ನು ಗೆದ್ದು ಮಾನವನಿಗೆ ಸನ್‌ಮಾರ್ಗ ತೋರಿಸಿದರು. ಇಹದ ಶತ್ರು ಶಕ್ತಿಯ ವಿರುದ್ಧ ಗೆಲುವನ್ನು ಜಯಿಸಿ ಮುಕ್ತಿಯನ್ನು ಗಳಿಸಿಕೊಟ್ಟರು ಎಂಬ ಆಶಯವನ್ನು ಈ ಗೀತೆ ಹೊಂದಿದೆ

೧೮೪೧ ರಲ್ಲಿನ ಗೀತೆ



೧೯೬೬ ರಲ್ಲಿನ ಗೀತೆ

ಕ್ರಿಸ್ತ, ನೀನು ಮರಳಿ

ಚಿಯೋನಲ್ಲಿ ಸೇರುವಾಗ,

ನಿತ್ಯ ರಾಜ್ಯ ಸ್ಥಾಪಿಸಿ

ತೇಜ ಪೀಠ ವೇರಲಾಗ

ನಿನಗೆಲ್ಲ ಲೋಕವು

ನಮಸ್ಕಾರ ಮಾಡೊದು

ಕನ್ನಡ ಗೀತೆಗಳು, ಗೀತೆ-೧೨


೧೮೪೧ ರಲ್ಲಿ ಗೀತೆಯ ೨ನೇ ಚರಣವು ೧೯೧೩ರ ಗೀತೆಯ ೬ನೇ ಚರಣವಾಗಿದೆ. ಹೋಸಿಯನ್ನ ಎಂಬ ಪದವು ೧೮೪೧ ರ ಗೀತೆಯ ಅನೇಕ ಚರಣಗಳಲ್ಲಿ ಕಾಣುತ್ತೇವೆ. ೧೯೧೩ರ ಗೀತೆಯಲ್ಲಿ ಕೇವಲ ೧ ಬಾರಿ ಬಂದಿದೆ. ಮತ್ತು ಇಲ್ಲಿನ ಒಟ್ಟು ಚರಣಗಳು ೭ ಆದರೆ ೧೮೪೧ ರಲ್ಲಿ ೬ ಚರಣಗಳಿವೆ. ಚರಣಗಳ ಅರ್ಥವೂ ಬದಲಾಗಿದೆ.


ರೂಪಕವಾಗಿ ಉಪಯೋಗವಾದ ನಾಮವಾಚಕಗಳಿಗೆ ಉದಾಹರಣೆ ಯೇಸುವಿನ ಮಹಿಮಾ ಸ್ಥಿತಿಯನ್ನು 'ಪೀಠ' ಎಂದು ಹೇಳಲಾಗಿದೆ.

ಮಾನವ ತನ್ನ ಜೀವನದಲ್ಲಿ ತನ್ನದೇ ಆದ ಇಚ್ಚೆಗೆ, ಆಕಾಂಕ್ಷೆಗಳಿಗೆ, ಆಶಯಗಳಿಗೆ ಮಾರು ಹೋಗಿ ದೇವರ ಕಣ್ಣಿನಲ್ಲಿ ಒಳಿತನ್ನು ತ್ಯಜಿಸಿ, ಸಾಂಸಾರಿಕ ಹಾಗೂ ಲೌಖಿಕ ಜೀವನದ ಸುಖವನ್ನು ಅನುಭವಿಸಲು ಪ್ರಯತ್ನಿಸಿ ನಾವು ನಮ್ಮನ್ನೆ ಕಷ್ಟಕ್ಕೆ ಸಿಲುಕಿಸಿಕೊಳ್ಳುತ್ತೇವೆ. ನಾವು ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತ ಪಟ್ಟು

ದೇವರಲ್ಲಿ ಕ್ಷಮೆಯನ್ನು ಬೇಡಿಕೊಂಡರೆ ದೇವರು ನಮ್ಮನ್ನು ಎಂದೆಂದಿಗೂ ಕೈ ಬಿಡುವುದಿಲ್ಲ ಎಂಬ ಆಶಯವನ್ನು ಹೊಂದಿರುವ ಗೀತೆ "ನನ್ನ ಯೇಸು ಕ್ರಿಸ್ತನೆ"[೭೦] ಇದು ಎಂಬ ರಾಗದಲ್ಲಿದೆ.

೧೮೪೧ ರಲ್ಲಿನ ಗೀತೆ





೧೮೪೧ ರಲ್ಲಿ ಹನ್ನೊಂದು ಚರಣಗಳಿದ್ದು ೧೯೬೮ರ ಗೀತೆಯಲ್ಲಿ ೯ ಚರಣಗಳಿವೆ. ಇಲ್ಲವಾದ ಎರಡು ಚರಣಗಳನ್ನು ಮೇಲೆ ನೀಡಲಾಗಿದೆ. ಈ ಚರಣಗಳ ಆಶಯವು ಬೇರೆ ಚರಣಗಳಲ್ಲಿ ಕಂಡು ಬರುವುದಿಲ್ಲ. ಇವುಗಳು ಅಷ್ಟು ಪ್ರಮುಖವಲ್ಲ ಎಂಬ ಉದ್ದೇಶದಿಂದ ಇವನ್ನು ಬಿಟ್ಟಿರಬಹುದು. ಉಳಿದ ಚರಣಗಳು ಯೇಸು ಇಹಕ್ಕೆ ಬಂದು ಮಾನವ ಕೋಟಿಗೆ ಮಾಡಿದ ನಿಸ್ವಾರ್ಥ ಸೇವೆಯನ್ನು ಪಾಪಿಯನ್ನು ಬಂಧನದಿಂದ ಬಿಡಿಸಿದ ಮಹತ್ಕಾರ್ಯವನ್ನು ತಿಳಿಸುತ್ತದೆ.

ಕ್ರೈಸ್ತರ ಬದುಕು: ಯಾತ್ರಿಕನ ಸಂಚಾರದಲ್ಲಿನ ಗೀತೆಗಳು: ಒಬ್ಬ ಉತ್ತಮ ವ್ಯಕ್ತಿಯ ಜೀವನ ಪಯಣದ ಚಿತ್ರಣ ಆಕರ್ಷಕವಾಗಿ ಮೂಡಿ ಬಂದಿದೆ. ವೈಗಲ್‌ರವರು ಭಾಷಾಂತರಿಸಿದ ಬನ್ನಿಯನ್‌ನ ಯಾತ್ರಿಕನ ಸಂಚಾರ ಎಂಬ ಕೃತಿಯ ಗೀತೆಗಳಲ್ಲಿ.

ಆತ್ಮರಕ್ಷಣೆಗೆ ಮಾಡಿಕೊಳ್ಳುವ ಹಂಬಲವುಂಟಾಗಿ ಪರಿತಪಿಸುತ್ತಿದ್ದ ಕ್ರಿಸ್ತಯ್ಯೆ (ಯಾತ್ರಿಕ)ನಿಗೆ ಒಬ್ಬ ಸುವಾರ್ತಿಕನು ಒಂದು ಓಲೆಯನ್ನು ಕೊಡುತ್ತನೆ. ಆ ಓಲೆಯಲ್ಲಿ ಹೀಗೆ ಬರೆದಿತ್ತು. 'ಮುಂದೆ ಕಾಣ ಬರುವ ದೈವ ಕೋಪದಿಂದ ತಪ್ಪಿಸಿಕೊ (ಮತ್ತಾಯ ೩:೭)' ಆ ವಾಕ್ಯ ಓದಿದ ಕ್ರಿಸ್ತಯ್ಯೆ ಕುತೂಹಲದಿಂದ 'ನಾನು ಎಲ್ಲಿ ಹೋಗಿ ತಪ್ಪಿಸಿಕೊಳ್ಳಲಿ?' ಎಂದಾಗ ಸುವಾರ್ತಿಕ ಅಗೋ ಇಕ್ಕಟ್ಟಾದ ಬಾಗಿಲು ಕಂಡಿಯೊ? (ಮತ್ತು ೭-೧೩:೧೪) ಆ ಮನುಷ್ಯನು ಆ ಇಕ್ಕಟ್ಟಾದ ಬಾಗಿಲನ್ನು ಹುಡುಕುತ್ತಾ ನಡೆಯುತ್ತಾನೆ. ದಾರಿಯಲ್ಲಿ ಲೋಕಜ್ಞಾನಿಯ ಹತ್ತಿರ ಬಂದು ಚರ್ಚಿಸಿ ಅಲ್ಲಿಂದ ಪ್ರಯಾಣ ಮುಂದುವರಿಸುವಾಗ ಲೋಕಜ್ಞಾನದಿಂದ ಸನ್ಮಾರ್ಗ ಹಾನಿ ಎಂದು ಕಂಡುಕೊಳ್ಳುತ್ತಾನೆ.

ಬಹುದೂರದ ಪಯಣದಿಂದ ಇಕ್ಕಟ್ಟಾದ ಬಾಗಿಲಿನ ಸಮೀಪಕ್ಕೆ ಬಂದಾಗ ಆ ಬಾಗಿಲ ಮೇಲೆ 'ತಟ್ಟು ಆಗ ನಿನಗೆ ತೆರೆಯುತ್ತದೆ (ಮತ್ತು ೭:೭)' ಆಗ ಅವನು ಕೆಲವು ಸಾರಿ ತಟ್ಟಿ ಹೇಳಿದ್ದೇನೆಂದರೆ

ಸೇರಲು ಬಹುದೋ ಇದರೊಳು ಕಾವಲ-
ಗಾರನೆ ತೆರೆದೊಡೆ ನೀ ನೆನಗೆ

ಮೀರಿದ ಪಾಪಿಗೆ ನಿತ್ಯವು ಸ್ತೋತ್ರವ

ಸಾರುತ ಪಾಡುವೆನುನ್ನತದಿ

ಯಾತ್ರಿಕನ ಸಂಚಾರ, ಪುಟ–೨೧

ನಾಲ್ಕು ಪಾದಗಳ ಈ ಪದ್ಯದ ಒಂದು ಮತ್ತು ಮೂರನೆಯ ಪಾದಗಳು ೨ ಮತ್ತು ೪ನೇಯ ಪಾದಗಳು ಸಮವಾಗಿವೆ. ಪದ್ಯದ ಪ್ರಥಮ ಚರಣದಲ್ಲಿ ೪ ಮಾತ್ರೆಯ ೪ ಗಣಗಳು ದ್ವಿತೀಯ ಪಾದದಲ್ಲಿ ನಾಲ್ಕು ಮಾತ್ರೆಯ ೩ ಗಣಗಳು ಕೊನೆಗೊಂದು ಗುರು ಬಂದಿರುವುದು ಹೊಸಗನ್ನಡ ಛಂದಸ್ಸಿನ 'ಮುಡಿ' ಯ ಲಕ್ಷಣವನ್ನು ಹೋಲುತ್ತದೆ. ಹಳಗನ್ನಡ (ಶರಷಟ್ಪದಿ) ಛಂದಸ್ಸಿನ ಮೇಲೆ ನಿರೂಪಿತವಾದರೂ ಹೊಸ ಛಂದಸ್ಸಿನ (ಪಾದ ವಿನ್ಯಾಸ) ಮಹತ್ವ ಎದ್ದು ಕಾಣುತ್ತದೆ. ಕನ್ನಡಕ್ಕೆ ವಿಶಿಷ್ಟವಾದ ದ್ವಿತೀಯ ಪ್ರಾಸವನ್ನು ಸಹ ಕಾಯ್ದುಕೊಂಡಿದೆ.

ಕ್ರಿಸ್ತಯ್ಯೆನಿಗೆ ಇಹ ಲೋಕದ ಪಯಣ ಮುಗಿಸಿ ಪರಂಧಾಮ ಸೇರಿ ದೇವರಿಗೆ ಸ್ತೋತ್ರ ಸಲ್ಲಿಸುವ ಬದುಕು ಇಷ್ಟವಾಗಿ ಕಂಡಿತು. ಅದಕ್ಕಾಗಿ ತನ್ನನ್ನೇ ನಿವೇದಿಸಿಕೊಳ್ಳುವ ಭಾವ ಈ ಪದ್ಯದಲ್ಲಿ ವ್ಯಕ್ತವಾಗಿದೆ.

ರಕ್ಷಣೆ ಹೊಂದಿದ ಕ್ರಿಸ್ತಯ್ಯೆ ಕ್ರೂಜೆಯ ಬಳಿಗೆ ಬಂದು ಅವನ್ನು ದೃಷ್ಟಿಸುತ್ತ ನಿಂತನು. ಕ್ರೂಜೆಯು ಆತನಿಗೆ ಸಾಂತ್ವನದ ಸಂಕೇತವಾಯಿತು. ಇದುವರೆಗೂ ತಾನು ಹೊತ್ತು ನಡೆದ ಭಾರವೆಲ್ಲ ಚಿಂತೆ ದು:ಖ ದುಮ್ಮಾನವೆಲ್ಲ ದೂರವಾದ ಅನುಭವವಾಯಿತು. ಸಂತಸದಿಂದ ಇಂತೆಂದು ಹಾಡಿದ

ಪಾಪದ ಹೊರೆಯು ಹೋಯಿತಲ್ಲ

ಪಾಪದ ಹೊರೆಯು ಹೋಯಿತಲ್ಲ

ಶಿಲುಬೆ ಬುಡದಲ್ಲಿ

ಯಾತ್ರಿಕನ ಸಂಚಾರ, ಪುಟ–೩೫

ಪಯಣ ಬೆಳೆಸಿ ಬಹುದೂರ ಸಾಗಿದ ಪಯಣಿಗ (ಕ್ರಿಸ್ತಯ್ಯೆ) ಶಾಂತಿ ವಿಲಾಸದಲ್ಲಿ ತಂಗುತ್ತಾನೆ. ಸೂರ್ಯೋದಯದಿಂದ ಪರ್ಯಂತ ನಿದ್ರೈದು ಆ ಮೇಲೆ ಎಚ್ಚತ್ತು ಆತ್ಮ ಸಂತೋಷದಿಂದ ದೇವರನ್ನು ಸ್ತುತಿಸಿ ಹಾಡ ತೊಡಗಿದ.

ಬಂದೆನು ನಾ ಪರಲೋಕದ ಹತ್ತಿರ

ಹೊಂದಿದೆ ಪಾಪದ ಪರಿಹರವ ॥

ಕುಂದಿದ ಯಾತ್ರಿಕ ಜನರಿಗೆ ಸೌಖ್ಯವ

ತಂದಿಹ ಯೇಸುವ ಪೊಗಳುವೆನು

ಯಾತ್ರಿಕನ ಸಂಚಾರ, ಪುಟ–೫೧

ಶತೃವಿನ ವಿರುದ್ಧ ಹೋರಾಡಿ ಜಯಗಳಿಸಲು ಶಕ್ತಿ ನೀಡಿದ ದೇವರಿಗೆ ಸ್ತುತಿಸಿ ಹಾಡಿದ ಇನ್ನೊಂದು ಗೀತೆ.

ನರಕದಧಿಪತಿಯಾಜ್ಞೆ ಇಂದಿವ
ನುರಿವ ರೋಷದೊಳೀಗಲೆನ್ನನು
ಮುರಿದು ಕೆಡಿಸುವೆನೆಂಬ ಯೋಚನೆಗೈದು ಬಂದಿರಲು ॥
ಕುರಣೆಯಾಗಿಹ ದೇವದೂತನ
ವರ ಸಹಾಯದಿ ಗೆಲದೆನಹಿತನ
ನಿರಿದು ಖಡ್ಗದೊಳಾಗಲೀ ಸ್ತುತಿ ಜಯವನಿತ್ತವಗೆ

ಯಾತ್ರಿಕನ ಸಂಚಾರ, ಪುಟ–೫೯

ಕ್ರೈಸ್ತಯ್ಯೆ ಪ್ರಯಾಣದ ಸಮಯದಲ್ಲಿ 'ಜೀವಜಲನಿಧಿ' (ಕೀರ್ತನೆ ೬೫:೯) ಯ ಸಮೀಪಕ್ಕೆ ಬಂದನು. ನದಿಯ ಇಕ್ಕೆಲಗಳಲ್ಲಿ ಸಕಲ ವಿಧವಾದ ಫಲವನ್ನು ಕೊಡುವ ಹಸುರಾದ ವೃಕ್ಷಗಳು ಅವುಗಳ ಎಲೆಗಳು ಪ್ರಯಾಣಸ್ಥರಿಗೆ ಬರುವ ನಾನಾ ವಿಧವಾದ ಕಾಯಿಲೆಗಳಿಗೆ ಔಷಧಿ ನೀಡುವುದಾಗಿತ್ತು. ಬಗೆ ಬಗೆಯ ಹೂಗಳಿಂದ ಅಲಂಕೃತವಾದ ಸರ್ವದಾ ಹಚ್ಚ ಹಸುರಾದ ಬೈಲುಗಳಿದ್ದವು. ಇಲ್ಲಿನ ಮರಗಳ ಹಣ್ಣುಗಳನ್ನು ಕಿತ್ತು ತಿಂದು ನದಿಯ ನೀರನ್ನು ಕುಡಿದು ವಿಶ್ರಾಂತಿ ಪಡೆದು ಸಂತೃಪ್ತರಾಗಿ ಹೀಗೆಂದು ಹಾಡಿದರು.

ನದಿಯ ನೀರಲೆ ಮಧುರವಾಗಿಹು–
ದಿದರ ತೀರದಿ ಬೆಳೆದ ಮರಗಳ
ತುದಿಯೊಳಿರುತಿಹ ಕಾಯಿ ಪಣ್ಗಳು ಪುಷ್ಪ ಪತ್ರಗಳು ॥
ಮುದದಿ ಹಬ್ಬಿದ ಲತೆಯ ಗುಂಪುಗಳ
ಳೊದಗಿಸುವ ವಿಷ್ಟಾರ್ಥವನು ಜನ
ರಿದರ ಭೋಗಕೆ ಇತರವೆಲ್ಲವ ಬಿಟ್ಟು ಬಿಡದಿಹರೆ

ಯಾತ್ರಿಕನ ಸಂಚಾರ, ಪುಟ–೧೦೮

ಕನ್ನಡದ ಆದಿ ಅಥವಾ ದ್ವಿತೀಯ ಪ್ರಾಸವನ್ನು ಉಳಿಸಿಕೊಂಡು ಭಾಮಿನಿ ಷಟ್ಪದಿಯಲ್ಲಿ ಬರೆದ ಆದ್ಯ ಕ್ರೈಸ್ತರ ಪ್ರಾರಂಭದ ದೇಶೀ ಶಿಲ್ಪದ ರಚನೆಗೆ ನಿದರ್ಶನವೆನಿಸಿದೆ.

ಬದುಕೆಂಬ ಪಯಣದಲ್ಲಿ ಅನುಭವಿಸುವ ಕಷ್ಟ ಸುಖಗಳಲ್ಲಿ ಸಮಚಿತ್ತವನ್ನು ಕಾಣಬೇಕಾದರೆ ದೇವರ ವಾಕ್ಯಗಳಲ್ಲಿ ನಾವು ಬೇರೂರಬೇಕು. ಅಲ್ಲಿಯೇ ನಿಜವಾದ ಚೇತನದ ಶಕ್ತಿ ದೊರೆಯುತ್ತದೆ ಎಂಬ ಅನುಭವಕ್ಕೆ ಕೊಂಡೊಯ್ಯುತ್ತದೆ. ಈ ಯಾತ್ರಿಕನ ಸಂಚಾರದ ಗೀತೆಗಳು.

ಆತ್ಮ ನಿವೇದನೆ: ಮಾನವನಾಗಿ ಜನಿಸಿದ ಪ್ರತಿಯೊಬ್ಬ ಜೀವಿಗೂ ಒಂದಲ್ಲ ಒಂದು ರೀತಿಯ ಸಮಸ್ಯೆಗಳು ಇದ್ದೇ ಇರುತ್ತವೆ. ಆಂತರಿಕ ನೋವು, ಚಿಂತೆ, ಕಷ್ಟ, ಸಂಕಟಗಳು ಮಾನವನ ಜೀವನಟನ್ನು ಕಾಡುತ್ತಲೇ ಇರುತ್ತದೆ. ಈ ಎಲ್ಲಾ ಸಮಸ್ಯೆಗಳಿಂದ ಕಂಗಾಲಾಗಿ ಕೆಲವೊಮ್ಮೆ ಜೀವನವೇ ಬೇಡ ಎಂಬ ತೀರ್ಮಾನಕ್ಕೆ

ಬರುತ್ತಾರೆ. ಇಂತಹ ಅಸಾಹಾಯಕ ಸಂದರ್ಭಗಳಲ್ಲಿ ಅನಂತ ಪ್ರೀತಿಯನ್ನು ಹೊಂದಿದ ದೇವರೆಡೆಗೆ ತಿರುಗಿ ತನ್ನ ರಕ್ಷಣೆಗಾಗಿ ಬೇಡುತ್ತಾನೆ ಭಕ್ತ. ಯೆಶಾಯ ಪ್ರವಾದಿಯ ಗ್ರಂಥದಲ್ಲಿ "ಯುವಕರು ಕುಣಿದು ಬಳಲುವರು, ತರುಣರು ಸೊರಗಿ ಮುಗರಿಸುವರು, ಸರ್ವೇಶ್ವರನ್ನು ಎದುರು ನೋಡುವವರು ಹೊಸ ಚೇತನವನ್ನು ಹೊಂದುವರು"[೮೧] ಎಂದು ಬರೆದಿದೆ. ದೇವರಲ್ಲಿ ಆಶ್ರಯಿಸಿದ್ದೆ ಆದರೆ ಆತ ಬಂಧನದಿಂದ ಬಿಡಿಸುವನು ಎಂಬ ಸಂದೇಶವನ್ನು ನನ್ನ ದಯೆಯುಳ್ಳ ಮಿತ್ರ[೮೨] ಎಂಬ ಗೀತೆಯಲ್ಲಿ ಕಾಣುತ್ತೇವೆ. ಇದು Auf dich sehich mit dis geh ich ಎಂಬ ರಾಗದಲ್ಲಿದೆ.

ದೇವರು ಸರ್ವಶಕ್ತರು, ಸಕಲ ಸೃಷ್ಟಿಯ ಒಡೆಯರು, ಭೂಪರಗಳ ರಾಜರು, ಇಂತಹ ಶಕ್ತಿಯುತ ದೇವರಲ್ಲಿ ನಿವೇದಿಸಿಕೊಂಡಾಗ ನಮ್ಮ ಬೇಡಿಕೆಗಳು ಈಡೇರುತ್ತವೆ. ಇದರಿಂದ ದೇವರೊಂದಿಗೆ ಆತ್ಮೀಯ ಸಂಬಂಧ ಬೆಳೆಸಿಕೊಳ್ಳುತ್ತೇವೆ. ಆತನಲ್ಲಿ ವಿಶ್ವಾಸವಿಟ್ಟು ಅವರೇ ನಮ್ಮ ಬಾಳಿನ ಗುರು, ರಕ್ಷಕ ಮತ್ತು ಅದ್ಭುತ ಶಕ್ತಿ ಎಂದು ನಂಬಿಕೆಯನ್ನು ಅವರ ಚಿತ್ತದಂತೆ ನಡೆದದ್ದೇ ಆದರೆ ಜೀವನ ಪಾವನವಾಗುವುದು ಎಂಬ ಸಂದೇಶವನ್ನು 'ಪ್ರಿಯ ರಕ್ಷಕಾ' ಎಂಬ ಗೀತೆ ನೀಡುತ್ತದೆ. ಇದು War ist wohl wie du ಎಂಬ ರಾಗದಲ್ಲಿದೆ.

ಪ್ರಿಯ ರಕ್ಷಕಾ	ಧೂಳಿಯಲ್ಲಿ ಮುಳ್ಗುತೇವೆ
ಕೃಪೆಯಿಂದ ಬಾ!	ಕರ್ತ ನಮ್ಮನು
ಪಾಪದಲ್ಲಿ ಬಿದ್ದಿದ್ದೇವೆ	ಶಾಂತಿ ಪಡಿಸು!

ಕನ್ನಡ ಗೀತೆಗಳು, ಗೀತೆ–೨೨೮

ಕ್ರಿಯಾ ಪದವನ್ನು ರೂಪಕವಾಗಿ ಬಳಸಿರುವುದಕ್ಕೆ ಉದಾ: ಧೂಳಿಯಲ್ಲಿ ಮುಳ್ಗುತ್ತೇವೆ. ಅಂದರೆ ಬಿದ್ದು ಕಾಣದೆ ಹೋಗುತ್ತೇವೆ.

ಸ್ತುತಿ: ಸ್ತುತಿಗೆ ಸಂಬಂಧಿಸಿದ ವೈಗಲ್‌ರ ಗೀತೆ 'ಎಲ್ಲಾನು ಭೋಗಿಸಿ' ಎಂಬ ಗೀತೆ. ಇದು Nun danket allc Gott ಎಂಬ ಗೀತೆಯ ಭಾಷಾಂತರವಾಗಿದೆ. ಇದನ್ನು ಮಾರ್ಟಿನ್ ರಿಂಕಾರ್ಟ್ ಎಂಬಾತನು ಜರ್ಮನ್ ಭಾಷೆಯಲ್ಲಿ ರಚಿಸಿದನು. ಶ್ರೀಮತಿ ಕ್ಯಾಥರಿನ್ ವಿಂಕ್‌ವರ್ತ ಎಂಬಾಕೆಯು ಆಂಗ್ಲ ಭಾಷೆಯ ತರ್ಜುಮೆ ಮಾಡಿದರು.

ಈ ಗೀತೆಯ ಮೂಲ ಕವಿಯ ಜೀವನದತ್ತ ಗಮನ ಹರಿಸುವುದು ಸೂಕ್ತವಾಗಿದೆ. ಮಾರ್ಟಿನ್ ರಿಂಕಾರ್ಟ್ ಐಲೆನ್ಬರ್ಸ್ ಎಂಬೂರಿನಲ್ಲಿ ೧೫೮೬ ರಲ್ಲಿ ಜನಿಸಿದ ಒಬ್ಬ ಬಡ ವ್ಯಕ್ತಿ. ಈತನ ತಂದೆಯು ತಾಮ್ರದ ಕೆಲಸ ಮಾಡುತ್ತಿದ್ದನು. ಈ ಬಾಲಕನು ಲೀಪ್‌ಜಿಗ್ ಪಟ್ಟಣದ ಸೆಂಟ್ ಥಾಮಸ್ ಶಾಲೆಯಲ್ಲಿ ಉತ್ತಮ ವಿದ್ಯಾರ್ಥಿಯಾಗಿದ್ದು ಅದೇ ಶಾಲೆಯಲ್ಲಿ ಉಪಾಧ್ಯಾಯ ವೃತ್ತಿಯನ್ನು ಮಾಡಿಕೊಮಡಿದ್ದನು. ಈತನು ವೇದ ಜ್ಞಾನದಲ್ಲಿ ನಿಪುಣನು. ೧೬೧೧ ರಲ್ಲಿ ಅದೇ ಐಲ್‌ನ್ಬರ್ಗ್ ನಲ್ಲಿ ಸಭಾ ಪಾಲಕನಾದನು. ಈ ಪಟ್ಟಣವು

ಸುತ್ತಲೂ ಪಾಳಿಗೋಡೆಯಿಂದ ಆವರಿಸಲ್ಪಟ್ಟು ಬಲವಾಗಿತ್ತು. ಆ ಕಾಲದಲ್ಲಿ ೩೬ ವರ್ಷಗಳ ಯುದ್ಧವು ನಡೆಯುತ್ತಿತ್ತು. ಆದುದರಿಂದ ದೇಶದ ನಾನಾ ಕಡೆಗಳಿಂದ ಅನೇಕಾನೇಕರು ಈ ಪಟ್ಟದೊಳಗೆ ಬಂದು ಆಶ್ರಯ ತೆಗೆದುಕೊಳ್ಳುತ್ತಿದ್ದರು. ಅದರ ದೆಸೆಯಿಂದ ಊಟಕ್ಕೆ ಬಹಳ ಕ್ಷಾಮ ಉಂಟಾಯಿತು. ಜನರು ತಂಡೋಪ ತಂಡವಾಗಿ ಪಟ್ಟಣದೊಳಕ್ಕೆ ಸೇರಿ ಬಂದುದರ ಪರಿಣಾಮವಾಗಿ ಮರಣಗಳ ಸಂಖ್ಯೆ ದಿನೇದಿನೇ ಹೆಚ್ಚುತ್ತಲೇ ಇತ್ತು. ಇದ್ದ ಬೋಧಕರೆಲ್ಲರೂ ಮರಣವಾದರು. ರಿಂಕಾರ್ಟ್ ಬೋಧಕನೊಬ್ಬನು ಮಾತ್ರ ಉಳಿದಿದ್ದನು. ದಿನಕ್ಕೆ ಸುಮಾರು ೪೦-೫೦ ಶವಗಳನ್ನು ಭೂ ಸ್ಥಾಪನೆ ಮಾಡಬೇಕಾಯಿತು. ಆತನೊಬ್ಬನೇ ಸುಮಾರು ೪,೪೮೦ ಹೆಣಗಳ ಸಂಸ್ಕಾರಗಳನ್ನು ನೆರವೇರಿಸಬೇಕಾಯಿತು. ಇದೇ ಕಾದಲ್ಲಿ ಆತನ ಧರ್ಮಪತ್ನಿಯೂ ತೀರಿಹೋದಳು. ಆತನಲ್ಲಿದ್ದ ಹಣ, ದೇಹಶಕ್ತಿಯು ಕ್ರಮೇಣ ಕಡಿಮೆಯಾಗುತ್ತ ಬಂದವು. ಕೃತಜ್ಞತೆಗಾಗಿ ರಿಂಕಾರ್ಟ್ ಬೋಧಕರು ಈ ಸಂಗೀತವನ್ನು ರಚಿಸಿದರಂತೆ ಮೊಟ್ಟ ಮೊದಲು ಈ ಸಂಗೀತವನ್ನು ಊಟಕ್ಕೆ ಮುಂಚೆ ಪ್ರಾರ್ಥನೆಯನ್ನಾಗಿ ಹಾಡುತ್ತಿದ್ದರಂತೆ. ಆಮೇಲೆ ಯುದ್ಧಗಳು ನಿಂತು ಶಾಂತಿ ಸ್ಥಾಪನೆಯಾಗುವ ಸಂದರ್ಭಗಳಲ್ಲಿ ಈ ಸಂಗೀತವನ್ನು ಹಾಡುವುದು ರೂಢಿಯಲ್ಲಿದೆ. ಕೆಲವು ವರುಷಗಳ ಹಿಂದೆ ಬ್ರಿಟೀಷರಿಗೂ ದಕ್ಷಿಣ ಆಫ್ರಿಕಾದವರಿಗೂ ಯುದ್ಧ ನಡೆದು ಶಾಂತಿಯಾದಾಗ ಸೆಂಟ್ ಪಾಲ್ಸ್ ಕತೀಡ್ರಲ್ ಎಂಬ ದೊಡ್ಡ ದೇವಾಲಯದಲ್ಲಿ ನಡೆದ ಕೃತಜ್ಞತಾರಾಧನೆಯಲ್ಲಿ ಈ ಸಂಗೀತವು ಹಾಡಲಾಯಿತು. ರಿಂಕಾರ್ಟ್ ಬೋಧಕರು ೧೬೪೯ ರಲ್ಲಿ ತೀರಿಕೊಂಡರು. ದೇವರ ಪರಿಪಾಲನೆಯನ್ನು ವ್ಯಕ್ತಿಪಡಿಸುವ ಈ ಸಂಗೀತವನ್ನು ಈಗಲೂ ಅನೇಕ ಸಭೆಗಳಲ್ಲಿ ಸುಗ್ಗೀ ಹಬ್ಬ ಮುಂತಾದ ಉತ್ಸವಗಳಲ್ಲಿ ಹಾಡುತ್ತಿರುತ್ತಾರೆ.

ತಾಯಿ ಗರ್ಭದಿಂದಲೂ ಅನೇಕಾನೇಕ ವರಗಳನ್ನು ನೀಡಿ ಕಾಪಾಡುವ ದೇವರಿಗೆ ಕೃತಜ್ಞತೆಯುಳ್ಳವರಾಗಬೇಕು. ದೇವರು ನಮ್ಮನ್ನುಂಟು ಮಾಡಿ ಪರಿಪಾಲನೆ ಮಾಡುತ್ತಿರುವ ಆತನ ಶಕ್ತಿ, ಪ್ರೀತಿ, ಮಹಾಶಾಂತಿ, ಮುಂದಾಲೋಚನೆ ಇವುಗಳನ್ನು ನಾವು ನೆನೆದು ದೇವರಿಗೆ ವಂದನೆ ಸಲ್ಲಿಸಬೇಕು ಎಂಬ ಆಶಯವನ್ನು ಈ ಗೀತೆ ಹೊಂದಿದೆ. ಗೀತಗಾರ ಉದಾರಿಯಾದ ದೇವರಿಗೆ ತನ್ನ ಅಪೇಕ್ಷೆಯನ್ನು ತಿಳಿಸುತ್ತಿರುವುದು ಈತನಿಗೆ ದೇವರ ಕೃಪೆಯಲ್ಲಿರುವ ವಿಶ್ವಾಸವನ್ನು ತೋರಿಸುತ್ತದೆ.

ಎಲ್ಲಾನು ಭೋಗಿಸಿ	ನಮ್ಮನ್ನು ರಕ್ಷಿಸಿ
ದಯಾಳು ಕರ್ತನಿಂದ	ತಾಯ್ಗರ್ಭದಿಂದಲೇ
ಕೃತಜ್ಞರಾಗಿರಿ	ಸಹಸ್ರವರವ
ಮನೋವಾಕ್ಕಾಯದಿಂದ!	ಕೊಟ್ಟವನಾತನೇ!

ಕನ್ನಡ ಗೀತೆಗಳು, ಗೀತೆ-೩೧೪

ಕೃತಜ್ಞತೆ: ಕೃತಜ್ಞತೆಯು ಪ್ರಾಮುಖ್ಯವಾದ ಕ್ರೈಸ್ತ ಗುಣಗಳಲ್ಲೊಂದು. ಮಾನವನು ಹಿಂದಿನ ಕಾಲದಲ್ಲಿ ತನಗೆ ಲಭ್ಯವಾದ ಶುಭಗಳನ್ನು ಸ್ಮರಿಸಿಕೊಳ್ಳುವಾಗ ಅವನ ಮನಸ್ಸು ದೇವರ ಕಡೆಗೆ ತಿರುಗುತ್ತಿತ್ತೆಂಬುದು ಇದರಿಂದ ವ್ಯಕ್ತವಾಗುತ್ತದೆ (ಇಬ್ರಿ ೩:೧೫) ಹೊಸಒಡಂಬಡಿಕೆಯಲ್ಲಿ ಸಾಧಾರಣವಾಗಿ ಇದನ್ನು ಕೊಂಡಾಡು.

ಸ್ತೋತ್ರಮಾಡು ಎಂಬ ಮಾತುಗಳಿಂದ ಪ್ರಕಾಶಪಡಿಸಿದೆ. ಊಟಕ್ಕೆ ಮುಂಚೆ ಮಾಡುವ ಪ್ರಾರ್ಥನೆಯಲ್ಲಿ ಇದು ಆಗಾಗೆ ಪ್ರಯೋಗವಾಗಿದೆ (ಮತ್ತಾ ೧೫:೩೬) ಇದರ ಪದವು ಗ್ರೀಕ್ ಭಾಷೆಯಲ್ಲಿ 'ಯೂಕರಿಸ್ಟಿಯೋ' ಈ ಪದದಿಂದ ಕರ್ತನ ರಾತ್ರಿ ಭೋಜನಕ್ಕೆ ಕೊಡಲ್ಪಟ್ಟಿರುವ ಹೆಸರುಗಳಲ್ಲಿ ಒಂದಾಗಿರುವಂಥಾ ಸ್ತೋತ್ರವನರ್ಪಿಸುವುದು ಎಂಬೀ ಅರ್ಥವುಳ್ಳಂಥಾ ಯೂಕರಿಸ್ಟ್ ಎಂಬ ಹೆಸರು ಬಂದಿರುತ್ತದೆ.

ಸ್ತುತಿಗೆ ಸಂಬಂಧಿಸಿದಂತೆ ವೈಗಲರು ರಚಿಸಿದ ಮತ್ತೊಂದು ಗೀತೆ 'ಕ್ರಿಸ್ತೈಸು ನೀತಿ ಸೂರ್ಯನೆ' ಇದು O Jesus Christ, Mein's Lebens Lioht ಎಂಬ ರಾಗದಲ್ಲಿದೆ. ಸಂಜಾವೇಳೆಯಲ್ಲಿ ದೇವರ ಅನಂತ ವರಗಳನ್ನು ಧ್ಯಾನಿಸಿ ಆತನಿಗೆ ಸ್ತುತಿ ಸಲ್ಲಿಸುವ ಭಕ್ತಿ ದೇವರಲ್ಲಿ ಪ್ರತಿ ದಿನವೂ ಬೆಳಗಾಗಲು ನಿನ್ನನು ಸ್ತುತಿಸುವೆವು ಎಂದು ತನ್ನ ಇಚ್ಛೆಯನ್ನು ವ್ಯಕ್ತಪಡಿಸಿದ್ದಾನೆ.

ನಮ್ಮನ್ನು ಕಾಯಿ ಕ್ರಿಸ್ತನೇ!
ನೀನೆಮ್ಮ ಭದ್ರ ದುರ್ಗವೇ!
ಮುಂಜಾನೆ ಎಚ್ಚರಾಗಲು
ನಿನ್ನನ್ನು ಸ್ತುತಿಸುವೆವು

ಕನ್ನಡ ಗೀತೆಗಳು, ಗೀತೆ–೩೩೮

ರೂಪಕವಾಗಿ ಉಪಯೋಗವಾದ ನಾಮವಾಚಕಗಳಿಗೆ ಉದಾಹರಣೆಯಾಗಿದೆ 'ಭದ್ರದುರ್ಗ' ಎಂಬುದು. ಯೇಸುವಿನ ಪ್ರೀತಿದಯಾದಿಗಳಿಗೆ 'ಭದ್ರದುರ್ಗ' ಎಂದು ಹೇಳಲಾಗಿದೆ.

ಪ್ರಾಕ್ಕಾವ್ಯಮಾಲಿಕೆಯಲ್ಲಿ ಸ್ತುತಿಗೆ ಸಂಬಂಧಿಸಿದ ಗೀತೆ: ಸ್ತುತಿ ಸ್ತೋತ್ರಗಳಿಗೆ ಯೋಗ್ಯನಾದವನೆ ದೇವರು. ಆತನನ್ನು ಎಲ್ಲ ವಾದ್ಯಗಳಿಂದಲೂ ಕೊಂಡಾಡಬೇಕು ಎಂಬ ಆಶಯವನ್ನು ಹೊಂದಿದೆ. ಸ್ತೋತ್ರಮನುತ್ತಮ ದೇವರಿಗರ್ಪಿಸ ಬರ್ರಿ! ಎಂಬ ಗೀತೆ. ಇದು Lobe den Herren den machtigen k onig der shreb ಎಂಬ ಜರ್ಮನ್ ಗೀತೆಯ ಭಾಷಾಂತರವಾಗಿದೆ.

ಪ್ರಾಕ್ಕಾವ್ಯ ಮಾಲಿಕೆಯಲ್ಲಿನ ಗೀತೆ	**೧೯೬೬ ರಲ್ಲಿನ ಗೀತೆ**
ಸ್ತೋತ್ರಮನತ್ತಮ ದೇವರಿಗರ್ವೆಸ ಬರ್ರಿ!	ಸ್ತೋತ್ರವನುತ್ತಮ ದೇವರಿಗರ್ಪಿಸ ಬನ್ನಿ
ವೀಣೆಯ ಗಾಯನವೇ! ಸಮುದಾಯವ ಕರಿ!	ಊರ್ಧ್ವನಿ ಕರ್ತಗೆ ಮಹಿಮೆ
ದೂತರೊಳೂ	ಯಾಗಲಿ ಅನ್ನಿ!
ಕೀರ್ತನೆ ಏಳಲಿಯೂ!	ಹರುಷದಿ
ಸ್ತೋತ್ರ ಸುಗಂಧವ ತರ್ರಿ	ದೂತರ ಸಂಘದಲಿ
ಪ್ರಾಕ್ಕಾವ್ಯ ಮಾಲಿಕೆ,೧೮೬೮, ಗೀತೆ–೧೬೩	ಸ್ತೋತ್ರ ಸುಗಂಧವೆ ತನ್ನಿ!

ಪ್ರಾಕ್ಕಾವ್ಯಮಾಲಿಕೆಯಲ್ಲಿನ ಗೀತೆಯ ಬರ್ರಿ, ವೀಣೆಯ ಗಾಯನವೇ, ದೂತರೊಳ್ಳಿ ಎಂಬ ಪದಗಳು ಕ್ರಮವಾಗಿ ತನ್ನಿ, ಊರ್ಧ್ವದಿ ಕರ್ತಗೆ ಮಹಿಮೆ, ದೂತರ ಸಂಘದಲಿ ಎಂದು ಬದಲಾಗಿದೆ. ವಿಷಮ ಚರಣದ ಈ ಗೀತೆ ಅಂತ್ಯ ಪ್ರಾಸವನ್ನು ಅಲ್ಲಲ್ಲಿ ಕಾಣುತ್ತೇವೆ. ನಮ್ಮ ಮಾತ್ರಾಗಣದ ಲೆಕ್ಕವು ಇದಕ್ಕೆ ಹೊಂದುವುದಿಲ್ಲ.

ಯೇಸುವಿನ ಯಾತನೆಗೆ ಸಂಬಂಧಿಸಿದ ಗೀತೆಗಳು: ಯೇಸುವಿನ ಬಾಧೆಗಳನ್ನು ಅಥವಾ ಯಾತನೆಯನ್ನು ಅನುಭವಿಸಿ ಮರಣ ಹೊಂದಿದ ಗೊಲ್ಗೊಥ ಗಿರಿಯನ್ನು ಕುರಿತು ವರ್ಣಿಸುವ ಗೀತೆಯೆ 'ನಾನ್ ಊರು, ಗ್ರಾಮ, ವಿಷಯ' ಎಂಬುದು ಇದು Lobt Gott ihr christen, alle gleich ಎಂಬ ರಾಗದಲ್ಲಿದೆ.

೧. ನಾನ್ ಊರು, ಗ್ರಾಮ ದೇಶವ
ಸಂಚಾರ ಮಾಡಲು
ಯೆರೊಸಲೇಮ ನಗರ
ನಿನ್ನೆಷ್ಟು ತಪ್ಪದು!

೨. ಆ ಹಿಮವಂತ ಹೆರ್ಮೊ
ಗಿಲ್ಯಾದು, ಯೆರಿಖೋ
ಬೆಥ್ಲೇಮ, ಬೈಲು, ಕಾನವು
ಕಣ್ಗಿಂಪು ಅಲ್ಲಿವೋ!

ಕನ್ನಡ ಗೀತೆಗಳು, ಗೀತೆ–೮೪

ಯೇಸುವು ತನ್ನ ಪ್ರಾಣವನ್ನು ಮಾನವ ಕೋಟಿಗೆ ಅರ್ಪಿಸಿದ ಗೋಲ್ಗಥ ಗಿರಿಯು ಆ ನಾಡಿನ ಎಲ್ಲ ಪಟ್ಟಣಕ್ಕಿಂತಲೂ ಶ್ರೇಷ್ಠವಾದದ್ದು ಎನ್ನುತ್ತಾನೆ. ಯೆರುಸಲೇಮ್ ಉತ್ಕೃಷ್ಟ ಪಟ್ಟಣ ಎಂದು ಹೇಳುತ್ತ ಅಲ್ಲಿರುವ ಯೆರಿಖೋ, ಬೆಥ್ಲೇಮ್, ಗೆನೇಜರೇತ್ ಈ ಎಲ್ಲ ಸ್ಥಳಗಿಂತಲೂ ಅಲ್ಲಿರುವ ಬೆಟ್ಟ ಬಯಲುಗಳಿಗಿಂತಲು ಶ್ರೇಷ್ಠವಾದದ್ದು 'ನನ್ನೀಶ ಘೋರ ವೇದನೆ ತಾಳಿದ್ದ ಸ್ಥಳವು' ಎನ್ನುತ್ತ ಜಗತ್ಸಂಜೀವನ ಹುಟ್ಟಿಬಂದ ಇಪ್ಪೆಗುಡ್ಡ ಗೋಲ್ಗಥಗಳು ಪವಿತ್ರ ಎಂದು ಹೇಳುತ್ತಾರೆ.


ಯೇಸುವಿನ ಪುನರುತ್ಥಾನಕ್ಕೆ ಸಂಬಂಧಿಸಿದ ಗೀತೆಗಳು: ಯೇಸುವಿನ ಪುನರುತ್ಥಾನಕ್ಕೆ ಸಂಬಂಧಿಸಿದಂತೆ ವೈಗಲ್‌ರವರು ರಚಿಸಿದ ಗೀತೆಯೇ 'ಕ್ರಿಸ್ತೈಸು ಜೀವರಾಜನೆ' ಎಂಬುದು. ಇದು Mein Glaub ist meines Lebens Ruh ಎಂಬ ಗೀತೆಯ ಭಾಷಾಂತರವಾಗಿದೆ. ಯೇಸುವಿನ ಪುನರುತ್ಥಾನ ಜಗತ್ತಿಗೆ ಹೊಸತನವನ್ನು ತಂದಿದೆ ಎಂದು ಗೀತಗಾರ ಇಲ್ಲಿ ಹೇಳಿದ್ದಾನೆ.

ಕಡೇಲಿ ಸರ್ವ ಲೋಕಕು | ಅಸಂಖ್ಯ ಜನಗಣವು
ವಸಂತ ಕಾಲ ಬಪ್ಪುದು | ಆವಾಗಲೆಚ್ಚ ತೇಳ್ವದು
ದಿವ್ಯಾತ್ಮ ತ್ರಾಣದಿಂದ | ಭೂಗರ್ಭ ಕೋಣೆಯಿಂದ

ವಸಂತ ಕಾಲ ಪ್ರಕೃತಿಯ ಸೌಂದರ್ಯತೆಯನ್ನು ಪ್ರತಿನಿಧಿಸುವ ಕಾಲ. ಎಲ್ಲಿ ನೋಡಿದರತ್ತ ನಮ್ಮ ಕಣ್ಮನಗಳು ಹೂ ಗಿಡಗಳಿಂದ ಆಕರ್ಷಿತವಾಗಿ ಹರ್ಷವನ್ನುಂಟು ಮಾಡುತ್ತದೆ. ಇದು ನಿಸರ್ಗದಲ್ಲಿ ಉಂಟಾದ ಬದಲಾವಣೆ. ಆದರೆ ಬದುಕಿನಲ್ಲಿ ವಸಂತಕಾಲದ ಅನುಭವ ಕವಿಗೆ ಉಂಟಾಗಿರುವುದು ಯೇಸುವಿನ ಪುನರುತ್ಥಾನದಿಂದ ಎಂದು ಕವಿ ಹೇಳಿದ್ದಾನೆ. ಅಸಂಖ್ಯ ಭಕ್ತರಿಗೆ ಪಾಪದಿಂದ ವಿಮುಕ್ತಿ ದೊರೆತು ಸ್ವರ್ಗದಾನಂದವನ್ನು ಅನುಭವಿಸಲು ಸಾದ್ಯವಾದ ಸಂದರ್ಭ ಇದಾಯಿತೆಂದು ಹೇಳುತ್ತಾನೆ. ಪುನರುತ್ಥಾನದ ಘಟನೆಯನ್ನು ನಿಸರ್ಗದಲ್ಲಿ ನಡೆಯುವ ವಸಂತ ಕಾಲದ ಅನುಭವಕ್ಕೆ ಹೋಲಿಸುತ್ತ ಪುನರುತ್ಥಾನದ ಅನುಭವವನ್ನು ಅರ್ಥೈಯಿಸಲು ಕವಿ ತೆಗೆದುಕೊಂಡ ಹೋಲಿಕೆ ಸಮಂಜಸವಾಗಿದೆ.

ಈ ಗೀತೆಯು ೧೮೪೧ ರಲ್ಲಿ ೫ ಚರಣಗಳನ್ನು ಹೊಂದಿದೆ. ೧೯೧೩ರ ಗೀತೆಯಲ್ಲಿ ಎರಡನೆ ಚರಣವು ಇಲ್ಲವಾಗಿದೆ. ಬಿಟ್ಟು ಹೋದ ಚರಣ ಇಂತಿದೆ. ಬೇರೆ ಚರಣಗಳಲ್ಲಿ ಪುನರುತ್ಥಾನದ ಕುರಿತಾದ ವರ್ಣನೆಯನ್ನು ಸಮರ್ಥವಾಗಿ ವರ್ಣಿಸಲು ಯಶಸ್ವಿಯಾದ್ದರಿಂದ ಈ ಚರಣವನ್ನು ಬಿಟ್ಟಿರಬಹುದು.

೧೮೪೧ ರಲ್ಲಿನ ಗೀತೆ



ಛಂದಸ್ಸು: ವೈಗಲ್‌ರವರ 'ಯಾತ್ರಿಕನ ಸಂಚಾರ' ಕೃತಿಯಲ್ಲಿ ಭಾಮಿನಿ ಷಟ್ಪದಿಯಲ್ಲಿ ಗೀತೆ ರಚಿಸಿರುವುದನ್ನು ಕಾಣುತ್ತೇವೆ.

ಕಂಡೆ ನಾವಪರೂಪ ನೋಟವ
ಕಂಡೆ ನಾನುಪಯೋಗ ಕಾರ್ಯವ
ಕಂಡೆನತಿ ಸಂತೋಷ ಭಯಗಳನುಂಟು ಮಾಡುತಿರೇ!

ಕಂಡೆನೆನ್ನನು ನಿಲಿಸುವದಿ ಮುಂ-

ಗೊಂಡ ಕೆಲಸದಿ ನಿತ್ಯ ನೆನವುತ

ಮಂಡೆಯನು ಬಾಗಿಸುವೆನವುಗಳ ತೋರಿದ್ಯೆ ಪ್ರಿಯನೆ ॥

ಯಾತ್ರಿಕನ ಸಂಚಾರ, ಪುಟ-೩೪

__ U / __ UU / __ U / __ UU /

__ U / __ UU / __ U / __ UU

__ U / UU __ / __ U / UUUU / __ U / __ UU / __

__ U / __ UU / UUU / UU __

__ U / UUUU / __ U / UUUU /

__ U / U U __ / U U U / U U U U / __ U / __ UU / _

ಯಾತ್ರಿಕನ ಸಂಚಾರ, ಪುಟ-೩೪

ಕನ್ನಡದ ಆದಿ ಪ್ರಾಸವನ್ನು ಉಳಿಸಿಕೊಂಡು ಭಾಮಿನಿ ಷಟ್ಪದಿಯಲ್ಲಿ ಬರೆದ ಆದ್ಯ ಕ್ರೈಸ್ತರ ಪ್ರಾರಂಭದ ದೇಶಿ ಶಿಲ್ಪದ ರಚನೆಗೆ ನಿದರ್ಶನವೆನಿಸಿದೆ.

ಪ್ರಾಕ್ಕಾವ್ಯಮಾಲಿಕೆಯಲ್ಲಿ ಪ್ರಕಟವಾದ ವೈಗಲ್‌ರ ಗೀತೆಯ ಛಂದಸ್ಸು

ಸ್ತೋತ್ರಮನತ್ತಮದೇವರಿಗರ್ಪಿಸ ಬರ್ರಿ!

ವೀಣೆಯ ಗಾಯನವೇ! ಸಮುದಾಯವ ಕರಿ!

ದೂತರೊಳೊ

ಕೀರ್ತನೆ ಏಳಲಿಯಾ!

ಸ್ತೋತ್ರ ಸುಗಂಧವ ತರ್ರಿ!

೧. __ UU / __ UU / __ UU/ __ UU / __ U

೨. __ UU / __ UU / __ UU / __ UU / __ U

೩. __ UU / __

೪. __ UU / __ UU / __

೫. __ UU / __ UU / __ U

ಪ್ರಾಕ್ಕಾವ್ಯಮಾಲಿಕೆ, ೧೮೬೮, ಗೀತೆ-೧೬೩

ವೈಗಲ್‌ರವರ ಗೀತೆಗಳ ವೈಶಿಷ್ಟ್ಯತೆಗಳು: ವೈಗಲ್‌ರವರು ಬರೆದ ೨೪ ಗೀತೆಗಳಲ್ಲಿ ೧೬ ಗೀತೆಗಳು ಸ್ವರಚಿತವಾಗಿದ್ದು ಜರ್ಮನ್ ರಾಗದಲ್ಲಿಯೇ ಇದೆ. ಈ ಗೀತೆಗಳಲ್ಲಿ ಹೆಚ್ಚಿನವು ಸಭೋತ್ಸವಗಳಿಗೆ ಸಂಬಂಧಿಸಿವೆ. ಉದಾ: ಕ್ರಿಸ್ತನ ಜನನ, ಮರಣ, ಪುನರುತ್ಥಾನ, ಕ್ರಿಸ್ತನ ಬೋಧನೆ, ತತ್ತ್ವಗಳನ್ನು ಈ ಗೀತೆಗಳು ಹೊಂದಿದ್ದಿ ಇವುಗಳನ್ನು ಮನನ ಮಾಡಲು ಜೀವನದಲ್ಲಿ ಅಳವಡಿಸಿಕೊಳ್ಳಲು ಸಹಾಯಕವಾಗಿವೆ.

ಅಲಂಕಾರಗಳು ಮೇಲುಗೈ ಪಡೆದ ಗೀತೆಯಾಗಿದೆ. 'ದೇವ ವಾಕ್ಯ ನಿನಗೆ' (ಗೀತೆ ೧೬೪) ಸ್ವರಚಿತ ಗೀತೆಯಾಗಿದ್ದು ದೇವವಾಕ್ಯದ ಮಹಿಮೆಯನ್ನು ಅದು ಔಷಧ, ಸಮುದ್ರದಲ್ಲಿನ ಮುತ್ತಿನಂತೆ, ಖಡುಗ, ರಮ್ಯವಾದವನ, ಬೆಳಕು ಎಂದು ವರ್ಣಿಸಿರುವುದು ದೇವ ವಾಕ್ಯವು ಆತನ ಬದುಕಿನಲ್ಲಿ ಪಡೆದ ಸ್ಥಾನವನ್ನು ತಿಳಿಸುತ್ತದೆ. ಪ್ರಮಾಣಾಲಂಕಾರಕ್ಕೆ ಉದಾಹರಣೆಯಾಗಿ ನಿನ್ನ ಅಮರ ವಾಕ್ಯದ ಬಂಡೆಯೊಳು ಸಜ್ಜೀವದ ಬುಗ್ಗೆಯು ಏರುವುದು. ಕ್ರಿಯಾಪದವನ್ನು ರೂಪಕವಾಗಿ ಬಳಸಿರುವುದಕ್ಕೆ ಉದಾ: ಧೂಳಿಯಲ್ಲಿ ಮುಳ್ಗುತ್ತೇವೆ, ದೆವ್ವ ನಮ್ಮ ನುಂಗೋದಿಲ್ಲ ಇತ್ಯಾದಿ.

ಸಮುಚ್ಚಾಯಗಳು (Asyndetoa), ಲುಪ್ತ ಮಾಡಿರುವ ಗೀತೆಗಳು ಅನೇಕ ಇವೆ. ಇದಕ್ಕೆ ಉತ್ತಮ ಉದಾ: ಗೀತೆ ೩೬೧. ಇಲ್ಲಿ ಮತ್ತು, ಕಾರಣ, ಹಿಗಿದ್ದರೂ, ಆದರೆ ಯಾಕೆಂದರೆ ಎಂಬ ಪದಗಳನ್ನು ಬಳಸದೆ ಕಾವ್ಯ ಲಕ್ಷ್ಯ ಕುಂದಿ ಹೋಗದಂತೆ ಪದಗಳನ್ನು ಬಳಸಿ ಗೀತೆ ತನ್ನ ಗುರಿಯನ್ನು ತಲುಪುವಂತೆ ಮಾಡಿವೆ.

ವೈಗಲ್‌ರವರ 'ಯಾತ್ರಿಕನ ಸಂಚಾರ' ಕೃತಿಯಲ್ಲಿನ ಗೀತೆಗಳು ಸ್ವಾರಸ್ಯಕರವಾಗಿದೆ. ದೈವಿಕ ಸಾಧನೆಯಲ್ಲಿ ಕ್ರೈಸ್ತನೊಬ್ಬನು ಹಂತಹಂತವಾಗಿ ಏರುತ್ತ ನಡೆದುದರ ಬಗೆಯನ್ನು ಈತ ಚಿತ್ರಿಸಿರುವ ಬಗೆ ಯಾವುದೇ ಒಬ್ಬ ವ್ಯಕ್ತಿಯ ವ್ಯಕ್ತಿತ್ವ ಬದಲಾವಣೆಗೆ ಸಹಾಯಕವಾಗಿದೆ. ಆತ್ಮ ವಿಮರ್ಶೆಯ ರೀತಿಯಲ್ಲಿ ಈ ಗೀತೆಗಳು ರಚಿತವಾಗಿವೆ. ಬದುಕೆಂಬ ಪಯಣದಲ್ಲಿ ಅನುಭವಿಸುವ ಕಷ್ಟ ಸುಖಗಳಲ್ಲಿ ಸಮಚಿತ್ತವನ್ನು ಕಾಣಬೇಕಾದರೆ ದೇವರ ವಾಕ್ಯಗಳಲ್ಲಿ ನಾವು ಬೇರೂರಬೇಕು. ಅಲ್ಲಿಯೇ ನಿಜವಾದ ಚೇತನದ ಶಕ್ತಿ ದೊರೆಯುತ್ತದೆ ಎಂಬ ಅನುಭವಕ್ಕೆ ಕೊಂಡೊಯ್ಯುತ್ತದೆ. ಈ ಕೃತಿಯಲ್ಲಿನ ಗೀತೆಗಳು, ಕ್ರೈಸ್ತಯೈನಿಗೆ ಪಯಣದ ಪ್ರಾರಂಭದಿಂದ ಅಂತ್ಯದವರೆಗೂ ಪವಿತ್ರ ಗ್ರಂಥದ ವಾಕ್ಯಗಳೇ ಆತನಿಗೆ ದಾರಿದೀಪವಾಗಿ ಕಾರ್ಯ ನಿರ್ವಹಿಸಿವೆ. ಸಂದರ್ಭಕ್ಕೆ ಹೊಂದುವ ಪದ್ಯಗಳನ್ನು ಅಲ್ಲಲ್ಲಿ ರಚಿಸಿದ್ದಾರೆ. ಛಂಧೋನಿಯಮಗಳನ್ನು ಅಳವಡಿಸಿ ಕೊಂಡಿದ್ದನ್ನು ಕಾಣುತ್ತೇವೆ. ದ್ವಿತಿಯ ಪ್ರಾಸ ಸಾಮಾನ್ಯವಾಗಿ ಎಲ್ಲಾ ಗೀತೆಗಳಲ್ಲಿ ಕಂಡು ಬರುತ್ತದೆ. ಕನ್ನಡದ ಆದಿ ಪ್ರಾಸವನ್ನು ಉಳಿಸಿಕೊಂಡು ಭಾಮಿನಿ ಷಟ್ಪದಿಯಲ್ಲಿ ಬರೆದ ಆದ್ಯ ಕ್ರೈಸ್ತರ ಪ್ರಾರಂಭದ ದೇಶೀ ಶಿಲ್ಪದ ರಚನೆಗೆ ನಿದರ್ಶನವೆನಿಸಿದೆ ಇವರ ಗೀತೆಗಳು.

ಆಡಂಬರವಿಲ್ಲದ ಕೆಲವು ಸಣ್ಣ ವಾಕ್ಯಗಳು ಮೃದು ಭಾಷಾ ನಿರೂಪಣೆ ಇತ್ಯಾದಿಗಳು ಇವರ ಗೀತೆಗಳಲ್ಲಿ ಕಂಡು ಬರುತ್ತದೆ. ಗೀತೆ ೨೩೭ ವಿದೇಶೀಯತೆಯನ್ನು ಒಂದಿಷ್ಟು ದೂರ ಮಾಡಿ ದೇಶೀಯತೆಯನ್ನು ಒಗ್ಗಿಸಿಕೊಂಡಿವೆ. ಕನ್ನಡ ಪರಿಸರದ ಪ್ರಭಾವದಿಂದಾಗಿ ದೇಶಿ ಲಯದೊಂದಿಗೆ ಗೀತೆ ರಚಿಸಿರುವುದಕ್ಕೆ, ಉದಾಹರಣೆಯಾಗಿದೆ ಗೀತೆ ೩೨೭.

ಗದ್ಯಮಯದಲ್ಲಿ ವೈಗಲರ ಗೀತೆಗಳು ರಚಿತವಾಗಿರುವುದನ್ನು ಕಾಣುತ್ತೇವೆ. ಉದಾ: ಗೀತೆ ೨೨೮ ಸರಳ ವಾಕ್ಯಗಳು ಲಯ, ಗೇಯತೆ ಕಳೆದುಕೊಂಡು ಕಾವ್ಯಗುಣ ಇಲ್ಲವಾಗಿವೆ.

ಗೀತೆಯ ಕೆಲವು ಚರಣಗಳು ಕಾವ್ಯ ಗುಣವನ್ನು ಹೊಂದಿದ್ದರೆ ಕೆಲವು ಚರಣಗಳ ಗದ್ಯಮಯವಾಗಿದೆ. ಗೀತೆ ೩೩೧, ಚರಣಗಳು ಅರ್ಥಪೂರ್ಣವಾಗಿದ್ದು ಬೋಧನಾ ಗುಣವನ್ನು ಹೊಂದಿವೆ. ಆದರೆ ಗದ್ಯ ರೂಪ ತಾಳಿವೆ. ಅರ್ಥಪ್ರಧಾನವೇ ಇವರಿಗೆ ಅಗತ್ಯವಾಗಿತ್ತು ಎಂದು ಭಾವಿಸಬಹುದಾಗಿದೆ.

೫.೩.೩ ಬಿ. ಲೂತಿ – B. Luthi

ಬೆನೆಡಿಕ್ಟ್ ಲೂತಿಯವರು ೧೫.೧೦.೧೮೮೪ ರಲ್ಲಿ ಯೂರೋಪಿನಿಂದ ಬೆಟಗೇರಿಗೆ ಬಂದರು. ಕುಮಾರಿ ಸೋಮ್‌ರವರನ್ನು ಗುಳೇದಗುಡ್ಡದಲ್ಲಿ ತಾ. ४.೧೧.೧೮೮೭ ರಲ್ಲಿ ವಿವಾಹವಾದರು. ೧೮೮೯ ರಿಂದ ಧಾರವಾಡದಲ್ಲಿ ಸೇವೆ ಸಲ್ಲಿಸಿದರು. ೧೯೦४ ರಲ್ಲಿ ಮಂಗಳೂರಿನ ವೇದ ವಿದ್ಯಾಲಯದಲ್ಲಿದ್ದರು. ಬಾಸೆಲ್ ಮಿಶನ್ ಸಂಗೀತ ಪುನರ್ ವಿಮರ್ಶನಾ ಸಮಿತಿಯಲ್ಲಿ ಪ್ರಧಾನ ಪಾತ್ರವನ್ನು ವಹಿಸಿದರು. ಬೆಟಗೇರಿಯಲ್ಲಿದ್ದಾಗ ಕೇವಲ ೯ ತಿಂಗಳ ಅವಧಿಯಲ್ಲಿ ಸ್ವಾಮಿಯು ಅವರ ಇಬ್ಬರು ಮಕ್ಕಳನ್ನು ತನ್ನ ಬಳಿಗೆ ಕರಕೊಂಡರು. ೧೯೧೧ ರವರೆಗೆ ಸೇವೆ ಸಲ್ಲಿಸಿದರು.

ಗೀತೆಗಳ ಅಧ್ಯಯನ: ಲೂತಿಯವರು 'ಕನ್ನಡ ಗೀತೆಗಳು' ಗೀತ ಪುಸ್ತಕದಲ್ಲಿ ಒಟ್ಟು ೫೩ ಗೀತೆಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಜರ್ಮನ್ ಭಾಷೆಯಿಂದ ೨೫ ಗೀತೆಗಳನ್ನು ಇಂಗ್ಲೀಷ್‌ನಿಂದ ೧೫ ಗೀತೆಗಳನ್ನು ಭಾಷಾಂತರಿಸಿದ್ದಾರೆ. ೧೩ ಗೀತೆಗಳು ಸ್ವರಚಿತವಾಗಿವೆ. ಇವರ ಗೀತೆಗಳು ವಿವಿಧ ಭಾಗಗಳಿಗೆ ಸೇರಿವೆ.

ದೇವ ಭಜನೆ	೦४	ರಕ್ಷಣಾ ಮಾರ್ಗ	೦೮
ಯೇಸುವಿನ ಭಜನೆ	೦೧	ದೇವ ಪ್ರಾರ್ಥನೆ	೦೩
ಸಭೋತ್ಸವಗಳು	೦೯	ಕ್ರೈಸ್ತ ಮನಶ್ಯಾಂತಿ	೦೨
ದೇವರಾಜ್ಯ	೦೯	ವಿಶೇಷ ಕಾಲಗಳಿಗೆ ತಕ್ಕ ಗೀತೆಗಳು	೦೬
ಕ್ರೈಸ್ತ ಸಭಾಚಾರ ಕೃಪಕಾರಣಗಳು	೦೯	ಸ್ವರ್ಗ ಮಹಿಮಾಭಿಲಾಷೆ	೦೨

ಒಟ್ಟು ೫೩ ಗೀತೆಗಳು

ಬೈಬಲ್: ಸತ್ಯವೇದವು ಮಾನವನ ಬಾಳಿಗೆ ಮಾರ್ಗದೀಪವಾಗಿದೆ. ಇದು ದಿಕ್ಸೂಚಿಯಂತೆ ಕೆಲಸ ನಿರ್ವಹಿಸುತ್ತದೆ. ಎಲ್ಲಿಯೂ ಎಡುಹದೆ ಸನ್ಮಾರ್ಗದಲ್ಲಿ ಚಲಿಸಲು ಇದು ಸಹಾಯಕವಾದ ಒಂದು ಅಸ್ತ್ರವಾಗಿದೆ. ದೇವ-ಮಾನವರ ಸಂಬಂಧವನ್ನು ಮತ್ತಷ್ಟು ಬಿಗಿಗೊಳಿಸಲು ಸತ್ಯವೇದ ನೆರವಾಗುವುದು. ಈ ಸತ್ಯವೇದದ ಮಹತ್ವವನ್ನು ವರ್ಣಿಸುವ ಗೀತೆ 'ದಿವ್ಯ ಶಾಸನ' ಎಂಬ ಗೀತೆ. ಇದು O meinHeimatland, O mein Vaterland ಎಂಬ ರಾಗದಲ್ಲಿದೆ.

ಸತ್ಯವೇದವು ಕೇವಲ ಮನುಷ್ಯನ ಆಧ್ಯಾತ್ಮಿಕ ಬದುಕಿಗೆ ನೆರವಾಗದೆ ಶಾರೀರಿಕ, ಮಾನಸಿಕ, ಬೌದ್ಧಿಕ ಒಟ್ಟಿನಲ್ಲಿ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಇದು ಸಹಾಯಕವಗುವಂತ ಒಂದು ಅತ್ಯುತ್ತಮ ದೇವರ ಕೊಡುಗೆಯಾಗಿದೆ. ಇದನ್ನು ನಿರಂತರ ಧ್ಯಾನಿಸಿ ಬದುಕಿನಲ್ಲಿ ಅಳವಡಿಸಿಕೊಳ್ಳುವುದರಿಂದ ನಾವು ಶಾಶ್ವತ ಬದುಕಿಗೆ ಬಾದ್ಯರಾಗುತ್ತೇವೆ ಎಂಬ ಆಶಯವನ್ನು ಈ ಗೀತೆ ಹೊಂದಿದೆ.

೧೯೬೬ ರಲ್ಲಿನ ಗೀತೆ	ಬಾಲಕರ ಗೀತೆಗಳಲ್ಲಿನ ಗೀತೆ
ಬಡ ಪಾಪಿಗೆ	ಬಡ ಪಾಪಿಗೆ
ಬಡ ರೋಗಿಗೆ	ಬಡ ರೋಗಿಗೆ
ನವ ಜೀವಕರ ಔಷಧಿ	ನವ ಜೀವಕರ ಔಷಧಿ
ನವ ದೇಹಾಕಾಶ ಪೃಥಿವಿ	ನವ ದೇಹ, ಬಾನ, ಪೃಥಿವಿ
ಈವ ನಿಶನೆಂದು ಹೇಳುತಿ!	ಭವವಿಲ್ಲದೆಂದು ಹೇಳುತ್ತಿ!
ನಿತ್ಯ ಕ್ಷೇಮವು!	ನಿತ್ಯ ಕ್ಷೇಮವು!
ನಿತ್ಯ ತೃಪ್ತಿಯು!	ನಿತ್ಯ ತೃಪ್ತಿಯು!
ನವ ಜೀವಕರ ಔಷಧಿ	ನವ ಜೀವಕರ ಔಷಧಿ
ನವ ದೇಹಾಕಾರ ಪೃಥಿವಿ	ನವ ದೇಹ, ಬಾನ, ಪೃಥಿವಿ
ಈವನೀಶನೆಂದು ಹೇಳುಲೆ!	ಭವವಿಲ್ಲದೆಂದು ಹೇಳುತ್ತಿ!
ನೀ ಸತ್ಯವು!	ನೀ ಸತ್ಯವು
ನೀ ನನ್ನದು	ನೀ ನನ್ನದು
ಶ್ರೀ ಬೈಬಲು	ಶ್ರೀ ಬೈಬಲು
ಕನ್ನಡ ಗೀತೆಗಳು, ಗೀತೆ-೧೬೫.	ಬಾಲಕರ ಗೀತೆಗಳು, ೧೯೦೪, ಗೀತೆ-೧೨೨

ಪ್ರಾಸಪದಗಳು ಅಲ್ಲಲ್ಲಿ ಬಳಕೆಯಾಗಿವೆ. ಗೇಯತೆಯು ಅಲ್ಲಲ್ಲಿ ಕಂಡು ಬರುತ್ತದೆ. ಗೀತೆಯ ಕೆಲವು ಚರಣಗಳು ಗದ್ಯರೂಪವನ್ನು ಹೊಂದಿದೆ. ವಾಕ್ಯಗಳ ಪುನರಾವರ್ತನೆಯಾಗಿದೆ. ಇದರಿಂದ ಗೀತೆಯ ಪ್ರಮುಖ ಅಂಶಗಳು ಬೇಗನೆ ಮನನ ಮಾಡಲು ಸಾಧ್ಯವಾಗಿದೆ. ಬೈಬಲ್ ಗ್ರಂಥವನ್ನು ಪವಿತ್ರ ಗ್ರಂಥಕ್ಕೆ ತೋರಿದ ಗೌರವವಾಗಿದೆ.

೧೯೬೬ ರಲ್ಲಿನ ಗೀತೆಯ 'ಈಶ ನೀಶನೆಂದು ಹೇಳುತಿ' ಎಂಬ ಸಾಲು ಬಾಲಕರ ಗೀತೆಯಲ್ಲಿ 'ಭವವಿಲ್ಲವೆಂದು ಹೇಳುತಿ' ಎಂದು ಬಳಕೆಯಾಗಿದೆ.

'ದೈವ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿ ಕತ್ತಿಗಿಂತಲೂ ಹರಿತವಾದದ್ದು, ಪ್ರಾಣ ಆತ್ಮಗಳನ್ನು, ಕೀಲು ಮಜ್ಜೆಗಳನ್ನು ವಿಭಾಗಿಸುವಷ್ಟು ಮಟ್ಟಿಗೂ ತೂರಿ ಹೋಗುವಂತಹದು ಆಗಿದೆ (ಇಬ್ರಿಯ ೪:೧೨). ದೇವ ವಾಕ್ಯವು ಮಾನವನ ಎಲ್ಲ ಸಮಸ್ಯೆಗೂ ಉತ್ತರಿಸುವ ಶಕ್ತಿಯನ್ನು ಹೊಂದಿದೆ. ಈ ವಾಕ್ಯವು ಅತ್ಯುನ್ನತ ಪ್ರಭಾವದ ಬಲದಿಂದ ಭಕ್ತನ ಆತ್ಮದ ಆಹಾರವಾಗಿ, ಪರಿಶುದ್ಧ ಜೀವನ ಬುಗ್ಗೆಯಾಗಿ ಮತ್ತು ವಿಶ್ವಾಸವನ್ನು ಇಮ್ಮಡಿಗೊಳಿಸುತ್ತಾ ಆಧ್ಯಾತ್ಮಿಕ ಜೀವನಕ್ಕೆ, ಪ್ರೇರಣೆಯಾಗಿದೆ. ಆದುದರಿಂದ ಪ್ರತಿಯೊಬ್ಬ ಕ್ರೈಸ್ತ ಭಕ್ತನು ಪವಿತ್ರ ಗ್ರಂಥವನ್ನು ತೆರೆದು ಓದುತ್ತಾ ತನ್ನ ಕ್ರಿಸ್ತೀಯ ಜೀವನಕ್ಕೆ ಬೆಳಕನ್ನು ಪಡೆಯಲು ಬಾಧ್ಯಸ್ತನು. ಪವಿತ್ರ ಗ್ರಂಥವನ್ನು ಅರಿಯದವರು ಕ್ರೈಸ್ತರನ್ನು ಅರಿಯಲು ಅಸಾಧ್ಯವೆಂಬುದು ಸಂತ ಜೆರೋಮರ ಮಾತಾಗಿದೆ (Ignorance of the scriptures is

ignorance of Christ) ಈ ದೇವವಾಕ್ಯ ವಿಶ್ವದೆಲ್ಲೆಡೆ ಹರಡುವಂತೆ ಕಾರ್ಯ ನಿರ್ವಹಿಸುವ ಮಿಶನರಿಗಳು ಇನ್ನೂ ಆಸಕ್ತಿಯಿಂದ ಈ ಕಾರ್ಯ ನಿರ್ವಹಿಸುವಂತೆ ಆಶಿಸಿದ್ದಾರೆ ಗೀತಗಾರ. ಏಳೇಳು ಕ್ರೈಸ್ತ ಶೂರ! ಎಂಬ ಗೀತೆಯಲ್ಲಿ ಇದು From Greenland's icy mountains ಗೀತೆಯ ಭಾಷಾಂತರವಾಗಿದೆ.

ಏಳೇಳು ಕ್ರೈಸ್ತ ಶೂರ!
ರಾಜಾಜ್ಞೆ ವಹಿಸು!
ಸಮೀಪ ಮತ್ತು ದೂರ
ಕಂಗಾಲ ಜನರು

ಆ ಮಕೆದೋನ್ಯನಂತೆ
ಇದ್ದಾರೆ ಕೂಗುತ್ತಾ-
ಸದ್ಗತಿಯಾಗುವಂತೆ
ಸಹಾಯ ಮಾಡ ಬಾ!

ಕನ್ನಡ ಗೀತೆಗಳು, ಗೀತೆ–೧೩೦

ಈ ಗೀತೆಯ ಮೂಲ ಕರ್ತೃ ರೆಜಿನಾಲ್ಡ್ ಹೆಬಾರ್ (Reginald Heber 1783-1826) ಇದು Missionary hymn ರಾಗದಲ್ಲಿದೆ. "ಬೆಳೆಯೊ ಅಧಿಕ ಆದರೆ ಕೊಯ್ಲುಗಾರರು ವಿರಳ. ಆದ್ದರಿಂದ ತನ್ನ ಕೊಯಿಲಿಗೆ ಆಳುಗಳನ್ನು ಕಳುಹಿಸುವಂತೆ ಬೆಳೆಯ ಯಜಮಾನನ್ನು ಪ್ರಾರ್ಥಿಸಿರಿ"[೮೩] ಎಂಬ ವಾಕ್ಯವನ್ನು ಆಧರಿಸಿ ರಚಿತವಾಗಿದೆ. ಹೇಬರ್ ಈ ಗೀತೆಯನ್ನು ೧೮೭೯ ರಲ್ಲಿ ರಚಿಸಿದನು. ಇದು ಮಿಶನರಿ ಗೀತೆಗಳನ್ನು ಒಂದು ಉತ್ತಮ ಗೀತೆಯೆಂದು ಪರಿಗಣಿಸಲಾಗಿದೆ. ಹೇಬರ್ ಕೂಡ ಒಬ್ಬ ಉತ್ತಮ ಗೀತರಚನೆಗಾರ ಎಂಬ ಕೀರ್ತಿಗೆ ಪಾತ್ರನಾದನು. ಕೆಲವೇ ಕ್ಷಣಗಳಲ್ಲಿ ಗೀತೆಯನ್ನು ರಚಿಸುವ ಪ್ರತಿಭೆಯನ್ನು ಈತನು ಹೊಂದಿದ್ದನು. ಒಟ್ಟು ೫೭ ಹಾಡುಗಳನ್ನು ರಚಿಸಿ ಇಂದೂ ಹೃನ್ಮನವನ್ನು ಸೆಳೆದ ಅರ್ಥಗರ್ಭಿತ ಗೀತೆಯಾಗಿದೆ. ಸುವಾರ್ತಾ ಪ್ರಸಾರ ಕಾರ್ಯಕ್ಕೆ ಭಕ್ತರನ್ನು ಪ್ರೇರೇಪಿಸಲು ಉತ್ತಮ ಗೀತೆಯಾಗಿ ಇದು ಕಂಡು ಬಂದಿದೆ.

ಕ್ರಿಸ್ತರ ವ್ಯಕ್ತಿತ್ವ: ಯೇಸುವಿನ ಮಿತ್ರತ್ವದ ವ್ಯಕ್ತಿತ್ವವನ್ನು ವರ್ಣಿಸುವ ಗೀತೆ 'ಯೇಸು ನಮಗೆಂಥಾ ಮಿತ್ರ' ಎಂಬ ಗೀತೆಯನ್ನು What a friend we have in Jesus ಎಂಬ ಗೀತೆಯ ಭಾಷಾಂತರವಾಗಿದೆ. ಈ ಗೀತೆಯನ್ನೇ ಲಂಡನ್ ಮಿಶನರಿ ಬಿ. ರೈಸ್‌ರವರೂ ಹಾಗೂ ಸ್ಪ್ರಿಂಗ್ ಎ ಬಾಸಲ್ ಮಿಶನರಿ ಭಾಷಾಂತರಿಸಿದ್ದಾರೆ.

ಲೂತಿಯವರ ಗೀತೆ

೧. ಯೇಸು ನಮಗೆಂಥ ಮಿತ್ರ!
ಎಂಥ ದಿವ್ಯ ಗುರುವು!
ಎಲ್ಲಾ ಆತನ ಚರಿತ್ರ
ಪಾಪಿಗೆ ಸುವಾರ್ತೆಯು
ತನ್ನಿ, ತನ್ನಿ, ಎಲ್ಲ ತನ್ನಿ
ಚಿಂತೆ, ದು:ಖ, ವೇದನೆ!

ಬಿ. ರೈಸ್‌ರವರ ಗೀತೆ

೧ ಹಾ! ಎಂಥಾ ಅಮೂಲ್ಯ ಮಿತ್ರ
ನಮಗೀಗ ಸಿಕ್ಕಿದ!
ಪಾಪ. ದು:ಖ, ಭಯವೆಲ್ಲಾ
ಪರಿಹಾರ ಮಾಡಿದ
ಸ್ಥಿರಾನಂದ ಸಮಾಧಾನ
ಹೊಂದಲಾಶಿಸಿದರೆ

ಬನ್ನಿ, ಬನ್ನಿ, ಮಾಡಬನ್ನಿ
ಯೇಸುವಿಂಗೆ ಪ್ರಾರ್ಥನೆ!

೨. ಆತ್ಮವೈರಿ ಹತ್ರ ಬಂದು
ಮೋಸ ತಂತ್ರಗೈದರೆ –
ರಕ್ಷಿಸೆನ್ನ ಯೇಸು! ಎಂದು
ಬೇಡು ಭಯವಿಲ್ಲದೆ!
ನಮ್ಮ ಹತ್ರದಲ್ಲಿದ್ದಾನೆ
ಬಲ್ಲನೆಮ್ಮ ಶೋಧನೆ
ನಮ್ಮ ನಾದರಿಸುತ್ತಾನೆ
ಕೇಳಿ ನಮ್ಮ ಪ್ರಾರ್ಥನೆ

೩. ಸ್ವಂತ ಬಲ ನಿನಗಿಲ್ಲ
ಇಲ್ಲಿ ಬಂಧು ಪ್ರೀತಿಯು
ನಂಬತಕ್ಕ ಪುಣ್ಯವಿಲ್ಲ
ಸಾವು ಮಾತ್ರ ಕಾಣಲು
ಯೇಸು ನಿನಗಿರುತ್ತಾನೆ;
ಆತನ ನಂಬಿಗಸ್ತನೆ
ನಿನ್ನ ನಪ್ಪಿಕೊಳ್ಳುತ್ತಾನೆ;
ಕೇಳಿ ನಿನ್ನ ಪ್ರಾರ್ಥನೆ

ಕನ್ನಡ ಗೀತೆಗಳು, ಗೀತೆ–೧೩೮.

ಯೇಸು ಸ್ವಾಮಿಯನ್ನು ನಿತ್ಯ
ಬೇಡುತ್ತಿರು, ಮನವೇ!

೨. ಶೋಧನೆ ಉಂಟಾಗುವಾಗ
ತಾಪತ್ರಯದಲ್ಲಿಯೂ
ಮನದಲ್ಲಿ ಕುಗ್ಗೇಡ;
ಜಪ ಮಾಡುತ್ತಾ ಇರು;
ನಂಬತಕ್ಕ ಇಂಥ ಮಿತ್ರ
ಬೇರೆ ಒಬ್ಬರಿಲ್ಲವು
ನಿನ್ನ ದು:ಖವೆಲ್ಲಾ ಬಲ್ಲ
ಆತುಕೊಳ್ಳುತ್ತಾ ಇರು.

೩. ತುಂಬಾ ವ್ಯಸನ ಉಪದ್ರ
ಆಗಚಾಟ್ಲು ಬಂದರೂ
ಯೇಸುನಾಥ ನಿತ್ಯಾಶ್ರಯ
ಬೇಡಿಕೊಳ್ಳುತ್ತಾ ಇರು
ನಿಂದೆ, ಪೀಡೆ ಕಳವಳ
ಯಾವ ಕಷ್ಟ ಬಂದರೂ
ಸರ್ವಶಕ್ತನ ಆಧಾರ
ಎಂದೂ ತಪ್ಪಿ ಹೋಗದು

ಕನ್ನಡ ಸಂಗೀತಗಳು, ಗೀತೆ–೧೧೪

ಕಷ್ಟ ಸಂಕಷ್ಟಗಳಲ್ಲಿ ನರಳುವುದು, ಅಸಮಾಧಾನ, ಅಶಾಂತಿಗಳಿಗೆ ನಾವು ಒಳಗಾಗುವುದು ಇವೆಲ್ಲಕ್ಕೂ ಕಾರಣವೇನೆಂದರೆ ಪ್ರಾರ್ಥನೆಯಲ್ಲಿ ಇವುಗಳನ್ನು ದೇವರಿಗೆ ಹೇಳಿಕೊಳ್ಳದೇ ಇರುವುದಾಗಿದೆ. ಪ್ರಾರ್ಥನೆಯಲ್ಲಿ ಎಲ್ಲವನ್ನೂ ದೇವರೆಡೆಗೆ ಒಪ್ಪಿಸಿಕೊಂಡು ಮುಂದುವರೆದಾಗ ಯಾವ ಶೋಧನೆಯನ್ನು ಯಾವ ಕಷ್ಟಗಳನ್ನು ಎದುರಿಸಿ ಜಯಿಸಲು ಸಾಧ್ಯ ಎಂಬ ಆಶಯವನ್ನೇ ಈ ಎರಡೂ ಗೀತೆಗಳು ಹೊಂದಿದೆ. ಪದಗಳ ಬಳಕೆಯಲ್ಲಿ ವ್ಯತ್ಯಾಸವನ್ನು ಕಂಡುಕೊಳ್ಳಲು ಸಾಧ್ಯ. ವಿನಂತಿಸುವ ಬಗೆ, ಬದುಕಿನಲ್ಲಿ ಬಂದೊದಗುವ ಕಷ್ಟ ಕಾರ್ಪಣ್ಯ, ಶೋಧನೆಗಳ ಬಗೆಯನ್ನು ವರ್ಣಿಸಿರುವ ರೀತಿ ಹಾಗೂ ಯೇಸುವನ್ನು ಆಪ್ತ ಮಿತ್ರನಂತೆ ಭಾವಿಸಿ ಎಲ್ಲವನ್ನೂ ಆತನ ಸನ್ನಿಧಿಗೆ ಅರ್ಪಿಸಿರುವ ಬಗೆ ಹೃನ್ಮನವನ್ನು ಆಕರ್ಷಿಸುತ್ತದೆ.

ದೇವರು ಕೇವಲ ಇಹಲೋಕದ ಮಾನವರಿಗಿಂತ ಪವಿತ್ರನಾಗಿರದೆ ಭೂ, ಪರ ಮತ್ತು ಪಾತಾಳ ಲೋಕಗಳಲ್ಲಿಯೂ ಆತನು ಪರಿಶುದ್ಧನಾಗಿದ್ದಾನೆ. ಆತನಿಗೆ ಸರಿಸಾಟಿಯಾದವರು ಯಾರೂ ಇಲ್ಲ. ಸ್ವರ್ಗದ ನಿವಾಸಿಗಳು ನಿರಂತರವಾಗಿ ಆತನಿಗೆ ಸ್ತೋತ್ರವನ್ನು ಅರ್ಪಿಸುತ್ತವೆ. ಅಂತೆಯೇ ಸಕಲ ಸೌಭಾಗ್ಯವನ್ನು ಪಡೆಯುವ ನಾವೂ ಸಹ ದೇವರ ಪರಿಶುದ್ಧತೆಯನ್ನು ಹೊಗಳಬೇಕು. ಆತನಂತೆ ಪರಿಶುದ್ಧ ಬದುಕನ್ನು ಬಾಳಬೇಕು. ಆತನನ್ನು ಅನುಸರಿಸಿ ನಡೆಯುವಾಗ ಆತನು ಮೌಲ್ಯಗಳನ್ನು ನಾವು ಅಳವಡಿಸಿಕೊಂಡು ಸಾರ್ಥಕ ಬದುಕನ್ನು ನಡೆಸಲು ಸಾಧ್ಯವಿದೆ ಎಂಬ ಆಶಯವನ್ನು ಹೊಂದಿದೆ. "ಸ್ವರ್ಗೀಯ ಮೇಳವು"[೮೪] ಎಂಬ ಗೀತೆ. ಇದು Die Gotte Ssc raphim ಎಂಬ ಗೀತೆಯ ಭಾಷಾಂತರವಾಗಿದೆ.

ದೇವರು ಸರ್ವಶಕ್ತನು, ಎಲ್ಲವನ್ನು ಉಂಟು ಮಾಡವ ಶಕ್ತನು. ಸೃಷ್ಟಿಯೆಲ್ಲವೂ ಆತನಿಂದಲೇ ಉಂಟಾಯಿತು. ಲೋಕದ ಉತ್ಪತ್ತಿಯಿಂದಲೂ ಆತನ ಇರುವಾತನು. ಇಂದೂ ನಮ್ಮೊಡನೆ ಬಾಳುವಾತನು ಎಂಬ ಆಶಯವನ್ನು ಹೊಂದಿದೆ. "ಯೆಹೋವನೇ"[೮೫] ಎಂಬ ಗೀತೆಯಲ್ಲಿ. ಇದು Der Herr ist gross ಎಂಬ ಗೀತೆಯ ಭಾಷಾಂತರವಾಗಿದೆ.

ಬಾಲಕರ ಗೀತೆಯಲ್ಲಿ ಯೇಸುವಿನ ವ್ಯಕ್ತಿತ್ವಕ್ಕೆ ಸಂಬಂಧಿಸಿದ ಗೀತೆ: ಯೆಹೋವನು ಸರ್ವಸ್ವವನ್ನು ಉಂಟು ಮಾಡಿ ಮಾನವನಿಗೆ ನೀಡಿ ಆತನ ಪರಿಪಾಲನೆಗಗಿ ಆತನೊಂದಿಗೆ ಇರುವವನಾಗಿದ್ದಾನೆ ಎಂಬ ಭಾವ ವ್ಯಕ್ತವಾಗಿದೆ. 'ದೇವರ ಮಹಿಮೆ' ಎಂಬ ಗೀತೆಯಲ್ಲಿ

ಇಮ್ಮಾನುವೇಲ್ !
ನಾ ಬಿದ್ದು ಸೋಲುವಲ್ಲಿ
ನೀನ ನೊಲಿದವತರಿಸಿ
ಈ ನನ್ನ ಘೋರ ಪಾಪಯುದ್ಧದಲ್ಲಿ
ನೀ ನನಗಾಗಿ ಜೈಸಿದ್ಧಿ

ಕನ್ನಡ ಗೀತೆಗಳು–೧೯೦೪, ಗೀತೆ–೮೭

ಇಮ್ಮಾನುವೇಲ್: ಎಂದರೆ 'ದೇವರು ನಮ್ಮೊಡನೆ ಇದ್ದಾರೆ' ಎಂದರ್ಥ. ಹಳೆಒಡಂಬಡಿಕೆಯಲ್ಲಿ ದೇವರು ಹಗಲಿರುಳು ದೇವಾಲಯದಲ್ಲಿದ್ದ ಮಂಜೂಷದಲ್ಲಿ ನೆಲೆಸಿದ್ದರು. ಈಗ ಮನುಷ್ಯನಾಗಿ ನಮ್ಮೊಡನೆ ವಾಸ ಮಾಡಿದರು.[೮೬] ಎಂಬ ಶುಭಸಂದೇಶಗಾರ ಯೋಹಾನ್ನನು ವರ್ಣಿಸಿದ್ದಾನೆ. ಯೇಸುವಿನ ಮುಖಾಂತರ ದೇವರು ನಮ್ಮೊಡನೆ ಯಾವಾಗಲು ನೆಲೆಸಲು ಬಂದರು ಎಂದು ಗೀತಗಾರ ಹೇಳಿದ್ದಾರೆ.

ಕ್ರೈಸ್ತರ ಜೀವನ: ಗೀತಗಾರ ಯೇಸುವನ್ನು ಸ್ವರ್ಗೀಯ ಗುರು ಎಂದು ಸಂಭೋಧಿಸಿದ್ದಾರೆ. ಗುರುವಾದವನ ಬಳಿಯಿಂದ ಅನೇಕ ಸದ್ಗುಣಗಳನ್ನು ಕಲಿಯಲು ಸಾಧ್ಯ. ಗುರು ಸದ್ಗುಣಗಳ ಗಣಿಯಾಗಿದ್ದಾನೆ. ಯಾರು ಆ ಗುರುವನ್ನು ಆಲಿಸಿ, ಅದರ ಪ್ರಕಾರ ಜೀವಿಸುತ್ತಾರೋ ಅವರು ನಿಜವಾಗಿಯೂ ಸನ್ಮಾರ್ಗದಲ್ಲಿ ನಡೆಯಲು ಸಾಧ್ಯವಿದೆ. ಸ್ವರ್ಗೀಯ ಗುರುವಿನ ವಾಕ್ಯಗಳು ನಮ್ಮ ವಿಶ್ವಾಸದ ಜೀವನಕ್ಕೆ ಜ್ಯೋತಿಯಾಗಿದೆ. ಯೇಸುವಿನ

ದಾರಿಯಲ್ಲಿ ನಡೆಯುವುದು ಎಂದರೆ ನಮ್ಮೆಲ್ಲಾ ಕೆಲಸ ಕಾರ್ಯಗಳಲ್ಲಿ ಹಾಗೂ ಚಿಂತನೆಯಲ್ಲಿ ಅವರಂತಾಗಲು ಪ್ರಯತ್ನವನ್ನು ಮಾಡುವುದು. ಆದುದರಿಂದಲೇ ಈ ಭೂಲೋಕದಲ್ಲಿ ನಾವೆಲ್ಲ ಏನನ್ನು ಪಡೆಯಲು ಪ್ರಯತ್ನಿಸುತ್ತೇವೋ ಅದು ಯೇಸುವಿನ ಮುಖಾಂತರ ಪಡೆಯಲು ಸಾಧ್ಯ. ಆ ಶ್ರೇಷ್ಟ ಗುರುವಿನ ಚಿತ್ತವನ್ನು ಅನುಸರಿಸುವುದರಿಂದ ಎದುರಾಗುವ ಕಷ್ಟ ಸಂಕಟಗಳನ್ನು ಪ್ರೀತಿಯಿಂದ ಸ್ವೀಕರಿಸಿ ತಮ್ಮ ಕಾರ್ಯಸಾಧನೆಯಲ್ಲಿ ತೃಪ್ತಿ ಸಮಾಧಾನವನ್ನು ಪಡೆಯಲು ಸಾಧ್ಯವಿದೆ. ದೇವರ ಚಿತ್ತವನ್ನು ನೆರವೇರಿಸುವುದರಿಂದ ನಮ್ಮಲ್ಲಿ ನಿರ್ಮಲ ಮನಸ್ಸಾಕ್ಷಿ ರೂಪಿಸಿ ಶಾಂತಿಯನ್ನು ಉಂಟು ಮಾಡುತ್ತದೆ. ನಿಜವಾಗಿ ದೇವರನ್ನು ಪ್ರೀತಿಸಿ ಆತನನ್ನು ಅನುಸರಿಸುವುದರಿಂದ ಈ ಶಾತಿಯು ಫಲಪ್ರದವಾಗುತ್ತದೆ ಎಂಬ ಆಶಯವನ್ನು ಹೊಂದಿದ ಗೀತೆಯೆ "ಸದ್ಗುಣ ಶಿರೋಮಣಿಯಾದ"[೮೭] ಎಂಬುದು ಈ ಗೀತೆಯು Ich will dich lieben meine starke ಎಂಬ ರಾಗದಲ್ಲಿದೆ.

ಬಾಲಕರ ಗೀತೆಯಲ್ಲಿ ಕ್ರೈಸ್ತರ ಬದುಕಿಗೆ ಸಂಬಂಧಿಸಿದಂತೆ ಗೀತೆಗಳು: ಪರೋಪಕಾರದಿಂದ ಪುಣ್ಯ ಲಭಿಸುತ್ತದೆ. ಪರಪೀಡೆಯಿಂದ ಶಾಪ ದೊರೆಯುತ್ತದೆ ಎಂಬ ನುಡಿಯನ್ನು ನೆನಪಿಸುತ್ತದೆ. 'ಪರೋಪಕಾರ' ಎಂಬ ಗೀತೆ. ಇತರರನ್ನು ತನ್ನವರೆಂದು ಬಗೆದು ಕಾರ್ಯ ನಿರ್ವಹಿಸಿದಾಗ ಬಾಳು ಸುಗಮವಾಗುತ್ತದೆ. ಅದೇ ನಿಜವಾದ ಬದುಕು. ಕ್ರಿಸ್ತನು ಪರರ ಉದಾರಕ್ಕಾಗಿ ಜೀವಿಸಿದಂತೆ ನಾವು ನಮ್ಮ ಬದುಕನ್ನು ಬೇರೆಯವರ ಹಿತಕ್ಕಾಗಿ, ಏಳಿಗೆಗಾಗಿ ಮೀಸಲಿಡಬೇಕು ಎಂಬ ಸಂದೇಶವನ್ನು ಈ ಗೀತೆ ಹೊಂದಿದೆ.

ಭೂಕಂಪ ಬೆಂಕಿ ನೀರುಗಳ ಮೇಲೆ
ಶೋಕಾನು ಶೋಕದಲ್ಲಿ ಬಿದ್ದ ಮಂದಿಗು
ಯಾಕಿಂಥ ಜಾತಿಗನ್ಯರಿಂದ ಮೇಲೆ
ಬೇಕಾಗುವ ಸಹಾಯ ನಾವು ಮಾಡ್ವೆವು
ಕ್ರಿಸ್ತನ ದಯವಿನಯಗಳಂ ದಯವಿನಯಗಳಂ
ಕ್ರಿಸ್ತರು ನಾವು ಕೈಕೊಳ್ಳುವೆವು

ಫಿತೂರಿಯಾಗಲೆಮ್ಮ ರಾಜನನ್ನು
ಮತ್ತಷ್ಟು ಭಕ್ತಿಯಿಂದ ನಾವು ಕಾಯ್ವೆವು
ತತ್ಸಾರ ಬರ ಬಿದ್ದಂಥವರನ್ನು
ಯಥಾರ್ಥದಾನ ಮಾಡಿ ರಕ್ಷಿಸುವೆವು
ಕ್ರಿಸ್ತನ ಭಕ್ತಿ ಆಸಕ್ತಿಗಳಂ, ಭಕ್ತಿ ಆಸಕ್ತಿಗಳಂ
ಕ್ರೈಸ್ತರು ನಾವು ಕೈಗೊಳ್ಳುವೆವು

ಬಾಲಕರ ಗೀತೆಗಳು, ಗೀತೆ–೬೫

ದ್ವಿತೀಯಾ ಪ್ರಾಸವನ್ನು ಹೊಂದಿದ ಈ ಗೀತೆ ದೇಶಿ ರಚನೆಗೆ ನಿದರ್ಶನವಾಗಿದೆ. ಶಬ್ದಾಲಂಕಾರವನ್ನು ಅಲ್ಲಲ್ಲಿ ಕಾಣಬಹುದಾಗಿದೆ. ಪ್ರಕೃತಿಯ ದುರಂತಗಳನ್ನು ಗೀತೆಯಲ್ಲಿ ತರುವುದರ ಮೂಲಕ ಪರೋಪಕಾರ ಭಾವವನ್ನು ಮೂಡಿಸಿಕೊಳ್ಳುವ ಬಗೆಯನ್ನು ವರ್ಣಿಸಿರುವ ಬಗೆ ವಿಶಿಷ್ಟ ರೀತಿಯದಾಗಿದೆ. ಸಮಾಜದಲ್ಲಿ ಆಡಳಿತ ವರ್ಗವನ್ನು ರಕ್ಷಿಸುವ ಬೆಂಬಲಿಸುವ ಹೊಣೆ ಪ್ರತಿಯೊಬ್ಬರದ್ದು ಹಾಗೂ ಶೋಷಿತ ಜನರ ಪಾಲನೆ ಸರ್ವರ ಕರ್ತವ್ಯ ಎಂಬ ಭಾವ ಮೂಡಿಸುತ್ತಿದೆ ಈ ಗೀತೆ.

ಸುರಾರಿ ಕೀರ್ತನೆಯಲ್ಲಿ ಕ್ರೈಸ್ತರ ಬದುಕಿಗೆ ಸಂಬಂಧಿಸಿದ ಗೀತೆಗಳು: 'ಸುರಪಾನದಲ್ಲಿ ಶೂರತನವನ್ನು ತೋರಿಸದಿರು, ಸುರೆಯು ಅನೇಕರನ್ನು ಸೂರೆಗೊಂಡು ಇರುವುದು. ಮಿತಿಮೀರಿ ಕುಡಿಯುವುದರ

ಪರಿಣಾಮ ಕಡಿದಾಟ, ಬಡಿದಾಟ, ಮನಸ್ಸಿಗೆ ಉಪಟಳ' ಎಂದು ಪವಿತ್ರ ಗ್ರಂಥದಲ್ಲಿ ಓದುತ್ತೇವೆ (ಸಿರಾಖ ೩೧:೨೫) ಮಧ್ಯಪಾನವು ಹಾನಿಕರವಾದುದು ಎಂಬುದನ್ನು ಪವಿತ್ರಗ್ರಂಥವು ಬೋಧಿಸುತ್ತದೆ. 'ಸುರಾರಿ ಕೀರ್ತನೆಗಳು' ಕೃತಿಯಲ್ಲಿ ಮಧ್ಯಪಾನದ ಕೆಡುಕನ್ನು ತಿಳಿಸುತ್ತಾ ಮಧ್ಯಪಾನಸಕ್ತರನ್ನು ತಿದ್ದಲು ರಚಿಸಿದ ಗೀತೆಗಳಿವೆ. ಮಧ್ಯಪಾನಿಯು ತನ್ನ ದುಶ್ಚಟದಿಂದ ಹೊರಬಂದು ಉತ್ತಮ ಬಾಳನ್ನು ನಡೆಸಲು ಬಯಸುವ ಗೀತೆಗಳನ್ನು ಲೂತಿಯವರು ರಚಿಸಿದ್ದಾರೆ. ದುರಭ್ಯಾಸಗಳು ಅಸ್ಥಿರ ಲೋಕದ ವರ್ತನೆಗಳು ಇವನ್ನು ಬಿಡಲು ಸಿದ್ದನೆಂದು ಮಧ್ಯಪಾನಿಯು ನಿರ್ಧರಿಸಿದ ಬಗೆ ವ್ಯಕ್ತವಾಗಿದೆ. 'ಬಾ ತಮ್ಮ ಇಂದು ಕಳ್ಳಿಗ್ಹೋಗುವಾ!' ಗೀತೆಯಲ್ಲಿ.

೧. ಬಾ ತಮ್ಮ ಇಂದು ಕಳ್ಳಿ
ಗ್ಹೋಗುವಾ!
ಸ್ವತಂತ್ರ ನಿನಗೀಗ ಸಿಕ್ಕತಲ್ಲ?
ಇದೊಂದೆ ಸಾರಿ ರುಚಿನೋಡ ಬಾ!
(ಎಲ್ಲರು) ನಾ ವಲ್ಲೆನು! ನಾವಲ್ಲೆನು!
ಕ್ರೈಸ್ತ ಭ್ರಷ್ಟನಾಗಲೊಲ್ಲೆ

೨. ಬಾ ಕ್ರೈಸ್ತ ಒಮ್ಮೆ ಲೀಲೆ
ನೋಡ ಬಾ!
ಮೊಗಾಲು ಸ್ವಲ್ಪ ನಿಶೆ ಮಾಡಿಕೊಂಡು
ಬಾರೊಮ್ಮೆ ವೇಶ್ಯಮನೆಗ್ಹೋಗು ವಾ!
(ಎಲ್ಲರು) ಸೈತಾನ, ಬಿಟ್ಟು ಹೋಗು!
ನರ್ಕದಲ್ಲಿ ಬೀಳಲೊಲ್ಲೆ!

೩. ಬಾರಣ್ಣ, ಸ್ವಲ್ಪ ಜುಗಾ
ರಾಡ ಬಾ!
ಮುಂಜಾನೆ ಪ್ರಾರ್ಥನೆಗೆ ಹೋದಿಯಲ್ಲ?
ಇನ್ನೊಮ್ಮೆ ಯಾಕೆ? ಪಾನ ಮಾಡವಾ!
(ಎಲ್ಲರು)) ನಾ ವಲ್ಲೆನು! ನಾವಲ್ಲೆ!
ಅರೆ ಪ್ರಾಯ ಸಾಯಲೊಲ್ಲೆ!

೪. ಬಾ ನೆಂಟ! ಕೋಳಿ ಪಡೆ
ನೋಡ ಬಾ
ಒಪ್ಪತ್ತು ಹೋರೆ ಬಿಟ್ಟರೇನು ನಷ್ಟ?
ಹಾದೀಲಿ ಸಾರಾಯ್ ಕಂಡು ಕುಡಿವಾ!
(ಎಲ್ಲರು) ನಾ ವಲ್ಲೆಯ! ನಾ ವಲ್ಲೆ!
ಭಿಕ್ಷಗಾರನಾಗಲೊಲ್ಲೆ!

ಸುರಾರಿ ಕೀರ್ತನೆಗಳು, ಗೀತೆ-೨೨

ಜನ ಸಾಮಾನ್ಯರನ್ನು ಉದ್ದೇಶಿಸಿ ಬರೆದ ಗೀತೆಯಾಗಿದ್ದು ಸರಳ ಶೈಲಿ ಹೊಂದಿದೆ. ಹಾಗೂ ಸಮೂಹ ಗೀತೆಯಾಗಿದೆ. ಮಿಶನರಿಗಳು ಕೇವಲ ಧಾರ್ಮಿಕ ವಿಧಿ ವಿಧಾನಗಳಿಗೆ ಸಂಬಂಧಿಸಿದ ಗೀತೆಗಳನ್ನು ರಚಿಸದೆ ಸಮಾಜದಲ್ಲಿನ ಸಮಸ್ಯೆಗಳಿಗೆ ಸ್ಪಂದಿಸಿ ಸಮಾಜವನ್ನು ತಿದ್ದುವ ಕಾರ್ಯದಲ್ಲಿ ತೊಡಗಿದರು. ಸಮಾಜದ ಅಭಿವೃದ್ಧಿಗೆ ವ್ಯಕ್ತಿಯೊಬ್ಬನ ನೈತಿಕ ನಡತೆ ಪ್ರಬಲವಾಗಿ ಪರಿಣಾಮ ಬೀರುತ್ತದೆ ಎಂಬುದನ್ನರಿತ ಮಿಶನರಿಗಳು ಈ ರೀತಿಯ ಗೀತೆಗಳ ರಚನೆಯಲ್ಲಿ ತೊಡಗಿದರು. ದೇಶೀ ಶೈಲಿಯನ್ನು ಈ ಗೀತೆ ಹೊಂದಿದೆ.

ಆತ್ಮ ನಿವೇದನೆ: 'ಶೋಕಾರ್ತನಾದ ಭಕ್ತ' ಎಂಬ ಗೀತೆಯನ್ನು ಲೂತಿಯವರು Beflehl du deine wege ಎಂಬ ಜರ್ಮನ್ ಗೀತೆಯಿಂದ ಭಾಷಾಂತರಿಸಿದನು. ಇದನ್ನು ಮೂಲದಲ್ಲಿ ಪಾಲ್ ಗೆರ್ಹಾರ್ಟ ಎಂಬುವರು ರಚಿಸಿದರು. ಈತನು ೧೬೦೭-೧೬೭೬ ರವರೆಗೆ ಬದುಕಿದ್ದ ಲೂಥರ್ ಸಭೆಯ ಪಾಸ್ಟರ್ ಆಗಿದ್ದನು.

ಲೂಥರನನ್ನು ಬಿಟ್ಟರೆ ಜರ್ಮನಿಗೆ ಜನಪ್ರಿವಾದ ಸಂಗೀತಗಳನ್ನು ಕೊಟ್ಟ ದೊಡ್ಡ ಸಂಗೀತಗಾರನೆಂದರೆ ಈತನೆ. ಈತನು ಬಹಳ ಸಂಕಷ್ಟಗಳನ್ನು ಅನುಭವಿಸಿದನು. ಈತನ ಸಂಗೀತಗಳು ಒಳ್ಳೆಯ ಆಸಕ್ತಿಯಿಂದಲೂ ಸಂತೋಷದಿಂದಲೂ ಕೂಡಿವೆ. ಈತನೇ ಬರೆದ ಇನ್ನೊಂದು ಗೀತೆ 'ಈ ವ್ಯರ್ಥ ಚಿಂತೆ ಬಿಟ್ಟು' ಎಂಬುದು (ಗೀತೆ ೨೯೫).

ಭಕ್ತನು ಬದುಕು ದು:ಖ, ಅಶಾಂತಿ, ಅಸಮಾಧಾನಕ್ಕೆ ಸೇರಿದವುಗಳಲ್ಲಿ ಬದಲಾಗಿ ಆತನ ಬದುಕು ಸಂತಸದ ಗಣಿಯಾಗಿ ಮಾರ್ಪಡಬೇಕು. ಶೋಕ, ಹಿಂಸೆಗಳು ಆತನ ಬದುಕಿನಲ್ಲಿ ಎಡ ಮಾಡಿದ್ದೇ ಆದರೆ ಆತನು ಎಲ್ಲವನ್ನೂ ಬಲ್ಲ ಎಲ್ಲವನ್ನೂ ಮಾರ್ಪಡಿಸಲು ಶಕ್ತನಾದ ದೇವರಿಗೆ ಅರ್ಪಿಸಬೇಕೆಂದು ಹೇಳುತ್ತಾನೆ. ಕೇವಲ ಸಮರ್ಪಣೆಯ ಬದುಕು ದೇವರಿಂದ ವರಗಳನ್ನು ಪಡೆಯಲು ಸಾಧ್ಯವಿದೆ. ಸೈತಾನನ ಶೋಧನೆಯು ಇಹದಲ್ಲಿ ತಪ್ಪಿದ್ದಲ್ಲ ಆದರೆ ಈ ಶೋಧನೆಗಳನ್ನು ಹಿಮ್ಮೆಟ್ಟಿ ಕಾರ್ಯಸಾಧನೆಯಲ್ಲಿ ತೊಡಗಿದಾದ ಯಶಸ್ಸು ನಮ್ಮದಾಗಲು ಸಾದ್ಯವಿದೆ ಎಂಬ ಆಶಯವನ್ನು ಹೊಂದಿದೆ ಈ ಗೀತೆ.

ಶೋಕಾರ್ತನಾದ ಭಕ್ತ
ನಿನ್ನೆಲ್ಲ ಬೇಸರು
ಯೆಹೋವ ಸರ್ವಶಕ್ತ
ಎಂಬಾತಗೊಪ್ಪಿಸು!
ಈ ವಿಶ್ವದಧಿಕಾರಿ
ಚಂದ್ರಾದಿ ಸಾಗಿಸೆ
ನಿನ್ನಡಿಗೊಂದು ದಾರಿ
ಇನ್ನುಂಟು ಮಾಡನೇ?

ಸ್ವರ್ಗೀಯ ಯಜಮಾನ!
ಆಶ್ಚರ್ಯ ಪ್ರಭುವೇ!
ಸ್ವೀಕರಿಸೆಮ್ಮ ಗಾನ!
ಕೇಳೆಮ್ಮ ಪ್ರಾರ್ಥನೆ –
ಇಡೀ ಭೂಯಾತ್ರೆಯಲ್ಲಿ
ನೀ ನೆಮಗೊಲಿದು
ಬಿಡಾರ ಬಿಡುವಲ್ಲಿ
ನಿನ್ನೈಕ್ಯ ಶೇರಿಸು!

ಕನ್ನಡ ಗೀತೆಗಳು, ಗೀತೆ–೨೯೪

Nearer my God to thee ಎಂಬ ಆಂಗ್ಲ ಗೀತೆಯನ್ನು ಲೂತಿ ಮತ್ತು ಬಿ. ರೈಸ್‌ರವರು ಭಾಷಾಂತರಿಸಿದ್ದಾರೆ. ಲೂತಿಯವರು 'ಮತ್ತಷ್ಟು ಹತ್ರ' ಎಂದು ರಚಿಸಿದ್ದಾರೆ.

ಲೂತಿಯವರ ಗೀತೆ

೧. ಮತ್ತಷ್ಟು ಹತ್ತರ
ನನ್ನ ತಕ್ಕೋ!
ಸುತ್ತಲು ಬಂಧನ!
ಬಿಡಿಸಕೋ!
ಮುದ್ದಿನಿಂದಾಗಲಿ

ಬಿ. ರೈಸ್‌ರವರ ಗೀತೆ

೧. ನಿನ್ನೆಡೆ ದೇವರೇ
ನಿನ್ನಡೆ
ನಾ ನಿನ್ನು ವಾಸಿಸೆ
ಆಶಿಸುವೆ
ಕ್ರೂಜೆಯ ಹೊತ್ತರೂ

ಬೆತ್ತದಿಂದಾಗಲಿ
ಮತ್ತಷ್ಟು ಹತ್ತರ
ಎಳೆದುಕೋ!

೨. ಕಾರ್ಗತ್ತಲಾದರೂ
ಸಾಗುವೆನು
ಮಾರ್ಗದಿನೊಂದರೂ
ಹಾಡುವೆನು
ನಿಂದೆಯೂ ತೊಂದರೆ
ಬಂದರೆ ಬೇಡುವೆ
ಮತ್ತಷ್ಟು ಹತ್ತರ
ಎಳೆದುಕೋ!

ಕನ್ನಡ ಗೀತೆಗಳು–೨೭೮.

ನಿನ್ನ ಸಮೀಪ್ಯವೇ
ನಾನಿರುವೆ

೨. ಈ ಭೂ ಪ್ರಯಾಣವು
ಮುಗಿಯಲು
ಎಲ್ಲೆಲ್ಲೂ ಕತ್ತಲು
ಮುತ್ತಿರಲು
ನಿನ್ನೆಡೆಯಿದ್ದರೆ
ನಿರ್ಭಯವೆನಗೆ
ಎನ್ನಿಶನೇ

ಕನ್ನಡ ಸಂಗೀತಗಳು, ೧೯೬೬, ಗೀತೆ–೨೨೯

ಪದಗಳ ಬಳಕೆಯಲ್ಲಿ ಬಹಳಷ್ಟು ವ್ಯತ್ಯಾಸವನ್ನು ಎಲ್ಲ ಚರಣಗಳಲ್ಲೂ ಕಾಣುತ್ತೇವೆ. ಆದರೆ ಇವುಗಳ ಅರ್ಥ ಒಂದೇ ಆಗಿದೆ. ಲೂತಿಯವರೂ ಕೂಡ ಇಂಗ್ಲಿಷಿನ ಗೀತೆಯ ೫ನೇ ಚರಣವನ್ನು ಭಾಷಾಂತರಿಸಲಿಲ್ಲ.

ಪ್ರಾರ್ಥನೆ: ಬಾಲಕರ ಗೀತೆಯಲ್ಲಿನ ಗೀತೆ: ಸೂರ್ಯಾಸ್ತಮಾನದ ಸಮಯ ದೇವರ ವರದಾನಗಳನ್ನು ಸ್ಮರಿಸಿ ಆತನಿಗೆ ಸ್ತೋತ್ರವನರ್ಪಿಸುವ ಸಮಯ, ಸೃಷ್ಟಿ ಜಾಲಗಳು, ಸಂಧ್ಯಾ ವೇಳೆಯಲ್ಲಿ ತಮ್ಮ ವಾಸ ಸ್ಥಳಕ್ಕೆ ಹಿಂದಿರುಗಿದಾಗ ಸ್ತೋತ್ರವರ್ಪಿಸುತ್ತದೆ. ಅಂತೆಯೇ, "ಸೃಷ್ಟಿಯ ಕಿರೀಟದಂತಿರುವ ಮಾನವನು"[೮೮] ದೇವರಿಗೆ ಸ್ತೋತ್ರವನ್ನರ್ಪಿಸುವ ಹಂಗಿನಲ್ಲಿದ್ದಾನೆ ಎಂದು ಗೀತಗಾರ 'ಸೂರ್ಯಾಸ್ತಮಾನ' ಗೀತೆಯಲ್ಲಿ ವ್ಯಕ್ತಪಡಿಸಿದ್ದಾನೆ.

ಚಿಕ್ಕಿಯ ರಾಶಿಗಳೀಗ
ಮಿನುಗ ತೊಡಗಿವೆ
ಪರಮ ತಂದೆಯನ್ನೀಗ
ಹೊಗಳ ತಕ್ಕದದೆ

ದನದ ಹಿಂಡುಗಳೆಲ್ಲ
ಊರಿಗೆ ಮುಟ್ಟಿದವು
ಕೆಲಸ ಮುಗಿಸಿಮೆಲ್ಲ
ಮನೆಗೆ ಸೇರುವೆವು

ಬಾಲಕರ ಗೀತೆಗಳು, ಗೀತೆ–೧೦

ಹಬ್ಬಗಳು:– ಯೇಸುವಿನ ಯಾತನೆಗೆ ಸಂಬಂಧಿಸಿದ ಗೀತೆಗಳು: ಯೇಸುವು ತನ್ನ ಇಹಲೋಕದ ಕೊನೆಯ ಗಳಿಗೆಯಲ್ಲಿ ಅನುಭವಿಸಿದ ಯಾತನೆ ಅತೀ ಕಠೋರವಾದರೂ ಶಿಲುಬೆಯ ಯಾತನೆಯ ಮೂಲಕ ರಕ್ಷಣೆಯನ್ನು ತರುವಂತಹ ಯೋಜನೆಯನ್ನು ಕೈಬಿಡಲೆಂದು ದೇವಪಿತನಲ್ಲಿ ಪ್ರಾರ್ಥಿಸಲಿಲ್ಲ. ಶರೀರವು ದುರ್ಬಲತೆಯಿಂದ ಕೂಡಿದರೂ ಯಾತನೆಯನ್ನು ಅನುಭವಿಸಲು ಯೇಸು ಸಿದ್ಧರಾಗುತ್ತಾರೆ. ದೇವರು

ತನ್ನನ್ನು ಸಂಪೂರ್ಣ ಕೈ ಬಿಟ್ಟರೋ ಎಂಬ ಪ್ರಶ್ನೆ ಉದ್ಭವಿಸುತ್ತದೆ. ತನ್ನ ನೋವಿನಲ್ಲೂ ದೇವರ ಯೋಜನೆಯನ್ನು ದೇವರ ಸಹಾಯ ಹಸ್ತವನ್ನು ಯೇಸು ನೋಡುತ್ತಾರೆ. ದೇವರಲ್ಲಿ ತನ್ನ ನೋವನ್ನು ಒಪ್ಪಿಸುತ್ತಾರೆ.

ಹಿಂಸೆಯಿಂದ ಸಾಧನೆಯನ್ನು ಪಡೆಯಲು ಖಂಡಿತ ಸಾಧ್ಯವಿಲ್ಲ ಎಂಬುದು ಯೇಸುವಿನ ವಾದವಾಗಿದೆ. ಶಾಂತಿ ದೇವರ ರಾಜ್ಯದ ಸಂಕೇತವಾಗಿದೆ (ಮತ್ತಾ ೫:೯). ಹಿಂಸೆಯಿಂದ ರಕ್ತಪಾತ, ಅಶಾಂತತೆಯ ವಾತಾವರಣ ಬೆಳೆಯುತ್ತಲೇ ಹೋಗುತ್ತದೆ. ಆದರೆ ಯೇಸುವಿನ ಮರಣದ, ಯಾತನೆಯ ಸಂದರ್ಭಗಳು ನಮಗೆ ನಮ್ಮ ಕಷ್ಟದ ಸನ್ನಿವೇಶದಲ್ಲಿ ಜಯ ಸಾಧಿಸಲು ಪ್ರೇರಣೆಯನ್ನು ಭರವಸೆಯನ್ನು ನೀಡುತ್ತದೆ. ದೇವರ ಯೋಜನೆಯ ಮುಂದೆ ನಾವೆಲ್ಲರು ತಲೆಬಾಗಬೇಕು ಎಂಬ ಆಶಯವನ್ನು 'ಅಗೋ! ಆ ತೋಟದೊಳಗೆ' ಎಂಬ ಗೀತೆ ಹೊಂದಿದೆ. ಇದು Schau hin ! Dort in Gethsemane ಎಂಬ ಗೀತೆಯ ಭಾಷಾಂತರವಾಗಿದೆ.

ಅಗೊ ಮತ್ತಷ್ಟು ಸಂಕಟ!
ಭೂಮಿಲಿ ಬಿದ್ದ ಬೇಡುತ್ತ
ಈ ಪಾತ್ರೆ ಬೇಡವು!
ಆದಾಗ್ಯೂ ನೆರವೇರಿಸು
ನಿನ್ನಚ್ಚೆ ತಂದೆ ಈಗಲು!

ಅಗೋ ಆ ಶೂರನಂತೆಯೇ
ನೀ ಪ್ರಾರ್ಥಿಸಿನ್ನು, ಕ್ರೈಸ್ತನೇ
ಹೋರಾಟ ಬರಲು!
ಆ ಜಯಶಾಲಿ ಕ್ರಿಸ್ತನು
ವಿಜಯ ನಿನಗೀಯ್ವನು

ಕನ್ನಡ ಗೀತೆಗಳು, ಗೀತೆ–೬೬

ಪುನರುತ್ಥಾನದ ಫಲವನ್ನು ಅನುಭವಿಸಿ ಆನಂದದಿಂದ ಬಾಳಲು ಸಾಧ್ಯವಿದೆ ಎಂಬ ಆಶಯವನ್ನು ಹೊಂದಿದೆ. 'ಉತ್ಥಾನದ ದಿನ ಜಯೋತ್ಸವವೇ' ಎಂಬ ಗೀತೆಯಲ್ಲಿ ಇದು O herrlicher Tag ಎಂಬ ಗೀತೆಯ ಭಾಷಾಂತರವಾಗಿದೆ.

ಉತ್ಥಾನದ ದಿನ, ಜಯೋತ್ಸವವೇ!
ಈ ದಿನ ಕ್ರಿಸ್ತನೆದ್ದನು;
ಎದ್ದಾತನಿಂದ ನಮಗು
ಸದಾ ಸಂಜೀವ ನಿಜವು
ಉತ್ಥಾನದ ದಿನ ಜಯೋತ್ಸವವೇ!

ಉತ್ಥಾನದ ದಿನ, ಜಯೋತ್ಸವವೇ!
ಎದ್ದಾತ ಸಾಲ ಪತ್ರವ
ವಿನಾಶ ಮಾಡಿ ಬಿಟ್ಟವ
ನಮ್ಮೆಲ್ಲ ಪಾಪ ಹೋಯ್ತಹ!
ಉತ್ಥಾನದ ದಿನ ಜಯೋತ್ಸವವೇ!

ಕನ್ನಡ ಗೀತೆಗಳು, ಗೀತೆ–೮೯

ಯುಗಾದಿಗೆ ಸಂಬಂಧಿಸಿದ ಗೀತೆ: ಹೊಸ ವರ್ಷದ ಆರಂಭದಲ್ಲಿ ತನ್ನನ್ನೇ ದೇವರ ಆಶೀರ್ವಾದಕ್ಕಾಗಿ ಅರ್ಪಿಸಿಕೊಂಡು ದೊರೆತ ಎಲ್ಲ ದಾನಗಳಿಗಾಗಿ ವಂದನೆ ಸಲ್ಲಿಸಿ ಶಾರೀರಿಕ ಆದ್ಯಾತ್ಮಿಕ ವರಗಳನ್ನು

ಬೇಡುತ್ತಿದ್ದಾನೆ ಗೀತಗಾರ. 'ಒಂದೊರ್ಷದ ಸಂಚಾರ' ಎಂಬ ಗೀತೆಯಲ್ಲಿ. ಹೊಸ ವರ್ಷದಲ್ಲಿ ಮರಣ, ರೋಗ, ಆಪತ್ತುಗಳಿಂದ ಬಿಡುಗಡೆ ಹೊಂದಿ ಕ್ಷೇಮಕರ' ಬದುಕನ್ನು ನಡೆಸಲು ಯೋಗ್ಯರನ್ನಾಗಿಸಲು ಬೇಡಿಕೊಂಡಿದ್ದಾನೆ ಗೀತಗಾರ.

ಕ್ಷಾಮ, ವ್ಯಾಧಿ, ಯುದ್ಧ
ಮೊದಲಾದ ಕಷ್ಟ
ಅರ್ಥ ಮತ್ತು ಪ್ರಾಣ ನಷ್ಟ
ಬ್ರಾತ್ರರಿಂಗೆ ತಾಗಿ
ದು:ಖ ಹುಟ್ಟಿನಲ್ಲಿ

ನೀನು ನಮ್ಮ ಸೀಮೆಯಲ್ಲಿ
ತಂದೆಯೇ
ದೇವರೇ
ಇಟ್ಟ ಸಮಾಧಾನ
ಕೊಟ್ಟ ಅನ್ನಪಾನ

ಕನ್ನಡ ಗೀತೆಗಳು, ಗೀತೆ–೩೪೬

ಬಾಲಕರ ಗೀತೆಯಲ್ಲಿ ಯಾತನೆ ಮತ್ತು ಪುನರುತ್ಥಾನಕ್ಕೆ ಸಂಬಂಧಿಸಿದ ಗೀತೆಗಳು:

ಯೇಸುವಿನ ಶ್ರಮ, ಮರಣ, ಪುನರುತ್ಥಾನಗಳಿಗೆ ಸಂಬಂಧಿಸಿದ ಗೀತೆಗಳು 'ಬಾಲಕರ ಗೀತೆಗಳು' ಕೃತಿಯಲ್ಲಿ ಪ್ರಕಟವಾಗಿವೆ. ಇವರ 'ಗೆತ್ಸೆಮನೆ' ಎಂಬ ಗೀತವು ಯೇಸು ಶಿಲುಬೆಯಲ್ಲಿ ಆಡಿದ ಏಳು ಮಾತುಗಳಲ್ಲಿ ಒಂದನ್ನು ಸೂಚಿಸುತ್ತದೆ ಅದೇ "ಈ ಪಾತ್ರೆ ಬೇಡವು ಅದಾಗ್ಯು ನೆರವೇರಿಸು"[೮೯] ಎಂಬ ನುಡಿ.

ಯೇಸುವು ಅನೇಕ ಬಾರಿ ಗೆತ್ಸೆಮನೆ ತೋಟಕ್ಕೆ ಪ್ರಾರ್ಥನೆ ಮಾಡಲು ಹೋಗುತ್ತಿದ್ದರು. ಯೇಸು ಯಾವುದೇ ಕೆಲಸವನ್ನು ಅಥವಾ ಪ್ರತಿನಿತ್ಯದ ಕಾರ್ಯವನ್ನು ತೊಡಗುವಾಗ ಪ್ರಾರ್ಥನೆಯಲ್ಲಿ ತೊಡಗುತ್ತಿದ್ದರು. ಅಂತೆಯೇ ಯೇಸುವಿನ ಅಂತ್ಯ ಕ್ಷಣದಲ್ಲಿ ತನಗುಂಟಾಗಬಹುದಾದ ಪೀಡನೆ, ಮರಣವನ್ನು ತಿಳಿದಿದ್ದು ಆತ ತನ್ನ ಶಿಷ್ಯರೊಂದಿಗೆ ಆ ತೋಟದಲ್ಲಿ ಪ್ರಾರ್ಥಿಸಲು ತೊಡಗಿದ್ದು ಹಾಗೂ ಆತನನ್ನು ದ್ರೋಹಿಗಳು ಹಿಡಿದು ಶಿಕ್ಷೆಗೆ ಒಳಪಡಿಸಿದ್ದು ಕ್ರೂರ ರೀತಿಯಲ್ಲಿ ವರ್ಣಿತವಾಗಿದೆ. ಪ್ರಾರ್ಥನೆಯು ಮನುಷ್ಯನನ್ನು ಎಲ್ಲ ಕಷ್ಟಗಳಿಂದ ದೂರ ಮಾಡಿ ಆತನನ್ನು ಸನ್ಮಾರ್ಗಕ್ಕೆ ನಡೆಸುತ್ತದೆ. ಎಲ್ಲ ಕಷ್ಟಗಳನ್ನು ಜಯಿಸಿ ಯಶಸ್ಸನ್ನು ಪಡೆಯುವ ಶಕ್ತಿ ನೀಡುತ್ತದೆ ಎಂಬ ಆಶಯ ಈ ಗೀತೆಯಲ್ಲಿದೆ.

ಅಗೋ! ಆ ತೋಟದೊಳಗೆ
ನಮ್ಮತಿ ಪ್ರಿಯ ಯೇಸುವೆ
ಹೋರಾಡುತ್ತಿರುವ
ನಮ್ಮೆಲ್ಲ ಪಾಪರಾಶಿಯ
ನಿರ್ದೋಷಿ ಹೊತ್ತುಕೊಳ್ಳುವ

ಅಗೋ ಮತ್ತಷ್ಟು ಸಂಕಟ!
ಭೂಮೀಲಿ ಬಿದ್ದ ಬೇಡುತ್ತ
ಈ ಪಾತ್ರೆ ಬೇಡವು!
ಆದಾಗ್ಯೂ ನೆರವೇರಿಸು
ನಿನ್ನಿಷ್ಟ ತಂದೆ, ಈಗಲು!

ಅಗೋ! ಆ ಶೂರನಂತೆಯೆ
ನೀ ಪ್ರಾರ್ಥಿಸಿನ್ನು, ಕ್ರೈಸ್ತನೇ
ಹೋರಾಟ ಬರಲು!
ಆ ಜಯಶಾಲಿಯಿಂದಲು
ನೀ ಜಯ ಹೊಂದಬಹುದು

ಬಾಲಕರ ಗೀತೆಗಳು, ಗೀತೆ–೧೪೪

ಲೂತಿಯವರ ಗೀತೆಯ ವೈಶಿಷ್ಟ್ಯತೆಗಳು: ಲೂತಿಯವರು ಬರೆದ ೫೩ ಗೀತೆಗಳಲ್ಲಿ ಭಾಷಾಂತರಿಸಿದ ಗೀತೆಗಳೇ ಹೆಚ್ಚು. ಅದರಲ್ಲೂ ಜರ್ಮನ್ ಭಾಷೆಯಿಂದ ೨೫ ಗೀತೆಗಳನ್ನು ಭಾಷಾಂತರಿಸಿದ್ದಾರೆ. ಇವರ ಗೀತೆಗಳು

ಹೆಚ್ಚಾಗಿ ಯೇಸುವಿನ ಜನನ, ಶ್ರಮೆ, ಪುನರುತ್ಥಾನ, ಬೋಧನೆ ಮತ್ತು ಆಚಾರಗಳಿಗೆ ಸಂಬಂಧಿಸಿದೆ. ಇವರ ಗೀತೆಗಳು ಬಾಲಕರ ಗೀತೆಗಳು ಮತ್ತು ಸುರಾರಿ ಕೀರ್ತನೆಗಳಲ್ಲಿಯೂ ಕಂಡು ಬಂದಿರುವುದು ವಿಶೇಷವಾಗಿದೆ.

ದೇಶೀಯತೆಯನ್ನು ವ್ಯಕ್ತಪಡಿಸುವ ಹಲವು ಗೀತೆಗಳಿವೆ. 'ದಿವ್ಯ ಶಾಸನ' (ಗೀತೆ ೧೬೫) ಎಂಬ ಗೀತೆಯಲ್ಲಿ ಬೈಬಲ್ ಗ್ರಂಥವನ್ನು 'ಶ್ರೀ ಬೈಬಲ್' ಎಂದು ಸಂಬೋಧಿಸಿ ಹೇಳಿದ್ದಾರೆ. 'ಶ್ರೀ' ದೇಶೀ ಸಂಸ್ಕೃತಿಯಲ್ಲಿ ಗೌರವ ಸೂಚಕದ ಸಂಕೇತ. ಸಾಮಾಜಿಕ ಬದುಕನ್ನು ನಡೆಸಲು ಪ್ರತಿ ರಾಷ್ಟ್ರವು ಶಾಶನಗಳನ್ನು ಹೊಂದಿದೆ. ಇದರಿಂದ ಪ್ರತಿಯೊಂದು ರಾಷ್ಟ್ರದ ಸಾಮಾಜಿಕ ಬದುಕು ಶಾಂತಿಯಿಂದ ನಡೆದು ಸಾಗಲು ಸಾಧ್ಯವಾಗಿದೆ. ಅಂತೆಯೇ ಮಾನವನಿಗೆ ದೇವರಿಂದ ಕೊಡಲ್ಪಟ್ಟ ಶಾಶನವಾಗಿದೆ 'ದೇವವಾಕ್ಯ' ಇದಕ್ಕನುಗುಣವಾಗಿ ನಡೆದರೆ ವ್ಯಕ್ತಿಯ ಆಧ್ಯಾತ್ಮಕ, ನೈತಿಕ, ಸಾಮಾಜಿಕ ಬದುಕು ಸುಗಮವಾಗುತ್ತದೆ ಎಂದು ವರ್ಣಿಸಿರುವುದು ಕವಿಯ ಸೃಜನ ಶೀಲತೆಗೆ ನಿದರ್ಶನವಾಗಿದೆ. ಯುಗಾದಿಗೆ ಸಂಬಂಧಿಸಿದ ಗೀತೆಯು ಇವರ ದೇಶೀ ಪ್ರೇಮವನ್ನು ಸೂಚಿಸುತ್ತದೆ.

ಲೂತಿಯವರು ಬಿ. ರೈಸ್ ಬರೆದ 'ಹಾ! ಎಂಥಾ ಅಮೂಲ್ಯ ಮಿತ್ರ' ಮತ್ತು 'ನಿನ್ನೆಡೆ ದೇವರೆ' ಎಂಬ ಗೀತೆಗಳನ್ನು 'ಯೇಸು ನಮಗೆಂಥ ಮಿತ್ರ ಮತ್ತು 'ಮತ್ತಷ್ಟು ಹತ್ರ' ಎಂದು ರಚಿಸಿದ್ದಾರೆ. ಮೂಲ ಗೀತೆ ಆಂಗ್ಲ ಭಾಷೆಯದಾಗಿದೆ. ಪದಗಳಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ. ಆದರೆ ಗೀತೆಯ ಅರ್ಥ ಒಂದೇ ಆಗಿದೆ. ಈ ಗೀತೆಗಳು ಇಂದೂ ಜನಪ್ರಿಯವಾಗಿದ್ದು ಅರ್ಥಗರ್ಭಿತವಾಗಿದೆ.

ಪ್ರಕೃತಿಯ ದುರಂತಗಳನ್ನು ಸಾಮಾಜಿಕ ಅಸಮತೋಲನವನ್ನು ಗೀತೆಯಲ್ಲಿ ತಂದಿರುವ ಬಗೆ ಮನ ಸೆಳೆಯುತ್ತದೆ. ಪರೋಪಕಾರ (ಗೀತೆ ೬೫ ಬಾಲಕರ ಗೀತೆಗಳು) ಎಂಬ ಗೀತೆಯಲ್ಲಿ ಭೂಕಂಪ, ಬರ, ಶೋಷಿತ ಜನಾಂಗದ ರಾಜರ ರಕ್ಷಣೆಯ ಕುರಿತು ವಿವರಿಸಿರುವ ಬಗೆ ಕವಿಗಿರುವ ಸಾಮಾಜಿಕ ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ಕ್ರೈಸ್ತರಾದವರು ಸಮಾಜದಲ್ಲಿನ ಬಡವರನ್ನು ಶೋಷಿತರನ್ನು ಅಸಾಯಕ ವ್ಯಕ್ತಿಗಳನ್ನು ಕಂಡು ತಮ್ಮ ಸಹಾಯಸ್ತವನ್ನು ಚಾಚಬೇಕೆನ್ನುವ ಈ ಗೀತೆ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವನ್ನು ಎಚ್ಚರಿಸುವಂತಿದೆ.

ಲೂತಿಯವರು ಸಾಮಾಜಿಕ ಜೀವನದತ್ತ ತಮ್ಮ ಗಮನ ಹರಿಸಿರುವುದು ವಿಶೇಷವಾಗಿದೆ. ಸಮಾಜದಲ್ಲಿ ಜನರ ನೈತಿಕತೆ, ಅದೋಗತಿಗೆ ಹೋಗುತ್ತಿರುವಾಗ ಅವರ ನೈತಿಕ ಬದುಕಿನತ್ತ ಆಸಕ್ತಿ ವಹಿಸಿ ಅಂದಿನ ಸಮಾಜದ ಅನಿಷ್ಟ ಪದ್ಧತಿಯಾದ ಕುಡಿಕತನವನ್ನು ತಡೆಗಟ್ಟಲು ಇವರು ಶ್ರಮಿಸಿದ ರೀತಿ ಅನನ್ಯವಾದದ್ದು. ಕುಡಕರನ್ನು ತಿದ್ದುವ ಸಲುವಾಗಿಯೇ ರಚಿಸಿದ ಸುರಾರಿ ಕೀರ್ತನೆಗಳ ಸಂಗ್ರಹ ಹಾಗೂ ಅದರಲ್ಲಿ ಅವರೇ ರಚಿಸಿದ ಗೀತೆಗಳು ಮೌಲ್ಯಯುತವಾದವುಗಳು. ಈ ಗೀತೆಗಳ ಸಂಗ್ರಹಕಾರರು ಲೂತಿಯವರೇ ಆದದ್ದು ಬೇರೆ ಮಿಶನರಿಗಳಿಗಿಂತ ಇವರು ಭಿನ್ನವಾಗಿ ಕಂಡು ಬರುತ್ತಾರೆ. ಸುರಾರಿ ಕೀರ್ತನೆಗಳ ವಸ್ತುವಿನ ಆಯ್ಕೆಯಲ್ಲಿ ಮಿಶನರಿಗಳು ಯಾವುದೇ ಕಟ್ಟು ನಿಟ್ಟುಗಳನ್ನು ಹಾಕಿಕೊಳ್ಳಲಿಲ್ಲ. ಸಾಮಾನ್ಯವಾಗಿ ಸುತ್ತಲಿನ ಜೀವನದಿಂದ ವಸ್ತುಗಳನ್ನು ಆಯ್ದುಕೊಂಡರು. ಈ ಗೀತೆಗಳು ಜನ ಸಾಮಾನ್ಯರನ್ನೇ ಉದ್ದೇಶಿಸಿ ಬರೆದವುಗಳಾಗಿವೆ. ಆತ್ಮೋದ್ಧಾರ ಪ್ರತಿಪಾದನೆಯಷ್ಟೇ ಮಿಶನರಿಗಳ

ಗುರಿಯಾಗಿರಲಿಲ್ಲ. ಸಮಾಜ ಕುಟುಂಬಗಳನ್ನು ಸರಿಯಾಗಿ ಕಟ್ಟುವುದೂ ಅವರ ಉದ್ದೇಶವಾಗಿತ್ತು. ಆ ಕಾರಣದಿಂದ ಕುರುಡುತನಕ್ಕೆ ಸಂಬಂಧಿಸಿದಂತೆ ಇಂತಹ ಗೀತೆಗಳನ್ನು ರಚಿಸಿದರು. ಗೀತೆಗಳು ದೇಶೀ ಶೈಲಿಯನ್ನು ಹೊಂದಿರುವುದು ಮತ್ತೊಂದು ವಿಶಿಷ್ಟ ಸಂಗತಿಯಾಗಿದೆ.

ಬಾಲಕರ ಗೀತೆಯಲ್ಲಿ ಇವರ ಗೀತೆಗಳು ಕಂಡು ಬರುತ್ತವೆ. ಬಾಲಕರ ಗೀತೆಗಳು ಕೃತಿಯು ಕ್ರೈಸ್ತ ಶಾಲೆಗಳಲ್ಲಿ ಭಾನುವಾರದ ಶಾಲೆಗಳಲ್ಲಿ ಉಪಯೋಗವಾಗುತ್ತಿತ್ತು. ಕ್ರೈಸ್ತೀಯ ಮೌಲ್ಯವಿರುವ ಗೀತೆಗಳನ್ನು ಅಂದು ಶಾಲೆಗಳಲ್ಲಿ ಬಳಸುತ್ತಿದ್ದುದು ಗಮನಾರ್ಹ ಅಂಶವಾಗಿದೆ.

ಲೂತಿಯವರ ಅನೇಕ ಗೀತೆಗಳು ಗದ್ಯಮಯವಾಗಿವೆ. 'ದಿವ್ಯ ಶಾಸನ' ಎಂಬ ಗೀತೆಯ ಪ್ರಾರಂಭದ ಚರಣಗಳಲ್ಲಿ ಗೇಯತೆಯನ್ನು ಹೊಂದಿದ್ದರೂ ನಂತರದ ಚರಣಗಳಲ್ಲಿ ಮಾತಿನ ರೂಪವನ್ನು ಪಡೆದಿದೆ.

ಅಲಂಕಾರಗಳು, ಕಥನ ರೂಪ, ಗೇಯತೆ, ಲಯ ಒಟ್ಟಿನಲ್ಲಿ ಕಾವ್ಯಗುಣ ಕಡಿಮೆಯಾಗಿರುವ ಗೀತೆಗಳು ಹೆಚ್ಚಾಗಿವೆ. ಇವರಿಗೆ ಅರ್ಥ ಪ್ರಧಾನವಾಗಿತ್ತೆ ಹೊರತು ಕಾವ್ಯ ಗುಣವಲ್ಲ ಎಂಬುದು ಇದರಿಂದ ತಿಳಿದು ಬರುತ್ತದೆ.

೫.೩.೪ ಬಿ. ಗ್ರೇಟರ್ - B. Gractar

ಉತ್ತರ ಅಮೇರಿಕಾದಲ್ಲಿ ೧೮೩೮ ಮೇ ೧೨ ರಂದು ಜನಿಸಿ ಕೆಲವು ಕಾಲಗಳ ನಂತರ ವುತ್ತೆಂಬರ್ಗಿಗೆ ಹಿಂದುರಿಗಿ ಬಂದು ನೆಲೆಸಿದರು. ಪ್ರಾರಂಭದಲ್ಲಿ ಪಡೆದ ಕ್ರಿಸ್ತೀಯ ಶಿಕ್ಷಣ ಇವರು ಒಬ್ಬ ಮಿಶನರಿಯಾಗುವಂತೆ ಪ್ರೇರೇಪಣೆ ನೀಡಿತು. ಕ್ರಿ.ಶ. ೧೮೫೯ರಲ್ಲಿ ಬಾಸೆಲ್‌ನ ದೈವಜ್ಞಾನ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸಿದರು. ೧೮೬೩ ರಲ್ಲಿ ಭಾರತದ ಮಲಬಾರಿನ ಪಾಲಘಾಟಕ್ಕೆ ಸೇವೆಗಾಗಿ ಬಂದರು. ನಂತರ ಮಂಗಳೂರಿನ ದೈವಜ್ಞಾನದ ಶಾಲೆಗೆ ಶಿಕ್ಷಕರಾಗಿ ನೇಮಕರಾದರು. ಈಗಾಗಲೇ ಮಲೆಯಾಳಿ ಭಾಷೆಯನ್ನು ಕಲಿಯುತ್ತಿದ್ದ ಇವರು ಇದನ್ನು ನಿಲ್ಲಿಸಿ ಕನ್ನಡ ಕಲಿಕೆಯಲ್ಲಿ ತೊಡಗಬೇಕಾಯಿತು. ಇಲ್ಲಿನ ಹೊಸ ಕಾರ್ಯಕ್ಕಾಗಿ ತನ್ನ ಎಲ್ಲ ಶಕ್ತಿ ಸಾಮರ್ಥ್ಯವನ್ನು ಉಪಯೋಗಿಸಿದರು. ಸಾಹಿತ್ಯಾಭಿರುಚಿಯನ್ನು ಹೊಂದಿದ್ದ ಇವರು ಅನೇಕ ಸಂಗೀತಗಳನ್ನು ರಚಿಸಿದರು. Tables of canarese Grammar (೧೮೮೪) ಎಂಬ ವ್ಯಾಕರಣ ಪಟ್ಟಿಯನ್ನು ಸಿದ್ದಪಡಿಸಿದರು. ಕ್ರಿ.ಶ. ೧೮೯೫ ರಲ್ಲಿ ಗ್ರೇಟರ್ ಅಸ್ವಸ್ಥತೆಗೆ ಒಳಗಾಗಿ ಮರಣ ಹೊಂದಿದರು.[೯೦]

ಗೀತೆಗಳ ಅಧ್ಯಯನ: ಬಾಸೆಲ್ ಗೀತ ಪುಸ್ತಕದಲ್ಲಿ ೩೩ ಗೀತೆಗಳನ್ನು ರಚಿಸಿದ್ದಾರೆ. ೮ ಜರ್ಮನ್ ಭಾಷಾಂತರ ಗೀತೆಗಳು. ೨೫ ಸ್ವರಚಿತ ಗೀತೆಗಳನ್ನು ರಚಿಸಿದ್ದಾರೆ. ಇವರ ಗೀತೆಗಳು ವಿವಿಧ ಭಾಗಗಳಿಗೆ ಸೇರಿವೆ.

ಸಭೋತ್ಸವಗಳು	೧೧
ದೇವರಾಜ್ಯ	೦೫

ಕ್ರೈಸ್ತ ಸಭಾಪಾರ ಕೃಪಾಕರಣಗಳು ೦೭

ರಕ್ಷಣಾ ಮಾರ್ಗ ೧೩

ವಿಶೇಷ ಕಾಲಗಳಿಗೆ ತಕ್ಕ ಗೀತೆಗಳು ೦೬

ಸ್ವರ್ಗ ಮಹಿಮಾಭಿಲಾಷೆ ೦೧

ಒಟ್ಟು ೩೩ ಗೀತಗಳು

ಬೈಬಲ್: ಜರೇಮಿಯಾ ಪ್ರವಾದಿಯ ಪುಸ್ತಕದ "ನನ್ನ ವಾಕ್ಯ ಬೆಂಕಿಗೆ ಸಮಾನ; ಬಂಡೆಯನ್ನು ಪುಡಿ ಪುಡಿ ಮಾಡುವ ಸುತ್ತಿಗೆಗೆ ಸಮಾನ"[೧] ಎಂಬ ವಾಕ್ಯವನ್ನು ಆಧರಿಸಿ ಬಿ ಗ್ರೇಟರ್ 'ವಾಕ್ಯವನ್ನು ಬಲದಿಂದ' ಎಂಬ ಗೀತೆಯನ್ನು ರಚಿಸಿದ್ದಾರೆ. ಇದು ಸ್ವರಚಿತ ಗೀತೆಯಾಗಿದ್ದು Alle menschen mussen ಎಂಬ ರಾಗದಲ್ಲಿದೆ. ದೈವ ವಾಕ್ಯ ಬಲವುಳ್ಳದ್ದು, ಶಕ್ತಿಯುತವಾದದ್ದು ಆದ್ದರಿಂದ ತನ್ನ ಮನಸ್ಸು, ಹೃದಯವನ್ನು ಶಕ್ತಪಡಿಸಲೆಂದು ಬೇಡುತ್ತಿದ್ದಾನೆ ಗೀತಗಾರ.

ವಾಕ್ಯವನ್ನು ಬಲದಿಂದ
ಕರ್ತಾ ಸಾರಗೊಡಿಸು!
ಹೃದದಲ್ಲಿ ಆತ್ಮನಿಂದ
ವಾಕ್ಯಬಾಣ ನಾಟಿಸು!
ಕುದಿಯುವ ಮನಸ್ಸನ್ನೂ
ಜನಾಕರ್ಷ ವಾಕ್ಯವನ್ನೂ
ಕೊಟ್ಟು ಸಾರೊ ಆಳಿಗೆ
ಇರು ಅವನೊಂದಿಗೆ!

ಒಡೆಯಲಿ ಬಂಡೆಯನ್ನು
ವಾಕ್ಯವೆಂಬ ಸುತ್ತಿಗೆ!
ಉರಿಸಲಿ ಹೃದವನ್ನು
ವಾಕ್ಯ ಜ್ವಾಲೆ ಕರ್ತನೆ!
ಕಲ್ಲಿನಂಥ ಮನಸನ್ನು
ಕರಗಿಸಿ ಗರ್ವವನ್ನು
ಮುರಿದು ಸುಧಾರಿಸು
ಕರಗಿದ ಮನಸು!

ಕನ್ನಡ ಗೀತೆಗಳು ೧೯೬೬, ಗೀತೆ–೧೫೨

ದೇವ ವಾಕ್ಯವನ್ನು ಬಾಣ, ಸುತ್ತಿಗೆ, ಜ್ವಾಲೆಗೆ ಹೋಲಿಸಿ ವರ್ಣಿಸಿರುವುದು ಗೀತೆಯ ವಿಶೇಷ. ವಿಧ್ಯರ್ಥಕ ವಾಕ್ಯಗಳ ಬಳಕೆ ಇಲ್ಲಿದೆ. ಉದಾ: ವಾಕ್ಯ ಬಾಣ ನಂಬಿಸು, ಸಾರಗೊಡಿಸು. ಉರಿಸಲಿ ಹೃದವನ್ನು ಕರಗಿಸಿ ಗರ್ವವನ್ನು ಇತ್ಯಾದಿ. ಕಠಿಣ ವಸ್ತುಗಳನ್ನು ನಾಶ ಮಾಡಲು ವಿಭಾಗಿಸಲು ಸಾಧಾರಣವಾಗಿ ಸುತ್ತಿಗೆ, ಬಾಣ, ಬೆಂಕಿಯನ್ನು ಉಪಯೋಗಿಸುವರು. ಆದರೆ ಕಠಿಣ ಹೃದಯವನ್ನು ಮೃದುಗೊಳಿಸುವ ಶಕ್ತಿ ವಾಕ್ಯಕ್ಕಿದೆ ಎಂದು ಗೀತಗಾರ ಹೇಳಿದ್ದಾನೆ. ದೇವ ವಾಕ್ಯವು ಹೃನ್ಮನಗಳ ಬದಲಾವಣೆಗೆ ಯೋಗ್ಯವಾದ ಸಾಧನವಾಗಿದೆ ಎಂದು ವರ್ಣಿಸಿದ್ದಾರೆ.

ಕ್ರಿಸ್ತರ ವ್ಯಕ್ತಿತ್ವ: ಯೇಸುವಿನ ಸಮೀಪಕ್ಕೆ ಹೋಗಲು ಕಾರಣವನ್ನು ಗೀತಗಾರ ತಿಳಿಸುತ್ತಾ ತನ್ನ ಹೃನ್ಮನವನ್ನು ಬಿಚ್ಚಿ ತನ್ನ ನಡೆ ನುಡಿಯನ್ನು ಲಜ್ಜೆ ಇಲ್ಲದೆ ಹೇಳಿಕೊಂಡಿದ್ದಾನೆ 'ಪರಿಶುದ್ದನೇ' ಎಂಬ ಗೀತೆಯಲ್ಲಿ. ಇದು Du mein einzig Licht ಎಂಬ ರಾಗದಲ್ಲಿದೆ.

೧. ಪರಿಶುದ್ಧವೇ
ನಿತ್ಯ ದೇವರೇ!
ನಿನ್ನ ಮುಂದೆ ನಾನು ಬಂದೆ
ನನ್ನ ಪಾಪಭಾರ ತಂದೆ
ನಾನ ಯೋಗ್ಯನು
ಕೆಟ್ಟ ದಾಸನು

೨. ಸುಳ್ಳು, ಕಪಟ
ಕಾಮದಾತುರ
ಕೋಪ, ಗರ್ವ. ಅಹಂಕಾರ
ಉಪಕಾರ ಕವಕಾರ
ಮೋಸ, ಕಳವು
ನನ್ನಿರೊದು

೩. ದ್ವೇಷ, ಹಗೆಯು
ಚಾಡಿ, ಬೈಗಳು,
ಹೊಟ್ಟೆಕಿಚ್ಚು, ಡಂಭ, ನ್ಯಾಯ
ವ್ಯರ್ಥವಾದ ಕಾಲವ್ಯಯ
ಲೆಕ್ಕವಿಲ್ಲದೆ
ಪಾಪ ಮಾಡಿದೆ

೪. ದಿವ್ಯ ತಂದೆಯೇ
ಮಾತು ಕೇಳದೆ
ನಿನಗೆ ವಿರೋಧವಾಗಿ
ಪಾಪ ಮಾಡಿದವನಾಗಿ
ಪುತ್ರನಾಮಕೆ
ನಾನಯೋಗ್ಯನೆ

ಕನ್ನಡ ಗೀತೆಗಳು, ಗೀತೆ-೨೨೧

ಒಬ್ಬ ವ್ಯಕ್ತಿ ಮಾಡಬಹುದಾದ ಎಲ್ಲಕೆಟ್ಟ ನಡೆ ನುಡಿಗಳ ಪಟ್ಟಿಯನ್ನೇ ಇಲ್ಲಿ ನೀಡಿದ್ದಾರೆ ಗೀತಗಾರ. ಯೇಸುವಿನ ಹೆಸರೆ ಇಲ್ಲದೆ ಇರುವ ಈ ಗೀತೆ ಕ್ರಿಸ್ತೀಯ ಮೌಲ್ಯವನ್ನು ಹೊಂದಿದೆ. ದೇವರನ್ನು ಪರಿಶುದ್ಧನು, ದಿವ್ಯ ತಂದೆ, ನಿತ್ಯ ದೇವರು ಎಂದು ಸಂಭೋದಿಸಿ ತನ್ನನ್ನು ಶುದ್ಧತೆಯೆಡೆಗೆ ನಡೆಸೆಂದು ಬೇಡುವ ಬಗೆ ಆಕರ್ಷಕವಾಗಿದೆ. ಸ್ವರಚಿತ ಗೀತೆಯಾಗಿದ್ದು ಗೀತಗಾರನಿಗೆ ತನ್ನ ವ್ಯಕ್ತಿತ್ವವನ್ನು ಬಹಿರಂಗವಾಗಿ ತೆರೆದಿಡಲು ಬಯಸಿರುವುದು ವಿಶೇಷವಾಗಿದೆ. ದೇವರಲ್ಲಿರುವ ಕ್ಷಮಾಗುಣ ಆತನನ್ನು ಆಕರ್ಷಿಸಿದೆ.

ಸಮಾಜದ ಯಾವುದೇ ವರ್ಗದ ಜನರೂ ಓದಿ ಅರ್ಥೈಸಿಕೊಳ್ಳಲು ಸಾಧ್ಯವಾಗುವ ಶೈಲಿಯಲ್ಲಿ ಈ ಗೀತೆ ರಚಿತವಾಗಿದೆ. ಸರಳ ಪದ ಜೋಡಣೆ, ತೆರೆದ ಮನಸ್ಸು, ತಪ್ಪನ್ನೊಪ್ಪಿಕೊಳ್ಳುವ ಭಾವ ಗೀತೆಯ ಅರ್ಥವನ್ನು ಹೆಚ್ಚಿಸಿವೆ.

ಯೇಸುವಿನ ವ್ಯಕ್ತಿತ್ವವನ್ನು ತಾಯಿಗೆ ಹೋಲಿಸುತ್ತಾ ಯೇಸುವಿನ ವಾತ್ಸಲ್ಯವನ್ನು ತಿಳಿದುಕೊಳ್ಳಲು ಬಹು ಸುಲಭವಾಗಿ ಯೋಚಿಸಬಹುದಾದ ವ್ಯಕ್ತಿಯಾಗಿ ಕಂಡು ಬರುತ್ತಾಳೆ. ಅಂತೆಯೆ ಯೇಸುವನ್ನು ತಾಯಿಗೆ ಹೋಲಿಸಿರುವುದು ಆತನ ವಾತ್ಸಲ್ಯದ, ಕರುಣೆಯ ಮನೋಭಾವವನ್ನು ವರ್ಣಿಸಿರುವುದು

[illegible]

[illegible]	[illegible]

[illegible]

[illegible]

ಸಮಂಜಸವಾಗಿದೆ. ಕವಿಯ ಸೃಜನಶೀಲತೆಗೆ ನಿದರ್ಶವಾಗಿದೆ. ಯೇಸುವನ್ನು ಪ್ರೀತಿಸಾಗರ, ನೀತಿ ಯಜಮಾನ, ವಿಮೋಚಕ ಎಂದು ಅಲಂಕಾರಿಕವಾಗಿ ವರ್ಣಿಸಿರುವುದು ಕಂಡು ಬರುತ್ತದೆ.

ಕ್ರೈಸ್ತರ ಬದುಕು: ಕ್ರೈಸ್ತರ ಜೀವನವು ದಿಟ್ಟ ಹೋರಾಟದ ಜೀವನ. ಈ ಹೋರಾಟದಲ್ಲಿ ಆತ ಧರಿಸಬೇಕಾದ ಆಯುಧಗಳು ಯಾವುವು ಎಂಬುದನ್ನು ತಿಳಿಸುವ ಗೀತೆ 'ಯಾವಾತ ಕ್ರಿಸ್ತ ಸೈನ್ಯದಿ' ಎಂಬ ಗೀತೆ. ಇದು Wer will ein junger Jesu sein ಎಂಬ ಗೀತೆಯ ಭಾಷಾಂತರವಾಗಿದೆ.

ನೀನೀಗ ಕ್ರಿಸ್ತ ಸೈನಿಕ	ದುರ್ವೈರಿಗುಂಪು ದೊಡ್ಡದು
ಗುರಾಣಿ, ಖೇಡ್ಯವು	ಎಷ್ಟೋ ಭಯಂಕರ!
ಇಬ್ಬಾಯಿ ಕತ್ತಿ, ಕವಚ	ಸದ್ಭಕ್ತ ಮುಂದೆ ಸಣ್ಣದು
ಇವನ್ನು ಧರಿಸು!	ಮಹಾ ಶಾಂತಿಕರ!
ಸದ್ವೇದ ಜ್ಞಾನವು	ಪಾತಾಳರಾಜನು
ಸುನೀತಿ, ಜಪವು	ಪ್ರಾರಂಭದುಷ್ಟನು
ವಿಶ್ವಾಸ, ತಾಳ್ಮೆ ನಿನಗೆ	ನಿನ್ನಾತ್ಮ ಕೊಂದು ಹಾಕುವ
ಶಸ್ತ್ರಾಸ್ತ್ರ ನಿಜವೆ	ಪ್ರಯತ್ನ ಮಾಡುವ

ಕನ್ನಡ ಗೀತೆಗಳು, ಗೀತೆ–೨೬೯

ಈ ಗೀತೆಯು ಸಂತ ಪಾಲನು ಎಫೆಸಿಯದವರಿಗೆ ಬರೆದ ಪತ್ರದಲ್ಲಿನ ವಾಕ್ಯವನ್ನು ನೆನಪಿಸುತ್ತದೆ. "ಸತ್ಯವೆಂಬ ನಡುಕಟ್ಟು ಕಟ್ಟಿಕೊಳ್ಳಿ. ನೀತಿಯೆಂಬ ರಕ್ಷಾಕವಚನವನ್ನು ತೊಟ್ಟುಕೊಳ್ಳಿರಿ. ಶಾಂತಿಯ ಶುಭ ಸಂದೇಶವನ್ನು ಸಾರಲು ಶ್ರದ್ಧೆಯೆಂಬ ಪಾದರಕ್ಷೆಯನ್ನು ಮೆಟ್ಟಿಕೊಳ್ಳಿರಿ ಸತತವೂ ವಿಶ್ವಾಸವೆಂಬ ಗುರಾಣಿಯನ್ನು ಹಿಡಿದುಕೊಳ್ಳಿರಿ."[೨] ಈ ಆಯುಧಗಳನ್ನು ಧರಿಸಿದಾಗ ಯಾವ ಶತೃವನ್ನಾದರೂ ಜಯಿಸಲು ಸಾಧ್ಯ ಎಂಬ ಭಾವ ಇಲ್ಲಿ ವ್ಯಕ್ತವಾಗಿದೆ. ಬಾಹ್ಯವಾಗಿ ನಾವು ಕಾಣುವ ಆಯುಧಗಳನ್ನು ಆಧ್ಯಾತ್ಮ ಬದುಕಿನ ಮೌಲ್ಯಗಳಿಗೆ ಹೋಲಿಸಿ ಗೀತೆ ರಚಿಸಿರುವುದು ಗೀತಗಾರನ ಸೃಜನ ಶೀಲತೆಗೆ ಒಂದು ನಿದರ್ಶನವಾಗಿದೆ.

ದೇವ ವರ ಪ್ರಸಾದದಿಂದಲೇ ನಮ್ಮ ಬಾಳು ಸಂತೃಪ್ತಿ ಹೊಂದಲು ಸಾಧ್ಯವಿದೆ. ಆ ವರಪ್ರಸಾದಕ್ಕಾಗಿ ಬೇಡ ಬೇಕು ಎಂಬ ಸಂದೇಶವನ್ನು ನೀಡುತ್ತಿದೆ. 'ನಿನ್ನ ಆತ್ಮಕಿನ್ನು' ಎಂಬ ಗೀತೆ ಇದು Warum sind der Tranen ಎಂಬ ರಾಗದಲ್ಲಿದೆ. ನಿಸರ್ಗದ ವಿಷಯಗಳನ್ನು ಬಳಸಿ ಘನ ವಿಚಾರವನ್ನು ಸ್ಪಷ್ಟೀಕರಿಸಿದ್ದಾರೆ ಗೀತಗಾರ.

ಮಳೆ ಬಿಟ್ಟು ಹೋಗೆ	ಸೂರ್ಯ ತೇಜದಿಂದ	ಹುಳು ಕೊರೆದಾಗ
ಹೊಲ ನಷ್ಟವು	ಶೋಬೆ ದೇಹಕ್ಕೆ	ಮರ ಬಾಳದು
ಆತ್ಮವೃಷ್ಟಿ ಹೋಗೆ	ಶ್ರೀ ಸನ್ನಿಧಿಯಿಂದ	ಕಪಟವಿದ್ದಾಗ
ಪ್ರಾಣ ನಷ್ಟವು	ಕಾಂತಿ ಆತ್ಮಕ್ಕೆ	ಭಕ್ತಿ ಹೆಚ್ಚದು
ಹೊಂದು ಮೇಲಿನಿಂದ	ದೇವ ಪ್ರಜೆಯಲ್ಲಿ	ಇಂದ್ರಿಯಗಳನ್ನು
ದಿವ್ಯ ವೃಷ್ಟಿಯ:	ನಿಂತು ಕೊಂಡಿರು	ಬಿಗಿ ಹಿಡಿದು
ನಿತ್ಯ ಬುಗ್ಗೆಯಿಂದ	ಪ್ರೇಮ ಸಿಂಧುವಲ್ಲಿ	ಗುಪ್ತ ಬಂಧವನ್ನು
ಆತ್ಮ ತೀರ್ಥವ	ಐಕ್ಯವಾಗಿರು	ಹೋಗಲಾಡಿಸು

ಕನ್ನಡ ಗೀತೆಗಳು, ಗೀತೆ–೨೬೭

ದೇವರಲ್ಲಿ ಐಕ್ಯವಾಗಿ ಬಾಳನ್ನು ನಡೆಸಬೇಕು ಇಲ್ಲದಿದ್ದರೆ ಈ ಬಾಳು ಹೇಗಿರುತ್ತದೆ ಎಂಬುದನ್ನು ನಿಸರ್ಗದಲ್ಲಿ ನಾವು ಕಾಣುವ ಘಟನೆಗಳನ್ನು ಉದಾಹರಿಸಿ ವಿವರಿಸಿದ್ದಾನೆ ಗೀತಗಾರ. ಮಳೆ ನೆನೆಯದ ಭೂಮಿ ನಷ್ಟವಾದದ್ದು ಅದು ಬಂಜರು ಭೂಮಿ ಪ್ರಯೋಜನಕ್ಕೆ ಬಾರದು. ಹುಳು ಕೊರೆದ ಮರ ಹೆಚ್ಚು ಕಾಲ ಜೀವಿಸದು ಅದರ ಸತ್ವವೆಲ್ಲ ಹೋಗಿ ಬಾಡಿ ಹೋಗುವುದು. ಸೂರ್ಯನ ಬೆಳಕು ಒಳ್ಳೆಯದು. ಅಂತೆಯೇ ಮಾನವನ ಬಾಳು ದೈವೀ ವರಪ್ರಸಾದವಿರದ ಜೀವನ ಸತ್ವಹೀನವಾಗಿ ನಿಷ್ಪ್ರಯೋಜಕವಾಗಿರುತ್ತದೆ. ಯಾರೂ ಪ್ರಯೋಜನ ಹೊಂದಲಾರರು. ದೈವ ಸನ್ನಿಧಿಯಿಂದ ನಾವು ಶಕ್ತಿ, ಜ್ಞಾನವನ್ನು ಪಡೆದು ಬದುಕನ್ನು ನಡಿಸಿದ್ದೇ ಆದರೆ ಆ ಜೀವನ ಫಲಪ್ರದವಾದ ಜೀವನವಾಗುತ್ತದೆ. ಅಲಂಕಾರಿಕ ರೀತಿಯಲ್ಲಿ ಗೀತೆಯನ್ನು ರಚಿಸಿ ಅರ್ಥಪೂರ್ಣ ಬದುಕನ್ನು ನಡೆಸಲು ಹೇಗೆ ಸಾಧ್ಯವಾಗುತ್ತದೆ ಎಂಬುದನ್ನು ವಿವರಿಸಿದ್ದಾರೆ ಕವಿ. ದಿನನಿತ್ಯದ ಅನುಭವವನ್ನು ಗೀತೆಯಲ್ಲಿ ತಂದಿರುವ ಕವಿಯ ಕಲ್ಪನಾ ಶಕ್ತಿ ಆಶ್ಚರ್ಯವನ್ನುಂಟು ಮಾಡುವಂತಿದೆ. ಯಾವುದೇ ಸಾಮಾನ್ಯ ವ್ಯಕ್ತಿಯು ಅರ್ಥೈಸಿಕೊಳ್ಳಲು ಸಾಧ್ಯವಾಗಿದೆ.

ಆತ್ಮನಿವೇದನೆ: ಅನುದಿನದ ಬದುಕನ್ನು ಅಗತ್ಯವಾದ ಗುಣಗಳನ್ನು ದಯಪಾಲಿಸು ಎಂದು ಬೇಡುತ್ತಿದ್ದಾನೆ ಗೀತಗಾರ 'ಸದ್ವಿಶ್ವಾಸಸ್ಥೈರ್ಯವನ್ನು' ಎಂಬ ಗೀತೆಯಲ್ಲಿ ಇದು Sollt'es gleich bisweilen scheinen ಎಂಬ ರಾಗದಲ್ಲಿದೆ.

ಸದ್ವಿಶ್ವಾಸ ಸ್ಥೈರ್ಯವನ್ನು	ಆಗ ಬಿರುಗಾಳಿಯಲ್ಲಿ
ಗಟ್ಟಿಯಾದ ಧೈರ್ಯವನ್ನು	ಘೋರ ಬೆಂಕಿಯುರಿಯಲ್ಲಿ
ಪೂರ್ಣವಾದ ನಂಬಿಕೆ	ಅಪಧೈರ್ಯ ಪಡದೆ
ಅಪ್ಪ ಕೊಡು ನನಗೆ!	ನಿಲ್ಲುವೆ ಅಲ್ಲಾಡದೆ

ಕನ್ನಡ ಗೀತೆಗಳು, ಗೀತೆ –೨೩೭

ದೇವರನ್ನು 'ಅಪ್ಪ' ಎಂದು ಸಂಭೋಧಿಸಿದ್ದಾನೆ ಗೀತಗಾರ ಈ ಗೀತೆಯಲ್ಲಿ. ಅಪ್ಪ ಪೋಷಿಸುವ ವ್ಯಕ್ತಿ. ಕಾಪಾಡುವುದು ಆತನಲ್ಲಿರಬೇಕಾದ ಗುಣ. ಅಂತೆಯೇ ಗೀತಗಾರ ದೇವರನ್ನು 'ಅಪ್ಪ' ಎಂದು ಕರೆದು ತನ್ನನ್ನು ನಿರಂತರ ಸದ್‌ಚಿಂತನೆಗಳನ್ನು ಧೈರ್ಯ, ನಂಬಿಕೆಗಳನ್ನು ನೀಡಿ ಕಾಪಾಡು ಎಂದು ಬೇಡಿಕೊಂಡಿದ್ದಾರೆ ಈ ಗೀತೆಯಲ್ಲಿ.

ದೇವರನ್ನು ನಾವಿರುವ ಮನೆಗಳಿಗೆ ಬಂದು ವಾಸಿಸೆಂದು ಬೇಡುವ ಗೀತೆಯೇ 'ಕರ್ತಾ ನಿನ್ನ ಮಕ್ಕಳನ್ನು' ಎಂಬುದು. ಕುಟುಂಬದ ಸದಸ್ಯರೆಲ್ಲರನ್ನು ದೇವರಿಗೆ ಅರ್ಪಿಸಿಕೊಂಡು ಕುಟುಂಬವನ್ನು ದೇವರಿಗೆ ಒಪ್ಪಿಸಿಕೊಡುತ್ತಿದ್ದಾನೆ ಗೀತಗಾರ. ಈ ಗೀತೆಯಲ್ಲಿ ಇದು Wachet aufl reft uns die stimme ಎಂಬ ರಾಗದಲ್ಲಿದೆ.

ಇನ್ನು ಮುಂದೆ ಮನೆಯನ್ನು	ಅಭಯ ಕೊಡುತಿ
ನಿವಾಸಿಸುವ ಎಲ್ಲರನ್ನೂ	ನೀ ನಿತ್ಯ ಇರುವೆ
ಕಾಪಾಡಿ, ಭದ್ರವಿರಿಸು!	ದುರ್ಗಸ್ಥಾನ
ಹಿರಿ ಕಿರಿ ಮಕ್ಕಳಿಂದ	ಕೃಪಾಪೂರ್ಣ
ನಿಮ್ಮಿಷ್ಟ ತಂದೆತಾಯ್ಗಳಿಂದ	ನಿನ್ನಾಶ್ರಯ
ರೋಗಾದಿ ದೋಷ ತಪ್ಪಿಸು!	ಆಗಿರಲೆಮ್ಮ ಆಲಯ!

ಕನ್ನಡ ಗೀತೆಗಳು, ಗೀತೆ–೩೭೩

ಭಾರತೀಯ ಸಮಾಜದಲ್ಲು ದೇವರಿಗೆ ಮಿತಿಯನ್ನು ಅದರಲ್ಲಿನ ನಿವಾಸಿಗಳನ್ನು ದೇವರಿಗೆ ಪ್ರತಿಷ್ಠಿಸಿಕೊಳ್ಳುವ ಪದ್ಧತಿಯನ್ನು ಕಾಣುತ್ತೇವೆ. ಮನೆಯು ಎಲ್ಲ ವೈರಿಗಳ ಬಂಧನದಿಂದ ಆಪತ್ತುಗಳಿಂದ ವಿಮುಕ್ತಿಗೊಂಡು ನಿವಾಸಿಗಳು ಮನೆಯಲ್ಲಿ ಶಾಂತಿಯಿಂದ ಬಾಳಲು ಬೇಕಾದ ವರವನ್ನು ಕೇಳಿಕೊಳ್ಳುವ ಬಗೆ ನಮ್ಮ ಸಮಾಜದಲ್ಲಿದೆ. ಅಂತೆಯೇ ಗೀತಗಾರನು ನಮ್ಮ ಮನೆಯನ್ನು ಆಶೀರ್ವದಿಸಬೇಕೆಂದು ಬೇಡುತ್ತಿದ್ದಾನೆ. ಸರಳವಾದ ರಚನೆ ಅರ್ಥೈಸಿಕೊಳ್ಳಲು ಸಾಧ್ಯವಾಗಿದೆ.

ಹಬ್ಬಗಳು: ಯೇಸುವಿನ ಜನನಕ್ಕೆ ಸಂಬಂಧಿಸಿದಂತೆ ಬಿ. ಗ್ರೇಟರ್‌ರ ಗೀತೆ 'ಹರ್ಷವಾಗು ಕ್ರೈಸ್ತ ಗೋತ್ರ' ಇದು Freuet each ihr christen alle ಎಂಬ ಗೀತೆಯ ಭಾಷಾಂತರವಾಗಿದೆ. ದೇವರ ಪ್ರೀತಿಯನ್ನು ಸಮುದ್ರಕ್ಕೆ ಹೋಲಿಸುತ್ತ 'ಪ್ರೀತಿಯಬ್ಧಿ ದೇವರೆ' ಎಂದು ರೂಪಕವಾಗಿ ಬಳಸಿ ಆತನು ಇಹಲೋಕಕ್ಕೆ ಬಂದದ್ದು ಮಾನವನ ಮೇಲಿನ ಪ್ರೀತಿಯಿಂದ ಎಂದು ಹೇಳುತ್ತಾನೆ ಗೀತಗಾರ.

ಯೇಸು! ಸ್ವ ಕುಟುಂಬವನ್ನು	ಸಾಕು ನಿನ್ನ ಮನೆಯನ್ನು!
ಕೃಪೆಯಿಂದ ನಡಿಸು!	ಕೊಡು ದಿವ್ಯ ಶಾಂತಿಯ
ಎಲ್ಲದನ್ನುದ್ಧರಿಸು!	ಶುಭವಾದ ವರುಷ!

ಹರ್ಷಹರ್ಷ ಅತಿ ಹರ್ಷ
ಮೂದಿಸೆಂದು ಕೃಪಾವರ್ಷ
ಜಯ ಜಯ ಸುವಿಜಯ
ಹುಟ್ಟಿನೆಂದು ದೇವದಯ

ಕನ್ನಡ ಗೀತೆಗಳು, ಗೀತೆ–೫೪

ವಾಕ್ಯ ಭಾಗ–ವಾಕ್ಯಗಳು ಪುನರುಕ್ತವಾಗುವ ಲಕ್ಷಣವನ್ನು ದಿವಾಕರ ಅವರು ಎತ್ತಿ ಹೇಳಿದ್ದು ಬಸವನಾಳ ಗಿರಡ್ಡಿ ಮೊದಲಾದವರು ಅವುಗಳ ಪರಿಗಳನ್ನು ಬಿಚ್ಚಿ ತೋರಿಸಿದ್ದಾರೆ. ಈ ಪ್ರಕ್ರಿಯೆ ಒಂದೇ ವಾಕ್ಯದಲ್ಲಿ ಪುನರುಕ್ತಿ ಹಲವು ವಾಕ್ಯಗಳಲ್ಲಿ ಪುನರುಕ್ತಿಯೆಂದು ಎರಡು ಬಗೆಯಾಗಿದೆ.[೩]

ಹರ್ಷ ಹರ್ಷ ಅತಿ ಹರ್ಷ!
ಮೂಡಿಸೆಂದು ಕೃಪಾವರ್ಷ
ಜಯ ಜಯ ಸುವಿಜಯ
ಹುಟ್ಟಿಲೆಂದು ದೇವಜಯ

ಇವು ಒಂದೇ ವಾಕ್ಯದಲ್ಲಿಯ ಪುನರುಕ್ತಿಗೆ ಉದಹರಣೆಗಳು. ಇಂಥ ರಚನೆಯಿಂದ ಅಭಿವ್ಯಕ್ತಿಗೆ ಅವಧಾರಣೆ ಪ್ರಾಪ್ತವಾಗಿ ಪರಿಣಾಮ ಆಳವಾಗಿ ನಾಟುತ್ತದೆ.

ಯೇಸುವಿನ ಜನನಕ್ಕೆ ಸಂಬಂಧಿಸಿದ ಗೀತೆಯನ್ನು ಸಂತ ಮತ್ತಾಯನ ಶುಭ ಸಂದೇಶದ ಎರಡನೇ ಅಧ್ಯಾಯವನ್ನು ಆಧರಿಸಿ ರಚಿಸಲಾಗಿದೆ. 'ಯೇಸು ಹುಟ್ಟಿದ್ದು ಹೆರೋದರಸನ ಕಾಲದಲ್ಲಿ' ಜುದೇಯ ನಾಡಿನ ಬೆತ್ಲೆಹೇಮ್ ಎಂಬ ಊರಿನಲ್ಲಿ. ಕೆಲವು ಜ್ಯೋತಿಷ್ಯರು ಪೂರ್ವ ದಿಕ್ಕಿನಿಂದ ಹೊರಟು ಜೆರುಸಲೇಮಿಗೆ ಬಂದರು. 'ಯೆಹೂದ್ಯರ ಅರಸ ಹುಟ್ಟಿದ್ದಾರಲ್ಲವೇ? ಅವರೆಲ್ಲಿ? ಎಂದು ವಿಚಾರಿಸಿದರು. ಅವರನ್ನು ಸೂಚಿಸಲು ನಕ್ಷತ್ರ, ಪೂರ್ವದಲ್ಲಿ ಉದಯಿಸಿದ್ದನ್ನು ಕಂಡು ಅವರನ್ನು ಆರಾಧಿಸಲು ಇಲ್ಲಿಗೆ ಬಂದಿದ್ದೇವೆ' ಎಂದರು. ಯೇಸು ಲೋಕಕ್ಕೆ ಬೆಳಕಾಗಿ ಬಂದನು. ಅಂದಿನ ಜ್ಞಾನಿಗಳು ಆತನನ್ನು ಕಂಡು ಆರಾಧಿಸಲು ಬಂದರು. ಅಂತೆಯೇ ಸರ್ವರಲ್ಲಿ ಆತನನ್ನು ಆರಾಧಿಸಬೇಕು ಎಂಬ ಆಶಯವನ್ನು ಈ ಗೀತೆ ಹೊಂದಿದೆ. ಮೂರು ರಾಯರ ಹಬ್ಬವನ್ನು ಕುರಿತ ಗೀತೆ ಇದಾಗಿದೆ.

ಏಳುಜ ನೀ ಯೆರುಸಲೇಮೆ!
ಬೆಳಕಾಗು, ಚಿಯೋನೇ!
ಮೂಡಿತಲ್ಲಾ ನಿನ್ನ ಮೇಲೆ
ದಿವ್ಯ ತಾರಾಕಾಂತಿಯೇ
ದೂರದಿಂದ ಬಂದರು
ಮೂಡಣದ ಜನರು

ಸ್ವಲ್ಪ ಮಂದಿ ಬರುತಾರೆ
ಯೂದ ದೇಶದರಸ
ಎಲ್ಲಿ ಎಂದು ಕೇಳುತಾರೆ
ನೋಡಿದ್ದೇವಾ ನಕ್ಷತ್ರ
ಭೂಮಿಯ ಸಮೂಹವೆ
ಅಡ್ಡ ಬೀಳು ರಾಜಗೆ!

ಕನ್ನಡ ಗೀತೆಗಳು, ಗೀತೆ–೬೧

ಯಾವ ದೇಶದರಸ ಎಲ್ಲಿ? ನೋಡಿದ್ದೇವಾ ನಕ್ಷತ್ರ? ಇಲ್ಲಿ ಪ್ರಶ್ನೋತ್ತರವು ಸ್ವಾಗತ ರೂಪದಲ್ಲಿರುವುದು ಈ ವಿನ್ಯಾಸದ ವಿಶೇಷತೆಯಾಗಿದೆ ಹಾಗೂ ಕಥನ ರೂಪದ ಶೈಲಿ ಇಲ್ಲಿದೆ.

ಯೇಸುವಿನ ಬಾದಾನುಭವಕ್ಕೆ ಸಂಬಂಧಿಸಿದ ಗೀತೆಗಳು: ಯೇಸುವಿನ ಬಾಧಾನುಭವಕ್ಕೆ ಸಂಬಂಧಿಸಿದಂತೆ ಗ್ರೇಟರ್ ರಚಿಸಿದ ಗೀತೆಯೆ 'ಓ ದಿವ್ಯ ಕಾಂತಿ ಮುಖ' ಎಂಬುದು ಇದು O Naupt VollBlut und wunden ಎಂಬ ಗೀತೆಯ ಭಾಷಾಂತರವಾಗಿದೆ. ಇದನ್ನು ಮೂಲದಲ್ಲಿ ಪೌಲಗೆರ್ಹಾರ್ಟನ್ ಎಂಬುವರು ಜರ್ಮನ್ ಭಾಷೆಯಲ್ಲಿ ರಚಿಸಿದರು. ಆದರೂ ಇದರ ಮೂಲ ಕರ್ತನು ಸೆಂಟ ಬರ್ನಾರ್ಡ್ (St. Bernard of Chairvaux) ಎಂಬಾತನು. ಈತನು ಲತೀನ್ ಭಾಷೆಯಲ್ಲಿ ಬರೆದದ್ದನ್ನು ಗೆರ್ಹಾರ್ಟನು ಜರ್ಮನ್ ಭಾಷೆಗೆ ತರ್ಜುಮೆ ಮಾಡಿದರು.

ಓ ದಿವ್ಯ ಕಾಂತಿಮುಖ	ಸಂಕಷ್ಟ ನಿಂದೆಯಿಂದ
ಹ್ಯಾಗಾದಿ ಪಾಂಡರ!	ಮುಚ್ಚಿರೊ ಮುಖವೆ
ನಿನ್ನಲ್ಲಿ ಶೋಕ ದು:ಖ	ನಿಂಗಾಗಲಿ ನಮ್ಮಿಂದ
ಆಯ್ತೆಷ್ಟೋ ಹೇರಳ!	ಸಾಷ್ಟಾಂಗ ವಂದನೆ!

ಕನ್ನಡ ಗೀತೆಗಳು, ಗೀತೆ-೭೫

ಗೀತೆಯಲ್ಲಿ ಕವಿ ಯೇಸುವಿನ ಪಾಂಡುರವಾದ ಮುಖವನ್ನು ಮೊಟ್ಟಾದ ಕಣ್ಣನ್ನೂ ಕೆಂದುಟಿ ಭೂಷಣ ಹೋದ ಸ್ಥಿತಿಯನ್ನು ಕಠೋರ ಶ್ರಮೆಯಿಂದ ಒಣಗಿದ ರೂಪವನ್ನೂ ಕಣ್ಣೆದುರಿಗೆ ವರ್ಣಿಸುತ್ತಾನೆ. ಇಂಥ ಗೀತೆಗಳನ್ನು ಕೇಳುವವರ ಮನಸ್ಸಿನಲ್ಲಿ ಮಹಾ ಕಂಪನವುಂಟಾಗುವುದರಲ್ಲಿ ಸಂಶಯವಿಲ್ಲ.

ಅಲಂಕಾರಿಕ ಗುಣವಾಚಕ (Ornamental epithet) ವನ್ನು ಕಾಣುತ್ತೇವೆ. ಉದಾ: ಕೆಂದುಟಿ ಭೂಷಣ.

ಯೇಸುವಿನ ದಿವಾರೋಹಣಕ್ಕೆ ಸಂಬಂಧಿಸಿದ ಗೀತೆ: ಯೇಸುವಿನ ದಿವಾರೋಹಣಕ್ಕೆ ಸಂಬಂಧಿಸಿದಂತೆ ರಚಿತವಾದ ಗೀತೆ 'ಕರ್ತಂಗೆ ಸ್ತೋತ್ರವ' ಎಂಬುದು. ಇದು Es klingt ein hoher klang ಎಂಬ ರಾಗದಲ್ಲಿದೆ. ಯೇಸುವು ಮೋಕ್ಷಕ್ಕೆ ಆರೋಹಣವಾದ ಘಟನೆಯನ್ನು ನೆನೆಪಿಸುತ್ತ ಗೀತಗಾರ ಹರ್ಷಿಸೋಣ ಎಂದು ಹೇಳುತ್ತಾನೆ.

ಕರ್ತಂಗೆ ಸ್ತೋತ್ರವ	ಸುನೀತಿಯುಳ್ಳ ಜಗನ್ನಾಥ
ಮಾಡೋಣ ಬನ್ನಿರಿ!	ಅದ್ಭುತವುಳ್ಳ ದೇವರಾತ
ಉತ್ಸಾಹ ಗೀತವ	ಸಂತೋಷಪೂರ್ಣ ಹೃದಯ
ಇಂಪಾಗಿ ಹಾಡಿರಿ!	ಉಚ್ಚರಿಸಲೀ ಗೀತವ!

ಕನ್ನಡ ಗೀತೆಗಳು, ಗೀತೆ-೧೦೬

ಯೇಸುವನ್ನು 'ಜಗನ್ನಾಥ' ಎಂದು ಕರೆದಿದ್ದಾರೆ ಗೀತಗಾರ. ಭಾರತೀಯ ಸಂಸ್ಕೃತಿಯಲ್ಲಿ ದೇವರನ್ನು 'ಜಗನ್ನಾಥ' ಎಂದು ಕರೆಯುವುದು ರೂಢಿ (ಸಂಪ್ರದಾಯ) ಅಂತೆಯೇ ದೇಶೀಯ ಹೆಸರನ್ನು ಯೇಸುವಿಗೆ ಹೆಸರಿಸಿರುವುದು ಗೀತೆಯ ವಿಶೇಷವಾಗಿದೆ.

ಗ್ರೇಟರ್. ಬಿ ರವರ ಗೀತೆಗಳ ವೈಶಿಷ್ಟ್ಯತೆಗಳು: ಗ್ರೇಟರ್ ಬಿ. ರ ೩೩ ಗೀತೆಗಳಲ್ಲಿ ೨೫ ಗೀತೆಗಳು ಸ್ವರಚಿತ ಗೀತಗಳಾಗಿವೆ. ಹೆಚ್ಚಿನ ಗೀತೆಗಳು ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದ್ದಾಗಿವೆ.

ದೇವ ವಾಕ್ಯವನ್ನು ಬಾಣ, ಸುತ್ತಿಗೆ, ಬೆಂಕಿಗೆ ಹೋಲಿಸಿ ವರ್ಣಿಸಿರುವುದು ಗೀತೆಯ ವೈಶಿಷ್ಟ್ಯವಾಗಿದೆ (ಗೀತೆ ೧೫೨). ದೇವ ವಾಕ್ಯದ ಅಪರಮಿತ ಶಕ್ತಿಯನ್ನು ಸರ್ವರೂ ಅರ್ಥೈಸಿಕೊಳ್ಳುವಂತೆ ವರ್ಣಿಸಿರುವುದು ಗೀತಗಾರನ ಕವಿತ್ವ ಶಕ್ತಿಗೆ ನಿದರ್ಶನವಾಗಿದೆ.

ವಿಧ್ಯರ್ಥಕ ಪದಗಳ ಬಳಕೆ ಕೆಲವು ಗೀತೆಗಳಲ್ಲಿ ಕಂಡು ಬರುತ್ತದೆ. ಗೀತೆ ೧೨೯ ರಲ್ಲಿ ಹಬ್ಬಲಿ, ಕೇಳಲಿ, ಏಳಲಿ ಎಂಬ ಪದಗಳನ್ನು ಬಳಸಲಾಗಿದೆ.

ಯೇಸುವಿನ ವ್ಯಕ್ತಿತ್ವವನ್ನು ವರ್ಣಿಸಲು ಕವಿ ತಂದೆ (ಗೀತೆ ೨೩೬) ತಾಯಿ (ಗೀತೆ ೨೩೫) ಗೆ ಹೋಲಿಸಿದ್ದಾರೆ. ತಂದೆ ತಾಯಿ ಬಹು ಬೇಗನೆ ಮನಗೆಟಕುವ ವ್ಯಕ್ತಿಗಳು. ದಿನನಿತ್ಯದ ಬಾಳಿನಲ್ಲಿ ಇವರ ಪಾತ್ರ ವ್ಯಕ್ತಿಯ ಮೇಲೆ ಅಗಾಧ ಪ್ರಭಾವ ಬೀರುತ್ತದೆ. ಇವರ ವಾತ್ಸಲ್ಯ, ಕರುಣೆ ಮಗುವನ್ನು ಉತ್ತಮ ಪ್ರಜೆಯಾಗಿಸಲು ಸಾಧ್ಯ. ಅಂತೆಯೇ ದೇವರನ್ನು ಈ ವ್ಯಕ್ತಿಗಳಿಗೆ ಹೋಲಿಸಿ ದೇವರ ಸಾನಿಧ್ಯ ನಮ್ಮ ಬದುಕಿನಲ್ಲಿ ಅಗತ್ಯವೆಂದು ಹೇಳಿರುವುದು ಈ ಗೀತೆಗಳ ವಿಶೇಷತೆಯಾಗಿದೆ.

ನಮ್ಮ ಬದುಕಿನ ಹೋರಾಟದಲ್ಲಿ ನಾವು ಧರಿಸಬೇಕಾದ ಆಯುಧಗಳನ್ನು ಗೀತೆ ೨೯೬ ರಲ್ಲಿ ವರ್ಣಿಸಿದ್ದಾರೆ. ಆಯುಧಗಳು ಎಂದಾಕ್ಷಣ ನಮ್ಮ ಮನಸ್ಸಿಗೆ ಬರುವ ಆಧುನಿಕ ಮಾದರಿಯ ಶಸ್ತ್ರಗಳು. ಆದರೆ ಗೀತೆಯಲ್ಲಿ ವಿಶ್ವಾಸ, ಜಪ, ಜ್ಞಾನ, ತಾಳ್ಮೆ ಇವುಗಳನ್ನು ಅಯುಧಗಳೆಂದು ಪರಿಗಣಿಸಿರುವುದೇ ವಿಶಿಷ್ಟಾಂಶವಾಗಿದೆ.

ದೇವ ವರಪ್ರಸಾದವು ನಮ್ಮಲ್ಲಿಲ್ಲದಿದ್ದರೆ ಬದುಕು ಅರ್ಥಹೀನವಾಗುತ್ತದೆ ಎಂಬುದನ್ನು ಪ್ರಕೃತಿಯ ಉದಾಹರಣೆಗಳನ್ನು ಅಂದರೆ ಸೂರ್ಯ, ಮರ, ಮಳೆ ಇತ್ಯಾದಿಗಳನ್ನು ಬಳಸಿ ವಿವರಿಸಿರುವುದರಿಂದ ಅರ್ಥಗ್ರಹಿಕೆ ಸುಲಭವಾಗುವಂತೆ ಮಾಡಿದ್ದಾರೆ. ಉದಾ: ಗೀತೆ ೨೬೭.

ದೇಶೀ ಸಂಸ್ಕೃತಿಯನ್ನು ಬಳಸಿಕೊಂಡ ಗೀತೆಗಳಿವೆ. ಉದಾ: ದೇವರನ್ನು ಜಗನ್ನಾಥ ಮತ್ತು ಯೇಸುವಿನ ಶರೀರ ರಕ್ತವನ್ನು ತೀರ್ಥವೆಂದು ಹೆಸರಿಸಿರುವುದು.

೭೫ನೇ ಗೀತೆಯಲ್ಲಿ ದೃಷ್ಟಿಗೋಚರವಾಗುವ ರೀತಿ ಪದಗಳನ್ನು ಚಿತ್ರೀಕರಿಸಿದ್ದಾರೆ. ಉದಾ: ಮೊಬ್ಬಾದ ಕಣ್ಣು, ಕೆಂದುಟಿ ಭೂಷಣ ಹೋದ ಸ್ಥಿತಿ, ಕಠೋರ ಶ್ರಮೆಯಿಂದ ಒಣಗಿದ ರೂಪ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ.

೫.೩.೫ ಎ. ಗ್ರೇಟರ್ – A. Graeter

೧೮೬೯ ರಲ್ಲಿ ಭೂಗೋಳ, ಹಿಂದೂಸ್ತಾನದ ನಕ್ಷೆಯೂ, ವರ್ಣನೆಯ ಕೃತಿ ರಚಿಸಿದ್ದಾರೆ. ಇವರ ಜನನ ಮತ್ತು ಸೇವಾ ಕಾರ್ಯದ ಕುರಿತು ಹೆಚ್ಚಿನ ಮಾಹಿತಿ ತಿಳಿದಿಲ್ಲ.

ಗೀತೆಗಳ ಅಧ್ಯಯನ: ಬಾಸೆಲ್ ಗೀತ ಪುಸ್ತಕದಲ್ಲಿ ೯ ಗೀತೆಗಳನ್ನು ರಚಿಸಿದ್ದಾರೆ. ಈ ಗೀತೆಗಳು ವಿವಿಧ ಭಾಗಗಳಿಗೆ ಸೇರಿವೆ. ೩ ಗೀತೆಗಳು ಜರ್ಮನ್ ಭಾಷಾಂತರ ೩ ಸ್ವರಚಿತ ಗೀತೆಗಳು ೩ ಗೀತೆಗಳು ಇಂಗ್ಲೀಷ್ ಭಾಷಾಂತರ. ಇವರ ಗೀತೆಗಳು ಈ ಕೆಳಗಿನ ವಿಭಾಗಗಳಿಗೆ ಸೇರಿವೆ.

೧.	ಸಭೋತ್ಸವಗಳು	೦೩
೨.	ದೇವ ರಾಜ್ಯ	೦೧
೩.	ಕ್ರೈಸ್ತ ಸಭಾಚಾರ ಕೃಪಕಾರಣಗಳು	೦೨
೪.	ರಕ್ಷಣಾ ಮಾರ್ಗ	೦೧
೫.	ವಿಶೇಷ ಕಾಲಗಳಿಗೆ ತಕ್ಕ ಗೀತೆಗಳು	೦೨
	ಒಟ್ಟು	೦೯ ಗೀತೆಗಳು

ಕ್ರೈಸ್ತರ ಬದುಕು:– ಬಾಲಕರ ಗೀತೆಗಳಲ್ಲಿ ಕ್ರೈಸ್ತರ ಬದುಕಿಗೆ ಸಂಬಂಧಿಸಿದ ಗೀತೆ:

ನಮ್ಮ ಸಮಾಜದ ಚಾರಿತ್ರಿಕ ಪುಟಗಳನ್ನು ತಿರುವಿ ಹಾಕಿದಾಗ ವರ್ಣಪದ್ಧತಿ, ಮೇಲುಗೈ ಸಾಧಿಸಿದ ಕಾಲವೊಂದನ್ನು ಕಾಣುತ್ತೇವೆ. ಈ ಕಾಲ ಘಟ್ಟಗಳಲ್ಲಿ ಅನೇಕ ಮಹನೀಯರು, ಸಾಧುಸಂತರು ಜನಿಸಿ ಈ ಜಾತಿ ಪದ್ಧತಿಯನ್ನು ಹೋಗಲಾಡಿಸಲು ಯತ್ನಿಸಿದರು. ಅಂದಿನ ಸಾಮಾಜಿಕ ವ್ಯವಸ್ಥೆಯನ್ನು ಕಂಡು ಗೀತಗಾರ ಸರ್ವರನ್ನು ಪ್ರೀತಿಸಲು ಕರೆ ನೀಡಿದ್ದಾನೆ 'ಮೇಲು ಜಾತಿ' ಎಂಬ ಗೀತೆಯಲ್ಲಿ.

ದೇವರು ಎರಡು
ಜಾತಿ ಮಾತ್ರ ಕಾಣ್ಬನು
ಜಜ್ಜಿನ ಮೇಲಿನ
ಜಾತಿ ಇರುವ
ಸುಳ್ಳುಗಾರರೆಲ್ಲರು
ಕೀಳು, ನೀಚ ಜಾತಿಯು
ಆಸ್ತಿಯೂ ಹಣವೂ
ಎಷ್ಟು ಇದ್ದರೂ!

ಪ್ರೀತಿಯ ಮಾಡುವ
ಸರ್ವ ಕುಲದವರ
ದೇವರ ತಂದೆಯು
ನಾವು ಮಕ್ಕಳು
ಒಂದೇ ರಕ್ತದಿಂದಲೆ
ಸರ್ವ ಲೋಕದೊಳಗೆ
ಇರುವ ಜನರ
ಉಂಟು ಮಾಡಿದ!

ಬಾಲಕರ ಗೀತೆಗಳು ೧೯೦೪, ಗೀತೆ–೭೦

ಪ್ರೀತಿ: ಹೊಸ ಒಡಂಬಡಿಕೆಯಲ್ಲಿ ಶ್ರೀ ಪೌಲನು ಪ್ರೀತಿಯನ್ನು ಕುರಿತು ಮಾತನಾಡುವಲ್ಲಿ ರೂಢಿಯಾಗಿ ದೇವರನ್ನು ನಂಬಿ ಆತನ ಚಿತ್ತವನ್ನು ನೆರವೇರಿಸುವುದಕ್ಕೆ ಪ್ರಯಾಸ ಪಡುವವರಿಗೆ ಆತನು ಅನುಗ್ರಹಿಸುವ ಕೃಪೆಯನ್ನು ಸೂಚಿಸುತ್ತಾರೆ. ಹೊಸಒಡಂಬಡಿಕೆ ಬರೆದವರು ಪ್ರೀತಿಯೆಂಬುದಕ್ಕೆ ಮೂಲ ಭಾಷೆಯಲ್ಲಿರುವ ಎರಡು ಪದಗಳನ್ನು ಪ್ರಯೋಗಿಸುತ್ತಾರೆ.

೧. ಆಗಪೇಯೋ ಎಂಬುದು ಒಂದು. ಇದು ಒಳ್ಳೆಯ ಸಹಾಯ ಸತ್ಕಾರ್ಯಗಳನ್ನು ಮಾಡುವ ಉತ್ತಮವಾದ ಪ್ರೀತಿಯನ್ನು ಸೂಚಿಸುತ್ತದೆ. ಶ್ರೀ ಯೇಹಾನನು ಬರೆದ ಪತ್ರಿಕೆಯಲ್ಲಿ ಪ್ರೀತಿ ಸ್ನೇಹಗಳನ್ನು ತೋರಿಸುವುದಕ್ಕಾಗಿ ಈ ಮನೋಹರವಾದ ಪದವು ಯಾವಾಗಲೂ ಪ್ರಯೋಗಿಸಲಾಗಿದೆ (ಮತ್ತಾ ೫:೪೩–೪೮).

೨. ಫಿಲಿಯೋ ಎಂಬುದು ಇನ್ನೊಂದು. ಇದು ಸ್ನೇಹಿತನು ಸ್ನೇಹಿತನಿಗೆ ತೋರಿಸುವ ಸ್ನೇಹ ಅಥವಾ ಮಮತೆ (ಮತ್ತಾ ೧೦:೩೭).ಅಂತೆಯೇ ಪ್ರೀತಿಯಿಂದ ನೆರೆಹೊರೆಯುವವನನ್ನು ಕಂಡು ಐಕ್ಯದಿಂದ ಜೀವಿಸಬೇಕು. ತಾನೂ ಬದುಕಿ ಇತರರಿಗೂ ಬದುಕಲು ಅಣಿ ಮಾಡಿಕೊಡಬೇಕು ಎಂದು ಗೀತಗಾರ ಇಲ್ಲಿ ಹೇಳಿದ್ದಾನೆ. ಮನುಷ್ಯನ ಬದುಕು ಶಾಶ್ವತವಲ್ಲ. ಅದು ನಶಿಸಿ ಹೋಗುತ್ತದೆ. ಈ ಬದುಕನ್ನು ಬಯಲಿನ ಪುಷ್ಪಕ್ಕೆ ಹೋಲಿಸುತ್ತ ಇದು ಉರಿ ಬಿಸಿಲಿಗೆ ಬಾಡಿ ಹೋಗುತ್ತದೆ. ಹಾಗೆಯೇ ಮನುಷ್ಯನ ಬದುಕು ಇಹ ಲೋಕದ ತಾಪತ್ರಯಗಳಿಂದ ತುಂಬಿ ಹೋಗಿ ನಾಶವಾಗುತ್ತಿದೆ ಎಂದು ಗೀತಗಾರ 'ಮನುಷ್ಯನ ಸಾವು' ಎಂಬ ಗೀತೆಯಲ್ಲಿ ಹೇಳಿದ್ದಾರೆ.

ಪುಷ್ಪವೇ! ಪುಷ್ಪವೇ	ಮಾಯೆಯೇ, ಮಾಯೆಯೇ	ಹಾಗೆಯೇ ಹಾಗೆಯೆ!
ಬಾಡಿ ಹೋದಿ ಬೇಗನೇ	ಇಹಭೋಗ ಗರ್ವವೇ!	ನರಪುತ್ರ ಜೀವವೇ!
ಇಂದು ಚಂದ ತೋಟದಲ್ಲಿ	ಹೂವಿನಂತೆ ತ್ವರೆಯಲ್ಲಿ	ನಿನ್ನೆ ಸುಖ ಕ್ಷೇಮದಲ್ಲಿ
ನಾಳೆ ಕಡು ಬಿಸಿಲಲ್ಲಿ	ನಮ್ಮ ಬಡ ಜೀವದಲ್ಲಿ	ಇಂದು ಕಷ್ಟ ವ್ಯಥೆಯಲ್ಲಿ
ಕುಂದಿ ಕಾವಿನೊಳಗೆ	ಎಲ್ಲ ತೀರಿ ಹೋಗುತೆ	ನಾಳೆ ಗೋರಿಯೊಳಗೆ!

ಬಾಲಕರ ಗೀತೆಗಳು, ಗೀತೆ–೭೩

ಗೀತಗಾರನ ಸೃಜನ ಶೀಲತೆ ಈ ಗೀತೆಯಲ್ಲಿ ಎದ್ದು ಕಾಣುತ್ತದೆ. ಜೀವನದ ಕ್ಷಣಿಕತೆಯನ್ನು ಪುಷ್ಪಕ್ಕೆ ಹೋಲಿಸಿ ವರ್ಣಿಸಿರುವುದು ಗೀತೆಯ ವಿಶಿಷ್ಟತೆಯಾಗಿದೆ. ಕಾವ್ಯಗುಣವನ್ನು, ಗೇಯತೆಯನ್ನು ಹೊಂದಿ ಅರ್ಥಪೂರ್ಣವಾಗಿದೆ. ಇದೇ ಗೀತೆ ಬಾಲಕರ ಗೀತೆಯಲ್ಲಿ ಸ್ವಲ್ಪ ಬದಲಾವಣೆಯೊಂದಿಗೆ ಬಳಕೆಯಾಗಿದೆ.

ಆತ್ಮ ನಿವೇದನೆ: ಯೇಸುವು ಭಕ್ತನ ಸಮೀಪ ಸದಾಕಾಲ ಇರಬೇಕೆಂದು ಬೇಡಿಕೊಂಡಿದ್ದಾನೆ ಗೀತಗಾರ. 'ನಿನ್ನ ಹತ್ರ ನಿಲ್ಲುತ್ತೇನೆ' ಎಂಬ ಗೀತೆಯಲ್ಲಿ ಇದು Bei dir Jesu will ich bleibea ಎಂಬ ಗೀತೆಯ ಭಾಷಾಂತರವಾಗಿದೆ.

ನಿನ್ನ ಹತ್ರ ನಿಲ್ಲುತೇನೆ!	ಯೇಸು ಜೀವದಂತ್ಯದಲ್ಲಿ
ಎಂದೂ ಬಿಟ್ಟು ಬಿಡದೆ	ನಿಲ್ಲು ನನ್ನ ಹತ್ರವೆ!
ನಿನ್ನ ದಾಸನಾಗಿದ್ದೇನೆ	ಘೋರ ಮೃತ್ಯುರಾತ್ರಿಯಲ್ಲಿ
ಅತಿ ಪ್ರಿಯ ಯೇಸುವೇ	ಸೂರ್ಯನಾಗು ನನಗೆ!
ನೀನು ನನ್ನ ಪ್ರಾಣ ತತ್ವ	ಸಾಯುವಂಥ ಕಷ್ಟದಲ್ಲಿ
ನನ್ನ ಜೀವ ಒಲವೆ	ಕಣ್ಣು ಮೊಟ್ಟಾದಾಗಲೇ
ಗಿಡ ಕೊಂಬೆಗೆಲ್ಲ ಸತ್ವ	ನಿತ್ಯ ಜೀವ ಪ್ರಭೆಯಲ್ಲಿ
ಕೊಡುತಿರ್ವ ಹಾಗೆಯೆ	ಸೇರಿಸೆನ್ನ ಯೇಸುವೇ!

ಕನ್ನಡ ಗೀತೆಗಳು, ಗೀತೆ–೧೮೧

ಪ್ರಮಾಣಾಲಂಕಾರದ ಬಳಕೆ ಇಲ್ಲಿದೆ. ಯೋಹಾ ೧೫ನೇ ಅಧ್ಯಾಯದ ೪ನೇ ವಾಕ್ಯವನ್ನು ನೆನಪಿಸುತ್ತದೆ ಈ ಗೀತೆ. ನೀವು ನನ್ನಲ್ಲಿ ನೆಲೆಗೊಂಡಿರಿ ನಾನು ನಿಮ್ಮಲ್ಲಿ ನೆಲೆಗೊಂಡಿರುತ್ತೇನೆ ಎಂಬ ವಾಕ್ಯದಂತೆ ಗೀತಗಾರ ಯೇಸುವಲ್ಲಿ ನಾನು ನಿನ್ನಲ್ಲಿ ನೆಲೆಗೊಳ್ಳುವಂತೆ ಅನುಗ್ರಹಿಸು ನನ್ನ ಜೀವಾಂತ್ಯದಲ್ಲಿ ನೀನು ನನ್ನಲ್ಲಿ ನೆಲೆಗೊಂಡು ನಿತ್ಯ ಮೃತ್ಯುವಿನಿಂದ ತಪ್ಪಿಸಿ ಮೋಕ್ಷ ಪ್ರಾಪ್ತಿ ನೀಡೆಂದು ಬೇಡಿಕೊಂಡಿದ್ದಾನೆ ಗೀತೆಯಲ್ಲಿ.

ಉಪಮೆಯ ಮೂಲಕ ಯೇಸುವಿನ ಸಾನಿಧ್ಯ ಹೇಗೆ ಬದುಕನ್ನು ಶಕ್ತಪಡಿಸುತ್ತದೆ ಎಂದು ವರ್ಣಿಸಿದ್ದಾನೆ. ಉದಾ: ನೀನು ನನ್ನ ಅಂತಃ ಪ್ರಾಣ, ನನ್ನ ಜೀವ ಒಂದೇ ಗಿಡ ಕೊಂಬೆಗೆಲ್ಲ ತ್ರಾಣ ಕೊಡುತಿರ್ವ ಹಾಗೆಯೇ.

ಹಬ್ಬಗಳು:– ಯೇಸುವಿನ ಜನನಕ್ಕೆ ಸಂಬಂಧಿಸಿದಂತೆ ಗೀತೆಯು ಸಭಾಪತ್ರದಲ್ಲಿ ಪ್ರಕಟವಾಗಿದೆ:

ಈ ಜಗದ ಹಾಗೂ ಇದರ ಜನತೆಯ ಮೂಲ ಯಾವುದು? ಅದು ಮೊದಲು ಆದುದು ಹೇಗೆ? ಈ ಲೋಕದಲ್ಲಿ ನಾವು ಅನುಭವಿಸುತ್ತಿರುವ ಸಾವು ನೋವುಗಳು, ದು:ಖ ದುಗುಡಗಳು ಹೇಗೆ ತಲೆಯೆತ್ತಿಕೊಂಡವು? ಇವುಗಳನ್ನು ದೂರ ಮಾಡಿ ಮನುಷ್ಯನನ್ನು ರಕ್ಷಿಸಲು ಯೇಸು ಧರೆಗಿಳಿದನು ಎಂಬ ಆಶಯವನ್ನು ನೀಡುವ ಗೀತೆಯೇ 'ಯೇಸು ಕ್ರಿಸ್ತನ ಚರಿತ್ರೆ' ಎಂಬುದು.

೧. ಏದೆನ್ ತೋಟದೊಳಗೆ! ಪಾಪ ತಾಪವಿಲ್ಲದೆ
ದೇವರುಂಟು ಮಾಡಿದ! ಆದಮೆಂಬ ಮನುಜ
ಹವ್ವಳೆಂಬ ಸತಿಯು! ಸುಖದಿಂದಲಿದ್ದರು

೨. ಸರ್ಪವೆಂಬ ಶತ್ರುವು! ಇಂಥ ಸುಖ ನೋಡಲು

ಮೋಸ ತಂತ್ರ ವಾಕ್ಯದ! ನರರನ್ನು ವಂಚಿಸಿ
ದೇವರಾಜ್ಞೆ ಮುರಿದು! ಮೃತ್ಯು ಭ್ರಷ್ಟರಾದರು

೩. ಆದರೆಮ್ಮ ದೇವರು! ಎಂದು ಪ್ರೀತಿ ಬಿಡನು
ನಾಶಕರ ಸರ್ಪದ! ತಲೆ ಜಜ್ಜಿ ಬಿಡುವ
ರಕ್ಷಕನು ಬರುವ! ಎಂದು ಆಗ ಹೇಳಿದ

೪. ವರ್ಷ ವರ್ಷ ಕಳೆದು! ಮೂಲ ಪಿತೃ ಕೂಪವು
ಪಾಪದಿಂದಲೆಮಗೆ! ಮೋಕ್ಷ ಕೊಡುವದಕೆ
ಮೆಸ್ಸಿಯನು ಎಂದಿಗೂ! ಒಬ್ಬನೆಂದು ಕೇಳ್ವರು

೫. ಆಗ ನಿತ್ಯ ದೇವರು! ಅವತಾರನಾದನು
ನಮ್ಮ ಪಾಪಕ್ಕೋಸ್ಕರ! ಶಿಕ್ಷೆ ಶ್ರಮೆ ತಾಳಿದ
ಯೇಸು ಕ್ರಿಸ್ತ ಪತಿಯು! ಕ್ರೂಜೆಯಲ್ಲಿ ಸತ್ತನು

೬. ನಾವು ಬಲ ಮುರಿದು! ಗೋರಿಯಿಂದಲೆದ್ದನು
ದೇವಬಲ ಕಡೆಗೆ! ಏರಿ ಪರಲೋಕಕೆ
ಯುಗಯುಗದಿಂದಲೂ! ಬಲ ರಾಜನಿವನು

೭. ದು:ಖ ಪ್ರಷ್ಠ ಜಲವೇ! ಕಷ್ಟ ಹೊರುವವರೇ
ನಿಮಗಾಗಿ ಯೇಸುವು! ಶ್ರಮೆ ತಾಳ್ದು ಸತ್ತನು;
ನಿಮ್ಮ ಪ್ರಾಣಗಳಿಗೆ! ಶಾಂತಿ ಪಡಿಸೋದಕೆ

೮. ಯೇಸು ಭಕ್ತರೆಂದಿಗೂ! ರಮ್ಯವಾದ ಸ್ವರ್ಗಕೆ
ಅಂತ್ಯದಲ್ಲಿ ರಕ್ಷಕ! ಇವರನ್ನು ತರುವ

ಸಭಾ ಪತ್ರ, ಫೆಬ್ರವರಿ, ೧೮೯೯

ಪವಿತ್ರ ಗ್ರಂಥದ ಹಳೆಒಡಂಬಡಿಕೆಯ ಪ್ರಥಮ ಗ್ರಂಥವಾದ ಆದಿಕಾಂಡವು ಭೂಮಿಯ ಉಗಮದೊಂದಿಗೆ ಆರಂಭವಾಗುತ್ತದೆ. ದೇವರು ಭೂಮಿ ಆಕಾಶಗಳನ್ನು ಸೃಷ್ಟಿಸಿದನು (ಆದಿ ೧:೧–೨೫) ದೇವರು ಆರು ದಿನಗಳಲ್ಲಿ ಜಗತ್ತನ್ನು ಉಂಟು ಮಾಡಿದನು ಮತ್ತು ೬ನೇಯ ದಿನದಲ್ಲಿ ಪುರುಷನಾದ ಆದಮನನ್ನು ಮತ್ತು ಸ್ತ್ರೀಯಾದ ಹವ್ವಳನ್ನು ಸೃಷ್ಟಿಸಿದನು (ಆದಿ ೧:೨೬–೩೧).

ಆದಾಮ ಮತ್ತು ಹವ್ವಳನ್ನು ಏದೇನ್ ಎಂಬ ತೋಟದಲ್ಲಿ ಇರಿಸಲಾಯಿತು ಮತ್ತು ಒಳ್ಳೆಯದರ ಮತ್ತು ಕೆಟ್ಟದ್ದರ ತಿಳುವಳಿಕೆಯ ಮರದ ಹಣ್ಣನ್ನು ನೀವು ತಿನ್ನಬಾರದು ಎಂಬ ಒಂದು ಆಜ್ಞೆಯನ್ನು ಅವರಿಗೆ ಕೊಡಲಾಯಿತು. ಆದರೆ ಸೈನಾತನು ಸರ್ಪದ ರೂಪದಲ್ಲಿ ಬಂದು ವಂಚಿಸಿದನು. ಹಾಗೂ ನಿಷೇಧಿಸಿದಂತೆ ಹಣ್ಣನ್ನು ತಿನ್ನುವಂತೆ ಶೋಧನಿಗೆ ಒಳಪಡಿಸಿದನು. ಅವಳು ತಿಂದಳು ಮತ್ತು ನಂತರ ಆದಾಮನು ಸಹ

[illegible]

ತಿಂದನು. ಹೀಗೆ ಪಾಪ ಮತ್ತು ಮರಣವು ವಿಶ್ವವನ್ನು ಪ್ರವೇಶಿಸಿತು (ಆದಿ ೩:೧-೧೯) ಇದನ್ನು 'ಮನುಷ್ಯನ ಪತನ' ಅಥವಾ 'ಬೀಳುವಿಕೆ' ಎಂದು ಕರೆಯಲಾಯಿತು. ಈ ಬೀಳುವಿಕೆಯಿಂದ ರಕ್ಷಿಸಲು ಲೋಕ ರಕ್ಷಕನು ಹುಟ್ಟಿದನು. ತನ್ನ ಶ್ರಮ, ಮರಣ ಮತ್ತು ಪುನರುತ್ಥಾನದ ಮೂಲಕ ರಕ್ಷಣೆಯನ್ನು ತಂದನು ಎಂಬ ಸಂದೇಶವನ್ನು ಈ ಗೀತೆ ನೀಡುತ್ತದೆ.

ಪ್ರಕೃತಿ:- ಬಾಲಕರ ಗೀತೆಯಲ್ಲಿ ಪ್ರಕೃತಿಗೆ ಸಂಬಂಧಿಸಿದ ಗೀತೆ:

ಪ್ರಕೃತಿಯಲ್ಲಿ ಪಕ್ಷಿವರ್ಗ ತಮ್ಮದೇ ಆದ ರೀತಿಯಲ್ಲಿ ಚಿಲಿಪಿಲಿ ನಾದದಿಂದ ಸೃಷ್ಟಿ ಕರ್ತನಿಗೆ ಸ್ತೋತ್ರವನ್ನು ಸಲ್ಲಿಸುತ್ತವೆ. ಹಾಗಾದರೆ ಮನುಷ್ಯನು ಸರ್ವವನ್ನು ಉಚಿತವಾಗಿ ದೇವರಿಂದ ಪಡೆದುಕೊಂಡ ಮನುಷ್ಯ ದೇವರನ್ನು ಸ್ತುತಿಸಲು ಬಾಧ್ಯಸ್ಥನಾಗಿದ್ದಾನೆ ಎಂಬ ಮಹತ್ವದ ವಿಚಾರದತ್ತ ನಮ್ಮ ಗಮನ ಹರಿಸಿದ್ದಾನೆ ಗೀತಗಾರ 'ಗಾಯಕರ ಗೀತೆ' ಎಂಬ ಗೀತೆಯಲ್ಲಿ

ಕಾರಗತ್ತಲೊಂದಿಗೆ
ಶೋಕ ಬರುವಾಗ
ಹಾಡ ಬರ್‍ರಿ ಬೇಗನೆ
ಗೆಲುವಿನ ರಾಗ!
ಹೂವು ಅರಳುತ್ತದೆ
ಮಂಜು ಹನಿಯಿಂದ
ಪ್ರಾಣ ಗುಣವಾಗುತೆ
ಹರ್ಷ ಗೀತದಿಂದ

ಮಧುಸ್ವದ ಕೋಕಿಲೆ
ಗೋಳೀ ಮರದಲ್ಲಿ
ಪಕ್ಷಿ ರಾಶಿ ಬಿಡದೆ
ನಮ್ಮ ತೋಪಿನಲ್ಲಿ
ಹಾಡುತಿಪ್ಪ ಹಾಗೆಯೇ
ದೇವ ಸ್ತೋತ್ರಕ್ಕಾಗಿ
ನೀವು ಸಹ ಮಕ್ಕಳೇ
ಹಾಡಿ ಸುಖವಾಗಿ

ಬಾಲಕರ ಗೀತೆಗಳು, ಗೀತೆ-೬೩

ದೇವ ಸ್ತೋತ್ರದ ಪ್ರಾಮುಖ್ಯತೆಯನ್ನು ಮನಗಂಡ ಗೀತಗಾರ ಮಕ್ಕಳಲ್ಲಿ ಬಾಲ್ಯದಲ್ಲಿಯೇ ಆ ಗುಣವನ್ನು ಮೂಡಿಸಲು ರಚಿಸಿದ ಈ ಗೀತೆ ಕಾವ್ಯಮಯದಿಂದ ಕೂಡಿದೆ. ದಿನನಿತ್ಯ ನಾವು ಕಾಣುವ ಕೋಕಿಲೆ, ಪಕ್ಷಿಕಾಶಿ ಹೂವು, ಮಂಜು, ಇವುಗಳನ್ನು ಉದಾಹರಣೆಯಾಗಿ ತೆಗೆದುಕೊಂಡು ಅವು ದೇವರನ್ನು ಸ್ತುತಿಸಿ ಕೊಂಡಾಡುತ್ತೇವೆಂದು ಹೇಳುತ್ತಾ ನಾವು ಸೃಷ್ಟಿಕರ್ತನನ್ನು ಕೊಂಡಾಡಬೇಕು ಎಂದು ಕರೆ ನೀಡಿದ್ದಾರೆ.

ಗ್ರೇಟರ್. ಎ ರವರ ಗೀತೆಗಳ ವೈಶಿಷ್ಟ್ಯತೆಗಳು: ಇವರ ೯ ಗೀತೆಗಳಲ್ಲಿ ೬ ಗೀತೆಗಳು ಭಾಷಾಂತರ ಗೀತೆಗಳಾಗಿವೆ. ಹೆಚ್ಚಿನ ಗೀತೆಗಳು ಯೇಸುವಿನ ಯಾತನೆ, ದಿವ್ಯಾರೋಹಣಗಳಿಗೆ ಸಂಬಂಧಿಸಿವೆ.

ಯೇಸುವಿನ ದಿವ್ಯಾರೋಹಣವನ್ನು ಪ್ರಕೃತಿಯ ಘಟನೆಯೊಂದಿಗೆ ಹೋಲಿಸಿ ವರ್ಣಿಸಿರುವುದು ಗಮನಾರ್ಹವಾಗಿದೆ. ದಿವ್ಯಾರೋಹಣ ಎಂದರೆ ಯೇಸು ಮೋಕ್ಷಕ್ಕೆ ಆರೋಹಣವಾದ ಘಟನೆ. ಈ ಗಹನವಾದ ಘಟನೆಯನ್ನು ವಿವರಿಸಲು ಮಳೆಯು ಭೂಮಿಯನ್ನು ಹದಗೊಳಿಸುವ ಘಟನೆಗೆ ಹೋಲಿಸಿ ವರ್ಣಿಸಿರುವುದು ಅರ್ಥಗ್ರಹಿಕೆಗೆ ಸಹಾಯಕವಾಗಿದೆ, ಕವಿಯ ಪ್ರತಿಭೆ ಇಲ್ಲಿ ಪ್ರಕಟವಾಗಿದೆ.

ಪ್ರಮಾಣಲಂಕಾರದ ಬಳಕೆ ಇಲ್ಲದೆ ಗೀತೆ ೧೮೧೧ರಲ್ಲಿ. ಬೈಬಲಿನ ಹೇಳಿಕೆಯನ್ನು ಬಳಸಿ ಗೀತೆ ರಚಿಸಿ ಅರ್ಥಪೂರ್ಣ ಗೀತೆ ರಚನೆಗೆ ಎಡೆ ಮಾಡಿಕೊಟ್ಟಿದೆ.

ಗ್ರೇಟ್‌ರವರು ಸಮಾಜದ ಬಗ್ಗೆ ಕಾಳಜಿಯನ್ನು ಹೊಂದಿದ್ದರು. ಎಂಬುದನ್ನು ಅವರ ಗೀತೆ 'ಮೇಲು ಜಾತಿ' ಎಂಬುದು ನಿದರ್ಶನವಾಗಿದೆ. ಮಿಶನರಿಗಳ ಕಾಲದಲ್ಲಿ ಜಾತಿಯತೆ ಸಮಾಜದಲ್ಲಿ ಪೆಡಂಭೂತವಾಗಿ ಬೆಳೆದಿತ್ತು. ಜಾತಿಯೆಂಬ ಬಂಧನದಿಂದ ಜನತೆಯನ್ನು ಮುಕ್ತಿಗೊಳಿಸಲು ಅವರು ರಚಿಸಿದ ಗೀತೆ ಮೌಲ್ಯಯುತವಾದದ್ದು.

ಮನುಷ್ಯ ಬದುಕನ್ನು ಹೂವಿಗೆ ಹೋಲಿಸುತ್ತ ಬದುಕಿನ ಕ್ಷಣಿಕತೆಯನ್ನು ನಿಸರ್ಗದ ಉದಾಹರಣೆಯ ಮೂಲಕ ಗೀತೆ ರಚಿಸಿದ್ದರಿಂದ ಅರ್ಥಗ್ರಹಿಕೆಗೆ ಅನುಕೂಲ ಮಾಡಿದ್ದಾರೆ. ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ಅರ್ಥೈಸಿಕೊಳ್ಳಲು ಸಹಾಯಕವಾಗುವಂತೆ ಮಾಡಿದ್ದಾರೆ.

ಪ್ರಕೃತಿಯ ಕುರಿತು ಗೀತೆಗಳನ್ನು ರಚಿಸಿರುವುದು ಇವರ ಗೀತೆಗಳ ವೈಶಿಷ್ಟ್ಯವಾಗಿದೆ. ಮಕ್ಕಳಲ್ಲಿ ದೇವಸ್ತೋತ್ರದ ಮಹತ್ವವನ್ನು ತಿಳಿಸಲು ಪ್ರಕೃತಿಯ ಅಂಶಗಳನ್ನು ಬಳಸಿ ವರ್ಣಿಸಿರುವುದು ಇವರ ಕವಿತಾ ಪ್ರತಿಭೆಗೆ ನಿದರ್ಶನವಾಗಿದೆ.

೫.೩.೬ ಜೆ. ಲೇಯರ್ – J. Layer

ದೈವ ಭಕ್ತಿ, ದೈವ ಭಯವುಳ್ಳ ಕುಟುಂಬದಲ್ಲಿ ಜನಿಸುವ ಭಾಗ್ಯ ಲೇಯರ್ ರವರಿಗೆ ದೊರೆಯಿತು. ಇವರು ಜರ್ಮನಿಯ ವುರ್ತಂಬರ್ಗದಲ್ಲಿ ೧೮೧೨ ರಲ್ಲಿ ಜನಿಸಿದರು. ಮಾತಾ ಪಿತೃಗಳ ಆದರ್ಶ ಜೀವನ ಇವರ ಜೀವನದ ಮೇಲೆ ಪ್ರಭಾವ ಬೀರಿತು. ಒಮ್ಮೆ ಮಿಶನ್ ಪೇಪರಿನಲ್ಲಿ ಬಂದಿದ್ದ Beside yourself ಎಂಬ ಲೇಖನವನ್ನು ಓದಿ ಪ್ರಭಾವಿತರಾಗಿ ಕರ್ತರ ಸೇವೆಗೆ ಯುವ ಜನರ ಅವಶ್ಯಕತೆ ಎಷ್ಟಿದೆ ಎಂಬುದನ್ನು ಅರಿತು ಬಾಸೆಲ್ ಮಿಶನ್‌ಗೆ ಸೇರಲು ಬಯಸಿದರು. ೧೮೩೬ ರಲ್ಲಿ ಧಾರವಾಡಕ್ಕೆ ಮಿಶನರಿಯಾಗಿ ಬಂದು ಜನರ ಧಾರ್ಮಿಕ ಆಚರಣೆಯತ್ತ ಹೆಚ್ಚಿನ ಆಸಕ್ತಿ ವಹಿಸಿದರು. ಸಾಹಿತ್ಯದಲ್ಲಿ ಆಸಕ್ತಿಯನ್ನು ವಹಿಸಿದ್ದ ಇವರು ಬಾಸೆಲ್ ಸಂಗೀತ ಪುಸ್ತಕದಲ್ಲಿ ಆರು ಸಂಗೀತಗಳನ್ನು ರಚಿಸಿ ಅನುವಾದಿಸಿದರು. ಇವರು ' ಸನ್ಮಾರ್ಗ ವಿಚಾರ' (೧೮೬೮) ಮತ್ತು 'ರಕ್ಷಣೋಪಾಯ' (೧೮೬೬) ಕೃತಿಗಳನ್ನು ರಚಿಸಿದರು.[೯೪]

ಸುವಾರ್ತಾ ಸೇವೆಯಲ್ಲಿ ತಲ್ಲೀನರಾಗಿದ್ದ ಇವರು ಧಾರವಾಡದ ಸುತ್ತಮುತ್ತಲಿನ ಹಳ್ಳಿಗಳನ್ನು ಸಂದರ್ಶಿಸಿ ದೈವವಾಕ್ಯವನ್ನು ಬೋಧಿಸಿದರು. ಕ್ರಿ.ಶ. ೧೮೪೫ ರಲ್ಲಿ ಹೊನ್ನಾವರಕ್ಕೆ ವರ್ಗಾಯಿಸಲ್ಪಟ್ಟ ಇವರು ಕೆಲವು ತಿಂಗಳು ಮಂಗಳೂರಿನಲ್ಲಿ ಸೇವೆ ಮಾಡಿದರು. ಕ್ರಿ.ಶ.೧೮೪೬ ರಲ್ಲಿ ಪುನಃ ಧಾರವಾಡಕ್ಕೆ ಬಂದು ಸೇವೆ ಸಲ್ಲಿಸಿದರು. ಅವರು ಅನಾರೋಗ್ಯದ ನಿಮಿತ್ತ ಸ್ವದೇಶಕ್ಕೆ ಹಿಂದಿರುಗಿ ಹೋಗಬೇಕಾಯಿತು. ತಮ್ಮ ಕೊನೆಯ ಗಳಿಗೆಯಲ್ಲಿ ತಮ್ಮ ಆಪ್ತರೊಂದಿಗೆ ಮಾತನಾಡುತ್ತ ಪ್ರಾರ್ಥಿಸುತ್ತಾ ತಮಗೆ ಇಷ್ಟವಾದ ತಾವೇ

ರಚಿಸಿದ ಸಂಗೀತ 'ಜೀವವನ್ನು ಹೊಂದ ನನ್ನ ಆಶೆ ಇಹುದು' ಎಂಬ ಸಂಗೀತವನ್ನು ಆಲಿಸುತ್ತಾ ತಾವೂ ಹಾಡುತ್ತಾ ಸಮಾಧಾನದಿಂದ ಕೊನೆಯುಸಿರೆಳೆದರು.

ಗೀತೆಗಳ ಅಧ್ಯಯನ: ಬಾಸೆಲ್ ಗೀತ ಪುಸ್ತಕದಲ್ಲಿ ಒಟ್ಟು ೬ ಗೀತೆಗಳನ್ನು ರಚಿಸಿದ್ದಾರೆ. ೨ ಭಾಷಾಂತರ ಗೀತೆಗಳು ಹಾಗೂ ೪ ಸ್ವರಚಿತ ಗೀತೆಗಳನ್ನು ರಚಿಸಿದ್ದಾರೆ. ಇವರ ಗೀತೆಗಳ ವಿವಿಧ ಭಾಗಗಳಿಗೆ ಸೇರಿವೆ.

೧)	ದೈವ ರಾಜ್ಯ	–	೦೧
೨)	ಕ್ರೈಸ್ತ ಸಭಾಚಾರ ಕೃಪಾಕರಣಗಳು	–	೦೧
೩)	ರಕ್ಷಣಾ ಮಾರ್ಗ	–	೦೧
೪)	ದೇವ ಸ್ತೋತ್ರ	–	೦೧
೫)	ವಿಶೇಷ ಕಾಲಗಳಿಗೆ ತಕ್ಕಗೀತೆಗಳು	–	೦೨
		ಒಟ್ಟು	೦೬ ಗೀತೆಗಳು

ಬೈಬಲ್: ದೈವ ವಾಕ್ಯದಲ್ಲಿ ದೇವರು ಮಾನವನೆಡೆಗೆ ಹೆಜ್ಜೆಯಿಡುವ ಆತನಿಗಾಗಿ ಪ್ರಯಾಸ ಪಡುವ ರೋಮಾಂಚನಕಾರಿ ಕಥನವಿದೆ. ದೇವರ ವಾಕ್ಯ ನಮ್ಮ ಜೀವನದಲ್ಲಿ ಪರಿಣಾಮಕಾರಿಯಾಗಬೇಕಾದರೆ, ನಾವು ಬೆಳೆಸಿಕೊಳ್ಳಬೇಕಾದ ಎರಡು ಮನೋಭಾವಗಳೆಂದರೆ: ೧, ದೇವರ ವಾಕ್ಯವನ್ನು ಕಿವಿಗೊಟ್ಟು ಕೇಳುವುದು. ೨. ಕೇಳಿದ ವಾಕ್ಯವನ್ನು ಜೀವನದಲ್ಲಿ ಅನುಷ್ಠಾನಕ್ಕೆ ತರುವುದು. ಈ ಎರಡು ಮನೋಭಾವಗಳಿಂದ ದೇವರ ಸಜೀವ ವಾಕ್ಯವನ್ನು ಸಮೀಪಿಸಿದಾಗ ಅದರ ಮೂಲಕ ನಮ್ಮ ಬಾಳಿನಲ್ಲಿ ದೇವರ ಶಕ್ತಿಯನ್ನು ನಾವು ಅನುಭವಿಸಬಹುದಾಗಿದೆ. ಏಕೆಂದರೆ ನಮ್ಮನ್ನು ಪರಿವರ್ತಿಸುವ ಶಕ್ತಿ ದೇವರ ವಾಕ್ಯಕ್ಕಿದೆ. ದೇವರ ಸಜೀವ ವಾಕ್ಯದ ಸಂದೇಶವನ್ನು ತುಂಬು ಮನದಿಂದ ನಾವು ಒಪ್ಪುವುದು ಮಾತ್ರವಲ್ಲದೆ ಅದಕ್ಕೆ ಸಕ್ರೀಯವಾಗಿ ನಮ್ಮ ಪ್ರತಿಕ್ರಿಯೆಯನ್ನು ನಾವು ತೋರಿಸಿದಾಗ ನಾವು ಕ್ರಿಯಾಶೀಲರಾಗುತ್ತೇವೆ ಎಂಬ ಮಹಾನ್ ಸತ್ಯದತ್ತ ಗೀತಗಾರ ನಮ್ಮ ಮನ ಸೆಳೆಸಿದ್ದಾರೆ 'ದೇವರೇ ಸುವಾರ್ತೆಯನ್ನು' ಎಂಬ ಗೀತೆಯಲ್ಲಿ. ಇದು Saft vom Felsen ಎಂಬ ಗೀತೆಯ ಭಾಷಾಂತರವಾಗಿದೆ.

ಆದಿ ಪಿತೃ ಪಾಪದಿಂದ
ಶಾಪಗ್ರಸ್ತರಾದೆವು
ಸ್ವಂತ ಪಾಪ ಸೇವೆಯಿಂದ
ಮೃತಿ ಪ್ರಾಪ್ತವಾಯಿತು

ತಿಳುಕೊಂಬ ಮನಸ್ಸನ್ನು
ಲಾಲಿಸುವ ಕಿವಿಯನ್ನು
ನೋಡುವಂಥ ಕಣ್ಣನ್ನು
ಕ್ರಿಸ್ತ ದಯೆ ಪಾಲಿಸು.

ಕನ್ನಡ ಗೀತೆಗಳು, ಗೀತೆ–೧೫೦

ಆದಿ ಪಿತೃ ಪಾಪ: ಆದಾಮ ಮತ್ತು ಹವ್ವ ಇವರು ದೇವ ಆಜ್ಞೆಯನ್ನು ಮೀರಿದ್ದನ್ನು (ಆದಿ–೩ನೇ ಅಧ್ಯಾಯ) ಸವಿಸ್ತಾರವಾಗಿ ವಿವರಿಸಲಾಗಿದೆ. ಆದಿ ಪಿತೃಗಳು ಮಾಡಿದ ಪಾಪ ಅವಿಧೇಯತೆಯಿಂದ

ಮಾಡಿದ ಪಾಪವಾಗಿತ್ತು. ಇಂದು ದೇವ ವಾಕ್ಯಕ್ಕೆ ವಿಧೇಯರಾಗಿ ನಡೆಯಲು ತನ್ನನ್ನು ಶಕ್ತಿ ಪಡಿಸೆಂದು ಗೀತೆಗಾರ ಕೇಳಿಕೊಂಡಿದ್ದಾನೆ. ತನ್ನ ಮನಸ್ಸು, ಹೃದಯ, ಕಣ್ಣನ್ನು ಅದಕ್ಕಾಗಿ ಸಿದ್ಧಗೊಳಿಸೆಂದು ಬೇಡಿದ್ದಾನೆ.

ಕ್ರೈಸ್ತರ ಜೀವನ: ಉತ್ತಮ ಕ್ರೈಸ್ತ ಜೀವನ ನಡೆಸಲು ಬೇಕಾದ ವರವನ್ನು ಕೇಳಿಕೊಂಡಿದ್ದಾರೆ ಭಕ್ತ 'ಜೀವವನ್ನು'ಎಂಬ ಗೀತೆಯಲ್ಲಿ. ಫಿಲಿಪ್ ಫ್ರೆಡ್ರಿಕ್ ಹಿಟ್ಲರ್ ಎಂಬಾತು ಈ ಗೀತೆಯನ್ನು ಜರ್ಮನ್ ಭಾಷೆಯಲ್ಲಿ ರಚಿಸಿದನು. ಈತನು ವುರ್ತಿಂಬುರ್ಗಿನ ಕವಿಗಳಲ್ಲಿ ಶ್ರೇಷ್ಟನಾಗಿದ್ದನು. (೧೬೯೯–೧೭೬೯) ಇದು Ich will streben ಎಂಬ ಗೀತೆಯ ಭಾಷಾಂತರವಾಗಿದೆ.

ಜೀವವನ್ನು	ಕೇಳು ನಿನ್ನ
ಹೊಂದ ನನ್ನ	ಶಿಶುವಿನ
ಆಶೆ ಇಹುದು	ಮೊರೆ, ತಂದೆಯೆ।
ದೃಢದಿಂದ	ಶಕ್ತಿಯಾದ
ಇಂದಿನಿಂದ	ಆಶೀರ್ವಾದ
ತಡಮರೆತು	ಕೊಡು ಕ್ರಿಸ್ತನೆ!
ಹೋಗುತೇನೆ ಗುರಿಗೆ	ಜ್ಞಾನ ತ್ರಾಣವೆರಡೇ
ಹಿಂದಕೆಂದು ದೃಷ್ಟಿಸೆ	ಕೊಡು, ದೇವರಾತ್ಮನೇ!
ಎಲ್ಲ ಬಿಟ್ಟು	ಜೀವವನ್ನ
ಮನಸಿಟ್ಟು	ಹೊಂದ ನನ್ನ
ಅರ್ಸಿಕೊಂಬೆನು	ಆಶೆಯಾಡುದೆ!

ಕನ್ನಡ ಗೀತೆಗಳು, ಗೀತೆ–೨೫೭

ಚಿಕ್ಕ ವಾಕ್ಯಗಳು, ಸರಳ ಶೈಲಿ ದೇಶೀಯತೆಯನ್ನು ಹೊಂದಿದೆ. ಸರಳ ಪದಗಳ ಬಳಕೆಯಿಂದ ಅರ್ಥಗ್ರಹಿಕೆ ಸುಲಭವಾಗಿದೆ. ಮುದ್ಧಭಾವ ಪ್ರಕಟವಾಗಿದೆ. ದೇವರನ್ನು ತಂದೆಯೆಂದು ಭಾವಿಸಿ ತಾನು ಶಿಶುವೆಂದೂ ತನ್ನನ್ನು ಹರಸೆಂದು ಕೇಳಿಕೊಂಡಿದ್ದಾನೆ ಭಕ್ತ.

ಲೇಯರ್. ಜೆ ರವರ ಗೀತೆಗಳ ವೈಶಿಷ್ಟ್ಯತೆಗಳು: ಲೇಯರವರು ರಚಿಸಿದ ೬ ಗೀತೆಗಳಲ್ಲಿ ಸ್ವರಚಿತ ಗೀತೆಗಳೇ ಹೆಚ್ಚು. ಮನುಷ್ಯನನ್ನು ನೋಡಿರುವ ಬಗೆ ಇಲ್ಲಿ ವಿಶೇಷವಾಗಿದೆ. ಮಾನವ ' ಪಾಪಿ ' ಆತನು ದೇವರ ಸಹಾಯವಿಲ್ಲದೆ ಮೋಕ್ಷ ಸಾಧಿಸಲಾರ ಎಂಬ ಧ್ವನಿ ಇಲ್ಲಿ ವ್ಯಕ್ತವಾಗಿದೆ. ಬಲಹೀನವಾದ, ಪಾಪಕ್ಕೆ ಯಾವಾಗಲೂ ಅಂಟಿಕೊಂಡಿರುವ ಮಾನವ ಸ್ವತಂತ್ರನಾಗಿ ಒಳಿತನ್ನು ಮಾಡಲು ಸಾಧ್ಯವಿಲ್ಲ, ' ಸರ್ವೇಶ್ವರನ ಶಕ್ತಿಯಿಂದ ಸರ್ವವನ್ನು ಸಾಧಿಸುವ ಸಾಮರ್ಥ್ಯ ನನಗಿದೆ' (ಫಿಲಿಪ್ಪ ೪:೧೩) ಎಂಬ ಸಂತ ಪೌಲನ ಮಾತು ಸ್ಮರಣೀಯ. ದೇವರ ಕಟಾಕ್ಷ, ಕೃಪೆಯಿಂದ ವ್ಯಕ್ತಿ ಪಾಪದಿಂದ ಬಿಡುಗಡೆ ಹೊಂದಿ ಸ್ವಾತಂತ್ರವಾಗಲು

ಸಾಧ್ಯವಿದೆ ಬದುಕಿನಲ್ಲಿ ಪರಿಶುದ್ಧತೆಯ ಮೆಟ್ಟಿಲನ್ನು ಏರಲು ಸಾಧ್ಯವಿದೆ ಎಂಬ ಮಹತ್ವದ ವಿಚಾರದತ್ತ ಗೀತೆ ಮನಸೆಳೆದಿದೆ.

ಸೃಷ್ಟಿಯ ಮೂಲವನ್ನು ತಿಳಿಯಪಡಿಸುವ ವಿಚಾರಗಳು ಗೀತೆಯಲ್ಲಿ (ಗೀತೆ ೧೫೦) ವ್ಯಕ್ತವಾಗಿದೆ. ಆದಿ ಮಾತಾ ಪಿತೃಗಳಾದ ಆದಾಂ ಮತ್ತು ಹವ್ವರ ಪರಿಚಯ ಮಾಡಿಕೊಡುವ ಈ ಗೀತೆ ಅವರ ನಡತೆಯ ಕೊರತೆಯನ್ನು ಸೂಚಿಸುತ್ತಾ ಆ ಪಥದಲ್ಲೆ ಸಾಗದೆ ವಿಧೇಯತೆಯ, ದೈವಭಯ ಹೊಂದಿದ ಬಾಳನ್ನು ನಡೆಸಲು ಪ್ರೇರಣೆ ನೀಡುವುದಾಗಿದೆ.

ಗೀತೆಗಳಲ್ಲಿ ಕಾವ್ಯ ಗುಣ ಕಡಿಮೆಯಾಗಿದೆ. ಗದ್ಯರೂಪದ ವಾಕ್ಯಗಳೇ ಹೆಚ್ಚಾಗಿವೆ. ಉದಾ: ಲಾಲಿಸುವ ಕಿವಿಯನ್ನು, ನೋಡುವಂಥ ಕಣ್ಣನ್ನು ಇತ್ಯಾದಿ ಗೀತಗಾರನಿಗೆ ಅರ್ಥವೇ ಪ್ರಧಾನ ಅಂಶವಾಗಿತ್ತೆಂದು ತಿಳಿದು ಬರುತ್ತದೆ.

೫.೩.೭ ಮ್ಯಾಕ್. ಜೆ – J. Mack

ಬಾಸೆಲ್‌ನಿಂದ ಮಿಶನರಿಯಾಗಿ ಭಾರತದಲ್ಲಿ ಸೇವೆ ಮಾಡಲು ಬಂದ ಜೆ. ಮ್ಯಾಕ್ ಅನೇಕ ವಷಗಳವರೆಗೆ ಹುಬ್ಬಳ್ಳಿಯ ಬಾಸೆಲ್ ಮಿಶನ್ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಕ್ರಿ.ಶ. ೧೮೬೨ರಲ್ಲಿ ಮುಂಬಾಯಿ ನೇಟಿವ್ ಸೊಸೈಟಿಯವರು ಕನ್ನಡದಲ್ಲಿ ಪತ್ರಿಕೆಯನ್ನು ಹೊರತರಲು ನಿಶ್ಚಯಿಸಿ ಅದಕ್ಕೆ ರೆ.ಕಿಟಲ್ ಹಾಗೂ ರೆ.ಜೆ. ಮ್ಯಾಕ್ ಅವರನ್ನು ಸಂಪಾದಕರನ್ನಾಗಿ ನೇಮಿಸಿದರು. ಇಂಡಿಯ ಮತ್ತು ಅನ್ಯ ದೇಶದ ವಾರ್ಷಿಕ (ವಿಚಿತ್ರ, ವರ್ತಮಾನ ಸಂಗ್ರಹ) ಎಂಬುದು ಆ ಪತ್ರಿಕೆಯ ಹೆಸರು.[೯೫] ಅದರಲ್ಲಿ ಸಚಿತ್ರ ಇಂಗ್ಲೀಷ್ ಕನ್ನಡ ಲೇಖನಗಳು ಹಾಗೂ ಇಂಗ್ಲೇಂಡ್ ಭಾರತ ಹಾಗೂ ಅನ್ಯದೇಶದ ಸುದ್ಧಿಗಳಿರುತ್ತಿದ್ದವು. ರೆವ.ಕಿಟಲ್‌ರ ಆರಂಭದ ಸಾಹಿತ್ಯ ಕಾರ್ಯದಲ್ಲಿ ರೆವ. ಮ್ಯಾಕ್ ಸಹಭಾಗಿಯಾಗಿದ್ದರು. ರೆ.ಮ್ಯಾಕ್ ' ಕಾವ್ಯ ಪುಂಜ ' ಎಂಬ ಕವನ ಸಂಕಲನ ಹಾಗೂ ಮಕ್ಕಳಿಗಾಗಿ ಕವಿತೆಗಳನ್ನು ರಚಿಸಿದರು.[೯೬]

ಗೀತೆಗಳ ಅಧ್ಯಯನ: ಬಾಸೆಲ್ ಗೀತ ಪುಸ್ತಕದಲ್ಲಿ ಒಟ್ಟು ೧೦ ಗೀತೆಗಳನ್ನು ರಚಿಸಿದ್ದಾರೆ. ೮ ಭಾಷಾಂತರ ಗೀತೆಗಳಾಗಿದ್ದು, ೨ ಸ್ವರಚಿತ ಗೀತೆಗಳಾಗಿವೆ. ಈ ಗೀತೆಗಳು ವಿವಿಧ ಭಾಗಗಳಿಗೆ ಸೇರಿವೆ.

೧) ಸಭೋತ್ಸವಗಳು	೦೪
೨) ದೇವರ ರಾಜ್ಯ	೦೧
೩) ರಕ್ಷಣಾರ್ಥಕ ಪ್ರಾರ್ಥನೆ	೦೧
೪) ದೇವ ಸ್ತೋತ್ರ	೦೧
೫) ವಿಶೇಷ ಕಾಲಗಳಿಗೆ ತಕ್ಕಗೀತೆಗಳು	೦೨
೬) ಸ್ವರ್ಗ ಮಹಿಮಾಭಿಲಾಶೆ	೦೧
	ಒಟ್ಟು ೧೦ ಗೀತೆಗಳು

ಬಾಲಕರ ಗೀತೆಗಳು ಕೃತಿಯಲ್ಲಿ ಇವರ ೬೫ ಗೀತೆಗಳಿವೆ. ಪತ್ರಿಕೆಗಳಲ್ಲಿ ಇವರ ಗೀತೆಗಳು ಪ್ರಕಟವಾಗಿವೆ.

ಬೈಬಲ್:- ಸಭಾ ಪತ್ರದಲ್ಲಿನ ಗೀತೆ: ಬೈಬಲೆಗೆ ಸಂಬಂಧಪಟ್ಟ ಗೀತೆ ಸಭಾ ಪತ್ರ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇದೇ ಗೀತೆ ಬಾಲಕರ ಗೀತೆಗಳು ಕೃತಿಯಲ್ಲಿ ಇದೆ.

ಬೈಬಲ್ಲಿನ ಹಳೆಒಡಂಬಡಿಕೆಯಲ್ಲಿ ೧ನೇ ಸಾಮುವೇಲನ ಗ್ರಂಥದಲ್ಲಿ ಬರುವ ಗೋಲ್ಯಾಥನೆಂಬ ಪರಾಕ್ರಮಿಯ ಪೌರುಷವನ್ನು ಅಹಂಕಾರವನ್ನು ಹಾಗೂ ಅದರಿಂದ ಉಂಟಾದ ಅಧಪತನವನ್ನು ಗೀತಗಾರ **"ಗೋಲಿಯಾತನು"**[೭] ಎಂಬ ಗೀತೆಯಲ್ಲಿ ವರ್ಣಿಸಿದ್ದಾನೆ.

"ಯೆಹೂದ್ಯ ಪ್ರಾಂತ್ಯದ ಸೋಕೋವಿನಲ್ಲಿ ಫಿಲಿಷ್ಟಿಯರು ಯುದ್ಧಕ್ಕಾಗಿ ಸೈನ್ಯವನ್ನು ಜಮಾಯಿಸಿದ್ದರು. ಸೋರೋವಿಗೂ ಅಜೇದಕ್ಕೂ ಮಧ್ಯೆಯಿರುವ ಎಫೆಸ್ದಮ್ಮೀಮಿನಲ್ಲಿ ಬೀಡು ಬಿಟ್ಟಿದ್ದರು. ಈ ಫಿಲಿಷ್ಟಿಯರೊಡನೆ ಯುದ್ಧ ಮಾಡಲು ಸೌಲನು ಇಸ್ರಯೋಲರೂ ತಮ್ಮ ಸೈನ್ಯವನ್ನು ಜಮಾಯಿಸಿಕೊಂಡು ಎಲಾ ಕಣಿವೆಯಲ್ಲಿ ಪಾಳೆಯ ಮಾಡಿಕೊಂಡು ವ್ಯೂಹ ಕಟ್ಟಿದ್ದರು. ಫಿಲಿಷ್ಟಿಯರು ಒಂದು ಗುಡ್ಡದ ಪಕ್ಕದಲ್ಲೂ ನಿಂತರು. ಉಭಯರ ಮಧ್ಯೆ ಒಂದು ಕಣಿವೆ ಇತ್ತು.

ಫಿಲಿಷ್ಟಿಯರ ಪಾಳೆಯದಿಂದ ಮಹಾ ಪರಾಕ್ರಮಿಯೊಬ್ಬನು ಹೊರಬಂದನು. ಅವನು ಗತ್ ಊರಿನವನು. ಅವನ ಹೆಸರು ಗೊಲ್ಯಾತ್ ಅವನ ಎತ್ತರ ಸುಮಾರು ಮೂರು ಮೀಟರ್. ಅವನು ಧರಿಸಿದ್ದು ಕಂಚಿನ ಶಿರಸ್ತ್ರಾಣ. ಅದೇ ಲೋಹದ ಬಿಲ್ಲೆಗಳಿಂದ ಪರೆಪರೆಯಾಗಿ ಜೋಡಿಸಲಾಗಿದ್ದ ಅವನ ಕವಚ ಸುಮಾರು ಐವತ್ತೇಳು ಕಿಲೋಗ್ರಾಮಿನಷ್ಟು ತೂಕವಾಗಿತ್ತು. ಅವನ ಪಾದರಕ್ಷೆಗಳು ಹಾಗೂ ಹೆಗಲ ಮೇಲಿನ ಈಟಿ ಕಂಚಿನದಾಗಿತ್ತು. ಅದರ ಅಲಗು ಏಳು ಕಿಲೋಗ್ರಾಮಿನಷ್ಟು ಭಾರವಾಗಿತ್ತು. ಅವನ ಗುರಾಣಿಯನ್ನು ಹೊರುವವನು ಅವನ ಮುಂದೆ ಮುಂದೆ ಹೋಗುತ್ತಿದ್ದನು. ಗೋಲ್ಯಾತನು ಅಲ್ಲೆ ನಿಂತು ಇಸ್ರಯೇಲರ ಸೈನ್ಯದತ್ತ ಹೀಗೆಂದು ಗರ್ಜಿಸಿದನು. ನೀವು ಸಜ್ಜಾಗಿ ಬಂದಿರುವುದು ಯುದ್ಧ ಮಾಡಲಿಕ್ಕೋ ? ನಾನು ಫಿಲಿಷ್ಟಿಯನು, ನೀವು ಆ ಸಾಲಿನ ಗುಲಾಮರು ನಿಮ್ಮಲ್ಲಿ ಒಬ್ಬನನ್ನು ಆರಿಸಿಕೊಂಡು ನನ್ನ ಬಳಿಗೆ ಕಳುಹಿಸಿ ಅವನು ನನ್ನೊಡನೆ ಯುದ್ಧ ಮಾಡಿ ನನ್ನನ್ನು ಕೊಲ್ಲಲಿ. ಆಗ ನಮ್ಮವರು ನಿಮ್ಮ ಗುಲಾಮರಾಗುವುದು. ನಾನು ಆಟವನ್ನು ಸೋಲಿಸಿ ಕೊಂದರೆ ನೀವು ನಮಗೆ ಗುಲಾಮರಾಗಿ ನಮಗೆ ಸೇವೆ ಮಾಡಬೇಕು. ಅದೂ ಅಲ್ಲದೆ ಆ ಫಿಲಿಷ್ಟಿಯನು ಇಸ್ರಯೇಲೆ ಸೈನಿಕರಿಗೆ ನಾನು ಇದೀಗಲೇ ಹಾಕುವ ಸವಾಲು ಇಂದು ನನ್ನೊಡನೆ ಕಾಳಗಕ್ಕೆ ನಿಮ್ಮಿಂದ ಒಬ್ಬನನ್ನು ಆಯ್ದು ಕಳುಹಿಸಿ ನೋಡೋಣ ಎಂದು ಕೊಚ್ಚಿಕೊಂಡನು. ಸೌಲನು ಹಾಗೂ ಇಸ್ರಯೇಲರೆಲ್ಲರು ಅವನ ಸವಾಲನ್ನು ಕೇಳಿ ಭಯ ಭೀತರಾದರು. ಅವರ ಎದೆ ಅದುರಿತು. ದಾವೀದ ಬಾಲಕನಾಗಿದ್ದರೂ ಗೋಲ್ಯಾಥನನ್ನು ಇದುರಿಸಲು ಸಿದ್ಧನಾಗಿ ಬಂದನು.

ಫಿಲಿಷ್ಟಿಯನು ದಾವೀದನ ಕಡೆ ಧಾವಿಸಿ ಬಂದನು. ಗುರಾಣಿ ಹೋರುವವನು ಅವನ ಮುಂದೆ ಇದ್ದನು. ಫಿಲಿಷ್ಟಿಯನು ದಾವೀದನನ್ನೂ ಸಮೀಪಿಸಿ ನೋಡಿದನು. ಕೆಂಬಣ್ಣದವನೂ ಸುಂದರನೂ ಆದ

ಆ ಯುವಕನನ್ನು ದಿಟ್ಟಿಸಿ ತಾತ್ಸಾರದಿಂದ ನೀನು ಕೋಲು ಹಿಡಿದು ನನ್ನ ಬಳಿಗೆ ಬರಲು ನಾನು ನಾಯಿಯೆಂದು ತಿಳಿದು ಕೊಂಡೆಯಾ ? ಎಂದು ಹೇಳಿ ಅವನನ್ನು ತನ್ನ ದೇವರ ಹೆಸರಿನಲ್ಲಿ ಶಪಿಸಿದನು. 'ಇಲ್ಲಿ ಬಾ ನಿನ್ನ ಮಾಂಸವನ್ನು ಆಕಾಶದ ಪಕ್ಷಿಗಳಿಗೆ, ಕಾಡಿನ ಮೃಗಗಳಿಗೆ ಹಂಚಿ ಕೊಡುತ್ತೇನೆ' ಎಂದನು.

ಅದಕ್ಕೆ ದಾವೀದನು 'ನೀನು ಈಟಿ. ಕತ್ತಿ, ಭರ್ಜಿಗಳೊಡನೆ ನನ್ನ ಬಳಿಗೆ ಬರುತ್ತಿರುವೆ, ನೀನು ಹೀಯಾಳಿಸಿದ ಸೇನಾಧೀಶ್ವರರು ಹಾಗೂ ಇಸ್ರಯೇಲ್ ಯೋಧಕ ದೇವರು ಆದಂಥ ಸರ್ವೇಶ್ವರನೆ ನಾಮದೊಡನೆ ನಾನು ನಿನ್ನ ಬಳಿಗೆ ಬರುತ್ತಿದ್ದೇನೆ. ಅವರು ಈ ದಿನ ನಿನ್ನನ್ನು ನನ್ನ ಕೈಗೆ ಒಪ್ಪಿಸಿಕೊಡುವರು. ನಾನು ನಿನ್ನನ್ನು ಕೊಂದು ನಿನ್ನ ತಲೆಯನ್ನು ಕಡಿದು ಫಿಲಿಷ್ಟಿಯ ಸೈನ್ಯದ ಶವಗಳನ್ನು ಆಕಾಶದ ಪಕ್ಷಿಗಳಿಗೂ ವನ್ಯ ಮೃಗಗಳಿಗೂ ಹಂಚಿಕೊಡುವೆನು. ಇದರಿಂದ ಇಸ್ರಯೇಲರ ಸಂಗಡ ದೇವರಿದ್ದಾರೆಂಬುದು ಜಗತ್ತಿಗೆಲ್ಲಾ ತಿಳಿದು ಬರುವುದು. ಈಟಿ, ಕತ್ತಿಗಳಿಲ್ಲದೆ ಸರ್ವೇಶ್ವರ ರಕ್ಷಿಸಬಲ್ಲನೆಂಬುದು ಇಲ್ಲಿ ಕೂಡಿರುವವರೆಲ್ಲರಿಗೆ ಗೊತ್ತಾಗುವುದು. ಏಕೆಂದರೆ ಸಮರದ ಪರಿಣಾಮ ಇರುವುದು ಸರ್ವೇಶ್ವರನ ಕೈಯಲ್ಲಿ ಅವರು ತಪ್ಪದೆ ನಿಮ್ಮನ್ನು ನಮ್ಮ ಕೈಗೆ ಒಪ್ಪಿಸಿಕೊಡುವರು' ಎಂದನು.

ಕೂಡಲೇ ಆ ಫಿಲಿಷ್ಟಿಯನು ದಾವೀದನ ಮೇಲೆ ಎರಗಲು ಮತ್ತೆ ಧಾವಿಸಿದನು. ದಾವೀದನೂ ಫಿಲಿಯಷ್ಟಿಯರ ಸೈನ್ಯದ ಕಡೆಗೆ ನುಗ್ಗಿ ಆ ಫಿಲಿಷ್ಟಿಯರನ್ನು ಎದುರುಗೊಳ್ಳಲು ಓಡಿದರು. ಕೈಯನ್ನು ಚೀಲದಲ್ಲಿ ಹಾಕಿ ಒಂದು ಕಲ್ಲನ್ನು ತೆಗೆದು ಅವನ ಕಣ್ಣಿಗೆ ಗುರಿಯಿಟ್ಟು ಕವಣೆಯನ್ನು ಬೀಸಿ ಹೊಡೆದನು. ಆ ಕಲ್ಲು ಅವನ ಹಣೆಯನ್ನು ಹೊಕ್ಕಿತು ಅವನು ಮುಖ ಕೆಳಗಾಗಿ ನೆಲಕ್ಕೆ ಮರುಳಿದನು. ಕೂಡಲೆ ದಾವೀದನು ಹೋಗಿ ಆ ಫಿಲಿಷ್ಟಿಯನ ಮೇಲೆ ನಿಂತು ಅವನ ಕತ್ತಿಯನ್ನೇ ಹಿಟಿದು ಅವನ ತಲೆಯ ಕಡಿದು ಸಾಯಿಸಿದನು."[೮]

ಶಿರಸ್ತ್ರ, ಡಾಲು, ಖಡ್ಗವು	ಸರ್ವೇಶನೊಬ್ಬನೆ
ಇತ್ಯಾದಿ ತಪ್ಪುತೆ	ಎಂದರಿತೊಳ್ಳೆ ಬುಧ್ಧಿಯ
ವಿಜಯ ಕೊಡುವಾತನು	ಈ ಕಥೆಯಿಂದ ಹೊಂದುವ!

ಅಹಂಕಾರ ಗರ್ವ, ಮನುಷ್ಯನನ್ನು ಅಥಪತನಕ್ಕೆ ಕೊಂಡೊಯ್ಯುವ ಮಾರ್ಗಗಳಾಗಿವೆ. ತಾಳ್ಮೆ, ವಿನಯತೆ, ಮನುಷ್ಯನನ್ನು ಯಶಸ್ವಿಯ ಮೆಟ್ಟಿಲನ್ನು ಏರಲು ಇರುವ ಸೋಪಾನಗಳಾಗಿವೆ ಎಂಬ ನುಡಿಯನ್ನು ಇಲ್ಲಿ ನೆನಸಬಹುದು. ಉತ್ತಮ ಕಥನ ಶೈಲಿಯ ಈ ಗೀತೆ ರಚಿತವಾಗಿದೆ. ಕತೆಯ ಮೂಲಕ ನೀತಿ ಬೋಧನೆ ಇವರ ಉದ್ದೇಶವಾಗಿತ್ತು, ಬಾಲಕರ ಗೀತೆಗಳಲ್ಲಿ ಇಂತಹ ಗೀತೆ ರಚಿತವಾದ್ದರಿಂದ ಶಾಲಾ ವಿದ್ಯಾರ್ಥಿಗಳಿಗೆ ಕಥೆಯ ಮೂಲಕ ಮೌಲ್ಯವನ್ನು ಕಲಿಸುವುದು ಮಿಶನರಿಗಳ ಉದ್ದೇಶವಾಗಿತ್ತು. ಪತ್ರಿಕೆಗಳಲ್ಲಿ ಇಂತಹ ಗೀತೆ ಪ್ರಕಟವಾದ್ದರಿಂದ ಸಮಾಜದ ಅಬಾಲವೃದ್ಧರು ಇದರಿಂದ ಪ್ರಯೋಜನ ಪಡೆಯಲು ಸಾಧ್ಯವಾಯಿತು.

ಕ್ರಿಸ್ತರ ವ್ಯಕ್ತಿತ್ವ:– ಬಾಲಕರ ಗೀತೆಯಲ್ಲಿ ಕ್ರಿಸ್ತರ ವ್ಯಕ್ತಿತ್ವದ ಗೀತೆ:

ದೇವರು ಪ್ರೀತಿ ಸ್ವರೂಪ ಆತನ ಪ್ರೀತಿಗೆ ಎಲ್ಲೆಗಳೇ ಇಲ್ಲ. ಆತನು ಮನುಜ ಕುಲಕ್ಕೆ ನೀಡಿದ ಕೊಡುಗೆ ಅಪಾರ, ಬಣ್ಣ ಬಣ್ಣದ ಹೂ ಗಿಡಗಳು ತುಂಬಿ ಹರಿಯುವ ಕಡಲು, ಮೌನವಾಗಿ ನಿಂತ ಪರ್ವತಗಳು, ಈ ಸುಂದರ ಪ್ರಕೃತಿ ದೇವರು ಮನುಷ್ಯರಿಗೆ ನೀಡಿರುವ ಅಪಾರ ಪ್ರೀತಿಗೆ ನಿದರ್ಶನಗಳಾಗಿವೆ. ಆದ್ದರಿಂದ ಆ ಸೃಷ್ಟಿಕರ್ತನನ್ನು ಸ್ತುತಿಸುವುದು ಉಚಿತವೆಂದು ಹೇಳುತ್ತಿದ್ದಾನೆ 'ದೇವರು ಪ್ರೀತಿಯು' ಎಂಬ ಗೀತೆಯಲ್ಲಿ.

ನಮ್ಮ ತಂದೆಯನ್ನು
ಮಿತ್ರ ಹೊಗಳು!
ನಮ್ಮ ಕೂಡ ಅನ್ನು
ದೇವರು ಪ್ರೀತಿಯು!

ಬಾಲಕರ ಗೀತೆಗಳು, ಗೀತೆ–೨೯

ತಂದೆ: ಪೋಷಕ ಎನ್ನುವ ಅರ್ಥದಲ್ಲಿ ಎಲ್ಲವನ್ನು ದೊರಕಿಸಿಕೊಡುವವನು, ತಂದೆಯಾದ ದೇವರು ತನ್ನ ಮಕ್ಕಳಿಗೆ ಅವಶ್ಯಕವಾಗಿರುವ ಹಾಗೂ ಅವರ ಸೌಖ್ಯದ ಬದುಕಿಗೆ ಅಗತ್ಯವಿರುವ ಎಲ್ಲ ವಸ್ತುಗಳನ್ನು ಪೂರೈಸುವ ತಂದೆಯಾಗಿದ್ದಾನೆ ಎಂಬರ್ಥದಲ್ಲಿ ದೇವರನ್ನು 'ತಂದೆ' ಎಂದು ಗೀತಗಾರ ಸಂಬೋಧಿಸಿರುವುದು ಯೋಗ್ಯವಾಗಿದೆ.

ಕ್ರೈಸ್ತರ ಬದುಕು:– ಬಾಲಕರ ಗೀತೆಗಳಲ್ಲಿನ ಗೀತೆ: 'ನುಡಿದರೆ ಮುತ್ತಿನ ಹಾರದಂತಿರಬೇಕು ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು. ನುಡಿದರೆ ಲಿಂಗಮೆಚ್ಚಿ ಹೌದೌದೆನ್ನಬೇಕು' ಎಂಬ ವಚನದಂತೆ ನಾವು ಆಡುವ ಮಾತು ಪರರನ್ನು ಉದ್ಧರಿಸುವಂತಿರಬೇಕು ಸಂತೈಸುವಂತಿರಬೇಕು. ಅಂತೆಯೇ ನಮ್ಮೊಡನಿರುವ ಸರ್ವರು ಒಳಿತನ್ನು ಕಲಿಯಲು ಸಾಧ್ಯವಿದೆ 'ಭಕ್ತಿಯುಳ್ಳ ಗೃಹಸ್ತನ ಕಥೆ'ಎಂಬ ಗೀತೆಯಲ್ಲಿ. ಈ ಗೀತೆಯನ್ನು ಕಥನ ರೂಪಕದ ಮೂಲಕ ತಿಳಿಸಿದ್ದಾನೆ. ಬಾಲಕರ ಗೀತೆಗಳು, ಗೀತೆ–೪೬.

ಈ ಕಥನ ಕವನದಲ್ಲಿ ನೀತಿ ಬೋಧೆ ಪ್ರಮುಖವಾಗಿ ಇದೆ. ಆದರೆ ಕಥೆಗಾರಿಕೆಯ ನೇರವಾದ ಓಟ, ಕುತೂಹಲವನ್ನು ಕೆರಳಿಸಿ, ಮನಸ್ಸನ್ನು ಬೆದಕಿ ಕರುಣೆಯನ್ನು ಕೆದಕುವಂತಹ ಸನ್ನಿವೇಶಗಳ ಚಿತ್ರಣ ಇವುಗಳಲ್ಲಿರುವುದರಿಂದ ನೀತಿ ಬೋಧೆಯು ಅತಿಯಾಗಿದೆಯೆಂದು ತೋರುವುದಿಲ್ಲ.

ಉತ್ತಮ ಗೃಹಸ್ಥನೊಬ್ಬ ತನ್ನ ಬದುಕಿನಲ್ಲಿ ಏನೇನು ಬಂದೊದಗಿದರು ಆತನು ಹೇಳುತ್ತಿದ್ದ ಮಾತು 'ಓ ಯೇಸು ವಂದಿತನಾಗು' ಎಂದು. ಆತನ ಮನೆಯಲ್ಲಿಯೇ ವಾಸವಾಗಿದ್ದ ಗಿಳಿಮರಿಯೊಂದು ಆತನು ಹೇಳುತ್ತಿದ್ದ ಮಾತನ್ನು ಕೇಳಿಕೇಳಿ ಅದು ಪುನರುಚ್ಚರಿಸತೊಡಗಿತು. ಅದು ತೋಟಕ್ಕೆ ಹಾರಿ ಹೋಗಿ ಅಲ್ಲಿನ ಕೊಂಬೆಯಲ್ಲಿ ಕುಳಿತು ಸುಸ್ವರದಿಂದ 'ಓ ಯೇಸು ವಂದಿತನಾಗು' ಎಂದಿತು. ಗೃಹಸ್ಥನು ಅದನ್ನು

ಹಿಡಿದು ತರಲು ಯತ್ನಿಸಿ ವಿಫಲನಾದಾಗ ಆತನು 'ಓ ಯೇಸು ವಂದಿತನಾಗು' ಎಂದನು. ಒಮ್ಮೆ ಹದ್ದೊಂದು ಗಿಳಿಯನ್ನು ಹಿಡಿಯಲು ವೇಗದಿಂದ ಬರಲು ಆಕಾಶದಿಂದ ಬಂದ ಸಿಡ್ಲಿಗೆ ಹದ್ದು ಹೆದರಿತು. ಇದರಿಂದ ಗಿಳಿ ತಪ್ಪಿಸಿಕೊಂಡಿತು. ಕೃತಜ್ಞತೆಯಿಂದ 'ಓ ಯೇಸು ವಂದಿತನಾಗು' ಎಂದಿತು, ಇದನ್ನೇ ಗಮನಿಸುತ್ತಿದ್ದ ಗೃಹಸ್ಥ ತಾನು ಆಶಿಸುತ್ತಿದ್ದ ಆ ಗಿಳಿ ತನ್ನೆಡೆಗೆ ಹಿಂದಿರುಗಿ ಬಂದಾಗ, ಅದನ್ನು ಸಂತೋಷದಿಂದ ತನ್ನ ಬಿಡಾರಕ್ಕೆ ಹಾಕಲು ಬೇರೆಯವರು ಹೀಗೆಂದು ಹೇಳಿದರು 'ಓ ಯೇಸು ವಂದಿತನಾಗು' ದೇವನಾಮ ಸ್ಮರಣೆಯಿಂದ ಸರ್ವ ಕಷ್ಟವನ್ನು ಜಯಿಸಬಹುದು ಎನ್ನುವ ಲೋಕ ನೀತಿಯನ್ನು ಈ ಕಥೆಯ ಮೂಲಕ ಬಾಲಕರಿಗೆ ತಿಳಿ ಹೇಳುವುದು ಈ ಕವನದ ಉದ್ದೇಶವಾಗಿದೆ. ಒಬ್ಬ ಚಿಕ್ಕ ಹುಡುಗ, ಮೊಲವು ಅನಾಥ ಹುಡುಗಿ, ದೊರೆಯು ಮುದಿ ಸಿಪಾಯಿಯು, ರಾಜಪುತ್ರನು, ಸನ್ಯಾಸಿ ಮುಂತಾದ ಕಥನ ಗೀತೆಗಳನ್ನು ಮಿಶನರಿಗಳು ಬರೆದಿದ್ದಾರೆ. ಇಲ್ಲಿ ಅಭಿವ್ಯಕ್ತಿಯ ರೀತಿ ಮತ್ತು ಸಾರುವ ನೀತಿ ಮುಖ್ಯವೆನಿಸುತ್ತದೆ.

'ಧರ್ಮೋ ರಕ್ಷಿತಿ ರಕ್ಷಿತ' ಧರ್ಮವನ್ನು ರಕ್ಷಿಸಿದರೆ ಧರ್ಮವು ನಮ್ಮನ್ನು ರಕ್ಷಿಸುತ್ತದೆ. ಪ್ರತಿಯೊಂದು ಧರ್ಮವು ತನ್ನ ಏಳಿಗೆಯನ್ನು ಸಮಾಜದಲ್ಲಿ ಕಂಡುಕೊಳ್ಳುವುದು ಅದರ ಹಿಂಬಾಲಕರ ಸದ್ ಬಾಳ್ವೆಯಿಂದ, ಧರ್ಮಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿದ ಅನೇಕ ವ್ಯಕ್ತಿಗಳನ್ನು ನಾವು ಕಾಣುತ್ತೇವೆ. ಜೆ.ಮ್ಯಾಕ್ ತಮ್ಮ 'ರಕ್ತ ಸಾಕ್ಷಿಗಳು' ಎಂಬ ಗೀತೆಯಲ್ಲಿ. ಧರ್ಮರಕ್ಷಣೆಗಾಗಿ ತಮ್ಮ ಪ್ರಾಣವನ್ನು ಅರ್ಪಿಸಲೂ ಸಹ ಸಿದ್ಧರಿರಬೇಕು ಎಂದು ಕರೆ ನೀಡಿದ್ದಾರೆ.

ರಕ್ತ ಸಾಕ್ಷಿಗಳು: ಯೇಸು ಸ್ವಾಮಿಯು ಮರಣವನ್ನುನುಭವಿಸುವದರಿಂದ ಸಾಕ್ಷಿಕೊಟ್ಟನೆಂದು ಹೇಳಿರುವುದರಿಂದ (ಪ್ರಕ ೧:೫) ಸಾಕ್ಷಿಗಳೆಂಬ ಹೆಸರು ಆತನ ನಿಮಿತ್ತವಾಗಿ ಶ್ರಮಗಳನ್ನು ಅನುಭವಿಸುವ ಆತನ ಹಿಂಬಾಲಕರಿಗೂ ಕೊಡಲಾಗಿದೆ. (ಅ.ಕೃ. ೨೨:೨೦)

ಯೇಸುವು ತನ್ನ ಶಿಷ್ಯರಿಗೆ ಲೋಕವು ನಿಮ್ಮನ್ನು ಹಿಂಸೆ ಪಡಿಸುವುದೆಂದು ಮುಂತಿಳಿಸಿದ್ದಾನೆಷ್ಟೆ. (ಮತ್ತು ೫:೧೧) ಆತನ ಮಾತು ಆದಿಸಭೆಯ ಕಾಲದಲ್ಲಿಯೇ ನೆರವೇರಿತು. ಅಸಾಧಾರಣ ಕ್ರೂರತನವಾದ ಹಿಂಸೆಗಳು ಪ್ರಾಪ್ತವಾದ ಕಾಲಗಳೂ ಇದ್ದವು, ಆದರೆ, ಅವುಗಳು ಒಂದು ರೂಪದಲ್ಲಿ ಅಲ್ಲದಿದ್ದರೂ ಇನ್ನೊಂದು ರೂಪದಲ್ಲಿ ಯಾವಾಗಲೂ ಇದ್ದೇ ಇರುತ್ತದೆ.

ಮೊಟ್ಟಮೊದಲು ಹಿಂಸೆಯು ಯೆಹೂದ್ಯರ ಕಡೆಯಿಂದ ಬಂದಿತು. ಇದಕ್ಕೆ ಅಪೋಸ್ತೂಲರ ಕೃತ್ಯಗಳ ಗ್ರಂಥದಲ್ಲಿ ಅನೇಕ ದೃಷ್ಟಾಂತಗಳಿವೆ. ೧ ಥೆಸ ೨:೧೪, ಇಬ್ರಿ ೧೦:೩೪ ರಲ್ಲಿಯೂ ಇನ್ನೂ ಬೇರೆ ದೃಷ್ಟಾಂತಗಳಿರುತ್ತವೆ. ರೋಮ್ ಚಕ್ರಾಧಿಪತ್ಯದಲ್ಲಿ ಯೆಹೂದ್ಯ ಮತವು ಸನ್ನದನ್ನು ಪಡೆದ ಮತವಾಗಿದ್ದಿತು. ಮತ್ತು ರೋಮ್ ರಾಜ್ಯದವರು, ಕ್ರೈಸ್ತರನ್ನು ಯೆಹೂದ್ಯ ಮತದ ಒಂದು ಶಾಖೆಯವರೆಂದು ಭಾವಿಸಿದರು. ಶ್ರೀಪೌಲನು ಒಬ್ಬ ಮತಾಭಿಮಾನಿಯೆಂದು ಲೂಸ್ಯನು ಭಾವಿಸಿಕೊಂಡರೆಂದು ಭಾವಿಸಿದರು. ಶ್ರೀಪೌಲನು ಒಬ್ಬ ಮತಾಭಿಮಾನಿಯೆಂದು ಲೂದ್ಯನು ಭಾವಿಸಿಕೊಂಡಿದ್ದನು (ಅ.ಕೃ.೨೧:೩೮) ನೀರೋ ಚಕ್ರವರ್ತಿಯ

ಕಾಲದಲ್ಲಾದರೋ ಕ್ರೈಸ್ತರಾಗಿರುವುದೇ ಅಪರಾಧವೆಂದು ಎಣಿಸಲಾಗಿತ್ತು. ಕ್ರೈಸ್ತರು ಮಾನವ ಜಾತಿಯನ್ನೇ ಹಗೆ ಮಾಡುವವರೆಂದೂ ಅವರ ಕುಟುಂಬಗಳಲ್ಲಿಯೂ ಸಮಾಜಗಳಲ್ಲಿಯೂ ಬೇಧಗಳನ್ನು ಹುಟ್ಟಿಸುವವರೆಂದೂ ಅವರು ಕ್ರೈಸ್ತರನ್ನು ಪೂಜಿಸದೆ ಇದ್ದುದರಿಂದ ರಾಜ ದ್ರೋಹಿಗಳೆಂದೂ ಭಾವಿಸಲ್ಪಟ್ಟರು (ಪ್ರಕ ೧೩-೧೫). ಹೊಸಒಡಂಬಡಿಕೆಯ ಕಾಲದಲ್ಲಿ ರಾಜ ನೀತಿಯು ಬದಲಾಗುವುದನ್ನು ನಾವು ನೋಡುತ್ತೇವೆ. ಅಪೋಸ್ತೊಲರ ಕೃತ್ಯಗಳ ಗ್ರಂಥದಲ್ಲಿ ರೋಮ್ ರಾಜ್ಯದವರು ಕ್ರೈಸ್ತರನ್ನು ಹಿಂಸೆ ಪಡಿಸುವುದನ್ನು ನೋಡುತ್ತೇವೆ (ಅ.ಕೃ. ೨೫:೧೧), ತರುವಾಯ ಪ್ರಕಟಣೆಯ ಗ್ರಂಥದಲ್ಲಿಯಾದರೋ ರೋಮ್ ರಾಜ್ಯದವರು ದೇವ ಜನಗಳ ರಕ್ತವನ್ನು ಪಾನಮಾಡಿ ಮುಕ್ತರಾಗಿರುವುದನ್ನು ನೋಡುತ್ತೇವೆ (ಪ್ರಕಟಣೆ ೧೭.೬).

ಮೊದಲನೆಯ ಶತಮಾನದಲ್ಲಿ ರೋಮ್ ರಾಜ್ಯದವರ ಹಿಂದೆಯು ಮತ್ತಷ್ಟು ಕಠಿಣತರವಾಗಿದ್ದಿತು. ರೋಮ್ ರಾಜ್ಯದ ಚರಿತ್ರೆಕಾರನಾದ ಟಾಸಿಟಸ್ ಎಂಬುವನು ರಕ್ತಸಾಕ್ಷಿಗಳ ಒಂದು ದೊಡ್ಡ ಸಮೂಹವನ್ನು ಸೂಚಿಸುತ್ತಾರೆ. ಪ್ರ.ಕ.೧೩:೭, ೧ ಪೇತ್ರ ೫:೮-೯ ಈ ವಚನಗಳನ್ನು ನೋಡಿದರೆ ಇದೇ ಅಭಿಪ್ರಾಯವು ಬರುತ್ತದೆ. ಹಲವು ಮಂದಿಯನ್ನು ಕೊಂದು ಹಾಕಿದರು ಅಥವಾ ಮೃಗಗಳ ಚರ್ಮವನ್ನು ಹೊದಿಸಿ ಅವರನ್ನು ಕೊಲ್ಲುವಂತೆ ನಾಯಿಗಳನ್ನು ಅವರ ಮೇಲೆ ಬಿಡುತ್ತಿದ್ದರು. ಇನ್ನೂ ಅನೇಕರಿಗೆ ಕೀಲೆಣ್ಣೆಯ ಬಟ್ಟೆಯನ್ನು ಸುತ್ತಿ ಚಕ್ರವರ್ತಿಯ ಉದ್ಯಾನವನದಲ್ಲಿ ರಾತ್ರಿ ಕಾಲದಲ್ಲಿ ಪಂಜುಗಳಂತೆ ಉರಿಯುತ್ತಿದ್ದರು.

ಕ್ರಿ.ಶ. ೬೭ರಲ್ಲಿ ರೋಮ್ ಸಾಮ್ರಾಜ್ಯದ ರಾಜನಾಗಿದ್ದ ನೀರೋ ಕ್ರೈಸ್ತ ಭಕ್ತರ ಒಂದು ದೊಡ್ಡ ಸಮೂಹವನ್ನು ಹಿಂಸೆಗೊಳ್ಳಪಡಿಸಿದನು. ಇದೇ ಕಾಲದಲ್ಲಿ ಶ್ರೀ ಪೇತ್ರ ಪೌಲರು ರಕ್ತ ಸಾಕ್ಷಿಗಳಾದರು. ಕ್ರೈಸ್ತ ಪಂಚಾಂಗದಲ್ಲಿ ಜೂನ್ ೨೯ನೇಯ ತಾರೀಖಿನ್ನು ಇವರ ಜ್ಞಾಪಕಾರ್ಥವಾಗಿ ಆಚರಿಸುತ್ತಾ ಬರುತ್ತಿದೆ.

ಯಾವುದೇ ಧರ್ಮದ ಏಳಿಗೆಯು ಅದರ ಭಕ್ತಾಧಿಗಳ ಸನ್ನಡತೆ ಸನ್ನುಡಿಗಳಲ್ಲಿಯೇ ಇರುತ್ತದೆ. ಇದನ್ನೇ ಗೀತಗಾರ ಹೀಗೆನ್ನುತ್ತಾನೆ.

ನಾನು ಅಂಥ ಸ್ಥಿತಿಯಲ್ಲಿ
ಇರಬೇಕು ಕರ್ತನೆ,
ಆದ್ದರಿಂದ ಕಷ್ಟದಲ್ಲಿ
ಹೆಚ್ಚಿಸೆನ್ನ ನಂಬಿಕೆ!

ಹೊಸ ಜೀವವನ್ನೂ
ದೃಢ ಮನಸ್ಸನ್ನೂ
ಕೊಟ್ಟು ಸಾವಿಗೆದುರು
ಅಂಜದಿರು ಬೋಧಿಸು

ಬಾಲಕರ ಗೀತೆಗಳು, ಗೀತೆ-೯೦

ಸಭಾ ಪತ್ರದಲ್ಲಿ ಕ್ರೈಸ್ತರ ಬದುಕಿಗೆ ಸಂಬಂಧಿಸಿದಂತೆ ಗೀತೆಗಳು:

ಮಾನವರು ಯಾವ ಶಕ್ತಿಯಿಂದ ಕಷ್ಟಗಳನ್ನು ಸಹಿಸಿಕೊಂಡು ತಮ್ಮ ಸಾಮರ್ಥ್ಯವನ್ನು ವಿವೇಕದಿಂದ ಪ್ರಯೋಗಿಸುತ್ತಾರೋ ಅಂಥ ಶಕ್ತಿಯೇ ತಾಳ್ಮೆ, ಅದು ಆತುರ ಗುಣಕ್ಕೂ ಅಲಕ್ಷ್ಯಭಾವಕ್ಕೂ ಮಧ್ಯದಲ್ಲಿರುತ್ತದೆ.

ಇದು ಕ್ರೈಸ್ತರಲ್ಲರಬೇಕಾದ ಸುಗುಣ. ಯೇಸುವಿನ ಜೀವಮಾನದಲ್ಲೂ ಅದು ಅತ್ಯುತ್ತಮವಾಗಿ ಕಂಡು ಬರುತ್ತದೆ. ಈ ಆಶಯದತ್ತ ನಮ್ಮ ಗಮನ ಹರಿಸುವ ಗೀತೆಯೇ! 'ತಾಳ್ಮೆ'– ಸಭಾಪತ್ರ, ಜುಲೈ ೧೮೯೯.

ಆತ್ಮ ನಿವೇದನೆ: ಯೇಸುವಿಗೆ ತನ್ನ ಸರ್ವಸ್ವವನ್ನು ಕಾಣಿಕೆಯಾಗಿ ಅರ್ಪಿಸಿದ್ದೇನೆ ಎಂದು ಹೇಳಿಕೊಂಡಿರುವ ಗೀತೆಯೆ 'ನೀತಿ ಸೂರ್ಯ ಕ್ರೈಸ್ತನು' ಇದು Jesu, grosser wunderstern ಎಂಬ ರಾಗದಲ್ಲಿದೆ. ಯೇಸುವನ್ನು ನೀತಿ ಸೂರ್ಯನೆಂದು ಸಂಭೋದಿಸಿ ಆತನಿಗೆ ತನನ್ನೇ ಅರ್ಪಿಸಿಕೊಂಡಿದ್ದಾನೆ. ತನ್ನ ಅರ್ಪಣೆಯನ್ನು ವಿವಿಧ ಹೋಲಿಕೆಗಳ ಮೂಲಕ ವರ್ಣಿಸಿದ್ದಾನೆ.

ನಿನ್ನ ದಾನವಾದಂಥ	ಮತ್ತು ಅಂಗೀಕರಿಸು	ಕಡೆಯಲ್ಲಿ ತರುವೆ
ನಂಬಿಗೆಂಬ ಚಿನ್ನವನ್ನು	ಜಪವೆಂಬ ಧೂಪವನ್ನು!	ಪಶ್ಚಾತ್ತಾಪಗಂಧರಸ
ನನ್ನಿಂದಂಗೀಕರಿಸ	ನಿನಗನುದಿನವು	ಪಾಪ ನಂಗೆ ತೋರುತ್ತೆ
ಅನುಗ್ರಹಿಸೈ ನನ್ನನ್ನು	ನಾನು ಸುಡುಪಿ ಅದನ್ನು!	ಬರೆ ನಷ್ಟ, ಬರೆ ಕಸ
ಕ್ರೂಜೆಯೆಂಬ ಪುಟದಿ	ನಾನು ಮೊರೆ ಇಡ್ಲು	ನಿನಗೆನ್ನ ಕಾಣಿಕೆ
ಅದು ಚೊಕ್ಕವಾಗಲಿ	ಕಿವಿಗೊಟ್ಟು ಲಾಲಿಸು!	ಇಷ್ಟವೆಂದು ಕೋರುವೆ.

ಕನ್ನಡ ಗೀತೆಗಳು, ಗೀತೆ–೬೨

ಅಲಂಕಾರಿಕ ಮಾತುಗಳಾದ ಜಪವೆಂಬ ಧೂಪ, ಪಶ್ಚಾತ್ತಾಪವೆಂಬ ಗಂಧರಸ, ನಂಬಿಗೆಂಬ ಚಿನ್ನವನ್ನು ಈ ಹೋಲಿಕೆಗಳಿದ್ದರೂ ಗೀತೆಯು ತನ್ನ ಗೇಯತೆಯನ್ನು ಕಳೆದು ಕೊಂಡಿದೆ. ಗದ್ಯ ರೂಪದ ವಾಕ್ಯಗಳು ಕಂಡು ಬಂದಿವೆ. ಯೇಸುವಿಗೆ 'ನೀತಿ ಸೂರ್ಯ' ಎಂಬ ಬಿರುದನ್ನು ಕೊಟ್ಟಿರುವುದನ್ನು ಕಾಣುತ್ತೇವೆ.

ಸ್ತುತಿ: ತಂದೆ, ಮಗ ಮತ್ತು ಪವಿತ್ರಾತ್ಮರಿಗೆ ನಿರಂತರವೂ ಸ್ತೋತ್ರ ಸಲ್ಲಿಸಬೇಕು. ತನ್ನ ಜೀವ ಮಾನವಿಡೀ ಸ್ತೋತ್ರ ಗೀತೆಯನ್ನಾಲಭಿಸಬೇಕು. ತನ್ನ ಶಕ್ತಿ ಸಾಮರ್ಥ್ಯವನ್ನು ಆತನ ಮಹಿಮೆಯನ್ನು ಕೊಂಡಾಡಲು ಉಪಯೋಗಿಸಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾನೆ 'ಸಹಸ್ರ ನಾಲಗೆಯಲ್ಲಿ' ಎಂಬ ಗೀತೆಯಲ್ಲಿ. ೧೩ ಚರಣಗಳಿರುವ ಈ ಗೀತೆ ದೀರ್ಘವಾಗಿದ್ದು, ದೇವರ ಮಹತ್ಕಾರ್ಯಕ್ಕೆ ಸ್ತುತಿಯರ್ಪಿಸಲು ಪ್ರೇರೇಪಿಸುವ ಗೀತೆಯಾಗಿದೆ. ಇದು Dass ich tousend zungen hatte ಎಂಬ ಗೀತೆಯ ಭಾಷಾಂತರವಾಗಿದೆ.

ಸಹಜ ನಾಲಿಗೆನಗಿದ್ದು,	ನನ್ನಿಡಿ ಹೃತ್ತಿನಿಂದಲೆ
ಸಹಸ್ರ ಬಾಯ್ಗಳಿದ್ದರೆ	ದೈವಾನುಗ್ರಹ ಮಹಿಮೆ
ಕೃತಜ್ಞವಾಗಿ ಅಡ್ಡ ಬಿದ್ದು,	ಆದಷ್ಟು ಹಾಡುತ್ತಿರುವೆ.

ಕನ್ನಡ ಗೀತೆಗಳು, ಗೀತೆ–೩೧೮

ಚೈತನ್ಯಾರೋಪಣೆಗೆ ಉದಾಹರಣೆಯಾಗಿದೆ ಈ ಚರಣ

ವೃಕ್ಷಾದಿಯೇ ಅರಣ್ಯದಲ್ಲಿ
ಸರ್ವೇಶನಾಣ್ಮೆ ಹೊಗಳು!
ತೃಣಾದಿಯೇ, ತಗ್ಗಿನ್ನೆಯಲ್ಲಿ
ಯೆಹೋವನೊಲ್ಮೆ ತಿಳಿಸು!
ಸಮಸ್ತ ಚಂದ ಹೂಗಳೇ
ದೈವಾತಿಶಯ ಸಾರಿರೇ!

ಕವಿಯು ವೃಕ್ಷಾದಿಗಳನ್ನು, ತೃಣಾದಿಗಳನ್ನು, ಸಮಸ್ತ ಚಂದ ಹೂಗಳನ್ನು ಕರೆದು ಸರ್ವೇಶನಾಣ್ಮೆಯನ್ನು ಹೊಗಳಬೇಕೆಂದು ಪ್ರಚೋಧನೆ ಮಾಡುತ್ತಾನೆ.

ಬಾಲಕರ ಗೀತೆಯಲ್ಲಿ ಸ್ತುತಿಯ ಗೀತೆ: ಮಕ್ಕಳಲ್ಲಿ ಸ್ತುತಿಯ ಸ್ತೋತ್ರದ ಮನೋಭಾವವನ್ನು ಬೆಳೆಸಲು ರಚಿಸಿದ ಮ್ಯಾಕ್ ರವರ ಗೀತೆಯೇ 'ಸ್ತೋತ್ರದ ಗೀತ' ಅನೇಕ ವಿಧದಲ್ಲಿ ನಾವು ಆತನಿಗೆ ಸ್ತುತಿ ಸ್ತೋತ್ರ ಸಲ್ಲಿಸಬೇಕೆಂಬ ಆಶಯವನ್ನು ಇದು ಹೊಂದಿದೆ. ಇದು Lobt froh den Herrn ಎಂಬ ಗೀತೆಯ ಭಾಷಾಂತರವಾಗಿದೆ.

ಓ ಮಕ್ಕಳೇ
ನಿಮ್ಮೊಡೆಯಂಗೆ ಹಾಡಿ!
ಸರ್ವೇಶಗೆ
ಸಂಸ್ತುತಿಯನ್ನು ಮಾಡಿ
ಕೊಂಡಾಡಿರಾತನೊಲುಮೆ

ಬಾಲಕರ ಗೀತೆಗಳು, ಗೀತೆ–೮೧

ಮಿಶನರಿಗಳು ಮಕ್ಕಳಲ್ಲಿ ಆಧ್ಯಾತ್ಮ ಮೌಲ್ಯವನ್ನು ಬೆಳೆಸುವ ಗೀತೆಗಳನ್ನು ರಚಿಸಿರುವರು. ಸರಳ ಶೈಲಿಯ ಅರ್ಥವಾಗುವ ಭಾಷೆಯ ಪದಗಳ ಬಳಕೆ, ಮುಗ್ಧ ಭಾವನೆ ಹೊರಹೊಮ್ಮುವ ಗೀತೆಗೆ ಇದು ನಿದರ್ಶನವಾಗಿದೆ.

ಪ್ರಾರ್ಥನೆ: ಪಾರಮಾರ್ಥಿಕ ವಿಷಯಗಳ ಕುರಿತು ಚಿಂತಿಸಲು ತಮ್ಮನ್ನು ಯೋಗ್ಯರನ್ನಾಗಿ ಮಾಡಬೇಕೆಂದು ಬೇಡುವ ಬಗೆ 'ಜ್ಞಾನದಾತ್ಮ ' ಎಂಬ ಗೀತೆಯಲ್ಲಿ ವ್ಯಕ್ತವಾಗಿದೆ.

ಜ್ಞಾನದಾತ್ಮ ದೇವರನ್ನು
ಸರ್ವತ್ರ ಮೆಚ್ಚಿಸ
ಕೊಡು ಬೋಧೆಯನ್ನು!

ನಡಕೊಳ್ಳೋ ಶಕ್ತಿಯನ್ನು
ನಮಗು ಪಾಲಿಸು
ಮಾಡುದ್ಧಾರವನ್ನು!

ಕನ್ನಡ ಗೀತೆಗಳು, ಗೀತೆ–೭೭

ಮೂರು ಮೂರು ಪಾದಗಳ ಈ ಪದ್ಯವು ವಿದೇಶಿ ಛಂದಸ್ಸಿಗೆ ಸರಿ ಹೋಗುವಂತೆ ರಚನೆಯಾಗಿದೆಯಾದರೂ ಅಂತ್ಯ ಪ್ರಾಸ ಮೈಗೂಡಿಸಿಕೊಂಡಿದೆ.

"ಹಾಯಾಗಿ ಮಲಗಿ ನಿದ್ರಿಸುವೆನು. ಸುಖಿಯಾಗಿ ಮರಳಿ ಎದ್ದೇಳುವೆನು. ಕಾಯ್ದು ಕಾಪಾಡುವನು. ಪ್ರಭು ನನ್ನನ್ನು" ಎಂದು ಕೀರ್ತನಾಗಾರ ತನ್ನ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾನೆ. ಭಯಪಡದೆ ದೇವರಲ್ಲಿ ಅಚಲ ವಿಶ್ವಾಸವಿಟ್ಟು ಮುನ್ನಡೆಯಬೇಕು. ಹಗಲಿರುಳು ಆತನೇ ನಮ್ಮನ್ನು ಕಾದು ಪಾಲಿಸುವನು ಸಕಲ ಚರಾಚರಗಳನ್ನು ಆತನು ಪಾಲಿಸುವಾಗ ನಮ್ಮನ್ನು ಆತನು ಪಾಲಿಸುವವನಾಗಿದ್ದಾನೆ ಆತನಲ್ಲಿ ನನಗೆ ಸಂಪೂರ್ಣ ಭರವಸೆ ಇದೆ ಎಂದು ಗೀತಗಾರ 'ಸಂಜೆ ಘಂಟೆ' ಎಂಬ ಗೀತೆಯಲ್ಲಿ ವ್ಯಕ್ತಪಡಿಸಿದ್ದಾನೆ. ಈ ಗೀತೆ ಮುಗ್ಧಭಾವ, ಭಕ್ತಿರಸವನ್ನು ಹೊಂದಿದೆ.

ಮನುಷ್ಯ, ಮೃಗ, ಪಕ್ಷಿ
ಸುನಿದ್ರೆ ಮೊದಲು
ನಮ್ಮನ್ನು ದೇವರಕ್ಷಿ
ಚೆನ್ನಾಗಿ ಕಾಯುವುದು

ಬಾಲಕರ ಗೀತೆಗಳು, ಗೀತೆ– ೮, ಪುಟ.೬

ಹಬ್ಬಗಳು:– ಯೇಸುವಿನ ಭಾದಾನುಭವ: ಯೇಸುವಿನ ಯಾತನೆಯ ಸಮಯದಲ್ಲಿ ತಂದೆಯಾದ ದೇವರಲ್ಲಿ ಮಾಡಿದ ಪ್ರಾರ್ಥನೆ. ಆತನು ತನ್ನ ಕಷ್ಟದ ಸಂದರ್ಭದಲ್ಲಿ ನಡೆದುಕೊಂಡ ಬಗೆ ಗೀತಗಾರನ ಮನಸ್ಸನ್ನು ಆಕರ್ಷಿಸುವ ಚಿತ್ರಣ ವ್ಯಕ್ತವಾಗಿದೆ. 'ನೀ ಪ್ರಾರ್ಥಿಸಲ್ಕೆ ತೋಟದಲ್ಲಿ' ಎಂಬ ಗೀತೆಯಲ್ಲಿ ಇದು Der gehest in den garten beten ಎಂಬ ರಾಗದಲ್ಲದೆ.

ಯೇಸುವು ತನ್ನ ಯಾತನೆಯ ಗಳಿಗೆಯಲ್ಲಿ ತನ್ನ ಕಷ್ಟವನ್ನು ಸಂಪೂರ್ಣವಾಗಿ ಬಿಡಿಸು ಎಂದು ಪ್ರಾರ್ಥಿಸದೆ, ನಿನ್ನಿಷ್ಟ ತಂದೆ ಆಗಲೀ! ಎಂದು ಪ್ರಾರ್ಥಿಸಿರುವ ಬಗೆ ಇಲ್ಲಿ ವಿಶೇಷವಾಗಿದೆ. ಅಪ್ಪಳಿಸಿ ಬರುತ್ತಿದ್ದ ಯಾತನೆ, ಹಿಂಸೆಯನ್ನು ಯೇಸು ಸಹಿಸಿಕೊಂಡು ಶಿಲುಬೆಯಲ್ಲಿ ಮರಣ ಹೊಂದುವಷ್ಟು ವಿಧೇಯತೆ, ತಾಳ್ಮೆಯನ್ನು ಹೊಂದಿದ್ದರು ಎಂಬುದನ್ನು ಗಮನಿಸಿ ಗೀತಗಾರ ಯೇಸುವಿನಲ್ಲಿ ಹೀಗೆಂದು ಬೇಡಿಕೊಂಡಿದ್ದಾನೆ.

ಓ, ಯೇಸು ನೀನು ಬೇಡಿದಂತೆ	ನಾ ಬೇಡೆ, ತಂದೆ ಕೊಟ್ಟನು
ನಾ ಬೇಡಲಿಕ್ಕೆ ಬೋಧಿಸು	ಹೀಗಾಗಿ ಮೋಕ್ಷ ಪಡೆದು
ಯಥಾರ್ಥವಾಗಿ	ಅನಂತ ಸ್ತುತಿ ಗೈವೆನು

ಕನ್ನಡ ಗೀತೆಗಳು, ಗೀತೆ–೬೭

ಪ್ರಾರ್ಥನಾ ಗೀತೆಗೆ ಉತ್ತಮ ನಿದರ್ಶನವಾಗಿ ಕಂಡು ಬಂದಿದೆ ಈ ಗೀತೆ. ಯೇಸುವಿನ ನಡತೆಯಿಂದ ಪ್ರೇರಿತನಾದ ಗೀತಗಾರ ವಿನಮ್ರನಾಗಿ ನನ್ನನ್ನು ನಿನ್ನಂತೆ ಮಾಡು ಎಂದು ಬೇಡಿದ್ದಾನೆ.

ಬಾಲಕರ ಗೀತೆಯಲ್ಲಿ ಹಬ್ಬಕ್ಕೆ ಸಂಬಂಧಿಸಿದ ಗೀತೆಗಳು: ಕ್ರಿಸ್ತನ ಜನನವು ಹೇಗೆ ಬಾಲಕರಿಗೆ ಸಂತೋಷವನ್ನು ತಂದಿದೆ ಅವರು ನಲಿದಾಡಲು ದೊರೆತ ಕಾರಣವನ್ನು ಗೀತಗಾರ 'ಕ್ರಿಸ್ತನ ಜನ್ಮ' ಎಂಬ ಗೀತೆಯಲ್ಲಿ ಕಾಣುತ್ತೇವೆ.

೧. ಪರಲೋಕದಲ್ಲಿ
ದೂತ ಸೇನೆಯಲ್ಲಿ
ಸೇವೆ ಪಡೆದಾತ
ಬಂದನೆಂಥ ನಾಥ!

೨. ದೇವರನ್ನೆನ್ನನ್ನು
ಐಕ್ಯಮಾಡೋದನ್ನು
ಜೈಸಿ ದಾಸನಾಗಿ
ಬಂದನೆಮಗಾಗಿ

೩. ಆದ್ದರಿಂದ ಘನ
ಕೊಂಡಿರೆಲ್ಲ ಜನ
ಎಲ್ಲ ಕೆರುಭೀಮು
ಎಲ್ಲ ಸೆರಫೀಮು!

೪. ನೀನೂ ನನ್ನ ಪ್ರಾಣ
ಸ್ತುತಿ ಸ್ತೋತ್ರ ಮಾನ
ಮಾಡು ಭೂಮಿಯಲ್ಲಿ
ಪರಲೋಕದಲ್ಲು!

ಬಾಲಕರ ಗೀತೆಗಳು, ಗೀತೆ–೧೦೨

ಕೆರುಭೀಯಂ ಸೆರೆಫೀಮು – ದೇವದೂತರು

ಕೆರುಭೀಮು–ರೆಕ್ಕೆಗಳುಳ್ಳ ಈ ಜೀವಿಗಳು ಪ್ರಜ್ವಲಿಸುವ ಖಡ್ಗಗಳನ್ನು ಹಿರಿದುಕೊಂಡು, 'ಏದೆನ್' ತೋಟವನ್ನು ಕಾಯುತ್ತಿದ್ದವು (ಆದಿ ೩:೨೪). ಸರ್ವೇಶ್ವರ ಸ್ವಾಮಿಯ ಎಡಬಲಗಳಲ್ಲಿ ಇವು ಇರುತ್ತಿದ್ದವು (ವಿಮೋ ೨೫:೧೦–೨೨).

ಜೆ. ಮ್ಯಾಕ್ 'ದೂತರ ಸಂಗೀತ' ಎಂಬ ಗೀತೆಯಲ್ಲಿ ಕ್ರಿಸ್ತನ ಜನನದ ಸಂದರ್ಭದಲ್ಲಿ ಸ್ವರ್ಗ ಗಣಗಳು ಆನಂದದಿಂದ ಮನುಜ ಕುಲಕ್ಕೆ ನೀಡಿದ ಶಾಂತಿ ಸಂದೇಶವನ್ನು ತಿಳಿಸಿದ್ದಾರೆ. ಇದು ಲೂಕನು ಬರೆದ ಸುಸಂದೇಶದ ೨:೧೪ ನ್ನು ಆಧರಿಸಿ ರಚಿತವಾಗಿದೆ.

ಮಹೋನ್ನತವಾದವುಗಳಲ್ಲಿ
ದೇವರಿಗೆ ಮಹತ್ವವು
ಮಹತ್ವ ದೇವರಿಗೆ
ದೇವರಿಗೆ ಮಹತ್ವವು.
ಭೂಮಿಯ ಮೇಲೆ ಸಮಾಧಾನವು
ಭೂಮಿಯ ಮೇಲೆ ಸಮಾಧಾನವು

ಸಮಾಧಾನವು

ಮನುಷ್ಯರಲ್ಲಿ ದಯವು

ಮನುಷ್ಯರಲ್ಲಿ ದಯವು

ಮನುಷ್ಯರಲ್ಲಿ ದಯವು

ಬಾಲಕರ ಗೀತೆಗಳು, ಗೀತೆ-೧೦೭

ಜಗದ್ ರಕ್ಷಕ ಯೇಸುವಿನ ಜನನ ನಡೆದದ್ದು ಗೋದಲಿಯಲ್ಲಿ. ಗೋದಲಿಯಲ್ಲಿ ಜನಿಸುವುದೆಂದರೆ ಬಡತನದ ತುತ್ತ ತುದಿಯನ್ನು ಮುಟ್ಟಿದ ಅವಸ್ಥೆಯನ್ನು ಇದು ಸೂಚಿಸುತ್ತದೆ. ಇಂದು ಕ್ರಿಸ್ತ ಭಕ್ತಾದಿಗಳು ಕ್ರಿಸ್ತನ ಜನನದ ಸ್ಮರಣೆಯನ್ನು ಆಚರಿಸುವ (ಡಿಸೆಂಬರ್ ೨೫) ದಿನದಂದು ಗೋದಲಿಯನ್ನು ಮಾಡಿ ಅದರಲ್ಲಿ ಬಾಲ ಯೇಸುವಿನ ಮೂರ್ತಿಯನ್ನು ಕ್ರಿಸ್ತನ ಹುಟ್ಟುಹಬ್ಬದ ಸಂತೋಷವನ್ನು ಹಂಚಿಕೊಳ್ಳುತ್ತಾರೆ. 'ಗೋದಲಿಯ ಹತ್ರ' ಗೀತೆಯಲ್ಲಿ ದೀನನಾಗಿ ಗೋದಲಿಯಲ್ಲಿ ಜನಿಸಿದ ಯೇಸುವನ್ನು 'ಘನರಾಜ' 'ಸೈನ್ಯಗಳ ಕರ್ತ' 'ಸದ್ಗುಣ ಶೀಲ' 'ನಿತ್ಯ ದೇವಪುತ್ರ' 'ಪ್ರಧಾನ ಕರ್ತ' 'ಸತ್ಯಾವತಾರಿ' 'ನಿತ್ಯ ದೇವ ವಾಕ್ಯ' ಎಂದು ರೂಪಕವನ್ನು ಬಳಸಿದ್ದಾರೆ. ಇಂತಹ ಪರಮ ಪೂಜ್ಯ ದೇವರನ್ನು ಕೊಂಡಾಡಲು ಕರೆ ನೀಡಿರುವುದನ್ನು ಈ ಗೀತೆಯಲ್ಲಿ ಕಾಣಬಹುದು.

ನಮ್ಮೊಂದಿಗೆ ಹಾಡಿ

ಎಲ್ಲ ಕಾಲದಲ್ಲಿ

ಸಮಸ್ತ ಭಾಗ್ಯವಂತರೇ!

ಭೂ ಪರಲೋಕ

ಆತನನ್ನು ಸ್ತುತಿಸು!

ಪ್ರಧಾನ ಕರ್ತನನ್ನು

ಆರಾಧಿಸುವ!

ಬಾಲಕರ ಗೀತೆಗಳು, ಗೀತೆ-೧೦೮

'ಪ್ರತ್ಯಕ್ಷತೆಯ ಹಬ್ಬ'[೧೦೦] ಎಂಬ ಗೀತೆಯಲ್ಲಿ ಜೆ. ಮ್ಯಾಕ್ ಬಳಸಿರುವ ಉಪಮಾಲಂಕಾರಗಳು ಸುಂದರವಾಗಿ ಮೂಡಿ ಬಂದಿವೆ. 'ನಂಬಿಕೆಯೆಂಬ ಚಿನ್ನ' 'ಪ್ರಾರ್ಥನೆಯ ಧೂಪವನ್ನು' 'ಖೇದವೆಂಬ ಗಂಧರಸ' ಎಂದು ವರ್ಣಿಸಿದ್ದಾನೆ.

ಮನುಷ್ಯನ ಬದುಕಿನಲ್ಲಿ ಇರಲೇಬೇಕಾದದ ಗುಣಗಳತ್ತ ಈ ಅಲಂಕಾರ ಪದಗಳು ನಮ್ಮ ಗಮನ ಸೆಳೆಯುತ್ತವೆ. ನಂಬಿಕೆಯನ್ನು ಚಿನ್ನಕ್ಕೆ ಹೋಲಿಸುವುದರ ಮೂಲಕ ಅದು ಬಹು ಬೆಲೆಯುಳ್ಳ ಗುಣವಾಗಿದೆ. ದೇವರಲ್ಲಿ ನಮ್ಮ ನಂಬಿಕೆಯು ನೆಲೆಯೂರ ಬೇಕಾಗಿದೆ ಎಂದು ಹೇಳಿದ್ದಾರೆ.

ನಮ್ಮ ಪ್ರತಿ ನಿತ್ಯದ ಪ್ರಾರ್ಥನೆಗಳು, ಭಿನ್ನಹಗಳು, ದೇವರ ಸನ್ನಿಧಿಗೆ ಏರಲ್ಪಡಬೇಕು. ಅದು, ಧೂಪವು ಹೇಗೆ ಮೇಲ್ಕೇರುತ್ತೆದೆಯೋ ಅಂತೆಯೇ ನಮ್ಮ ಭಿನ್ನಹಗಳು, ಸ್ತುತಿಗಳು ಪರಮಾತ್ಮನ ಪಾದ ಪೀಠವನ್ನು ಸೇರಬೇಕು. ಸದಾ ಪ್ರಾರ್ಥನಾ ಬದುಕನ್ನು ನಡೆಸಬೇಕು ಎಂದು ಹೇಳಿದ್ದಾರೆ.

ಯೇಸುವನ್ನು ನೀತಿ ಸೂರ್ಯನೆಂದು ರೂಪಕವಾಗಿ ಗೀತಗಾರ ಇಲ್ಲಿ ಬಳಸಿದ್ದಾನೆ. ಜಗತ್ತಿಗೆ ನೀತಿಯನ್ನು ಬೆಳಗಿಸಿದ ಪ್ರಭು ಎಂದು ಆತನನ್ನು ತಾನು ವಂದಿಸುವುದಾಗಿ ಹೇಳಿದ್ದಾನೆ.

ಯೇಸುವಿನ ಶ್ರಮೆ, ಮರಣವನ್ನು ಆಳವಾಗಿ ಚಿಂತಿಸಿ, ಧ್ಯಾನಿಸುವ ಕಾಲವೇ ತಪಸ್ಸುಕಾಲ. ಈ ಕಾಲದ ಅಂತ್ಯದಲ್ಲಿ ಅಂದರೆ ಪುರುತ್ಥಾನದ ಹಬ್ಬದ ಮೊದಲು ನಾವು ಆ ಒಂದು ವಾರವನ್ನು ಶುಭವಾರವೆಂದು ಕರೆಯುತ್ತೇವೆ. ೪೦ ದಿನಗಳ ಉಪವಾಸ, ಪ್ರಾರ್ಥನೆ, ಧ್ಯಾನದಲ್ಲಿ ನಿರತನಾಗಿದ್ದ ಕ್ರೈಸ್ತ ಬಾಂಧವರು ಈ ಶುಭವಾರವನ್ನು ಭಯಭಕ್ತಿಯಿಂದ ಪವಿತ್ರತೆಯಿಂದ ಆಚರಿಸುವರು. ಈ ದಿನಗಳಲ್ಲಿ ಕ್ರೂಜೆಯ ಮುಂದೆ ನಿಂತು ಹಾಡುವ ಈ ಗೀತೆ ಕ್ರಿಸ್ತನ ಶಿಲುಬೆಯ ಮಹತ್ವವನ್ನು ತೋರಿಸುತ್ತದೆ. ರೂಪಕಗಳಿಂದ ಕೂಡಿದ 'ಪರಿಶುದ್ಧ ಕ್ರೂಜೆ' ಎಂಬ ಗೀತೆಯು ಶಿಲುಬೆಯ ಹಿರಿಮೆ ಗರಿಮೆಯನ್ನು ಎತ್ತಿ ಹಿಡಿದಿದೆ.

ಶಿಲುಬೆ ತಕ್ಕ ಏಣಿಯೆ ಆಗಿದೆ ಎನ್ನುವಲ್ಲಿ ನೋವಿನಿಂದ, ಕಷ್ಟದಿಂದ, ಶ್ರಮದಿಂದ ಯಾವುದೇ ಯಶಸ್ಸು, ಶಾಂತಿ, ತೃಪ್ತಿ ದೊರೆಯುವುದು. ಇವು ಯಶಸ್ಸಿನ ಹಾದಿಯಲ್ಲಿ ಸಾಗಲು ಇರುವ ಮೆಟ್ಟಿಲುಗಳಾಗಿವೆ.

ಶಿಲುಬೆ ಭದ್ರ ಸೇತುವೆಯಾಗಿದೆ. ಮನುಷ್ಯ ಬದುಕು ಪ್ರತಿ ನಿತ್ಯವೂ ಸೇತುವೆಯಂತೆ ಕಾರ್ಯನಿರ್ವಹಿಸಬೇಕು. ಶತೃತ್ವದಿಂದ ಮಿತ್ರತ್ವಕ್ಕೆ ಸಾಗುವ, ಸೋಲಿನಿಂದ ಗೆಲುವಿನಡೆ ಸಾಗುವ, ಕಷ್ಟದಿಂದ ಸುಖದೆಡೆಗೆ ಸಾಗುವ, ಅಜ್ಞಾನದಿಂದ ಜ್ಞಾನದೆಡೆಗೆ ಸಾಗುವ ಸೇತುವೆಯಂತೆ ಕಾರ್ಯನಿರ್ವಹಿಸುತ್ತದೆ ಈ ಪವಿತ್ರ ಶಿಲುಬೆ.

ಶಿಲುಬೆ ಜಯದ ಕೇತನ. ಬಾವುಟವು ಗೆಲುವನ್ನು ಸೂಚಿಸುವ ಸಂಕೇತ. ಕಲ್ಲು ಮುಳ್ಳುಗಳ ದಾರಿಯಲ್ಲಿ ಬಹುದೂರ ಸಂಚರಿಸಿ ವಿಶ್ರಾಂತಿ ಸ್ಥಳವನ್ನು ಕಂಡು ಹರ್ಷಗೊಳ್ಳುವಂತೆ ಶಿಲುಬೆಯು ಇಕ್ಕಟ್ಟಾದ ದಾರಿಯಲ್ಲಿ ನಡೆದರೂ ನಂತರ ಬದುಕಿನಲ್ಲಿ ವಿಜಯವಿದೆಯೆಂದು ಸಾರುತ್ತದೆ.

ಶಿಲುಬೆ ಕೀಲಿಕೈಯಾಗಿದೆ. ಮೋಕ್ಷದ ದ್ವಾರವನ್ನು ತೆಗೆಯಲು ಇರುವ ಮಾರ್ಗವೇ ಶಿಲುಬೆ ಎಂದು ಗೀತಗಾರ ಹೇಳುತ್ತಾನೆ. ಇಹಲೋಕದ ಸುಖ ಲೋಲುಪತೆಯಲ್ಲಿ ಸಾಗಿ ಸ್ವರ್ಗವನ್ನು ಪ್ರವೇಶಿಸಲು ಸಾಧ್ಯವಿಲ್ಲ. ಬದಲಾಗಿ ಕಷ್ಟ ಕಾರ್ಪಣ್ಯದ ಬದುಕಿನ ಅನರ್ಥಗಳೇ ಸ್ವರ್ಗವನ್ನು ಪ್ರವೇಶಿಸಲು ಇರುವ ಕೀಲಿಕೈ ಎಂದಿದ್ದಾನೆ ಗೀತಗಾರ.

ಶಿಲುಬೆಯು ಯಾತ್ರಾ ದಂಡವಾಗಿದೆ. ದೇವರಲ್ಲಿ ಆಳವಾಗಿ ಬೇರೂರಿ ಮುನ್ನಡೆದಾಗ ಬದುಕಿನಲ್ಲಿ ಎಡವಿ ಬೀಳಲು ಸಾಧ್ಯವಿಲ್ಲ. 'ಕಾರ್ಗತ್ತಲ ಕಣಿವೆಯಲ್ಲಿ ನಾ ನಡೆದಾಗಲು ಅಂಜೆನು ಕೇದಿಗೆ' ನಿನ್ನ

ಕುರಿಗೋಲು, ಊರುಗೋಲು, ಧೈರ್ಯವನ್ನು ತರುವುದೆನಗೆ ಕಾಣೆನೆಂದಿಗೂ ನಾ ದಿಗಿಲನು ನೀನಿರಲು ನನ್ನೊಂದಿಗೆ[೧೦೧] ಎಂದಿದ್ದಾನೆ ಕೀರ್ತನಾಗಾರ. ಶಿಲುಬೆ ಮಾರ್ಗವಾಗಿ ಕಾರ್ಯ ನಿರ್ವಹಿಸುತ್ತದೆ.

ಶಿಲುಬೆ ಪುಷ್ಪ ಶಯ್ಯಯಾಗಿದೆ. ಶಿಲುಬೆ ಮತ್ತು ಪುಷ್ಪ ಶಯ್ಯೆ ವಿರೋದಾಭಾಸವಾಗಿ ಬಳಕೆಯಾಗಿದೆ. 'ಜೀವನ ಪುಷ್ಪದ ಹಾಸಿಗೆಯಲ್ಲಿ' ಎಂಬ ಮಾತಿದೆ ಅನುಗುಣವಾಗಿ ಈ ಮಾತು ಬಳಕೆಯಾಗಿದೆ. ಶಿಲುಬೆ ಪುಷ್ಪದ ಹಾಸಿಗೆಯಾಗಲು ಸಾಧ್ಯವಿಲ್ಲ. ಆದರೆ ಗೀತಗಾರನಿಗೆ ಇದು ವಿಜಯದ ಸಂಕೇತವಾಗಿ ಕಂಡು ಬಂದದ್ದರಿಂದ ಶಿಲುಬೆ ಪುಷ್ಪದ ಶಯ್ಯೆಯಾಗಿದೆ ಎಂದು ಭಾವಿಸಿದ್ದಾನೆ ಗೀತಗಾರ.

ಪಶ್ಚಾತ್ತಾಪದ ದಿನ: "ದುಂದುಗಾರನ ಮಗನ ಸಾಮ್ಯ"[೧೦೨] ವನ್ನು ನೆನಪಿಸುವ ಗೀತೆಯೇ 'ಎದ್ದೋಗುವೆ' ಎಂಬ ಗೀತೆ. ಬದುಕಿನ ಯಾವುದೋ ಹಂತದಲ್ಲಿ ಯಾವುದೋ ಘಟನೆ, ವ್ಯಕ್ತಿ, ವಸ್ತು, ವಿಷಯಗಳ ಮೂಲಕ ಮನುಷ್ಯ ಪಶ್ಚಾತ್ತಾಪಕ್ಕೆ ತೊಡಗುತ್ತಾನೆ. ಬಾಳಿನಲ್ಲಿ ಹೊಸ ಮಾರ್ಗವನ್ನು ಹಿಡಿದು ಸಂಚರಿಸಲು ಪ್ರೇರಿತನಾಗುತ್ತಾನೆ. ಇಂತಹ ಚಿಂತನೆಯನ್ನು ಮೂಡಿಸುವ ಗೀತೆ ಇದಾಗಿದೆ. ವರ್ಣಿಸಿರುವ ರೀತಿ ಸರಳವಾಗಿದ್ದು ದ್ವಿರುಕ್ತಿ ಪದಗಳ ಬಳಕೆ ಇಲ್ಲಿದೆ.

ಎದ್ದೋಗುವೆ! ಎದ್ದೋಗುವೆ
ನನ್ನಪ್ಪನ ಕಡೆಗೆ ಆತಗಿಂತು ಹೇಳುವೆ
ಅಪ್ಪ ಅಪ್ಪ ಪರಲೋಕಕೆದುರಾಗಿ ನಿನ್ನ ಮುಂದೆ
ನಾನು ಪಾಪವನ್ನು ಗೈದೆ ನಿನ್ನನು ಮಗನೆನ್ನಿಸಿ
ಕೊಳ್ಳನು! ಎದ್ದೋಗುವೆ ಎದ್ದೋಗುವೆ
ನನ್ನಪ್ಪನ ಕಡೆಗೆ ಈ ಹೊತ್ತೆ!

ಬಾಲಕರ ಗೀತೆಗಳು, ಗೀತೆ-೧೨೧

ಪ್ರಕೃತಿ:- ಬಾಲಕರ ಗೀತೆಯಲ್ಲಿ ಕಂಡು ಬರುವ ಗೀತೆಗಳು: ಪ್ರಕೃತಿ ವರ್ಣನೆ ಸಾಹಿತ್ಯದ ಒಂದು ಪ್ರಧಾನ ಭಾಗ. ಕವಿಯ ಅನುಭವಕ್ಕೆ ಪ್ರಕೃತಿಯ ವೈವಿಧ್ಯ ಬಹಳ ದೊಡ್ಡ ಸಾಮಗ್ರಿಯಾಗಿ ಪರಿಣಮಿಸಿದೆ. ಪ್ರಕೃತಿ ನಮಗೆ ನೀಡುವ ಬೋಧನೆ ಧರ್ಮ ಗುರುವಿನ ಬೋಧನೆಗಿಂತಲೂ ಮೇಲು ಎಂದು ಕಂಡುಕೊಂಡು ಬಾಲಕರಿಗಾಗಿ ಪ್ರಕೃತಿ ಗೀತೆಗಳನ್ನು ಮಿಶನರಿಗಳು ಬರೆದರು.

ಪ್ರಕೃತಿಯಲ್ಲಿ ನಾವು ಕಾಣುವ ಸೋಜಿಗಗಳನ್ನು ತಮ್ಮ ಗೀತೆಯಲ್ಲಿ ಹಿಡಿದಿಟ್ಟು ಮಕ್ಕಳ ಮನಕ್ಕೆ ಮುಟ್ಟಿಸಲು ಮಾಡಿದ ಪ್ರಯತ್ನವನ್ನು 'ಪ್ರಕೃತಿಯ ಜೀವ' ಎಂಬ ಗೀತೆಯಲ್ಲಿ ನೋಡುತ್ತೇವೆ.

ಹಳ್ಳ ಹೊರೆವ ನೊರೆ
ಸುರ್ಸುರೆನ್ನುವ ಮೊರೆ
ಗಾಳಿ ಶಬ್ದಗಳು
ಪಾರಿವಾಳದ ಸ್ವರ

ಚೆಂದ ನವಿಲ ತರ
ಎಷ್ಟು ಸೋಜಿಗವೆಲ್ಲವು!

ಬಾಲಕರ ಗೀತೆಗಳು, ಗೀತೆ–೩೦

ಹಳ್ಳದಲ್ಲಿ ಹರಿಯುವ ನೀರಿನ ನೊರೆ, ಆ ಹರಿಯುವ ನೀರಿನ ಶಬ್ದ, ಗಾಳಿಯ ಆರ್ಭಟ, ಪಾರಿವಾಳದ ಇಂಚರ ಕಣ್ಮನ ಸೆಳೆಯುವ ನವಿಲು ಈ ಸೊಗಸುಗಳು ಸರ್ವರ ಹೃನ್ಮನಗಳನ್ನು ಸೆಳೆಯುತ್ತವೆ. ಅಂತೆಯೇ ಬಾಲಕನನ್ನು ಸೆಳೆಯುವಲ್ಲಿ ಸಂಶಯವಿಲ್ಲ. ಎಲ್ಲ ಚರಾಚರಗಳು ದೇವರ ಕೊಡುಗೆಯಾಗಿದೆ. ಇವು ನಮಗೆ ಉಲ್ಲಾಸವನ್ನು ನೀಡುವುದಾಗಿದೆ ಎಂದು ಹೇಳಿದ್ದಾನೆ ಗೀತಗಾರ.

ಪ್ರಕೃತಿಯ ಸಕಲ ಸೃಷ್ಟಿ ಜಾಲಗಳು ದೇವರ ಇಷ್ಟದಂತೆ ಚಲಿಸಿ, ಅವನ ಕೃಪೆಗೆ ಪಾತ್ರವಾಗುವುದೆಂಬುದನ್ನು 'ದೇವರು ಬಲ್ಲನು' ಎಂಬ ಗೀತೆಯಲ್ಲಿ ವರ್ಣಿತವಾಗಿದೆ.

ಕಬ್ಬಕ್ಕಿ ಸ್ತುತಿ ಮಾಡುತ್ತೆ
ಸರ್ವೇಶ;
ಅದನ್ನು ಕೇಳಿ ಮೆಚ್ಚನೇ?
ಮೆಚ್ಚಿರುವ
ನೀರೊಳಗೀಸೋ ಮೀನವು
ಮಾತಾಡದು;

ಇನ್ನದರಾಸೆ ದೇವರು
ಬಲ್ಲಾತನು
ನಿನ್ನೆಲ್ಲ ನುಡಿ ನಡೆಯು
ಅರಿಯುವೇ?
ನಿನ್ನಂತರಂಗ ಬಲ್ಲನು
ಮಾತಿಲ್ಲದೆ

ಬಾಲಕರ ಗೀತೆಗಳು, ಗೀತೆ–೨೩

ಕೃತಜ್ಞತೆಯು ಪ್ರಾಮುಖ್ಯವಾದ ಗುಣಗಳಲ್ಲೊಂದು. ಮಾನವನು ಹಿಂದಿನ ಕಾಲದಲ್ಲಿ ತನಗೆ ಲಭ್ಯವಾದ ಶುಭಗಳನ್ನು ಸ್ಮರಿಸಿಕೊಳ್ಳುವಾಗ ಅವನ ಮನಸ್ಸು ದೇವರ ಕಡೆಗೆ ತಿರುಗುತ್ತದೆಂಬುದು ಇದರಿಂದ ವ್ಯಕ್ತವಾಗುತ್ತದೆ (ಇಬ್ರಿ ೩:೧೫) ಸುಂದರ ಪ್ರಕೃತಿಯನ್ನು ಅದರಲ್ಲಿರುವ ಎಲ್ಲವನ್ನು ಸೃಷ್ಟಿಸಿ ಮಾನವನ ಸುಖಕ್ಕಾಗಿ ಉಚಿತವಾಗಿ ನೀಡಿದ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುವ ಗೀತೆಯೆ 'ಭೂಮಿಯ ರಮ್ಯತೆ'.

ಅರಣ್ಯ, ಹೊಲ, ಗದ್ದೆಯು
ಬೈಲ್, ತಗ್ಗು, ಪರ್ವತ
ವಿಚಿತ್ರ ಪಕ್ಷಿ ರಾಗವು
ಅಷ್ಟೆಮಗೋಸ್ಕರ
ಹೊತ್ತಾರೆ ಟಿವ್ವೆ ಹಾಡುತೆ
ಸಂಜೇಲಿ ಇಷ್ವ ಕೋಗಿಲೆ

ಈ ಭೂಮಿ ಸೂರ್ಯೋದಯಕೆ
ಕೆಂಪಾಗುತ್ತಿರಲು
ಹೂ, ಹಣ್ಣು, ಪೈರು ಹೆಚ್ಚಿಗೆ
ಈ ನಾಡು ಕೊಡಲು
ಹೇಳ–ಅಷ್ಟು ನಮಗೋಸ್ಕರ
ಸರ್ವೇಶನುಂಟು ಮಾಡಿದ!

ಬಾಲಕರ ಗೀತೆಗಳು, ಗೀತೆ–೧೯

ಗೀತಗಾರ ಪ್ರಕೃತಿಯ ವಿಸ್ಮಯ ಭರಿತ ಸೂರ್ಯೋದಯ ಕಣ್ಮನ ತಣಿಸುವ ಸುಂದರ ಗಿಡ ಮರ ಬಳ್ಳಿ ಪರ್ವತ ಇತ್ಯಾದಿಗಳನ್ನು ಕಂಡು ಅದರಲ್ಲಿ ತನ್ನನ್ನೇ ಮರೆತು ಅದರ ಸೃಷ್ಟಿಗೆ ಕಾರಣ ಕರ್ತನಾದ ದೇವರನ್ನು ಸ್ತುತಿಸುವ ಬಗೆ ರಮಣೀಯವಾಗಿದೆ.

ಜೆ. ಮ್ಯಾಕ್‌ರ ಗೀತೆಗಳ ವೈಶಿಷ್ಟ್ಯತೆಗಳು: ಜೆ. ಮ್ಯಾಕ್‌ರ ಗೀತೆಗಳು ಹೆಚ್ಚಿನವು ಭಾಷಾಂತರ ಗೀತೆಗಳಾಗಿವೆ. ಕ್ರಿಸ್ತನ ಜನನ, ಮರಣ, ಬೋಧನೆಗೆ ಸಂಬಂಧಿಸಿದ ಗೀತೆಗಳೇ ಹೆಚ್ಚು.

ಇವರ ಗೀತೆಗಳು ಬಾಸೆಲ್ ಗೀತ ಪುಸ್ತಕದಲ್ಲಿ ಮಾತ್ರವಲ್ಲದೆ ಶೈಕ್ಷಣಿಕ ಕ್ಷೇತ್ರದಲ್ಲಿ ಬಳಸುತ್ತಿದ್ದ ಬಾಲಕರ ಗೀತೆಗಳಲ್ಲಿ ಹಾಗೂ ಸಮಾಜದ ಎಲ್ಲ ವರ್ಗಗಳ ಜನರಿಗೂ ಉಪಯೋಗವಾಗುವಂತೆ ಪ್ರಕಟವಾಗುತ್ತಿದ್ದ ಪತ್ರಿಕೆಗಳಲ್ಲು ಕಂಡು ಬರುತ್ತಿರುವುದು ವಿಶೇಷಾಂಶವಾಗಿದೆ.

ಪವಿತ್ರ ಗ್ರಂಥವನ್ನು ಓದಬೇಕು ಆ ಗ್ರಂಥದಲ್ಲಿ ಯೇಸುವಿನ ವ್ಯಕ್ತಿತ್ವದ ವರ್ಣನೆ ಇದೆ ಆತನು ಪರರಿಗಾಗಿ ಮಾಡಿದ ತ್ಯಾಗ, ಆತನ ಉಪದೇಶ, ನಡೆ ನುಡಿಗಳ ವಿಚಾರವಿದೆ ಎಂಬುದನ್ನು 'ಯೇಸುವಿನ ನಡೆ' (ಗೀತೆ ೭೪) ಗೀತೆಯಲ್ಲಿ ಕೆಲವೆ ಸಾಲುಗಳಲ್ಲಿ ಯೇಸುವಿನ ಪೂರ್ಣ ಚಿತ್ರಣ ನೀಡುವ ಪ್ರಯತ್ನ ಸಫಲವಾಗಿದೆ.

ಕಥನ ಶೈಲಿಯು ಜೆ. ಮ್ಯಾಕ್‌ರ ಗೀತೆಯಲ್ಲಿ ಕಂಡುಬರುತ್ತದೆ. ಸಭಾ ಪತ್ರದಲ್ಲಿ ಪ್ರಕಟವಾದ 'ಗೋಲಿಯಾತನು' ಎಂಬ ಗೀತೆ ಕಥನ ಶೈಲಿಯನ್ನು ಒಳಗೊಂಡಿದ್ದು ಹಾಗೂ ನೀತಿಯನ್ನು ಬೋಧಿಸುತ್ತದೆ. ಅಬಾಲ ವೃದ್ಧರ ಮನಸ್ಸನ್ನು ಸೆಳೆಯುವ ಕಥನರೂಪ ವಿಶಿಷ್ಟ ಬಗೆಯದಾಗಿದೆ.

ಗೀತೆ ಕಥನ ಶೈಲಿಯನ್ನು ಹೊಂದಿದ್ದರೂ ನೀತಿ ಬೋದೆ ಅತಿಯಾದಂತೆ ಕಂಡು ಬರದ ಗೀತೆಗೆ ಉದಾಹರಣೆಯಾಗಿದೆ 'ಭಕ್ತಿಯುಳ್ಳ ಗೃಹಸ್ಥನ ಕಥೆ' ಎಂಬ ಗೀತೆ. ಕಥೆಗಾರಿಕೆಯು ನೇರವಾದ ಓಟ, ಕುತೂಹಲವನ್ನು ಕೆರಳಿಸಿ ಮನಸ್ಸನ್ನು ಬೆದಕಿ ಕರುಣೆಯನ್ನು ಕೆದಕುವಂತಹ ಸನ್ನಿವೇಶಗಳು ನೀತಿಬೋಧನೆಯನ್ನು ಕಡಿಮೆ ಮಾಡಿದಂತಿದೆ.

ಮಾನವೀಯ ಗುಣಗಳನ್ನು ಪ್ರಕೃತಿಯ ಹೂಗಳಿಗೆ ಹೋಲಿಸಿ ವರ್ಣಿಸಿರುವ ಬಗೆ 'ಲೋಕ ಮೈಮೆ ಪಡಿಸೊ' ಎಂಬ ಗೀತೆಯಲ್ಲಿ ವ್ಯಕ್ತವಾಗಿದೆ. ಇದು ಅತನ ಕಲ್ಪನಾ ಶಕ್ತಿಗೆ ನಿದರ್ಶನವಾಗಿದೆ.

ಯೇಸುವಿನ ನಡೆ, ನುಡಿಗಳಿಂದ ಪ್ರಭಾವಿತನಾದ ಗೀತಗಾರ ತನ್ನನ್ನು ಯೇಸುವಿನಂತೆ ಮಾರ್ಪಡಿಸಲು ಬೇಡುವ ಬಗೆ ವ್ಯಕ್ತವಾಗಿದೆ 'ನೀ ಪ್ರಾರ್ಥಿಸಲ್ಕೆ ತೋಟದಲ್ಲಿ' ಎಂಬ ಗೀತೆಯಲ್ಲಿ.

ಪೃಕೃತಿ ನಮಗೆ ನೀಡುವ ಬೋಧನೆ ಮಿಗಿಲಾದದ್ದು ಎಂದು ಅರಿತ ಜೆ.ಮ್ಯಾಕ್ ಪ್ರಕೃತಿಯನ್ನು ಕುರಿತ ಗೀತೆಗಳನ್ನು ರಚಿಸಿರುವುದು ವಿಶಿಷ್ಟ ಅಂಶವಾಗಿದೆ. ಪ್ರಕೃತಿಯಲ್ಲಿ ತಾನು ಕಂಡ ಸೋಜಿಗಗಳನ್ನು ತಮ್ಮ ಗೀತೆಯಲ್ಲಿ ಹಿಡಿದಿಟ್ಟು ಮಕ್ಕಳ ಮನಕ್ಕೆ ಮುಟ್ಟಿಸಲು ಮಾಡಿದ ಪ್ರಯತ್ನಗಳನ್ನು ಬಾಲಕರ ಗೀತೆಗಳಲ್ಲಿ ಕಾಣುತ್ತೇವೆ.

ಜೆ. ಮ್ಯಾಕ್ ಗೀತೆಯಲ್ಲಿ ಚೈತನಾರೋಪಣೆ (Personification) ಯನ್ನು ಬಳಸಿರುವ ಬಗೆ ವಿಶಿಷ್ಟವಾಗಿದೆ. ಪ್ರಕೃತಿಯ ವೃಕ್ಷ, ತೃಣ, ಸಮಸ್ತ ಚಂದ ಹೂಗಳೂ ದೇವರಿಗೆ ಕೃತಜ್ಞತೆ ಸಲ್ಲಿಸಿರೆಂದು ಭಾವಪೂರ್ಣವಾಗಿ ವರ್ಣಿಸಿದ್ದಾರೆ.

೫.೩.೮ ಕಿಟಲ್. ಎಫ್ – Kittel. F

ಜರ್ಮನ್ ಮಿಶನರಿಗಳಲ್ಲಿ ಅದ್ವಿತೀಯ ಮಿಶನರಿಯಾಗಿ ಕಂಗೊಳಿಸುವ ಅಪರೂಪದ ವ್ಯಕ್ತಿತ್ವವನ್ನು ಪಡೆದ ಮಿಶನರಿಯೆ ಫರ್ಡಿನಾಂಡ್ ಕಿಟಲ್‌ರವರು. ಸರ್ವನಿಷ್ಠೆ ಹಾಗೂ ಆಳವಾದ ಭಾಷಾ ಶಕ್ತಿ ಇವರನ್ನು ಮೇಧಾವಿಸ್ಥಾನಕ್ಕೆ ಕೊಂಡೊಯ್ದ ಅಂಶಗಳಾಗಿವೆ. ಅವರ ಅನನ್ವಿತ ವ್ಯಕ್ತಿತ್ವದ ಜೀವನ ಹಾಗೂ ಮೌಲಿಕ ಕಾರ್ಯ ಸಾಧನೆ ಎಂದೆಂದೂ ಶ್ಲಾಘನೆಗೆ ಯೋಗ್ಯವಾಗಿದೆ.

ಮಹಾನ್ ಚೇತನ ಕಿಟಲ್‌ರವರು ಮಿಶನರಿಗಳ ತವರೂರಾದ ಜರ್ಮನಿಯಲ್ಲಿ ಜನಿಸಿದರು. ಇಲ್ಲಿನ ರೆಸ್ಟರ್ ಹಾಫ್ ಎಂಬಲ್ಲಿ ದಿನಾಂಕ ೭ ಏಪ್ರಿಲ್ ೧೮೩೨ ರಂದು ತಂದೆ ಗಾಟ್ ಫ್ರೀ ಕಿಟಲ್, ತಾಯಿ ಹೆಲೆನ್ ಎಂಬ ಆದರ್ಶ ದಂಪತಿಗಳಿಗೆ ಜನಿಸಿದರು. ಇವರ ಬಾಲ್ಯ ಶಿಕ್ಷಣ ಹುಟ್ಟೂರಿನಲ್ಲೂ ಹಾಗೂ ನೆರೆಯ ಊರಾದ ಜೌರಿಕ್‌ನಲ್ಲಿ ನಡೆಯಿತು. ಶಾಲಾ ಜೀವನದಲ್ಲಿ ಕೆಲವು ವಿಶೇಷ ಸ್ವಭಾವಗಳು ವ್ಯಕ್ತವಾದವು. ಆತ ಶಾಂತ ಸ್ವಭಾವದ, ತುಸು ಸಂಕೋಚ ಪ್ರವೃತ್ತಿಯವರೂ ಆಗಿದ್ದು ಮಿತಭಾಷಿ, ವ್ಯರ್ಥವಾದ ಮಾತಿಗೆ ತೊಡಗುತ್ತಿರಲಿಲ್ಲ. ಐಷಾರಾಮ ಬದುಕು ಇವರಿಗೆ ಸೇರದಾಗಿತ್ತು. ಬಾಲ್ಯದಲ್ಲಿಯೇ ಕುಶಾಗ್ರ ಬುದ್ಧಿಯವರಾಗಿದ್ದ ಇವರು ಹೀಬ್ರೂ, ಗ್ರೀಕ್, ಲ್ಯಾಟಿನ್ ಭಾಷೆಗಳಲ್ಲಿ ಬಲು ಬೇಗ ಪ್ರವೀಣರಾದರು. ಬೈಬಲ್ ಪಠಣ ಮಾಡುವುದು ಕ್ರೈಸ್ತನ ಜೀವನವನ್ನು ಮೆಲುಕು ಹಾಕುವುದು ಅವರ ಮನಸ್ಸಿಗೆ ನೆಮ್ಮದಿಯನ್ನು ಕೊಡುವಂಥದ್ದಾಗಿತ್ತು. ಅವರ ತಂದೆ ಧರ್ಮೋಪದೇಶಕರಾಗಿದ್ದು ಕಿಟಲ್‌ರ ಮೇಲೆ ಪ್ರಭಾವ ಬೀರಿದರು. ಅಂತೆಯೇ ಮಿಶನರಿಯಾಗಬೇಕೆಂದು ಬಯಸಿದರು. ತಮ್ಮ ಬಯಕೆಯನ್ನು ಹೀಗೆ ವ್ಯಕ್ತಪಡಿಸಿದರು "I attempt achieving satisfaction by my own strength, where otherwise shall I seek refuse than in Christ? Last year, we studied the sets of Apostes, I felt so much pity with those who served dead idols that I want to see them served in Christ. I am not conscious of any other motives but the Love of Christ."[೧೦೩]

ಕಿಟಲ್ ತಮ್ಮ ಮಹದಾಸೆಯ ಈಡೇರಿಕೆಗಾಗಿ ೧೮೫೩ರ ಕೊನೆಯಲ್ಲಿ ಕನ್ನಡ ನಾಡಿಗೆ ಬಂದರು. ರೆ. ವೈಗಲರವರು ರೆ. ಗುಂಡರ್ಟರವರಿಗೆ ತಿಳಿಸಿದಂತೆ ಕೇವಲ ೩ ತಿಂಗಳಲ್ಲಿ ಕನ್ನಡವನ್ನು ಕಲಿತರು.[೧೦೪] ಮತ ಪ್ರಚಾರವನ್ನೇ ಧ್ಯೇಯವಾಗಿಟ್ಟುಕೊಂಡ ಇವರು ಧಾರವಾಡ, ಹುಬ್ಬಳ್ಳಿ ಮಂಗಳೂರು, ಮಡಿಕೇರಿ ಮುಂತಾದ ಊರುಗಳಲ್ಲಿ ಮತ ಪ್ರಸಾರ ಕಾರ್ಯ ಕೈಗೊಂಡರು. ಕಿಟಲ್‌ರು ತಮ್ಮ ಸೇವಾ ಕಾರ್ಯದಲ್ಲಿ ರಚಿಸಿದ ಗ್ರಂಥ ರಚನೆಯನ್ನು ಶ್ರೀನಿವಾಸ ಹಾವನೂರರು ಕೆಳಕಂಡಂತೆ ಗುರುತಿಸಿದ್ದಾರೆ. ಈ ಗ್ರಂಥ ರಚನೆ ಕಿಟಲ್‌ರವರ ಬಹುಮುಖ ಪ್ರತಿಭೆಯನ್ನು ವ್ಯಕಪಡಿಸುತ್ತದೆ.

೧. ಶಾಲಾ ಪಠ್ಯಗಳು ೨. ಪತ್ರಿಕೋದ್ಯಮ ೩. ಕವನ ಕೋಶ ೪. ಹಳಗನ್ನಡ ಕಾವ್ಯ ಸಂಕಲನ ಮತ್ತು ಸಂಪಾದನೆ ೫. ಸಾಹಿತ್ಯಕ ಬಿಡಿ ಲೇಖನಗಳು. ೬. ಕೊಡಗು ಶಾಸನಗಳು: ಆದಿವಾಸಿ ಸಂಸ್ಕೃತಿ ೭. ಹಿಂದೂ ಧರ್ಮ ವಿವೇಚನೆ. ೮. ಕ್ರೈಸ್ತ ಮತೀಯ ಬರಹಗಳು. ೯. ದ್ರಾವಿಡ – ಸಂಸ್ಕೃತ ಸಂಪರ್ಕ. ೧೦. Kannada – English Dictionary. ೧೧. A Grammar of the Kannada Language.

ಕಿಟಲ್ ಕನ್ನಡ ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನೇ ತೊಡಗಿಸಿಕೊಂಡು ಅಪೂರ್ವ ಕೊಡುಗೆಯನ್ನು ನೀಡಿ ಇಂದೂ ಅಜರಾಮರರಾಗಿದ್ದಾರೆ. ಕನ್ನಡಕ್ಕೆ ಇವರ ಅಳಿಲು ಸೇವೆ ಸ್ತುತ್ಯರ್ಹ. ಕಿಟಲ್‌ರ ಶ್ರೇಷ್ಟ ವ್ಯಕ್ತಿತ್ವವನ್ನು ಅನೇಕ ವಿದ್ವಾಂಸರು ಚರ್ಚಿಸಿ ವಿಮರ್ಷಿಸಿದ್ದಾರೆ. ಅವರುಗಳಲ್ಲಿ ಪ್ರಮುಖರೆಂದರೆ ಡಾ. ಶ್ರೀನಿವಾಸ ಹಾವನೂರ. ಡಾ. ಕೆ.ಎಂ. ಮ್ಯಾಥ್ಯು, ಡಾ. ಗೀತಾನಂದಿಹಾಳ ಮುಂತಾದವರು. ಕಿಟಲ್‌ರ ಸಾಧನೆಯನ್ನು ಗುರುತಿಸಿ ಡಿ. ಎಲ್. ಎನ್ ರವರು ಹೇಳಿದ ಮಾತು ಸ್ಮರಣಯೋಗ್ಯ. "ಕನ್ನಡದ ಋಷಿಗಳಲ್ಲಿ ಕಿಟಲ್‌ರೂ ಒಬ್ಬರು. ಜರ್ಮನಿಯಲ್ಲಿ ಹುಟ್ಟಿದ ಅವರು ಕನ್ನಡಿಗರಾಗಿ ಮೆರೆದರು. ಅವರನ್ನು ಸ್ಮರಿಸಿಕೊಳ್ಳುವುದು ಪವಿತ್ರ ವಸ್ತುವೊಂದನ್ನು ಧ್ಯಾನಿಸಿದಂತೆ ಪುಣ್ಯಕರವಾದದ್ದು. ಇವರು ತಮ್ಮ ಜೀವಿತಕಾಲದ ಕೊನೆಯವರೆಗೂ ತಮ್ಮನ್ನು ಸಾಹಿತ್ಯ ಕಾರ್ಯದಲ್ಲಿ ತೊಡಗಿಸಿಕೊಂಡರು. ತಮ್ಮ ಅಂತ್ಯ ದಿನಗಳಲ್ಲಿ ಮಾಡಿದ ಕೃತಿಯಾದ A Grammar of the Kannada Language ಎಂಬುದು ೧೯೦೩ರಂದು ಪ್ರಕಟವಾಗಿ ಅವರ ಕೈ ಸೇರಿದಾಗ ಸಂತೋಷಪಟ್ಟರು. ಮರುದಿನ ೧೯.೧೨.೧೯೦೩ರಂದು ಸಂಜೆ ವಾಯುವಿಹಾರಕ್ಕೆ ಹೋಗಿ ಬಂದ ನಂತರ ತಮ್ಮ ೭೦ನೇಯ ವಯಸ್ಸಿನಲ್ಲಿ ಕ್ರಿಸ್ತವಾಸಿಗಳಾದರು.

ಗೀತೆಗಳ ಅಧ್ಯಯನ: ಬಾಸೆಲ್ ಗೀತ ಪುಸ್ತಕದಲ್ಲಿ ಕಿಟಲ್‌ರ ಎರಡು ಗೀತೆಗಳಿದ್ದು ಅವು ಜರ್ಮನ್ ಭಾಷಾಂತರ ಗೀತೆಗಳಾಗಿವೆ. ಬಾಲಕರ ಗೀತೆಗಳಲ್ಲಿ ೧೨ ಗೀತೆಗಳು ಕಂಡುಬರುತ್ತವೆ. ಕಥಾಮಾಲೆಯು ಇವರ ಕಾವ್ಯ ಪ್ರತಿಭೆಗೆ ನಿದರ್ಶನವಾಗಿದ್ದು ಕ್ರೈಸ್ತನ ಜನನ, ಬೋಧನೆ, ಯಾತನೆ, ಮರಣ, ಪುನರುತ್ಥಾನದವರೆಗಿನ ಘಟನೆಯನ್ನು ಕಾವ್ಯ ರೂಪದಲ್ಲಿ ರಚಿಸಿದ್ದಾರೆ. ವಿಚಿತ್ರ ವರ್ತಮಾನ ಸಂಗ್ರಹ ಎಂಬ ಪತ್ರಿಕೆಯಲ್ಲಿಯೂ ಗೀತೆಗಳು ಪ್ರಕಟವಾಗಿವೆ.

ಕ್ರಿಸ್ತರ ವ್ಯಕ್ತಿತ್ವ:– ಕಥಾಮಾಲೆಯಲ್ಲಿನ ಗೀತೆಗಳು: ಯೇಸುವಿನ ವ್ಯಕ್ತಿತ್ವದಲ್ಲಿ ನಾವು ಕಾಣುವ ಪ್ರಮುಖ ಅಂಶವೆಂದರೆ ಸಾಮಿತಿಯ ರೂಪದಲ್ಲಿ ಬೋಧಿಸುವುದು. ಇದರ ಅರ್ಥಗ್ರಹಿಕೆ ಸುಲಭವಾಗಿದ್ದು ಸಮಾಜದ ಯಾವುದೇ ವೃತ್ತಿಯು ಅರ್ಥೈಸಲು ಸುಲಭವಾಗಿದೆ. ಯೇಸುವು ದೇವರ ರಾಜ್ಯವು ಹೇಗಿರುವುದು ಎಂಬುದನ್ನು ಸಾಮಿತಿಯ ಮೂಲಕ ವರ್ಣಿಸಿರುವ ರೀತಿ ಕಥಾಮಾಲೆಯಲ್ಲಿ ಪ್ರಕಟವಾಗಿದೆ. ಮತ್ತಾಯನ ಶುಭ ಸಂದೇಶದ ೨೫ನೇ ಅಧ್ಯಾಯ ೧–೧೦ ವಾಕ್ಯವನ್ನು ಆಧರಿಸಿ ಈ ಗೀತೆ ರಚಿತವಾಗಿದೆ. ೩೧

ಪದ್ಯಗಳನ್ನು ಒಳಗೊಂಡ ಈ ಗೀತೆ ದೀರ್ಘವಾಗಿದ್ದು ಜನಪ್ರಿಯವಾದ ಪೂರ್ವಿ ರಾಗದಲ್ಲಿ ರಚಿತವಾಗಿವೆ. ಕಥಾ ಶೈಲಿಯನ್ನು ಹೊಂದಿದ ಈ ಗೀತೆ ನೀತಿ ಬೋಧಕವಾಗಿವೆ.

ಯೇಸುವು ದೇವರ ರಾಜ್ಯವನ್ನು ಕಠಿಣವಾದ ಪದಗಳಿಂದಾಗಲಿ, ನಿರೂಪಣೆಗಳಿಂದಾಗಲಿ ವಿವರಿಸಲಿಲ್ಲ. ಆಚಾರ–ವಿಚಾರಗಳಲ್ಲಿ, ಸಂಪ್ರದಾಯಿಕ ನಾಣ್ಣುಡಿಗಳಲ್ಲಿ ಜಾನಪದ ಸಾಮತಿಗಳಲ್ಲಿ, ಸೃಷ್ಟಿಯ ವಸ್ತುಗಳಲ್ಲಿ, ಸರಳವಾಗಿ ವಿವರಿಸಿದರು. ಅಂತೆಯೇ ಈ ಗೀತೆಯಲ್ಲಿ ಯೆಹೂದ್ಯ ಸಂಸ್ಕೃತಿಯಲ್ಲಿ ಬಹು ಮುಖ್ಯ ಸ್ಥಾನ ಪಡೆದಿದ್ದ, ಮದುವೆ ಸಂಭ್ರಮದ ಮೂಲಕ ದೇವರ ರಾಜ್ಯಕ್ಕೆ ತಕ್ಕುದಾದ ಸಿದ್ಧತೆಯನ್ನು ಮಾಡಬೇಕೆಂದು ಯೇಸು ಕಲಿಸುವ ರೀತಿ ವ್ಯಕ್ತವಾಗಿದೆ.

ಯೆಹೂದ್ಯ ಸಂಸ್ಕೃತಿಯಲ್ಲಿ ಮದುವೆ ಸಂಭ್ರಮ ವಿಶೇಷತೆಯನ್ನು ಪಡೆದಿತ್ತು. ವಧು ಮತ್ತು ವರ ಇಬ್ಬರು ಸಹ ಕೆಲವು ಧಾರ್ಮಿಕ ನಿಯಮಗಳಿಂದ ಪರಾವನೆಗೊಳ್ಳುತ್ತಿದ್ದರು ಅಥವಾ ಸ್ವತಂತ್ರ್ಯಗೊಳ್ಳುತ್ತಿದ್ದರು. ಮದುವೆ ಔತಣದಲ್ಲಿ ಪಾಲುಗೊಳ್ಳುವುದರಿಂದ ಕೆಲವು ದಿನಗಳವರೆಗೆ ದೈವ ಶಾಸ್ತ್ರದ ಅಧ್ಯಯನವನ್ನು ಮುಂದೂಡಲು ವಿದ್ಯಾಂಸರಿಗೆ ಸ್ವಾತಂತ್ರವಿತ್ತು. ಈ ಮದುವೆ ಔತಣದಲ್ಲಿ ಭಾಗವಹಿಸಲು ನೆರೆಹೊರೆಯ ಅವಿವಾಹಿತ ಕನ್ನಿಕೆಯರೆಲ್ಲಾ ನೆರೆಯುತ್ತಿದ್ದರು. ಈ ಕನ್ಯೆಯರು ಯೇಸುವನ್ನು ಎದುರುನೋಡುತ್ತಿದ್ದ ಶಿಷ್ಯರನ್ನು ಪ್ರತಿನಿಧಿಸುತ್ತಾರೆ (೨ ಕೋರಿಂಥ ೧೧:೨). ಮಧ್ಯಯುಗದ ಯೆಹೂದ್ಯ ವಿಮರ್ಶಕನೊಬ್ಬ, 'ದೀಪಾರತಿಗಳ' ಬಗ್ಗೆ ವಿವರಿಸ್ತಾನೆ. ಈತನ ಪ್ರಕಾರ ಹತ್ತು ದೀಪಾರತಿಗಳನ್ನು ಮದುವೆಯ ಸಂದರ್ಭದಲ್ಲಿ ಕೊಂಡೊಯ್ಯಲಾಗುತ್ತಿತ್ತು.

ಈ ಹತ್ತು ಕನ್ನಿಕೆಯಲ್ಲಿ ಎರಡು ಮಂದಿ ಎಣ್ಣೆಯ ದೀಪವನ್ನು ತಂದು ಸಂಪೂರ್ಣವಾಗಿ ತಯಾರಿಯಾಗಿ ಬಂದಿದ್ದರು. ಆದರೆ ಇನ್ನು ಐದುಮಂದಿ ದೀಪವಿದ್ದು ಅದಕ್ಕೆ ಎಣ್ಣೆಯಿಲ್ಲದೆ ಬಂವರಾಗಿದ್ದರು. ವಿದೇಶಿ ಕನ್ಯೆಯರ ಸಲಹೆಯಂತೆ ಅವಿವೇಕಿ ಕನ್ಯೆಯರು ಎಣ್ಣೆಯನ್ನು ತರಲು ಹೋದಾಗ ವರನು ಆಗಮಿಸಿದನು. ವಿವೇಕಿ ಕನ್ಯೆಯರು ಆತನನ್ನು ಎದುರುಗೊಂಡು ಆತನ ಸಂತೋಷದಲ್ಲಿ ಪಾಲ್ಗೊಂಡರು. ತಯಾರಿಕೆಯಲ್ಲಿ ಉದಾಸೀನತೆಯನ್ನು ತೋರಿದ ಕನ್ಯೆಯರು ವರನ ಸಂತೋಷದಲ್ಲಿ ಪಾಲುಗಾರರಾಗಲು ಸಾಧ್ಯವಾಗಲಿಲ್ಲ.

ನಾವು ಯಾವ ರೀತಿ ಸಜ್ಜಾಗಬೇಕೆಂದು ಸಾಮಿತಿಯ ಮೂಲಕ ಯೇಸು ತಿಳಿಸುತ್ತಾರೆ. ಭಕ್ತರು ದೇವರ ಆಗಮನವನ್ನು ಎದುರು ನೋಡುವ ಸಮಯದಲ್ಲಿ ಉದಾಸೀನತೆಯನ್ನು ತೋರಿಸಬಾರದು. ಕೊನೆಯ ಗಳಿಗೆಯಲ್ಲಿ ಅಥವಾ ಕ್ಷಣದಲ್ಲಿ ನಾವು ಸನ್ನದ್ಧರಾಗುವುದನ್ನು ದೇವರು ಪ್ರೋತ್ಸಾಹಿಸುವುದಿಲ್ಲ. ದಿನನಿತ್ಯವು ದೇವರ ಆಗಮನಕ್ಕಾಗಿ ಕಾಯುತ್ತಿರಬೇಕು. ನಿಷ್ಠಾವಂತರು ಮಾತ್ರ ದೇವರೊಡನೆ ಭಜಿಸಲು ಆಹ್ವಾನವನ್ನು ಪಡೆಯುತ್ತಾರೆ. ಆದರೆ ದೇವರ ಆಗಮನದತ್ತ ನಿರ್ಲಕ್ಷ್ಯ ತೋರಿಸಿದವರನ್ನು ದೇವರ ಸಮ್ಮುಖದಿಂದ ಹೊರ ದೂಡಲಾಗುವುದು ಎಂಬ ಭಾವ ಇಲ್ಲಿದೆ.

ಈ ಕಾವ್ಯದ ಕೊನೆಯ ಭಾಗದಲ್ಲಿ ಕಿಟಲರು

ಹೃದಯವೆಂಬ ದೀಪದಲ್ಲಿ
ಸದಮಲಾತ್ಮವೆಂಬುದೆಣ್ಣೆ ॥
ಹದುಳದಿಂದ ತುಂಬಿಕೊಂಡು
ಹದನವರಿತು ಹೊರಡಿರಿಂದ

ಕಥಾಮಾಲೆ, ೧೮೬೨, ಪುಟ–೮೦

ಎಂದು ಸಂದೇಶ ನೀಡುತ್ತಾರೆ. ಕಿಟಲ್‌ರವರು ಒಬ್ಬ ಬೋಧಕ (ಪಾದ್ರಿ) ನಾಗಿದ್ದು ಜನರನ್ನು ಸನ್ಮಾರ್ಗಕ್ಕೆ ನಡೆಸಬೇಕೆಂಬ ಉದ್ದೇಶವನ್ನು ಹೊಂದಿದ್ದರು ಎಂಬುದು ಇದರಿಂದ ತಿಳಿಯುತ್ತದೆ. ಕಿಟಲ್‌ರ ಇಂತಹ ಸಂದೇಶಗಳು ಹಲವು ಅಧ್ಯಾಯಗಳ ಕೊನೆಯಲ್ಲಿ ಕಾವ್ಯ ರೂಪದಲ್ಲಿ ನೀಡಿರುವುದು ವಿಶೇಷವಾಗಿದೆ.

ಯೇಸುವು ದಯಾಭರಿತರಾಗಿದ್ದರು ಎಂಬುದನ್ನು ವ್ಯಕ್ತಪಡಿಸುವ ಘಟನೆಯೊಂದನ್ನು ಕಿಟಲ್ ಕಥಾಮಾಲೆಯಲ್ಲಿ 'ಇಬ್ಬರು ಕುರುಡರು' ಎಂಬ ಗೀತೆಯಲ್ಲಿ ವರ್ಣಿಸಿದ್ದಾರೆ. ಮಾರ್ಕನ ಶುಭಸಂದೇಶದ ೧೦ನೇ ಅಧ್ಯಾಯದ ೪೬ ರಿಂದ ೫೧ರ ವರೆಗಿನ ವಾಕ್ಯಗಳನ್ನು ಆಧರಿಸಿ ಈ ಗೀತೆ ರಚಿಸಲಾಗಿದೆ. ಯೇಸುವಿನ ಕರುಣೆ ಕುರುಡನಿಗೆ ದೃಷ್ಟಿ ಪ್ರಧಾನ ಮಾಡುವಂತೆ ಮಾಡಿರುವ ಬಗೆ ಅದ್ಭುತವಾಗಿ ವರ್ಣಿಸಲಾಗಿದೆ.

ಒಡನೆ ದಾವೀದ್ ಸುತನೆ ಬಲು ದಯೆ
ಯೊಡೆಯ, ನಮಗೆಲೆ ಕರುಣಿಸೆನ್ನುತ
ಲಿಡುತ ಬಾಬ್ಬೆಯನವರು ಕೂಗಲು – ಬಂದ ಮೊಗ್ಗರವೂ ॥
ಬಿಡಿಯ ಬೇಡಿರಿ ಮರುಳುಗದ್ದಲ
ಬಿಡಿರಿ ಬಿಡಿರೆಂದವರ ಮೊರೆಯನು
ತಡಿಸಲವರ್ಕೈ ದಯೆಯ ಮಾಡೆಂದ್ದೆಚ್ಚು ಕೂಗಿದರೂ ॥
ನಿಂತು ಕಾಳ್ಳುತಲೇಸು ಕರುಣೆಯ
ಲಿಂತು ಕೂಗುವ ದೇತಕಾ ಕಡೆ
ಕುಂತ ನಿಮಗಾನೇನು ಮಾಡಲಿಕುಂಟು? ಹೇಳಿ ಕಾಳೀ! ॥
ಎಂತ ಬೆಸಗಾಳಲವರು–ನೀ ನಮ್–
ಹಂತಿಗಾದಗಿದ್ದಕ್ಕೆ ಕರುಣಾ
ವಂತ ನೀನ್ಯೆ ನಮ್ಮ ಕಣ್ಗಳ ತೆರೆಯ ಬೇಡಿದೆವೂ ॥

ಕಥಾಮಾಲೆ, ಪುಟ–೬೬

ದ್ವಿತೀಯಾ ಪ್ರಾಸವನ್ನು ಕಾಯ್ದುಕೊಂಡ ಈ ಗೀತೆ ಭಾಮಿನಿ ಷಟ್ಪದಿಯಲ್ಲಿ ಬರೆದ ಆದ್ಯ ಕ್ರೈಸ್ತರ ಪ್ರಾರಂಭದ ದೇಶೀ ಶಿಲ್ಪದ ರಚನೆಗೆ ನಿದರ್ಶನವೆನಿಸಿದೆ. ಈ ದಿಸೆಯ ದೊಡ್ಡ ಮತ್ತು ಪ್ರೌಢ ಪ್ರಯೋಗವೆಂದರೆ ಕಿಟಲರ ಸ್ವತಂತ್ರ ಕೃತಿಯಾದ 'ಕಥಾಮಾಲೆ' ಸಾಮಾನ್ಯವಾಗಿ ಮಿಶನರಿಗಳು ಗೀತೆಗಳನ್ನು ಅನುವಾದ ಮಾಡಿದ್ದನ್ನು ಕಾಣುತ್ತೇವೆ. ಆದರೆ ಕಿಟಲರು ಕನ್ನಡ ಕಾವ್ಯಗಳನ್ನು ಕರಗತ ಮಾಡಿಕೊಂಡರು. ಕಾವ್ಯ ಲಕ್ಷಣಗಳನ್ನು ಅಭ್ಯಸಿಸಿ ತಿಳಿದುಕೊಂಡು ಭಾಮಿನಿ ಹಾಗು ವಾರ್ಧಕ ಷಟ್ಪದಿಗಳನ್ನು ತಮ್ಮ ಕಾವ್ಯದಲ್ಲಿ ಸಮರ್ಪಕವಾಗಿ ಬಳಸಿಕೊಂಡಿದ್ದಾರೆ. ಕಿಟಲರು ಭಾಮಿನಿ ಷಟ್ಪದಿಯನ್ನು ಪ್ರಧಾನವಾಗಿ ಬಳಸಿದ್ದಾರೆ.

ಯೇಸು ಶಿಷ್ಯರೊಂದಿಗೆ ಪ್ರಯಾಣ ಮಾಡುವಾಗ ಮೊರೆಯುವ ಸಮುದ್ರಕ್ಕೆ ಅಪ್ಪಣೆ ಕೊಡಲು ಅದು ಶಾಂತವಾದ ವಿವರ ಮಾರ್ಕನ ಶುಭಸಂದೇಶ ೪ನೇ ಅಧ್ಯಾಯ ೩೫ ರಿಂದ ೪೧ ರವರೆಗೆ ಕಾಣುತ್ತೇವೆ. ಇದನ್ನೇ ಆಧಾರವಾಗಿಟ್ಟುಕೊಂಡು ಕಿಟಲರು "ಪಾಪ ಸಾಗರ ದಾಟಿಸು" ಎಂಬ ಗೀತೆ ರಚಿಸಿ ಹೀಗೆ ಸಂದೇಶ ನೀಡುತ್ತಾರೆ.

ಪಾಪಸಾಗರ ದಾಟಿಸಗ್ಗಕೆ
ಪೋಪ ಕಾಯ್ವುದು; ಕಾಯದಿದ್ದರೆ, ಕೇಳಿರಾಳುಗಳೇ॥
ದೀಪವಿಲ್ಲದ ಗಾಢದಿರುಳಲಿ
ಶಾಪದಲೆಗಳು ಹೊಡೆದು ಬಡೆಯಲು
ತಾಪದಿಂ ನೀವತಿಗಳೊಳ್ಮುಳುಗಿ ಹೋಗುವಿರಿ

ಕಥಾಮಾಲೆ, ಪುಟ-೩೨

ದ್ವಿತೀಯ ಪ್ರಾಸವನ್ನು ಕಾಪಾಡಿಕೊಂಡ ಈ ಗೀತೆ ದೇಶೀಯತೆಯಿಂದ ಮೆರೆಯುತ್ತಿದೆ. "ವಿದೇಶೀಯನೊಬ್ಬನಿಂದ ರಚಿತವಾದದ್ದೆಂದು ಯಾರಿಗೂ ಅನ್ನಿಸದಷ್ಟು ಈ ಪದ್ಯ ದೇಶೀಯವಾಗಿದೆ."[೧೦೫] ಎಂದು ಡಾ॥ ಶ್ರೀನಿವಾಸ ಹಾವನೂರರು ಅಭಿಪ್ರಾಯಪಡುತ್ತಾರೆ. ಪಾಪಸಾಗರದ ಅಲೆಗಳಿಂದ ತಪ್ಪಿಸಿಕೊಂಡು ಸ್ವರ್ಗಕ್ಕೆ ಹೋಗಬೇಕಾದರೆ ಯೇಸುವಿನ ರಕ್ಷಣೆಯ ಅವಶ್ಯಕತೆಯಿರುವುದನ್ನು ಹೇಳುತ್ತಾರೆ.

ಕಪಟಿಗಳಾದ ಶಾಸ್ತ್ರಿಗಳು ಯೇಸುವಿಗೆ ನಿತ್ಯಜೀವನವನ್ನು ಪಡೆಯುವದು ಹೇಗೆ ಎಂದು ಪ್ರಶ್ನಿಸಿದಾಗ ಯೇಸು ಸಮಾರ್ಯದವನ ಸಾಮ್ಯವನ್ನು ನೀಡುತ್ತಾರೆ. ಲೂಕನ ಶುಭಸಂದೇಶ ೧೦ನೇ ಅಧ್ಯಾಯ ೨೫-೩೭ ವಾಕ್ಯಗಳನ್ನು ಆಧರಿಸಿ ಕಿಟಲರು ಗೀತೆ ರಚಿಸಿದ್ದಾರೆ. ಈ ಸಾಮ್ಯವನ್ನು ಕೇಳಿದ ಜನರ ಮನಸ್ಸಿನ ಮೇಲೆ ಅದು ಎಂತಹ ಪರಿಣಾಮವನ್ನುಂಟು ಮಾಡಿತು ಎಂಬುದನ್ನು ಕೆಳಗಿನ ಗೀತದ ಮೂಲಕ ವರ್ಣಿಸಿದ್ದಾರೆ.

ಬರೆದೆಯದರಂತೈದಿ ಮಾಡೆಂ-
ದುರಿಯ ಬಾಣವನೇಸು ಕ್ರಿಸ್ತನು
ನರಿಯ ಭಾವದ ಶಾಸ್ತ್ರಿಯೆದೆಯೊಳಗೆಸೆದ ಹಾಗಾಯ್ತು ॥

ಅರಿತುಕೊಳ್ಳಿರಿ ನರರೇ, ನಿತ್ಯದಿ

ನೆರೆಯ ನಾರೆಂದ್ಕೆಳ್ವದೇತಕೆ

ಮರೆತು ಮಮತೆಯಗೈವ ಕೆಲಸವ? ಮಮತೆ ಮಾಡಿರೆಲೆ ॥

ಕಥಾಮಾಲೆ, ಪುಟ–೫೯

ಮನುಷ್ಯನು ಪ್ರೀತಿಯಿಂದ ಪರರ ಸೇವೆ ಮಾಡಬೇಕೆಂಬ ಸಂದೇಶವನ್ನು ನೀಡಿದ್ದಾರೆ. ಯೇಸುವಿನ ನುಡಿಯು ಕಪಟಿಗಳಾದ ಶಾಸ್ತ್ರಿಗಳ ಮನಸ್ಸನ್ನು ತಾಕಿದ ಬಗೆಯನ್ನು

ಉರಿಯ ಬಾಣದನೇನು ಕ್ರಿಸ್ತನು

ನರಿಯ ಭಾವದ ಶಾಸ್ತ್ರಿಯೆಡೆಯೊಳಗೆಸೆದ ಹಾಗಾಯ್ತು ಎಂದು ಅಲಂಕಾರಿಕವಾಗಿ ವರ್ಣಿಸಿದ್ದಾರೆ.

ಸೈನಿಕರು ಕ್ರಿಸ್ತನನ್ನು ಬಂಧಿಸಿ ಶಿಲುಬೆಗೇರಿಸಲು ಕರೆತಂದು ಆತನಿಗೆ ನೀಡಿದ ಶಿಕ್ಷೆಯ ಸ್ವರೂಪ ಹೇಗಿತ್ತು ಎಂಬುದನ್ನು ಭಾವಿಸಿ ಷಟ್ಪದಿಯಲ್ಲಿ ರಚಿತವಾದ ಈ ಗೀತೆ ವರ್ಣಿಸುತ್ತದೆ. ಈ ಪದ್ಯದ ಪ್ರತಿ ಸಾಲಿನ ಮೊದಲ ಪದಗಳು ಕ್ರಿಯೆಯನ್ನು ಸೂಚಿಸುತ್ತದೆ. ಆದ್ದರಿಂದ ಕಾವ್ಯ ಓದುಗನನ್ನು ತನ್ನೆಡೆಗೆ ಆಕರ್ಷಿಸುತ್ತದೆ. ಕ್ರಿಯೆಯ ಮೂಲಕ ಕಾವ್ಯ ರೂಪುಗೊಳ್ಳುವುದರಿಂದ ಅದರ ಪರಿಣಾಮವೂ ಅಷ್ಟೇ ತೀಕ್ಷ್ಣವಾಗಿದೆ. ಈ ಪದ್ಯವನ್ನು ಗಮನಿಸಿದರೆ ವಿದೇಶೀ ಮಿಶನರಿಗಳು ದೇಶೀ ಶೈಲಿಗೆ ಹೊಂದಿಕೊಳ್ಳುತ್ತಿರುವುದು ಸ್ಪಷ್ಟವಾಗುತ್ತದೆ. "ಜರ್ಮನ್ ಮಾತೃ ಭಾಷೆಯ ಕಿಟಲರು ಏಳೆಂಟು ವರ್ಷಗಳ ಕನ್ನಡ ಅಭ್ಯಾಸದಿಂದ ಪದ್ಯ ರಚನೆಯ ಲೀಲಾಜಾಲ ಶಕ್ತಿಯನ್ನು ಪಡೆದುಕೊಂಡಿದ್ದು ನಮಗೆ ಆಶ್ಚರ್ಯವನ್ನುಂಟು ಮಾಡುತ್ತದೆ"[೧೦೬] ಎಂಬ ಶ್ರೀನಿವಾಸ ಹಾವನೂರರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

ಪರಲೋಕ:– ಕಥಾಮಾಲೆಯಲ್ಲಿನ ಗೀತೆ: ಪರಲೋಕ ರಾಜ್ಯಕ್ಕೆ ಸಂಬಂಧಿಸಿದಂತೆ ಕಿಟಲರು ಮಾರ್ಕನ ಸುವಾರ್ತೆಯ ೪ನೇ ಅಧ್ಯಾಯದ ೨೬–೨೯ ರ ವರೆಗಿನ ವಾಕ್ಯವನ್ನು ಆಧರಿಸಿ ಗೀತೆಯನ್ನು ರಚಿಸಿದ್ದಾರೆ.

ಪುರುಷನೊಬ್ಬನು ತನ್ನ ಹೊಲದಲಿ

ಹರಡಿ ಬೀಜವ ಬಳಿಕ ಮನೆಯೊಳ

ಗಿರುಳ ಹಗಲಲು ಮಲಗಿಯೇಳುತಲಿರಲಿಕಾಗವನೂ॥

ಅರಿಯದಂತದು ಮೊಳಿತು ವೃದ್ಧಿಸಿ

ಧರಿಸಿ ಕದರನು, ಬಲಿತು ಬರುವೀ

ತರದಿ ಮಾಗಿತು; ಮೇಲೆ ಕುಡುಗೋಲಂದು ಕೊಯಸವನೂ॥

ಕಥಾ ಮಾಲೆ, ಪುಟ–೨೭

ಬೀಜ ಹೇಗೆ ಮೊಳೆತು ವೃದ್ದಿಸಿ ಕದರನ್ನು ಧರಿಸಿ ಬಲಿತು ಮಾಗುತ್ತದೆ ಎಂಬುದು ಬೀಜ ಬಿತ್ತಿದ ರೈತನಿಗೆ ಗೊತ್ತಾಗುವುದಿಲ್ಲ. ಇದರ ಹಾಗೆಯೇ ದೇವರ ರಾಜ್ಯವು ಗುಪ್ತ ಶಕ್ತಿಯಾಗಿದ್ದು, ಬೆಳೆ ಪೂರ್ಣವಾಗಿ ಕೊಯ್ಲಿಗೆ ಬಂದಾಗ ಅಂದರೆ ಅಂತ್ಯಕಾಲ ಬಂದಾಗ ದೇವರು ನಂಬುವವರನ್ನು ತನ್ನ ಬಳಿಗಿರಿಸಿಕೊಂಡು ನಂಬದವರನ್ನು ಅಗ್ನಿಜ್ವಾಲೆಗೆ ಹಾಕಿ ಸುಟ್ಟುಬಿಡುವನು ಎಂದು ವಿವರಿಸುತ್ತಾರೆ. ಒಬ್ಬ ವರ್ತಕನು ಬಂದು ಅಮೂಲ್ಯ ಮುತ್ತನ್ನು ಬಯಸಿ ಹುಡುಕಿ ತನ್ನ ಬದುಕನ್ನೆಲ್ಲಾ ಮಾರಿ ಅದನ್ನು ಕೊಂಡು ಕೊಂಡನು ಆ ವರ್ತಕನಂತೆಯೇ ದೇವರ ರಾಜ್ಯ ಸೇರಬೇಕೆಂಬ ಹಂಬಲ ನಮ್ಮಲ್ಲಿರಬೇಕು ಎಂದು ಹೇಳುತ್ತಾ

ಸಕಲ ಸೌಖ್ಯದ ರಾಜ್ಯವಿದ್ದರು
ಯುಕತವಾದರು ಸಲೆಸುತಾದ್ಯರು
ಶಕುತಿ ಸೌಂದರ್ಯದಿಗಳ್ ಬಹು ವಿಧದ ವಿಧ್ಯೆಗಳೂ ॥
ಭಕುತಿ ಮುತ್ತವನ್ನೇ ಸುವೆನ್ನದಿ
ರಕಟದೆಂಥಾಗತಿಯು! ತನ್ನಯ
ರಕುತ ಬೆಲೆಯಿಂ ನಿಮ್ಮ ಕೊಂಡೊಂಡವನ ಹುಡುಕಿರೆಲೇ॥

ಕಥಾ ಮಾಲೆ, ಪುಟ–೨೯

ರಕ್ತ ಬೆಲೆಯನ್ನಿತ್ತು ನಿಮ್ಮನ್ನು ಕೊಂಡುಕೊಂಡ ಯೇಸು ಎಂಬ ಮುತ್ತನ್ನು ಹುಡುಕಿರಿ ಎಂದು ಕರೆನೀಡುತ್ತಾರೆ.

ಕ್ರೈಸ್ತರ ಬದುಕು:– “ನಿನ್ನಂತೆ ನೆರೆಯವನನ್ನು ಪ್ರೀತಿಸು”[೧೦೭] ಎಂಬ ಯೇಸುವಿನ ಸಂದೇಶವನ್ನು ಆಧರಿಸಿ ಕಿಟಲ್ ರಚಿಸಿರುವ ಗೀತೆ ಇಂತಿದೆ.

ಪಾಪನಾತ್ಮವು ಕೊಟ್ಟ ವಾಕ್ಯದಿ
ದೇವರೊಡೆಯಗೆ ಮನುಜಲಾಲಿಸು
ಸೇವೆಗೈಯುತ ಪೂರ್ಣ ಹೃದಯದಿಂ ಪೂರ್ಣಮನದಿಂದಾ॥
ಯಾವುದುಳಿಸದೆ ಪೂರ್ಣ ಬಲದಿಂ
ಭಾವಶುದ್ಧ ಪ್ರೀತಿಮಾಡುವ
ದಾವಗಂ ನೆರೆಯವಗೆ ನಿನ್ನೋಲ್ ಪ್ರೀತಿ ಮಾಡುವದೂ॥

ಕಥಾ ಮಾಮಾಲೆ, ಪುಟ–೩೭

ದೇವರ ಮೇಲಿನ ನಮ್ಮ ಪ್ರೀತಿಯು ಇತರರಿಗೆ ನಾವು ತೋರುವ ಪ್ರೀತಿಯಲ್ಲಿ ಕಂಡು ಬರಬೇಕು. ನಾವು ನಮ್ಮ ನೆರೆಯವರನ್ನು ನಮ್ಮನ್ನು ಪ್ರೀತಿಸುವಂತೆಯೇ ಪ್ರೀತಿಸಬೇಕು. ದೇವರೊಡನೆ ನಮ್ಮ ಸಂಬಂಧ ಮತ್ತು ಸಹೋದರ ಸಹೋದರಿರೊಡನೆ ಇರುವ ಸಂಬಂಧ ಅನ್ಯೋನ್ಯತೆಯಿಂದ ಕೂಡಿರಬೇಕು. ನೆರೆಯವರನ್ನು ಪ್ರೀತಿಸುವುದೆಂದರೆ ಎಲ್ಲಾ ಸಮಯದಲ್ಲೂ, ಎಲ್ಲಾ ವಿಧದಲ್ಲೂ ಒಳ್ಳೆಯದನ್ನೇ ಮಾಡುವುದು

ಮತ್ತು ಒಳ್ಳೆಯದನ್ನೇ ಬಯಸುವುದು, ಅವರ ಜೀವನದಲ್ಲಿ ನೆರವಾಗುವುದು, ದೇವರ ನಿಯಮವು ಮತ್ತು ಪ್ರವಾದಿಗಳ ಪ್ರವಚನಗಳು ಇದನ್ನೇ ಬೋಧಿಸುತ್ತದೆ. ಕ್ರೈಸ್ತರ ಜೀವನವು ತನ್ನ ಸ್ವಾರ್ಥ ಸಾಧನೆಗಾಗಿ ಅಲ್ಲ ಬದಲಾಗಿ ಇತರರ ಉದ್ಧಾರಕ್ಕಾಗಿ ಬಳಕೆಯಾಗಬೇಕು ಅದುವೆ ನಿಜವಾದ ಬದುಕು ಎಂಬ ಭಾವ ಗೀತೆಯಲ್ಲಿ ಬಳಕೆಯಾಗಿದೆ.

ಕ್ರೈಸ್ತರು ವಿಶ್ವಾಸವನ್ನು ಹೊಂದಿದವರಾಗಿರಬೇಕು ಎಂಬ ಸಂದೇಶವನ್ನು ಯೋಹಾನನ್ನನ ಸುವಾರ್ತೆಯ ೨೦ನೇ ಅಧ್ಯಾಯದ ೨೪-೨೯ ರವರೆಗಿನ ವಾಕ್ಯಗಳನ್ನು ಆಧರಿಸಿ ರಚಿಸಿದ್ದಾರೆ. ಯೇಸುವಿನ ಶಿಷ್ಯರಲ್ಲಿ ಒಬ್ಬರಾದ ತೋಮಸ್‌ನು ಮರಣ ಹೊಂದಿ ಪುನರುತ್ಥಾನರಾದ ಯೇಸುವನ್ನು ಕಣ್ಣಾರೆ ಕಾಣದೆ ಹೋದರೆ ಆತನನ್ನು ನಂಬುವುದಿಲ್ಲ ಎಂದು ಹಟವಿಡಿದಾಗ ಒಮ್ಮೆ ಯೇಸುವು ಶಿಷ್ಯರ ಮಧ್ಯದಲ್ಲಿ ಪ್ರತ್ಯಕ್ಷರಾಗಿ 'ನಿಮಗೆ ಶಾಂತಿ' ಎಂದು ಹೇಳಿದರು. ಯೇಸು ಆತನಿಗೆ 'ನನ್ನನ್ನು ಮುಟ್ಟು ನನ್ನ ಘಾಯಗಳನ್ನು ಮುಟ್ಟಿನೋಡು, ನಿನ್ನ ಸಂಶಯಗಳನ್ನು ತೆಗೆದು ಹಾಕಿ ನಂಬಿಕೆಯಿಡು' ಎಂದು ಹೇಳಿದನು. ಆತನು ಯೇಸುವಿಗೆ 'ನನ್ನ ಕರ್ತನೇ, ನನ್ನ ದೇವರು!' ಎಂದನು. ಈ ಘಟನೆಯನ್ನು ಕಿಟಲರವರು ಪೂರ್ವಿ ರಾಗವನ್ನು ಬಳಸಿ ರಚಿಸಿದ್ದಾರೆ.

ಚುಚ್ಚಿದೆನ್ನ ಪಕ್ಕಕದನು
ಹಚ್ಚು! ಕಂದ ನಂಬದಿರದ- ॥
ಲೆಚ್ಚರಾಗಿ ನಾನೆಯೆಂದು
ನಚ್ಚಿ ಕಾಳ್ಗುದಿಟದಿಯೆನಲು:

ಇನ್ನು ತೋಮನದನು ಕೇಳಿ
ತನ್ನ ಗುರುವೆಯೆಂದು ನೋಡಿ- ॥
ಯೆನ್ನ ಕರ್ತರೆನ್ನ ದೇವ ।
ಯೆನ್ನಲಾಗಲೇಸು ನುಡಿದ:

ಕಥಾ ಮಾಲೆ, ಪುಟ-೧೩೦

ಬಾಲಕರ ಗೀತೆಯಲ್ಲಿನ ಗೀತೆ: ಕಥೆಯ ರೂಪದಲ್ಲಿ ಯಾವುದೇ ವಿಷಯ ರಚಿತವಾದಾಗ ಅದು ಮಕ್ಕಳ ಮನಸ್ಸಿನಲ್ಲಿ ನೆಲೆಯೂರಿ ನಿಲ್ಲುತ್ತದೆ. ಅರ್ಥೈಸಿಕೊಳ್ಳಲು ನೆನಪಿನಲ್ಲಿಡಲು ಅನುಕೂಲವಾಗುವಂತೆ ಕಥನ ರೂಪದಲ್ಲಿ ರಚಿತವಾಗಿದೆ 'ಎರಳೆಯು ಹುರಿಯು' ಎಂಬ ಗೀತೆ.

ಮುಗ್ಧವಾದ ಎರಳೆ ಹುಲಿಯು ಕಪಟತನವನ್ನು ಕ್ರೂರತನವನ್ನು ತಿಳಿಯದೆ ವಂಚಿತವಾದ ಸಂದರ್ಭವನ್ನು ಕಥನ ರೂಪದಲ್ಲಿ ಹಿಡಿದಿಟ್ಟ ಗೀತಗಾರನ ಈ ರಚನೆ ಆತನ ಕಥನ ನಿರೂಪಣೆ ಹಾಗೂ ಶೈಲಿಗೆ ಇರುವ ಉತ್ತಮ ನಿದರ್ಶನವಾಗಿದೆ. ಸೈತಾನನು ಹುಲಿಯಂತೆ ಹಸಿದು ಉತ್ತಮರನ್ನು ತಿನ್ನಲು ಕಾಮು

ಕುಳಿತಿದೆ[೧೦೮] ಎಂಬ ಸತ್ಯವೇದದ ವಾಕ್ಯವನ್ನು ನಾವು ಇಲ್ಲಿ ನೆನಸಬಹುದು. ಆದ್ದರಿಂದ ಗೀತಗಾರ ಮಕ್ಕಳನ್ನ ಕುರಿತು ಅವರು ಎಚ್ಚರ ವಹಿಸಬೇಕಾದ ವಿಷಯದ ಕುರಿತು ಹೀಗೆ ಹೇಳಿದ್ದಾರೆ.

ಓ ಕೇಳಿರಿ, ಪ್ರಿಯ ಮಕ್ಕಳೇ
ಪಿಶಾಚನು ಹುಲಿಯ ಹಾಗೆಯೇ
ನಮ್ಮೆಲ್ಲರ ಕೇಡು ಬಯಸುತ
ನಮ್ಮಲ್ಲಿ ಹೊಂಚುತಲಿರುವ!

ಬಾಲಕರ ಗೀತೆಗಳು, ಗೀತೆ- ೫೩, ಪುಟ-೫೬

ಪ್ರಾರ್ಥನೆಯ ಮೂಲಕ ನಾವು ಸಂಪೂರ್ಣವಾಗಿ ದೇವರ ಅಧೀನದಲ್ಲಿರುತ್ತೇವೆ. ಆತನು ನಮ್ಮನ್ನು ಕಾಯುವನು ಎಂಬುದನ್ನು ಹೀಗೆಂದು ಹೇಳಿದ್ದಾರೆ.

ನಾವೆಡೆಯ ಬಿಡದೆಂದಿಗು
ಸಂಪ್ರಾರ್ಥನೆ ಮಾಡಲವಶ್ಯವು
ಹೀಗಾದರೆ ಕ್ರಿಸ್ತ ನಕ್ಷಿಗಳು
ನಮ್ಮನ್ನು ಕಾಯುತಲಿರ್ಪವು

ಸ್ತುತಿ: ಸ್ತುತಿಗೆ ಸಂಬಂಧಿಸಿದ ಗೀತೆ ಬಾಲಕರ ಗೀತೆಯಲ್ಲಿ ಪ್ರಕಟವಾಗಿದೆ: ಕೋಗಿಲೆಯ ಧ್ವನಿಗೆ ಮಾರು ಹೋದ ಕಿಟಲ ಸಂತೋಷಗೊಂಡು ತಾನು ದೇವರನ್ನು ಸ್ತುತಿಸಿ ಕೊಂಡಾಡಲು ಪ್ರೇರಿತನಾದ ಬಗೆ 'ಕೋಕಿಲೆ'ಎಂಬ ಗೀತೆಯಲ್ಲಿ ವ್ಯಕ್ತವಾಗಿದೆ.

ಎಲವೋ, ಎಲವೋ
ನೀ ಹಾಡದಲೇ ಹಾಡದಲೇ
ಈ ಕಾಲ ಬಿಟ್ಟರೆ
ಕೋಕಿಲೇ, ಕೋಕಿಲೇ
ನಾ ಹಾಡುವೆನು, ಹಾಡುವೆನು
ಬಾಯ್ತುಂದ ಹಾಗೆಯೇ

ಬಾಯ್ತುಂದ ಹಾಗೆಯೇ
ಪರಲೋಕದೊಳ್ಳೆ ತಂದೆಯ
ನಾ ಸ್ತೋತ್ರ ಮಾಡುವೆ
ಕೋಕಿಲೇ, ಕೋಕಿಲೇ
ನಾ ಹಾಡುವೆನು, ಹಾಡುವೆನು

ಬಾಲಕರ ಗೀತೆಗಳು, ಗೀತೆ ೨೫, ಪುಟ-೨೧

ಹಬ್ಬಗಳು: ಕಿಟಲ್ ಸ್ಥಳೀಯ ಸಂಸ್ಕೃತಿಗೆ ಸ್ಪಂದಿಸಿ 'ಯುಗಾದಿ'ಗೆ ಸಂಬಂಧಿಸಿದಂತೆ ಗೀತೆ ರಚಿಸಿದರು.

ನಾವೀಗ ಕೂಡಿ ಹಾಡಿ
ಕರ್ತಂಗೆ ಸ್ತೋತ್ರ ಮಾಡಿ
ಕೃತಜ್ಞರಾಗಿರೋಣ

ತಾಯ್ ಕೂಸು ನಿತ್ಯದಲ್ಲಿ
ಆರೈಸೋ ರೀತಿಯಲ್ಲಿ
ಯೆಹೋವನೆಮ್ಮ ಕಾದ;

ಆತಂಗೆ ಪ್ರಾರ್ಥಿಸೋಣ ಸಹಾಯಗಾರನಾದ

ಕನ್ನಡ ಗೀತಗಳು, ಗೀತೆ– ೩೫೨

ಉಪಮೆಯು ಈ ಗೀತೆಯಲ್ಲಿ ಬಳಕೆಯಾಗಿದೆ. "ತಾಯ್ ಕೂಸು ನಿತ್ಯದಲ್ಲಿ ಆರೈಸೋ ರೀತಿಯಲ್ಲಿ ಯೆಹೋವನೆಮ್ಮ ಕಾದ. ವರ್ಷದ ಪ್ರತಿ ಕ್ಷಣವೂ ದೇವರು ತಾಯಿಯಂತೆ ನಮ್ಮನ್ನು ಪರಿಪಾಲಿಸಿದ್ದಾರೆ. ಆತನ ಪೋಷಣೆ ಪಾಲನೆಗೆ ನಾವು ಕೃತಜ್ಞರಾಗಬೇಕೆಂಬ ಭಾವ ಇಲ್ಲ ವ್ಯಕ್ತವಾಗಿದೆ. ಈ ಗೀತೆಯನ್ನು ಪ್ರತಿವರ್ಷ ಹೊಸವರ್ಷದ ಪ್ರಾರಂಭದ ಆರಾಧನೆಯಲ್ಲಿ ಹಾಡಲಾಗುತ್ತದೆ.

ವಿಚಿತ್ರ ವರ್ತಮಾನ ಸಂಗ್ರಹದಲ್ಲಿ ಹಬ್ಬಕ್ಕೆ ಸಂಬಂಧಿಸಿದ ಗೀತೆಗಳು: ಕಿಟಲ್ ಕಥಾಮಾಲೆಯಲ್ಲಿ ಬರುವ ಕ್ರಿಸ್ತನ ಜನನದ ಕುರಿತಾದ ಪದ್ಯ ಭಾಮಿನಿ ಷಟ್ಪದಿಯಲ್ಲಿ ಕಂಡುಬರುತ್ತದೆ. ಈ ಗೀತೆಯು 'ಯೇಸುವಿನ ಜನನ ವಿಷಯವು' ಎಂಬ ಶೀರ್ಷಿಕೆಯಲ್ಲಿ ವಿಚಿತ್ರ ವರ್ತಮಾನ ಸಂಗ್ರಹ ಪತ್ರಿಕೆಯಲ್ಲಿ ಪ್ರಕಟವಾಯಿತು. ಕಥನ ರೂಪತೆ ಗೀತೆಯ ವೈಶಿಷ್ಟ್ಯವಾಗಿದೆ.

ಮರಿಯಳು ಯೇಸುವಿಗೆ ಗೋದಲಿಯಲ್ಲಿ ಜನ್ಮ ನೀಡಿದರು. ಇದು ದೇವ ಕುಮಾರನ ಜನನವು ದೀನ ಸ್ಥಿತಿಯಲ್ಲಿ ನಡೆದದ್ದನ್ನು ಸೂಚಿಸುತ್ತದೆ. ಈ ಜನನದ ಸುದ್ಧಿಯು ಮೊದಲು ಸಾಮಾನ್ಯ ಜನರಾದ ಕುರುಬರಿಗೆ ಪ್ರಕಟಿಸಲಾಯಿತು.

ಹೆದರ ಬೇಡಿರಿ, ದಾಡ್ಡ ಮೋದದ
ವದಿಸ ಬಂದೆನು; ಸಕಲ ಜನಹಿತ
ಕೆದುರ ಬೇತುಲೆಹೇಮಿನಲ್ಲಾಗದಿಹನು ರಕ್ಷಕನೂ: ॥
ಇದರ ಗುರ್ತನ್ನಾರವೆ ಛತ್ರದ
ಮೃದುವದಲ್ಲದ ಗಾದ್ಲಿಹುಲ್ಲಲಿ
ಮುದದ ಶಿಶುವನು ಬಟ್ಟೆ ಸುತಿದದಾಗಿ ಕಾಣುವಿರೀ– ॥

ವಿಚಿತ್ರ ವರ್ತಮಾನ ಸಂಗ್ರಹ, ಸೆಪ್ಟೆಂಬರ್ ೨೭. ೧೮೬೨

ಕುರುಬರು ಇದನ್ನು ಆಲಿಸಿ ಬೆತ್ಲೇಹೇಮಿನ ಛತ್ರಕ್ಕೆ ಬಂದು ಗೋದಲಿಯಲ್ಲಿ ಮಲಗಿರುವ ಮಗುವನ್ನು ಕಂಡು ವಂದಿಸಿದರು. ನಮಗುಂಟಾದ ಮಹಾನ್ ದರ್ಶನವನ್ನು ಆನಂದವನ್ನು ತಮ್ಮ ನಾಡಿನಲ್ಲಿದ್ದವರಿಗೆ ಹಂಚಿಕೊಳ್ಳಲು ಪ್ರಾರಂಭಿಸಿದರು.

ಜನರು ಕೇಳಲಿಕಿಂಥ ಸುಧ್ಧಿಯ
ಮನದಿ ವಿಸ್ಮಯ ಪಡುವರಾದರು
ವನದಲುಳಿದಿಹ ಹಿಂಡ ಕಾವಲಿಗಂದು ಕುರುಬಜ ನಾ ॥
ವಿನುತ ದೇವರು ಗೈದ ಕರುಣೆಯ
ನೆನಸಿ ಹರ್ಷದಿಯವನ ಹೆಸರನು

ಘನವ ಪಡಿಸುತ ಹೌಗಳಿವಾಗಲುತ ತಿರುಗಿ ಗಮಿಸಿದರೂ ॥

ಪ್ರಕೃತಿ: "ತೇನ ವಿನಾ ತೃಣಮಪಿನ ಚಲತಿ" ಆ ವರಮಾನ್ಮನ ಅನುಗ್ರಹವಿಲದಲ್ದೇ ತೃಣವೂ ಚಲಿಸಲಾರದು ಎಂಬ ಜ್ಞಾನವನ್ನು ಕೊಡುವ ಗೀತೆಯೇ 'ಸರ್ವಜ್ಞನಾದ ದೇವರ ಕ್ರಿಯೆಗಳು'. "ಆಕಾಶದಲ್ಲಿ ಹಾರಾಡುವ ಹಕ್ಕಿಗಳನ್ನು ಗಮನಿಸಿ ಅವು ಬಿತ್ತುವುದಿಲ್ಲ, ಕೊಯ್ಯುವುದಿಲ್ಲ, ಕಣಜಗಳಲ್ಲಿ ಕೂಡಿದುವುದೂ ಎಲ್ಲ. ಆದರೂ ಸ್ವರ್ಗದಲ್ಲಿರುವ ನಿಮ್ಮ ತಂದೆ ಅವುಗಳನ್ನು ಪೋಷಿಸುತ್ತದೆ"[೧೦೯] "ನಿನ್ನ ತಲೆಗೂದಲುಗಳು ಸಹ ಎಣಿಕೆಯಾಗಿವೆ"[೧೧೦] ಎಂಬ ಸತ್ಯವೇದದ ನುಡಿಗಳನ್ನು ನೆನಪಿಸುವ ಗೀತೆ ಇದಾಗಿದೆ.

ಎಷ್ಟು ಮೀನು ಜಲದಲ್ಲಿ
ಚಲಿಸಾಡುತ್ತಲಿವೆ?
ಎಷ್ಟು ನೊಣ ಬಿಸಿಲಲ್ಲಿ
ಸೊಗಸಾಗಿರುತ್ತವೆ?
ನೀನು ತಿಳಿದವನಲ್ಲ;
ದೇವರೆಲ್ಲವನ್ನು ಬಲ್ಲ
ಲೆಕ್ಕ ಮಾಡಿ ಇಟ್ಟನು.

ಯಾರು ಗುಬ್ಬಿರಾಶಿಯನ್ನು
ಇಲ್ಲಿ ಅಲ್ಲಿ ಸಾಕುವ?
ನಿನ್ನ ತಲೆಗೂದಲನ್ನು
ಯಾರು ಲೆಕ್ಕ ಮಾಡಿದ?
ನೀನು ಕಂಡದ್ದೆಲ್ಲವನ್ನು
ದೇವರಾಳಿ ಸರ್ವವನ್ನು
ಲೆಕ್ಕ ಮಾಡಿ ಇಟ್ಟನು.

ಬಾಲಕರ ಗೀತೆಗಳು, ಗೀತೆ ೮೦, ಪುಟ-೮೨

ದೇವರು ತನ್ನ ಸೃಷ್ಟಿಗಳನ್ನು ಪರಿಪಾಲಿಸುವ ಬಗೆಯನ್ನು ಮೀನು, ನೊಣ, ಕೂದಲು, ಗುಬ್ಬಿಗಳ ಉದಾಹರಣೆಯನ್ನು ಕೊಡುವುದರ ಮೂಲಕ ವಿವರಿಸಿ ಪ್ರಕೃತಿಯ ಸರ್ವವಸ್ತುಗಳು ದೇವರ ಪಾಲನೆಯಲ್ಲಿ ಸುರಕ್ಷಿತವಾಗಿದೆ ಎಂಬ ಅಂಶ ವ್ಯಕ್ತವಾಗಿದೆ. ದೇವ ಪರಿಪಾಲನೆಯನ್ನು ಪ್ರಕೃತಿ ನಿದರ್ಶನಗಳಿಂದ ವರ್ಣಿಸುವುದೇ ಗೀತೆಯ ವೈಶಿಷ್ಟ್ಯವಾಗಿದೆ.

ಪ್ರಕೃತಿ ಮಾನವನಿಗೆ ದೇವರ ಅತ್ಯಮೂಲ್ಯ ಕೊಡುಗೆಯಾಗಿದೆ. ಪ್ರಕೃತಿಯ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂಬ ವಿಷಯದ ಕುರಿತು ಮಿಶನರಿಗಳು ಗೀತೆ ರಚಿಸಿದ್ದಾರೆ. 'ಕೇದಗೆ ಹೂವು' ಎಂಬ ಗೀತೆಯಲ್ಲಿ ಕಥೆಯ ಮೂಲಕ ಪ್ರಕೃತಿ ರಕ್ಷಣೆಯ ಸಂದೇಶವನ್ನು ನೀಡಿದ್ದಾರೆ. ಕಿಟಲ್ ಕೇವಲ ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ಗೀತೆಗಳನ್ನಲ್ಲದೆ ನಿಸರ್ಗ ರಕ್ಷಣೆಗೆ ಸಹಾಯಕವಾಗುವ ಗೀತೆಗಳನ್ನು ರಚಿಸಿದ್ದಕ್ಕೆ ಇದು ಉತ್ತಮ ಉದಾಹರಣೆಯಾಗಿದೆ.

ಒಮ್ಮೆ ಒಬ್ಬ ಹುಡುಗ ಕಾಡಿನಲ್ಲಿದ್ದ ಕೇದಗೆ ಹೂವನ್ನು ಕಂಡು ಅದರ ಅಂದಕ್ಕೆ ಬೆರಗಾಗಿ ಅದನ್ನ ಕೊಯ್ಯಲು ಮುಂದಾಗುತ್ತಾನೆ. ಆದರೆ ಕೇದಗೆ 'ಮೂರ್ಖನೆ, ನನ್ನ ಮುಳಳುಳ್ಳು ಚುಚ್ಚುತೆ' ಕೆದಗೆ ಎಂದರೂ ಆತ ಗಮನಿಸದೆ ಕೊಯ್ಯತೊಡಗಿದ. ಇದರಿಂದ ಅದರ ಮುಳ್ಳು ಆತನನ್ನು ಚುಚ್ಚಲು, ಬೇನೆಯಿಂದ ನರಳತೊಡಗಿದ, ಅಳ ತೊಡಗಿದ. ಚಂದವಾದ ಕೇದಗೆ ನೋಡಿ ಆನಂದಪಡಬೇಕೇ ಹೊರತು ಅದನ್ನ ಕೊಯ್ದು ನಾಶಮಾಡಬಾರದು ಎಂಬ ಸಂದೇಶವನ್ನು ಗೀತಗಾರ ಹೀಗೆ ನಿಡಿದ್ದಾನೆ.

ಕೇಳು, ಲೋಕದರ್ಥವೆ
ಹೂವು ಕಾಡಿನಲ್ಲಿ;
ಮೆಚ್ಚ ಬೇಡ ಅದಕೆ!
ಅದು ಚುಚ್ಚುವಂಥದೆ;

ನಿಲ್ಲು ದೂರದಲ್ಲಿ!
ಚಂದ ಚಂದ ಕೇದಗೆ
ಚಂದ ಕಾಡಿನಲ್ಲಿ!

ಬಾಲಕರ ಗೀತೆಗಳು, ಗೀತೆ-೫೪, ಪುಟ-೫೭

'ಜಂಬೂದ್ವೀಪ' ಎಂಬ ಗೀತೆಯಲ್ಲಿ ಪ್ರಕೃತಿ ದೃಷ್ಯವನ್ನು ವರ್ಣಿಸುತ್ತಾ ಇದಾವುದೂ ನಮ್ಮ ಸ್ವಂತ ದೇಶವಲ್ಲ ನಮ್ಮ ಶಾಶ್ವತ ನೆಲೆ ಬೇರೆಯೆಲ್ಲೋ ಇದೆ ಎಂಬ ವಾಸ್ತವ ಸಂಗತಿಯತ್ತ ಗಮನ ಹರಿಸಿದ್ದಾರೆ.

ಸ್ವದೇಶ ಯಾವದೆಲವೋ?
ಕರ್ನಾಟವೋ? ಮಲಾದ್ರಿಯೋ?
ಸುಗಂಧ ವೃಕ್ಷ ಇರ್ಪದೋ?
ತೆಂಗಾದಿ ಬೆಳೆದಲ್ಲಿಯೋ?
ಅಲಲ್ಲಲಲ್ಲಲಲ್ಲವೇ!
ಸ್ವದೇಶವದು ಬೇರೆಯೇ!

ಸ್ವದೇಶ ಯಾವದಲವೋ?
ಕಾಶ್ಮೀರವೋ? ಹಿಮಾದ್ರಿಯೋ?
ಸದಾ ವಸಂತವುಳ್ಳಹೋ?
ಗಂಗಾದಿ ನದಿ ಮೂಲವೋ?
ಅಲಲ್ಲಲಲ್ಲಲಿಲ್ಲವೇ!
ಸ್ವದೇಶವದು ಬೇರೆಯೇ!

ಬಾಲಕರ ಗೀತೆಗಳು, ಗೀತೆ-೪೪, ಪುಟ ೪೧

ಮಿಶನರಿಗಳು ಈ ಲೋಕವನ್ನು ನೋಡಿರುವ ಬಗೆ ವಿಶಿಷ್ಟವಾದದ್ದು ಸುಂದರ ಪ್ರಕೃತಿ, ನದಿ, ಬೆಟ್ಟ, ಫಲವತ್ತಾದ ಭೂಮಿ, ಆಕರ್ಷಕ ನಾಡು ಇದಾವುದು ನಮ್ಮ ಸ್ವದೇಶವಲ್ಲ ನಾವು ಬೇರೊಂದು ರಾಜ್ಯ ಅಂದರೆ ಸ್ವರ್ಗರಾಜ್ಯಕ್ಕಾಗಿ ಹಾತೊರೆಯಬೇಕು ಅದೇ ಶಾಶ್ವತವಾದ ನಮ್ಮ ರಾಜ್ಯವಾಗಿದೆ ಎಂಬ ಆಶಯವನ್ನು ದಿನನಿತ್ಯದ ಸರಳ ಅನುಭವದ ಮೂಲಕ ವರ್ಣಿಸಿರುವ ಬಗೆ ಅತೀ ವಿಶಿಷ್ಟವಾಗಿದೆ. 'ಅಲ್ಲಿರುವುದು ನಮ್ಮ ಮನೆ ಇಲ್ಲಿರುವುದ ಸುಮ್ಮನೆ' ಎಂಬ ನುಡಿಯತ್ತ ನಮ್ಮ ಗಮನ ಸೆಳೆದಿದೆ ಈ ಗೀತೆ.

ಕಿಟಲ್‌ರ ಗೀತೆಗಳ ವೈಶಿಷ್ಟ್ಯತೆಗಳು: ಕಿಟಲ್‌ರ ಗೀತೆಗಳು ಬಾಸೆಲ್ ಮಿಶನ್ ಗೀತ ಪುಸ್ತಕ (ಕನ್ನಡ ಗೀತೆಗಳು) ದಲ್ಲಿ ಕೇವಲ ಎರಡು ಗೀತೆಗಳಿದ್ದು ಭಾಷಾಂತರ ಗೀತೆಗಳಾಗಿವೆ. ಕಥಾ ಮಾಲೆಯಲ್ಲಿರುವ ಗೀತೆಗಳೆಲ್ಲವೂ ಭಾಮಿನಿ,ವಾರ್ಧಕ ಷಟ್ಪದಿ ಹಾಗೂ ದೇಶೀ ರಾಗಗಳಿಂದ (ಪೂರ್ವಿರಾಗ, ಮಟ್ಟ ತಾಳ) ರಚಿತವಾಗಿದೆ. ಸ್ಥಳೀಯತೆಯನ್ನು ದೇಶೀ ಛಂದಸ್ಸನ್ನು ಬಳಸಿ ಗೀತೆ ರಚಿಸಿದ ಸುಪ್ರಸಿದ್ಧ ಗೀತಗಾರನೆಂದರೆ ಕಿಟಲ್‌ರವರು. ಕನ್ನಡ ಕಾವ್ಯಗಳನ್ನು ಓದಿ ಅವುಗಳನ್ನು ಮನನ ಮಾಡಿ ಅದರಿಂದ ಪ್ರಭಾವಿತರಾಗಿ ಅವುಗಳನ್ನು ಕರಗತ ಮಾಡಿಕೊಂಡು ಕಾವ್ಯಲಕ್ಷಣಗಳನ್ನು ಅಭ್ಯಸಿಸಿ ತಿಳಿದುಕೊಂಡು ಕ್ರೈಸ್ತ ತತ್ವಗಳನ್ನು ದೇಶೀ ಛಂದಸ್ಸಿನಲ್ಲಿ ರಚಿಸಿ ತಮ್ಮ ಅಪೂರ್ವ ಕವಿತಾ ಪ್ರತಿಭೆಯಿಂದ ಯೇಸು ಕ್ರೈಸ್ತನ ಜೀವನವನ್ನು ಜನರಿಗೆ ಪರಿಚಯಿಸಿದರು.

ದೇಶೀ ಕವಿಗಳಿಂದ ಇವರು ಪ್ರಭಾವಿತರಾಗಿದ್ದರು. ನಿಜಗುಣ ಶಿವಯೋಗಿಯವರ ವಿವೇಕ ಚಿಂತಾಮಣಿಯಲ್ಲಿ ಬರುವ ಭಾರತೀಯ ಸಂಗೀತ ಶಾಸ್ತ್ರದ ಕುರಿತು ವಿವೇಚಿಸಿದ ಇವರು ಆ ಸಂಗೀತ ಜ್ಞಾನ ದೇಶೀಯರಾಗ ಸಂಯೋಜನೆಗೆ ಸಹಕಾರಿಯಾಯಿತು.

ಕಿಟಲ್ ಒಬ್ಬ ಬೋಧಕನಾಗಿದ್ದು ಜನರನ್ನು ಸನ್ಮಾರ್ಗಕೆ ನಡೆಸಬೇಕೆಂಬ ಉದ್ದೇಶವನ್ನು ಹೊಂದಿದ್ದರು ಎಂಬುದು ಇವರ ಗೀತೆಗಳಿಂದ ತಿಳಿಯುತ್ತದೆ. ಹಲವು ಅಧ್ಯಾಯಗಳ ಕೊನೆಯಲ್ಲಿ ಕಾವ್ಯರೂಪದಲ್ಲಿ ಸಂದೇಶಗಳನ್ನು ನಿಡಿರುವುದು ಇವರ ಕಾವ್ಯ ರಚನೆಯ ವೈಶಿಷ್ಟ್ಯವಾಗಿದೆ.

ಅಲಂಕಾರಗಳ ಬಳಕೆ ಅಲ್ಲಲ್ಲಿ ಕಾಣುತ್ತೇವೆ. ಉದಾ: ಉರಿಯ ಬಾಣವನೇನು ಕ್ರಿಸ್ತನು ನರಿಯ ಭಾವದ ಶಾಸ್ತ್ರಿಯೆದೆಯೊಳಗೆಸೆದ ಹಾಗಾಯ್ತು. ಕಾಡಬೇಗೆಯು ಹತ್ತಿದಂದದಿ, ಮೋಡತಲೆಯೊಳ ಗುಡುಗಿದಂದದಿ ಇತ್ಯಾದಿ.

ಸ್ಥಳೀಯ ಸಂಸ್ಕೃತಿಗೆ ಸ್ಪಂದಿಸಿದ ಕಿಟಲ್ 'ಯುಗಾದಿ' ಯ ಕುರಿತು ಗೀತೆ ರಚಿಸಿದರು. ದೇಶೀಯತೆಯನ್ನು ಗೌರವಿಸಿದರ ಸಂಕೇತವಾಗಿ ಈ ಗೀತೆ ರಚಿಸಿರುವುದು ವಿಶಿಷ್ಟವಾಗಿದೆ.

ದೇವರು ತನ್ನ ಸೃಷ್ಟಿಗಳನ್ನು ಪರಿಪಾಲಿಸುವ ಬಗೆಯನ್ನು ಪ್ರಕೃತಿಯ ನಿದರ್ಶನಗಳಿಂದ ವರ್ಣಿಸಿರುವ ಬಗೆ ವಿಶಿಷ್ಟವಾಗಿದೆ. ಉದಾ: ಬಾಲಕರ ಗೀತೆಗಳಲ್ಲಿನ ಗೀತೆ ೮೦ರಲ್ಲಿ ಮೀನು, ನೊಣ, ಗುಬ್ಬಿ, ಕೂದಲುಗಳ ಕುರಿತು ಹೇಳುತ್ತಾ ಇವೆಲ್ಲವುಗಳ ಪರಿಪಾಲಿಸುವ ದೇವರು ಮನುಷ್ಯರನ್ನು ಮತ್ತಷ್ಟು ಕಾಪಾಡುವವನಾಗಿದ್ದಾನೆ ಎಂದು ಹೇಳುವಲ್ಲಿ ಜನತೆಗೆ ಸಹಜವಾದ ಉದಾಹರಣೆಗಳನ್ನು ಬಳಸಿ ವರ್ಣಿಸಿರುವುದರಿಂದ ಅರ್ಥ ಗ್ರಹಣ ಸುಲಭವಾಗಿದೆ.

ಕಥನ ಶೈಲಿ ಕಿಟಲ್‌ರ ವಿಶಿಷ್ಟವಾಗಿದೆ. ಕಥನದ ಮೂಲಕ ಪ್ರಕೃತಿ ರಕ್ಷಣೆಯ ಅರಿವನ್ನು ಮೂಡಿಸುವ ಪ್ರಯತ್ನ ಸುಂದರವಾಗಿ ಮೂಡಿ ಬಂದಿದೆ. ಉದಾ: 'ಕೇದಗೆ ಹೂವು'

ಮಿಶನರಿಗಳು ಪ್ರಕೃತಿಯ ಕುರಿತು ಅರಿವನ್ನು ಮೂಡಿಸಲು ನಡೆಸಿದ ಶ್ರಮ ಸ್ತುತ್ಯರ್ಹವಾಗಿದೆ. ನೀತಿ ಕಥೆಗಳನ್ನು ಗೀತೆ ರೂಪದಲ್ಲಿ ರಚಿಸಿ ಮಕ್ಕಳ ನೈತಿಕ ಮೌಲ್ಯವನ್ನು ಬೆಳೆಸಲು ಪ್ರಯತ್ನಿಸಿದ ಬಗೆ 'ಎರಳೆಯು ಹುಲಿಯು' ಎಂಬ ಗೀತೆಯಲ್ಲಿ ಮೂಡಿಬಂದಿದೆ.

ಮಿಶನರಿಗಳು ಈ ಲೋಕವನ್ನು ನೋಡಿರುವ ಬಗೆ ವಿಶಿಷ್ಟವಾದದ್ದು. ಸುಂದರ ಪ್ರಕೃತಿ, ನದಿ, ಬೆಟ್ಟ, ಫಲವತ್ತಾದ ಭೂಮಿ, ಆಕರ್ಷಕ ನಾಡು ಇದಾವುದೂ ನಮ್ಮ ಸ್ವಂತ ದೇಶವಲ್ಲ. ನಾವು ಬೇರೊಂದು ರಾಜ್ಯ ಅಂದರೆ ಸ್ವರ್ಗರಾಜ್ಯ ಸೇರಲು ಹಾತೊರೆದು ಅದೇ ಶಾಶ್ವತವಾದ ದೇಶವೆಂದು ಭಾವಿಸಬೇಕು ಎಂಬ ಸಂದೇಶ ನೀಡಿರುವುದು ಕಿಟಲ್‌ರು ಇಹಲೋಕದೊಂದಿಗೆ ಹೊಂದಿದ ಸಂಬಂಧವನ್ನು ಸೂಚಿಸುತ್ತದೆ.

ಪ್ರಕೃತಿಯ ದೃಶ್ಯಗಳು ಕಿಟಲ್‌ರನ್ನು ಹಾಡಲು ಪ್ರೇರೇಪಿಸಿರುವುದು ವಿಶಿಷ್ಟವಾಗಿದೆ. ಗೀತೆ ೨೫ (ಬಾಲಕರ ಗೀತೆ) ರಲ್ಲಿ ಕೋಗಿಲೆಯ ಧ್ವನಿಗೆ ಮಾರುಹೋದ ಗೀತಗಾರ ಅದರಂತೆ ಹಾಡಲಾಗದಿದ್ದರೂ

ತಾನು ಒಲಿದಂತೆ ಹಾಡುತ್ತೇನೆ ದೇವರನ್ನು ಸ್ತುತಿಸಿ ಕೊಂಡಾಡುತ್ತೇನೆ ಎಂದು ಹೇಳಿರುವ ಭಾವ ವಿಶಿಷ್ಟವಾಗಿದೆ.

ಉಪಮೆಗಳನ್ನು ಬಳಸಿ ಗೀತೆ ರಚಿಸಿದ್ದಾರೆ. ಉದಾ: ಗೀತೆ ೩೫೨ ರಲ್ಲಿ ತಾಯಿಯು ತನ್ನ ಕೂಸನ್ನು ನಿತ್ಯವೂ ಆರೈಸೋ ರೀತಿಯಲ್ಲಿ ದೇವಪರಿಪಾಲನೆ ಮನುಷ್ಯ ಬದುಕಿನಲ್ಲಿ ತಾಯಿಯ ಆರೈಕೆಯಂತಿದೆ ಎಂದು ಹೋಲಿಸಿ ವರ್ಣಿಸಿರುವುದು ದೇವರೊಂದಿಗಿನ ಮಾನವನ ಸಂಬಂಧದ ಆತ್ಮೀಯತೆಯನ್ನು ತಿಳಿಸುವುದಾಗಿದೆ.

೫.೩.೯ ಕಾಫಮನ್. ಒ – Kaufmann. O

ಇವರು ಕ್ರಿ.ಶ. ೧೮೫೩ರಲ್ಲಿ ಬಾಸೆಲ್ ಮಿಶನ್ನಿನ ಮಿಶನರಿಯಾಗಿ ಭಾರತಕ್ಕೆ ಬಂದು ಧಾರವಾಡದಲ್ಲಿ ಸೇವೆ ಪ್ರಾರಂಭಿಸಿದರು. ಕನ್ನಡವನ್ನು ಆಸಕ್ತಿಯಿಂದ ಕಲಿತರು. ಇವರ ಸಹಾಯಕರಾದ ಜೆ. ಹೆಂಡ್ರಿಕ್ ಚಿಕ್ಕ ಪ್ರಾಯದಲ್ಲಿ ತೀರಿ ಹೋದಾಗ ಕಾಥಮನ್‌ರು ತಮ್ಮ ಪತ್ನಿಯೊಂದಿಗೆ ಸುವಾರ್ತಾ ಸೇವೆ ಹಾಗೂ ಶಾಲೆಯ ಮೆಲ್ವಿಚಾರಣೆ ಕೆಲಸವನ್ನು ಮಾಡಿದರು. ಕ್ರಿ.ಶ. ೧೮೬೧ರಲ್ಲಿ ಕೊಡಗು ಪ್ರದೇಶಕ್ಕೆ ಸೇವೆ ಮಾಡಲು ಹೋದರು.[೧೧೧] ಕ್ರಿ.ಶ. ೧೮೯೯ರಲ್ಲಿ ಜ್ವರದಿಂದ ಬಳಲಿ ಮರಣ ಹೊಂದಿದರು.

ಗೀತೆಗಳ ಅಧ್ಯಯನ: ಕನ್ನಡ ಗೀತೆಗಳು ಗೀತ ಪುಸ್ತಕದಲ್ಲಿ ಎರಡು ಗೀತೆಳನ್ನು ರಚಿಸಿದ್ದಾರೆ. ಒಂದು ಗೀತೆ ಜರ್ಮನ್ ಭಾಷೆಯಿಂದ ಅನುವಾದವಾದರೆ ಮತ್ತೊಂದು ಸ್ವರಚಿತ ಗೀತೆಯಾಗಿದೆ. ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಗೀತೆಗಳ ಅಧ್ಯಯನ ನಡೆದಿದೆ.

ಹಬ್ಬಗಳು: ಯೇಸುವಿನ ಆಗಮನಕ್ಕೆ ಸಂಬಂಧಿಸಿದಂತೆ ರಚಿತವಾಗಿರುವ ಗೀತೆ 'ದೇವರ ಕುಮಾರನು' ಎಂಬುದು ಈ ಗೀತೆಯಲ್ಲಿ ದೇವ ಕುಮಾರನು ಚಿಯೋನಿಗೆ ಸೇರುತ್ತಾನೆ ಎಂಬ ಆಲೋಚನೆ ಇದೆ. ಚಿಯೋನ್ ಎಂಬುದು ದೇವರ ಪ್ರಸನ್ನತೆಗೆ ಸೂಚಕ. ಚಿಯೋನಿನಲ್ಲಿ ಸ್ತೋತ್ರವು ಹೃದಯಾನಂದವು ಇರುತ್ತದೆ. ಈ ಆಗಮನದಲ್ಲಿ ನೀತಿಯ ರಾಜನು ದೀನನರನಾಗಿ ಮಾನವರೊಂದಿಗೆ ಒಂದು ಮಾಡಿಕೊಂಡು ಕುರುಡರಿಗೆ ಕಣ್ಣು, ಕುಂಟರಿಗೆ ಕಾಲು, ಕ್ಷೇಮವಿಲ್ಲದ ರೋಗಿಗಳಿಗೆ ಆರೋಗ್ಯವನ್ನು ನೀಡಿ ಅವರನ್ನು ಸಮಾಜದಲ್ಲಿ ಗುರುತಿಸುವಂತೆ ಮಾಡಿದ್ದಾನೆ.

ಆತ ನೀತಿ ರಾಜನು
ದೀನ ನರನಾಗಿದ್ದಾನೆ
ದಾಸಬಂಧ ಹರಿದು
ಬಿಡುಗಡೆ ಕೊಡುತ್ತಾನೆ
ಕುರುಡರಿಗೆ ಬೆಳಕು
ಕ್ಷೇಮ ರೋಗಿಗಾತನು

ಕನ್ನಡ ಗೀತೆಗಳು, ಗೀತೆ–೩೯

ಯೇಸುವಿನ ನೀತಿಯ ಗುಣವನ್ನು ಸೂಚಿಸುವ ಬಿರುದು ನೀತಿರಾಜ ಎಂಬುದಾಗಿದೆ. ಯೇಸುವನ್ನು 'ದೇವರಕುಮಾರ' ಎಂಬ ಬಿರುದಿನಿಂದಲೂ ಈ ಗೀತೆಯಲ್ಲಿ ಗುರುತಿಸಿದ್ದಾರೆ.

ದೇವ ಕುಮಾರ: ಪ್ರಾಚೀನ ಮಧ್ಯ ಪ್ರಾಚ್ಯ ದೇಶದ ಅರಸರಿಗೆ ದೇವಪುತ್ರ ಎಂಬ ಬಿರುದು ಸಾಮಾನ್ಯವಾಗಿತ್ತು. ಅಕೇಡಿಯಾದ ಸೆಮಿಟಿಕ್ ಅರಸರು, ಈಜಿಪ್ಟಿನ ಫರೋವಾ ಅರಸರು, ಸಿರಿಯಾದ ಅರಸರು ತಮ್ಮನ್ನು ದೇವಪುತ್ರರೆಂದು ಕರೆಸಿಕೊಂಡು ಆಡಳಿತವನ್ನು ನಡಸುತ್ತಿದ್ದರು. ಇಸ್ರಯೇಲ್ ದೇಶದ ಧಾರ್ಮಿಕ ಚರಿತ್ರೆಯ ಪುಟಗಳನ್ನು ತಿರುವಿ ನೋಡಿದರೆ ದಾವೀದರಸನಿಗೆ ಹಾಗೂ ಅವನ ಉತ್ತರಾಧಿಕಾರಿಗಳಿಗೆ ಈ ಶೀರ್ಷಿಕೆ ಅನ್ವಯವಾಗುತ್ತಿದ್ದುದು ನಮಗೆ ಕಂಡು ಬರುತ್ತದೆ. ಇದು ದೇವರಾದ ಯಾವ್ಹೆ ಹಾಗೂ ಅರಸನ ಅನ್ಯೋನ್ಯ ಸಂಬಂಧವನ್ನು ಸೂಚಿಸುತ್ತದೆ. (೨ ಸಮು ೭:೧೪) ಯೇಸುವಿನ ಸ್ನಾನದೀಕ್ಷೆಯ ಸಮಯದಲ್ಲಿ (ಮಾರ್ಕ೧:೧೧), ಹಾಗೂ ರೂಪಾಂತರದ ಸಮಯದಲ್ಲಿ (ಮಾರ್ಕ ೯:೭) ಪಿತ ದೇವರು ಅವರನ್ನು ತನ್ನ ಪುತ್ರನೆಂದು ಘೋಷಿಸಿದರು.

ಕಾಫಮನ್ ಒ ಇವರ ಗೀತೆಗಳ ವೈಶಿಷ್ಟ್ಯತೆಗಳು: ಯೇಸುವಿನ ಮಹತ್ಕಾರ್ಯಗಳಲ್ಲಿ ಯೇಸುವು ಸಮಾಜದಲ್ಲಿ ನಿಕೃಷ್ಟರಾಗಿದ್ದವರಿಗೆ ಸ್ಥಾನವನ್ನು ಒದಗಿಸಿಕೊಟ್ಟಿದ್ದು ಪ್ರಮುಖವಾಗಿದೆ. ಕುರುಡರಿಗೆ ಕಣ್ಣು, ಕುಂಟರಿಗೆ ಕಾಲು, ರೋಗಿಗಳಿಗೆ ಆರೋಗ್ಯವವನ್ನು ನೀಡಿ ಅವರನ್ನು ಸಮಾಜದಲ್ಲಿ ಗುರುತಿಸುವಂತೆ ಮಾಡಿದರು. ಗೀತಗಾರನಿಗೆ ಯೇಸುವಿನಲ್ಲಿ ನಂಬಿಕೆ ವ್ಯಕ್ತಪಡಿಸಲು ಕಾರಣ ಆತ ಮಾಡಿದಂತಹ ಅದ್ಭುತ ಕಾರ್ಯಗಳು ಆಗಿವೆ. ಆದ್ದರಿಂದ ಯೇಸುವನ್ನು 'ದೇವರ ಪುತ್ರ', 'ನೀತಿ ರಾಜ' ಎಂಬ ಬಿರುದುಗಳಿಂದ ಆತನನ್ನು ಕೊಂಡಾಡಿದ್ದಾನೆ. ಸಮಾಜದಲ್ಲಿ ಮಾನಸಿಕ, ಶಾರೀರಿಕ, ಆಧ್ಯಾತ್ಮಿಕ ನೋವು, ದು:ಖವನ್ನು ಅನುಭವಿಸಿ ಬಾಳುವ ಜನತೆಗೆ ಗೀತೆಯು ಪ್ರೇರಣೆ, ಸಾಂತ್ವನ ನೀಡುವ ವಿಶಿಷ್ಟ ಶಕ್ತಿಯನ್ನು ಹೊಂದಿದೆ.

ಗೀತೆಗಳು ಗದ್ಯಮಯವಾಗಿದ್ದರೂ ಅರ್ಥ ಪ್ರಾಧಾನ್ಯತೆಯನ್ನು ಹೊಂದಿದೆ.

೫.೩.೧೦ ರಿಷ್ಚ. ಎಚ್ – Rich. H

ಹೆರ್ಮನ್ ರಿಷ್ ಅವರು ೧೮೬೩ ರಲ್ಲಿ ಜರ್ಮನಿಯ ಗಾಗ್ರೆ ವೇಲರ್ ಎಂಬ ಗ್ರಾಮದಲ್ಲಿ ಜನಿಸಿದರು. ಹೈಸ್ಕೂಲ್ ಶಿಕ್ಷಣದ ನಂತರ ೧೮೮೫ರಲ್ಲಿ ಪಲಟಿನೇಟ್ ಪ್ರೊಟೆಸ್ಟಂಟ್ ಸಭೆಯಲ್ಲಿ ಸೇವೆ ಪ್ರಾರಂಭಿಸಿದರು. ೧೮೮೮ ಡಿಸೆಂಬರ್‌ನಲ್ಲಿ ಭಾರತಕ್ಕೆ ಆಗಮಿಸಿದರು. ಜರ್ಮನಿಯ ದೊಡ್ಡ ಮನೆತನಕ್ಕೆ ಸೇರಿದವರು. ತಂದೆಯು ಗೌರವದ ಹುದ್ದೆಯಲ್ಲಿದ್ದರು. ಇವರೂ ಇತರ ಮೂವರು ಸಹೋದರರೂ ಸರಕಾರೀ ಕಾಲೇಜಿನಲ್ಲಿ ಕಲಿತು ದೈವ ಜ್ಞಾನ ಶಾಸ್ತ್ರವನ್ನು ಅಭ್ಯಾಸ ಮಾಡಿ ಸ್ವದೇಶದಲ್ಲಿಯೇ ಬೋಧಕೋದ್ಯೋಗವನ್ನು ಪಡೆಯಬೇಕೆಂದಿದ್ದರು. ಆದರೆ ವಿರ್ಲಾಂಗೆನ್ ಮತ್ತ ಉತ್ರೆಖ್ಟೆನ ವಿಶ್ವವಿದ್ಯಾಲಯದಲ್ಲಿ ಅಭ್ಯಾಸವನ್ನು ತೀರಿಸಿದ ಬಳಿಕ ಇಡೀ ಮನುಕುಲದ ರಕ್ಷಣೆಗಾಗಿ ದೇವರು ಕಳುಹಿಸಿಕೊಟ್ಟರು. ಬೇಗನೇ ಕನ್ನಡ ಕಲಿತು ಸುವಾರ್ತೆ ಸಾರಬೇಕೆಂದು ಬಸ್ರೂರಿಗೆ ೩–೪ ಮೈಲು

ದೂರವಿದ್ದ ಕೈಲ್ ಕೆರೆಯಲ್ಲಿ ಆ ಕಾಲದಲ್ಲೆ ಕ್ರೈಸ್ತರಾಗಿದ್ದ ಬ್ರಾಹ್ಮಣರ ಬಳಿ ಹೋಗಿ ಅಲ್ಲಿಯೇ ಕೆಲಕಾಲ ವಾಸವಾಗಿದ್ದರು. ಆ ದಿನಗಳಲ್ಲೇ ಅವರ ಸ್ವಾರ್ಥರಹಿತ ದೀನಶಾಂತ ಸ್ವಭಾವ ಪ್ರಕಟವಾಗಿತ್ತು. ಮರುವರ್ಷವೇ ಬೆಟಗೇರಿಗೆ ವರ್ಗವಾಗಿ ಶಾಗೋಟಿ ಸಭೆಯನ್ನು ನೋಡಿಕೊಳ್ಳುತ್ತಿದ್ದು ಸುವಾರ್ತಾ ಪ್ರಸರಣ ಕಾರ್ಯವನ್ನು ಮಾಡುತ್ತಿದ್ದರು. ಭಾರತಕ್ಕೆ ಬಂದ ೨ ವರ್ಷಗಳ ಬಳಿಕ ವಿವಾಹವಾದರು. ೧೮೯೪ ರಿಂದ ಬೆಟಗೇರಿಯಲ್ಲಿದ್ದ ವೇದ ಮಠ ಮಧ್ಯಮ ಶಾಲೆಗಳ ಪ್ರಾಂಶುಪಾಲರಾಗಿ ಜಿಲ್ಲಾ ಶಾಲೆಗಳ ಇನ್ಸ್‌ಪೆಕ್ಟರ್‌ರಾಗಿ, ಶಾಗೋಟಿ ಸಭೆಯ ಹಿರಿಯ ಬೋಧಕರಾಗಿ ಸೇವೆ ಸಲ್ಲಿಸುತ್ತಿದ್ದರು. ೧೮೯೬ ರಲ್ಲಿ ಮೊದಲನೇ ಬಾರಿ ಸ್ವದೇಶಕ್ಕೆ ತೆರಳಿದರು. ೨ ವರ್ಷಗಳ ಬಳಿಕ ಹೊನ್ನಾವರಕ್ಕೆ ಬಂದು ಸಭಾಪಾಲನೆ, ಸುವಾರ್ತಾ ಪ್ರಸರಣದಲ್ಲಿ ನಿರತರಾಗಿದ್ದರು. ೧೯೦೪ ರಲ್ಲಿ ತಿರುಗಿ ಬೆಟಗೇರಿಗೆ ವರ್ಗಾವಣೆಯಾಗಿ ಜಿಲ್ಲಾ ಸಮಿತಿಯ ಅಧ್ಯಕ್ಷ ಅದರೊಂದಿಗೆ ಸಭಾ ಪಾಲನೆ ಅನಾಥಾಲಯದ ಮೇಲ್ವಿಚಾರಣೆಯ ಕೆಲಸ ವಹಿಸಿಕೊಂಡರು. ೧೯೦೬ರಲ್ಲಿ ೨ನೇ ಬಾರಿ ಸ್ವದೇಶಕ್ಕೆ ಮರಳಿ ೨ ವರ್ಷಗಳ ಬಳಿಕ ಪುನಃ ಬಂದು ಮಂಗಳೂರಿನಲ್ಲಿ ಇದ್ದು, ಇಡೀ ಮಿಶನಿನ ಅಧ್ಯಕ್ಷರಾಗಿದ್ದರು. ಸಾಪ್ತಾಯಿಕ 'ಸತ್ಯದೀಪಿಕೆ'ದ ಸಂಪಾದಕ, ವೇದ ವಿದ್ಯಾಲಯದ ಪ್ರಾಚಾರ್ಯ, ಮಂಗಳೂರು ನಗರದಲ್ಲಿ ಸುವಾರ್ತಾ ಪ್ರಸರಣ, ಸತ್ಯವೇದದ ಪರಿಷ್ಕರಣಾ ಕಾರ್ಯದ ನಿಮಿತ್ತ ಕೇತಿಗೆ ಹೋಗಬೇಕಾಯಿತು. ೧೯೧೪ರಲ್ಲಿ ಮೊದಲನೇ ಜಾಗತಿಕ ಯುದ್ಧವು ಪ್ರಾರಂಭವಾಗುವ ತನಕ ಸತ್ಯವೇದ ಕನ್ನಡ ಭಾಷಾಂತರವನ್ನು ತಿದ್ದುವ ಕೆಲಸದಲ್ಲಿ ಸೇರಿದಲ್ಲದೆ ಕೇತಿಯ ಸಭೆಯನ್ನು ಅನಾಥಾಲಯವನ್ನೂ ಇತರ ಶಾಲೆಗಳನ್ನೂ ನೋಡಿಕೊಳ್ಳುತ್ತಿದ್ದರು. ಮಿಶನ್ ಅಧ್ಯಕ್ಷ ಸ್ಥಾನವನ್ನು ಘನ. ಎ. ಶೋಸ್ಸರ್‌ಗೆ ನೀಡಿ ಕನ್ನಡ ಬೈಬಲ್ ಭಾಷಾಂತರದ ಮುಖ್ಯ ಪರಿಷ್ಕಾರಕರಾದರು. ಯುದ್ಧ ಪ್ರಾರಂಭಗೊಂಡಾಗ ಸರಕಾರವು ಇವರನ್ನು ಕೊಡೈಕೆನಾಲಿಗೆ ಕಳುಹಿಸಿ ಅಲ್ಲಿಂದ ಅಹ್ಮದ್‌ನಗರದ ಬಂದೀವಾಸಕ್ಕೆ ಕಳುಹಿಸಲ್ಪಟ್ಟು ಅಲ್ಲಿ ಸಭಾ ಬೋಧಕ ಸ್ಥಾನವನ್ನು ವಹಿಸಿಕೊಂಡರು. ಸ್ವದೇಶದಲ್ಲಿ ದೊಡ್ಡ ಉದ್ಯೋಗದಲ್ಲಿದ್ದು ತನ್ನ ಯೋಗ್ಯತೆ ಮತ್ತು ಅನುಭವಗಳಿಂದಾಗಿ ಇನ್ನೂ ಮೇಲೇರಬಹುದಾಗಿದ್ದರೂ ಯುದ್ಧ ಮುಗಿದ ನಂತರ ಪುನಃ ಧಾರವಾಡಕ್ಕೆ ಬಂದು ೭ ತಿಂಗಳ ಕಾಲ ಎಡಬಿಡದೆ ಬಹು ಪ್ರಯಾಸಪಟ್ಟು ಸೇವೆಗೈದರು. ಕೆಲವೆಡೆ ಸಭೆಗಳ ಆತ್ಮೀಯ ಜೀವವನ್ನು ಕೆಡಿಸುವಂತಹ ಪಕ್ಷಬೇಧಗಳಿದ್ದರೂ ದೇವರ ಕೃಪೆಯಿಂದ ಉತ್ತಮ ದಿನಗಳು ಬಂದಾವು ಎಂಬ ನಿರೀಕ್ಷೆಯಿಂದ ತಾನು ಮಾಡಬಹುದಾದದ್ದೆಲ್ಲವನ್ನೂ ಪೂರ್ಣ ಹೃದಯದಿಂದಲೂ ಪೂರ್ಣ ಶಕ್ತಿಯಿಂದಲೂ, ಪೂರ್ಣ ಪ್ರೀತಿಯಿಂದಲೂ ನಡೆಸುತ್ತಿದ್ದರು. ಆದರೆ ಆತ್ಮನಿಗೆ ಮನಸ್ಸಿದ್ದು ಶ್ರಮೆಪಟ್ಟು ಸಾಧಿಸುತ್ತಿದ್ದ ಸೇವೆಯ ಒತ್ತಡವನ್ನು ಅವರ ಬಲಹೀನ ದೇಹವು ತಾಳಲಾರದ್ದಾಗಿತ್ತು.

೨೯.೬.೧೯೨೮ ರಂದು ರಿಸ್ಚ ಬಲಹೀನತೆಗೊಳಗಾದರು. ಹೀಗಿದ್ದರೂ ತನಗೆ ನೇಮಕವಾಗಿದ್ದ ದಿವ್ಯ ಕಾರ್ಯವನ್ನು ತನಗೆ ಇದ್ದ ಕಡೇ ಶಕ್ತಿಯ ಮಟ್ಟಿಗೆ ಪ್ರಯೋಗಿಸಿ ಘನ ಉದ್ದೇಶವನ್ನು ನೆರವೇರಿಸಿದರು. ಅಂದು ಶುಕ್ರವಾರ ಈ ಕರ್ತವ್ಯವನ್ನು ನೆರವೇರಿಸಿದ ಬಳಿಕ ಅವರ ಪ್ರಿಯ ಪತ್ನಿಯವರು ಅವರನ್ನು ಮನೆಗೆ

ಒಯ್ದು ವಿಶ್ರಾಂತಿಗೊಳ್ಳುವಂತೆ ಮಾಡಿದರು. ರಿಸ್ಚ ವಿಷಮ ಜ್ವರಪೀಡಿತರಾಗಿದ್ದರು. ಕಡೇ ಗಳಿಗೆಯಲ್ಲಾದರೂ ಅವರು ಕೇಳುತ್ತಿದ್ದ ಪ್ರಶ್ನೆಗಳು ಮಿಶನ್ ಮತ್ತು ಸಭೆಗೆ ಸಂಬಂಧಿಸಿದವುಗಳಾಗಿದ್ದವು. ಮಿಶನ್‌ನ ಅಧ್ಯಕ್ಷರಾಗಿದ್ದ ಶೋಸ್ಸರ್ ತ್ವರೆಪಟ್ಟು ರಿಸ್ಚ ನಿಧನಗೊಳ್ಳುವ ಮೊದಲ ದಿನವೇ ಮಂಗಳೂರಿನಿಂದ ಬಂದಿದ್ದರು. ೧೬.೭.೧೯೨೮ ಸೋಮವಾರ ಪ್ರಾತಃಕಾಲ ೯.೩೦ ಗಂಟೆಗೆ ಧಾರವಾಡದಲ್ಲಿ ರಿಸ್ಚ ಸಮಾಧಾನದಿಂದ ದೈವಾಧೀನರಾದರು. ಸ್ವದೇಶದಲ್ಲೇ ದೊಡ್ಡ ಪದವಿಗೇರಬಹುದಾಗಿದ್ದರೂ ಅದನ್ನೆಲ್ಲಾ ತೊರೆದು ಭಾರತಕ್ಕೆ ಬಂದಿದ್ದ ಅವರ ಜನ್ಮ ಸಾರ್ಥಕ.

ಗೀತೆಗಳ ಅಧ್ಯಯನ: ರಿಸ್ಚರವರು ಬರೆದ ಗೀತೆಗಳೆಲ್ಲವೂ ಭಾಷಾಂತರ ಗೀತೆಗಳಾಗಿವೆ. ಒಟ್ಟು ೨೩ ಗೀತೆಗಳನ್ನು ಬರೆದಿದ್ದಾರೆ. ಎಲ್ಲ ಗೀತೆಗಳು ಭಾಷಾಂತರ ಗೀತೆಗಳಾಗಿವೆ. ಈ ಗೀತೆಗಳ ವರ್ಗೀಕರಣ ಇಂತಿದೆ.

ಸಭೋತ್ಸವ	೦೬
ಕ್ರೈಸ್ತ ಸಭಾಚಾರ ಕೃಪಾಕರಣ	೦೫
ರಕ್ಷಣಾ ಮಾರ್ಗ	೦೧
ಕ್ರೈಸ್ತ ಮನಶ್ಶಾಂತಿ	೦೧
ವಿಶೇಷಕಾಲಗಳಿಗೆ ತಕ್ಕ ಗೀತೆಗಳು–	೧೦
ಒಟ್ಟು	೨೩ ಗೀತೆಗಳು

ಬೈಬಲ್: ಕೀರ್ತನೆ ೧೩೦ ನ್ನು ಆಧರಿಸಿ ರಚಿಸಿದ ಗೀತೆಯೆ 'ಪಾಪಿಷ್ಟ ನಾನು ತಾಪದ' ಎಂಬುದು. ದೇವರಲ್ಲಿ ನಿರೀಕ್ಷೆಯನ್ನಿಟ್ಟಿರುವ ತನ್ನನ್ನು ಕಾಪಾಡಬೇಕೆಂದು ಭಕ್ತ ಬೇಡುವ ಬಗೆ ಈ ಗೀತೆಯಲ್ಲಿದೆ. ಇದು Aus tiefer not Schrei ich zu dir ಎಂಬ ಗೀತೆಯ ಭಾಷಾಂತರವಾಗಿದೆ.

ನೀನೆನ್ನ ಒಂದೇ ಕೋರಿಕೆ
ನನ್ನಲ್ಲಿ ಪುಣ್ಯವಿಲ್ಲ;
ನಾ ನಿನ್ನ ದಾರಿ ನೋಡುವೆ
ನೀನೆನ್ನ ಬಿಡೋದಿಲ್ಲ
ನೀ ನಿತ್ತ ಮೂಲ್ಯ ವಾಕ್ಯವು
ನಿರೀಕ್ಷೆಗಾಯ್ತಾಧಾರವು
ಅದೆಂದೂ ತಪ್ಪೋದಿಲ್ಲ.

ಕನ್ನಡ ಗೀತೆಗಳು, ಗೀತೆ–೨೧೯

ಮಾನವ ಇಹದಲ್ಲಿ ಯಾರ ಸಹಾಯಕ್ಕಾಗಿ ಹಾತೊರೆದರೂ ಬಾಳಿನ ಸದುದ್ದೇಶ ಈಡೇರಬೇಕಾದರೆ ಆತ ಭಗವಂತನ ಸಹಾಯವನ್ನೇ ಮೊರೆಹೋಗಬೇಕು. ಆತನ ಮಾತುಗಳು ಬಾಳಿಗೆ ಆಧಾರವಾಗಿದೆ ಎಂಬ

ಭಾವ ವ್ಯಕ್ತವಾಗಿದೆ ಗೀತೆಯಲ್ಲಿ ದೇವರಲ್ಲಿ ಸಂಪೂರ್ಣ ಭರವಸೆಯಿಟ್ಟು ತನ್ನೆಲ್ಲ ಕೋರಿಕೆಗಳನ್ನು ಆತನಲ್ಲಿ ನಿವೇದಿಸಿಕೊಳ್ಳುವಂತೆ ಪ್ರೇರೇಪಿಸುತ್ತಿದೆ ಈ ಗೀತೆ. ದೇವರಲ್ಲಿ ವಿಶ್ವಾಸವನ್ನು ಹೆಚ್ಚಿಸುವಲ್ಲಿ ಈ ಗೀತೆ ಯಶಸ್ವಿಯಾಗಿದೆ.

ಆತ್ಮನಿವೇದನೆ: ಅನ್ನ ಪಾನೀಯಗಳನ್ನು ನಿರಂತರವೂ ತಮಗೆ ನೀಡುತ್ತಿರುವ ಯೇಸು ತಮ್ಮ ದೇಹವನ್ನು ಪೋಷಿಸಬೇಕೆಂದು ಬೇಡುವ ಗೀತೆಯೆ 'ಭೋಜನಕ್ಕೆ ಕೂಡ್ರುತ್ತೇವೆ' ಇದು Herr wir gehen zu dem Essen ಎಂಬ ಗೀತೆಯ ಭಾಷಾಂತರವಾಗಿದೆ.

ಭೋಜನಕ್ಕೆ ಕೂಡ್ರುತ್ತೇವೆ
ಪೂಜಿಸಿ ಕೈಯೊಡ್ಡುತ್ತೇವೆ
ಪೋಷಿಸೀಗ ದೇಹವನ್ನು
ತೋಷ ಪಡಿ ಸಾತ್ಮವನ್ನು
ಸತ್ಯ ರೊಟ್ಟಿ ನೀನೇ, ಯೇಸು
ನಿತ್ಯ ನೀನೇ ಇರಲೇಸು
ನದಿ ಸೆಮ್ಮ ನ್ನಿಹದಲ್ಲಿ
ಬಿಡಿಸನ್ನ ಸ್ವರ್ಗದಲ್ಲಿ!

ಕನ್ನಡ ಗೀತೆಗಳು, ಗೀತೆ–೩೪೧

ಭೋಜನದ ಸಮಯದಲ್ಲಿ ಹಾಡುವ ಮತ್ತೊಂದು ಗೀತೆ ಇಂತಿದೆ.

ದೇವಾ ನೀ ನೂಟ ಕೊಟ್ಟಿದ್ದೀ;
ಕೃತಜ್ಞ ಸ್ತೋತ್ರವಾಗಲಿ!
ಇನ್ನೂ ನೀ ದಿನನಿತ್ಯವು
ನಮ್ಮನ್ನು ರಕ್ಷಿಸುಣ್ಣಿಸು!

ಕನ್ನಡ ಗೀತೆಗಳು, ಗೀತೆ–೩೪೨

ಕೆಡುಕಿನಿಂದ ದುಷ್ಟ ಶಕ್ತಿಯಿಂದ ತಮ್ಮನ್ನು ಕಾಪಾಡಬೇಕೆಂದು ಬೇಡುವ ಗೀತೆಯೇ 'ರಕ್ಷಕನೇ ಚೈತನ್ಯದಾತ ಕರ್ತ' ಇದು Lord of our life ಎಂಬ ಗೀತೆಯ ಭಾಷಾಂತರವಾಗಿದೆ.

ನಾವೆಯ ಸುತ್ತು ತೆರೆ ಏಳುವಾಗ
ಮಂದೆಯ ನುಂಗ ತೋಳ ಬರುವಾಗ
ದುರ್ವೈರಿ ಅಗ್ನಿಬಾಣ ಹೂಡುವಾಗ
ರಕ್ಷಿಸೆಮ್ಮನು!

ಕನ್ನಡ ಗೀತೆಗಳು ಗೀತೆ-೩೬೨

ಬದುಕಿನ ದುಸ್ಥಿತಿಯನ್ನು ವರ್ಣಿಸಲು ಗೀತಗಾರ ಬಳಸಿರುವ ಉದಾಹರಣೆಗಳೆಂದರೆ ತೆರೆ, ತೋಳ, ಅಗ್ನಿಬಾಣ ಇವು ಒಬ್ಬ ವ್ಯಕ್ತಿಯನ್ನು ದೈಹಿಕವಾಗಿ ಮಾನಸಿಕವಾಗಿ ತಲ್ಲಣಗೊಳಿಸುವ, ಸಂಪೂರ್ಣ ನಾಶ ಮಾಡುವ ಸಂಗತಿಗಳಾಗಿವೆ. ಇವುಗಳಿಂದ ರಕ್ಷಣೆ ದೊರೆಯುವುದು ದೇವರಿಂದಲೇ ಎಂಬ ಭಾವ ವ್ಯಕ್ತವಾಗಿದೆ. ಗೀತಗಾರನ ಕವಿತ್ವ ಶಕ್ತಿ ಈ ಗೀತೆಯಲ್ಲಿ ಕಂಡುಬಂದಿದೆ. ಉತ್ತಮ ಕಾವ್ಯಗುಣದಿಂದ ಈ ಗೀತೆ ಕೂಡಿದೆ.

ಗೀತಗಾರ ತನ್ನ ಬದುಕು ಫಲವತ್ತಾದ, ಸರ್ವರಿಗೂ ಪ್ರಯೋಜನಕಾರಿಯಾಗುವ ಬದುಕಾಗಬೇಕೆಂದು ಬೇಡುವ ಗೀತೆಯೇ "ಸ್ವಾಮೀ ದರ್ಶನಾರ್ಥವಾಗಿ"[೧೧೨] ಎಂಬುದು. ಇದು Tut mir auf dic Schone pforte ಎಂಬ ಗೀತೆಯ ಭಾಷಾಂತರವಾಗಿದೆ.

ಪ್ರಾರ್ಥನೆ: ರಿಸ್ಚರವರು 'ರಾಷ್ಟ್ರಗೀತೆ' ಯನ್ನು ರಚಿಸಿರುವುದು ವಿಶಿಷ್ಟವಾಗಿದೆ. ನಿನ್ನ ಶ್ರೇಷ್ಠ ಚಿತ್ತ ನೆರವೇರಲಿ, ನ್ಯಾಯ, ನೀತಿ, ಶಾಂತಿ, ಪ್ರೀತಿ ಇವು ರಾಷ್ಟ್ರಕ್ಕೆ ಭೂಷಣ ದೇಶದಲ್ಲಿ ಸಮೃದ್ಧಿಯನ್ನು ದಯಪಾಲಿಸು ಎಂದು ಬೇಡಲಾಗಿದೆ.

ಜ್ಞಾನವುಳ್ಳ ಮಂತ್ರಿ ಸಭೆ
ಜಯಶಾಲಿ ಸೈನ್ಯವು
ನಂಬಿಗಸ್ತ ಪರಿಚಾರ
ಸ್ವಾಮಿನಿಷ್ಠ ಪ್ರಭೆಯು
ರಾಜ್ಯದಲ್ಲಿ ಭದ್ರತೆ
ಕ್ಷೇಮ ರಾಷ್ಟ್ರಪತಿಗೆ
ಇರುವಂತೆ ದಯಮಾಡು
ರಾಷ್ಟ್ರಪತಿಗಾಶೀರ್ವಾದ

ಕನ್ನಡ ಗೀತೆಗಳು, ಗೀತೆ-೩೬೯

ಪ್ರಜೆಗಳಲ್ಲಿ ರಾಷ್ಟ್ರಕ್ಕಾಗಿ, ಅಧಿಕಾರಿಗಳಿಗಾಗಿ ಪ್ರಾರ್ಥಿಸಬೇಕೆಂಬ ಮನೋಭಾವ ಮೂಡಿಸುವಲ್ಲಿ ಗೀತೆ ಸಹಾಯಕವಾಗಿದೆ. ಮಿಶನರಿಗಳು ಕೇವಲ ವ್ಯಕ್ತಿಯ ಆಧ್ಯಾತ್ಮಿಕ ಚಿಂತನೆಯನ್ನು ಮಾತ್ರ ಹೊಂದಿರದೆ ಸಮಾಜದ ಅಭಿವೃದ್ಧಿಗಾಗಿ, ಉತ್ತಮ ಆಡಳಿತಕ್ಕಾಗಿಯೂ ಪ್ರಾರ್ಥಿಸುವ ಬಗೆಯನ್ನು ಗೀತೆಯಲ್ಲಿ ತಂದಿದ್ದಾರೆ. ೧೯೨೯ರ ಗೀತೆಯಲ್ಲಿ ಅಂದರೆ ಸ್ವತಂತ್ರ ಪೂರ್ವದಲ್ಲಿ ಈ ಗೀತೆಯಲ್ಲಿ ರಾಷ್ಟ್ರಪತಿಗೆ ಬದಲಾಗಿ ರಾಜರಾಣಿ ಎಂದು ಪ್ರಯೋಗಿಸಿದ್ದಾರೆ. ಕಾಲದಿಂದ ಕಾಲಕ್ಕೆ ಸಂದರ್ಭಕ್ಕನುಗುಣವಾಗಿ ಗೀತೆಯ ವಿಷಯಗಳಲ್ಲಿ ಬದಲಾವಣೆ ಮೂಡಿರುವುದನ್ನು ಕಾಣುತ್ತೇವೆ.

ಹಬ್ಬಗಳು: ಯೇಸುವಿನ ಜನನದ ಕುರಿತು ರಿಸ್ಟ ರಚಿಸಿದ ಗೀತೆ 'ಮಂಗಳ ಶ್ರೀ ರಾತ್ರಿ' ಎಂಬುದು. ಇದು Stille nacht, heilige nacht ಎಂಬ ಗೀತೆಯ ಭಾಷಾಂತರ. ಇಂದೂ ಈ ಗೀತೆಯು ಕ್ರಿಸ್ತ ಜಯಂತಿಯಂದು ಹಾಡುವ ಗೀತೆಯಾಗಿದೆ. ಆಂಗ್ಲ ಭಾಷೆಯಲ್ಲಿ ಈ ಗೀತೆಯನ್ನು ಜೋಸೆ ಮೋಹರ್ ಎಂಬ ಕ್ರೈಸ್ತ ಗುರು ರಚಿಸಿದರು.

ಮಂಗಳ ಶ್ರೀ ರಾತ್ರಿಯಲಿ	ಮಂಗಳ ಶ್ರಿ ರಾತ್ರಿಯಲಿ
ಬೇತ್ಲೆಹೇಮ್ ಛತ್ರದಿ	ದೂತರು ಹೊಲದಿ
ವರ ಕನ್ಯೇಲಿ ಜನಿಸಿದ	ಹಿಂಡು ಕಾಯುವ ಕುರ್ಬರಿಗೆ
ದೇವ ಪುತ್ರನಂ ವಂದಿಸುವ	ತಂದ ವಾರ್ತೆಯು ಶ್ರೇಷ್ಟವದೆ
ವಂದನೆ ರಕ್ಷಕನೇ!	ಬಂದನು ರಕ್ಷಕನೇ!

ಕನ್ನಡ ಗೀತೆಗಳು, ಗೀತೆ–೫೭

"ಆಸ್ಟ್ರೀಯ ದೇಶದ ಒಂದಾನೊಂದು ಕಣಿವೆಯಲ್ಲಿ ಜೋಸೆಫ ಮೋಹರ್ ಎಂಬ ಒಬ್ಬ ಕ್ರೈಸ್ತ ಗುರುವು ವಾಸಮಾಡಿಕೊಂಡಿದ್ದನು. ಈತನು ಅದೇ ದೇಶದ ಸಾಲ್ಸಬರ್ಗ್ ಎಂಬೂರಿನಲ್ಲಿ ೧೭೯೨ ಡಿಸೆಂಬರ್ ೧೧ರಲ್ಲಿ ಜನಿಸಿದನು. ತನ್ನ ೨೫ನೇ ಪ್ರಾಯದಲ್ಲಿ ಬೋಧಕೋದ್ಯೋಗಕ್ಕೆ ಹಸ್ತಾರ್ಪಣೆ ಹೊಂದಿದ್ದು ಕಾರಣಾಂತರಗಳಿಂದ ಊರನ್ನು ಬಿಟ್ಟು, ಕಾಡಿನಲ್ಲಿ ಸನ್ಯಾಸಿಯಾಗಿ ಜೀವಿಸುತ್ತಿದ್ದನು. ಒಂದಾನೊಂದು ಕ್ರೈಸ್ತ ಜಯಂತಿಯ ಹಿಂದಿನ ಸಂಜೆಯಲ್ಲಿ ಲೋಕ ಪ್ರಸಿದ್ದಿಯಾದ ಈ ಸಂಗಿತವನ್ನು ರಚಿಸಿ, ಇದಕ್ಕೆ ತಕ್ಕ ರಾಗವನ್ನು ಕಟ್ಟುವದಕ್ಕಾಗಿ ಒಂದು ಹಳ್ಳಿಯಲ್ಲಿ ಉಪಾಧ್ಯಾಯನೂ, ದೇವಾಲಯದ ರಾಗ ಮಾಲಿಕೆಯನ್ನು ಬಾರಿಸುವವನೂ ಆಗಿದ್ದ ತನ್ನ ಸ್ನೇಹಿತನಾದ ಪ್ರಾನ್ಸ್ ಗ್ರೂಬರ್ (Franz Gurber) ಎಂಬಾತನ ಬಳಿಗೆ ಹೋದನು.

ಅಂದಿನಿಂದ ಬಿರುಗಾಳಿ ಮಳೆಗಳು ಬಹಳ ಎದ್ದು, ರಭಸವಾಗಿ ಮನೆಗಳ ಮೇಲೂ ಕಿಟಕಿಗಳ ಮೇಲೂ ಬಡಿಯುತ್ತಿದ್ದವು. ದೊಡ್ಡದೊಡ್ಡ ಮರಗಳು ಹಿಂದಕ್ಕೂ ಮುಂದಕ್ಕೂ ತಾಗಾಡುತ್ತಿದ್ದವು. ಮರದ ಎಲೆಗಳು ಗಾಳಿಗೆ ಸಿಕ್ಕಾಪಟ್ಟೆ ಹೊಡಕೊಂಡು ಹೋಗುತ್ತಿದ್ದವು. ಇಂತಹ ಅಲ್ಲಕಲ್ಲೋಲವಾದ ವೇಳೆಯಲ್ಲಿ ತನ್ನ ಮನೆಯಲ್ಲಿ ಅಲಂಕೃತವಾದ ಕೊಠಡಿಯಲ್ಲಿ, ಪ್ರಾನ್ಸ್ ಗ್ರೂಬರ್‌ನು ಎರಡು ಕೈಗಳನ್ನು ತನ್ನ ಕೆನ್ನೆಗಳ ಮೇಲಿಟ್ಟುಕೊಂಡು ಚಿಂತಾಕ್ರಾಂತನಾಗಿ ಕುಳಿತಿದ್ದಾನೆ. ಕಾರಣವೇನು? ಅಗೋ ತನ್ನ ಸುಂದರಿಯಾದ ಮಡದಿಯು ಮರಣದ ಹಾಸಿಗೆಯಲ್ಲಿದ್ದಾಳೆ. ನಾನಾ ಚಿಂತೆಗಳು ಆತನ ಹೃದಯವೆಂಬ ಬಾಗಿಲಿಗೆ ಬಿರುಗಾಳಿಯೋಪಾದಿಯಲ್ಲಿ ಬಡಿಯುತ್ತಿವೆ. ಕಣ್ಣೀರು ಕೂಡ ಅದೇ ಸಮಯದಲ್ಲಿ ಮಳೆಯೊಂದಿಗೆ ಸುರಿಯುತ್ತಿದೆ.

ಇದ್ದಕ್ಕಿದ್ದ ಹಾಗೆ ಬಾಗಿಲು ತಟ್ಟುವ ಶಬ್ದ. ಪ್ರಾನ್ಜ್ ಎದ್ದು ಹೋಗಿ ಬಾಗಿಲನ್ನು ತೆರೆದಾಗ ಅಗೋ ಆತನ ಸ್ನೇಹಿತನಾದ ಜೋಸೆಫ್ ಮೋಹರ್ ಆತನು ಮನೆಯೊಳಗೆ ಬಂದಕೂಡಲೆ ಹರ್ಷದಿಂದ ಗ್ರೂಬರ್‌ನನ್ನು ವಂದಿಸಿ, ಜೇಬಿನಿಂದ ಒಂದು ಕಾಗದದ ಚೂರನ್ನು ಎಳೆದು ಗ್ರೂಬರ್ ಕೈಗೆ ಕೊಟ್ಟನು. ಗ್ರೂಬರ್‌ನು ಅದನ್ನು ನೋಡುತ್ತಿರುವಾಗ ಜೋಸೆಫ್ ಮೋಹರ್ "ಫ್ರಾನ್ಜ್ ಇದು ಒಂದು ಚಿಕ್ಕ ಕಾವ್ಯ, ನಮ್ಮ ದೇವಾಲಯದಲ್ಲಿ ಹಾಡಲು ಹೊಸದಾಗಿ ರಚಿತವಾದ ಕ್ರಿಸ್ತಜಯಂತಿಯ ಗೀತೆ. ಇದಕ್ಕೆ ತಕ್ಕ ರಾಗವನ್ನು ಒದಗಿಸುವುದು ನಿನ್ನ ಕೆಲಸ" ಎಂದು ಹೇಳಿದನು.

ಫ್ರಾನ್ಜ್ ತಲೆಯಾಡಿಸಿ ಆ ಕಾಗದವನ್ನು ಮೇಜಿನ ಮೇಲಿಟ್ಟು, ಸ್ವಲ್ಪ ಮೌನದಿಂದಿದ್ದು, "ಜೋಸೆಫ್! ಈಗ ನಾನು ಏನನ್ನೂ ಮಾಡಲಾರೆ. ಒಂದು ವೇಳೆ ಯಾವುದಾದರೂ ಒಂದು ರಾಗ ನನ್ನ ನೆನಪಿಗೆ ಬರುವದಾದರೂ ಅದು ದು:ಖದ ರಾಗವೇ ಆಗಿರುವುದು" ಎಂದು ಗದ್ಗದ ಸ್ವರದಿಂದ ಹೇಳಿದನು.

ಆಗ ಜೋಸೆಫ್ 'ಫ್ರಾನ್ಜ್ ! ಏನಾಯಿತು? ಈ ದು:ಖ ಏಕೆ' ಎಂದು ಕೇಳಲು, ಫ್ರಾನ್ಜ್‌ನು ತನ್ನ ಪ್ರಿಯ ಪತ್ನಿಯ ವಿಷಯ ತಿಳಿಸಿದನು. ಇದಾದ ಕೆಲವು ದಿನಗಳಲ್ಲಿಯೇ ಫ್ರಾನ್ಜ್‌ನ ಪತ್ನಿಯು ತೀರಿಹೋದಳು. ತನ್ನ ನಾಲ್ಕು ವರುಷದ ಮಗಳು ಆತನ ಆದರಣೆಯ ಮುದ್ದುಮಗಳಾಗಿದ್ದಳು.

ಆ ವರುಷದ ಕ್ರಿಸ್ತ ಜಯಂತಿಯ ಹಿಂದಿನ ದಿನ ಫ್ರಾನ್ಜ್ ಒಬ್ಬನೇ ಚಿಂತಾಕ್ರಾಂತನಾಗಿ ಏನನ್ನೋ ಯೋಚಿಸುತ್ತಾ ತನ್ನ ಕೊಠಡಿಯಲ್ಲಿ ಕುಳಿತಿದ್ದಾನೆ. ಆತನು ರಾಗಮಾಲಿಕೆಯನ್ನು ಬಾರಿಸುವುದರಲ್ಲಿ ಗಟ್ಟಿಗನೇ ಸರಿ. ಆದರೆ ಈಗ ಆತನಿಗೆ ಯಾವ ಗಾನವೂ ಬೇಕಾಗಿದ್ದಿಲ್ಲ. ಅಗೋ ದೇವಾಲಯದ ಗಂಟೆಯನ್ನು ಬಾರಿಸುವ ಶಬ್ದ ಕೇಳಿಸಿತು. ತನ್ನ ಮುದ್ದು ಮಗಳು ಓಡಿ ಬಂದು, ತಂದೆಗೆ ಮುದ್ದಿಟ್ಟು 'ಮೇರಿ ಕ್ರಿಸ್ಮಸ್' ಎಂದು ಹೇಳಿ ಮನೆಯಲ್ಲಿ ಫ್ರಾನ್ಜ್‌ನ ಸ್ನೇಹಿತನು ಕೂಡಿ ಮಾಡಿದ ಈ ಪ್ರೀತಿಯ ಕಾರ್ಯವನ್ನು ಕಂಡು ಆನಂದಪಟ್ಟು, ಕೃತಜ್ಞತೆಯಿಂದ ವಂದಿಸಿದರು. ಕಣ್ಣೀರು ತೊಟ್ಟಿಕ್ಕುತ್ತಿದ್ದರೂ, ತನ್ನ ಮಗಳನ್ನು ಎತ್ತಿಕೊಂಡು, ಸ್ನೇಹಿತರೊಂದಿಗೆ ಸಂತೋಷಪಟ್ಟರು. ಅಲ್ಲಿಯೇ ಮೇಜಿನ ಮೇಲೆ ಇಡಲ್ಪಟ್ಟಿದ್ದ ಯೇಸುವಿನ ಮತ್ತು ಆತನ ತಂದೆ ತಾಯಿಗಳ ಚಿತ್ರವನ್ನು ನೋಡಿದಾಗ ಮೇಲಣ ಲೋಕಗಳಲ್ಲಿ ದೇವರಿಗೆ ಮಹಿಮೆ ಭೂಲೋಕದಲ್ಲಿ ಮನುಷ್ಯರೊಳಗೆ ಸಮಾಧಾನ ಎಂಬೀ ಮಾತುಗಳು ಆತನ ದೃಷ್ಟಿಗೆ ಬಿದ್ದವು.

ಆಗ ಆತನು ತನ್ನ ರಾಗಮಾಲಿಕೆಯ ಮುಂದೆ ಕುಳಿತು ಬಾರಿಸಲಿಕ್ಕೆ ತೊಡಗಿದಾಗ ಸೌಮ್ಯವಾದ ಈ ರಾಗವು ತಾನಾಗಿಯೇ ಜನಿಸಿತು. ಈಗ ನಾವು ಹಾಡುವ ಈ ರಾಗವೇ ಆ ದಿನದಲ್ಲಿ ಹುಟ್ಟಿದ್ದು. ಅಲ್ಲಿ ಕೂಡಿದ್ದವರೆಲ್ಲರೂ ಆ ರಾಗದಲ್ಲಿ ಜೋಸೆಫ್ ಮೋಹರ್ ಕಟ್ಟದ ಈ ಸಂಗೀತವನ್ನು ಮೊದಲನೇ ಬಾರಿ ಹಾಡಿದರು. ಬಹಳ ಇಂಪಾಗಿ ಇದ್ದಿತು. ಈಗಲೂ ಈ ಸಂಗೀತವನ್ನು ನಿಧಾನವಾಗಿ ರಾಗಕ್ಕೆ ತಕ್ಕಂತೆ ಹಾಡುವದಾದರೆ ಎಂಥವರನ್ನೂ ಆಕರ್ಷಿಸುವುದಾಗಿದೆ."[೧೧೩]

ಮೊದಲನೇ ಚರಣದಲ್ಲಿ ಪ್ರಪಂಚದ ಜನರೆಲ್ಲಾ ನಿದ್ರಿಸುತ್ತಿರುವ ರಾತ್ರಿ ವೇಳೆಯಲ್ಲಿ ಬೆತ್ಲೆಹೇಮಿನ ಛತ್ರದ ಗೋದಲಿಯಲ್ಲಿ ಪ್ರೀತಿಯುಳ್ಳ ತೇಜಸ್ಸಿನಿಂದ ಕೂಸಾದ ಯೇಸುವು ಸೌಮ್ಯವಾಗಿ ನಿದ್ರಿಸುತ್ತಿರುವಲ್ಲಿ

ಜೋಸೆಫನೂ ಮರಿಯಳೂ ಮಗುವನ್ನು ಕಾಯುತ್ತಾ ಎಚ್ಚರವಾಗಿದ್ದು ತನ್ನ ಭಕ್ತರನ್ನು ಕಾಯುತ್ತಾ ಇದ್ದಾನೆ. ದೇವಪುತ್ರನನ್ನು ವಂದಿಸುವಾ ಎನ್ನುತ್ತಾನೆ ಗೀತಗಾರ.

ಎರಡನೇ ಚರಣದಲ್ಲಿ ಮಂಗಳಕರವಾದ ರಾತ್ರಿಯಲ್ಲಿ ದೂತರು ಕಾಣಿಸಿಕೊಂಡು ಕುರ್ಬರಿಗೆ ರಕ್ಷಣಾವಾರ್ತೆಯನ್ನು ತಿಳಿಸಿದರು. ಇಂದೂ ಭಕ್ತರು, ಪಾಪಿಗಳು, ಇಂತಹ ದರ್ಶನವನ್ನು ಪಡೆಯುತ್ತಿದ್ದಾರೆ ಎಂಬ ಭಾವ ಇಲ್ಲಿದೆ.

ಮೂರನೇ ಚರಣದಲ್ಲಿ ಮಂಗಳ ರಾತ್ರಿಯಲ್ಲಿ ಚೇತನ ಮುಖದಲ್ಲಿ 'ಸುಪ್ರಸನ್ನತೆ ಶೋಭಿಸುವೆ' ಆದರೆ ಕ್ರಿಸ್ತ ಜಯಂತಿಯನ್ನು ಆಚರಿಸುವ ಆತನ ಜನರ ಮುಖದಲ್ಲಿ ಅಂತಹ ಪ್ರಕಾಶವು ಇರುವುದಿಲ್ಲ. ಬರೇ ಆಚರಣೆ. ಆತ್ಮದಲ್ಲಿ ನಿಜವಾದ ಆನಂದ ಇದ್ದರೆ ತಾನೆ ಅದು ಮುಖದಲ್ಲಿ ಕಾಣಿಸುವುದು! ಕಾರ್ಗತ್ತಲಿನಿಂದ ಕೂಡಿದ ಮಾನವ ಹೃದಯಗಳೆಂಬ ಗೊದಲಿಯಲ್ಲಿ ಕ್ರಿಸ್ತನೆಂಬ ಬೆಳ್ಳಿ ನಕ್ಷತ್ರವು ಉದಯಿಸಿದಾಗಲೆ ರಕ್ಷಣೆಯ ಬೆಳಕು ಪ್ರಕಾಶಿಸುವುದು. ಅಂಥವರಿಂದಲೇ ದೇವರಿಗೆ ಮಹಿಮೆ, ಭೂಲೋಕದಲ್ಲಿ ಸಮಾಧಾನ ಉಂಟಾಗುವುದು. 'ನೀತಿ ಸದ್ಗತಿ ಭ್ರಷ್ಟರಿಗೆ ಸ್ವಾಗತ ರಕ್ಷಕನೇ'.

ಯೇಸುವಿನ ಜನನಕ್ಕೆ ಸಂಬಂಧಿಸಿದಂತೆ ರಿಷ್‌ರವರ ಒಂದು ಸರಳ ಗೀತೆ 'ಇಂದು ಹರುಷ' ಎಂಬುದು. ಇದು O du frohliche, o du sellge ಎಂಬ ಗೀತೆಯ ಭಾಷಾಂತರವಾಗಿದೆ.

ಇಂದು ಹರುಷ!
ಕಂದ ಹುಟ್ಟಿದ;
ತಂದನೆಮಗೆ ರಕ್ಷಣೆ,
ಬಂದ ಆ ಕೂಸು
ಸುಂದರ ಯೇಸು
ವಂದನೀಯ ದೇವಪುತ್ರನೇ!

ಕನ್ನಡ ಗೀತೆಗಳು, ಗೀತೆ–೫೮

ಸರಳ ಪದಗಳು ಅರ್ಥ ಗ್ರಹಿಕೆಗೆ ಸಹಾಯಕವಾಗಿದೆ.

ಯೇಸುವಿನ ಪುನರುತ್ಥಾನಕ್ಕೆ ಸಂಬಂಧಿಸಿದಂತೆ ರಿಷ್ ಬರೆದಿರುವ ಚಿಕ್ಕದಾದ ಗೀತೆ "ಅನಂತ ಕಾಲ ಸ್ಥಾನ"[೧೧೪] ಇದು Ich bin durch Manche zelten ಎಂಬ ಗೀತೆಯ ಭಾಷಾಂತರವಾಗಿದೆ.

ಹೆರ್ಮನ್ ರಿಸ್ಚರವರ ಗೀತೆಗಳ ವೈಶಿಷ್ಟ್ಯತೆಗಳು: ರಿಸ್ಚರವರ ಗೀತೆಗಳೆಲ್ಲವೂ ಭಾಷಾಂತರ ಗೀತೆಗಳಾಗಿವೆ. ಇವರ ಗೀತೆಗಳು ಕ್ರೈಸ್ತ ಧಾರ್ಮಿಕ ಆಚರಣೆ, ಹಬ್ಬಗಳಿಗೆ ಮಾತ್ರ ಸೀಮಿತವಾಗಿರದೆ ಸಮಾಜದತ್ತ ಗಮನ ಹರಿಸಿ ಸಂಸ್ಕೃತಿಯನ್ನು ಗೌರವಿಸುವಂತೆ ರಚಿಸಿದ ಗೀತೆಗಳಾಗಿವೆ.

ಗೀತೆ ೩೬೨ ರಲ್ಲಿ ಬದುಕಿನ ದುಸ್ಥಿತಿಯನ್ನು ವರ್ಣಿಸಲು ಗೀತಗಾರ ಬಳಸಿರುವ ಉದಾಹರಣೆಗಳು ಕಷ್ಟದ ತೀವ್ರತೆಯನ್ನು ತಿಳಿಸುವುದಾಗಿದೆ. ತೆರೆ, ತೋಳ, ಅಗ್ನಿಬಾಣ ಬದುಕಿನ ವಿನಾಶವನ್ನು ಸೂಚಿಸುವ ಪದಗಳಾಗಿವೆ. ವಿನಾಶದಿಂದ ರಕ್ಷಣಾ ಮಾರ್ಗದಲ್ಲಿ ಚಲಿಸಲು ದೇವರ ಕೃಪೆ, ಸಹಾಯ ಅಗತ್ಯ ಎಂಬ ಸತ್ಯ ಸಂಗತಿ ಮಹಾಕರ್ಷವಾಗಿದೆ. ಕಷ್ಟಕಾರ್ಪಣ್ಯದ ಸ್ಥಿತಿಯಲ್ಲು ದೇವ ಸಹಾಯದ ಮೊರೆಹೋಗುವ ಬಗೆ ಸರ್ವರಲ್ಲು ಆಶಾಭಾವನೆ ಮೂಡಿಸಲು ಸಹಾಯಕವಾಗಿದೆ.

ರಿಸ್ಚ್ ಧರ್ಮವನ್ನು ನೋಡಿರುವ ಬಗೆ ವಿಶಿಷ್ಟವಾಗಿದೆ. ಉದಾ: ದೇವರಿಗೆ ಯಜ್ಞವಾಗಿ ಅರ್ಪಿತವಾಗಬೇಕಾದುದು ವಸ್ತುಗಳು ಎಂಬುದು ಎಲ್ಲರ ಸಹಜ ಮನೋಭಾವ. ಆದರೆ ಗೀತೆ ೩೨೬ಲ್ಲಿ ಕಂಡುಬರುವ ಅಂಶ ಹೊಸ ಹೊಳವನ್ನು ನೀಡುತ್ತದೆ. ದೇವರಿಗೆ ಅರ್ಪಿತವಾಗಬೇಕಾದವು ವಸ್ತುಗಳಲ್ಲ. ಪ್ರಾಣಿ ಪಕ್ಷಿಗಳಲ್ಲ ಬದಲಾಗಿ ನಮ್ಮ ಸ್ತುತಿ, ಪ್ರಾರ್ಥನೆಗಳು. ಒಳ್ಳೆಯ ಜೀವನದಲ್ಲಿ ಮಾತ್ರವೇ ಸ್ತುತಿ, ಪ್ರಾರ್ಥನೆಗಳು ಹೊರಹೊಮ್ಮಲು ಸಾಧ್ಯ. ಇಂತಹ ಬದುಕಷ್ಟೇ ನಾವು ದೇವರಿಗೆ ಯಜ್ಞವಾಗಿ ಅರ್ಪಿಸಬೇಕು.

ವ್ಯಕ್ತಿ ಸ್ವಾರ್ಥಿಯಾಗಬಾರದು. ತನ್ನ ಸ್ವಂತ ಕೆಲಸ ಕಾರ್ಯಗಳಿಗಾಗಿ ಮಾತ್ರ ಪ್ರಾರ್ಥಿಸದೆ ತಾನು ನೆಲಸಿರುವ ರಾಷ್ಟ್ರಕ್ಕಾಗಿ, ಆಡಳಿತಾಧಿಕಾರಿಗಳಿಗಾಗಿ, ಸರ್ವರ ಸುರಕ್ಷೆಗಾಗಿ ಪ್ರಾರ್ಥಿಸಬೇಕೆಂದು ರಚಿಸಿರುವ ಗೀತೆ ಸರ್ವರಲ್ಲು ರಾಷ್ಟ್ರೀಯ ಪ್ರಜ್ಞೆ ಹಾಗೂ ಪರಸ್ಪರರಿಗಾಗಿ ಪ್ರಾರ್ಥಿಸಿ ಶುಭ ಹಾರೈಸುವ ಭಾವ ಮೂಡಿಸುವಲ್ಲಿ ಯಶಸ್ವಿಯಾಗಿದೆ.

ಸ್ಥಳೀಯ ಸಂಸ್ಕೃತಿಗೆ ಸಂಬಂಧಿಸಿದಂತೆ 'ಯುಗಾದಿ' ಯನ್ನು ಕುರಿತು ಗೀತೆ ರಚಿಸಿದ್ದಾರೆ. ಇವರ ದೇಶೀ ಪ್ರೇಮ ಇದರಲ್ಲಿ ವ್ಯಕ್ತವಾಗಿದೆ. ಇವರ ಗೀತೆಗಳೆಲ್ಲವೂ ಅರ್ಥಪ್ರಧಾನ. ಬೋಧನಾ ಪ್ರಧಾನವಾಗಿದೆಯೆ ಹೊರತು ಗೇಯತೆ ಕಳೆದುಕೊಂಡಿದೆ.

೫.೩.೧೦ ಮೆಟ್ಜ್. ಎಫ್ – Metz. F

೧೮೪೪ರಲ್ಲಿ ಮಂಗಳೂರಿನಲ್ಲಿ ಬಂದಿಳಿದರು. ಮೊದಲು ವೇದ ವಿದ್ಯಾಲಯದಲ್ಲಿ ಸಹಾಯಕರಾಗಿದ್ದರು. ೧೮೪೮–೧೮೪೯ರವರೆಗೆ ನೀಲಗಿರಿಯಲ್ಲಿ ೧೮೭೪ರ ತನಕ ೨೬ ವರ್ಷಗಳ ಸೇವೆಸಲ್ಲಿಸಿದರು. ಕೈಟಿಯಲ್ಲಿ ಉಳಿದುಕೊಂಡರು. ಗಿರಿಜನರಾದ ತೋಡರು, ಕೋಟರು ಮತ್ತು ಕುರುಬರ ಮದ್ಯೆ ಕೊಳಕು, ಕ್ರಿಮಿ, ದುರ್ಗಂಧಯುಕ್ತ ದೂಷಿತ ಹವೆಯನ್ನು ಹೊರದೂಡುವ ಕಿಟಕಿಗಳಿಲ್ಲದ ಗುಡಿಸಲು ಅಥವಾ ಕೊಟ್ಟಿಗೆಗಳಲ್ಲಿ ವಾಸ, ಆತ ತಳಕ್ಕೆ ಸೇರಿದ ಬುಡಕಟ್ಟು ಜನರನ್ನು ಕ್ರಿಸ್ತನಿಗೋಸ್ಕರ ಗೆದ್ದುಕೊಳ್ಳುವ ಹಂಬಲ. 'ನೀಲಗಿರಿಯ ಬುಡಕಟ್ಟು ಜನರು' ಎಂಬ ಪುಸ್ತಕವನ್ನು ಬರೆದಿದ್ದಾರೆ. ೧೮೭೪ ರಲ್ಲಿ ನಿರ್ಗಮಿಸಿದರು. ಉಳಿದ ಜೀವನದ ಭಾಗವನ್ನು ವುರ್ತಂಬರ್ಗ್‌ನಲ್ಲಿ ಸ್ವಯಂ ಸೇವಕ ಸುವಾರ್ತಿಕರಾಗಿ ಕಳೆದು ೮–೭–೧೮೮೫ ರಲ್ಲಿ ತೀರಿಹೋದರು. ಶ್ರೀಯುತರು ಬ್ರಹ್ಮಚಾರಿಗಳಾಗಿದ್ದರು.

ಗೀತೆಗಳ ಅಧ್ಯಯನ: ಮೆಟ್ಸ್‌ರವರು ಒಟ್ಟು ೧೧ ಗೀತೆಗಳನ್ನು ಬರೆದಿದ್ದು ೮ ಭಾಷಾಂತರ ಹಾಗೂ ೩ ಸ್ವರಚಿತ ಗೀತೆಗಳಾಗಿವೆ. ಮೆಟ್ಸ್ ಲೂತಿಯವರೊಂದಿಗೆ ೨ ಗೀತೆಗಳನ್ನು ರಚಿಸಿದ್ದಾರೆ. ಗೀತೆಗಳ ವರ್ಗೀಕರಣ ಇಂತಿದೆ.

ಸಭೋತ್ಸವ	೪
ದೇವರಾಜ್ಯ	೧
ಕ್ರೈಸ್ತ ಸಭಾಚಾರ ಕೃಪಾಕರಣ	೨
ರಕ್ಷಣಾಮಾರ್ಗ	೨
ದೇವ ಸ್ತೋತ್ರ	೧
ಸ್ವರ್ಗಮಹಿಮಾಭಿಲಾಶೆ	೧
ಒಟ್ಟು	೧೧ ಗೀತೆಗಳು

ನಿಬಂಧನಕ್ಕೆ ಆಯ್ದುಕೊಂಡ ವಸ್ತುವಿಷಯಗಳಿಗೆ ಅನುಗುಣವಾಗಿ ಗೀತೆಗಳ ಅಧ್ಯಯನ ನಡೆದಿದೆ.

ಹಬ್ಬಗಳು:- ಯೇಸುವಿನ ಜನನಕ್ಕೆ ಸಂಬಂಧಿಸಿದ ಗೀತೆಗಳು: ಯೇಸುವಿನ ಜನನವು ಅಂಧಕಾರದ ಲೋಕದಲ್ಲಿ ಬೆಳಕನ್ನು ತಂದಿತು ಎಂದು ಹೇಳುವ ಗೀತೆಯೆ 'ಒಂದು ಊರಿನಲ್ಲಿ' ಇದು ಸ್ವರಚಿತ ಗೀತೆಯಾಗಿದ್ದು Dasist unbeschreiblich ಎಂಬ ರಾಗದಲ್ಲಿದೆ.

ಒಂದು ಊರಿನಲ್ಲಿ	ಬೇತ್ಲೆಹೇಮಿನಲ್ಲಿ
ಒಂದು ಬೆಳಕು	ನೀತಿ ಸೂರ್ಯನು
ಅಂಧಕಾರದಲ್ಲಿ	ಪಾಪ ಕತ್ತಲಲ್ಲಿ
ತೋರಲಾಯಿತು	ಕಾಂತಿ ಹೊಯ್ದನು.

ಕನ್ನಡ ಗೀತೆಗಳು, ಗೀತೆ-೪೮

ಉಪಮೆಯ ಮೂಲಕ ಯೇಸುವಿನ ಜನನದ ಮಹಾತ್ಮೆಯನ್ನು ವರ್ಣಿಸಿದ್ದಾನೆ ಗೀತಗಾರ. ಒಂದು ಊರಿನಲ್ಲಿ ಒಂದು ಬೆಳಕು ಅಂಧಕಾರದಲ್ಲಿ ತೋರಲಾಯಿತು. ಹಾಗೆಯೇ ಬೇತ್ಲೆಹೇಮಿನಲ್ಲಿ ನೀತಿ ಸೂರ್ಯನು ಪಾಪ ಕತ್ತಲಲ್ಲಿ ಶಾಂತಿ ಹೊಯ್ದನು.

ರೂಪಕವಾಗಿ ಉಪಯೋಗವಾದ ನಾಮವಾಚಕಕ್ಕೆ ಉದಾ: ನೀತಿ ಸೂರ್ಯ, ಯೇಸುವನ್ನು ನೀತಿ ಸೂರ್ಯ ಎಂದು ಕರೆದಿದ್ದಾನೆ.

ಇದೇ ಗೀತೆಯ ೪ನೇ ಚರಣದಲ್ಲಿ ಅಲಂಕಾರಿಕ ಗುಣವಾಚಕವು ಬಳಕೆಯಾಗಿದೆ (Ornamental epithet) ಉದಾ: ಮೃತ್ಯು ಕ್ರೂರ ಪಾಶ.

ಮೆಟ್ಸ್‌ರವರ ಗೀತೆಗಳ ವೈಶಿಷ್ಟ್ಯತೆಗಳು: ಮೆಟ್ಸ್‌ರವರ ಗೀತೆಗಳು ಹೆಚ್ಚಾಗಿ ಭಾಷಾಂತರ ಗೀತೆಗಳಾಗಿವೆ. ಗೀತೆಗಳೆಲ್ಲವು ಆಧ್ಯಾತ್ಮ ಬದುಕಿಗೆ ಸಂಬಂಧಿಸಿದವುಗಳಾಗಿವೆ. ಈ ಗೀತೆಗಳು ದೇವರು ಮತ್ತು ಮಾನವನನ್ನು ನೋಡಿರುವ ಬಗೆ ವಿಶಿಷ್ಟವಾಗಿದೆ.

ಉಪಮೆಗಳ ಬಳಕೆ ಗೀತೆಯಲ್ಲಿ ಕಂಡುಬಂದಿದೆ. ಯೇಸುವಿನ ಜನನದ ಮಹತ್ತರ ಘಟನೆಯನ್ನು ವರ್ಣಿಸಿರುವ ಬಗೆ ವಿಶೇಷವಾಗಿದೆ. ಬೆತ್ಲೆಹೇಮಿನಲ್ಲಿ ನೀತಿ ಸೂರ್ಯನು ಪಾಪಕತ್ತಲಲ್ಲಿ ಕಾಂತಿ ಹೊಯ್ವನು ಎಂದು ವರ್ಣಿಸಿದ್ದಾನೆ.

ಯೇಸುವಿನ ನೀತಿ ಗುಣವನ್ನು ಸೂಚಿಸುವ ಬಿರುದಾಗಿದೆ ನೀತಿಸೂರ್ಯ. ಅಲಂಕಾರಿಕ ಗುಣವಾಚಕವನ್ನು ಗೀತೆಯಲ್ಲಿ ಬಳಸಿದ್ದಾರೆ. ಉದಾ: ಮೃತ್ಯು ಕ್ರೂರ ಪಾಶ.

ಬದುಕಿನ ಯಾವುದೇ ಹಂತದಲ್ಲಿ ದುರ್ಮಾರ್ಗದಲ್ಲಿ ಸಂಚರಿಸಿದರೂ ಪಶ್ಚಾತ್ತಾಪಪಟ್ಟು ಸನ್ಮಾರ್ಗದಲ್ಲಿ ನಡೆಯಲು ಸಾಧ್ಯವಿದೆ. ಮನಪರಿವರ್ತನೆ ಬದುಕಿನ ಯಾವ ಸಂದರ್ಭದಲ್ಲಾದರೂ ಆಗಬಹುದು. ಯೌವನದಲ್ಲಿ ದಾರಿತಪ್ಪಿದ ವ್ಯಕ್ತಿ ತನ್ನ ಪಾಪಗಳಿಗಾಗಿ ಮರುಗಿ ಪಶ್ಚಾತ್ತಪ ಪಡುವ ಬಗೆಯನ್ನು ದೇವರ ಸಹಾಯವನ್ನು ಯಾಚಿಸುವ ಬಗೆ ಅರ್ಥಗರ್ಭಿತವಾಗಿ ಮೂಡಿಬಂದಿದೆ ಗೀತೆ ೨೮೨ ರಲ್ಲಿ. ಪಾಪಿ ಮಾನವನಲ್ಲಿ ಆಶಾಭಾವವನ್ನು ಮೂಡಿಸುವ ಬಗೆ ಗೀತಗಾರ ರಚಿಸಿರುವುದು ಯುವ ಜನಾಂಗಕ್ಕೆ ನೀತಿ ಬೋಧನೆಯ ರೂಪದಲ್ಲಿದೆ.

೫.೩.೧೨ ಬೊಮ್ಮರ್. ಇ _ Bommer. E

ಯುಜಿನ್ ಬೊಮ್ಮರ್ ಅವರು ಜರ್ಮನಿಯ ಕ್ಲೆಪ್ಪೆನ್ ಬಾಕ/ ವೆಲ್ತ್ಸೈಮದಲ್ಲಿ (Kleffenback/welzeim) ೧೮೭೭ ಜೂನ್ ೨೬ ರಂದು ಜನಿಸಿದರು. ಹೆನ್ರಿಕ್ ಹಾಗೂ ಸೋಫಿ ನೀ ಲುಟ್ಜ ಎಂಬುವರು ಇವರ ತಂದೆ ತಾಯಿಗಳು. ಹೆನ್ರಿಕ್‌ರು ಶಾಲಾಶಿಕ್ಷಕರಾಗಿದ್ದು ತಮ್ಮ ಮಕ್ಕಳನ್ನು ದೇವರ ಭಯಭಕ್ತಿಯಲ್ಲಿ ಬೆಳೆಸಿದರು. ೧೮೯೬ ರಲ್ಲಿ ಬಾಸೈದಲ್ಲಿಯ ಮಿಶನರಿ ಕಾಲೇಜಿನಲ್ಲಿ ದೈವ ಜ್ಞಾನ ಶಾಸ್ತ್ರ ಅಭ್ಯಾಸ ಮಾಡಲು ಸ್ವೀಕರಿಸಲ್ಪಟ್ಟರು. ಅಲ್ಲಿ ಆಸಕ್ತಿಯಿಂದ ಅಭ್ಯಾಸವನ್ನು ಮುಗಿಸಿ ೧೯೦೨ ರಲ್ಲಿ ಬಾಸೆಲ್ ಮಿಶನ್ನಿನ್ ಪರವಾಗಿ ಭಾರತಕ್ಕೆ ಕಳುಹಿಸಲ್ಪಟ್ಟರು. ಹುಬ್ಬಳ್ಳಿ ಧಾರವಾಡಗಳಲ್ಲಿ ಸೇವೆ ಮಾಡಲು ನಿಯಮಿಸಲ್ಪಟ್ಟರು. ೧೯೦೭ ರಲ್ಲಿ ಇವರು ಜರ್ಮನಿಯ ಬೆಸಿಗ್ ಹೈಮದ (Besigheim) ಲಿಡಿಯಾ ಎಂಬಾಕೆಯನ್ನು ವಿವಾಹವಾದರು. ೧೯೧೧-೧೨ ರಲ್ಲಿ ಬೊಮ್ಮರ ಅವರು ತಮ್ಮ ಜೊತೆ ಸೇವಕರೊಂದಿಗೆ ಹಾವೇರಿ, ಮೋಟೆಬೆನ್ನೂರ್, ರಾಣಿಬೆನ್ನೂರ, ಸೂರತ್, ಬಿದರಿ ಇತ್ಯಾದಿ ಸ್ಥಳಗಳನ್ನು ಸಂದರ್ಶಿಸಿ ಕ್ರಿಸ್ತನ ಸುವಾರ್ತೆಯನ್ನು ಪ್ರಚಾರ ಮಾಡಿದರು.

"ರೆ. ಬೊಬ್ಬರ್ ಅವರು ೨೦ನೆಯ ಶತಮಾನದ ಪ್ರಾರಂಭದಲ್ಲಿ ನಮ್ಮ ವಿಭಾಗದಲ್ಲಿ ಬಾಸೆಲ್ ಮಿಶನ್ನಿನ ಮಿಶನರಿಯಾಗಿ ಸೇವೆ ಸಲ್ಲಿಸಿದರು. ಮೋಟೆಬೆನ್ನೂರ ವಿಭಾಗದಲ್ಲಿ ಸೇವೆ ಮಾಡಿದವರಲ್ಲಿ

ಪ್ರಥಮರಾಗಿದ್ದಾರೆ. ಬಡವರನ್ನು ಅನಾಥರನ್ನು ಕರುಣಿಸಿ ಜನರ ಸಾಮಾಜಿಕ ಮಟ್ಟ ಸುಧಾರಿಸುವುದರಲ್ಲಿ ಪ್ರಯಾಸಪಟ್ಟರು. ಅವರು ಮಾಡಿದ ಸೇವೆ ಅಪಾರವಾದುದು. ಅವರನ್ನು ನಾವು ಜ್ಞಾಪಿಸಿಕೊಳ್ಳುವುದು ಯೋಗ್ಯವಾಗಿದೆ. ಇದೇ ಜೂನ್ ತಿಂಗಳಿನಿಂದ ಮೋಟಬೆನ್ನೂರಿನಲ್ಲಿ ಪ್ರಾರಂಭವಾಗುವ ಅನಾಥಾಶ್ರಯಕ್ಕೆ 'ಬೊಬ್ಬರ್ ಬಾಲಕರ ಅನಾಥಾಶ್ರಮ' ಎಂದು ಹೆಸರಿಡುವುದು ನಿಜವಾಗಿ ಯೋಗ್ಯ ಸಂಗತಿಯಾಗಿದೆ ಎಂಬುದಾಗಿ 'ವರದಿ-ವಾರ್ತೆ'ಯಲ್ಲಿ ಬರೆಯಲಾಗಿದ.[೧೧೫] ೧೯೫೪ ರವರೆಗೆ ಬೊಮ್ಮರ ಅವರು ಶಿಕ್ಷಕರಾಗಿ ಜರ್ಮನಿಯಲ್ಲಿ ಸೇವೆ ಮಾಡಿದರು. YMCA ಸಂಘವನ್ನು ಸ್ಥಾಪಿಸಿ ಮುನ್ನೆಡೆಸಿಕೊಂಡು ಹೋಗುವಲ್ಲಿ ಬಹಳ ಸಹಾಯ ಮಾಡಿದರು. ಶಿಕ್ಷಕರಾಗಿ ಅಷ್ಟೇ ಅಲ್ಲ ಅಲ್ಲಿಯ ಸಭೆಯಲ್ಲಿ ಸಭಾಪಾಲಕರಾಗಿಯೂ ತಮ್ಮ ಸೇವೆಯನ್ನು ಸಲ್ಲಿಸಿದರು.

೧೯೫೮ ರವರೆಗೆ ಅವರು ಆರೋಗ್ಯದಿಂದಲೇ ಇದ್ದರು. ಆದರೆ ಆ ವರ್ಷದಲ್ಲಿ ಅವರು ಗುಣವಾಗದ ರೋಗಕ್ಕೆ ಬಲಿಯಾಗಿ ದೈಹಿಕವಾಗಿ ಕ್ಷೀಣವಾಗುತ್ತ ನಡೆದರು. ೧೯೬೦ ಜನವರಿ ೨೯ ರಂದು ತಮ್ಮ ಕೊನೆಯುಸಿರೆಳೆದರು. ಅವರು ಮೃತರಾದಾಗ ಎಂಬತ್ತೆರಡೂವರೆ ವರ್ಷ ಪ್ರಾಯದವರಾಗಿದ್ದರು. ರೆ. ಬೊಮ್ಮರ್ ಜರ್ಮನಿಯಲ್ಲಿದ್ದರೂ ಭಾರತ ದೇಶವನ್ನು ಮರೆತಿರಲಿಲ್ಲ. ಅವರು ಸೇವೆ ಸಲ್ಲಿಸಿದ ಕ್ಷೇತ್ರಗಳಲ್ಲಿಯ ಜನರೊಂದಿಗೆ ಪತ್ರ ವ್ಯವಹಾರವನ್ನಿಟ್ಟುಕೊಂಡಿದ್ದರು.

ಗೀತೆಗಳ ಅಧ್ಯಯನ: ಬೊಮ್ಮರ್ ಕನ್ನಡ ಗೀತೆ ಪುಸ್ತಕದಲ್ಲಿ ಒಂದೇ ಒಂದು ಗೀತವನ್ನು ರಚಿಸಿದ್ದಾರೆ. ಈ ಗೀತೆಯು ಭಾಷಾಂತರ ಗೀತೆಯಾಗಿದೆ.

ಪ್ರಾರ್ಥನೆ: ಯೇಸುವನ್ನು ತನ್ನ ಮೇಲೆ ದಯೆತೋರೆಂದು ಬೇಡುತ್ತಿದ್ದಾನೆ ಗೀತಗಾರ 'ಕ್ರಿಸ್ತ ಶೈಲವೆ' ಎಂಬ ಗೀತೆಯಲ್ಲಿ.

ಕ್ರಿಸ್ತ, ನಿತ್ಯ ಶೈಲವೆ	ಜೀವವಿರ್ವ ಮಟ್ಟಿಗೂ
ಶರಣಾಗು ನನಗೆ!	ಯಾತ್ರೆ ತೀರಿದಾಗಲೂ
ನಿನ್ನ ಪಕ್ಕೇ ರಕ್ತದಿ	ಸಾಯೋ ಕಷ್ಟದಲ್ಲಿಯೂ
ಮನಶುದ್ಧಿಯಾಗಲಿ!	ನ್ಯಾಯ ತೀರ್ಪಿನೊಳಗೂ
ಪಾಪ ಜೈಸೊಶಕ್ತಿಯ	ಕ್ರಿಸ್ತ ನಿತ್ಯಶೈಲವೆ
ಹುಟ್ಟಿಸೋದೀ ನೆತ್ತರ	ಶರಣಾಗು ನನಗೆ!

ಕನ್ನಡ ಗೀತೆಗಳು, ಗೀತೆ-೨೩೦

ಈ ಗೀತೆಯು ಇಂಗ್ಲೀಷ್ ಭಾಷೆಯ Rock of Ages ಎಂಬ ಸಂಗೀತದ ಭಾಷಾಂತರವಾಗಿದೆ. ಈ ಗೀತೆಯನ್ನು ಜಾಗುಸ್ತಸ್ ಮೊಂಟೀಗ್ ಟೊಪ್ಲೇಡಿ ಎಮ್ ಎಂಬಾತನು ರಚಿಸಿದನು.

ಕ್ರಿಸ್ತನನ್ನು ನಿತ್ಯ ಶೈಲವೆಂದು ಹೇಳಿದ್ದಾನೆ ಗೀತಗಾರ. ಶೈಲ ಅಥವಾ ಪರ್ವತ ಸ್ಥಿರತೆಗೆ ಸಂಕೇತವಾಗಿದೆ. ಯೇಸುವಿನ ಪ್ರೀತಿ, ನೀತಿ, ದಯೆಗಳು ಶಾಶ್ವತಬಾಗಿ ನಿಲ್ಲುವಂತದ್ದಾಗಿದೆ. ಶರಣಾಗತನಾಗಿ ತನ್ನನ್ನು ಜೀವದಂತ್ಯದವರೆಗೂ ಹಾಗೂ ನ್ಯಾಯ ತೀರ್ಪಿನಲ್ಲಿಯೂ ರಕ್ಷಣೆಯನ್ನು ನೀಡು ಎಂದು ಬೇಡಿಕೊಂಡಿದ್ದಾನೆ.

ನ್ಯಾಯ ತೀರ್ಪು: ಮತ್ತಾಯನ ಶುಭಸಂದೇಶದ ೨೫ನೇ ಅಧ್ಯಾಯದಲ್ಲಿ ಹೇಳಿರುವ ಉಪಮಾನಗಳಲ್ಲಿ ನೀತಿವಂತರನ್ನು ದುಷ್ಟರನ್ನು ಅಗಲಿಸಿ ಅವರಿಗೆ ನಿತ್ಯ ಜೀವನವನ್ನು ಇತರರಿಗೆ ನಿತ್ಯ ದಂಡನೆಯನ್ನು ಕೊಡುವರು ಎಂದು ತಿಳಿಸಲಾಗಿದೆ.

ಬೊಬ್ಬರ್‌ರವರ ಗೀತೆಗಳ ವೈಶಿಷ್ಟ್ಯತೆಗಳು: ಬೊಬ್ಬರ್ ಒಂದೇ ಗೀತೆನ್ನು ರಚಿಸಿದರು. ಅದು ಆಂಗ್ಲಭಾಷೆಯಿಂದ ಭಾಷಾಂತರಗೊಂಡಿದ್ದಾಗಿದೆ. ಯೇಸುವಿನ ಪವಿತ್ರ ರಕ್ತದ ಮಹಿಮೆಯನ್ನು ಹೇಳುತ್ತಾ ತನ್ನ ಪಾಪವನ್ನು ತೊಳೆಯುವ ಶಕ್ತಿ ಅದಕ್ಕಿದೆಯೆಂದು ಹೇಳುತ್ತಾ ಅಂತ್ಯದವರೆಗೂ ತನಗೆ ರಕ್ಷಣೆ ನೀಡಬೇಕೆಂದು ಬೇಡುವ ಬಗೆ ದೈನ್ಯದಿಂದ ಮೂಡಿಬಂದಿದೆ. ಗೀತೆಯಲ್ಲಿ ಕ್ರೈಸ್ತ ಧಾರ್ಮಿಕ ಪದವಾದ ನ್ಯಾಯ ತೀರ್ಪು ಎಂಬುದನ್ನು ಬಳಸಿಕೊಂಡು ಅಂತ್ಯದಲ್ಲಿ ನಮ್ಮ ಇಹದ ಜೀವಿತದ ನಿರ್ಣಯ ಹೇಗಾಗುತ್ತದೆ ಎಂಬುದರೆಡೆಗೆ ಗಮನ ಸೆಳೆದಿರುವ ಗೀತೆ ಅರ್ಥ ಪ್ರಧಾನತೆಯನ್ನು ಹೊಂದಿದೆ.

ಗೀತೆಯಲ್ಲಿ ಅಲಂಕಾರದ ಬಳಕೆಯನ್ನು ಕಾಣುತ್ತೇವೆ. ಕ್ರಿಸ್ತನನ್ನು 'ಶೈಲ'ಕ್ಕೆ ಹೋಲಿಸಿ ವರ್ಣಿಸಿದ್ದಾನೆ ಗೀತಗಾರ.

೫.೩.೧೩ ಮೆನ್ನರ್. ಎ – Manner. A

ಜರ್ಮನಿಯ ವುರ್ತಂಬರ್ಗ್‌ನ ಜಸ್‌ವೆಲ್ ಎಂಬಲ್ಲಿ ೨೨.೭.೧೮೨೧ ರಂದು ಜನಿಸಿದರು. ೧೮೫೭ ರಲ್ಲಿ ಭಾರತಕ್ಕೆ ಆಗಮಿಸಿದರು. ಮೊದಲಿಗೆ ೨೦ ವರ್ಷ ಮುಲ್ಕಿಯಲ್ಲಿ ನಂತರ ಉಡುಪಿಯಲ್ಲಿ ಅವರು ಸೇವೆ ಸಲ್ಲಿಸಿದರು. ಸಭಾ ಸೇವೆಯೊಂದಿಗೆ ಅಸೌಖ್ಯದಲ್ಲಿದ್ದವರಿಗೆ ವೈದ್ಯಕೀಯ ನೆರವು ನೀಡುತ್ತಿದ್ದರು. ೧೮೭೮ ರಲ್ಲಿ ಮಂಗಳೂರಿನ ದೊಡ್ಡ ಸಭೆಯ ಅಧಿಕಾರವಹಿಸಿಕೊಂಡರು. ಜಿಲ್ಲೆಯ ಮುಖ್ಯ ಮಿಶನರಿಯಾಗಿ ಅಲ್ಲದೆ ಭಾರತದಲ್ಲಿರುವ ಬಾಸೆಲ್ ಮಿಶನ್ ಸಭೆಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ೩೩ ವರ್ಷಗಳ ಬಳಿಕ ೧೮೯೧ ರಲ್ಲಿ ತನ್ನ ಸ್ವದೇಶಕ್ಕೆ ಮರಳಿ ನಾಲ್ಕು ವಾರದೊಳಗೆ ೨೫–೪–೧೮೯೧ ರಲ್ಲಿ ನಿಧನರಾದರು. ತುಳು ಸಾಹಿತ್ಯ ಕ್ಷೇತ್ರದಲ್ಲಿ ಅಗ್ರಗಣ್ಯರೆಂಬ ಸ್ಥಾನ ಪಡೆದ ಮೆನ್ನರ್‌ರವರ ಸಾಹಿತ್ಯ ಕೃತಿಗಳು ಇವು.

೧. ತುಳು ಇಂಗ್ಲೀಷ್ ನಿಘಂಟು– ೧೮೮೬

೨. ಇಂಗ್ಲೀಷ್ ತುಳು ನಿಘಂಟು– ೧೮೮೮

೩. ಪಾಡ್ದನೊಳು

೪. ಎಂಕ್‌ಲಾ ಬಂಜಿ ಇಲ್ಲಾ ಉಂಡು

೫. ಕಲಿ ಗಂಗದರ ಮಶ್ತಿದ್ ಮಾರುನವು ಕ್ರೈಕ್ತೆರೆಗ್ ಯೋಗ್ಯದವು ಆಡುಂದಾ?

೬. ಸಹಸ್ರಾರು ತುಳು ಗಾದೆಗಳು

೭. ಕೊಂಕಿಣಿ ಮಸ್ತಕ (ಕ್ರಿಸ್ಮಸ್ ವಿಷಯದಲ್ಲಿ)

೮. ೧೬ ಕನ್ನಡ ಸಂಗೀತ ರೂಪಕಗಳ ರಚನೆ। ತರ್ಜುಮೆ

೯. ೧೬೮ ತುಳು ಗೀತೆಗಳ ರಚನೆ। ತರ್ಜುಮೆ

೧೦. ಬಾಲಕರ ಗೀತಗಳ ಸಂಗ್ರಹದಲ್ಲಿ ಒಂದು ಕನ್ನಡ ಸಂಗೀತ ಭಾಗದ ರಚನೆ

೧೧. ತುಳುವೆರೆಡ್ ನಡಪು ಭೂತ ಸೇವೆ

೧೨. ಭೂತ ವಿದ್ಯೆ

೧೩. ಸತ್ಯವೇದದ ಕೆಲವು ಭಾಗಗಳ ಭಾಷಾಂತರ

೧೪. ಸಂಗೀತ ಕ್ರಿಯೆಗಳ ಸ್ವರದ ಮಸ್ತಕ ಸಂಪಾದಕರಾಗಿ ಸೇವೆ

೧೫. 'ಕನ್ನಡ ಪಂಚಾಂಗ' ಮತ್ತು 'ಕ್ರೈಸ್ತ ಸಭಾಪತ್ರ' ಪತ್ರಿಕೆಗಳ ಸಂಪಾದಕರಾಗಿ ಸೇವೆ.

೧೬. On Bhatas – an article

೧೭. The Origin of the Demons – an article

ಮನ್ನರ್‌ಗಳ ತುಳು ನಿಘಂಟು, ತುಳು ಸಂಗೀತ ರಚನೆಗಳು, ಭೂತಾರಾಧನೆ, ಪಾಡ್ದನಗಳು ಇವುಗಳು ತುಳು ಸಾಹಿತ್ಯ ಕ್ಷೇತ್ರದಲ್ಲಿ ಮಹತ್ತರ ಸ್ಥಾನ ಪಡೆದಿದ್ದು ಇದರಿಂದ ಇವರು ಮಿಶನರಿಗಳ ಕಾಲದ ಅಗ್ರಗಣ್ಯ ತುಳು ಸಾಹಿತಿ ಎಂಬ ಮನ್ನಣೆಗೆ ಪಾತ್ರರಾಗಿದ್ದಾರೆ.

ಗೀತೆಗಳ ಅಧ್ಯಯನ: ಮೆನ್ನರ್‌ರವರು ಕನ್ನಡ ಗೀತಗಳ ಮಸ್ತಕದಲ್ಲಿ ೧೬ ಗೀತೆಗಳನ್ನು, ಬಾಲಕರ ಗೀತೆಗಳಲ್ಲಿ ೧ ಗೀತೆಯನ್ನು ರಚಿಸಿದ್ದಾರೆ. ೧೩ ಭಾಷಾಂತರ ಗೀತೆಗಳು ೩ ಸ್ವರಚಿತ ಗೀತೆಗಳನ್ನು ರಚಿಸಿದ್ದಾರೆ. ಗೀತೆಗಳ ವರ್ಗೀಕರಣ ಇಂತಿದೆ.

ದೇವ ಭಜನೆ	೧
ಯೇಸುವಿನ ಭಜನೆ	೧
ಸುಭೋತ್ಸವಗಳು	೪
ರಕ್ಷಣಾ ಮಾರ್ಗ	೩
ದೇವ ಪ್ರಾರ್ಥನೆ	೩
ಕ್ರೈಸ್ತ ಮನಶ್ಯಾಂತಿ	೧
ವಿಶೇಷ ಕಾಲಗಳಿಗೆ ತಕ್ಕ ಗೀತೆಗಳು	೧
ಸ್ವರ್ಗ ಮಹಿಮಾಭಿಲಾಷೆ	೧
ಒಟ್ಟು	೧೬ ಗೀತೆಗಳು

ಪ್ರಾರ್ಥನೆ: ಜೀವನದ ಪ್ರತಿ ಕ್ಷಣದಲ್ಲಿ ಉದ್ಧಾರವಾಗಲು ಆಶಿಸಿದ ಗೀತಗಾರ ಯೇಸುವಲ್ಲಿ ವಿನಂತಿಸುವ ಬಗೆ 'ಈ ಭೂ ಸಂಚಾರದಲ್ಲಿ' ಎಂಬ ಗೀತೆಯಲ್ಲಿ ವ್ಯಕ್ತವಾಗಿದೆ. ಇದು So lang ich hier noch walle ಎಂಬ ಗೀತೆಯ ಭಾಷಾಂತರವಾಗಿದೆ. ಫಿಲಿಪ್ ಫ್ರೆಡ್ರಿಕ್ (೧೬೯೯-೧೭೬೯) ಎಂಬುವನು ಜರ್ಮನ್ ಭಾಷೆಯಲ್ಲಿ ಈ ಗೀತೆಯನ್ನು ರಚಿಸಿದನು. ವುರ್ತೆಂಬುರ್ಗಿನ ಕವಿಗಳಲ್ಲಿ ಈತನ ಶ್ರೇಷ್ಟನು.

ನಾ ರಾತ್ರಿ ನಿದ್ದೆ ಮಾಡಿ
ಮುಂಜಾನೆ ಏಳು
ಯಾವಾಗಲು ಕಾಪಾಡಿ
ಉದ್ಧರಿಸೆನ್ನನ್ನು!

ಉದ್ಯೋಗ ಕಷ್ಟದಲ್ಲೂ
ನೀ ನಡಿಸೆನ್ನನ್ನು!
ಸಂಸಾರ ಚಿಂತೆಯಲ್ಲೂ
ಉದ್ಧರಿಸೆನ್ನನ್ನು!

ದುರ್ಬುದ್ಧಿ ಅವಿವೇಕ
ಮದ್ಯಾಶೆ ಹುಟ್ಟಲು
ಕೊಡೆನಗಭಿಷೇಕ!
ಉದ್ಧರಿಸೆನ್ನನ್ನು!

ನಾ ಮೃತಿಗೆದುದಾಗಿ
ನಿನ್ನನ್ನು ಕೂಗಲು
ನಿನ್ನೈದು ಗಾಯಕ್ಕಾಗಿ
ಉದ್ಧರಿಸೆನ್ನನ್ನು!

ಕನ್ನಡ ಗೀತೆಗಳು, ಗೀತೆ–೨೭೫

ಯೇಸುವಿನ ಪಂಚ ಗಾಯಗಳು:ಗೀತೆಗಾರನಿಗೆ ಯೇಸುವಿನ ೫ ಗಾಯಗಳಲ್ಲಿ ಭಕ್ತಿ ಇರುವುದನ್ನು ಕಾಣುತ್ತೇವೆ. ಆ ಪಂಚಗಾಯಗಳು ಇಂತಿವೆ.

೧. ಎಡ ಪಾದದ ತಿರು ಗಾಯ
೨. ಬಲ ಪಾದದ ತಿರು ಗಾಯ
೩. ಎಡ ಹಸ್ತದ ತಿರು ಗಾಯ
೪. ಬಲ ಹಸ್ತದ ತಿರು ಗಾಯ
೫. ದಿವ್ಯ ಹೃದಯದ ತಿರು ಗಾಯ

ಈ ಪಂಚ ಗಾಯಗಳ ಕುರಿತು ಧ್ಯಾನಿಸಿ ಪ್ರಾರ್ಥಿಸುವ ಬಗೆ ಇಂದೂ ಕ್ರೈಸ್ತ ಭಕ್ತಾದಿಗಳಲ್ಲಿ ರೂಢಿಯಲ್ಲಿದೆ. ಬಾಳಿನ ಪ್ರತಿಯೊಂದು ಸನ್ನಿವೇಶಕ್ಕೂ ಸ್ಪಂದಿಸುವ ಈ ಗೀತೆ ಅರ್ಥಪೂರ್ಣವಾಗಿದೆ. ಬಾಳು ಕಷ್ಟ ಸಂಕಷ್ಟಗಳ ಸರಮಾಲೆಯಾಗಿದೆ. ಆದರೆ ಉದ್ಧಾರವಾಗಬೇಕೆಂಬ ಭಾವನೆ ನಿರಂತರ ಮನದಲ್ಲಿ ಮೂಡುತ್ತಿದೆ. ಆದ್ದರಿಂದ ಜೀವಾಂತ್ಯದವರೆಗೂ ತನ್ನನ್ನು ಉದ್ಧಾರದ ಮಾರ್ಗದಲ್ಲಿ ನಡೆಸು ಎಂದು ಬೇಡಿಕೊಂಡಿದ್ದಾನೆ.

ಮೆನ್ನರ್.ಎ ರವರ ಗೀತೆಗಳ ವೈಶಿಷ್ಟ್ಯತೆಗಳು: ಮನ್ನರ್‌ರವರ ಗೀತೆಗಳಲ್ಲಿ ಹೆಚ್ಚಿನವು ಭಾಷಾಂತರದ ಗೀತೆಗಳಾಗಿವೆ. ಇದರ ಗೀತೆಗಳು ವ್ಯಕ್ತಿಯ ದೈನಂದಿನ ಜೀವನಕ್ಕೆ ಸ್ಪಂದಿಸುವಂತದ್ದಾಗಿದೆ. ಸರಳ ವಾಕ್ಯ ರಚನೆ, ಅರ್ಥಗರ್ಭಿತ ಪದಗಳು, ಹೃದಯಸ್ಪರ್ಶಿತ ವಿಚಾರಗಳು ಅಡಕವಾಗಿವೆ. ಮಾನವ ಪಾಪಿಯಾದರೂ ದೇವರೆಂದೂ ಕೈಬಿಡನು ಎಂಬ ಆಶ್ವಾಸನೆ ಗೀತೆ ೨೧೫ ರಲ್ಲಿ ಮೂಡಿಬಂದಿದೆ. ಗೀತೆಗಳು ಭಕ್ತಾದಿಗಳಲ್ಲಿ ಭಕ್ತಿಯನ್ನು ವೃದ್ಧಿಸಲು ಸಹಾಯಕವಾಗಿದೆ.

೫.೩.೧೪ ಸೊನ್ನಾ. ಜೆ – Sonna. J

ಇವರು ೧೮೫೦ ರಲ್ಲಿ ಜನಿಸಿದರು. ೧೮೭೫ ರಲ್ಲಿ ಇವರು ಮಿಶನ್ ಸೇವೆಗೆ ಸೇರಿ ಉಪಾದ್ಯಾಯರಾಗಿ, ಬೋಧಕರಾಗಿ ಉತ್ತರ ಕರ್ನಾಟಕ ಹುಬ್ಬಳ್ಳಿ, ಧಾರವಾಡ, ಬೆಟಗೇರಿ, ಗದಗ, ಮಂಗಳೂರು, ಹಳೆಯಂಗಡಿ, ಬೊಂಬಾಯಿ ಪ್ರದೇಶಗಳಲ್ಲಿ ಸೇವೆ ಸಲ್ಲಿಸಿದರು. ಇವರು ತುಳುವಿನಲ್ಲಿ ಒಂದು ಸಂಗೀತವನ್ನು ಇತರರೊಂದಿಗೆ ಒಂದನ್ನು ಅಲ್ಲದೆ ೯ ಕನ್ನಡ ಸಂಗೀತಗಳನ್ನು ರಚಿಸಿದ್ದಾರೆ.

ಗೀತೆಗಳ ಅಧ್ಯಯನ: ಸೊನ್ನರವರು ಕನ್ನಡ ಪುಸ್ತಕದಲ್ಲಿ ೧೦ ಗೀತೆಗಳನ್ನು ರಚಿಸಿದ್ದು, ೯ ಗೀತೆಗಳು ಭಾಷಾಂತರ ಗೀತೆಗಳಾಗಿದ್ದು ೧ ಗೀತೆ ಸ್ವರಚಿತವಾಗಿದೆ. ಈ ಗೀತೆಗಳ ವರ್ಗೀಕರಣ ಇಂತಿದೆ.

ದೇವ ಪ್ರಾರ್ಥನೆ	೦೩
ಕ್ರೈಸ್ತ ಮನಶ್ಶಾಂತಿ	೦೩
ಸ್ವರ್ಗಮುಹಿಮಾಭಿಲಾಶೆ	೦೪
ಒಟ್ಟು	೧೦ ಗೀತೆಗಳು

ಪ್ರಾರ್ಥನೆ: ಭಕ್ತನ ಬದುಕಿನ ಪ್ರತಿ ಕ್ಷಣದಲ್ಲಿ ಮುನ್ನೆಡೆಸೆಂದು ಬೇಡುವ ಗೀತೆಯೆ "ನಡೆಸೆನ್ನ ಯೇಸು ಕರ್ತ" ಎಂಬುದು. ಇದು Guide me, O thou great Jehoah! ಎಂಬ ಗೀತೆಯ ಭಾಷಾಂತರವಾಗಿದೆ. ಈ ಸಂಗೀತವನ್ನು ವೇಲ್ಸ್ ದೇಶದ ಮಧುರ ಗಾಯಕ ನೆನೆಸಿಕೊಂಡಿದ್ದ ವಿಲಿಯಮ್ ವಿಲಿಯಮ್ಸ್ ಎಂಬಾತನು ರಚಿಸಿದನು. ಇವರು ೧೭೧೭ರಲ್ಲಿ ಡ್ಯಾಂಟಿ ಸೆಲಿನ್ ಎಂಬಲ್ಲಿ ಹುಟ್ಟಿದರು. ೧೭೯೧ ರಲ್ಲಿ ಮರಣ ಹೊಂದಿದರು.

ನಡಿಸೆನ್ನ ಯೇಸು ಕರ್ತ
ಲೋಕಾರಣ್ಯ ಯಾತ್ರೆಯೊಳ್!
ನೀನೆ ಶಕ್ತ, ನಾನಶಕ್ತ;
ದಾಟಿಸೈ ಸ್ವಹಸ್ತದೊಳ್!
ಜೀವದನ್ನ ತಿನ್ನಿಸೆನ್ನ!
ಪೂರ್ಣ ತೃಪ್ತಿಗೊಳಿಸು!

ಕನ್ನಡ ಗೀತೆಗಳು, ಗೀತೆ–೨೯೨

ಶರಣು ಭಾವ ಗೀತೆಯಲ್ಲಿ ವ್ಯಕ್ತವಾಗಿದೆ. ಲೋಕದ ಯಾತ್ರೆಯಲ್ಲಿ ದೇವರು ಕೈ ಹಿಡಿದು ನಡೆಸಿದರೆ ತಾನು ಸುರಕ್ಷಿತ ಸ್ಥಳ ಸೇರಬಹುದು ಎಂದು ಗೀತಗಾರ ಹೇಳಿದ್ದಾನೆ.

ಸೊನ್ನಾ. ಜೆ ರವರ ಗೀತೆಗಳ ವೈಶಿಷ್ಟ್ಯತೆಗಳು: ಸೊನ್ನಾರ ಗೀತೆಗಳಲ್ಲಿ ಹೆಚ್ಚಿನವು ಭಾಷಾಂತರ ಗೀತೆಗಳಾಗಿವೆ. ಗೀತಗಾರ ಲೋಕವನ್ನು ಅರಣ್ಯವೆಂದು ಭಾವಿಸಿದ್ದಾರೆ. ಈ ಲೋಕಾರಣ್ಯದಲ್ಲಿ ತಾನೊಬ್ಬನೆ ಸಾಗಲು

ಸಾಧ್ಯವಿಲ್ಲ. ಆದ್ದರಿಂದ ಯೇಸುವಲ್ಲಿ 'ನನ್ನ ಕೈಹಿಡಿದು ನಡೆಸು' ಎಂದು ಕಳಕಳಿಯಿಂದ ವಿನಂತಿಸಿಕೊಂಡಿದ್ದಾನೆ.

ಸೊನ್ನಾರ ಗೀತೆಗಳೆಲ್ಲವೂ ವಿಶ್ವಾಸ, ಆತ್ಮಸ್ಥೈರ್ಯ, ಭಕ್ತಿ ಮೂಡಿಸುವ ಗೀತೆಗಳಾಗಿ ಯಶಸ್ವಿಯಾಗಿವೆ. ಕ್ರಿಸ್ತನ ಜನನ, ಮರಣ, ಪುನರುತ್ಥಾನಗಳಿಗೆ ಸಂಬಂಧಿಸಿದ ಗೀತೆಗಳಿಗಿಂತ ಕ್ರೈಸ್ತರ ಬಾಳು ಆತ, ದೇವರೊಂದಿಗೆ ಹೊಂದಿರಬೇಕಾದ ಸಂಬಂಧವನ್ನು ಕುರಿತು ವರ್ಣಿಸುವ ಗೀತೆಗಳು ಹೆಚ್ಚು. ಸರಳ ಪದಗಳು, ನೇರ ಅರ್ಥಕೊಡುವ ವಾಕ್ಯಗಳು, ತೆರೆದ ಭಾವ, ಗೀತೆಗಳ ಸೊಗಸನ್ನು ಹೆಚ್ಚಿಸಿವೆ.

೫.೩.೧೫ ಗ್ರೈನರ್. ಚಿ. ಎಲ್ – Greiner. Ch. L

ಗ್ರೈನರ್‌ರವರು ಜರ್ಮನಿಯ ಗೋಪ್ಪಿಂಗನ್ ಎಂಬಲ್ಲಿ ೧೮೧೦ ರಲ್ಲಿ ಜನಿಸಿದರು. ೧೮೩೪ನೇ ಇಸವಿ ಅಕ್ಟೋಬರ್‌ನಲ್ಲಿ ಹೆಬಿಕ್ ಲೆಹ್ನರ್‌ರೊಂದಿಗೆ ಭಾರತಕ್ಕೆ ಬಂದು ಮಂಗಳೂರಿನಲ್ಲಿ ಸೇವೆ ನಡೆಸುತ್ತಿದ್ದರು. ಶ್ರೀಮತಿ ಗ್ರೈನರ್‌ರವರು ೧೮೪೨ ರಲ್ಲಿ ಭಾರತಕ್ಕೆ ಬಂದು ತಮ್ಮ ಸೇವೆಯನ್ನು ಪ್ರಾರಂಭಿಸಿದರು. ನಂತರ ಮಿಶನರಿ ಗ್ರೈನರ್‌ರೊಂದಿಗೆ ಅವರ ವಿವಹಾವಾಯಿತು. ಶ್ರೀಮತಿ ಗ್ರೈನರ್‌ರವರು ಮಂಗಳೂರಿನಲ್ಲಿ ಹುಡಿಗಿಯರ ವಸತಿ ಶಾಲೆಯನ್ನು ಸ್ಥಾಪಿಸಿ ನಡೆಸುತ್ತಿದ್ದರು. ೧೨ ವರ್ಷಗಳ ಸೇವೆಯ ಬಳಿಕ ಅಸ್ವಸ್ಥದ ನಿಮಿತ್ತ ೨೩-೧೧-೧೮೫೫ ರಂದು ಸ್ವರ್ಗಸ್ಥರಾದರು. ನಿಧನ ಹೊಂದುವ ಮೊದಲು ಆರೋಗ್ಯಕರವಾದ ಗಂಡು ಮಗುವಿಗೆ ಜನ್ಮವಿತ್ತರು. ಗ್ರೈನರ್‌ರವರು ಮಂಗಳೂರಿನಲ್ಲಿ ೨೦ ವರ್ಷಗಳ ಸೇವೆಯ ಬಳಿಕ ೧೩-೦೨-೧೮೫೫ ಉಡುಪಿಗೆ ವರ್ಗಾಯಿಸಲ್ಪಟ್ಟು ಅಧಿಕಾರ ವಹಿಸಿಕೊಂಡರು. ಉಡುಪಿಯಲ್ಲಿ ಅಲ್ಪಕಾಲದ ಸೇವೆಯ ಬಳಿಕ ೧೮೫೬ನೇ ಇಸವಿ ಜನವರಿಯಲ್ಲಿ ತಮ್ಮ ಸ್ವದೇಶಕ್ಕೆ ಮರಳಿದರು.

ಗೀತೆಗಳ ಅಧ್ಯಯನ: ಕನ್ನಡ ಸಂಗೀತಗಳು ಗೀತ ಪುಸ್ತಕದಲ್ಲಿ ೨ ಗೀತೆಗಳನ್ನು ರಚಿಸಿದ್ದಾರೆ. ಎರಡೂ ಭಾಷಾಂತರ ಗೀತೆಗಳಾಗಿವೆ.

ಆತ್ಮ ನಿವೇದನೆ: ಪ್ರಪಂಚದ ಯಾವುದೇ ವಸ್ತು, ವಿಷಯ, ವ್ಯಕ್ತಿಗಳು ಆತನಿಗೆ ತೃಪ್ತಿ, ಶಾಂತಿಯನ್ನು ತರಲಾರವು. ಅವುಗಳಿಂದ ದೂರವಿರಲು ಬಯಸುತ್ತೇನೆ. ಆದರೆ ಯೇಸುವಿನಿಂದ ದೂರವಿರಲಾರೆ ಎಂಬ ಭಾವವನ್ನು ವ್ಯಕ್ತಪಡಿಸುವ ಗೀತೆಯ "ನನ್ನ ಯೇಸುವಗಲೆ ಎಂಬುದು. ಇದು Meinen Jesur Lass'ich night ಎಂಬ ಗೀತೆಯ ಭಾಷಾಂತರವಾಗಿದೆ.

ನನ್ನ ಯೇಸುವಗಲೆ
ಆತ ಸತ್ತ ನನಗಾಗಿ
ಅಂಜುತೇನೆ ಸ್ಥಿರವಾಗಿ
ಆತ ಜೀವಜ್ಯೋತಿಯೆ!

ಕನ್ನಡ ಗೀತೆಗಳು, ಗೀತೆ-೧೪

ಆತ್ಮ ನಿವೇದನೆಗೆ ಸಂಬಂಧಿಸಿದಂತೆ ಮತ್ತೊಂದು ಗೀತೆಯ "ಈ ವ್ಯರ್ಥ ಚಿಂತೆ ಇದು ಬಿಟ್ಟು"[೧೧೬] ಇದು Befichl du deine wege ಎಂಬ ಗೀತೆಯ ಭಾಷಾಂತರವಾಗಿದೆ. "ಈ ಗೀತೆಯನ್ನು ಮೂಲದಲ್ಲಿ ಪಾಲ್ ಗೆರ್ಹಾರ್ಟ್ (Paul Gerhardt) ರಚಿಸಿದರು. ಅದೇ ನಗರದಲ್ಲಿ ವಿಧ್ಯಾಭ್ಯಾಸ ಮಾಡಿ, ಬರ್ಲಿನ್ ನಗರದಲ್ಲಿ ಕೆಲವು ಕಾಲವಿದ್ದು ಅನಂತರ ಪಿಟೀಲುಗಳಿಗೆ ಪ್ರಸಿದ್ಧವಾದ ಮಿಟ್ಟನ್ ವಾಲ್ಡೆಯಲ್ಲಿ ಲೂಥರನ ಮಿಷನ್ ಸಭೆಯಲ್ಲಿ ಬೋಧಕನಾದನು. ಸ್ವಭಾವದಲ್ಲಿ ಆತನು ಖಂಡಿತವಾದಿ. 'ಖಂಡಿತವಾದಿ ಲೋಕವಿರೋಧಿ' ಎಂಬ ನಾಣ್ಣುಡಿ ಇದ್ದೇ ಇದೆ. ಸಭಿಕರಲ್ಲಿದ್ದ ವಿವಿಧ ಪಾಪಗಳನ್ನು ಆತನು ಖಂಡಿಸುತ್ತಿದ್ದ ಕಾರಣ, ಜನರ ಕ್ರೋಧಕ್ಕೆ ಈಡಾಗಿ ಕೆಲಸದಿಂದ ತಳ್ಳಲ್ಪಟ್ಟನು. ಆಗ ಆತನು ತನ್ನ ಸಂಸಾರ ಮಕ್ಕಳೊಂದಿಗೆ ಒಂದು ರಾತ್ರಿಯನ್ನು ಒಂದು ಛತ್ರದಲ್ಲಿ ಕಳೆಯಬೇಕಾಗಿ ಬಂತು. ಬಹಳ ಹಸಿವೆ ಆಯಾಸಗಳಿಂದ ಪತ್ನಿ ಮಕ್ಕಳು ಅಳುತ್ತಿದ್ದರು. ಬೋಧಕರಿಗೆ ಈ ನೋಟ ಬಹಳ ವ್ಯಸನವನ್ನುಂಟುಮಾಡಿತು. ಆಗ ಆತನು ಪಕ್ಕದಲ್ಲಿಯೇ ಇದ್ದ ಕಾಡಿನೊಳಕ್ಕೆ ಹೋಗಿ ಏಕಾಂತದಲ್ಲಿ ದೇವರ ಮುಂದೆ ತನ್ನ ಇಕ್ಕಟ್ಟನ್ನೆಲ್ಲ ಪ್ರಾರ್ಥನೆಯ ಮೂಲಕ ಹೇಳಿಕೊಂಡನು. ತಕ್ಷಣದಲ್ಲಿ ಆತನಿಗೆ ಒಂದು ವೇದವಾಕ್ಯವು ನೆನಪಿಗೆ ಬಂದಿತು. ಅದಾವುದೆಂದರೆ ನಿಮ್ಮ ಚಿಂತೆಯನ್ನೆಲ್ಲ ಆತನ ಮೇಲೆ ಹಾಕಿರಿ. ಆತನೇ ಅದನ್ನು ಸಾಗಮಾಡುವನು" ಎಂಬುದೆ (ಕೀರ್ತನೆ ೩೭:೫). ಆಗಲೇ ಆತನ ಮನಸ್ಸಿಗೆ ಧೈರ್ಯ ತಂದುಕೊಂಡು ಈ ಸಂಗೀತವನ್ನು ಬರೆದು ತಂದು ತನ್ನ ಪತ್ನಿ ಮಕ್ಕಳ ಮುಂದೆ ಓದಿ, ಹಾಡಿದರಂತೆ. ಅದನ್ನು ಕೇಳಿ ಅವರೆಲ್ಲರೂ ಕಣ್ಣೀರನ್ನು ಒರೆಸಿಕೊಂಡು, ದೇವರಲ್ಲಿ ಭರವಸೆವಿಟ್ಟು ಸಂತೋಷಚಿತ್ತರಾದರಂತೆ. ಅನಂತರ ಎಲ್ಲರೂ ಮಲಗಿಕೊಂಡರು. ಸ್ವಲ್ಪ ಹೊತ್ತಾದ ಮೇಲೆ ಯಾರೋ ಬಾಗಿಲನ್ನು ತಟ್ಟಿದರು. ಬಾಗಿಲನ್ನು ತೆರೆದು ನೋಡಿದಾಗ, ಅಗೋ! ಕುದುರೆಯ ಮೇಲೆ ಒಬ್ಬಾತನು ಕೂತಿದ್ದು ಒಂದು ಪತ್ರವನ್ನು ಹಿಡಿದಿದ್ದನು. ಆತನ ಮೆನೆಸ್ಬರ್ಗ್ ಅಧಿಪತಿಯಾದ ಕ್ರಿಶ್ಚಿಯನ್ ಎಂಬಾತನಿಂದ ಕಳುಹಿಸಲ್ಪಟ್ಟವನಾಗಿದ್ದನು. ತಕ್ಷಣವೇ ಹೊರಟು ನಮ್ಮೂರಿನ ಸಭಾಪಾಲಕನ ಉದ್ಯೋಗವನ್ನು ವಹಿಸಿಕೊಳ್ಳಬೇಕು, ಎಂದು ಆ ಕಾಗದದಲ್ಲಿ ಬರೆದಿತ್ತು. ಬೋಧಕನ ಪ್ರಾರ್ಥನೆಗೆ ಸದುತ್ತರ ಸಿಕ್ಕಿತು. ತಕ್ಷಣವೇ ಅವರೆಲ್ಲರೂ ಹೊರಟು ಮೆನೆಸ್ಬರ್ಗ್‌ನಲ್ಲಿ ವಾಸವಾದರು. ಜರ್ಮನ್ ಭಾಷೆಯಲ್ಲಿ ಸಂಗೀತಗಳನ್ನು ರಚಿಸುವುದರಲ್ಲಿ ಮಾರ್ಟಿನ್ ಲೂಥರನಿಗೆ ಈತನು ಎರಡನೆಯವನೆಂಬುದಾಗಿ ಹೆಸರನ್ನು ಹೊಂದಿದನು."[೧೧೭]

ದೇವರು ಈ ಸೃಷ್ಟಿಯ ಪರಿಪಾಲಕ. ಆತನು ಪ್ರತಿಯೊಂದು ವ್ಯಕ್ತಿಯ ವಿಷಯದಲ್ಲೂ ಚಿಂತಿಸುತ್ತಾನೆ. ವಿಧೇಯ ಭಕ್ತನನ್ನು ಸಂರಕ್ಷಿಸುತ್ತಾನೆ. ಆದುದರಿಂದ ವ್ಯರ್ಥಚಿಂತೆಯನ್ನು ಬಿಟ್ಟು ವಿಶ್ವಾಸವನ್ನು

ಯೆಹೋವನಲ್ಲಿಟ್ಟು ನಿರ್ಭೀತಿಯಿಂದ ಚಿಂತೆಯನ್ನೆಲ್ಲ ಆತನ ಮೇಲೆ ಹಾಕಿ ಬದುಕಬೇಕೆಂದು ಗೀತಗಾರ ಮೊದಲನೆ ಚರಣದಲ್ಲಿ ಹೇಳಿದ್ದಾನೆ.

ನೀವು ಚಿಂತಿಸಿ, ಚಿಂತಿಸಿ ಒಂದು ಮೊಳ ಉದ್ದ ಬೆಳೆಯುವುದು ಆದೀತೇ?'(ಮತ್ತಾಯ ೬:೨೭) ಎಂಬ ಯೇಸುಸ್ವಾಮಿಯ ನುಡಿಯನ್ನು ನೆನಪಿಸುತ್ತದೆ ಈ ಚರಣ. 'ಓ ಪಾಪಿ ದೇವರಲ್ಲಿ ವಿಶ್ವಾಸಿಯಾಗಿರು, ವಿಶ್ವಾಸಮಾತ್ರದಿಂದ ರಕ್ಷಣೆ ಹೊಂದುವೆ' ಎಂದಿದ್ದಾನೆ ಗೀತಗಾರ.

ಭಕ್ತರಿಗೆ ಕಳಂಕವು ನಾನಾ ರೀತಿಯಲ್ಲಿ ಅಂಟಿಕೊಳ್ಳುತ್ತಲೇ ಇರುತ್ತದೆ. ಆಗಾಗಲೇ ಅದನ್ನು ತೊಡೆದು, ಶುಧ್ಧಿ ಮಾಡಿಕೊಳ್ಳುತ್ತಿರತಕ್ಕದ್ದು. ಅವಾಂತ್ರ ಕಾಲದಲ್ಲಿ ಭಕ್ತಿಯು ಕುಂದಿ ಹೋಗಬಹುದು. ಬಡತನ ಕೊರತೆಯ ಕಾಲದಲ್ಲಿ ದೇವರ ಮೇಲಣ ನಂಬಿಕೆಯೂ ಬಿದ್ದು ಹೋಗಬಹುದು. ಆದರೆ ನಿಜ ಭಕ್ತರಾದರೋ ದೇವರನ್ನು ಹೆಚ್ಚೆಚ್ಚಾಗಿ ಪ್ರೀತಿಸಲೂ ಧ್ಯಾನಿಸಲೂ ಬಡತನವೇ ಸಹಾಯಕವಾಗಿರುವುದೆಂದು ನಂಬಿರುತ್ತಾನೆ. 'ಅವಾಂತ್ರ ಕಾಲದಲ್ಲಿ ವಿಶ್ರಾಂತಿ ಹುಟ್ಟಿಸು' ಎಂದು ಕವಿಯು ಕರೆ ನೀಡುತ್ತಿದ್ದಾನೆ.

ನಮ್ಮಲ್ಲಿರುವುದು ಶುದ್ಧ ಅನೀತಿ, ಅಸಹ್ಯ, ಕತ್ತಲೆಗೆ ಅನುಗುಣವಾದವುಗಳೇ ಬಲು ಬೇಗನೇ ಪಾಪದಲ್ಲಿ ಬಿದ್ದು ಹೋಗತಕ್ಕ, ಬಲ ಹೀನತೆ ನಮ್ಮಲ್ಲಿದೆ. ಆದರೆ, ನಮ್ಮ ಸ್ವಾಮಿಯಲ್ಲಿಯಾದರೋ, 'ಶುದ್ದ ನೀತಿ' ನಿನ್ನಲ್ಲಿ ಬೆಳಕು, ನಿನ್ನಲ್ಲಿ ಸತ್ಯ ಪ್ರೀತಿ, ನಿನ್ನಲ್ಲಿ ಪ್ರಾಣವು' ಆದುದರಿಂದ ಕರ್ತನೇ "ಶತುರ್‍ಗಳೆಲ್ಲರನ್ನೂ ವಿನಾಶ ಮಾಡುವಿ. ಕಾಪಾಡಿ ಭಕ್ತನನ್ನು ಸುಶಾಂತಿ ಕೊಡುವಿ". ಶತ್ರುಗಳನ್ನು ಶಿಕ್ಷಿಸಿ ಸಾಹಿಸಬೇಕೆಂತಲ್ಲ, ಅವರಲ್ಲಿನ ವಿರೋಧ ಭಾವವನ್ನು ಸಾಯಿಸು ಎಂಬುದೇ ನಮ್ಮ ಪ್ರಾರ್ಥನೆ ಎಂದು ಹೇಳಿಕೊಂಡಿದ್ದಾನೆ ಗೀತಗಾರ.

ಗ್ರೈನರ್‌ರವರ ಗೀತೆಗಳ ವೈಶಿಷ್ಟ್ಯತೆಗಳು: ಗ್ರೈನರ್ ರವರು ಶತ್ರುಗಳನ್ನು ನೋಡಿರುವ ರೀತಿ ಭಿನ್ನರೀತಿಯಲ್ಲಿ ಮೂಡಿಬಂದಿದೆ ಗೀತೆ ೨೯೫ ರಲ್ಲಿ. ಸಾಮಾನ್ಯವಾಗಿ ನಮಗೆ ಕೇಡು ಬಗೆವವರನ್ನು ದೂರವಿರಿಸುತ್ತೇವೆ, ಅವರನ್ನು ಶಪಿಸುತ್ತೇವೆ. ಅವರಿಗೆ ಕೇಡು ಬಯಸುತ್ತೇವೆ. ಆದರೆ, ಗ್ರೈನರ್ ರವರ ದೃಷ್ಟಿಕೋನವೇ ಬೇರೆ. ಶತ್ರುಗಳಿಗೆ ಶುಭ ಹಾರೈಸುವ ವಿಶಿಷ್ಟ ಮನೋಭಾವ ವ್ಯಕ್ತವಾಗಿದೆ. "ನಿಮ್ಮ ಶತ್ರುಗಳನ್ನು ಪ್ರೀತಿಸಿರಿ, ನಿಮ್ಮನ್ನು ಪೀಡಿಸುವವರಿಗಾಗಿ ಪ್ರಾರ್ಥನೆ ಮಾಡಿರಿ" (ಮತ್ತಾಯ ೫:೪೪) ಎಂಬ ಯೇಸುವಿನ ಅಮರ ವಾಕ್ಯವನ್ನು ಗೀತೆಗಾರ ತನ್ನ ಜೀವನಕ್ಕೆ ಅಳವಡಿಸಿಕೊಂಡಂತಿದೆ. ಸಮಾಜದಲ್ಲಿನ ಪ್ರತಿಯೊಬ್ಬ ವ್ಯಕ್ತಿಯು ಈ ಮಹತ್ವದ ಹಾಗೂ ಅಗತ್ಯವಾದ ಗುಣವನ್ನು ಅಳವಡಿಸಿಕೊಳ್ಳಲು ನಮ್ಮನ್ನು ಪ್ರೇರೇಪಿಸುವಂತಿದೆ.

ಗೀತಗಾರನಿಗೆ ಯೇಸುವಿನೊಂದಿಗಿನ ಸಂಬಂಧ ಶಾಶ್ವತವಾದದ್ದು. ಆತ್ಮೀಯವಾದದ್ದು, ಇಹದ ಸರ್ವ ವಸ್ತು, ವ್ಯಕ್ತಿಗಳಿಗಿಂಲೂ ಶ್ರೇಷ್ಟವಾದದ್ದು. ಏನನ್ನಾದರೂ ಕಳೆದುಕೊಳ್ಳಲು ಸಾಧ್ಯ ಆದರೆ ಯೇಸುವನ್ನಲ್ಲ ಎನ್ನುತ್ತಾನೆ. "ಕ್ರಿಸ್ತಯೇಸುವಿನ ಪ್ರೀತಿಯಿಂದ ನಮ್ಮನ್ನು ಬೇರ್ಪಡಿಸಲು ಯಾರಿಂದ ಸಾಧ್ಯ ? ಕಷ್ಟ ಸಂಕಟ, ಇಕ್ಕಟ್ಟು, ಬಿಕ್ಕಟ್ಟು, ಹಿಂಸೆ ಭಾಧೆ ಇಉಗಳಿಂದ ಸಾಧ್ಯವೇ ? ಇಲ್ಲ, ಹಸಿವು, ನೀರಡಿಕೆ, ನಗ್ನಸ್ಥಿತಿ, ಆಪತ್ತು-ವಿಪತ್ತು, ಖಡ್ಗಕಠಾರಿಗಳಿಂದ ಸಾಧ್ಯವೇ? ಎಂದಿಗೂ ಇಲ್ಲ" (ರೋಮನರಿಗೆ ೮:೩೫) ಎಂದು ಸಂತ ಪೌಲನು

ಹೇಳುತ್ತಾನೆ. ಅಂತೆಯೇ ಗೀತಗಾರನಿಗೆ ಯೇಸುವನ್ನೇ ಅಂಟಿಕೊಂಡು ಬದುಕಬೇಕೆಂಬ ಬಯಕೆ. ಪ್ರತಿಯೊಬ್ಬ ವ್ಯಕ್ತಿಯೂ ದೇವರಲ್ಲಿ ಹೊಂದಿರಬೇಕಾದ ಆತ್ಮೀಯತೆ, ಭಕ್ತಿಯತ್ತ ನಮ್ಮ ಗಮನ ಸೆಳೆದಿರುವುದು ವಿಶಿಷ್ಟವಾಗಿದೆ.

೫.೩.೧೬ ರ್ಯೂಥರ್. ಚಿ – Reuther. Chi

ಕ್ರಿಶ್ಚಿಯನ್ ರ್ಯೂಥರ್ ರವರು ೧೮೫೩ ಜುಲೈ ೧೨ ರಂದು ಜರ್ಮನಿಯ Meinsheinim ನಲ್ಲಿ ಜನಿಸಿದರು. ಕೆಲವು ವರ್ಷ ಬಾಸೆಲ್‌ನಲ್ಲಿ ಸೇವೆ ಸಲ್ಲಿಸಿದರು. ೧೮೬೭ ರಲ್ಲಿ ಮಂಗಳೂರಿಗೆ ಬಂದು ಮಿಷನ್ ಪ್ರೆಸ್‌ನ ಜವಾಬ್ದಾರಿ ವಹಿಸಿಕೊಂಡರು. ಪ್ರಾರಂಭದಲ್ಲಿ ಇವರು ತಮ್ಮ ಹೃನ್ಮನಗಳನ್ನು ಮುದ್ರಣದ ಕೆಲಸ ಕಾರ್ಯಗಳಿಗಾಗಿ ಅರ್ಪಿಸಿಕೊಂಡರು. ಇದೊಂದು ಪ್ರಮುಖ ಕಾರ್ಯವಾಗಿತ್ತು. ಅದರೊಂದಿಗೆ ತಮ್ಮ ಜನರ ಆಧ್ಯಾತ್ಮಿಕ ಕೆಲಸ ಕಾರ್ಯಗಳಿಗೆ ಆಸಕ್ತಿ ವಹಿಸಿಕೊಂಡು ೧೮೬೮ ರಲ್ಲಿ ಶ್ರೀಮತಿ ಕ್ರಿಶ್ಚಿಯನ್ ಗ್ರೇಟರ್ ರವರನ್ನು ವಿವಾಹವಾದರು. ಮರು ವರ್ಷವೇ ಇವರು ಕಾಯಿಲೆಯಿಂದ ಬಳಲಿದರು. ತಮ್ಮ ಸೇವಾ ಕಾರ್ಯಕ್ಕೆ ಇದೊಂದು ಕುಂಟಿತವಾಗಿತ್ತು. ಇವರು ೧೯೭೧ ರಲ್ಲಿ ಮರಣ ಹೊಂದಿದರು. ಮರಣದ ಪೂರ್ವದಲ್ಲಿ ಇವರು ಹೀಗೆ ಹೇಳಿದರು. 'I should have liked to remain some years more on my past, but it seems, the Lord has decided otherwise and I'am glad to go to be with him, although I know that he could even this day restoe me to health. If it were his will cast all they cares on him, shortly we shall be united again'

ಗೀತೆಗಳ ಅಧ್ಯಯನ: ಕ್ರಿಶ್ಚಿಯನ್ ರ್ಯೂಥರ್ ರವರು ಒಂದು ಗೀತೆಯನ್ನು ಕನ್ನಡ ಗೀತೆಗಳು ಪುಸ್ತಕದಲ್ಲಿ ರಚಿಸಿದ್ದಾರೆ. ಇದು ಭಾಷಾಂತರ ಗೀತೆಯಾಗಿದೆ.

ಸ್ತುತಿ: ದೇವರಿಂದ ಕಾರುಣ್ಯವನ್ನು ಸ್ವೀಕರಿಸಿದ ಗೀತೆಗಾರ ಆತನನ್ನು ಸ್ತುತಿಸುವ ಬಗ್ಗೆ ವ್ಯಕ್ತವಾಗಿದೆ" ಕಟಾಕ್ಷನಾನು ಹೊಂದಿದ್ದೇನೆ" ಎಂಬ ಗೀತೆಯಲ್ಲಿ. ಇದು Mir ist Erbarmung wider fahren ಗೀತೆಯ ಭಾಷಾಂತರವಾಗಿದೆ. ಮೂಲದಲ್ಲಿ ಇದನ್ನು ಫಿಲಿಪ್ ಫೆಡ್ರಿಕ್ ಹಿಟ್ಲರ್ (೧೬೯೯–೧೭೬೯) ಎಂಬುವರು ರಚಿಸಿದರು. ಈತನು ವುರ್ತಂಬುರ್ಗಿನ ಕವಿಗಳಲ್ಲಿ ಶ್ರೇಷ್ಟನು.

ಮನುಷ್ಯರೆನ್ನ ಕೇಳುವಾಗ
ನಾ ದೇವಕೃಪೆ ಸಾರುವೆ
ಇದೊಂದೇ ನನ್ನ ನಿತ್ಯರಾಗ
'ನಾ ಕೃಪೆಯಿಂದ ಜೈಸಿದೆ'
ಕಟಾಕ್ಷವನ್ನು ನೆನೆದು,
ಕೊಂಡಾಡುತೇನೆ ನಿತ್ಯಕು

ಕನ್ನಡ ಗೀತೆಗಳು. ಗೀತೆ–೨೪೧

ಭಕ್ತನ ರಕ್ಷಣೆ ಆತನ ಸದ್ ಕಾರ್ಯಗಳಿಂದಲ್ಲ ಬದಲಾಗಿ ದೇವರ ಕಾರುಣ್ಯದಿಂದಾಗಿದೆ. ದೇವರು ಕರುಣಾಮಯಿ. ಆತನು ಕೃಪೆ ತೋರಿಸಿದರೆ ನಾವು ರಕ್ಷಣೆ ಹೊಂದುತ್ತೇವೆ. ಮಿಶನರಿಗಳು ದೇವರನ್ನು ನೋಡಿರುವ ದೃಷ್ಟಿಕೋನ ಹೇಗಿದೆಯೆಂದರೆ ಮಾನವ ಪಾಪದಿಂದ ಅಂದಕಾರದಲ್ಲಿ ಬದುಕುತ್ತಿದ್ದರೂ ದೇವರ ಕರುಣೆ ಆತನನ್ನು ಸನ್‍ಮಾರ್ಗಕ್ಕೆ ನಡೆಸಿದೆ ಎಂಬುದು. ದೇವರು ಶಿಕ್ಷಿಸುವ ದೇವರಲ್ಲ, ಬದಲಾಗಿ ಪ್ರೀತಿಸಿ ದಯೆಯಿಂದ ನೇರ ಮಾರ್ಗಕ್ಕೆ ನಮ್ಮನ್ನು ನಡೆಸುವವನಾಗಿದ್ದಾನೆ ಎಂಬ ಕಲ್ಪನೆ ಈ ಗೀತೆಯಲ್ಲಿ ಅರ್ಥಗರ್ಭಿತವಾಗಿ ಮೂಡಿ ಬಂದಿದೆ.

ರ್‍ಯೂಥರ್. ಟಿ ರವರ ಗೀತೆಗಳ ವೈಶಿಷ್ಟ್ಯತೆಗಳು: ಕೇವಲ ಒಂದೇ ಗೀತೆಯನ್ನು ರಚಿಸಿದರೂ ಇದು ದೇವರ ಕರುಣೆಯನ್ನು ಸಾರುವ ಗೀತೆಯಾಗಿದೆ. ಇಲ್ಲಿ ಗೀತೆಗಾರ ತನ್ನ ಪಾಪಮಯ ಅವಸ್ಥೆಯನ್ನು ಅರಿತುಕೊಂಡಿದ್ದಾನೆ. ಮುಕ್ತಿಯನ್ನು ಗಳಿಸಲು ಆತನು ಯೋಗ್ಯನು ಎಂಬುದನ್ನು ರ್‍ಯೂಥರ್‌ರವರು ತಮ್ಮ ಗೀತೆಯಲ್ಲಿ ವ್ಯಕ್ತಪಡಿಸಿದ್ದಾರೆ. ಪಾಪಿಯು ರಕ್ಷಣೆಯನ್ನು ಪಡೆಯಲು ಸಾಧ್ಯವಿದೆ ಎಂಬ ಮಹತ್ವಪೂರ್ಣ ಅಂಶವನ್ನು ತಿಳಿಯಪಡಿಸಿರುವುದೇ ಈ ಗೀತೆಯ ವೈಶಿಷ್ಟ್ಯವಾಗಿದೆ. ರಕ್ಷಣೆಯನ್ನು ಅನುಭವಿಸಿದ ವ್ಯಕ್ತಿ ದೇವರನ್ನು ಕೊಂಡಾಡಬೇಕು ಎಂಬುದನ್ನು ವ್ಯಕ್ತಪಡಿಸಿದ್ದಾನೆ ಗೀತೆಯಲ್ಲಿ.

೫.೩.೧೭ ಕೋಸ್ಟಾ. ಟಿ – Costa. T

ಇವರು ೧೮೬೧ ರಲ್ಲಿ ಭಾರತದ ಕಾನನೂರ್‌ಗೆ ಬಂದರು. ಧಾರವಾಡದಲ್ಲಿ ೧೮೬೨ ರಿಂದ ೧೮೭೪ ರವರೆಗೆ ಸೇವೆ ಸಲ್ಲಿಸಿದರು.

ಗೀತೆಗಳ ಅಧ್ಯಯನ: ಕನ್ನಡ ಸಂಗೀತಗಳು ಗೀತ ಪುಸ್ತಕದಲ್ಲಿ ೩ ಗೀತೆಗಳನ್ನು ರಚಿಸಿದ್ದಾರೆ. ಒಂದು ಭಾಷಾಂತರ ಗೀತೆ, ೨ ಸ್ವ-ರಚಿತ ಗೀತೆಯಾಗಿದೆ.

ಪ್ರಾರ್ಥನೆ: ಇಹದ ಸಂಪತ್ತು, ಹಣದಿಂದ ದೂರ ಸರಿದು ಯೇಸುವಲ್ಲೆ ಸಂಪೂರ್ಣವಾಗಿ ಜೀವಿಸಲು ತನ್ನನ್ನು ಯೋಗ್ಯನನ್ನಾಗಿಸು ಎಂದು ಬೇಡುವ ಗೀತೆಯೇ "ನಾ ಕುರಿ, ದಾರಿ ತಪ್ಪಿದ್ದೇನೆ" ಎಂಬ ಗೀತೆಯಲ್ಲಿ. ಇದು Wer nur den lieben Gott ಎಂಬ ರಾಗದಲ್ಲಿದೆ.

ಕ್ರಿಸ್ತೇಸು, ಹಣದಾಸೆಯನ್ನ
ವಿನಾಶಿಸೆನ್ನ ಮನ ದೊಳ್
ನಿನ್ನತಿ ಶುದ್ಧ ಮನಸನ್ನ
ನೀ ಹುಟ್ಟಿಸೆನ್ನ ಹೃದದೊಳ್।
ಸಂಪೂರ್ಣ ನಾನು ಹೊಂದಲಿ
ಸಂತೃಪ್ತಿ, ಯೇಸು ನಿನ್ನಲಿ।

ಕನ್ನಡ ಗೀತೆಗಳು, ಗೀತೆ-೨೮೧

ಸದ್ಭಾಳು, ಸದ್ಭಾವನೆ ಮನದಲ್ಲಿ ಮೂಡಬೇಕಾದರೆ ದೇವರ ಅನುಗ್ರಹ ಅಗತ್ಯ. ಇಹದ ಬಂಧನದಲ್ಲಿ ಸಿಕ್ಕಿ ಅದೇ ಜೀವನವೆಂದು ಬಗೆಯದೆ ಆ ವ್ಯಾಮೋಹದಿಂದ ಹೊರಬಂದು ಬದುಕಬೇಕೆಂದು ಬೇಡುವ ಬಗೆ ವೈಶಿಷ್ಟಪೂರ್ಣವಾಗಿದೆ.

ಹಬ್ಬಗಳು: "ಯುಗಾದಿಗೆ ಸಂಬಂಧಿಸಿದಂತೆ ಕೋಸ್ಟಾ ರವರು ರಚಿಸಿದ ಗೀತೆಯೆ 'ದಯಾಳು ದೇವರೆ' ಎಂಬುದು. ಇದು Nun danket ale Gott ಎಂಬ ಗೀತೆಯ ಭಾಷಾಂತರ. ಹೊಸ ವರ್ಷದಲ್ಲಿ ದೇವರ ಆಶೀರ್ವಾದವನ್ನು ಬೇಡಿರುವ ಬಗೆ ವ್ಯಕ್ತವಾಗಿದೆ ಗೀತೆಯಲ್ಲಿ.

ಕಾಯೆನ್ನ ಪ್ರಾಣವ
ಈ ಹೊಸ ವರ್ಷದಲ್ಲಿ!
ನಿನ್ನಾತ್ಮ ವರವ
ಸಂವರ್ಧಿಸು ನನ್ನಲ್ಲಿ
ಸಮಸ್ತ ಕಾಲದಿ
ಇರೆನ್ನ ಹತ್ತಿರ!
ನನ್ನಾತ್ಮ ದೇಹದಿ
ನೀ ಮಾಡು ವಸ್ತಿಯ!

ಕನ್ನಡ ಗೀತೆಗಳು. ಗೀತೆ–೩೫೧

ಕೋಸ್ಟಾ. ಟಿ ರವರ ಗೀತೆಗಳ ವೈಶಿಷ್ಟ್ಯತೆಗಳು: ಕೋಷ್ಟರವರ ಗೀತೆಗಳು ಸ್ತುತಿ, ಪ್ರಾರ್ಥನೆ, ಮತ್ತು ಯುಗಾದಿಗೆ ಸಂಬಂಧಿಸಿದಾಗಿದೆ. ಯೇಸುವಿನ ಜನನ, ಮರಣ, ಬೋಧನೆ, ಪುನರುತ್ಥಾಗಳಿಗೆ ಸಂಬಂಧಿಸಿದಂತೆ ಯಾವ ಗೀತೆಗಳೂ ರಚನೆಯಾಗಿಲ್ಲ. ಇವರ ಸ್ತುತಿಗೆ ಸಂಬಂಧಿಸಿದ ಗೀತೆ ಗಮನಯೋಗ್ಯವಾಗಿದೆ. ಗೀತೆಗಾರ ತನ್ನ ವೈಯಕ್ತಿಕ ಬದುಕಿನ ವರದಾನಗಳ ಕುರಿತು ಚಿಂತಿಸಿ ಸ್ತೋತ್ರ ಮಾಡುವದರೊಂದಿಗೆ ಸಮಾಜದಲ್ಲಿ ಅನಾಥರಾಗಿ, ದಿಕ್ಕುದೆಸೆಯಿಲ್ಲದೆ ಅಲೆದಾಡುವವರಿಗೆ, ವಿಧವೆಯರಿಗೆ ದೇವರು ನೀಡುತ್ತಿರುವ ಕೃಪಾವರಗಳನ್ನು ಕಂಡು ಯೇಸುವಿಗೆ ಸ್ತೋತ್ರವನ್ನರ್ಪಿಸುತ್ತಿದ್ದಾನೆ ಗೀತೆಯಲ್ಲಿ. ವೈಯಕ್ತಿಕತೆಯಿಂದ ಸಾರ್ವತ್ರಿಕತೆಯೆಡೆಗೆ ತನ್ನ ಗಮನ ಹರಿಸಿ ಸಮಾಜದಲ್ಲಿನ ಪ್ರತಿಯೊಬ್ಬ ವ್ಯಕ್ತಿಯೂ ದೇವ ಕೃಪೆಗೆ ಯೋಗ್ಯರು ಎಂಬ ಮಹತ್ವಪೂರ್ಣ ಅಂಶವನ್ನು ಗೀತೆಯಲ್ಲಿ ತಂದಿರುವುದು ವಿಶೇಷ ಅಂಶವಾಗಿದೆ.ಯುಗಾದಿ ಗೀತೆಯು ಇವರ ದೇಶೀ ಸಂಸ್ಕೃತಿಯ ಅಳವಡಿಕೆಗೆ ನಿದರ್ಶನವಾಗಿದೆ. ಹಳೆಗನ್ನಡದ ಪದಗಳ ಬಳಕೆ ಕಾಣುತ್ತೇವೆ. ಉದಾ: ಮನದೊಳ್, ಹೃದದೊಳ್, ವಿಧವೆಯರ್ಗೆ.

೫.೩.೧೮ ಸ್ಟೋಲ್ಜ್. ಸಿ – Stolz. C

ಸ್ವಿಡ್ಜರ್ ಲ್ಯಾಂಡಿನಲ್ಲಿ ಜನಿಸಿದ ಇವರು ಮಂಗಳೂರಿನಲ್ಲಿ ೧೮೬೩ ರಿಂದ ೧೮೭೩ರವರೆಗೆ ಸಲ್ಲಿಸಿದರು.

ಗೀತೆಗಳ ಅಧ್ಯಯನ: ಸ್ಟೋಲ್ಜ್ ಸಿ ರವರು ಕನ್ನಡ ಗೀತೆಗಳು ಎಂಬ ಪುಸ್ತಕದಲ್ಲಿ ೧ ಗೀತೆಯನ್ನು ರಚಿಸಿದ್ದಾರೆ. ಇದು ಭಾಷಾಂತರ ಗೀತೆಯಾಗಿದೆ. ಬಾಲಕರ ಗೀತೆಯಲ್ಲಿ ೧ ಗೀತೆಯು ಪ್ರಕಟವಾಗಿದೆ.

ಬೈಬಲ್: ಯೇಸು ಅತ್ತ ಒಂದು ಸಂದರ್ಭವನ್ನು 'ಯೆರೂಸಲೆಮ್ ಯೆರುಸಲೆಮ್!' ಎಂಬ ಗೀತೆಯಲ್ಲಿ ವರ್ಣಿಸಲಾಗಿದೆ. ಇದು ಬೈಬಲ್‌ನ ಲೂಕನ ಶುಭಸಂದೇಶದ ೧೯ನೇ ಅಧ್ಯಾಯದ ೪೧-೪೪ರ ವಚನಗಳನ್ನು ಆಧರಿಸಿ ರಚಿಸಿದ್ದಾಗಿದೆ. ಯೇಸು ಬಹಿರಂಗವಾಗಿ ಅತ್ತ ಒಂದು ಘಟನೆ ಈ ಗೀತೆಯಲ್ಲಿದೆ.

ಯೆರೂಸಲೆಮ್, ಯೆರೂಸಲೇಮ್!
ಪ್ರಭಾವವಿರಲು
ಯೆಹೋವನತಿಕಾಂತಿಯು
ನಿನ್ನಲ್ಲಿ ಕಂಡಿತು
ಈಗೆಲ್ಲ ಕುಂದಿ ಹೋಯ್ತಯ್ಯೋ
ನೀ ಶಾಪವುಳ್ಳದೇ!
ಯೆರೂಸಲೆಮ್, ಯೆರೂಸಲೇವಮ್ನಿಂಗಾಗಿ ಅಳುವೆ!

ಕನ್ನಡ ಗೀತೆಗಳು, ಗೀತೆ-೧೪೧

ಯೇಸು ಅತ್ತರು: ಪವಿತ್ರ ಗ್ರಂಥದಲ್ಲಿ ಯೇಸು ಅತ್ತ ಎರಡು ಸಂದರ್ಭಗಳು ವರ್ಣಿತವಾಗಿವೆ. ಆತನು ಮೊದಲನೆಯ ಸಾರಿ ಅತ್ತದ್ದು ಲಾಜ಼ರನ ಸಮಾದಿಯ ಬಳಿಯಲ್ಲಿ(ಯೋಹಾನ ೧೧:೩೫) ಎರಡನೇಯ ಸಾರಿ ಗೋಳಾಡಿದ್ದು ಯೆರೂಸಲೇಮ್ ನಗರವನ್ನು ಕಂಡು. ಈ ಎರಡು ಸಂದರ್ಭಗಳಲ್ಲಿಯು ಆತನು ಕಣ್ಣೀರು ಹಾಕಿದ್ದು ತನ್ನ ಪರವಾಗಿಯಲ್ಲ. ಬೇರೆಯವರ ಪರವಾಗಿ. ಇದು ಗಣ್ಯರು ಮಾಡತಕ್ಕ ಸಂಗತಿ. ದುಷ್ಟಾತ್ಮರಿಂದ ಅವರಿಗೆ ಕ್ರೂರ ಹಿಂಸೆಯಾದರೂ ಅವರು ಅಳಲಿಲ್ಲ. ಅವರು ದುಃಖಗೊಂಡದ್ದು ಬೇರೆಯವರ ಮೇಲಿನ ಕರುಣೆಯಿಂದ. ಲಾಜ಼ರನ ಸಮಾಧಿಯ ಬಳಿಯಲ್ಲಿ ಆತನು ಕಣ್ಣೀರು ಬಿಟ್ಟರು ಎಂದು ಬರೆದಿದೆ. ಯೆರೂಸಲೇಮನ್ನು ಕಂಡು ಗೋಳಾಡಿದರು. ಈ ಸಂಗತಿಗಳನ್ನು ಕುರಿತು ಧ್ಯಾನಿಸುವಾಗ ಆತನಲ್ಲಿದ್ದ ಅತ್ಯಂತ ಧೈರ್ಯವು ಅತ್ಯಂತ ಕರುಣೆಯೂ ಹೃದ್ಗತವಾಗುತ್ತದೆ.

ಸ್ಟೋಲ್ಜ್. ಸಿ ರವರ ಗೀತೆಗಳ ವೈಶಿಷ್ಟ್ಯತೆಗಳು: ಸ್ಟೋಲ್ಜ್ ಸಿ ರವರು ಕೇವಲ ಒಂದೇ ಗೀತೆಯನ್ನು ರಚಿಸಿದರು. ಆ ಗೀತೆಯು ಬೈಬಲ್ ಆಧಾರಿತ ಗೀತೆಯಾಗಿದ್ದು ಯೇಸುವಿನ ವ್ಯಕ್ತಿತ್ವದ ಒಂದು ಪ್ರಮುಖ ಅಂಶವನ್ನು ಕುರಿತು ಪರಿಚಯಸಿದ್ದಾರೆ.

ಯೇಸು ಕೇವಲ ಜನರಿಗೆ ಬೋಧನೆಯನ್ನು ಮಾಡದೆ ಜನರ ಕೆಟ್ಟ ವರ್ತನೆಗಾಗಿ 'ಅತ್ತ' ಸಂದರ್ಭವನ್ನು ಗೀತೆಯಲ್ಲಿ ನಿರೂಪಿಸಿರುವುದು ಒಂದು ವಿಶಿಷ್ಟ ಅಂಶವಾಗಿದೆ. ಮಿಶನರಿಗಳು ಯೇಸುವಿನ ಜನನ, ಮರಣ, ಬೋಧನೆ, ಪುನರುತ್ಥಾನ, ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದಂತೆ ಗೀತೆ ರಚಿಸಿದ್ದಾರೆ. ಆದರೆ ಸ್ಟೋಲ್ಜ್ ರವರು ಯೇಸುವಿನ ವ್ಯಕ್ತಿತ್ವದ ಒಂದು ಮುಖವನ್ನು ನಮಗೆ ಪರಿಚಯಿಸಿರುವುದು ಗೀತೆಯ ವಿಷಿಷ್ಟ ಅಂಶವಾಗಿದೆ. ಯೇಸು ತನ್ನನ್ನು ಪೀಡಿಸಿ ಹಿಂಸಿಸಿದಾಗಲೂ ಅಳಲಿಲ್ಲ. ಆದರೆ ಜನರ ದುರ್ವತನೆಗೆ ಅತ್ತರು ಎಂದು ತಿಳಿಸಿರುವುದು ಗಮನಾರ್ಹವಾದ ಅಂಶ.

೩.೩.೧೯ ಸ್ಪ್ರಿಂಗ್. ಎ – Spring. A

ಜರ್ಮನಿಯಿಂದ ಆಗಮಿಸಿದ ಇವರು ಗುಲ್ಲೇದಗುಡ್ಡ ಎಂಬಲ್ಲಿ ೧೯೦೦-೧೯೦೧ರವರೆಗೆ ಸೇವೆ ಸಲ್ಲಿಸಿದರು. ಬೆಟಗೇರಿಯಲ್ಲಿ ೧೯೦೨ ರಿಂದ೧೯೦೮ ರವರೆಗೆ ಸೇವೆ ಸಲ್ಲಿಸಿದಿರು.

ಗೀತೆಗಳ ಅಧ್ಯಯನ: ಸ್ಪ್ರಿಂಗ್. ಎ ರವರು ಕನ್ನಡ ಗೀತೆಗಳು ಪುಸ್ತಕದಲ್ಲಿ ೮ ಗೀತೆಗಳನ್ನು ರಚಿಸಿದ್ದಾರೆ. ಎಲ್ಲ ಗೀತೆಗಳು ಭಾಷಾಂತರ ಗೀತೆಗಳಾಗಿವೆ. ಈ ಕೆಳಗಿನ ವರ್ಗೀಕರಣ ಇಂತಿದೆ.

ಯೇಸುವಿನ ಭಜನೆ	೦೨
ಸಭೋತ್ಸವ	೦೧
ರಕ್ಷಣಾ ಮಾರ್ಗ	೦೧
ದೇವ ಪ್ರಾರ್ಥನೆ	೦೧
ಕ್ರೈಸ್ತ ಮನಶಾಂತಿ	೦೨
ವಿಶೇಷ ಕಾಲಗಳಿಗೆ ತಕ್ಕ ಗೀತೆಗಳು	೦೧
ಒಟ್ಟು	೦೮ ಗೀತೆಗಳು

ಕ್ರಿಸ್ತರ ವ್ಯಕ್ತಿತ್ವ: ಯೇಸುವಿನ ವ್ಯಕ್ತಿತ್ವವನ್ನು ವರ್ಣಿಸುವ ಗೀತೆ 'ಸರ್ವಕಷ್ಟ ಪರಿಹಾರ' ಇದು What a friend we have in Jesus ಎಂಬ ಗೀತೆಯ ಬಾಷಾಂತರವಾಗಿದೆ. ಇದೇ ಗೀತೆಯನ್ನು ಬಿ. ರೈಸ್ ರವರೂ ರಚಿಸಿದ್ದಾರೆ. ಇಂದೂ ಜನಪ್ರಿಯವಾಗಿ ಆಂಗ್ಲ ಭಾಷೆಯಲ್ಲಿಯೂ ಈ ಗೀತೆ ಬಳಕೆಯಾಗಿದೆ. ಯೇಸುವನ್ನು ಮಿತ್ರನಂತೆ ಕಂಡು ಆತನಲ್ಲಿ ತನ್ನ ಕಷ್ಟ ಸಂಕಟಗಳನ್ನು ಹೇಳಿಕೊಳ್ಳುವ ಬಗೆ ವರ್ಣಿತವಾಗಿದೆ.

ಸ್ಪ್ರಿಂಗ್ ಎ ರವರ ಗೀತೆ	**ರೈಸ್ ಬಿ ರವರ ಗೀತೆ**
ಸರ್ವ ಕಷ್ಟ ಪರಿಹಾರ	ಹಾ । ಎಂಥಾ ಅಮೂಲ್ಯ ಮಿತ್ರ
ಗೈಯುವಂಥ ಕ್ರಿಸ್ತನು	ನಮಗೀಗ ಸಿಕ್ಕಿದ!
ಇದ್ದರೆನಗೆಂಥಾ ಭಾಗ್ಯ	ಪಾಪ, ದುಃಖ, ಭಯವೆಲ್ಲಾ
ಆತ್ಮಕ್ಕೆಂಥಾ ಸೌಖ್ಯವು!	ಪರಿಹಾರ ಮಾಡಿದ

ಮರ್ತ್ಯರಾದ ಮಿತ್ರರೆಲ್ಲ
ನನ್ನ ಮರ್ತು ಬಿಟ್ಟರು
ದಿವ್ಯ ಮಿತ್ರನಾದ ಕ್ರಿಸ್ತ
ಎಂದೂ ಬಿಡದಾತನು

ಸ್ಥಿರಾನಂದ ಸಮಾಧಾನ
ಹೊಂದಲಾಶಿಸಿದರೆ
ಯೇಸು ಸ್ವಾಮಿಯನ್ನು ನಿತ್ಯ
ಬೇಡುತ್ತಿರು, ಮನವೇ!

ಕನ್ನಡ ಗೀತೆಗಳು, ಗೀತೆ- ೧೫

ಸ್ಪ್ರಿಂಗ್ ಮತ್ತು ರೈಸ್ ಬಿ. ರವರ ಗೀತೆಗಳಲ್ಲಿ ಯೇಸುವಿನ ಬಗೆಗಿರುವ ಅವರ ಅಂತರಿಕ ನಂಬಿಕೆ ವ್ಯಕ್ತವಾಗಿದೆ. ಯೇಸುವಿನ ಮಿತ್ರತ್ವ ಇಹಲೋಕದ ವ್ಯಕ್ತಿಗಳಿಗಿಂತ ಶ್ರೇಷ್ಠವಾದದ್ದು. ಶಾಶ್ವತವಾದದ್ದು ಸಾಂತ್ವನ ನೀಡುವುದಾಗಿದೆ ಎಂಬ ನಂಬಿಕೆ ವ್ಯಕ್ತವಾಗಿದೆ.

ಪ್ರಾರ್ಥನೆ: ಪ್ರಾರ್ಥನೆಯ ಕುರಿತು ಸ್ಪ್ರಿಂಗ್‌ರವರು ರಚಿಸಿದ ಗೀತೆಯೆ 'ಸರ್ವೇಶ ಪುತ್ರ, ಜೀವ, ತೇಜ' ಎಂಬ ಗೀತೆ. ಇದು O Goltes sohn du Licht und Leben ಎಂಬ ಗೀತೆಯ ಭಾಷಾಂತರವಾಗಿದೆ. ಪ್ರಾರ್ಥನಾ ಬದುಕನ್ನು ನಡೆಸಲು ಯೋಗ್ಯವಾಗುವಂತೆ ಅನುಗ್ರಹಿಸಬೇಕೆಂದು ಬೇಡುವ ಗೀತೆ ಇಂತಿದೆ.

ದಿನಾಲೂ ಜಪ ಮಾಡಲಿಕ್ಕೆ
ನಿನ್ನಾತ್ಮ ದಯಪಾಲಿಸು
ಸದ್ವಾಕ್ಯವನ್ನು ಕೇಳಲಿಕ್ಕೆ
ಸಮನಸ್ಸನ್ನು ಹುಟ್ಟಿಸು
ಸುಚಿತ್ತಕ್ಕನುಸಾರವಾಗಿ
ಸದ್ಭಕ್ತಿಗನುಗುಣವಾಗಿ
ನನ್ನುಡಿ ನಡೆ ರೂಪಿಸು
ನನ್ನಲ್ಲಿ ಹೊಸ ಜೀವವನ್ನು
ಸುವಾರ್ತಾ ವಾಕ್ಯ ಫಲವನ್ನು
ಸುನಾಥನೇ, ಸಂವರ್ಧಿಸು!

ಕನ್ನಡ ಗೀತೆಗಳು, ಗೀತೆ-೧೬೩

ಗದ್ಯ ರೂಪದ ಸಾಲುಗಳನ್ನೇ ಹೊಂದಿರುವ ಈ ಗೀತೆ ನೀತಿ ಬೋಧಕವಾದದ್ದು. ಗೀತಗಾರನಿಗೆ ದೇವ ವಾಕ್ಯದಲ್ಲಿರುವ ಭಕ್ತಿ, ದೇವ ಪ್ರೀತಿಗೆ ಪಾತ್ರನಾಗಬೇಕೆಂಬ ಬಯಕೆ ವ್ಯಕ್ತವಾಗಿದೆ. ಪ್ರತಿ ಸಾಲುಗಳು ಒಳ್ಳೆಯ ಬದುಕಿಗೆ ನಮ್ಮನ್ನು ಪ್ರೇರೇಪಿಸುವಂತಾದ್ದಾಗಿದೆ. ಬದುಕಿನ ಪ್ರತಿ ಕ್ಷಣಗಳನ್ನು ಹೇಗೆ ಕಳೆಯಬೇಕೆಂಬ ನಿಧಾನವನ್ನು ಗೀತೆಯನ್ನು ನೀಡಲಾಗಿದೆ.

ಸ್ಪ್ರಿಂಗ್.ಎ ರವರ ಗೀತೆಗಳ ವೈಶಿಷ್ಟ್ಯತೆಗಳು: ಸ್ಪ್ರಿಂಗ್ ಎ ರವರ ಗೀತೆಗಳೆಲ್ಲವೂ ಭಾಷಾಂತರ ಗೀತೆಗಳಾಗಿವೆ. ಯೇಸುವಿನ ವ್ಯಕ್ತಿತ್ವಕ್ಕೆ ಸಂಬಂಧಿಸಿದಂತೆ ಇವರು ಬರೆದ ಗೀತೆಯಲ್ಲಿ ಯೇಸುವನ್ನು ಮಿತ್ರನೆಂದು

ಕರೆದಿರುವುದು ವಿಶಿಷ್ಟವಾಗಿದೆ. ಕೀರ್ತನಾಗಾರ ಹೀಗೆನ್ನುತ್ತಾರೆ. 'ಸಂಕಟದಲಿ ಮೊರೆಯಿಟ್ಟೆನು ಪ್ರಭುವಿಗೆ! ಕೊಟ್ಟನು ಸದುತ್ತರವನು ಆತನೆನಗೆ[೧೧೮] ಇಲ್ಲಿಯೂ ಗೀತಗಾರ ತನ್ನನ್ನು ಸಕಲ ಕೇಡುಗಳಿಂದ ಪಾರು ಮಾಡಿದ್ದಕ್ಕಾಗಿ ಆತನನ್ನು ಗೆಳೆಯನೆಂದು ಕರೆದಿದ್ದಾನೆ. ಆಪತ್ತಿನ ಸಮಯದಲ್ಲಿ ಗೆಳೆಯನಂತೆ ದೇವರು ನಮ್ಮೊಡನಿದ್ದಾನೆ ಎಂಬ ಭರವಸೆಯನ್ನು ಮೂಡಿಸುವ ಗೀತೆ ವಿಶಿಷ್ಟಪೂರ್ಣವಾಗಿ ರಚಿತವಾಗಿದೆ.

ದೇವ ಸಮಾಧಾನವನ್ನು ನದಿಗೆ ಹೋಲಿಸಿ ಅಲಂಕಾರಿಕವಾಗಿ ವರ್ಣಿಸಿದ್ದಾನೆ ಗೀತೆ ೨೯೭ ರಲ್ಲಿ "ಎನ್ನ ಮನಕೆ ಶಾಂತಿ ದೇವನಿಂದಲೆ! ನನಗೆ ನಂಬಿಕೆ ನಿರೀಕ್ಷೆ ಆತನಿಂದಲೇ"[೧೧೯] ಎಂದು ಕೀರ್ತನಾಗಾರ ಹೇಳಿದ್ದಾನೆ. ಭಕ್ತನಲ್ಲಿ ಧೈರ್ಯ, ನಂಬಿಕೆ ಉದ್ಭವಿಸುವುದು ದೇವ ಸಮಾಧಾನ ಆತನಲ್ಲಿ ನೆಲೆಗೊಂಡಾಗ ಆದ್ದರಿಂದ ಆ ಸಮಾಧಾನ ತನ್ನಲ್ಲಿ ಅಗತ್ಯವೆಂದು ಭಾವಿಸಿದ್ದಾನೆ ಗೀತಗಾರ.

ದೇಶೀ ಶೈಲಿಯನ್ನು ಗೀತೆಯಲ್ಲಿ ರೂಢಿಸಿಕೊಂಡು ದೇಶೀ ಸಂಸ್ಕೃತಿಗೆ ಒಗ್ಗಿಕೊಂಡಿದ್ದಾರೆ.

೫.೩.೧೯ ಹೊಚ್. ಎಮ್ – Hoch. M

ಧಾರವಾಡದಲ್ಲಿ ೧೮೭೬ ಮತ್ತು ೧೮೭೭ ರಲ್ಲಿ ಹಾಗೂ ಮಂಗಳೂರಿನಲ್ಲಿ ೧೮೭೮–೧೮೯೭ ರವರೆಗೆ ಸೇವೆ ಸಲ್ಲಿಸಿದರು. ಇವರು ಸ್ವಿಡ್ಜರ್‌ಲ್ಯಾಂಡ್‌ನಿಂದ ಆಗಮಿಸಿದರು.

ಗೀತೆಗಳ ಅಧ್ಯಯನ: ಹೊಚ್‌ರವರು 'ಕನ್ನಡ ಗೀತೆಗಳು' ಪುಸ್ತಕದಲ್ಲಿ ೧ ಗೀತೆಯನ್ನು ರಚಿಸಿದ್ದಾರೆ.

ಪರಲೋಕ: ಪರಲೋಕ ಮಾನವನ ಮನಸ್ಸಿಗೆ ಎಟುಕದ ಕಲ್ಪನೆಯತ್ತ ನಮ್ಮ ದೃಷ್ಟಿಯನ್ನು ಹರಿಸುತ್ತದೆ. ಸ್ವರ್ಗದ ವೈಭವದತ್ತ ನಮ್ಮ ಗಮನ ಸೆಳೆವ ಗೀತೆಯೆ 'ಹಾ ಯೆರೊಸಲೇಮ್ ಶ್ರೀವಾಸ' ಎಂಬುದು ಇದು Alle menschen miissen sterben ಎಂಬ ರಾಗದಲ್ಲಿದೆ. ಬಾಲಕರ ಗೀತೆಯಲ್ಲಿಯೂ ಈ ಗೀತೆ ಪ್ರಕಟವಾಗಿದೆ.

ಹಾ ಯೆರೊಸಲೇಮ್ ಶ್ರೀವಾಸ!
ಎಂಥ ಜ್ಯೋತಿ ಶೋಭೆಯು
ಎಂಥ ಹರ್ಷ, ಎಂಥುಲ್ಲಾಸ
ನಿತ್ಯ ನಿನ್ನಲಿರೋದು!
ಹಲ್ಲೆಲೂಯ! ಜಯ ಜಯ!
ಮೂಡಿ ಬಂತು ಸೂರ್ಯೋದಯ
ಮೂಡಿ ಬಂತಾ ದಿನವು
ಅದಕಂತ್ಯವಿರದು!

ಕನ್ನಡ ಗೀತೆಗಳು, ಗೀತೆ–೪೦೦

ಸ್ವರ್ಗ ರಾಜ್ಯಕ್ಕೆ ಎಂದೂ ಅಂತ್ಯವಿಲ್ಲ. ಅದು ಸದಾ ಜ್ಯೋತಿಯಿಂದ ಶೋಭಿಸುತ್ತದೆ. ಹರ್ಷದಿಂದ ದೂತ ಗಣಗಳು ನಲಿಯುತ್ತವೆ ಎಂದು ಕಲ್ಪಿಸಿಕೊಂಡಿದ್ದಾನೆ ಗೀತಗಾರ. ಆತನ ಕಲ್ಪನಾ ಶಕ್ತಿಗೆ ಈ ಗೀತೆ ಉದಾಹರಣೆಯಾಗಿದೆ.

ಗೀತೆಯಲ್ಲಿ ಕವಿಯು ಯೆರೂಸಲೇಮನ್ನು ಚೈತನ್ಯಾರೋಪಣೆಪಟ್ಟು ಸಂಭೋದಿಸಿದ್ದಾನೆ. ಯೆರುಸಲೇಮ್ ನಗರವನ್ನು ತನ್ನಲ್ಲಿರುವ ಹರ್ಷ, ಉಲ್ಲಾಸಕ್ಕಾಗಿ ಸಂತೋಷಪಡು ಎಂದು ಕರೆದಿದ್ದಾನೆ.

ಹೊಚ್. ಎಮ್ ರವರ ಗೀತೆಗಳ ವೈಶಿಷ್ಟ್ಯತೆಗಳು: ಹೊಚ್‌ರವರು ಕೇವಲ ಒಂದೇ ಗೀತೆಯನ್ನು ರಚಿಸಿದ್ದರೂ ಆ ಗೀತೆ ಅವನ ಕಲ್ಪನಾ ಶಕ್ತಿಗೆ ನಿದರ್ಶನವಾಗಿದೆ. ಸ್ವರ್ಗದ ಮಹಿಮೆಯನ್ನು ಸೂರ್ಯ ಜ್ಯೋತಿಗೆ ಹೋಲಿಸುತ್ತಾ ಮನಸ್ಸಿಗೆ ಎಟಕುವಂತೆ ಗೀತೆಯನ್ನು ರಚಿಸಿದ್ದಾರೆ. ಅಲ್ಲಿಯ ಜೀವನದ ಕುರಿತು ವರ್ಣಿಸುವಾಗ ಅಲ್ಲಿ ಸದಾ ಹರ್ಷವೇ ಇದೆ ಎಂದು ವರ್ಣಿಸಿದ್ದಾನೆ. ಯೆರೂಸಲೇಮ್ ನಗರವನ್ನು ಚೈತನ್ಯಾರೋಪಣೆಯಾಗಿ (Personification) ಹೇಳಿರುವುದು ಕವಿಯ ಸೃಜನ ಶೀಲತೆಗೆ ಉದಾಹರಣೆಯಾಗಿದೆ.

೫.೩.೨೧ ಹರ್ಲಿನ್. ಇ – Horlin. E

೧೮೭೩ ರಲ್ಲಿ ಜರ್ಮನಿಯಿಂದ ಮಂಗಳೂರಿಗೆ ಬಂದರು. ಮುಲ್ಕಿಯಲ್ಲಿ ೧೮೭೪ ಮತ್ತು ಮಂಗಳೂರಿನಲ್ಲಿ ೧೮೭೫ ರಿಂದ ೧೮೭೭ ರವರೆಗೆ ಸೇವೆ ಸಲ್ಲಿಸಿದರು.

ಗೀತೆಗಳ ಅಧ್ಯಯನ: ಹರ್ಲಿನ್‌ರವರು ಕನ್ನಡ ಗೀತೆಗಳು ಪುಸ್ತಕದಲ್ಲಿ ಒಂದೇ ಗೀತೆಯನ್ನು ರಚಿಸಿದ್ದಾರೆ.

ಪ್ರಾರ್ಥನೆ: ಪ್ರಾರ್ಥನೆಗೆ ಸಂಬಂಧಿಸಿದಂತೆ ಹರ್ಲಿನ್‌ರವರು ರಚಿಸಿದ ಗೀತೆ 'ದೇವರೇ! ಕಟಾಕ್ಷವುಳ್ಳ' ಎಂಬುದು ಇದು ಗೀತೆಯ ಭಾಷಾಂತರವಾಗಿದೆ. ಇದು ೧೦೮ ಸಾಲುಗಳು ೯ ಚರಣಗಳಲ್ಲಿ ಹೊಂದಿರುವ ದೀರ್ಘ ಗೀತೆಯಾಗಿದೆ.

ನಾವೆ ಗಟ್ಟಿ ಲಂಗ್ರದಿಂದ	ಮಧುರವಹುದು
ನೀ ದೃಢ ಪಡಿಸೆನ್ನನು!	ಯೇಸು ನೀನು
ಇಹಲೋಕ ತಾಪತ್ರಯ	ಕೈಕೊಡಲು
ಬಂದಾಗ್ಯು ನಿನಗೆನ್ನ ದಯ	ನೀ ಮೆಚ್ಚಲು
ಸಾಕೆಂದು ಧೈರ್ಯಗೊಳಿಸು!	ನಾ ನಿತ್ಯವಾಗಿ ತೃಪ್ತನು
ಕಷ್ಟಾದ ಕಷ್ಟವು	

ಕನ್ನಡ ಗೀತೆಗಳು, ಗೀತೆ–೩೩೪

ಭಕ್ತನು ತನ್ನ ಎಲ್ಲ ಕೆಲಸ ಕಾರ್ಯಗಳನ್ನು, ಚಿಂತನೆಗಳನ್ನು ದೇವರಿಗೆ ಅರ್ಪಿಸಿ ಅವೆಲ್ಲವೂ ಫಲ ಪ್ರದವಾಗಲೆಂದು ಪ್ರಾರ್ಥಿಸಿದ್ದಾನೆ. ನಾವೆಯನ್ನು ಲಂದ್ರದಿಂದ ಕಟ್ಟಿ ಹಾಕಿದಾಗ ಭೀಕರ ಅಲೆಗಳು, ಬಿರುಗಾಳಿ ಬಡಿದರೂ ನಾವೆ ಸುರಕ್ಷಿತವಾಗಿ ಆ ಸ್ಥಳದಲ್ಲಿಯೆ ಸ್ಥಿರವಾಗಿ ನಿಂತಿರುತ್ತದೆ. ಮನುಷ್ಯನು ದೇವರಲ್ಲಿ ಭದ್ರವಾಗಿ

ನಿಂತಾಗ ಶತೃಗಳು, ರೋಗಗಳು, ಕಷ್ಟ ತಾಪತ್ರಯಗಳು, ಸುಖಭೋಗಗಳು ನಮ್ಮನ್ನು ಆತನಿಂದ ದೂರ ಮಾಡಲಾರವು ಬದಲಾಗಿ ಎಂತಹ ವಿಷಮ ಸ್ಥಿತಿಯಲ್ಲೂ ನಾವು ದೇವರಲ್ಲಿ ಭದ್ರವಾಗಿ ನಿಲ್ಲುತ್ತೇವೆ. ಭಕ್ತ ಯೇಸುವಲ್ಲಿ ನೆಲೆಗೊಳ್ಳುವಂತೆ ಮಾಡಲು ಭಿನ್ನವಿಸಿಕೊಂಡಿದ್ದಾನೆ.

ಹರ್ಲಿನ್‌ರವರ ಗೀತೆಗಳ ವೈಶಿಷ್ಟ್ಯತೆಗಳು: ಹರ್ಲಿನ್‌ರವರು ಕೇವಲ ಒಂದೇ ಗೀತೆಯನ್ನು ರಚಿಸಿದ್ದು ಈ ಗೀತೆಯು ದೀರ್ಘ ಗೀತೆಯಾಗಿದ್ದು ಆಧ್ಯಾತ್ಮ ಮೌಲ್ಯವನ್ನು, ಕಾವ್ಯ ಗುಣವನ್ನು ಹೊಂದಿದೆ. ಒಬ್ಬ ವ್ಯಕ್ತಿ ಸುಸಂಸ್ಕೃತ ವ್ಯಕ್ತಿಯಾಗಲು ದೇವರಲ್ಲಿ ಬೇಡುವ ಬಗೆ ಈ ಗೀತೆಯಲ್ಲಿ ವ್ಯಕ್ತವಾಗಿದೆ. ನೈಸರ್ಗಿಕವಾದ ಉದಾಹರಣೆಯನ್ನು ಬಳಸಿಕೊಂಡು ಗೀತೆ ರಚಿಸಿರುವುದರಿಂದ ಸುಲಭವಾಗಿ ಅರ್ಥೈಸಿಕೊಳ್ಳಲು ಸಾಧ್ಯವಾಗಿದೆ.

೫.೩.೨೨ ಮ್ಯುಲ್ಲರ್. ಜೆ – Muller. J

ಮ್ಯುಲ್ಲರ್‌ರವರು ೧೮೧೩ ರಲ್ಲಿ ವುರ್ತೆಂಬರ್ಗ್‌ದಲ್ಲಿಯ ಗ್ಯೊಪ್ಪಿಂಗೆನ್ ಎಂಬಲ್ಲಿ ಜನಿಸಿದರು. ತನ್ನ ಹಿರಿಯ ಅಣ್ಣನು ಮಿಶನರಿ ಸೇವೆಗಾಗಿ ತೊಡಗಿದಾಗ ಇವರೂ ಕೂಡ ಆ ಸೇವೆಯಿಂದ ಪ್ರೇರಿತರಾಗಿ ಬಾಸೆಲ್ ಮಿಶನ್ ಕಾಲೇಜಿಗೆ ಸೇರಿದರು. ೧೮೩೯ ರಲ್ಲಿ ಇತರ ೪ ಜನ ಮಿಶನರಿಗಳೊಂದಿಗೆ ಭಾರತಕ್ಕೆ ಪ್ರಯಾಣ ಬೆಳೆಸಿ ಮಂಗಳೂರಿನಲ್ಲಿ ಕೆಲವು ತಿಂಗಳುಗಳಿದ್ದು ಕನ್ನಡ ಕಲಿತರು. ೧೮೪೧ ರಲ್ಲಿ ಹುಬ್ಬಳ್ಳಿಗೆ ಬಂದು ಸುವಾರ್ತೆ ಬೋಧಿಸುವುದರೊಂದಿಗೆ ಶಾಲೆಗಳನ್ನು ಸ್ಥಾಪಿಸುವುದರಲ್ಲಿಯೂ ಸೇವೆ ಸಲ್ಲಿಸಿದರು. ೧೮೫೪ ರಿಂದ ೫೬ ರವರೆಗೆ ಇವರಿಗೆ ಸಹಾಯಕರಾಗಿ ಫರ್ಡಿನಾಂಡ್ ಕಿಟಲ್‌ರವರು ಸೇವೆ ಮಾಡಿದರು. ಕನ್ನಡವನ್ನು ಚೆನ್ನಾಗಿ ಅಭ್ಯಾಸ ಮಾಡಿದ ಇವರು ಜರ್ಮನ್ ಭಾಷೆಯ ಸಂಗೀತದ ಆಧಾರದ ಮೇಲೆ ಬಾಸೆಲ್ ಮಿಶನ್ ಸಂಗೀತ ಪುಸ್ತಕದಲ್ಲಿನ ೯೫ನೇಯ ಗೀತವನ್ನು ಸ್ವತಃ ರಚಿಸಿದರು.

ಇಪ್ಪತ್ತೈದು ವರ್ಷಗಳ ದೀರ್ಘ ಕಾಲದವರೆಗೆ ಹುಬ್ಬಳ್ಳಿಯಲ್ಲಿ ಸೇವೆ ಸಲ್ಲಿಸಿ ತಮ್ಮ ೫೧ನೇ ವಯಸ್ಸಿನಲ್ಲಿ ೧೮೬೩ರ ಡಿಸೆಂಬರ್ ೨೮ ರಂದು ಹುಬ್ಬಳ್ಳಿಯಲ್ಲಿಯೇ ನಿಧನರಾದರು. ಇವರ ಮೃತ ದೇಹವನ್ನು ಮಿಶನ್ ಬಂಗ್ಲೆಯ ಸಮೀಪ ಹೂಳಿಡಲಾಯಿತು. ದೇವಾಲಯದ ವಿಸ್ತರಣೆಯ ಸಮಯದಲ್ಲಿ ಅವರ ಸಮಾಧಿಯ ಶಿಲೆಯನ್ನು ದೇವಾಲಯದ ಮುಂದಿನ ಗೋಡೆಯಲ್ಲಿ ಸ್ಥಾಪಿಸಲಾಯಿತು. ಇವರ ಸೇವೆಯ ಜ್ಞಾಪಕಾರ್ಥವಾಗಿ ಉಣಕಲ್ಲಿನಲ್ಲಿಯ ದೇವಾಲಯಕ್ಕೆ "Muller Memorial Church ಎಂದು ನಾಮಕರಣ ಮಾಡಲಾಗಿದೆ."[೧೨೦]

ಗೀತೆಗಳ ಅಧ್ಯಯನ: ಮ್ಯುಲ್ಲರ್‌ರವರು ಕನ್ನಡ ಗೀತೆಗಳು ಪುಸ್ತಕದಲ್ಲಿ ಒಂದು ಹಾಡನ್ನು ರಚಿಸಿದ್ದಾರೆ.

ಹಬ್ಬಗಳು: ಯೇಸುವಿನ ಪುನರುತ್ಥಾನಕ್ಕೆ ಸಂಬಂಧಿಸಿದಂತೆ ಮ್ಯುಲ್ಲರ್‌ರವರು ರಚಿಸಿದ ಗೀತೆಯೇ 'ಈ ದಿನದಲ್ಲಿ ಯೇಸುವ' ಇದು Wie schon leucht't uns der Morgenstern ಎಂಬ ರಾಗದಲ್ಲಿದೆ. ಯೇಸುವು ಪುನರುತ್ಥಾನದ ದಿನವನ್ನು ಸ್ಮರಿಸಿ ಆತನಿಗೆ ಕೊಂಡಾಡಿ ಎಂದು ಕರೆ ನೀಡಿದ್ದಾನೆ ಗೀತೆಯಲ್ಲಿ.

ಈ ದಿನದಲ್ಲಿ ಯೇಸುವು
ಸಮಾಧಿಯಿಂದ ಎದ್ದನು
ಸಜೀವ ರಾಜನಾಗಿ
ವಿಜಯಗೀತ ಹಾಡಿರಿ!
ಅನಂತ ಸ್ತೋತ್ರ ಮಾಡಿರಿ
ವಿಧೇಯ ದಾಸರಾಗಿ!

ತನ್ನ ಘನ
ಹಿಂದೆ ಬಿಟ್ಟು
ಪ್ರೀತಿ ಇಟ್ಟು
ನರರಲ್ಲಿ
ಕ್ರಿಸ್ತ ಸತ್ತ ಕ್ರೂಜೆಯಲ್ಲಿ

ಕನ್ನಡ ಗೀತೆಗಳು,ಗೀತೆ–೯೫

ಮ್ಯುಲ್ಲರ್‌ರವರ ಗೀತೆಗಳ ವೈಶಿಷ್ಟ್ಯತೆಗಳು: ಮ್ಯುಲ್ಲರ್ ರಚಿಸಿದ ಒಂದೇ ಒಂದು ಗೀತೆಯು ಸ್ವರಚಿತ ಗೀತೆಯಾಗಿದೆ. ಯೇಸುವಿನ ಪುನರುತ್ಥಾನವನ್ನು ವರ್ಣಿಸುವ ಈ ಗೀತೆ ದೇಶೀ ಛಂದಸ್ಸನ್ನು ಮೈಗೂಡಿಸಿಕೊಂಡಂತಿದೆ. ಚಿಕ್ಕ ಸಾಲುಗಳು, ಸರಳ ಪದಗಳು, ಕೋರಿಕೆ ಇವು ಈ ಗೀತೆಯ ವೈಶಿಷ್ಟ್ಯವಾಗಿದೆ.

ಯೇಸುವಿನ ಪುನರುತ್ಥಾನ ಗೀತಗಾರನಿಗೆ ಸಂತಸದ ಸಂಗತಿಯಾಗಿದೆ. ತನ್ನನ್ನು ಪಾಪದ ಮೋಹದ, ಪ್ರಾಪಂಚಿಕ ಅಭಿಲಾಷೆಯ ಬಂಧನದಿಂದ ಮುಕ್ತಿಗೊಳಿಸಿದ ಘಟನೆಯಾಗಿದೆ. ಆದ್ದರಿಂದ ಆತನಲ್ಲಿ ಹರ್ಷದ ಹೊನಲು ತುಂಬಿ ಹರಿದಿದೆ. ತನ್ನ ಸಂತೋಷಕ್ಕೆ ಭಾಗಿಯಾಗಿರೆಂದು, ವಿಜಯ ಗೀತೆ ಹಾಡಿರಿ ಎಂದು ಎಲ್ಲರನ್ನು ಕೇಳಿಕೊಂಡಿದ್ದಾನೆ. ಸಂತಸದ ಬಾಳಿಗೆ ಆಹ್ವಾನವನ್ನಿಡುತ್ತಿದ್ದಾನೆ. ಹಿಂಸೆ, ಸಂಕಷ್ಟಗಳ ದಾರಿಯಲ್ಲಿ ನಡೆಯುವ ವ್ಯಕ್ತಿಗೆ ಅದೇ ಅಂತಿಮವಲ್ಲ. ಆತನ ವಿಜಯದ ದಿನಗಳು ಆತನ ಬೆನ್ನು ಹಿಂದೆಯೇ ಇರುತ್ತದೆ. ಒಮ್ಮೆ ಆತನಿಗೆ ವಿಜಯ ಗೀತೆಯನ್ನು ಹಾಡಲು ಸಂದರ್ಭವೊದಗುತ್ತದೆ ಎಂಬ ಸತ್ಯದತ್ತ ನಮ್ಮ ಗಮನ ಸೆಳೆದಿರುವುದು ವಿಶಿಷ್ಟವಾಗಿದೆ.

೫.೩.೨೩ ತ್ಸಿಗ್ಲರ್. ಎಫ್ – Ziegler. F

೧ನೇ ಶತಮಾನದಲ್ಲಿ ಜರ್ಮನ್ ಮಿಶನರಿಗಳಲ್ಲಿ ಕೊನೆಯ ಹಾಗೂ ಕನ್ನಡ ಸಾಹಿತ್ಯಕ್ಷೇತ್ರ ಮತ್ತು ವಿದ್ಯಾಕ್ಷೇತ್ರಗಳಲ್ಲಿ ಆಸ್ಥೆ ವಹಿಸಿದ್ದ ಸುಪ್ರಸಿದ್ದ ಮಿಶನರಿಯೆ ರೆ. ಪ್ರೆಡಿಕ್ ತ್ಸಿಗ್ಲರ್‌ರವರು. ಇವರು ವುರ್ತಂಬರ್ಗಿನ ಬಾಬ್ಲಿಂಜೆನ್ನಿನ ಡಾಗರ ಪೈಮ (Doggersheim) ನಲ್ಲಿ ೧೮೩೨ ರಲ್ಲಿ ಜನಿಸಿದರು.[೧೨೧] ತಂದೆ ಜಾಕೆಟ್ ಫ್ರೆಡ್ರಿಕ್ ತ್ಸಿಗ್ಲರ್ ಹಾಗೂ ತಾಯಿ ಮರಿಯಾ ಮಾರ್ಗರೇಟ್. ತಾಯಿ ಕುಶಾಗ್ರಮತಿ ಆದರೆ ಇವರಿಗೆ ತಾಯಿಯ ಆರೈಕೆ ಬಹಳ ಲಭ್ಯವಾಗಲಿಲ್ಲ. ಕೇವಲ ನಾಲ್ಕನೆಯ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದರು. ಇವರ ತಂದೆ ರೈತನಾಗಿದ್ದು ವಿದ್ಯಾಪಕ್ಷಪಾತಿಯಾದದ್ದರಿಂದ ವಿದ್ಯಾಸಂಸ್ಥೆಗಳ ಪೋಷಕರಾಗಿದ್ದರು. ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಸ್ವಗ್ರಾಮದಲ್ಲೇ ಮುಗಿಸಿದರು. ಶಿಕ್ಷಕರ ತರಬೇತಿ ಪೂರ್ವ ವಿದ್ಯಾಭ್ಯಾಸ ಪೂರೈಸುವವರೆಗೂ ಡೆಪ್ಲಿಂಗ್‌ನಲ್ಲಿಯೇ ನೆಲೆಸಿದರು. ಅಲ್ಲಿಂದ ಉಪಾಧ್ಯಾಯ ತರಬೇತಿಗಾಗಿ ಎಸ್ಲಿಂಗನ್‌ಗೆ ಹೋದರು.

ಇವರ ಜಾಣ್ಮೆ ಹಾಗೂ ಉಪಾಧ್ಯಾಯ ವೃತ್ತಿಯ ಬಗ್ಗೆ ಇದ್ದ ಆಸಕ್ತಿ ಇವುಗಳನ್ನು ಕಂಡು ಇವರ ಹತ್ತೊಂಭತ್ತನೆಯ ವಯಸ್ಸಿನಲ್ಲೇ ಸಹಾಯಕ ಉಪಾಧ್ಯಾಯರಾಗಿ ಮೆಗಸ್ಟಾಟ್ಟನ ಶಾಲೆಗೆ ನೇಮಿಸಿದರು. 'ತನ್ನ ಜೀವದ ಗುರಿಯೇ ಉಪಾಧ್ಯಾಯ ವೃತ್ತಿ' ಎಂದು ತಿಳಿದಿದ್ದ ಇವರು ಶಾಲೆಯ ಅತ್ಯುತ್ತಮ ಬೋಧಕರೆಂದು ಹೆಸರು ಪಡೆದರು. ಇವರ ಮೇಧಾವಿತನ ಹಾಗೂ ಬೈಬಲ್ ಜ್ಞಾನವನ್ನು ಅರಿತ ಬಾಸೆಲ್ ಸಂಸ್ಥೆಯ ವರಿಷ್ಟರು ತ್ರಿಗ್ಲರ್‌ರವರನ್ನು 'ಮಿಶನ್ ತರಬೇತಿ ಪೂರ್ವ ಬೋಧಕರ ಶಾಲೆಗೆ' ಉಪಾಧ್ಯಾಯರಾಗಿ ನೇಮಿಸಿದರು. ೧೮೬೧ ರಲ್ಲಿ ಮಿಶನರಿಯಾಗಿ ಭಾರತಕ್ಕೆ ಹೋಗುವ ತಮ್ಮ ಇಚ್ಚೆಯನ್ನು ವ್ಯಕ್ತ ಪಡಿಸಿದರು. ೧೮೬೨ ರ ಸೆಪ್ಟಂಬರ್ ೧೫ ರಂದು ಬಾಸೆಲ್ ಸಂಸ್ಥೆಯ ಮಿಶನರಿಯಾಗಿ ಭಾರತಕ್ಕೆ ಹಡಗೇರಿದರು.[೧೨೨] ಮಂಗಳೂರಿಗೆ ಬಂದ ಮೇಲೆ ಶಿಕ್ಷಕರಾಗಿ ಸೇವೆ ಸಲ್ಲಿಸಿ ಜನರ ಪ್ರೀತಿಗೆ ಪಾತ್ರರಾದರು. ೧೮೭೦ರಲ್ಲಿ ಧಾರವಾಡಕ್ಕೆ ಬಂದು ನೆಲೆಸಿದ ಇವರು ಅಲ್ಲಿ ಧಾರವಾಡದ ಮಿಶನ್ ಶಾಲೆಯ ಜವಾಬ್ದಾರಿ ವಹಿಸಿಕೊಂಡರು. ಅಲ್ಲಿನ ಶಾಲಾ ಕಟ್ಟಡವು ವಿದ್ಯಾರ್ಥಿಗಳಿಗೆ ಸಾಲದಾದ್ದರಿಂದ "ಬ್ರಿಟಿಷ್ ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಆರು ಎಕರೆ ಜಾಗವನ್ನು ಶಾಲಾ ಕಟ್ಟಡ ಕಟ್ಟಲು ಮಂಜೂರಾತಿ ಪಡೆದರು."[೧೨೩] ಇದು ಮಾದರಿ ಶಾಲೆ ಎಂಬ ಹೆಸರಿಗೆ ಪಾತ್ರವಾಯಿತು. ಈ ಶಾಲೆಯಲ್ಲಿ ಶ್ರೇಷ್ಠ ಕನ್ನಡಿಗರು ಅಧ್ಯಾಪಕರಾಗಿದ್ದರು ಹಾಗೂ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳಿದ್ದರು.

ಪ್ರತಿಭಾವಂತರಾದ ಇವರು ಶಾಲೆಯ ಅಭಿವೃದ್ಧಿಯ ಜೊತೆಯಲ್ಲಿ ಪಠ್ಯಪುಸ್ತಕಗಳ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಧಾರ್ಮಿಕ ಪುಸ್ತಕಗಳು, ಪಠ್ಯಪುಸ್ತಕ, ನಿಘಂಟು, ವ್ಯಾಕರಣ ಪುಸ್ತಕಗಳನ್ನು ರಚಿಸಿದರು. ೧೮೬೭ ರಲ್ಲಿ 'ಗೀತೆಗಳು' ಎಂಬ ಪದ್ಯಗಳ ಸಂಕಲನ ಕೃತಿಯನ್ನು ಜೆ. ಗ್ರೇಟರ್‌ರವರೊಂದಿಗೆ ಸೇರಿ ಪ್ರಕಟಿಸಿದರು. ಇದರಲ್ಲಿ ಬೈಬಲ್‌ನಲ್ಲಿರುವ ಅಂಶಗಳನ್ನು ಹಾಡಿನ ರೂಪದಲ್ಲಿ ಸೇರಿಸಿ ಹೇಳಲಾಗಿದೆ, ಗೀತಗಳಿಂದಲೂ ದಾಸರ ಪದಗಳಿಂದಲೂ ಆ ಕಾಲದ ದೇಶೀಯ ಕವಿಗಳಿಂದ ಮತ್ತು ಬೈಬಲ್ ಸಾಹಿತ್ಯದಿಂದ ಬರೆಯಲ್ಪಟ್ಟ ತ್ರಿಪದಿ, ಚೌಪದಿ ಮತ್ತು ಷಟ್ಪದಿ ಪದ್ಯಗಳಿಂದಲೂ ತುಂಬಿವೆ. ಅವರು ಬರೆದ ಬೈಬಲ್ ಹಾಡುಗಳ ದಾಸರ ಹಾಡುಗಳ ಶೈಲಿಯನ್ನು ಅನುಸರಿಸಿ ಬರೆದಂತೆ ಇವೆ.[೧೨೪] ಎಂದು ರಾ.ಯ. ಧಾರವಾಡಕರ ಹೇಳುತ್ತಾರೆ. ೧೮೭೫ ರಲ್ಲಿ ಕವನಗಳು ಹಾಗೂ ಕಾವ್ಯ ಮಾಲಿಕೆಗಳು ಪ್ರಕಟವಾದವು.

ಇಂಗ್ಲೀಷ್ ಮತ್ತು ಕನ್ನಡ ಭಾಷೆಗಳು ಗಣಿತ, ಭೂಗೋಳ ಮತ್ತು ಸಸ್ಯ ಶಾಸ್ತ್ರ ಇವು ಇವರ ಮೆಚ್ಚಿನ ವಿಷಯಗಳು. ಕಿಟಲ್‌ರವರಿಗೆ ಕೋಶ ರಚನೆಗೆ ಅಗತ್ಯವಾದ ಸಸ್ಯ ಶಾಸ್ತ್ರದ ಶಬ್ದಗಳನ್ನು ಇವರು ಒದಗಿಸುತ್ತಿದ್ದರು. 'ಗಣಿತ ನ್ಯಾಯ' ಎಂಬ ಕೃತಿಯು ಶಿಕ್ಷಕರಿಗೆ ಪ್ರಯೋಜನಕಾರಿಯಾಗಿದ್ದಿತು. ೧೮೮೮ ರಲ್ಲಿ ಪ್ರಕಟವಾದ Key to Kannada Language ಎಂಬುದು ಇವರ ವಿಶಿಷ್ಟ ಗ್ರಂಥವಾಗಿದೆ. ಇದರ ೨ನೇ ಆವೃತ್ತಿಯಲ್ಲಿ ಅನೇಕ ಉದಾಹರಣೆಗಳೊಂದಿಗೆ ಕೊಟ್ಟಿದ್ದನ್ನು ಪ್ರತಿಪಾದಿಸುತ್ತಾ, The way of constructing sentences being so widely different in the two languages examples are indispensable and will no doubt be appreciated[೧೨೫] ಎಂದು ವಿವರಣೆ ನೀಡಿದ್ದಾರೆ. ೧೮೮೪ ರಲ್ಲಿ ಕನ್ನಡ

ಗ್ರಾಮ್ಯಾಟಿಕಲ್ ಪ್ರೈಮರ್ Catechism of Kannada Grammar ಎಂಬ ಕೃತಿಗಳನ್ನು ರಚಿಸಿದರು. ಇವರು ರಚಿಸಿದ ಇನ್ನೆರಡು ವ್ಯಾಕರಣ ಪುಸ್ತಕಗಳು ಎಂದರೆ ಶಾಲಾ ವ್ಯಾಕರಣ ಕನ್ನಡ ಬಾಲ ವ್ಯಾಕರಣ ಎಂಬ ಪ್ರಾಥಮಿಕ ವ್ಯಾಕರಣವನ್ನು ಪ್ರಕಟಿಸಿದರು. ೧೮೮೦ ರಲ್ಲಿ 'ದಿ ಕನ್ನಡ ಸ್ಕೂಲ್ ಗ್ರಾಮರ್' ನ್ನು ವ್ಯವಸ್ಥಿತವಾಗಿ ಪ್ರಕಟಿಸಿದರು. A practical key to kanarese Grammar ಎಂಬ ಪುಸ್ತಕವನ್ನು ಕನ್ನಡ ಕಲಿಯುವ ಅಭಿಲಾಷೆಯುಳ್ಳ ವಿದೇಶಿಯರಿಗಾಗಿ ರಚಿಸಿದರು. ಇದರಲ್ಲಿ ಕನ್ನಡ ಭಾಷೆಯ ವಿವರಣೆಯನ್ನು ಇಂಗ್ಲೀಷ್ ಜರ್ಮನ್ ಮತ್ತು ಫ್ರೆಂಚ್ ಭಾಷೆಯಲ್ಲಿ ಕೊಡಲಾಗಿದೆ. ದಿನನಿತ್ಯದ ಉಪಯೋಗದಲ್ಲಿ ಅದಕ್ಕಿರುವ ಕನ್ನಡ ವಾಕ್ಯಗಳನ್ನು ಕೊಡಲಾಗಿದೆ.

ಕ್ರಿ.ಶ. ೧೮೭೭ ರಲ್ಲಿ ರೆ. ತ್ರಿಗ್ಲರರು 'ಗಣಿತಾಭ್ಯಾಸದ ಉದಾಹರಣೆಗಳು' ಪೂರ್ಣಾಂಕ ಗಣಿತಾಭ್ಯಾಸಕ್ಕೆ ತಕ್ಕ ಉದಾಹರಣೆಗಳು' ಅರ್ತಮೆಟಿಕ್ ಎಕ್ಸರ್‌ಸೈಸಸ್ ಫಾರ್ ಬಿಗಿನರ್ಸ್ ೧–೨, ಮೊದಲಾದ ಪ್ರಾಥಮಿಕ ಪುಸ್ತಕಗಳನ್ನು ಪ್ರಕಟಿಸಿದರು. ಗಣಿತ ಪಾಠದ ಅವಶ್ಯಕತೆಯ ಕುರಿತು ಉತ್ತರಿಸುವ "I cannot see why arithmetic teaching should be of lesser value in the mission work"[೧೨೬] ಎಂದು ಹೇಳುತ್ತಾರೆ. 'ಶಿಕ್ಷಣ ತಜ್ಞರಾಗಿ ಅವರ ಸಾಮರ್ಥ್ಯ ಹಾಗೂ ಕನ್ನಡ ಸಾಹಿತ್ಯಕ್ಕಾಗಿ ಅವರು ಮಾಡಿದ ಕೃಷಿಗಳು ಎಷ್ಟು ಘನವಾದುದೆಂಬ ವಿಷಯವು ಧಾರವಾಡದ ಶಿಕ್ಷಿತ ವರ್ಗಗಳು ಅವರನ್ನು ಬೀಳ್ಕೊಡುವ ಕಾಲಕ್ಕೆ ಅವರಿಗೆ ಸಲ್ಲಿಸಿದ ಅನೇಕ ಗೌರವಗಳಿಂದ ತೀರ ಸ್ಪಷ್ಟವಾಗಿದೆ.[೧೨೭] ೧೮೯೬ ರಲ್ಲಿ ಹೆನ್ರಿ ಹೇಗ್‌ರ ಸಹಾಯದಿಂದ ಮಾರ್ಕನು ಬರೆದ ಸುವಾರ್ತೆ ಅಂದರೆ 'ಮುಕ್ತಿದಾಯಕನ ಚರಿತ್ರೆ', ರೆ. ಹೇಗ್ ಅವರ ಜೊತೆಗೂಡಿ ಬರೆದ ಇನ್ನೊಂದು ಧಾರ್ಮಿಕ ಕೃತಿ ಲೂಕನು ಬರೆದ ಸುವಾರ್ತೆ ಅಂದರೆ 'ಜಗದ್‌ರಕ್ಷಕನ ಚರಿತ್ರೆ'. ಕನ್ನಡ ಬೈಬಲ್ಲಿನ ಪರಿಷ್ಕರಣದಲ್ಲೂ ಅವರು ಸೇವೆ ಸಲ್ಲಿಸಿದರು. "ಧರ್ಮ ಪ್ರಚಾರದ ದೃಷ್ಟಿಯಿಂದ ಕನ್ನಡದ ಗದ್ಯ ನಿರ್ಮಾಣದಲ್ಲಿ ವಿದೇಶಿ ಮತ ಪ್ರಚಾರಕರೂ ಕೈಯಿಕ್ಕಿದರಾದರೂ ಕನ್ನಡದ ಹೊಸ ಸಾಹಿತ್ಯಕ್ಕೆ ಅವರಿಂದ ತುಂಬಾ ನೆರವು ದೊರೆತಿದೆ."[೧೨೮] ಎಂಬ ವರದರಾಜ ಹುಯಿಲಗೊಳರವರ ಮಾತು ತ್ರಿಗ್ಲರ್‌ರವರ ಸಾಹಿತ್ಯ ಸೃಷ್ಟಿಯ ಶ್ರೇಷ್ಠತೆಯನ್ನು ಒತ್ತಿ ಹೇಳುತ್ತದೆ.

೧೮೯೫ ರಲ್ಲಿ ತ್ರಿಗ್ಲರರು ಅನಾರೋಗ್ಯದ ನಿಮಿತ್ತ ಭಾರತವನ್ನು ಬಿಟ್ಟು ತೆರಳಬೇಕಾಯಿತು. ಒಟ್ಟು ೩೩ ವರ್ಷಗಳವರೆಗೆ ತ್ರಿಗ್ಲರ ದಂಪತಿಗಳು ಕರ್ನಾಟಕದಲ್ಲಿ ತಮ್ಮ ಅಮೂಲ್ಯ ಸೇವೆಯನ್ನು ಸಲ್ಲಿಸಿದರು. ೧೯೦೬ ರಲ್ಲಿ ತ್ರಿಗ್ಲರರು ಜರ್ಮನಿಯ ಗ್ರಾಸೆಪಾಚ್‌ನಲ್ಲಿ ಕ್ರಿಸ್ತ ವಾಸಿಗಳಾದರು.

ಗೀತೆಗಳ ಅಧ್ಯಯನ: ಕನ್ನಡ ಸಂಗೀತ ಪುಸ್ತಕದಲ್ಲಿ ಇವರು ಎರಡು ಗೀತೆಗಳನ್ನು ರಚಿಸಿದ್ದಾರೆ. ಇವೆರಡೂ ಭಾಷಾಂತರ.

ಕ್ರಿಸ್ತರ ಜೀವನ: ಯೇಸುವಿನ ನುಡಿಯನ್ನು ಆಲಿಸಿ ಆತನನ್ನು ಹಿಂಬಾಲಿಸಬೇಕೆಂಬುದೇ ಯೇಸು ತನ್ನ ಶಿಷ್ಯರಿಂದ ಆಶಿಸುವುದು. ಯೇಸುವಿನ ನುಡಿಗೆ ಕಿವಿಗೊಟ್ಟು ಆತನನ್ನು ಅನುಸರಿಸಲು ಭಕ್ತ ಸಿದ್ಧನಾಗಿದ್ದೇನೆ

ಎಂದು ಹೇಳುವ ಗೀತೆಯೆ 'ಕೇಳಮ್ಮ ಗುರು ಯೇಸುವು' ಎಂಬುದು ಇದು Spricht christus unser Held ಎಂಬ ಗೀತೆಯ ಭಾಷಾಂತರವಾಗಿದೆ.

ಕೇಳೆಮ್ಮ ಗುರು ಯೇಸುವು
ಒಬ್ಬೊಬ್ಬ ಭಕ್ತನನ್ನು
ನಿನ್ನನ್ನು ಅಲ್ಲಗಳೆದು
ನೀ ತಾಳು ಕ್ರೂಜೆಯನ್ನು
ಹೀಗೆನ್ನ ಬೆನ್ನು ಹತ್ತ ಬಾ
ಎಂದೆಚ್ಚರಿಸಿ ಕರೆದ

ಕನ್ನಡ ಗೀತೆಗಳು, ಗೀತೆ-೨೬೧

ಮತ್ತಾಯನ ಶುಭಸಂದೇಶದ ೧೦:೩೮ ನೇ ವಾಕ್ಯವನ್ನು ಆಧರಿಸಿ ಈ ಚರಣ ರಚಿತವಾಗಿದೆ. ಹಾಗೆಯೇ ೨ ಮತ್ತು ೩ನೇ ಚರಣಗಳು ಕ್ರಮವಾಗಿ ಯೋಹಾನ ೮:೧೨ ಮತ್ತು ಯೋಹಾನ್ನ ೧೪:೬ ನೇ ವಾಕ್ಯವನ್ನು ಆಧರಿಸಿ ರಚಿತವಾಗಿದೆ. ಯೇಸುವಿನ ಕರೆ ಗೀತಗಾರನಿಗೆ ನವ ಜೀವನಕ್ಕೆ ಅಹ್ವಾನವನ್ನೀಡಿದೆ. ಯೇಸುವಿನ ಕರೆಗೆ ಓಗೊಟ್ಟು ಗೀತಗಾರ ತನ್ನ ನಿರ್ಧಾರವನ್ನು ಹೀಗೆಂದು ಹೇಳಿದ್ದಾನೆ.

ಈ ನಿನ್ನ ಮಾತು ಕೇಳಿದೆ
ನನ್ನತಿ ಪ್ರಿಯ ಯೇಸು!
ನಾ ನಿನ್ನ ಹಿಂದೆ ಬರುವೆ
ನಂಗಿನ್ನು ಕ್ರೂಜೆ ಲೇಸು
ನನ್ನನ್ನು ತಂದೆ ಮನೆಗೆ
ವೈ ನನ್ನ ಗುರು ಯೇಸುವೆ!

ಗೀತೆಯು ಪ್ರಮಾಣಲಂಕಾರಕ್ಕೆ (Allusion) ಉದಾಹರಣೆಯಾಗಿದೆ. ಉದಾ: 'ನೀ ತಾಳು ಕ್ರೂಜೆಯನ್ನು ಹೀಗೆನ್ನ ಬೆನ್ನು ಹತ್ತ ಬಾ' ಎಂಬ ಯೇಸುವಿನ ನುಡಿಯನ್ನು ಬಳಸಲಾಗಿದೆ. ಯೇಸುವಿನ ಹಿಂಬಾಲಕನಾಗಲು ಯೇಸುವಿನ ಕರೆ, ಆಹ್ವಾನ ಗೀತೆಯಲ್ಲಿ ವ್ಯಕ್ತವಾಗಿದೆ.

ತ್ಸಿಗ್ಲರವರ ಗೀತೆಗಳ ವೈಶಿಷ್ಟ್ಯತೆಗಳು: ತ್ಸಿಗ್ಲರವರು ಬರೆದ ಎರಡು ಗೀತೆಗಳು ಕ್ರೈಸ್ತರ ವರ್ತನೆಗೆ ಸಂಬಂಧಪಟ್ಟವುಗಳಾಗಿವೆ. ಕಷ್ಟಗಳು, ಚಿಂತೆಗಳು, ಪ್ರಭೋದನೆಗಳು ತಪ್ಪುವುದಿಲ್ಲ. ಇವು ಆಗಾಗ ಅಲೆಗಳಂತೆ ಅಪ್ಪಳಿಸುತ್ತಿರುತ್ತವೆ. ದೇವರ ಸಾನಿಧ್ಯವನ್ನು ಅನುಭವಿಸಲು ಸಾಧ್ಯವಾದ ವ್ಯಕ್ತಿಗೆ ಇವುಗಳನ್ನು ಎದುರಿಸುವ ಶಕ್ತಿಯು ದೊರೆಯುತ್ತದೆ. ಈ ಕಷ್ಟಗಳು ಸೂರ್ಯನು ಮೂಡಿದಾಗ ರಾತ್ರಿ ಹಿಂದೆ ಸರಿಯುವಂತೆ ದೇವರಲ್ಲಿ ವಿಶ್ವಾಸವಿಟ್ಟ ಪ್ರತಿಯೊಬ್ಬನು ಇವುಗಳನ್ನು ಜಯಿಸುತ್ತಾನೆ. ಆತನ ಜೀವನವು ವಿಜಯದ ಮೆಟ್ಟಿಲನ್ನು

ಹತ್ತುವಂತೆ ಇರುತ್ತದೆ ಎಂದು ಹೇಳುತ್ತಾ ವ್ಯಕ್ತಿಯಲ್ಲಿ ದೇವರೊಂದಿಗಿನ ಬಂಧವನ್ನು ಹೆಚ್ಚಿಸಬೇಕೆಂದು ಹೇಳುತ್ತಾನೆ. ನಂಬಿಕೆಯಲ್ಲಿ ಜೀವಿಸುವುದರೊಂದಿಗೆ ಎಲ್ಲ ಜೀವನದ ಸವಾಲನ್ನು ಎದುರಿಸಲು ಆತನಿಗೆ ಸ್ಫೂರ್ತಿ ನೀಡುತ್ತಿದ್ದಾನೆ ಗೀತೆಯಲ್ಲಿ.

ಗೀತೆಗಳು ಲಯ, ಗೇಯತೆಯನ್ನು ಹೊಂದಿರದಿದ್ದರೂ ಇವು ಆತ್ಮ ವಿಮರ್ಶೆಗೆ ಸಹಾಯಕವಾಗಿವೆ. ಬದುಕಿನಲ್ಲಿ ಆತ್ಮ ವಿಮರ್ಶೆ ಸನ್ಮಾರ್ಗದ ಮೆಟ್ಟಿಲನ್ನೇರಿ ಸಾಗಲು ಪ್ರೇರೇಪಿಸುತ್ತದೆ. ಕವಿಯ ಆತ್ಮ ವಿಮರ್ಶೆ ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ಸಹಾಯಕವಾದಂತಿದೆ.

೫.೩.೨೪ ಜಿ. ವುರ್ತ – G. wurth

ಅದ್ವಿತೀಯ ಕನ್ನಡ ಭಾಷಾ ಪಂಡಿತ ಸುಪ್ರಸಿದ್ಧ ಲ್ಯಾಟಿನ್, ಗ್ರೀಕ್, ಸಂಸ್ಕೃತ, ಹೀಬ್ರು ವಿದ್ವಾಂಸರಾದ ಇವರು ವುರ್ತಂಬರ್ಗ್‌ನ ಫ್ಲೆಡೆಲ್ ಶೈಮ್‌ನಲ್ಲಿ ೧೮೨೯ ರಲ್ಲಿ ಜನಿಸಿದರು. ಇವರ ಒಲವು, ಮನಸ್ಸು ಭಾಷಾಶಾಸ್ತ್ರ ಮತ್ತು ದೈವಜ್ಞಾನ ಶಾಸ್ತ್ರದ ಅಭ್ಯಾಸದ ಕಡೆಗಿದ್ದಿತು. ಉದ್ಯೋಗಾರ್ಥಿ (Apprentice) ಯಾಗಿ ದುಡಿದರು ಈ ಸ್ಥಿತಿಯಲ್ಲಿಯೂ ಕೂಡಾ ಇವರು ಪ್ರತಿಯೊಂದು ಕ್ಷಣ ಲ್ಯಾಟಿನ್ ಮತ್ತು ಗ್ರೀಕ್ ಭಾಷೆಯಲ್ಲಿ ಪ್ರಗತಿಯನ್ನು ಸ್ಥಾಪಿಸಿದರು. ಇವರ ಜ್ಞಾನಾರ್ಜನೆಯಲ್ಲಿ ಭಕ್ತಿವಂತನಾದ ಝೆಲ್ಲರ್‌ನೊಬ್ಬನ ನೆರವು ಇವರಿಗೆ ದೊರಕಿತು. ವುರ್ತನ ಭಾಷಾವರವನ್ನು ಗುರುತಿಸಿದರು. ವುರ್ತ ಸ್ವಂತ ಸುಖ ಸಂತೋಷಗಳನ್ನು ಬದಿಗಿಟ್ಟು ತನ್ನ ಅಭ್ಯಾಸಕ್ಕೆ ಪುಸ್ತಕಗಳನ್ನು ಕೊಂಡರು. ಸರಕಾರದ ಉಪಶಾಸ್ತ್ರ ವೈದ್ಯನ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಮುಂದಣ ವಿದ್ಯಾಭ್ಯಾಸದ ಆಶೆಯು ಹೆಚ್ಚಾಗಿ ದೇಹದ ಬೆಲೆಗಿಂತ ಆತ್ಮದ ಬೆಲೆಯು ಹೆಚ್ಚೆಂದು ಮನಗಂಡರು. ಬಾಸೆಲ್ ನಲ್ಲಿದ್ದ ಮಿಶನ್ ಕಾಲೇಜಿಗೆ ಸೇರಿ ಅಲ್ಲಿನ ೬ ವರ್ಷಗಳನ್ನು ಸದುಪಯೋಗ ಪಡಿಸಿಕೊಂಡರು. ಅಲ್ಲಿ ಇವರಿಗೆ ಭಾಷಾ ಹಾಗೂ ದೈವಜ್ಞಾನ ಶಾಸ್ತ್ರದ ಅಭ್ಯಾಸಕ್ಕೆ ಅವಕಾಶ ದೊರಕಿತು. ಕಾರ್ಯಕ್ಷೇತ್ರದಲ್ಲಿ ದುಡಿಯುವಾಗಲೂ ವಿದ್ಯಾಭ್ಯಾಸದ ಸಂತೋಷ ಇಚ್ಛೆಯು ಕುಗ್ಗಲಿಲ್ಲ. ಭಾರತದಲ್ಲಿ ಸುವಾರ್ತಾ ಪ್ರಸರಣ ಕಾರ್ಯದಲ್ಲಿ ನಿರತರಾಗಿದ್ದಾಗಲೂ, ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳಲ್ಲಿನ ಶ್ರೇಷ್ಠ ಕೃತಿಗಳನ್ನು ತನ್ನೊಂದಿಗೆ ಒಯ್ಯುತ್ತಿದ್ದರು. ಜೀವಾಂತ್ಯದವರೆಗೂ ಹಿಬ್ರು ಬೈಬಲ್ ಇವರ ಮೆಚ್ಚಿನ ಪುಸ್ತಕವಾಗಿದ್ದಿತು.

೧೮೪೫ ರಲ್ಲಿ ಕೀಸ್ ಮತ್ತು ಮೊರಿಕ್‌ರೊಂದಿಗೆ ಭಾರತಕ್ಕೆ ಕಳುಹಿಸಲ್ಪಟ್ಟರು. ಅವರ ಮೊದಲ ಕಾರ್ಯಕ್ಷೇತ್ರ ಹುಬ್ಬಳ್ಳಿ, ಸುವಾರ್ತಾ ಪ್ರಸರಣ ಕಾರ್ಯ ಮಾತ್ರ ಅವರ ಕೆಲಸ. ವಿಶಿಷ್ಟ ರೀತಿಯಲ್ಲಿ ಅವರು ಕನ್ನಡ ಭಾಷೆಯ ಮೇಲೆ ಪ್ರಭುತ್ವವನ್ನು ಎಲ್ಲಿಯವರೆಗೆ ಸಾಧಿಸಿದರೆಂದರೆ ಜೀವನದ ಕೊನೆಯ ಭಾಗದಲ್ಲಿ ಯಾವ ಉಪದೇಶಿಯೂ ಅವರನ್ನು ಮೀರಿಸಿಲ್ಲ. ಅನೇಕ ದೇಶಿಯರಲ್ಲೂ ಅವರನ್ನು ಸರಿಗಟ್ಟುವವರಿರಲಿಲ್ಲ. ಸಂಸ್ಕೃತವನ್ನು ಚೆನ್ನಾಗಿ ಬಲ್ಲವರಾಗಿದ್ದರು ೧೮೫೦ ರಲ್ಲಿ ಮಂಗಳೂರಿನ ವೇದಮಠಕ್ಕೆ ಇವರನ್ನು ಕರೆಸಿಕೊಳ್ಳಲಾಯಿತು. ಆದರೆ ಒಂದು ವರ್ಷದೊಳಗಾಗಿ ಅವರ ಇಚ್ಛೆಯಂತೆ ಉತ್ತರ ಕರ್ನಾಟಕಕ್ಕೆ ಕಳುಹಿಸಲ್ಪಟ್ಟು ೧೮೧೫ ರಿಂದ ೧೮೬೬ರ ತನಕ ಬೆಟಗೇರಿಯಲ್ಲಿ ಸೇವೆ ಸಲ್ಲಿಸಿದರು. ಅವರ ಕನ್ನಡ ಭಾಷಾ

ಜ್ಞಾನವು ಸಾಹಿತ್ಯ ಪ್ರಪಂಚಕ್ಕೆ ಉಪಯುಕ್ತವಾಗಿ ಅವರ ಲೇಖನಿಯಿಂದ ದೊರೆತವುಗಳು ಹೆಚ್ಚಿನ ಬೆಲೆ ಯುಳ್ಳವುಗಳಾಗಿದ್ದವು. ಕನ್ನಡ ಸಾಹಿತ್ಯದ ಆರಂಭದಿಂದ ತನ್ನ ಕಾಲದವರೆಗಿನ ಕಾವ್ಯಗಳಿಂದ ಆಯ್ದ ಪದ್ಯಭಾಗಗಳನ್ನು ಒಳಗೊಂಡ 'ಪ್ರಾಕ್ಕಾವ್ಯಮಾಲಿಕೆ' ಎಂಬ ಗ್ರಂಥ (೧೮೬೮) ಹೊರತಂದರು. 'ಬಸವಪುರಾಣ' ಚೆನ್ನ ಬಸವ ಪುರಾಣ' ಇವುಗಳ ಕಥಾ ಸಾರವನ್ನು ಇಂಗ್ಲೀಷ್‌ನಲ್ಲಿ ಬರೆದು (೧೮೬೫) ರಾಯಲ್ ಏಶಿಯಾಟಿಕ್ ಸೊಸೈಟಿಯ ಮುಂಬಾಯಿ ಪತ್ರಿಕೆಯಲ್ಲಿ ಪ್ರಕಟಿಸಿದರು.

ಇವರ ಜೀವನದ ಕೊನೆಯ ವರ್ಷವು ಇಹಜೀವನದ ಮುಕ್ತಾಯಕ್ಕೆ ಸಿದ್ಧತೆಯನ್ನು ಮೂಡುವುದರಲ್ಲಿ ಕಳೆದಿತ್ತು. ೧೮೯೪ರ ಏಪ್ರಿಲ್ ಮೇ ತಿಂಗಳಲ್ಲಿ ತೀವ್ರ ಹಾಗೂ ದೀರ್ಘಕಾಲದ ಜ್ವರ ಪೀಡಿತರಾದಾಗ ತನ್ನ ಅಂತ್ಯವು ಸನ್ನಿತವಾದುದನ್ನು ತಿಳಿದು ಗಂಭೀರ ಯೋಚಿಸತೊಡಗಿದರು. ಡಿಸೆಂಬರ್ ೯ ರಂದು ವಿಷಮ ಜ್ವರಕ್ಕೆ ತುತ್ತಾಗಿ ಶಕ್ತಿಯು ಪೂರ್ಣ ಕುಂದಿ ಡಿಸೆಂಬರ್ ೨೫ ರಂದು ಈ ಧರೆಯ ಪಯಣವನ್ನು ಮುಗಿಸಿ ಸ್ವರ್ಗಸ್ಥರಾದರು. ಸುತ್ತುವರಿದಿದ್ದ ಸ್ನೇಹಿತ ವರ್ಗದವರು

ಮೃತ್ಯವೇ ಧೂಳು ಮತ್ತು ಮಣ್ಣಿನಿಂದ
ಕಟ್ಟಲ್ಪಟ್ಟ ಈ ದೇಹವೆಂಬ ಗುಡಾರವನ್ನು
(ನೀನು ಕೆಡವುತ್ತೀ) ಕಿತ್ತು ಹಾಕಿದರೂ
ಯೇಸು ಸ್ವಾಮಿಯ ಶಿಲುಬೆಯ ಮೂಲಕ
ನನ್ನ ಪಾಪಗಳು ತೊಳೆಯಲ್ಪಟ್ಟು ಅಳಿಸಲ್ಪಡುವುದರಿಂದ
ನನ್ನಲ್ಲಿರುವ ನಿರೀಕ್ಷೆಯನ್ನು ಭಂಗಗೊಳಿಸಲು (ಅಲುಗಾಡಿಸಲು)
ನನ್ನಿಂದ ಸಾಧ್ಯ'

ಎಂಬ ವಿಯೋಗ ಗೀತೆಯನ್ನು ಹಾಡಿದರು.

೫.೩.೨೫ ವಾಲ್ಜ್ ಥಾಮಸ್ - Walz Thomas

ಈತನು ಕೆಲವು ಲೇಖನಗಳನ್ನು ಕ್ರೈಸ್ತ ಗುಡಿಗಳಲ್ಲಿ ಹಾಡಲು ತಕ್ಕುದಾದ ಕೆಲವು ಪದ್ಯಗಳನ್ನು ಬರೆದಿದ್ದಾನೆ. ೧೮೭೪ ರಲ್ಲಿ Fatalism ಅಥವಾ ಅದೃಷ್ಟವಾದಿಗಳು ಎಂಬುದು ಸಹಸ್ರಾರು ಸಂಖ್ಯೆಯಲ್ಲಿ ಮುದ್ರಣವಾಗಿ ಪ್ರಚಾರವಾಯಿತು. ಇವರ ಕವನಗಳು ೪೦ ಪುಟಗಳ ಚಿಕ್ಕ ಪ್ರಬಂಧವಾದರೂ ವಿಚಾರ ಗರ್ಭಿತವಾಗಿದೆ. ವುರ್ತ್ ಮತ್ತು ವಾಲ್ಜ ಇವರೀರ್ವರು ಉತ್ತಮ ಕನ್ನಡ ಬರಹಗಾರರಾಗಿ ತೋರ್ಪಡಿಸಿಕೊಂಡಿದ್ದರು. ಅವರೀರ್ವರು ಬೈಬಲ್ ಸಾಹಿತ್ಯದ ಮಟ್ಟಿಗೆ ಕನ್ನಡದಲ್ಲಿ ಹೆಚ್ಚು ಬರೆದಂತೆ ತೋರುವುದಿಲ್ಲವೆಂಬ ವಿಷಯವು ಶೋಚನೀಯವಾಗಿದೆ.

ಗೀತೆಗಳ ಅಧ್ಯಯನ: ವಾಲ್ಜರವರು ಕನ್ನಡ ಗೀತೆಗಳು ಪುಸ್ತಕದಲ್ಲಿ ೫ ಗೀತೆಗಳನ್ನು ರಚಿಸಿದ್ದಾರೆ. ಇವು ಭಾಷಾಂತರ ಗೀತೆಗಳಾಗಿವೆ. ಬಾಲಕರ ಗೀತೆಗಳಲ್ಲಿ ೪ ಗೀತೆಗಳು ಪ್ರಕಟವಾಗಿವೆ. ಈ ಗೀತೆಗಳ ವರ್ಗೀಕರಣ ಇಂತಿದೆ.

ದೇವಭಜನೆ	೦೧
ಸಭೋತ್ಸವಗಳು	೦೧
ದೇವರಾಜ್ಯ	೦೨
ವಿಶೇಷ ಕಾಲಗಳಿಗೆ ತಕ್ಕ ಗೀತೆಗಳು	೦೧
ಒಟ್ಟು	೦೫ ಗೀತೆಗಳು

ಹಬ್ಬಗಳು: ಯುಗಾದಿಗೆ ಸಂಬಂಧಿಸಿದಂತೆ ವಾಲ್ಜರ ಗೀತೆ 'ಹೊಸದಾದ ವರ್ಷಕೆ' ಎಂಬುದು ಇದು Jesus soll die losung sein ಎಂಬ ಗೀತೆಯ ಭಾಷಾಂತರವಾಗಿದೆ. ಹೊಸ ವರ್ಷದಲ್ಲಿ ತಾನು ಹೇಗೆ ಬಾಳಲು ನಿರ್ಧರಿಸಿದ್ದಾನೆ ಎಂದು ತಿಳಿಸಲಾಗಿದೆ ಗೀತೆಯಲ್ಲಿ.

ಯೇಸುವನ್ನು ಹಿಡಿದು
ಹೋಗುತೇನೆ ದಾರಿಯಲ್ಲಿ
ಆತ ಕೋಲು, ದೀಪವು
ನನ್ನ ಭೂ ಸಂಚಾರದಲ್ಲಿ:
ಆತನಿರೆ ಎಲ್ಲವು
ಅತಿಹಿತವಾಗೊದು

ಕನ್ನಡ ಗೀತೆಗಳು ಗೀತೆ-೩೫೪

ಯೇಸುವನ್ನು ಕೋಲು, ದೀಪವೆಂದು ಭಾವಿಸಿದ್ದಾನೆ ಗೀತಗಾರ. ಕೋಲು ಆಸರೆಯ ಸಂಕೇತ ಅಸಹಾಯಕ ಸ್ಥಿತಿಯಲ್ಲಿ ಸಹಾಯಸ್ತ ನೀಡುವ ದೇವರು ತನಗೆ ದೀಪವೂ ಆಗಲೆಂದು ಬೇಡಿಕೊಂಡಿದ್ದಾನೆ. ಕತ್ತಲಲ್ಲಿ ಸಾಗುವ ವ್ಯಕ್ತಿಗೆ ಜ್ಯೋತಿಯಾಗಿ ಎಲ್ಲೂ ಎಡಹದೆ ಸನ್ಮಾರ್ಗದಲ್ಲಿ ಸಾಗಲು ಶಕ್ತಿ ನೀಡುವ ದೇವರಾಗಿದ್ದಾರೆ ಆತನ ಕೃಪೆಯನ್ನು ಹೊಸ ವರ್ಷಕ್ಕೆ ಕೇಳಿಕೊಂಡಿದ್ದಾನೆ ಗೀತಗಾರ.

ವಾಲ್ಜರವರ ಗೀತೆಗಳ ವೈಶಿಷ್ಟ್ಯತೆಗಳು: ವಾಲ್ಜರವರ ಗೀತೆಗಳೆಲ್ಲವೂ ಭಾಷಾಂತರ ಗೀತೆಗಳಾಗಿವೆ. ಧಾರ್ಮಿಕ ಮೌಲ್ಯಗಳುಳ್ಳ ಗೀತೆಗಳೇ ಹೆಚ್ಚಾಗಿ ರಚನೆಯಾಗಿವೆ. ಗೀತಗಾರನ ಭಕ್ತಿ ಮತ್ತು ಗೌರವ ಗೀತೆಯಲ್ಲಿ ಎದ್ದು ಕಾಣುತ್ತದೆ.

ಯುಗಾದಿಗೆ ಸಂಬಂಧಿಸಿದ ಗೀತೆಯು ಅಲಂಕಾರಯುಕ್ತವಾಗಿ ರಚನೆಯಾದುದಾಗಿದೆ. ಹೊಸ ವರ್ಷಕ್ಕೆ ಪಾದರ್ಪಣೆ ಮಾಡುವಾಗ ಯೇಸುವನ್ನು ತನ್ನ ಸರ್ವಸ್ವವೆಂದು ಭಾವಿಸಿ ಮುನ್ನುಗ್ಗುತ್ತಿದ್ದಾನೆ.

ಯೇಸುವು ಆತನಿಗೆ ಕೋಲು ಮತ್ತು ದೀಪದಂತೆ ಇಹದ ವ್ಯಕ್ತಿಗಳು ವಸ್ತುಗಳು ತಾತ್ಕಾಲಿಕ ಅವರ ಸಹಾಯವೂ ಕ್ಷಣಿಕ. ಆದರೆ ಯೇಸುವು ಆತನಿಗೆ ಸಕಲವೂ ಆಗಿದ್ದಾನೆ. ತನ್ನನ್ನು ನಡೆಸುವ ಪಾಲಿಸುವ, ದಾರಿ ತೋರಿಸುವ ಬೆಳಕೂ ಆಗಿದ್ದಾನೆ ಎಂದು ಗೀತಗಾರ ಹೇಳಿದ್ದಾನೆ.

೫.೩.೨೬ ಮಿಸಸ್. ತ್ಸಿಗ್ಲರ್ ಎಫ್ – Mrs. Ziegler. F

ಸುವಾರ್ತಾ ಪ್ರಸರಣ ಕಾರ್ಯದಲ್ಲಿ ವಿದೇಶಿ ಮಿಶನರಿಗಳ ಪತ್ನಿಯರ ಪಾತ್ರ, ಸೇವೆಯಲ್ಲಿ ಅವರು ತೋರಿದ ಉತ್ಸಾಹ, ಅವರ ತ್ಯಾಗ, ಸತ್ಯತೆ ಪ್ರತಿಫಲಾಕ್ಷೆಯಿಲ್ಲದ ಅರ್ಪಣಾ ಭಾವ ಸುತ್ಯಾರ್ಹ. ೧೮೮೩ ರಲ್ಲಿ ಸುಮಾರು ೫೦ ಮಂದಿ ಮಿಶನರಿಗಳ ಪತ್ನಿಯರು ತಮ್ಮ ಪತಿಗಳೊಂದಿಗೆ ಸಮಾನ ಶ್ರಮೆ ಆಶೀರ್ವಾದಗಳನ್ನೊಳಗೊಂಡ ಸೇವೆಯಲ್ಲಿ ಸಲ್ಲಿಸಿದ್ದಾರೆ. ಇವರಲ್ಲಿ ಹಲವಾರು ದೇಶೀ ಭಾಷೆಗಳನ್ನು ಚೆನ್ನಾಗಿ ಅಭ್ಯಾಸಿದವರಾಗಿದ್ದರು.

ಮಿಸಸ್ ತ್ಸೀಗ್ಲರ್‌ರವರು ಎಫ್. ತ್ಸಿಗ್ಲರ್ ರವರ ಪತ್ನಿಯಾಗಿದ್ದು ೧೮೬೨ ರಲ್ಲಿ ತಮ್ಮ ಪತಿಯೊಂದಿಗೆ ಮಂಗಳೂರಿಗೆ ಬಂದು ನೆಲೆಸಿದರು.

ಗೀತೆಗಳ ಅಧ್ಯಯನ: 'ಕನ್ನಡ ಸಂಗೀತಗಳು' ಎಂಬ ಬಾಸೆಲ್ ಮಿಶನ್‌ನ ಗೀತ ಪುಸ್ತಕದಲ್ಲಿ ಎರಡು ಗೀತೆಗಳಿದ್ದು ಒಂದು ಆಂಗ್ಲ ಭಾಷಾಂತರ ಮತ್ತು ಇನ್ನೊಂದು ಸ್ವರಚಿತ ಗೀತೆಯಾಗಿದೆ. ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಗೀತೆಗಳ ಅಧ್ಯಯನ ನಡೆದಿದೆ.

ಬೈಬಲ್: ಮಿಸಸ್ ತ್ಸಿಗ್ಲರ್ ಬೈಬಲ್‌ನ ಲೂಕ್‌ನ ಸುವಾರ್ತೆಯ ೧೫ನೇ ಅಧ್ಯಾಯದ ೩–೭ರವರೆಗಿನ ವಾಕ್ಯಗಳನ್ನು ಆಧರಿಸಿ ಗೀತೆ ರಚಿಸಿದ್ದಾರೆ. ಒಂದು ನೂರು ಕುರಿಯು ಎಂಬ ಗೀತೆಯು ಸ್ವರಚಿತ ಗೀತೆಯಾಗಿದ್ದು ಇದು Weil ich Jesu schaflein bin ಎಂಬ ರಾಗದಲ್ಲಿದೆ.

ಒಂದು ನೂರು ಕುರಿಯು
ಹಟ್ಟಿಯೊಳಗಿದ್ದವು
ಕಾಯುವವ ಪ್ರೀತಿಯಿಂದ
ಕುರಿ ನಡಿಸಿದ್ದರಿಂದ
ಸುಖಕ್ಷೇಮ ಪಡೆದು
ಚಿಂತೆಯಿಲ್ಲದಿದ್ದವು

ಕನ್ನಡ ಗೀತೆಗಳು, ಗೀತೆ–೨೨

ಇದನ್ನು ಮೊದಲು ಎಲಿಜಬತ್ ಸೆಸಿಲಿಯ ಕ್ಲೇಫೇನ್ ಎಂಬಾಕೆಯು ಇಂಗ್ಲಿಷ್ ಭಾಷೆಯಲ್ಲಿ ರಚಿಸದಳು. ಈಕೆಯು ೧೮೩೦ ನೆ ಇಸವಿಯಲ್ಲಿ ಎಡಿನ್‌ಬರೋ ಪಟ್ಟಣದೊಳಗೆ ಹುಟ್ಟಿದಳು. ಪೈಪ್ ಹೋಬಳಿಯ

ಶಿರಸ್ತೇದಾರನಾಗಿದ್ದ ಆಂಡ್ರು ಕ್ಲೇಫೇನನು ಈಕೆಯ ತಂದೆ. ಈ ಸಂಗೀತವು ೧೮೬೮ ನೇ ಇಸವಿಯ 'ಮಕ್ಕಳ ತಾಸು' ಎಂಬ ಪತ್ರಿಕೆಯಲ್ಲಿ ಮೊದಲು ಪ್ರಕಟವಾಯಿತು.

'ಸ್ತ್ರೀ ಸಂಗೀತರಚಕರು' ಎಂಬ ಗ್ರಂಥವನ್ನು ಬರೆದ ಮಿಸೆಸ್ ಪಿಟ್ಮನ್ ಎಂಬಾಕೆಯು ಈ ಸಂಗೀತದ ವಿಷಯದಲ್ಲಿ ಇದು ಪ್ರಸಿದ್ಧಿಗೆ ಬರುವ ಮುಂಚೆ ಒಬ್ಬ ಸುವಾರ್ತಿಕರು ಇದನ್ನು ಹಾಡಿದ್ದು ನನಗೆ ಚೆನ್ನಾಗಿ ನೆನಪಿದೆ. ಎಲಿಜಬೇತ್ ಕ್ಲೇಫೇನಗಳು ದೇವರ ಪ್ರೀತಿಯನ್ನು ಕುರಿತು ಒಂದು ಜೀವವುಳ್ಳ ಪ್ರಸಂಗವನ್ನೇ ಸಂಗೀತ ರೂಪದಲ್ಲಿ ಕಳುಹಿಸಿದ ಹಾಗಿರುವುದು. ಇಂಗ್ಲಿಷ್ ಭಾಷೆಯು ಪ್ರಚಾರವಲ್ಲಿರುವವರೆಗೂ ಇದಕ್ಕೆ ಅಳಿಗಾಲವಿಲ್ಲ. ದೇವರು ತನ್ನ ಕಳೆದು ಹೋದ ಎಷ್ಟೋ ಕುರಿಗಳನ್ನು ಈ ಸಂಗೀತದ ಮೂಲಕ ಹುಡುಕಿ ತಂದೆನೆಂಬುದು ಕಡೇ ಕಾಲದಲ್ಲಿ ಪ್ರತ್ಯಕ್ಷವಾಗುವುದು ಎಂದು ಹೇಳಿರುತ್ತಾಳೆ.

ಈರಾ.ಡಿ. ಶಾಂತಿ ಎಂಬ ಪ್ರಸಿದ್ಧ ಸುವಾರ್ತಾ ನಾಯಕನು ಸ್ಕಾಟ್ಲಂಡ್ ದೇಶಕ್ಕೆ ಮೊದಲನೆಯ ಸಲ ಬಂದಿದ್ದಾಗ 'ಕ್ರೈಸ್ತ ಯುಗ' ಎಂಬ ಪತ್ರಿಕೆಯಲ್ಲಿ ಈ ಸಂಗೀತವನ್ನು ಕಂಡು ಅತ್ಯಂತ ಸಂತುಷ್ಟನಾಗಿ ತಾನೇ ಅದಕ್ಕೆ ಒಂದು ದಾಟಿಯನ್ನು ಕಲ್ಪಿಸಿ ಸೌವಾರ್ತಿಕ ಕೂಟಗಳಲ್ಲಿ ಹಾಡತೊಡಗಿದನು ಮತ್ತು ಈ ಸಂಗೀತದ ಮೂಲಕ ಅನೇಕ ದೇವರ ಕುರಿಗಳು ಹಿಂದಿರುಗಿ ಆತನ ಬಳಿಗೆ ಬಂದದ್ದಕ್ಕೆ ಕಣ್ಣಾರೆ ಕಂಡು ಆತನಿಗೆ ಸ್ತೋತ್ರ ಮಾಡಿದನು.[೧೯]

ಕಥನ ರೂಪವೇ ಈ ಗೀತೆಯ ವೈಶಿಷ್ಟ್ಯವಾಗಿದೆ. ದೇವರು ಪಾಪಿ ಮಾನವನನ್ನು ಸರಿದಾರಿಗೆ ತರಲು ಪಡುವ ಶ್ರಮೆಯನ್ನು ಕುರುಬ ಮತ್ತು ಕುರಿಯ ಉಪಮೆಯ ಮೂಲಕ ವರ್ಣಿಸಿರುವ ಬಗೆ ಹೃದಯ ಸ್ಪರ್ಷಿತವಾಗಿದೆ. ಕವಿಯ ಕ್ರಿಯಾತ್ಮಕ ನಿರೂಪಣೆ ಕವಿತೆಯಲ್ಲಿ ಎದ್ದು ಕಾಣುತ್ತದೆ. ಘಟನೆಯನ್ನು ದೃಷ್ಟಿಗೋಚರವಾಗುವಂತೆ ಕವಿ ವರ್ಣಿಸಿರುವ ಬಗೆ ಅಕರ್ಷವಾಗಿದೆ. ಕುರುಬ ಕುರಿಯನ್ನು ಹುಡುಕಿ ಕಾಡಿಗೆ ಹೋಗುವುದು ಹುಡುಕಾಟದ ಭರದಲ್ಲಿ ಕಾಲು ಬಂಡೆಗಲ್ಲಿಗೆ ತಾಕಿ ರಕ್ತ ಬರುವುದು, ಮುಳ್ಳು ನಂಗೆ ಚುಚ್ಚಿತು, ಅದರಿಂದ ಕೈಗಳು ಗಾಯವಾದವು ಎಂಬ ಸಾಲುಗಳು ಕುರುಬನಿಗೆ ಕುರಿಯೊಂದಿಗಿನ ಪ್ರೀತಿಯನ್ನು ವ್ಯಕ್ತಪಡಿಸುವಲ್ಲಿ ಯಶಸ್ವಿಯಾಗಿದೆ.

ಮಿಸಸ್. ತ್ರಿಗ್ಲರ್‌ರ ಗೀತೆಯ ವೈಶಿಷ್ಟ್ಯತೆಗಳು: ಇವರು ಎರಡು ಗೀತೆಗಳು ಬೈಬಲ್ ವಾಕ್ಯವನ್ನೇ ಆಧರಿಸಿ ಬರೆದುದ್ದಾಗಿದೆ. ಯೇಸುವಿನ ಅಮರ ಪ್ರೀತಿಯನ್ನು ಸಮಾಜದ ಒಬ್ಬ ಅನಕ್ಷರಸ್ತ ವ್ಯಕ್ತಿಯೂ ಅರ್ಥೈಸಿಕೊಳ್ಳುವಂತೆ ಸರಳ ರೀತಿಯಲ್ಲಿ ರಚಿಸಿದ್ದು ಗೀತೆಯ ವೈಶಿಷ್ಟವಾಗಿದೆ. ಉದಾ: ಕುರುಬ ಮತ್ತು ಕುರಿಯ ಉಪಮೆ ದೇವರಿಗೆ ಪಾಪಿ ಮಾನವನ ಮೇಲಿನ ಅತೀವ ಪ್ರೀತಿ. ಆತನನ್ನು ರಕ್ಷಿಸಲು ಪಾಪ ಮಾರ್ಗದಿಂದ ತಪ್ಪಿಸಲು ದೇವರು ಪಡುವ ಶ್ರಮೆಯನ್ನು ದೃಷ್ಟಿಗೋಚರವಾಗುವ ರೀತಿ ಪದಗಳನ್ನು ಬಳಸಿ ವರ್ಣಿಸಿರುವುದು ಆಕರ್ಷಕವಾಗಿದೆ.

ಬಾಸೆಲ್ ಮಿಶನರಿಗಳ ಗೀತೆಗಳ ವಿಶಿಷ್ಟಾಂಶಗಳು:

೧. ಪ್ರೊಟೆಸ್ಟೆಂಟ್ ಮಿಶನರಿಗಳಲ್ಲೆ ಅತಿ ಹೆಚ್ಚಿನ ಕೊಡುಗೆಯನ್ನು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೀರ್ತಿ ಬಾಸೆಲ್ ಮಿಶನರಿಗಳಿಗೆ ಸಲ್ಲುತ್ತದೆ. ಮೊಗ್ಲಿಂಗ್ ಎಚ್, ವೈಗಲ್ ಜೆ ಮತ್ತಿತರರು ಪ್ರಥಮ ಬಾರಿಗೆ 'ಕ್ರೈಸ್ತ ಗೀತೆಗಳು' ಎಂಬ ಗೀತ ಪುಸ್ತಕವನ್ನು ೧೮೪೧ರಲ್ಲಿ ಕಲ್ಲಚ್ಚಿನಲ್ಲಿ ಮಾಡಿ ಪ್ರಕಟಿಸಿದ್ದು ಇವರ ಅಪೂರ್ವ ಕಾರ್ಯ ವೈಖರಿಗೆ ನಿದರ್ಶನವಾಗಿದೆ.

೨. ದೇಶೀ ಛಂದಸ್ಸನ್ನು ಬಳಸಿ ಗೀತೆ ರಚಿಸಿದ ಸುಪ್ರಸಿದ್ದ ವಿದ್ವಾಂಸರೆಂದರೆ ಕಿಟಲರು. ಕನ್ನಡ ಕಾವ್ಯಗಳನ್ನು ಓದಿ ಅವುಗಳನ್ನು ಮನನ ಮಾಡಿ ಅದರಿಂದ ಪ್ರಭಾವಿತರಾಗಿ ಅವುಗಳನ್ನು ಕರಗತ ಮಾಡಿಕೊಂಡು, ಕಾವ್ಯ ಲಕ್ಷಣಗಳನ್ನು ಅಭ್ಯಸಿಸಿ ತಿಳಿದುಕೊಂಡು, ಕ್ರೈಸ್ತ ತತ್ವಗಳನ್ನು ದೇಶೀ ಛಂಸ್ಸುಗಳಲ್ಲಿ ರಚಿಸಿ, ತಮ್ಮ ಅಪೂರ್ವ ಕವಿತಾ ಪ್ರತಿಭೆಯಿಂದ ಯೇಸು ಕ್ರಿಸ್ತನ ಜೀವನವನ್ನ ಜನರಿಗೆ ಪರಿಚಯಿಸಿದರು. ಇವರ ಕಥಾಮಾಲೆಯಲ್ಲಿನ ಗೀತೆಗಳು ಭಾಮಿನಿ, ವಾರ್ಧಕ ಷಟ್ಪದಿ ಹಾಗೂ ದೇಶೀರಾಗ (ಪೂರ್ವಿ ರಾಗ, ಅಟ್ಟತಾಳ) ಗಳಿಂದ ರಚಿತವಾಗಿದೆ.

೩. ರಾಷ್ಟ್ರೀಯ ಪ್ರಜ್ಞೆ ಹಾಗೂ ಪರಸ್ಪರರಿಗಾಗಿ ಪ್ರಾರ್ಥಿಸಿ ಶುಭ ಹಾರೈಸುವ ಭಾವ ಮೂಡಿಸಲು ಇವರು ರಚಿಸಿದ ಗೀತೆಗಳು ಮೌಲ್ಯಯುತವಾದವುಗಳು. ರಾಷ್ಟ್ರಕ್ಕಾಗಿ, ಆಡಳಿತಾಧಿಕಾರಿಗಳಾಗಿ, ಸರ್ವರ ಸುಭಿಕ್ಷೆಗಾಗಿ ಪ್ರಾರ್ಥಿಸಲು ಪ್ರೇರೇಪಿಸುವ ಗೀತೆಗಳಾಗಿವೆ.

೪. ಜಾತೀಯತೆಯ ಬಂಧನದಿಂದ ಜನತೆಯನ್ನು ಮುಕ್ತಿಗೊಳಿಸಲು ಅವರು ರಚಿಸಿದ ಗೀತೆಗಳು ಮೌಲ್ಯಯುತವಾಗಿವೆ. ಉದಾ:- ಬಾಲಕರ ಗೀತೆಗಳು, ೧೯೦೪, ಗೀತೆ ೭೦.

೫. ಅಬಾಲ ವೃದ್ಧರ ಮನಸ್ಸನ್ನು ಸೆಳೆಯುವ ಕಥನ ರೂಪದ ಗೀತೆಗಳು ವಿಶಿಷ್ಟಬಗೆಯದಾಗಿವೆ. ಉದಾ:- ಗೋಲಿಯಾತನು, ಭಕ್ತಿಯುಳ್ಳ ಗೃಹಸ್ತನ ಕಥೆ ನೀತಿ ಬೋಧನೆಯನ್ನು ಹೊಂದಿದೆ.

೬. ಆಂಗ್ಲ ಭಾಷೆಯಲ್ಲಿನ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಕ್ರೈಸ್ತ ಧಾರ್ಮಿಕ ಸಾಹಿತ್ಯ ವಿದೇಶಿ ಭಾಷೆಗಳಿಂದ ಕನ್ನಡದಲ್ಲಿ ಪ್ರವೇಶಿಸುವಂತೆ ಮಾಡಿದ್ದಾರೆ. ಉದಾ:- ವೈಗಲ್ ರವರ 'ಯಾತ್ರಿಕ ಸಂಚಾರ' ಕೃತಿಯಲ್ಲಿನ ಗೀತೆಗಳು ಸ್ವಾರಸ್ಯಕರವಾಗಿವೆ. ದೈವಿಕ ಸಾಧನೆಯಲ್ಲಿ ವ್ಯಕ್ತಿಯೊಬ್ಬನು ಹಂತ ಹಂತವಾಗಿ ಏರುತ್ತಾ ನಡೆದುದರ ಬಗೆಯನ್ನು ಈತ ಚಿತ್ರಿಸಿರುವ ಬಗೆ ಒಬ್ಬ ವ್ಯಕ್ತಿಯ ವ್ಯಕ್ತಿತ್ವದ ಬದಲಾವಣೆಗೆ ಸಹಾಯಕವಾಗಿದೆ. ಕನ್ನಡ ಛಂದೋನಿಯಮಗಳನ್ನು ಅಳವಡಿಸಿಕೊಂಡು ಭಾಮಿನಿ ಷಟ್ಪದಿಯಲ್ಲಿ ಬರೆದ ಆದ್ಯ ಕ್ರೈಸ್ತರ ಪ್ರಾರಂಭದ ದೇಶೀ ಶಿಲ್ಪದ ರಚನೆಗೆ ನಿದರ್ಶನವೆನಿಸಿದೆ ಇವರ ಗೀತೆಗಳು.

೭. ಪ್ರಕೃತಿಯ ದುರಂತಗಳನ್ನು ಸಾಮಾಜಿಕ ಅಸಮತೋಲನವನ್ನು ಗೀತೆಯಲ್ಲಿ ತಂದಿರುವ ಬಗೆ ಮನ ಸೆಳೆಯುತ್ತದೆ. (ಬಾಲಕರ ಗೀತೆಗಳು, ಗೀತೆ ೬೫). ಭೂಕಂಪ, ಬರ, ಶೋಷಿತ ಜನಾಂಗ, ರಾಜರ ರಕ್ಷಣೆಯ ಕುರಿತು ವಿವರಿಸಿರುವ ಬಗೆ ಕವಿಗಿರುವ ಸಾಮಾಜಿಕ ಕಾಳಜಿಯನ್ನು ವ್ಯಕ್ತಪಡಿಸುತ್ತದೆ.

ಸಮಾಜದ ಅನಿಷ್ಟ ಪದ್ಧತಿಯದ ಕುಡಿಕತನವನ್ನು ತಡೆಗಟ್ಟಲು ಇವರು ಶ್ರಮಿಸಿದ ರೀತಿ ಅನನ್ಯವಾದದ್ದು. ಗೀತೆಗಳ ವಸ್ತುವಿನ ಆಯ್ಕೆಯಲ್ಲಿ ಮಿಶನರಿಗಳು ಯಾವುದೇ ಕಟ್ಟು ನಿಟ್ಟುಗಳನ್ನು ಹಾಕಿಕೊಳ್ಳಲಿಲ್ಲ. ಸಾಮಾನ್ಯವಾಗಿ ಸುತ್ತಲಿನ ಜೀವನದಿಂದಲೇ ವಸ್ತುಗಳನ್ನು ಆಯ್ದುಕೊಂಡರು. ಸಮಾಜದ ಕುಟುಂಭಗಳನ್ನು ಸರಿಯಾಗಿ ಕಟ್ಟುವುದೂ ಅವರ ಉದ್ದೇಶವಾಗಿತ್ತು. ಇಂತಹ ಗೀತೆಗಳು ದೇಶೀ ಶೈಲಿಯನ್ನು ಹೊಂದಿರುವುದು ವಿಶಿಷ್ಟವಾಗಿದೆ.

೮. ಬಾಲಕರ ಗೀತೆಗಳು, ಅಭಿನಯ ಗೀತೆಗಳು ಮತ್ತು ಪ್ರಾಕ್ಕಾವ್ಯಮಾಲಿಕೆ ಕೃತಿಗಳು ಕ್ರೈಸ್ತ ಶಾಲೆಗಳಲ್ಲಿ, ಭಾನುವಾರದ ಶಾಲೆಗಳಲ್ಲಿ ಉಪಯೋಗವಾಗುತ್ತಿತ್ತು. ಕ್ರಿಸ್ತೀಯ ಮೌಲ್ಯವಿರುವ ಗೀತೆಗಳನ್ನು ಅಂದು ಶಾಲೆಗಳಲ್ಲಿ ಬಳಸುತ್ತಿದ್ದದ್ದು ಗಮನಾರ್ಹ ಅಂಶವಾಗಿದೆ.

೯. ಇವರ ಪದ ಬಳಕೆಯ ಸಾಮರ್ಥ್ಯವನ್ನು ಮೆಚ್ಚುವಂತಹದ್ದಾಗಿದೆ. ದೃಷ್ಟಿಗೋಚರವಾಗುವ ರೀತಿ ಪದಗಳನ್ನು ಚಿತ್ರೀಕರಿಸಿರುವ ಗೀತೆಗಳು ಇಲ್ಲಿವೆ. ಉದಾ:- ಗೀತೆ ೭೦. ಯೇಸು ಕ್ರೂಜೆ ವೃಕ್ಷದಲ್ಲಿ ತೂಗಾಡಿದ್ದನ್ನೂ, ಮೈಯೊಳಗಿನ ರಕ್ತ ಬೆವರಾಗಿ ಸುರಿಯುವುದನ್ನೂ ನಿಟ್ಟುಸುರಾವರ್ತಿಯಿಂದ ಎದೆ ಭಿನ್ನವಾಗುವುದನ್ನು ನಾವು ಕಣ್ಣಾರೆ ಕಂಡ ಹಾಗೆ ವರ್ಣಿಸಿದ್ದಾರೆ.

೧೦. ಬಾಸೆಲ್ ಮಿಶನರಿಗಳು ಪತ್ರಿಕೆಗಳ ಮೂಲಕ ಕ್ರೈಸ್ತ ತತ್ವಗಳನ್ನು ಬಿತ್ತರಿಸಲು ಹಾಗೂ ಸಾಮಾಜಿಕ ಸಮಸ್ಯೆಗಳನ್ನ ಪರಿಹರಿಸಲು ಅಗತ್ಯವಾದ ಲೇಖನಗಳನ್ನು, ಗೀತೆಗಳನ್ನು ಪ್ರಕಟಿಸಿದರು. ದೇಶೀ ಛಂದಿಸ್ಸಿಗೆ ಸಂಬಂಧಿಸಿದ ಗೀತೆಗಳನ್ನು ಪ್ರಕಟಿಸಿದ್ದು ಅವರ ದೇಶೀ ವ್ಯಾಮೋಹವನ್ನು ದೃಢಪಡಿಸುತ್ತದೆ.

೧೧. ರೂಪಕ, ಉಪಮೆಗಳ ಬಳಕೆಯ ಮೂಲಕ ಗೀತೆಗಳ ಅರ್ಥಗ್ರಹಿಕೆ ಸುಲಭವಾಗುವಂತೆ ಮಾಡಿದ್ದಾರೆ. ಉದಾ:- ದೇವರ ಪ್ರೀತಿಯ ವರ್ಣನೆಗಾಗಿ ಹದ್ದು ತನ್ನ ಮರಿಯನ್ನು ಸಂರಕ್ಷಿಸುವ ಬಗೆಯೊಂದಿಗೆ ಹೋಲಿಸಿದ್ದಾರೆ(ಗೀತೆ ೩೯೯) ದೇವವಾಕ್ಯ ನಿನಗೆ (ಗೀತೆ ೧೬೪) ಎಂಬ ಗೀತೆಯಲ್ಲಿ ದೇವ ವಾಕ್ಯದ ಮಹಿಮೆಯನ್ನು ಅದು ಔಷಧ, ಸಮುದ್ರದಲ್ಲಿನ ಮುತ್ತಿನಂತೆ, ಖಡುಗ, ರಮ್ಯವಾದ ವನ,ಬೆಳಕು ಎಂದು ವರ್ಣಿಸಲಾಗಿದೆ.

೫.೪ ಸ್ಥಳೀಯ ಮಿಶನರಿಗಳು

ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಬದಲಾವಣೆಗಾಗಿ ಮಿಶನರಿಗಳು ಸಲ್ಲಿಸಿದ ಸೇವೆ ಅಪೂರ್ವವಾಗಿದೆ. ಅಂತೆಯೇ ಇವರ ಹಾದಿಯಲ್ಲಿ ಸಾಗಿ ಇವರ ಪ್ರಭಾವಕ್ಕೊಳಗಾಗಿ ಅನೇಕ ಸ್ಥಳೀಯರು ತಮ್ಮನ್ನೇ ಸುವಾರ್ತೆ ಸೇವೆಗಾಗಿ ಅರ್ಪಿಸಿಕೊಂಡರು. ಪ್ರತಿಭಾವಂತರಾದ ಇವರುಗಳು ಸಾಹಿತ್ಯ ರಚನೆಯಲ್ಲಿ ತೊಡಗಿದರು. ಗೀತ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದ ಕೆಲವು ಮಿಶನರಿಗಳ ಪರಿಚಯ ಹಾಗೂ ಸಾಧನೆಯನ್ನು ನೀಡಲಾಗಿದೆ.

೫.೪.೧ ಕೌಂಡಿನ್ಯ ಎ – Koundinya. A

೧೮೨೫ ಮಾರ್ಚ್ ೨೦ ರಂದು ಮಂಗಳೂರಿನಲ್ಲಿ ಜನಿಸಿದರು. ತಂದೆ ಒಬ್ಬ ವಕೀಲರಾಗಿದ್ದರು. ಇವರ ಶಿಕ್ಷಣವು ಮಿಶನ್ ಶಾಲೆಯಲ್ಲಿ ನಡೆದುದರಿಂದ ಕ್ರೈಸ್ತತ್ವದ ಪರಿಚಯವಾಯಿತು. ಕ್ರಿಸ್ತನ ಹಿಂಬಾಲಕನಾಗಲು ಹಂಬಲಿಸುತ್ತಿದ್ದ ಇವರು ಮೊಗ್ಲಿಂಗ್‌ರವರಲ್ಲಿ ತಮ್ಮ ಆಸಕ್ತಿಯನ್ನು ವ್ಯಕ್ತಪಡಿಸಿ ೧೮೪೪ ಜನವರಿ ೬ ರಂದು ಇನ್ನಿಬ್ಬರು ಬ್ರಾಹ್ಮಣ ಯುವಕರೊಂದಿಗೆ ಸ್ನಾನದೀಕ್ಷೆ ಪಡೆದರು. ವೇದ ಪಾಠದಲ್ಲಿ ಶಾಲೆಯಲ್ಲಿ ಸಭೆಯಲ್ಲಿ ಸೇವೆ ಸಲ್ಲಿಸುತ್ತಾ ಮಂಗಳೂರು ನಗರ ಹಾಗೂ ಇಡೀ ಜಿಲ್ಲೆಯಲ್ಲಿ ಸುವಾರ್ತಾ ಪ್ರಸರಣ ಕಾರ್ಯವನ್ನು ನಡೆಸುತ್ತಿದ್ದರು. ಕೊಂಕಣಿ, ಕನ್ನಡ ತುಳು, ಹಿಂದೂಸ್ತಾನಿ, ಸಂಸ್ಕೃತ, ಇಂಗ್ಲೀಷ್, ಜರ್ಮನ್, ಲಾಟಿನ್, ಗ್ರೀಕ್ ಮತ್ತು ಹೀಬ್ರೂ ಭಾಷೆಗಳನ್ನು ತಿಳಿದಿದ್ದ ಅವರು ಮಿಶನ್‌ನ ಸಾಹಿತ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸಿದರು. ಶಾಲಾ ಪಠ್ಯ ಪುಸ್ತಕಗಳನ್ನು ಕರ ಪತ್ರಗಳನ್ನು ಬರೆದರು. ೧೮೫೩ ರಲ್ಲಿ ಮೊಗ್ಲಿಂಗ್ ಕೊಡಗಿನಲ್ಲಿ ಮಿಶನ್ ಕಾರ್ಯವನ್ನು ಕೈಗೆತ್ತಿಕೊಂಡರು. ೧೮೬೭ರತನಕ ಕೌಂಡಿನ್ಯರು ಮಂಗಳೂರಿನಲ್ಲಿದ್ದು ಸುವಾರ್ತಾ ಪ್ರಸರಣ ಕಾರ್ಯದಲ್ಲಿ ತೊಡಗಿದ್ದರು. ಕೊಡಗಿನಲ್ಲಿ ಮೊಗ್ಲಿಂಗ್ ಪ್ರಾರಂಭಿಸಿದ ಕಾರ್ಯವನ್ನು ಮುಂದುವರೆಸಿ ಆನಂದಪುರ, ಆಮ್ಮತ್ತಿಗಳಲ್ಲಿ ಕಡೇ ತನಕ ಸೇವೆ ಸಲ್ಲಿಸಿದ್ದಾರೆ. ಅಲ್ಲಿ ಉಂಟಾದ ಕ್ರೈಸ್ತರ ವಸಾಹತು ಇವರ ಹೆಸರಿನಿಂದಲೇ ಆನಂದಪುರ ಎಂದು ಕರೆಯಲ್ಪಟ್ಟಿತು. ೧೮೮೧ ರಲ್ಲಿ ನಿವೃತ್ತಿ ಹೊಂದಿ ಮಿಶನ್‌ನ ಸಂಬಂಧವಿಟ್ಟುಕೊಂಡು ಅವರ ಕೆಲಸ ಮಾಡಿಕೊಂಡಿದ್ದರು. ೧೯೦೧ ರಲ್ಲಿ ಕನ್ನಡ ಸತ್ಯವೇದ ಪರಿಷ್ಕರಣ ಸಮಿತಿಯ ಸದಸ್ಯನಾಗಿ ನೇಮಕಗೊಂಡು ಅವರ ಅಪಾರ ಭಾಷಾಜ್ಞಾನದ ಉಪಯುಕ್ತತೆಯು ತೋರಿ ಬಂತು. ಆರೋಗ್ಯ ಸುಧಾರಿಸಲು ಪತ್ನಿಯೊಂದಿಗೆ ನೀಲಗಿರಿಯ ಕೇತಿಗೆಹೋಗಿ ಅಲ್ಲಿ ಯೋಗಾಸನ, ಸುವಾರ್ತೆಯ ಪರಿಷ್ಕಣದ ಕಾರ್ಯದಲ್ಲಿ ಮಗ್ನರಾಗಿದ್ದಾಗ ಪುಪ್ಪಸ ಜ್ವರಕ್ಕೆ ತುತ್ತಾಗಿ ಸಮಾಧಾನದಲ್ಲಿ ೧೯೦೩ ರಲ್ಲಿ ಮರಣ ಹೊಂದಿದರು. ಇವರೊಂದಿಗೆ ದೀಕ್ಷಾಸ್ನಾನ ಹೊಂದಿದ ಮಿತ್ರರೆಂದರೆ ಕ್ರಿಸ್ತಿಯಾನ್ ಕಂಸಿಕ ಮತ್ತು ಯಾರೋಬ್ ಕಂಸಿಕ ಕೊನೆಯತನಕ ಮಿಷನ್‌ನಲ್ಲಿ ಬೋಧಕರಾಗಿ ಸೇವೆ ಸಲ್ಲಿಸಿದ್ದಾರೆ.

ಗೀತೆಗಳ ಅಧ್ಯಯನ: ಕನ್ನಡ ಸಂಗೀತಗಳು ಗೀತ ಪುಸ್ತಕದಲ್ಲಿ ೧ ಗೀತೆಯನ್ನು ಹಾಗೂ ಸ್ಟೋಲ್ಜರವರೊಂದಿಗೆ ಕೂಡಿ ೧ ಗೀತೆಯನ್ನು ರಚಿಸಿದ್ದಾರೆ. ಅವರ ಗೀತೆ ಸ್ವರಚಿತವಾಗಿದೆ.

ಆತ್ಮ ನಿವೇದನೆ: ಆತ್ಮ ನಿವೇದನೆಗೆ ಸಂಬಂಧಿಸಿದಂತೆ ಕೌಂಡಿನ್ಯನವರು ರಚಿಸಿದ ಗೀತೆಯೇ 'ನನ್ನ ದೇವ ಪ್ರಿಯ ತಂದೆ' ಎಂಬುದು ಇದು Sollt'es gleich bisweilen ಎಂಬ ರಾಗದಲ್ಲಿದೆ. ದೇವರಿಂದ ದೂರವಾದಷ್ಟು ಬದುಕು ನಿರಾಶೆಯ ಬರಡಾದ ಬದುಕಾಗುತ್ತದೆ. ದೇವರ ಸಮೀಪಕ್ಕೆ ಒಂದಷ್ಟು ಆತನ ಕೃಪೆ ನಮ್ಮ ಮೇಲೆ ಸುರಿಯುತ್ತದೆ. ಗೀತಗಾರ ದೇವ ಸಮೀಪಕ್ಕೆ ಬಂದು ತನ್ನನ್ನು ದಾಸತ್ವದಿಂದ ಬಿಡಿಸೆಂದು ನಿವೇದಿಸಿಕೊಳ್ಳುತ್ತಿದ್ದಾನೆ ಗೀತೆಯಲ್ಲಿ.

ಕೆಟ್ಟ ಲೋಕದಾಶೆಯಿಂದ

ಇನ್ನು ನಿನ್ನ ಐಕ್ಯದಿಂದ

ಅಗಲಿರಲಾರೆನು!

ನನ್ನ ಪ್ರಾಣ ರಕ್ಷಿಸು!

ಕನ್ನಡ ಗೀತೆಗಳು, ಗೀತೆ–೫

ಅನೇಕ ವರ್ಷಗಳವರೆಗೆ ತನ್ನಿಚ್ಛೆಯಿಂದ ಬದುಕನ್ನು ನಡೆಸಿ ಇಂದು ದೇವ ಸನ್ನಿಧಿಯಲ್ಲಿ ಮರುಕ ಪಡುತ್ತ ತನ್ನನ್ನು ಆಶೀರ್ವದಿಸೆಂದು ಮನನೊಂದು ಬೇಡುತ್ತಿದ್ದಾನೆ ಹೀಗೆಂದು:

ಬುದ್ಧಿ ಬಂತು ಕಡೆಯಲ್ಲಿ

ನಿನ್ನ ಸನ್ನಿಧಾನದಲ್ಲಿ

ಸೇರಿ, ಪ್ರಿಯ ತಂದೆಯೆ

ನಿತ್ಯ ಜೀವ ಹೊಂದಿದೆ

ಗೀತಗಾರ ಮುಗ್ದಭಾವದಿಂದ ಅತೀವ ಭಕ್ತಿಯಿಂದ ತನ್ನ ಅಂತರಂಗದ ಬದಲಾವಣೆಗಾಗಿ ಬೇಡಿಕೊಂಡಿದ್ದಾನೆ ಇಲ್ಲಿ.

ಕೌಂಡಿನ್ಯರವರ ಗೀತೆಗಳ ವೈಶಿಷ್ಟ್ಯತೆಗಳು: ಕೌಂಡಿನ್ಯನವರು ಸ್ವರಚಿತವಾಗಿ ಗೀತೆ ರಚಿಸಿದ್ದಾರೆ. ಗೀತೆ ಸ್ವವಿಮರ್ಷೆಯನ್ನು ನಡಿಸಿ ಅಂತರ್ಯದಲ್ಲಿ ಅರಿವು ಮೂಡಿ ಹೊಸ ಜ್ಞಾನದಿಂದ ಕಂಡು ಕೊಂಡ ಸತ್ಯವನ್ನು ಪ್ರತಿಪಾದಿಸಿದಂತಿದೆ. ಬಾಳೆಂಬ ಪಯಣದಲ್ಲಿ ದಾರಿ ತಪ್ಪಿದಾಗ ಆತ್ಮವಿಮರ್ಶೆ ಅಗತ್ಯವಾಗಿದೆ. ಇಂತಹ ಸನ್ನಿವೇಶಗಳಲ್ಲಿ ಈ ಗೀತೆಯು ಸಹಾಯಕವಾಗಬಲ್ಲದು.ಸರಳ ಪದಗಳ ಬಳಕೆ, ಮುಗ್ಧ ನಂಬಿಕೆ, ಗೀತೆಯ ವಿಶೇಷತೆಯಾಗಿದೆ. ಕಾವ್ಯಮಯತೆ ಕಡಿಮೆಯಾದರೂ ವ್ಯಕ್ತಿಯಲ್ಲಿ ಆಂತರಿಕ ಜ್ಞಾನ ಮೂಡಿಸಲು ಯೋಗ್ಯವಾಗಿದೆ. ದೇವ ಪ್ರೀತಿಯಿಂದಲೇ ತನಗೆಲ್ಲ ಆತ್ಮೀಯ ದಾನಗಳು ದೊರೆಯುತ್ತಿವೆ. ತನ್ನ ಪುಣ್ಯದಿಂದಲ್ಲಿ ಎನ್ನುವಲ್ಲಿ ಭಕ್ತನಿಗೆ ದೇವರೊಂದಿಗಿರುವ ಸಂಬಂಧವನ್ನು ದೇವರ ಅನಂತ ಪ್ರೀತಿಯನ್ನು ವ್ಯಕ್ತಪಡಿಸುತ್ತದೆ. ಭಕ್ತನಿಗೆ ದೇವರ ನಿಸ್ವಾರ್ಥ ಪ್ರೀತಿಯಲ್ಲಿ ನಂಬಿಕೆ ಇದೆ ಎಂಬುದು ವ್ಯಕ್ತವಾಗಿದೆ.

೫.೪.೨ ಫರ್ಟಡೊ. ಎಸ್ – Furtado. S

೧೮೫೮ ಜನವರಿ ೫ ರಂದು ಜನಿಸಿದರು. ಇವರು ದಕ್ಷಿಣ ಕನ್ನಡ ಜಿಲ್ಲೆಯವರು. ಯೇಸುವಿನ ಪರಿಚಯ ಮಾಡಿಕೊಂಡು ಅವರ ಜೀವನ ಸೇವಾವೃತ್ತಿಗೆ ಮೀಸಲಾಗಿ ಸಮರ್ಪಿಸುವವರಾಗಿರಬೇಕೆಂಬ ಉದ್ದೇಶದಿಂದ ಇವರನ್ನು ಮಿಶನ್ ಶಾಲೆಗೆ ಸೇರಿಸಿದರು. ಇವರ ತಂದೆ ೧೯೦೪ ರಲ್ಲಿ ಮಲ್ಪೆ ಸಭೆಯ ಮೊದಲನೇ ದೇಶೀಯ ಸಭಾಪಾಲಕರಾಗಿ ಪ್ರತಿಷ್ಠಿತರಾಗಿ ಈ ಗಂಭೀರವಾದ ಸೇವೆಗೆ ಪವಿತ್ರ ಅಭಿಷೇಕವನ್ನು

ಹೊಂದಿದರು. ೨೨ ವರುಷ ತನಕ ಮಲ್ಪೆ ಸಭೆಯಲ್ಲಿ ಪಾಲಕರಾಗಿದ್ದರು. ೧೯೨೩ ಏಪ್ರಿಲ್ ೧೪ ರಂದು ಮರಣ ಹೊಂದಿದರು.

ಗೀತೆಗಳ ಅಧ್ಯಯನ: 'ಕನ್ನಡ ಸಂಗೀತಗಳು' ಎಂಬ ಗೀತಪುಸ್ತಕದಲ್ಲಿ ಒಂದು ಗೀತೆಯನ್ನು ರಚಿಸಿದ್ದಾರೆ.

ಹಬ್ಬಗಳು:- ಪರಿಶುದ್ಧ ಆತ್ಮರಿಗೆ ಸಂಬಂಧಿಸಿದ ಗೀತೆ: 'ಪರಿಶುದ್ಧ ಆತ್ಮನೆ' ಎಂಬ ಗೀತೆಯು ಸ್ವರಚಿತ ಗೀತೆಯಾಗಿದ್ದು Let us with a gladsome mind ಎಂಬ ರಾಗದಲ್ಲಿದೆ. ಪರಿಶುದ್ಧ ಆತ್ಮರೊಂದಿಗೆ ಗೀತಗಾರನಿಗಿರುವ ವಿಶಿಷ್ಟ ಭಕ್ತಿ ವ್ಯಕ್ತವಾಗಿದೆ ಗೀತೆಯಲ್ಲಿ. ಪವಿತ್ರ ಆತ್ಮನನ್ನು ಹಲವು ಹನ್ನೊಂದು ವಿಧದಲ್ಲಿ ಹಾಡಿ ಹೊಗಳಿದ್ದಾನೆ ಗೀತಗಾರ.

ಪರಿಶುದ್ಧ ಆತ್ಮನೆ	ಜೀವವುಳ್ಳ ಆತ್ಮನೆ	ಜ್ಞಾನವುಳ್ಳ ಆತ್ಮನೆ
ಪಾಪ ಶಾಪ ತುಂಬಿದ	ನನ್ನಲ್ಲಾತ್ಮಶಕ್ತಿಯ	ಜ್ಞಾನವನ್ನು ಮೂಡಿಸ
ನನ್ನ ಅಂತರ್ಭಾವನೆ	ಹೆಚ್ಚು ಮಾಡು! ಮೋಕ್ಷಕೆ	ನನ್ನ ಹೃದದಿಂದಲೆ
ಪೂರ್ಣ ಶುದ್ಧಮಾಡ ಬಾ!	ಮುಟ್ಟಕೊಡು ವರವ!	ಹಾರಿ ಸಂಧಕಾರವ!

ಕನ್ನಡ ಗೀತೆಗಳು, ಗೀತೆ-೧೧೨

ಪವಿತ್ರಾತ್ಮನೆ ಗೀತಗಾರನಿಗೆ ಸರ್ವಸ್ವವೂ ಆಗಿದ್ದಾನೆ. ಆತನಿಗೆ ಗೀತಗಾರ ನೀಡಿರುವ ಬಿರುದುಗಳೆಂದರೆ ಪರಿಶುದ್ಧ ಆತ್ಮ, ಜೀವವುಳ್ಳ ಆತ್ಮ, ಜ್ಞಾನವುಳ್ಳ ಆತ್ಮ, ತ್ರಾಣವುಳ್ಳ ಆತ್ಮ, ಬುದ್ದಿಯುಳ್ಳ ಆತ್ಮ, ಶುದ್ಧ ಅಗ್ನಿಯಾತ್ಮ, ಪ್ರಾರ್ಥನೆಯ ಆತ್ಮ, ಸತ್ಯವಾದ ಆತ್ಮ, ಶಾಂತಿದಾಯಕಾತ್ಮ, ಈ ಬಿರುದುಗಳು ಪರಿಶುದ್ದಾತ್ಮನ ಗುಣಗಳನ್ನು ಅವನು ತನ್ನನ್ನು ಬೇಡಿಕೊಂಡವರಿಗೆ ನೀಡುವ ವರಗಳನ್ನು ಸೂಚಿಸುತ್ತೇವೆ. ಭಕ್ತಿ ಪ್ರಧಾನವಾದ ಗೀತೆಗೊಂದು ನಿದರ್ಶನವಾಗಿದೆ.

ಸಾಮುವೆಲ್ ಫರ್ಟಡೊರವರ ಗೀತೆಯ ವೈಶಿಷ್ಟ್ಯತೆಗಳು: ಸಾಮುವೆಲ್ ಫರ್ಟಡೊರವರು ಕೇವಲ ಒಂದೇ ಒಂದು ಗೀತೆಯನ್ನು ರಚಿಸಿದರೂ ಆ ಗೀತೆ ಅಲಂಕಾರಯುಕ್ತವಾಗಿದ್ದು ಭಕ್ತಿ ಪ್ರಧಾನವಾದ ಗೀತೆಯಾಗಿದೆ.

ಇದೇ ಗೀತೆಯನ್ನು ಲಂಡನ್ ಮತ್ತು ವೆಸ್ಲಿಯನ್ ಮಿಶನ್‌ರವರು ತೆಗೆದುಕೊಂಡಾಗ ವ್ಯತ್ಯಾಸ ಮಾಡಿ ಬಳಸುವುದರೊಂದಿಗೆ ಅನೇಕ ಚರಣಗಳನ್ನು ಬಿಟ್ಟಿದ್ದಾರೆ. ಲಂಡನ್ ಮತ್ತು ವೆಸ್ಲಿಯನ್ ಗೀತ ಪುಸ್ತಕದಲ್ಲಿ ಕೇವಲ ೪ ಚರಣಗಳಿದ್ದರೆ ಬಾಸೆಲ್ ಗೀತ ಪುಸ್ತಕದಲ್ಲಿ ೯ ಚರಣಗಳಿವೆ. ಬಿಟ್ಟ ಚರಣಗಳು ಅರ್ಥಪೂರ್ಣವಾಗಿದ್ದರೂ ಅದನ್ನು ಸೇರಿಸಿಕೊಂಡಿಲ್ಲ.

ಬಾಸೆಲ್ ಗೀತ ಪುಸ್ತಕದಲ್ಲಿನ ಗೀತೆ	**ಲಂಡನ್ ಮಿಶನ್‌ನ ಗೀತ ಪುಸ್ತಕ**
ಪರಿಶುದ್ಧ ಆತ್ಮನೆ	ಪರಿಶುದ್ಧ ಆತ್ಮನೆ
ಪಾಪ ಶಾಪ ತುಂಬಿದ	ನನ್ನ ಅಂತರಂಗವ
ನನ್ನ ಅಂತರ್ಭಾವನೆ	ನಿನ್ನ ಶಕ್ತಿಯಿಂದಲೇ

ಪೂರ್ಣ ಶುದ್ಧ ಮಾಡ ಬಾ! ಶುದ್ಧ ಮಾಡಲಿಕ್ಕೆ ಬಾ

ಬಾಸೆಲ್ ಗೀತೆಯಲ್ಲಿನ ೨.೩.೪ ಸಾಲುಗಳು ಸಂಪೂರ್ಣವಾಗಿ ಬದಲಾಗಿ ಲಂಡನ್ ಗೀತಪುಸ್ತಕದಲ್ಲಿ ಬಳಕೆಯಾಗಿದೆ. ಕಾವ್ಯಮಯತೆಯಿಂದ ಗದ್ಯಕ್ಕೆ ಬಾಗಿದಂತೆ ರಚನೆಯಾಗಿದೆ.

೫.೪.೩ ಕಾರೆಟ್ ಈ.ಪಿ – Karat E.P

೧೮೪೩ ರಲ್ಲಿ ಕೇರಳದಲ್ಲಿ ಜನಿಸಿದ ಇವರು ತಮ್ಮ ತಂದೆ ಪಾಲ್ ಕಾರೆಟ್ (Paul Karat) ರೊಂದಿಗೆ ಮಂಗಳೂರಿನಲ್ಲಿ ಬಂದು ನೆಲೆಸಿದರು. ಸಾಮುವೇಲ್ ಹೆಬಿಕ್‌ರವರ ನೇತೃತ್ವದಲ್ಲಿ ಇಲ್ಲಿಗೆ ಆಗಮಿಸಿದ ಇವರು ಮಂಗಳೂರಿನ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಶಿಕ್ಷಣ ಪ್ರಾರಂಭಿಸಿದರು. ಬಲ್ಮಠದ Preparatory ಶಾಲೆಗೆ ಸೇರಿಸಿದರು. ತದನಂತರದಲ್ಲಿ ಮಂಗಳೂರಿನ ನೀರೇಶ್ವಾಲ್ಯ (Neereshwalya) ದಲ್ಲಿ ಸೇರಿಸಿದರು. ೧೮೮೬ ರಲ್ಲಿ ಸೇವಾ ಕಾರ್ಯದಲ್ಲಿ ನಿರತರಾದರು. ಮಂಗಳೂರಿನ Preparatory ಶಾಲೆಯ ಕಾರ್ಯ ನಿರ್ವಾಹಕರಾಗಿ ನೇಮಕರಾದರು. ಇದು ೧೮೬೭ ರಲ್ಲಿ ಉಡುಪಿಗೆ ವರ್ಗಾಯಿಸಲಾಯಿತು. ೧೬ ವರ್ಷಗಳ ಕಾಲ ಅಲ್ಲಿ ಸೇವೆ ನಿರ್ವಹಿಸಿದರು. ಬಾಸರೂರ್ ಮತ್ತು ಕುಂದಾಪುರಗಳಲ್ಲಿ ಸೇವೆ ಸಲ್ಲಿಸಿದ ಇವರು ಅಲ್ಲಿಯ ಜನರಿಗೆ ಆತ್ಮೀಯರಾಗಿದ್ದರು. ಉಚಿಲಾ (Uchila) ಎಂಬಲ್ಲಿ ತಮ್ಮ ಪತ್ನಿ ಮತ್ತು ಕೆಲವು ಮಕ್ಕಳನ್ನು ಕಳೆದುಕೊಂಡರು.[೧೩೦] ೧೯೧೧ ರಲ್ಲಿ ಮಂಗಳೂರಿಗೆ ಮರಳಿ ಬಂದು ಮರು ಮದುವೆಯಾದರು. ೧೯೨೪ ರಲ್ಲಿ ಮರಣ ಹೊಂದಿದರು.

ಗೀತೆಗಳ ಅಧ್ಯಯನ: ದೇಶೀಯರಾದ ಇವರು ಕನ್ನಡ ಸಂಗೀತಗಳು ಕೃತಿಯಲ್ಲಿ ಒಟ್ಟು ೧೮ ಗೀತೆಗಳನ್ನು ಹಾಗೂ ಸುರಾರಿ ಕೀರ್ತನೆಗಳಲ್ಲಿ ೧೫ ಗೀತೆಗಳನ್ನು ರಚಿಸಿದ್ದಾರೆ. ವಸ್ತು ವಿಷಯಗಳಿಗೆ ಸಂಬಂಧಿಸಿದಂತೆ ಕೆಲವು ಗೀತೆಗಳ ಅಧ್ಯಯನ ಇಲ್ಲಿದೆ.

ಬೈಬಲ್: ಯೋಹಾನ್ನನ ಶುಭ ಸಂದೇಶದ ೧೧ನೇ ಅಧ್ಯಾಯದ ೧ ರಿಂದ ೪೪ ರವರೆಗಿನ ವಾಕ್ಯಗಳಲ್ಲಿ ಕಂಡು ಬರುವ 'ಲಾಜರನ ಸಾವು' ಎಂಬ ಘಟನೆಯನ್ನು ಕಥನ ರೂಪದಲ್ಲಿ ನಿರೂಪಿಸಿದ್ದಾರೆ "ಅಕ್ಕ ತಂಗಿಯಂದಿರು"[೧೩೧] ಎಂಬ ಗೀತೆಯಲ್ಲಿ ಇದು Aller Glsub'gen sammelplatx ಎಂಬ ರಾಗದಲ್ಲಿದೆ.

ಯೇಸು ಸ್ವಾಮಿ ಮರಿಯ ಹಾಗೂ ಮಾರ್ತಾಳ ಸಹೋದರನಾದ ಲಾಸರನು ಮೃತ ಪಟ್ಟ ಊರಾದ ಬೆಥಾನಿಯಾಕ್ಕೆ ಹೋದರು. ಮಾರ್ತಾಳನ್ನು ದಾರಿಯಲ್ಲಿಯೇ ಭೇಟಿಯಾದ ಬಳಿಕ ಯೇಸು ಸ್ವಾಮಿ ಸಮಾಧಿಯೆಡೆಗೆ ಬಂದರು. ಅಲ್ಲಿ 'ಆಕೆಯ ಮತ್ತು ಆಕೆಯೊಡನೆ ಬಂದಿದ್ದ ಯೆಹೂದ್ಯರ ಗೋಳಾಟನ್ನು ಯೇಸು ನೋಡಿದರು. ಅವರ ಮನ ಕರಗಿತು. ದು:ಖ ತುಂಬಿ ಬಂದಿತು. ಅವರು ಕಣ್ಣೀರಿಟ್ಟರು. ಇದನ್ನು ಕಂಡು ಯೆಹೂದ್ಯರು, ಅವನ ಮೇಲೆ ಈತನಿಗೆಷ್ಟು ಪ್ರೀತಿಯಿತ್ತು ನೋಡಿದಿರಾ! ಎಂದುಕೊಂಡರು (ಯೋವಾನ್ನ ೧೧:೩೩–೩೬) ತಮ್ಮ ಮಿತ್ರರ ಹಿತೈಷಿಗಳ ದು:ಖವನ್ನು ಕಂಡು ಯೇಸು ಮಮ್ಮಲ

ಮರುಗುತ್ತಾರೆ. ತಮ್ಮ ನಿಜವಾದ ಸಹಾನುಭೂತಿಯನ್ನು ದು:ಖವನ್ನು ತೋರಿಸಿ ತಾವು ಪ್ರೀತಿಸಿದವರ ದು:ಖದಲ್ಲಿ ಭಾಗಿಯಾಗುತ್ತಾರೆ 'ಅವರು ಕಣ್ಣೀರಿಟ್ಟರು'.

ಹಬ್ಬಗಳು: ಯುಗಾದಿಗೆ ಸಂಬಂಧಿಸಿದಂತೆ ಕಾರೆಟ್ ರಚಿಸಿದ ಗೀತೆಯೆ 'ಒಂದೊರ್ಷದ ಸಂಚಾರ' ಎಂಬುದು. ಇದು ಸ್ವರಚಿತ ಗೀತೆಯಾಗಿದ್ದು Wie sol lich dich empfangen ಎಂಬ ರಾಗದಲ್ಲಿದೆ. ಹೊಸ ವರ್ಷಕ್ಕೆ ಆಶೀರ್ವಾದವನ್ನು ಸಮಸ್ತ ಜನರ ಮೇಲೂ ಸುರಿಸು ಎಂದು ಬೇಡಿಕೊಂಡಿದ್ದಾರೆ ಗೀತೆಯಲ್ಲಿ.

ಕಾಪಾಡು ದೀನರನ್ನು
ಈ ಹೊಸ ವರ್ಷದಿ!
ಸಮಸ್ತ ತಾಪವನ್ನು
ನಮ್ಮಿಂದ ನೀಗಿಸಿ

ನಿನ್ನಯ ಚಿತ್ತ ರೀತಿ
ನಮ್ಮನ್ನು ನಡಿಸು!
ವಿಶುದ್ಧಿ, ಭಕ್ತಿ, ಪ್ರೀತಿ
ನಮ್ಮಲ್ಲಿ ಹೆಚ್ಚಿಸು!

ಕನ್ನಡ ಗೀತೆಗಳು, ಗೀತೆ-೩೪೬

ಗೀತಗಾರ ದೇವರ ಕೃಪೆಯನ್ನು ನನಗಾಗಿ ಅಲ್ಲದೆ ದೀನದಲಿತರಿಗಾಗಿಯೂ ಬೇಡಿಕೊಂಡಿದ್ದಾರೆ. ಐಕ್ಯದಿಂದ ಬಾಳಲು ಅಗತ್ಯವಾದ ವಿಶುದ್ಧಿ, ಭಕ್ತಿ, ಪ್ರೀತಿಯನ್ನು ನಮ್ಮಲ್ಲಿ ಅಧಿಕಗೊಳಿಸಿ ಎಂದು ಬೇಡಿಕೊಂಡಿದ್ದಾನೆ ಗೀತೆಯಲ್ಲಿ. ಈ ಮೂಲಗಳೇ ಸಾರ್ಥಕ ಜೀವನಕ್ಕೆ ನಾಂದಿಯಾಗಿವೆ ಎಂಬ ಭಾವ ಗೀತೆಯಲ್ಲಿದೆ.

ಆತ್ಮ ನಿವೇದನೆ: ಮಧ್ಯಪಾನದಿಂದ ತನ್ನನ್ನು ವಿಮುಕ್ತಗೊಳಿಸಲು ಎಂದು ಬೇಡುವ ಗೀತೆಯೆ 'ಅನ್ನಪಾನ' ಎಂಬುದು.

ಅನ್ನಪಾನ
ದೇವದಾನ
ತುಟ್ಟಿಯಾಗೊ ಕಾಲದಿ!
ಪ್ರಾಣಿಪಾಲ
ತನ್ನ ಆಶ
ಸಾಕುತಾನೆ ನಿತ್ಯದಿ!
ಬಟ್ಟೆ ಬರೆ
ಕಮ್ಮಿ ಇರೆ

ಕಾಡಪುಷ್ಪ ನೋಡಿರಿ!
ಬಗೆ ಬಣ್ಣ
ಚಿತ್ರವನ್ನ
ಮಾಡಿದ್ದಾರು ಯೋಚಿಸಿ!
ಎಲ್ಲ ತರ
ಭಾರ ಹರ
ಯೇಸು ನುಡಿ ನಂಬಿಕೋ!
ಬಗ್ಗಿಕೊಂಡು

ನೊಂದು ಕೊಂಡು
ಯೇಸುಪಾದ ಕಂಟಿಕೋ!
ನಿನ್ನ ಸ್ವಾಮಿ
ನಿನ್ನ ಪ್ರೇಮಿ
ವ್ರತ ದೃಢ ಮಾಡಿಕೋ!
ಮಧ್ಯವನ್ನು
ಅಮಲನ್ನು

ಸುರಾರಿ ಕೀರ್ತನೆ ೧೯೦೮, ಗೀತೆ-೧೪

ಟ್ಯೂಟೋನಿಕ್ ಛಂದೋ ನಿಯಮಕ್ಕನುಸರಿಸಿ ಈ ಗೀತೆ ರಚನೆಯಾದರೂ ದೇಶೀ ಪದ್ದತಿಯಂತೆ ಅನ್ನ ಪಾನ, ದೇವದಾನ, ಬಟ್ಟೆಬರೆ ಎನ್ನುವ ಪ್ರಾಸ ಪದಗಳು. ವಿದೇಶೀಯತೆಯನ್ನು ಒಂದಿಷ್ಟು ದೂರ ಮಾಡಿ ದೇಶೀಯತೆಗೆ ಒಗ್ಗಿಸಿಕೊಂಡಿದೆ.

ಪ್ರಾರ್ಥನೆ: ಸಂಧ್ಯಾವೇಳೆಯಲ್ಲಿ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುವುದರೊಂದಿಗೆ ಪಾಪಕ್ಷಮೆ ಹಾಗೂ ಸರ್ವರಿಗಾಗಿ ಪ್ರಾರ್ಥಿಸುವ ಬಗೆ ಸುಂದರವಾಗಿ ವ್ಯಕ್ತವಾಗಿದೆ. 'ಅಪ್ಪಾ! ತಂದೆ ವಂದನೆ' ಎಂಬ ಗೀತೆಯಲ್ಲಿ ಇದು Mide bin ich, geh, zur ruh ಎಂಬ ಗೀತೆಯ ಭಾಷಾಂತರವಾಗಿದೆ.

ಅಪ್ಪಾ ! ತಂದೆ ವಂದನೆ	ಚಿಂತೆ ದುಃಖದವರು	ಉಪಕಾರರಾಶಿಯಿಂ
ಬಂದೆ ನಿನ್ನ ಪಾದಕೆ	ಬೇನೆ ಬೇಸರದವರು	ಪರಿಪೂರ್ಣ ಪ್ರೀತಿಯಿಂ
ಬಡ ಬಾಲ ಪ್ರಾರ್ಥನೆ	ಕುಗ್ಗಿ ಮಾಡೊ ಪ್ರಾರ್ಥನೆ	ಮಾಡಿ ನನ್ನ ತಾಳಿದೆ
ಕೇಳು, ಸ್ವಾಮಿ ದೇವರೆ!	ತಕ್ಕೊ ನಿನ್ನ ಮನಕ್ಕೆ!	ಕರುಣಾಳು ತಂದೆಯೇ!

ಕನ್ನಡ ಗೀತೆಗಳು-೩೩೫

ಸರಳವಾದ ನಿರೂಪಣೆ ಕೆಲವೇ ಶಬ್ದಗಳ ಸಣ್ಣ ವಾಕ್ಯಗಳು, ಭಕ್ತಿ ಭಾವ ಇವು ಈ ಪದ್ಯದ ವೈಶಿಷ್ಟ್ಯಗಳಾಗಿವೆ. ಇವು ಜನ ಸಾಮಾನ್ಯರನ್ನೇ ಉದ್ದೇಶಿಸಿ ಬರೆದವುಗಳೇ ಹೊರತು ಪಂಡಿತರ ಮೆಚ್ಚುಗೆಗೆ ಬರೆದುದಲ್ಲ. ಈ ಜನಪದ ಉದ್ದೇಶದಿಂದಾಗಿ ಕನ್ನಡ ಭಾಷಾ ಶೈಲಿಗೆ ಹೊಸತನ ಹಾಗೂ ತಾಜಾತನ ಒಂದೊದಗಿದೆ. ಪಾಶ್ಚಿಮಾತ್ಯ ಗಾಯನ ಪದ್ಧತಿಗೆ ಹೊಂದಿಕೊಂಡಿದ್ದರೂ ಉತ್ತಮ ಕ್ರೈಸ್ತ ಭಾವಗೀತೆಯೆಂದು ಇದನ್ನು ಪರಿಗಣಿಸಬಹುದಾಗಿದೆ.

ಈ.ಪಿ ಕಾರೆಟ್‌ರವರ ಗೀತೆಗಳ ವೈಶಿಷ್ಟ್ಯತೆಗಳು: ಇವರು ದೇಶಿ ಹಾಗೂ ವಿದೇಶೀ ಛಂದಸ್ಸಿನಲ್ಲಿ ಗೀತೆ ರಚಿಸಿದ್ದಾರೆ. ಭಾಷಾಂತರಿಸುವುದರೊಂದಿಗೆ ಸ್ವರಚಿಸಿದ್ದಾರೆ.

ಕಥನ ರೂಪ ಗೀತೆಯ ಮತ್ತೊಂದು ವಿಶೇಷತೆಯಾಗಿದೆ. ಭಾವಗೀತಾ ಪ್ರಕಾರದಂತಹ ಗೀತಗಳನ್ನು ರಚಿಸಿ ದೇಶೀಯತೆಗೆ ಮಹತ್ವ ಕೊಟ್ಟಂತೆ ಕಾಣಿಸುತ್ತದೆ. ಸರಳ ರಚನೆ, ಮುಗ್ಧ ಭಾವ, ಭಕ್ತಿ ಇವು ಗೀತೆಗಳಲ್ಲಿ ಎದ್ದು ಕಾಣುವ ಅಂಶಗಳಾಗಿವೆ.

ಸಮಾಜದಲ್ಲಿನ ಮದ್ಯಪಾನಸಕ್ತರನ್ನು ಕುರಿತು ೧೫ ಗೀತೆಗಳನ್ನು ರಚಿಸಿ ಸಮಾಜದ ಸುಧಾರಣೆಗಾಗಿ ಪ್ರಯತ್ನಿಸಿರುವುದು ವ್ಯಕ್ತವಾಗಿದೆ ಇವರ ಗೀತೆಗಳಲ್ಲಿ.

೫.೫ ಪತ್ರಿಕೆಗಳಲ್ಲಿನ ಗೀತೆಗಳು

ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ಗೀತೆಗಳನ್ನು ಈಗಾಗಲೇ ಮಿಶನರಿಗಳ ಗೀತೆಗಳನ್ನು ಅಧ್ಯಯನ ಮಾಡುವಾಗ ತಿಳಿಸಲಾಗಿದೆ. ಆದರೆ ಕೆಲವು ಗೀತೆಗಳ ರಚನಾಕಾರರ ಗುರುತು ತಿಳಿಯುವುದಿಲ್ಲ. ಆದ್ದರಿಂದ ಇಂತಹ ಕೆಲವು ಗೀತೆಗಳಲ್ಲಿ ಈ ಭಾಗದಲ್ಲಿ ಚರ್ಚಿಸಲಾಗಿದೆ. ಇಂತಹ ಗೀತೆಗಳ ಆಳವಾದ ಅಧ್ಯಯನ ನಡೆಯುವುದು ಅಗತ್ಯ. ಈ ಗೀತೆಗಳು ಸ್ಥಳೀಯರಿಂದ ಹಾಗೂ ವಿದೇಶಿ ಮಿಶನರಿಗಳಿಂದ ರಚಿತವಾಗಿರಬೇಕೆಂದು ನನ್ನ ಅನಿಸಿಕೆ.

೫.೫.೧ ಬಾಲಪತ್ರ

ಹಬ್ಬಗಳು: ಯೇಸುವು ಪರಲೋಕ ಪದವಿಯನ್ನು ತೆಗೆದಿಟ್ಟು, ಇಹದಲ್ಲಿ ನರನಾಗಿ ಜನಿಸಿದ ರೀತಿಯನ್ನು ವರ್ಣಿಸುವ ಗೀತೆಯು ಬಾಲ ಪತ್ರದಲ್ಲಿ 'ನಮ್ಮ ಕರ್ತನ ಮಂಗಳ ಜನನ' ಎಂದು ಪ್ರಕಟವಾಯಿತು. ಇದನ್ನು ಎ.ಜಿ.ಎ. ರವರು ರಚಿಸಿದ್ದಾರೆಂದು ತಿಳಿಸಲಾಗಿದೆ. (ಕರ್ತೃವಿನ ವಿಚಾರಗಳು ಲಭ್ಯವಿಲ್ಲ) ಆದಿ ಅಂತ್ಯ ಪ್ರಾಸಗಳನ್ನು ಅಲ್ಲಲ್ಲಿ ಕಾಣುತ್ತೇವೆ. ದೇಶೀ ಛಂದಸ್ಸಿನಲ್ಲಿ ಇದು ರಚಿತವಾಗಿದೆ.

ದೇವಾದಿ ದೇವ ಪುತ್ರ
ನರನಾದ ಸ್ತುತಿ ಸ್ತೋತ್ರ ॥ ಪಲ್ಲವಿ॥
    ದಿವ್ಯ ತೇಜಸನ್ನು ಬಿಟ್ಟು
    ಅವ್ಯಯ ಶ್ರೀ ತೆಗದಿಟ್ಟು
ದೇವರ ಕುಮಾರ–ಪರದಿಂದ
ಅವತಾರ–ಎತ್ತಿ ಬಂದ
    ಸ್ವಲೋಕದ ಅರಸು ಕುಮಾರ
    ಭೂಲೋಕದ ನರಗನುಸಾರ।
ಅದನ್ನು ಕೇಳಿರಿ–ಮನಸ್ಸಿಗೆ ತನ್ನಿರಿ
ಅಂದದಿ ಪಾಡಿರಿ–ಮತಿಯನ್ನು ಎತ್ತಿರಿ
    ಲಲನೆ ಉದರದೊಳು ಅತಿ ಬಡತನದದಿ
    ಲಲಿತ ನರಶಿಶುವಿನ ಸಮ ಪರಿಯಲಿ।
ಮಹಾ ಅತಿಶಯ ಕಾರ್ಯವು ಇದು
ಆಹಾ ಸಂತಸಕರ ಇದು ಹೌದು ॥ ೧॥ ದೇವಾ
    ಕುರುಬರೊಂದು ರಾತ್ರಿಯೊಳಗೆ
    ಕುರಿಗಳನ್ನು ಕಾಯುವೆದೆಗೆ।
ದಿವದಿಂದ ದೂತ–ದಯ ಮಾಡಿ
ಅಂದನಾತ–ಭಯ ಬೇಡಿ
    ಬೆತ್ಲೇಮ ಊರೊಳು ಬಂದು ಪಾನಿ
    ಇತ್ಯಾಗಿ ಜನಿಸಿದ ನಿಮಗಾಗಿ।
ಲೋಕದ ರಕ್ಷಕ ಧರಣಿ ಉದ್ಧಾರಕ
ಏಕ ವಿಮೋಚಕ–ನರಕುಲ ನಾಯಕ।
    ಒಡನೆ ನೆರದೊಡಗಿತು ದಿವ ಸಮುದಾಯ

ನಿಡು ಸರಪದದಲಿ ಸೊಗಸಿನೊಳು ನುಡಿಯ

ಮಹೋನ್ನತಗೆ ಘನರಸೆಗೆ ಸಮಾಧಾನ

ಇಹವರರಿಗೆ ದಯವೆಂಬ ಗಾನ ॥ ೨ ॥ ದೇವಾ

ಬಾಲ ಪತ್ರ, ೧೮೭೧

ಕಥನ ರೂಪದ ಈ ಗೀತೆ ಸರಳ ರೀತಿಯಲ್ಲಿ ರಚಿತವಾಗಿದ್ದು ಸಮಾಜದ ಯಾವೊಬ್ಬ ವ್ಯಕ್ತಿಯು ಓದಿ ಅರ್ಥೈಸಿಕೊಳ್ಳಲು ಸಾಧ್ಯವಾಗುವಂತಿದೆ. ಗೇಯತೆ ಇದರ ಮತ್ತೊಂದು ಗುಣವಾಗಿದೆ.

೫.೫.೨ ಬೋಧಕ ಬೋಧಿನಿ

ಹಬ್ಬಗಳು: ಕ್ರಿಸ್ತನು ಮರಣ ಹೊಂದಿ ಮಾರನೇ ದಿನ ಸ್ವರ್ಗಕ್ಕೆ ಆರೋಹಣವಾದ ಘಟನೆಯನ್ನು ಕೀರ್ತನೆಯ ರೂಪದಲ್ಲಿ ಬರೆದು ಬೋಧಕ ಬೋಧಿನಿ ಪತ್ರಿಕೆಯಲ್ಲಿ ಪ್ರಕಟಿಸಿರುವುದನ್ನು ಕಾಣುತ್ತೇವೆ. ಇದು ಜ್ಞಾನ ಕೀರ್ತನೆಯನ್ನು ಬರೆದ ಅಬ್ಬೆಜ ಸಾಮುವೇಲರ ಕೀರ್ತನೆಯ ದಾಟಿಯಲ್ಲಿ ಇರುವ ಬೇರೊಂದು ಕೀರ್ತನೆಯಾಗಿದೆ. ಧಾಟಿ ಮಾತ್ರ ಅಬ್ಬೆಜ ಸಾಮುವೇಲರದ್ದು, ಪ್ರತಿಚರಣದಲ್ಲಿ ಆದಿ ಪ್ರಾಸ ಕಾಣುತ್ತೇವೆ. ಕೀರ್ತನೆ ಅಸಂಖ್ಯ ಪ್ರಮಾಣದಲ್ಲಿ ಲಭ್ಯವಿದ್ದು, ಅವುಗಳ ಅಧ್ಯಯನ ನಡೆಯುವುದು ಅಗತ್ಯ.

ರಾಗ ಧನ್ಯಾಸಿ ಪಲ್ಲವಿ (ಅಟ್ಟತಾಳ)

ಜಯವಾಯಿತುನಮಗೆ ಲೋಕದ ಎಲ್ಲ

ಭಯ ಹೋಯಿತು ಮನಕೆ

ಅನು ಪಲ್ಲವಿ

ಜಯವಾಯಿತು ಯೇಸು ಕರುಣೆಯ ಬಲದಿಂದ

ದಯವಾಯಿತು ಪರಿಶುದ್ಧ ಆತ್ಮನಿಂದ ಜಯ

೧ ಕಡಿದು ಹಾಕಲು ಕಳ್ಳನ – ತಂದೆಯುತಾನೆ

ಬಿಡದೆ ಕಾದನು ಕಂದನ

ಹೊಡೆದರಾಕ್ಷಸ ತಲೆಯ ಹೊಳೆಯುವ ಕತ್ತಿಯಲಿ

ತಡದೆ ಶತೃವ ಗೆದ್ದು ನಡೆದನೋ ಮೋಕ್ಷಕ್ಕೆ ಜಯ

೨ ಗೆದ್ದ ಯುದ್ಧದಿ ಲೋಕವ ಇದ್ದುತಾ

ಸಿದ್ಧ ಸಮಾಧಿಯಿಂದ

ಶುದ್ಧವಾದ ಅತಿಸೂಕ್ಷ್ಮ ಮೇಘದೊಳ ಪರಿ

ಶುದ್ಧದೂತರು ಕೊಟ್ಟ ಸಾಕ್ಷಿಯಿಂದ ಹೊರಟನು ಜಯ

೩ ಹಲವಭಿಪ್ರಾಯಗಳಿಂ–ಹಲಬು ತಿರ್ವ

ಮಲಿನ ಮನದ ಮನುಜರಂ
ಚಲನೆತೊರವ ಹಾಗೆ ಸುಳಿದು ಸಮಾಧಾನಂ
ಬಲವಾಗಿ ಇತ್ತೊರಟ ಬಲವಗುಡದಿಂದ ಜಯ

ಬೋದಕ ಬೋಧಿನಿ, ೧೯೦೮ ಆಗಸ್ಟ್

೫.೫.೩ ಕ್ರೈಸ್ತ ಹಿತವಾದಿ

ಬೈಬಲ್: ಪವಿತ್ರ ಗ್ರಂಥದ ಮೊದಲನೇ ಕೀರ್ತನೆಯನ್ನು [೧೩೨] ಆಧರಿಸಿ ಬರೆದ ಪದ್ಯ ಭಾವಿಸಿ ಷಟ್ಪದಿಯಲ್ಲಿ ರಚಿತವಾಗಿದೆ. ಧನ್ಯರು ಯಾರು? ಪ್ರಶ್ನೆಗೆ ಉತ್ತರ ರೂಪದಲ್ಲಿರುವ ಕೀರ್ತನೆ ನೀತಿ ಬೋಧಕವಾದೆ. ಇದರ ಮೊದಲನೆ, ಎರಡನೆ, ನಾಲ್ಕು ಮತ್ತು ಐದನೇ ಸಾಲು ಸಮನಾಗಿದ್ದು, ೧೪.೧೪ ಮಾತ್ರೆಗಳನ್ನು ೩,೪,೩,೪ ಎಂದು ಗಣ ವಿಭಾಗ ಮಾಡಲಾಗುತ್ತದೆ. ಮೂರು ಮತ್ತು ಆರನೇ ಸಾಲುಗಳಲ್ಲಿ ೨೩ ಮಾತ್ರೆಗಳಿದ್ದು, ೩–೪–೩–೪ ಮಾತ್ರೆಗಳ ಎರಡೆರಡು ಗಣಗಳು ಬರುತ್ತವೆ. ಕೊನೆಯ ಸಾಲಿನಲ್ಲಿ ಒಂದು ಗುರುವು ಬರುತ್ತದೆ. ಈ ಗೀತೆಯಲ್ಲಿ ಕರ್ತೃ ದೇಶೀಯ ಸಂಗೀತಗಾರರಾದ Chr. Ernest ದೇಶಿ ಸಂಗೀತಗಾರರ ಗೀತೆಗಳ ಅಧ್ಯಯನ ಈ ನಿಬಂಧಕ್ಕೆ ಒಳಪಡದ ಕಾರಣ ಕೇವಲ ಪ್ರಸ್ತಾಪ ಮಾಡಿ ಕೈಬಿಡಲಾಗಿದೆ.

ದೇವರ ಸಾಮ್ರಾಜ್ಯವನ್ನು ನಾವು ಅರ್ಥಮಕಾಡಿಕೊಳ್ಳವ ಹಾಗೆ ಸರಳ ಕಥಾ ರೂಪದಲ್ಲಿ ಯೇಸು ಎಲ್ಲರಿಗೂ ಇವರಿಸಲು ಪ್ರಾರಂಭಿಸಿದರು. ಇದಕ್ಕೆ ಒಂದು ಉತ್ತಮ ಉದಾ: "ಬಿತ್ತುವವನ ಸಾಮಿತಿ"[೧೩೩] ಇದು ಕ್ರೈಸ್ತ ಹಿತವಾದಿ[೧೩೪] ಪತ್ರಿಕೆಯಲ್ಲಿ ಪ್ರಕಟವಾಯಿತು. ಇದರ ಕರ್ತೃ ಯಾರೆಂದು ತಿಳಿಯದು.

ಬಿತ್ತುವವನು ಬೀಜಗಳನ್ನು ಬಿತ್ತುತ್ತಾನೆ. ಯೇಸು ಬಿತ್ತುವವನಾಗಿದ್ದಾನೆ. ದೇವರ ವಾಕ್ಯವು ಬೀಜವಾಗಿರುತ್ತದೆ. ಅದು ಜನರ ಹೃದಯಗಳಲ್ಲಿ ಬಿತ್ತಲ್ಪಡುವಾಗ ನೂತನ ಆತ್ಮೀಕ ಜೀವನ ಚಿಗುರುತ್ತದೆ. ಇಲ್ಲಿನ ವಿವಿಧ ರೀತಿಯ ನೆಲಗಳು ಬೇರೆಬೇರೆ ಜನರನ್ನು ಸೂಚಿಸುತ್ತದೆ. ಕೆಲವು ಜನರು ದಾರಿಯ ಮಗ್ಗುಲಲ್ಲಿನ ಗಟ್ಟಿಯಾದ ನೆಲವಾಗಿರುತ್ತಾರೆ. ಬೀಜವು ದಾರಿಯ ಮಗ್ಗುಲಲ್ಲಿ ಬೀಳುತ್ತದೆ. ಆದರೆ ಚಿಗುರೊಡೆಯುವುದಿಲ್ಲ. ಅಂತಹ ಜನರು ವಾಕ್ಯ ಕೇಳುತ್ತಾರೆ. ಆದರೆ ಅದು ಅವರ ಕಠಿಣ ಹೃದಯಗಳನ್ನು ಸೇರುವುದಿಲ್ಲ.

ಬಂಡೆಯ ಸ್ಥಳಗಳು ಆಳವಲ್ಲದ ನೆಲವನ್ನು ಹೊಂದಿರುತ್ತದೆ. ಮೇಲ್ಪದರಿನ ಕೆಳಗಡೆಯ ಬಂಡೆಯಿರುತ್ತದೆ. ಮೊದಮೊದಲು ಬೀಜವು ಚಿಗುರುತ್ತದೆ. ಈ ರೀತಿಯ ವ್ಯಕ್ತಿಯು ಶ್ರೀಘ್ರವೇ ಸಂತೋಷದಿಂದ ಸ್ವೀಕರಿಸುತ್ತಾನೆ. ಅಂತಹ ವ್ಯಕ್ತಿಯು ಯಾವುದೇ ಹೊಸ ಆಲೋಚನೆಯನ್ನು ಕಾತುರದಿಂದ ಸ್ವೀಕರಿಸುತ್ತಾನೆ. ಅಥವಾ ಬಹುಷ ಆತನು ದೇವರ ವಾಕ್ಯವನ್ನು ಸ್ವೀಕರಿಸುವ ಮೂಲಕ ಯಾವುದಾದರೂ ಲಾಭವನ್ನು ಪಡೆಯುತ್ತೇನೆ ಎಂದು ನಿರೀಕ್ಷಿಸುತ್ತಾನೆ. ಆದರೆ ಆತನ ನಂಬಿಕೆ ಬಲವಾಗಿರುವುದಿಲ್ಲ. ಅವರ ನಂಬಿಕೆಯ ಬೇರುಗಳು ಬಂಡೆಯ ಕಾರಣದಿಂದ ಆಳವಾಗಿ ಹೋಗುವುದಿಲ್ಲ. ಆದಕಾರಣ ಸೂರ್ಯ

ಪ್ರಕಾಶಿಸುತ್ತಿದ್ದಂತೆಯೇ ಅಂದರೆ ಯಾವುದಾದರೂ ಸಮಸ್ಯೆ ಅಥವಾ ಹಿಂಸೆ ಬರುತ್ತಿದ್ದಂತೆಯೇ ಹೊಸ ಸಸಿ ಸಾಯುತ್ತದೆ ಮತ್ತು ಅವರು ಬೇಗನೇ ಬಿಟ್ಟು ಹೋಗುತ್ತಾರೆ.

ಮುಳ್ಳುಗಳಿದ್ದ ನೆಲವು ಉತ್ತಮ ನೆಲವಾಗಿತ್ತು. ಅದು ಗಡಸಾಗಿರುವುದಿಲ್ಲ. ಬಂಡೆಗಳಿಂದಲೂ ಕೂಡಿರುವುದಿಲ್ಲ ಅದು ಆಳವಾದದ್ದು ಮತ್ತು ಫಲವತ್ತಾದದ್ದು ಆಗಿದೆ. ಈ ನೆಲದಲ್ಲಿ ಬಿದ್ದ ಬೀಜವು ಚಿಗುರೊಡೆದು ಚೆನ್ನಾಗಿ ಬೆಳೆಯುತ್ತದೆ. ಈ ನೆಲವು ದೇವರ ವಾಕ್ಯವನ್ನು ಸ್ವೀಕರಿಸಿ ಅದನ್ನು ಆಳವಾಗಿ ನಂಬಿ ತಮ್ಮ ಜೀವಿತವನ್ನು ಉತ್ತಮವಾಗಿ ಪ್ರಾರಂಭಿಸುವ ಜನರನ್ನು ಪ್ರತಿನಿಧಿಸುತ್ತದೆ.[೧೩೫] ಆದರೆ ಆ ಒಳ್ಳೆ ನೆಲದಲ್ಲಿ ಮುಳ್ಳುಗಳು ಇರುತ್ತವೆ. ಅಂದರೆ ಸ್ವಾರ್ಥತೆ, ಪ್ರಪಂಚದ ಚಿಂತೆಗಳು ಐಶ್ವರ್ಯದಿಂದುಂಟಾಗುವ ಮೋಸ ಹಾಗೂ ಇತರ ಸಂಗತಿಗಳನ್ನು ಮೇಲಣ ಆಶೆಗಳು ಆಗಿರುತ್ತದೆ. ಇವುಗಳು ದೇವರ ವಾಕಕ್ಯಕ್ಕಿಂತಲೂ ಶೀಘ್ರವಾಗಿ ಬೆಳೆದು ಬೇಗನೇ ಭಕ್ತರ ಆತ್ಮೀಕ ಜೀವಿತವನ್ನು ಚಿಮಟಿ ಹಾಕುತ್ತವೆ.

ಈ ಸಾಮ್ಯದ ಮೂಲಕ ಮನುಷ್ಯನ ಹೃದಯ ನೆಲದಂತೆ ಇರುತ್ತದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಈ ನೆಲದಲ್ಲಿ ಬಂಡೆಗಳು ಮತ್ತು ಮುಳ್ಳುಗಳಿರುತ್ತವೆ. ಈ ಮುಳ್ಳುಗಳು ಅಂದರೆ ಅತಿಯಾಸೆ, ದುರಾಶೆಗಳು, ಕೋಪ, ನಿಂದನೆ, ಅಸೂಯೆಗಳು ಶೀಘ್ರವಾಗಿ ಬೆಳೆಯುವವು. ಆದುದರಿಂದ ಹೊಸ ಆತ್ಮೀಕ ಜೀವಿತವು ಬೆಳೆಯುವುದಕ್ಕಾಗಿ ನಮ್ಮ ನೆಲವು ಉತ್ತಮ ಸ್ಥಿತಿಯಲ್ಲಿ ಇರುವುದು ಅವಶ್ಯಕವಾಗಿದೆ. ಆತನೆ ಧನ್ಯನು ಎಂದು ಗೀತಗಾರ ಹೇಳಿದ್ದಾರೆ.

೫.೫.೪ ಕನ್ನಡ ಪಂಚಾಂಗ

ಬೈಬಲ್: ಕ್ರಿಸ್ತನು ಮಾಡಿದ ಬೋಧನೆಯಲ್ಲಿ ಬೆಟ್ಟದ ಮೇಲೆ ಮಾಡಿದ ಬೋಧನೆ ಪ್ರಸಿದ್ಧವಾದುದ್ದು. ಇಲ್ಲಿ ಕ್ರಿಸ್ತನು ನಾವು ಹೇಗೆ ಜೀವಿಸಬೇಕೆಂದು ಬೋಧಿಸುತ್ತಾನೆ. ಈ ಬೋಧನೆಯಲ್ಲಿ "ಅಷ್ಟಭಾಗ್ಯಗಳು" [೧೩೬] ಎಂಬ ಭಾಗವು ಗೀತ ರೂಪದಲ್ಲಿ 'ಕನ್ನಡ ಪಂಚಾಂಗವು' [೧೩೭] ಪತ್ರಿಕೆಯಲ್ಲಿ ಪ್ರಕಟವಾಗಿವೆ. ಈ ಗೀತೆಯ ಪ್ರತಿ ವಾಕ್ಯವು ಸಾರವವತ್ತಾಗಿದ್ದು, ಸಾಂತ್ವನ ನೀಡುವುದಾಗಿದೆ.

ಆತ್ಮದಲ್ಲಿ ಬಡವನಾಗಿರುವವರು ಧನ್ಯರು: ಕ್ರಿಸ್ತನ ಬೋಧನೆಯಲ್ಲಿ ಇದು ಮೊದಲನೆಯ ದಾಖಲೆಯಾಗಿದೆ ಮತ್ತು ಇದು ಎಲ್ಲರಿಗೂ ಅತೀ ಮುಖ್ಯವಾದ ಆತನ ಬೋಧನೆಯಾಗಿದೆ. ಯಾಕೆಂದರೆ ಆತ್ಮದಲ್ಲಿ ಬಡವನಾಗದೆ ಯಾವನು ಪರಲೋಕ ರಾಜ್ಯದಲ್ಲಿ ಪ್ರವೇಶಿಸಲಾರನು. ಆಶೀರ್ವಾದವನ್ನು ಪಡೆಯಲು ಶಕ್ತಿವಂತನು. ಐಶ್ವರ್ಯವಂತನು ಮತ್ತು ಸ್ವಾರ್ಥಮಯವು ಆಗಿರಬೇಕೆಂದು ಲೋಕವು ಬೋಧಿಸುತ್ತದೆ. ಆದರೆ ಇದು ತಪ್ಪು ಕಲ್ಪನೆ ನಿಜವಾದ ಆಶೀರ್ವಾದ ಹೊಂದಬೇಕಾದಲ್ಲಿ ಆತ್ಮದಲ್ಲಿ ಬಡವನಾಗಬೇಕು ಎಂದು ಕ್ರಿಸ್ತನು ಬೋಧಿಸಿದನು.

ದು:ಖಿತರು ಭಾಗ್ಯವಂತರು: ಪ್ರಪಂಚದಲ್ಲಿ ನಡೆಯುತ್ತಿರುವ ಅನ್ಯಾಯವನ್ನು ದಬ್ಬಾಳಿಕೆಯನ್ನು ಹಿಂಸೆಯನ್ನು ಕಂಡು ಮನ ಕರಗುವವರಿಗೆ ಯೇಸು ಭಾಗ್ಯವಂತರೆನ್ನುತ್ತಾರೆ. ಅನ್ಯಾಯಕ್ಕೆ ಸಿಲುಕಿಕೊಂಡ ಅಬಲರನ್ನು

ಕಂಡು ಮನ ಕರಗುವವರು ಭಾಗ್ಯವಂತರು ಸದಾ ಪಾಪದ ಕೆಲಸಗಳನ್ನೇ ಮಾಡುತ್ತಿರುವವರನ್ನು ಮತ್ತು ನೀತಿವಂತರನ್ನು ಕಂಡು ದು:ಖಿಪಡುವವರು ಭಾಗ್ಯವಂತರೆನಿಸಿಕೊಳ್ಳುವರು.

ವಿನಯ ಶೀಲರು: ಗ್ರೀಕ್ ಭಾಷೆಯ ಪ್ರವುಸ್ ಎಂಬ ಪದಕ್ಕೆ ಮೃದು ಸ್ವಭಾವದವರು ಅಥವಾ ಸೌಮ್ಯ ಸ್ವಭಾವದವರು ಅಥವಾ ವಿನಯಶೀಲರು ಎಂದರ್ಥವಿದೆ. ತಮಗೆ ಅಧಿಕಾರವಿದೆ ಎಂಬ ಜಂಭವಾಗಲಿ, ಬಿಂಕವಾಗಲಿ, ಗರ್ವವಾಗಲಿ ಅಥವಾ ಅಹಂಕಾರವಾಗಲಿ ಇವರಲ್ಲಿರುವುದಿಲ್ಲ. ತಮ್ಮ ಜೀವನದಲ್ಲಿ ಬಂದೆರಗುವ ಎಲ್ಲಾ ಆಶುಭಗಳನ್ನು ದೇವರ ಪಾದದಡಿಯಲ್ಲಿ ಇರಿಸಿ ಸುಮ್ಮನಿರುತ್ತಾರೆ.

ದಯಾವಂತರು: ಗ್ರೀಕ್ ಭಾಷೆಯಲ್ಲಿ- ಎಲೆಯೊಸ್ ಎಂದರೆ ದಯೆ. ನೆರೆಹೊರೆಯವರನ್ನು ಕ್ಷಮಿಸುವ, ಪರರನ್ನು ಪ್ರೀತಿಸುವ ಅದರಲ್ಲಿಯೂ ಅಗತ್ಯವಿದ್ದವರನ್ನು ಮತ್ತು ಶತ್ರುಗಳನ್ನು ಕ್ಷಮಿಸುವ ಗುಣ, ಅವರ ಈ ಜೀವನದಿಂದಾಗಿ ದೇವರು ಸಹ ಅವರಿಗೆ ದಯೆ ತೋರಿಸುವರು.

ನಿರ್ಮಲ ಹೃದಯಗಳು: ಹಳೆಯ ಒಡಂಬಡಿಕೆಯಲ್ಲಿ ಧಾರ್ಮಿಕ ವಿಧ್ಯುಕ್ತ ಕ್ರಿಯೆಗಳ ಮೂಲಕ ಶುದ್ಧವಾಗುವುದು ಎಂದರ್ಥ. ಅರಮಾಯಿಕ್ ಪದ ದಖಿನ್ ಎಂದರೆ ಬಲಹೀನರು. ಪಶ್ಚಾತ್ತಾಪ ಪಡುವ ಮತ್ತು ನಮ್ರತೆಯ ಗುಣ ಪಡೆದ ಜನರು ಎಂಬರ್ಥವಿದೆ. ಮತ್ತಾಯನ ಪ್ರಕಾರ ದೇವರ ಒಡಂಬಡಿಕೆ ವಿಧೇಯರಾಗಿ ಜೀವಿಸುವುದು.

ಶಾಂತಿಗಾಗಿ ಶ್ರಮಿಸುವವರು: ದೇವರ ಮಕ್ಕಳನ್ನು ವಿಶಿಷ್ಟ ರೀತಿಯಲ್ಲಿ ಗುರುತಿಸುವ ಚಿಹ್ನೆ ಇದಾಗಿದೆ. ಒಳ ಜಗಳಗಳನ್ನು ನಿಲ್ಲಿಸುವುದು ಮಾತ್ರವಲ್ಲ ಅಶಾಂತಿ ತುಂಬಿರುವ ಸ್ಥಳಗಳ ಶಾಂತಿಯನ್ನು ತರುವುದು ಅವರ ಏಕೈಕ ಗುರಿಯಾಗಿರುತ್ತದೆ. ಹಳೆಒಡಂಬಡಿಕೆಯಲ್ಲಿ ಶಾಲೋಮ್ ಎಂದು ಹೇಳಲಾಗುತ್ತಿತ್ತು.

೫.೫.೫ ಸತ್ಯವೃತ

"ಯೆಹೋವ ನನ್ನ ಕುರುಬ"[೧೩೮] ಎಂಬ ಗೀತೆಯು ೨೩ನೇ ಕೀರ್ತನೆಯನ್ನು ಆಧರಿಸಿ ರಚಿಸಿದ್ದಾಗಿದೆ. ಇದು ಭಾವಿನಿ ಷಷ್ಪದಿಯಲ್ಲಿದೆ. ದೇವರನ್ನು ಉತ್ತಮ ಕುರುಬನೆಂದು ಭಾವಿಸಿ ಆತನಲ್ಲಿ ಸಂಪೂರ್ಣ ಭರವಸೆ ಇಟ್ಟು ಮುಂದುವರೆಯಬೇಕೆಂದು ಹೇಳಿರುವುದೇ ಇದರ ಆಶಯವಾಗಿದೆ. ಈ ಗೀತೆಯ ಕರ್ತೃ ಸಿ. ಎರ್ನೆಸ್ಟ್ ಎಂಬ ದೇಶೀಯ ಗೀತಗಾರ. ಇಂತಹ ಗೀತಗಾರರ ಗೀತೆಗಳ ಅಧ್ಯಯನ ನಡೆಯಬೇಕಾಗಿದೆ.

೫.೫.೬ ಸತ್ಯ ದೀಪಿಕೆ

ಹಬ್ಬಗಳು: ಕ್ರಿಸ್ತನ ಪುನರುತ್ಥಾನಕ್ಕೆ ಸಂಬಂಧಿಸಿದ ಗೀತೆಯು ಸತ್ಯದೀಪಕೆ ಪತ್ರಿಕೆಯಲ್ಲಿ ಪ್ರಕಟವಾಗಿದೆ. ದೇಶೀ ಛಂದಸ್ಸಿನಲ್ಲಿರುವ ಈ ಗೀತೆ ದ್ವಿತೀಯ ಪ್ರಾಸದಿಂದ ಕೂಡಿದೆ. ಈ ಗೀತೆಯನ್ನು ಹಾಡುತ್ತಾ ಹೋದಂತೆ ಇದರ ಪದಲಾಲಿತ್ಯ ಕಿವಿಗೆ ಇಂಪನ್ನು ನೀಡುತ್ತದೆ. ಗೇಯತೆ ಇದರ ಇನ್ನೊಂದು ಗುಣ ಧರ್ಮವಾಗಿದೆ. ಯೇಸುವಿನ ಪುನರುತ್ಥಾನವನ್ನು ಕೊಂಡಾಡುವ ಈ ಗೀತವು ಚಾಲ್ ರಾಗದಲ್ಲಿದೆ. ಇದನ್ನು ಬಸ್ರೂರು ಶಾಂತಪ್ಪನಾಯ್ಕ ರಚಿಸಿದರು.

ಜಯವು ನಮಗಾಯಿತೂ ॥ ಪಲ್ಲವಿ॥

ಭಯಗಳೆಲ್ಲಾ ಹೋಯಿತೂ

ಮೃತ್ಯುರಾಜನೋರ್ವ ನೂ

ಕರ್ತನೊಡನೆ ಸೋತನೂ । ಜಯವು ॥೧॥

ಮೂರೇ ದಿನದಿ ಮನೆಯನೂ

ಗೋರಿಯಿಂದ ಎದ್ದನೂ । ಜಯವು ॥ ೨॥

ಭೂಮಿ ಹೆದರಿ ನಡುಗಿತೂ

ಸ್ವಾಮಿ ಬೆಳಕು ಮೂಡಿತೂ । ಜಯವು ॥೩॥

ಪಾಪನಾತ್ಮ ನೈಕ್ಯವೂ

ಉರ್ವಿ ಜನರ ಸೌಖ್ಯವೂ । ಜಯವು ॥೪॥

ಹಾಡಿ ಪಾಡಿ ಕ್ರಿಸ್ತಗೇ

ಹಾಡಿ ದೇವ ಪುತ್ರಗೇ । ಜಯವು ॥೫॥

ಸತ್ಯದೀಪಿಕೆ, ೧೯೧೨ ಏಪ್ರಿಲ್ ೧೦

೫.೫.೭ ಕ್ರೈಸ್ತ ಸಭಾಪತ್ರ

ಮಧುಪಾನ ವರ್ಜನೆ: ಸಾಮಾಜಿಕ ಸಮಸ್ಯೆಗಳಲ್ಲಿ ಒಂದಾದ ಮಧುಪಾನವನ್ನು ತಡೆಗಟ್ಟಲು ರಚಿತವಾದ ಈ ಗೀತೆ ಕ್ರೈಸ್ತ ಸಭಾ ಪತ್ರದಲ್ಲಿ ಪ್ರಕಟವಾಗಿದೆ. ಇದು ಲಾವಣಿ ರೂಪದಲ್ಲಿದೆ. ದೇಶೀ ಛಂದಸ್ಸನ್ನು ಮೈಗೂಡಿಸಿಕೊಂಡ ಈ ಗೀತೆಯ ರಚನಾಕಾರರ ಕುರಿತು ತಿಳಿಯದು. ಈ ಪತ್ರಿಕೆ ಮಿಶನರಿಗಳಿಂದ ಪ್ರಕಟವಾಗುತ್ತಿತ್ತು. ಮಿಶನರಿಗಳು ಸಮಾಜಿಕ ಸಮಸ್ಯೆಗಳತ್ತ ಗಮನ ಹರಿಸುತ್ತಿದ್ದರು. ಸಾಮಾಜಿಕ ಬದಲಾವಣೆಗಾಗಿ ಅಗತ್ಯವಾದ ವಿಷಯಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದರು. ಎಂಬುದು ವಿಶಿಷ್ಟ ಅಂಶವಾಗಿದೆ.

ಭಲಾ ಭಲಾ ಮಧುಪಾನ ವಿಸರ್ಜಿಸಿ – ಬಲವಾಗಿರಿ ಸುಕೃತರ ಸಭೆಗೆ ।

ಸಲಾಂ ಸಲಾಂ ನಿಮಗೋಸುಗೆ ಪ್ರಾರ್ಥಪೆ – ನೆಲೆಯಾಗಿರಿ ದೇವರ ಕೃಪೆಗೆ ॥೧।

ಅಯ್ಯಯ್ಯೊ ದುರ್ವ್ಯಸನದ ದು:ಖವ – ಒಯ್ಯೊಯ್ಯನೆ ನೀಪ ಬಿಡಿರಣ್ಣಾ ।

ಕೈಯೊಳಗಿನ ಹಣ ವೆಚ್ಚಿಸಿಕೊಂಬರೆ – ಐಹಿಕದೊಳಗಪಮಾನವನಾ ॥೨॥

ದಿನ ಸಂಜೆಗೆ ಮುಂಜಾನೆಗೆ ತಪ್ಪದೆ – ಪಣವೆಲ್ಲಿಂದಾದರೂ ತಂದೂ ।

ಹಣುಕಿ ಹಣುಕಿ ಗುತ್ತಿಗೆ ಪೊಗುತೊರಡುದ – ಮನುಜರ ಮತಿಗೇನೆನಲಿಂದೂ ॥೩॥

ಮೊದಲಿಗೆ ಹದವೆಂದೊದಗಿರಿ ಕುರಿಯುತ – ಸದರಂಗಕೆ ಬಹತ್ಯರ್ಯದಲೀ ।

ಮದವೆನ್ನುವ ಕುದುರೆಯ ಮೇಲೇರುವ – ಬೆದರಿಕೆ ಇಲ್ಲದೆ ನಿತ್ಯದಲೀ ॥೫॥

ಕುಡಿಕುಡಿದೊಡನೊಡಗುಡುಬುಡಿಸುತಬಿದ – ದಡಿಗಡಿಗುರ್ರೆನುತಲೆ ಕಾರಿ ।
ನಡಿವ ತ್ರಾಣವಿಲ್ಲದೆ ಬಳುಕು ತಲಡಿ– ಇದೆ ಧೊಪ್ಪನೆ ಬೀಳುವ ಜಾರಿ ॥೬॥

ದಿನ ದಿನ ದುರ್ವ್ಯಯ ಗೈದೀ ಹಣವನು – ಮನೆಗಿಕ್ಕಲದು ಮನೆತನ ವೃದ್ಧಿ।
ಘನಮಾನವು ಸಂಘಟಿಪುದು ಲೋಕದಿ – ಸನುಮತಿ ಒಪ್ಪುದು ಸಮೃದ್ಧಿ ॥೭॥
ಕುಡಿಯಲು ಬೇಕೈ ಕುಡಿಯಲಿ ಕುಡಿವರು – ಬಿಡದನುದಿನ ಕಾಪಿಯು ಚಾವು।
ಸಡಗರದಲಿ ಪಾನಕ ಶರಬತುಗಳ – ಗದಣಿಸಿ ಮಿತಿಯಲ್ಲಿ ಕುಂದಾವು ॥೮॥

ಮಧುಪಾನಿಗಳಿಂಗಾ ಪರಲೋಕದ – ಪದವಿಯ ಭಾಗದೊಳಿಂಬಿಲ್ಲಾ।
ಸಮಹೃದಯದೊಳಿದನಾಲಿಸಿಕೊಂಬುದು – ಮುದದಿಂ ಸಾರಿದೆ ವಿದನೆಲ್ಲಾ ॥೮॥

ಈ ಪರಿ ಸಕಲ ನಿಶೆಗಳನ್ನು ವರ್ಜಿಸಿ – ನೀವ್ ಪಡಿರೈ ಶುದ್ಧಾತ್ಮಸುಖಾ।
ಪಾಪೋತ್ತಾರಕ ವಾಕ್ಯದೊಳ್ಯೆಕ್ಯವ – ನೀವ್ ಪೊಂದುವಿರೈ ದೇವ ಮುಖಾ ॥೯॥

ಕ್ರೈಸ್ತ ಸಭಾಪತ್ರ, ಸೆಪ್ಟಂಬರ್ ೧೮೮೬

ಪತ್ರಿಕೆಗಳಲ್ಲಿನ ಗೀತೆಗಳ ವಿಶಿಷ್ಟಾಂಶಗಳು:

ಮಿಶನರಿಗಳು ಪತ್ರಿಕೆಗಳ ಮೂಲಕ ಕ್ರೈಸ್ತ ತತ್ತ್ವಗಳನ್ನು ಪ್ರಕಡಿಸಲು, ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯವಾದ ಗೀತೆಗಳನ್ನು ಲೇಖನಗಳನ್ನು ಪ್ರಕಟಿಸಿದ್ದು, ಅವರ ವಿಶಿಷ್ಟ ಸೇವೆಯಾಗಿದೆ. ಈ ಪತ್ರಿಕೆಗಳಲ್ಲಿ ದೇಶೀ ಛಂದಸ್ಸಿಗೆ ಸಂಬಂಧಿಸಿದ ಗೀತೆಗಳನ್ನು ಪ್ರಕಟಿಸಿದ್ದು ಅವರ ದೇಶೀ ವ್ಯಾಮೋಹವನ್ನು ದೃಢಪಡಿಸುತ್ತದೆ. ಈ ಗೀತೆಗಳ ರಚನೆ ಸ್ಥಳೀಯರೆ ವಿದೇಶಿಯರೆ ತಿಳಿಯದು. ಆದರೆ ಕೆಲವು ಗೀತೆಗಳನ್ನು ವಿದೇಶಿಯರೇ ರಚಿಸಿದರೆಂಬುದಕ್ಕೆ ನಿದರ್ಶನಗಳಿವೆ. ಆದರೂ ಸ್ಥಳೀಯ ರಚನಾಗಾರರಿಗೆ ಪ್ರೋತ್ಸಾಹ ನೀಡುತ್ತಿದ್ದರು ಎಂಬುದು ವಾಸ್ತವದ ಸಂಗತಿ.

ಬೈಬಲ್‌ನ ಸಂದೇಶವನ್ನು ಕಥಾ ರೂಪದಲ್ಲಿ ಗೀತೆಯಲ್ಲಿ ಅಳವಡಿಸಿದ್ದು
ಮನನ ಮಾಡಲು ಅರ್ಥೈಸಿಕೊಳ್ಳಲು ಸಾಧ್ಯವಾಗಿದೆ.

ಯೇಸುವಿನ ಪರ್ವತ ಪ್ರಸಂಗವನ್ನು ಗೀತೆಯ ಮೂಲಕ ರಚಿಸಿ ಪ್ರಕಟಿಸಿದ್ದು, ಜನ ಸಾಮಾನ್ಯರು ಅರಿತುಕೊಳ್ಳಲು ಸಾಧ್ಯವಾಗಿದೆ.

ದೇಶಿ ಛಂದಸ್ಸಾದ ಲಾವಣಿ, ದ್ವಿಪದಿ, ಆದಿಪ್ರಾಸ, ಅಂತ್ಯಪ್ರಾಸಗಳಿಂದ ಕೂಡಿದ ಗೀತೆಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿರುವುದು ಇವರ ದೇಶೀ ಸಂಸ್ಕೃತಿಗೆ ತೋರಿರುವ ಗೌರವಾಗಿದೆ.

[illegible]

ಅಡಿ ಟಿಪ್ಪಣಿ

೧. Preface of the Kanarese Hymns, 1966
೨. Report of the London Mission Bangalore for the year, 1880, P.2
೩. Procedings of the South Indian Mission Conference, 1858, P. 265
೪. Register of Missionaries Deputations ETC from 1796 to 1896 by John Owen Whitehouse.
೫. Procedings of the South Indian Mission Conference, 1858, P. 268
೬. ಆದಿಕಾಂಡ – ಬೈಬಲ್‌ನ ಒಂದು ಪುಸ್ತಕ
೭. F.L. Cross The Oxford Dictionary of the Christian Church, 1957, P.1772
೮. ಯೋಹಾನ್ನ ೧೦:೧೧
೯. ಲೂಕ ೨:೮
೧೦. ಯೋಹಾನ್ನ ೧೫:೧೫
೧೧. Kenneth W. Osbeck 101 Hymn Stories, 1982, P.99
೧೨. ವಿಮೋಚನಾಕಾಂಡ ೩೦:೧೭–೨೧
೧೩. ದಾವೀದನ ಕೀರ್ತನೆ ೧೮:೨
೧೪. ರತ್ನಂ ಬೋಧಕರು, ಸಂಗೀತಗಳು ಮತ್ತು ಸಂಗೀತಗಾರರು, ಪುಟ.೫೫
೧೫. ಕೀರ್ತನೆ ೪೨:೧
೧೬. Kenneth. W.Osbeck 101 Hymn Stories, 1982, P.61
೧೭. ಕನ್ನಡ ಸಂಗೀತಗಳು ಗೀತೆ. ೯೮ ಪುಟ.೧೦೮
೧೮. ಮತ್ತಾಯ ೭–೧೩:೧೪
೧೯. ಕೀರ್ತನೆ ೨೩.೨
೨೦. ಕೀರ್ತನೆ ೯೫:೬–೭
೨೧. ೧ ಪೇತ್ರ, ೧:೧೫
೨೨. ಮಾರ್ಕ ೧೧:೨೩–೨೬
೨೩. ಲೂಕ ೨:೧೫
೨೪. ಘನ ಎಸ್.ರತ್ನಂ ಬೋಧಕರು, ಸಂಗೀತಗಳು ಮತ್ತು ಸಂಗೀತಗಾರರು, ೧೯೫೯
೨೫. F.L.Cross 1957 The Oxford Dictionary of the Christian Church, P. 43
೨೬. Register of Missionaries Deputations ETC From 1796 to 1896, by John Owen Whitehouse London Missionary Society 14, Blonfield Street EC, P.263

೨೭. Procedings of the South Indian Missionary Conference, Held at Ootacamand, April 19th May 5th 1858, Madrass: Printed by D.P.L.C. Cannor. At the press of the Society for promoting Christian knowledge, Church street vepory 1896, P. 2

೨೮. Register of Missionaries Deputation ETC from 1796 to 1896 by John owen Whitehouse, London Missionary Society P.92

೨೯. ರೋಮ್ ೩:೨೨-೨೩

೩೦. ವೇದಕೋಶ: ಮಾ॥ರಾ॥ ಚಿಂತಾಮಣಿ ಕೇಬೆಲ್‌ರವರೂ ಘನ, ಇ.ಸ್ವಾಂಲೆ ಎಡ್ವರ್ಡ ಬೋಧಕರು ೧೯೨೬ ಪುಟ.೬೧೪

೩೧. ಅದೇ, ಪುಟ.೪೭೫

೩೨. Report of the Londdon Mission Bangalore and Chikka Ballapura for the year 1937, P.11

೩೩. Report of the London Mission Bangalore and Chikka Ballapura for the yeart 1938 P.1

೩೪. Report of the London Mission Bangalore and Chikka Ballapura for the year 1940, P. 2

೩೫. ಕರ್ನಾಟಕದಲ್ಲಿ ಪ್ರೋತೆಸ್ತಾಂತ್ ಮಿಶನ್ನುಗಳ ಚರಿತ್ರೆ ರೆ.ಡಾ. ವಿಜಯ ಕುಮಾರ್ ೨೦೦೪. ಪುಟ.೫೩

೩೬. Tomlinson of Mysore 1951 N.C.Sargant and A Marcus ward, The Christian Literature Society for India, P.57

೩೭. The Sixtieth Report of the Wesleyan Mission in the Mysore Province for the year 1898

೩೮. ಅದೇ, ಪುಟ.೬

೩೯. ಕೀರ್ತನೆ ೧೦೭:೧೫

೪೦. The Seventy Eight Annual Report of the Wesleyan Mission in the Mysore Province, 1918

೪೧. ಅದೇ, ಪುಟ.೨೯

೪೨. ಜ್ಞಾನೋಕ್ತಿಗಳು ೨೩:೧೩

೪೩. ಬಾಸೆಲ್ ಮಿಶನ್ ವರದಿ ೧೮೪೧.

೪೪. Preface of the 11th Edition of Kanarese Hymns,1913

೪೫. ಅದೇ

೪೬. ಐವನ್ ಅಲ್ಬಟ್ ಹರ್ಮನ್ ಫೆಡ್ರಿಕ್ ಮೊಗ್ಲಿಂಗ್, ಪುಟ.೪

೪೭. G.N.Thomssen Samuel Hebich of India Master Fisher of men, P.64
೪೮. ರಾ.ಯ.ಧಾರವಾಡಕರ, ಹೊಸಗನ್ನಡ ಸಾಹಿತ್ಯದ ಉದಯಕಾಲ, ೧೯೭೫ ಪುಟ.೫೯೩
೪೯. ಪ್ರಜಾಮತ – ದೀಪಾವಳಿ ಸಂಚಿಕೆ, ೧೯೬೬ ಶ್ರೀನಿವಾಸ ಹಾವನೂರ, ಪುಟ.೧೧೨
೫೦. ಕನ್ನಡ ಗೀತಗಳು, ೧೯೬೬, ಗೀತೆ ೧೭, ಪುಟ.೧೧
೫೧. ಯೋಹಾನ ೧೭:೩
೫೨. ಮಾರ್ಕ ೧೨:೩೧
೫೩. John Julian, Dictionary of Hymnology, London, 1892 P.674
೫೪. ಕನ್ನಡ ಗೀತಗಳು, ಗೀತೆ. ೩೦ ಪುಟ.೧೯
೫೫. John Julian Dictionary of Hymnology, London, 1892 P.556
೫೬. ಧರ್ಮೋಪದೇಶ, ೧೯೫೭, ಪುಟ.೯೭
೫೭. John Julian Dictionary of Hymnlogy, London, 1892 P.226
೫೮. ಮತ್ತಾಯ ೧೯:೧೩
೫೯. ಕನ್ನಡ ಗೀತಗಳು, ಗೀತೆ ೧೭೧, ಪುಟ.೧೧೪
೬೦. ಅದೇ, ಗೀತೆ ೧೮೩, ಪುಟ.೧೨೧
೬೧. ಅದೇ, ಗೀತೆ ೧೮೩, ಪುಟ.೧೨೧
೬೨. ಮತ್ತಾಯ ೨೨–೩೭:೩೯
೬೩. ಕೀರ್ತನೆ ೯೧:೪
೬೪. John Julian Directionary of Hymnology London,1892. P.1227
೬೫. ಯೇಶಾಯ ೧೧:೧
೬೬. ಗೊಲ್ಗೊಥ: ಗ್ರೀಕ್ ಪದ, ಅರ್ಥ ತಲೆಬುರುಡೆಗಳ ಸ್ಥಳ, ಲತೀನ್ ಭಾಷೆಯಲ್ಲಿ ಕಾಲ್ವರಿ, ಕನ್ನಡದಲ್ಲಿ ಕಪಾಲ ಬೆಟ್ಟ.
೬೭. ಲೂಕ ೨೩:೪೨
೬೮. ಯೋಹಾನ್ನ ೧೫:೧೩
೬೯. ಮಾರ್ಕ ೧೬:೧೯
೭೦. ಕನ್ನಡ ಗೀತೆಗಳು, ಗೀತೆ ೧೧೯, ಪುಟ.೮೦
೭೧. John Julian Dictionay of Hymnology London,1892 P.1227
೭೨. ಪ್ರಾಕ್ಕಾವ್ಯಮಾಲಿಕೆ ಜಿ.ವುರ್ತ, ಗೀತೆ ೧೮೬೮, ಪುಟ.೫೩೪
೭೩. ಶ್ರೀನಿವಾಸ ಹಾವನೂರ, ಹೊಸಗನ್ನಡದ ಅರುಣೋದಯ, ೧೯೭೪, ಪುಟ.೪೦
೭೪. ಜೆ.ಎಂ.ಜೋಗುಳ (ಸಂ) ಕರ್ನಾಟಕದಲ್ಲಿ ಬಾಸೆಲ್ ಮಿಶನ್ ಪುಟ.೧೩೭

೭೫. ಅದೇ, ಪುಟ.೧೩೯

೭೬. Hermann Gundert 1997 Hermann Moegling: A biography (ed) Albrecht Frenz, P.240

೭೭. ಅದೇ, ಪುಟ.೧೮೯

೭೮. ಕೀರ್ತನೆ ೧೧೯:೧೦೫

೭೯. ಯೋವಾನ್ನ ೧:೪

೮೦. ಕನ್ನಡ ಗೀತಗಳು, ಗೀತೆ ೧೩, ಪುಟ–೭

೮೧. ಯೆಶಾಯ ೪೦:೩೦

೮೨. ಕನ್ನಡ ಗೀತಗಳು, ಗೀತೆ ೨೨೭, ಪುಟ.೧೫೧

೮೩. ಮತ್ತಾಯ ೯:೩೭–೩೮

೮೪. ಕನ್ನಡ ಗೀತಗಳು, ಗೀತೆ ೪, ಪುಟ.೨

೮೫. ಅದೇ, ಗೀತೆ ೬ ಪುಟ.೩

೮೬. ಯೋಹಾನ್ನ ೧:೧೪

೮೭. ಕನ್ನಡ ಗೀತಗಳು, ಗೀತೆ ೨೫೩, ಪುಟ.೧೬೭

೮೮. ಕೀರ್ತನೆ ೮:೫

೮೯. ಮತ್ತಾಯ ೨೬:೧೧

೯೦. M.R.T.Pal (Ed) Sourvenir Church of South India Kundapur, 1991

೯೧. ಜೆರೇಮಿಯಾ ೨೩:೨೯

೯೨. ಎಫೆಸ ೬:೧೦

೯೩. ಡಾ. ಎಂ.ಎಂ.ಕಲಬುರ್ಗಿ ಮಾರ್ಗ ೪, ೨೦೦೪

೯೪. ಶ್ರೀನಿವಾಸ ಹಾವನೂರ, ಹೊಸಗನ್ನಡದ ಅರುಣೋದಯ, ೧೯೭೪, ಪುಟ.೪೩೦

೯೫. ಅದೇ, ಪುಟ.೧೨೦

೯೬. ರಾ.ಯ. ಧಾರವಾಡಕರ, ಹೊಸಗನ್ನಡ ಸಾಹಿತ್ಯದ ಉದಯಕಾಲ, ೧೯೭೫, ಪುಟ.೬೨೪

೯೭. ಸಭಾ ಪತ್ರ, ಜೂನ್ ೧೮೭೦

೯೮. ೧ ಸಾಮುವೇಲ ೧೭:೧–೧೧ ಮತ್ತು ೪೧.೪೭

೯೯. ಕೀರ್ತನೆ ೩:೫

೧೦೦. ಬಾಲಕರ ಗೀತೆಗಳು, ಗೀತೆ ೧೧೦, ಪುಟ.೧೧೭

೧೦೧. ಕೀರ್ತನೆ ೨೩:೪–೫

೧೦೨. ಲೂಕ ೧೫:೧೧

೧೦೩. ಡಾ. ಫರ್ಡಿನಾಂಡ್ ಕಿಟೆಲ್, ಡಾ.ಶ್ರೀನಿವಾಸ ಹಾವನೂರ, ೨೦೦೯, ಪುಟ.೧೭

೧೦೪. Hermann Gundert 1997 Hermann Moegling, A biography(ed) Albrecht Frenz, P.313

೧೦೫. ಡಾ: ಶ್ರೀನಿವಾಸ ಹಾವನೂರ, ಹೊಸಗನ್ನಡದ ಅರುಣೋದಯ, ೧೯೭೪, ಪುಟ.೩೮೧

೧೦೬. ಅದೇ, ಪುಟ.೩೮೨

೧೦೭. ಮತ್ತಾಯ ೨೨:೩೯

೧೦೮. ರೋಮ ೧೨:೬

೧೦೯. ಮತ್ತಾಯ ೬:೨೬

೧೧೦. ಮತ್ತಾಯ ೮:೬

೧೧೧. ಜೆ.ಎಂ.ಜೋಗುಳ (ಸಂ) ಕರ್ನಾಟಕದಲ್ಲಿ ಬಾಸೆಲ್ ಮಿಶನ್, ೧೯೭೫ ಪುಟ.೧೬೬

೧೧೨. ಕನ್ನಡ ಗೀತಗಳು, ಗೀತೆ ೧೫೬, ಪುಟ.೧೦೮

೧೧೩. ಸಂಗೀತಗಳು ಮತ್ತು ಸಂಗೀತಗಾರರು, ಎಸ್.ರತ್ನಂ ಬೋಧಕರು, ೧೯೫೯

೧೧೪. ಕನ್ನಡ ಗೀತಗಳು, ಗೀತೆ ೮೪, ಪುಟ.೫೮

೧೧೫. ಉತ್ತರ ಕರ್ನಾಟಕ ಸಭೆಗಳ ವರದಿ ವಾರ್ತೆ, ಮಾರ್ಚ್– ಏಪ್ರಿಲ್, ೧೯೬೬, ಕೊನೆಯ ಪುಟಗಳು

೧೧೬. ಕನ್ನಡ ಗೀತಗಳು, ಗೀತೆ ೨೯೫, ಪುಟ.೨೦೩

೧೧೭. ಘನ. ಎಸ್. ರತ್ನಂ ಬೋಧಕರು ಸಂಗೀತಗಳು ಮತ್ತು ಸಂಗೀತಗಾರರು

೧೧೮. ಕೀರ್ತನೆಗಳು ೧೨೦:೧

೧೧೯. ಕೀರ್ತನೆಗಳು ೬೨:೫

೧೨೦. ಜಯವಂತ ಎಂ.ಜೋಗುಳ (ಸಂ), ಕರ್ನಾಟಕದಲ್ಲಿ ಬಾಸೆಲ್ ಮಿಶನ್, ಪುಟ.೧೪೮–೧೫೧

೧೨೧. ಟಿ.ಜಿ. ಸತ್ಯಾನಾರಾಯಣ, ೧೯೭೬, ಫ್ರೆಡ್ರಿಕ್ ತ್ಸಿಗ್ಲರ್, ಪುಟ.೮೧

೧೨೨. 67th Report of B.M.1907 P.28

೧೨೩. ಟಿ.ಜಿ.ಸತ್ಯನಾರಾಯಣ ೧೯೭೬ ಫ್ರೆಡ್ರಿಕ್ ತ್ಸಿಗ್ಲರ್, ಪುಟ.೮೪

೧೨೪. ರಾ.ಯ.ಧಾರವಾಡಕರ, ಹೊಸಗನ್ನಡ ಸಾಹಿತ್ಯದ ಉದಯಕಾಲ, ಪುಟ.೫೯೭

೧೨೫. F Ziegler, The English Kannada Doctionary 1896 Preface P. 4

೧೨೬. ಡಾ. ಶ್ರೀನಿವಾಸ ಹಾವನೂರ, ಹೊಸಗನ್ನಡದ ಅರುಣೋದಯ, ಪುಟ.೧೩೨

೧೨೭. 56th Report of B.M.S. in South West India 1896 P.21

೧೨೮. ವರದರಾಜ ಹುಯಿಲಗೊಳ, ಕ್ರೈಸ್ತರಿಂದ ಕನ್ನಡಕ್ಕೆ ಕಾಣಿಕೆ ೧೯೬೬., ಪುಟ.೨೮

೧೨೯. ಕರ್ನಾಟಕ ಕ್ರೈಸ್ತ ಬಂಧು, ೧೯೩೯

೧೩೦. Wholeness in Christ, Godwin Shiri, The Karnataka Theological Resurch Institute Balmatta, Mangalore, 1985

೧೩೧. ಕನ್ನಡ ಗೀತಗಳು, ಗೀತೆ ೨೦೦, ಪುಟ.೧೩೨

೧೩೨. ಕ್ರೈಸ್ತ ಹಿತವಾದಿ, ಅಕ್ಟೋಬರ್, ೧೯೨೫

೧೩೩. ಮತ್ತಾಯ ೧೩.೧.೯

೧೩೪. ಕ್ರೈಸ್ತ ಹಿತವಾದಿ, ಅಗಸ್ಟ್ ೧೯೨೫

೧೩೫. ಗಲಾತ್ಯ ೫:೭

೧೩೬. ಮತ್ತಾಯ ೫:೧–೧೨

೧೩೭. ಕನ್ನಡ ಪಂಚಾಂಗ, ೧೯೧೫

೧೩೮. ಸತ್ಯವೃತ, ೧೯೨೫ ನವೆಂಬರ್

ಅಧ್ಯಾಯ – ಆರು

ಕನ್ನಡ ಕ್ರೈಸ್ತ ಗೀತೆಗಳ ಲೋಕ ದೃಷ್ಟಿ

ಅಧ್ಯಾಯ – ಆರು

ಕನ್ನಡ ಕ್ರೈಸ್ತ ಗೀತೆಗಳ ಲೋಕ ದೃಷ್ಟಿ

'ಜಗತ್ತು ನಾದಮಯ' ತೊಟ್ಟಿಲಲ್ಲಿರುವ ಮಗುವಿನಿಂದ ಇಹ ಲೋಕದಿಂದ ನಾವು ಕಣ್ಮರೆಯಾಗುವವರೆಗೂ ಗೀತೆಯ ಮಾಧುರ್ಯಕ್ಕೆ ಮಣಿಯದ ವ್ಯಕ್ತಿಗಳಿಲ್ಲ. ದೈವದತ್ತವಾದ ನಿಸರ್ಗದತ್ತ ಗಮನಹರಿಸಿದಾಗ ಪ್ರಾಣಿ ಪಕ್ಷಿಗಳು ಚಿಲಿಪಿಲಿ ನಾದದೊಂದಿಗೆ ಪರಿಸರವನ್ನು ಮಧುರವನ್ನಾಗಿಸುತ್ತವೆ. ಸರ್ವರ ಹೃನ್ಮನಗಳನ್ನು ಸೆಳೆಯುವ ಅಪೂರ್ವ ಶಕ್ತಿ ಗೀತೆಗಿರುವುದಾದರೆ ವ್ಯಕ್ತಿಯ ಸರ್ವತೋಮುಖ ಬೆಳೆವಣಿಗೆಗೆ ಸಮಾಜದ ಸಾಮರಸ್ಯಕ್ಕೆ ಗೀತೆಗಳು ಕಾರಣವಾಗುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಪಾಶ್ಚಾತ್ಯ ಮಿಶನರಿಗಳಿಂದ ರಚಿತವಾದ ಕ್ರೈಸ್ತ ಗೀತೆಗಳು ವ್ಯಕ್ತಿಯ ಆಧ್ಯಾತ್ಮಿಕ, ಮಾನಸಿಕ, ಬೌದ್ಧಿಕ, ಸಾಮಾಜಿಕ ಬೆಳವಣಿಗೆಗೆ ಬೀರಿರುವ ಪ್ರಭಾವವೇನು ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೬.೧ ಮಾನವನನ್ನು ನೋಡಿರುವ ಬಗೆ

ಮನುಷ್ಯಾತ್ಮ ಪರಮಾತ್ಮನೊಂದಿಗೆ ಅನ್ಯೋನ್ಯ ಸಂಬಂಧವನ್ನು ಬೆಳಸಿಕೊಳ್ಳಬೇಕು. ಈ ಸಂಬಂಧವನ್ನು ಬೆಳೆಸುವ ಮಾರ್ಗವೇ ಪ್ರಾರ್ಥನೆ. ಮಾನವ ಹೇಗೆ ಪ್ರಾರ್ಥಿಸಬೇಕು ಎಂಬುದಕ್ಕೆ 'ಕರ್ತರ ಪ್ರಾರ್ಥನೆ' (ಗೀತೆ ೨೪) ಉತ್ತಮ ಉದಾಹರಣೆಯಾಗಿದೆ. ಇದೊಂದು ಸಾರ್ವತ್ರಿಕ ಪ್ರಾರ್ಥನೆಯಾಗಿದೆ. ನಮ್ಮ ಭಿನ್ನಹಗಳನ್ನು ದೇವರ ಮುಂದಿಟ್ಟಾಗ ನಮ್ಮಲ್ಲಿ ಉಂಟಾಗಬೇಕಾದ ಗುಣವೆಂದರೆ 'ಕ್ಷಮೆ' ದೇವರು ನಮ್ಮ ಪಾಪವನ್ನು ಕ್ಷಮಿಸುವಂತೆ ನಾವು ಪರಸ್ಪರ ಪಾಪಗಳನ್ನು ಕ್ಷಮಿಸುವ ಹಂಗಿನಲ್ಲಿದ್ದೇವೆ. ನಾವು ಪರರನ್ನು ಕ್ಷಮಿಸಬೇಕೆಂದು ಗೀತೆಗಳು ಕರೆ ನೀಡುತ್ತವೆ. 'ಜನರ ತಪ್ಪುಗಳನ್ನು ನೀವು ಕ್ಷಮಿಸಿದರೆ ಸ್ವರ್ಗದಲ್ಲಿರುವ ನಿಮ್ಮ ತಂದೆ ನಿಮ್ಮನ್ನು ಕ್ಷಮಿಸುವರು ಜನರನ್ನು ನೀವು ಕ್ಷಮಿಸದಿದ್ದರೆ ನಿಮ್ಮ ತಂದೆಯು ನಿಮ್ಮ ತಪ್ಪುಗಳನ್ನು ಕ್ಷಮಿಸಲಾರರು' (ಮತ್ತಾಯ ೬:೧೪–೧೫) ನಾವು ಒಂದು ತಪ್ಪನ್ನು ಮಾಡಿದ್ದೇ ಆದರೆ ಪರರನ್ನು

ನೋಯಿಸಿದ್ದೇ ಆದರೆ ಅದನ್ನು ಅರಿತಾಕ್ಷಣ ನಮಗೆ ಕ್ಷಮಾಧಾನದ ಅಗತ್ಯವಿದೆ. ನಮಗೆ ಅನ್ಯಾಯ ಮಾಡಿದವರಿಗೂ ಅದರ ಅವಶ್ಯಕತೆ ಇದೆ. ನಾವೆಲ್ಲರೂ ತಪ್ಪನ್ನು ಮಾಡುತ್ತೇವೆ. ಮತ್ತು ನೆರೆಯವರನ್ನು ನೋಯಿಸುತ್ತೇವೆ. ಇದಕ್ಕೆ ನಮ್ಮ ಸ್ವಾರ್ಥ, ಅಲ್ಪ ಬುದ್ಧಿ, ಅವಿವೇಕ ಕಾರಣವಾಗಿರಬಹುದು. ನಮ್ಮ ಮನಸಾಕ್ಷಿ ನಮ್ಮನ್ನು ಆಗ ಎಚ್ಚರಿಸುತ್ತದೆ. ಅದು ದೇವರ ವಾಣಿ ಅದನ್ನು ಕೇಳಿದಾಗ ನಾವು ಸಂಧಾನಕ್ಕೆ ಸಿದ್ಧವಾಗಬೇಕು. ಕ್ಷಮೆ ನೀಡುವುದು ದೈವೀ ಗುಣ ಎಂದು ಗೀತೆಗಳು ನಮ್ಮನ್ನು ಜ್ಞಾಪಿಸುತ್ತವೆ.

ನಮ್ಮನ್ನು ಬಳಸಿಕೊಂಡಿರುವ ಅತಿಶಯ ವಸ್ತುಗಳನ್ನು ಸೃಷ್ಟಿಸಿದ ದೇವರು ಎಷ್ಟು ಉತ್ತಮರು ಪ್ರತಿಯೊಂದು ವಸ್ತುವು ಅವರ ಪ್ರೀತಿ ಸೌಂದರ್ಯ ಮತ್ತು ಮಹತ್ವವನ್ನು ಸಾರುತ್ತದೆ. ನಮ್ಮ ಅಕ್ಕ ಪಕ್ಕದಲ್ಲಿರುವ ವಸ್ತುಗಳ ಸೌಂದರ್ಯವನ್ನು ಸವಿಯುವುದರ ಮುಖಾಂತರ ದೇವರ ಮಹತ್ವವನ್ನು ನಾವು ಅರಿತು ಬೆಳೆಯುತ್ತೇವೆ. ಅವುಗಳ ಬಗ್ಗೆ ನಾವು ತಿಳಿದುಕೊಂಡಷ್ಟು ಸೃಷ್ಟಿ ಕರ್ತರ ಹಿರಿತನವನ್ನು ಪ್ರಶಂಸಿಸುತ್ತೇವೆ. ನಮ್ಮ ದೃಷ್ಟಿಯನ್ನು ಬಳಸಿ ನಾವು ಸೃಷ್ಟಿಯ ಸೌಂದರ್ಯವನ್ನು ಸವಿಯಬಹುದು. ಮರ ಗಿಡಗಳ ಸೌಂದರ್ಯ, ಬೆಟ್ಟ ಗುಡ್ಡಗಳ ಘನತೆ, ನದಿ ಸಾಗರಗಳ ಸೌಮ್ಯತೆ, ನಮ್ಮನ್ನು ಆಶ್ಚರ್ಯ ಚಕಿತರನ್ನಾಗಿ ಮಾಡುತ್ತವೆ. ನಮ್ಮ ಸುತ್ತಮುತ್ತಲಿನಲ್ಲಿರುವ ರಂಗು ರಂಗಿನ ವಸ್ತುಗಳು, ಹೂವಿನ ಬಣ್ಣ, ಸೂರ್ಯೋದಯ, ಅಸ್ತಮಾನಗಳ ಸೌಂದರ್ಯ, ಸಂಗೀತ ಸೌರಭ, ಸುಶ್ರಾವ್ಯ ಕಂಠ, ಮಾಧುರ್ಯ, ಇವು ನಮ್ಮ ಹೃದಯವನ್ನು ಆನಂದ ಸಾಗರದಲ್ಲಿ ಮುಳುಗಿಸುತ್ತವೆ. ಸೃಷ್ಟಿಯಲ್ಲಿರುವ ಅತಿ ಚಿಕ್ಕ ವಸ್ತುವು ಒಂದು ಅದ್ಭುತವೇ ಆಗಿದೆ. ಪ್ರತಿಯೊಂದು ವಸ್ತುವನ್ನು ನಾವು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅದರ ಮಹತ್ವ ನಮಗೆ ಅರಿವಾಗುತ್ತದೆ. ಒಂದು ವಸ್ತುವನ್ನು ಸಾಮಾನ್ಯ, ಸಣ್ಣದು ಎಂದು ಪರಿಶೀಲಿಸಿದಾಗ ಅದರ ಮಹತ್ವ ನಮಗೆ ಅರಿವಾಗುತ್ತವೆ. ಇವೆಲ್ಲವು ಸ್ವರ್ಗದಲ್ಲಿರುವ ನಮ್ಮ ತಂದೆಯ ಉದಾರ ಕೊಡುಗೆಯಾಗಿದೆ ಎಂದು ನಂಬಿ ಆತನಿಗೆ ಸ್ತುತಿ ಅರ್ಪಿಸಬೇಕೆಂದು ಕರೆ ನೀಡುತ್ತವೆ ಈ ಗೀತೆಗಳು ಉದಾ: ಬಾಲಕರ ಗೀತೆಗಳು ೧೦,೧೧,೧೨,೧೩,೧೯,೨೩,೨೫,೮೮ ಇತ್ಯಾದಿ.

'ರಕ್ಷಣೆ' ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ಒಂದು. ತನ್ನ ರಕ್ಷಣೆಗಾಗಿ ಆತ ಮಾಡಿಕೊಳ್ಳುವ ಸಿದ್ಧತೆಗಳು, ಕಾಪಾಡಿಕೊಳ್ಳುವ ಬಗೆ ಅನೇಕ ರೀತಿಯಲ್ಲಿವೆ. ನಾಗರೀಕತೆಯ ಪ್ರಾರಂಭದಿಂದ ಇಂದಿನವರೆಗೆ ರಕ್ಷಣೆಗಾಗಿ ಮನುಷ್ಯ ಅನೇಕ ವಿಧದ ಆಯುಧಗಳನ್ನು ಬಳಸುತ್ತಿದ್ದಾನೆ. ವ್ಯಕ್ತಿ ಸಬಂಧಗಳಲ್ಲಿ ಸಂಶಯ ಮೂಡಿದಾಗ ಬದುಕು ಅಸಮಂಜಸವಾಗಿ ವಾಗ್ವಾದಗಳು, ಆಯುಧಗಳ ಬಳಕೆಯು ಸಹಜವಾಗಿರುತ್ತದೆ. ಇದರಿಂದ ದಿನದಿಂದ ದಿನಕ್ಕೆ ಅವಿಶ್ವಾಸ, ವೈರಾಗ್ಯ, ದರ್ಪ, ಅಹಂಕಾರ ಇತ್ಯಾದಿ ಸಮಾಜ ಬಾಹಿರ ಕೃತ್ಯಗಳು ಹೆಚ್ಚುತ್ತಿವೆ. ಒಬ್ಬ ವ್ಯಕ್ತಿ ಅಥವಾ ರಾಷ್ಟ್ರ ಆಯುಧಗಳನ್ನು ಹೊಂದಿದೆ ಎಂದು ತಿಳಿದು ಬಂದಾಗ ಭಯದ ವಾತಾವರಣ ಮೂಡಿ ಸಮಾಜವು ಅಶಾಂತಿಯ ತಾಣವಾಗುತ್ತವೆ. ಕನ್ನಡ ಗೀತೆಗಳು (೧೯೬೬) ಗೀತೆ ೨೯೯ರಲ್ಲಿ ಮನುಷ್ಯನು ಹೊಂದಿರಬೇಕಾದ ಆಯುಧಗಳು ಯಾವುವು ಎಂಬುದರ ಬಗ್ಗೆ ಮಾಹಿತಿ ನೀಡುತ್ತದೆ. ನಮ್ಮ ಜೀವಿತವು ಹೋರಾಟ ಅಥವಾ ಯುದ್ಧದಂತಿದೆ. ಯುದ್ದದಲ್ಲಿ ಜಯಶಾಲಿಗಳಾಗುವುದಕ್ಕೆ

ಅವಶ್ಯಕವಾದ ಆಯುಧಗಳು ಇಂತಿವೆ. ಸತ್ಯವೆಂಬ ನಡುಕಟ್ಟು, ನೀತಿಯೆಂಬ ರಕ್ಷಾಕವಚ, ಶಾಂತಿಯ ಶುಭಸಂದೇಶವನ್ನು ಸಾರಲು ಶ್ರದ್ಧೆಯೆಂಬ ಪಾದರಕ್ಷೆಯನ್ನು ಮೆಟ್ಟಿಕೊಳ್ಳಬೇಕು, ವಿಶ್ವಾಸವೆಂಬ ಗುರಾಣಿ, ರಕ್ಷಣೆಯೆಂಬ ಶಿರಸ್ತ್ರಾಣ, ದೇವರ ವಾಕ್ಯವು ಖಡ್ಗವಾಗಿರಬೇಕು ಎಲ್ಲ ಸಮಯಗಳಲ್ಲೂ ಪ್ರಾರ್ಥಿಸಬೇಕು ಎಂಬ ಸಂದೇಶವಿದೆ ಗೀತೆಯಲ್ಲಿ.

ನಾವು ಸರಕಾರಕ್ಕೆ ಏಕೆ ತೆರಿಗೆಯನ್ನು ತರಬೇಕು? ಎಂಬ ವಿಚಾರದತ್ತ ನಮ್ಮ ಗಮನ ಸೆಳೆದಿದೆ ಅಭಿನಯ ಗೀತೆಯ ೪೦ನೇ ಗೀತೆ. ಯೆಹೂದ್ಯರು ದೇವಾಲಯದ ನಿರ್ವಹಣೆಗಾಗಿ ಅರ್ಧ ಶೆಕೆಲ್ (ಒಂದು ಬೆಳ್ಳಿ ನಾಣ್ಯ) ನಷ್ಟು ತೆರಿಗೆಯನ್ನು ತೆರಬೇಕಾಗಿತ್ತು. ಯೇಸು ಸ್ವಾಮಿಯೇನೂ ಈ ತೆರಿಗೆಯನ್ನು ಸಲ್ಲಿಸಲೇ ಬೇಕಾಗಿರಲಿಲ್ಲ. ಆದರೂ ತನ್ನ ಪರವಾಗಿ ಈ ತೆರಿಗೆಯನ್ನು ಪಾವತಿ ಮಾಡಲು ಯೇಸು ಸ್ವಾಮಿ ಪೇತ್ರನಿಗೆ ಆದೇಶಿಸುತ್ತಾರೆ. ಸಾಮಾಜಿಕ ಜವಾಬ್ದಾರಿಯನ್ನು ಈ ಗೀತೆಯು ತಿಳಿಸುತ್ತದೆ. ಸಂಗ್ರಹವಾದ ತೆರಿಗೆಯಿಂದ ಸರಕಾರ ನಡೆಯುತ್ತದೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆ ವಿದ್ಯುಚ್ಛಕ್ತಿ ಪೂರೈಕೆ, ರಸ್ತೆಗಳ ನಿರ್ಮಾಣ ಮತ್ತು ದುರಸ್ಥಿ, ಸಾರ್ವಜನಿಕ ಶೌಚಾಲಯ ನಿರ್ಮಾಣ, ನೀರು ಸರಬರಾಜು ಮುಂತಾದ ಕಾರ್ಯಗಳನ್ನು ಕೈಗೊಳ್ಳಲು ಸರ್ಕಾರಕ್ಕೆ ಸಾಧ್ಯವಾಗುತ್ತದೆ. ಆದುದರಿಂದಲೇ ಸರ್ವರು ತೆರಿಗೆಗಳನ್ನು ತರುವುದು ಅಗತ್ಯ ಇನ್ನು ಹಲವಾರು ನಿಯಮಗಳನ್ನು ಸಮಾಜದ ಸಾರ್ವಜನಿಕ ಕ್ರಮಬದ್ಧ ಜೀವನಕ್ಕಾಗಿ ನಾವು ಅನುಸರಿಸಬೇಕಾಗುತ್ತದೆ. ನಮ್ಮ ಸುತ್ತ ಮುತ್ತಲಿನವರನ್ನು ನಾವೆಷ್ಟೊಂದು ನಿರ್ಲಕ್ಷಿಸುತ್ತೇವೆ. ಅವರ ಇರುವನ್ನು ಮರೆತು ಜೀವಿಸುತ್ತೇವೆ. ಅವರ ಸಾವು ನೋವುಗಳಲ್ಲಿ ಪಾಲ್ಗೊಳ್ಳಲು ಹೋದರೆ ನಾವು ನಮ್ಮ ಸಮಯ, ಹಣ, ಸಾಮರ್ಥ್ಯವನ್ನೆಲ್ಲಾ ವ್ಯಯ ಮಾಡಬೇಕಾದಿತೋ ಎಂಬ ಭಯ ನಮಗೆ. ಆದುದರಿಂದಲೇ ನಾವು ದೂರ ಸರಿದು ನಿಲ್ಲುತ್ತೇವೆ. ದ್ವೀಪಗಳಂತೆ ಜೀವಿಸುತ್ತೇವೆ. ಮಾನವ ಕುಟುಂಬದ ಪ್ರತಿಯೊಬ್ಬ ಸದಸ್ಯನಿಗೂ ನಮ್ಮ ಕೈಲಾದ ಮಟ್ಟಿಗೆ ಸಹಾಯ ಮಾಡುವುದು ಜವಾಬ್ದಾರಿಯುತ ಜೀವನವಾಗಿದೆ ಆದುದರಿಂದಲೇ ಯಾರಾದರೂ ಅನ್ಯಾಯಕ್ಕೆ ತುತ್ತಾದಾಗ ಕಾಲ್ತುಳಿತಕ್ಕೆ ಸಿಕ್ಕಿ ನಲುಗಿದಾಗ, ನಿರ್ಲಕ್ಷ್ಯಕ್ಕೆ ಬಲಿಯಾದಾಗ, ಪ್ರಕೃತಿ ವಿಕೋಪಗಳಿಗೆ ಒಳಗಾದಾಗ ಅವರ ಬಗ್ಗೆ ನಮಗೆ ಕಾಳಜಿ ಅನುಕಂಪ ಮೂಡಲೇ ಬೇಕು ಮತ್ತು ಕಾರ್ಯ ಸಾಧನೆಯ ಮೂಲಕ ನಾವದನ್ನು ವ್ಯಕ್ತಪಡಿಸಬೇಕು (ಬಾಲಕರ ಗೀತೆಗಳು, ಗೀತೆ ೬೫). 'ಅನ್ಯಾಯ ಹೊಂದಿದ ದೀನರಿಗೆ ನೀತಿ, ನ್ಯಾಯ, ಹಸಿದು ಬೇಡುವ ಜನರಿಗೆ ಆಹಾರ, ಕುರುಡರಿಗೆ ಕೃಪೆ, ಭಾರದಿ ಬಾಗಿದ ಪಾಪಿಯನ್ನು ಎತ್ತುವನು ಎಂದು ೩೧೦ಗೀತೆಯು (ಕನ್ನಡ ಗೀತೆಗಳು) ದೇವರ ಕಾರ್ಯದ ಬಗ್ಗೆ ತಿಳಿಸಿದೆ. ಇದಕ್ಕೆ ನಮ್ಮ ಮನೋದೃಷ್ಟಿಯೇನು? ಭಾರತ, ಪ್ರಪಂಚದ ರಾಷ್ಟ್ರಗಳಲ್ಲಿ ಒಂದು ಶ್ರೀಮಂತ ದೇಶ, ಸಂಪನ್ಮೂಲಗಳಲ್ಲಿ ಅಕ್ಷಯವಾದ ಖನಿಜ ಸಂಪತ್ತಿನಿಂದಲೇ ತುಂಬಿದೆ. ವ್ಯವಸಾಯೋತ್ಪನ್ನಗಳ ಕಡೆಗೆ ದೃಷ್ಟಿ ಹರಿಸಿದರೆ ತನಗೆ ಬೇಕಾಗುವಷ್ಟು ಆಹಾರವನ್ನು ಭಾರತ ಬೆಳೆಯುತ್ತದೆ. ಅಗತ್ಯವಿರುವಷ್ಟು ಬಟ್ಟೆ, ಯಂತ್ರೋಪಕರಣಗಳು, ಇತ್ಯಾದಿ ಭಾರತದಲ್ಲೇ ಉತ್ಪಾದಿಸಲಾಗುತ್ತದೆ. ಹಾಗಾದರೆ ಮಿಲಿಯಾಂತರ ಭಾರತೀಯರು ಹಸಿವೆಯಿಂದ ಭವಣೆ ಪಡುವುದೇಕೆ? ಅಷ್ಟೊಂದು ಭಾರತೀಯರು ಇನ್ನೂ ಏಕೆ

ಅನಕ್ಷರಸ್ತರಾಗಿ ಉಳಿದಿದ್ದಾರೆ. ಇನ್ನೂ ಏಕೆ ಅಷ್ಟೊಂದು ಜನರು ಬಡತನದ ದವಡೆಯಲ್ಲಿ ಸಿಕ್ಕಿ ಬಳಲುತ್ತಿರುವುದು? ಭಾರತಕ್ಕೆ ಸ್ವಾತಂತ್ರ್ಯ ಬಂದಿರುವುದು ಹೆಮ್ಮೆಯ ವಿಷಯ. ಆದರೆ ಮಿಲಿಯಾಂತರ ಭಾರತೀಯರು ಬಡತನ, ನಿರುದ್ಯೋಗ, ಅನಕ್ಷರತೆ ಎಂಬ ಗುಲಾಮ ಗಿರಿಯಲ್ಲಿ ತೊಳಲಾಡುತ್ತಿರುವಾಗ ನಮ್ಮ ಪ್ರತಿಕ್ರಿಯೆ ಏನು? ಅವರ ರಕ್ಷಣಾ ಕಾರ್ಯದಲ್ಲಿ ನಾವು ಭಾಗಿಗಳಾಗಬೇಕೆಂದು ಈ ಗೀತೆ ಪ್ರೇರೇಪಿಸುತ್ತದೆ.

ಪ್ರಭು ಯೇಸು ನೆರೆಯವನಿಗೆ ತೋರಿದ ಪ್ರೀತಿ, ವಿಶ್ವಾಸ, ತಮಗೆ ತೋರಿದಂತೆ ಎಂದು ಪರಿಗಣಿಸುತ್ತಾರೆ. 'ಈ ನನ್ನ ಸಹೋದರರಲ್ಲಿ ಒಬ್ಬನಿಗೆ ಅವನೆಷ್ಟೇ ಕನಿಷ್ಟನಾಗಿರಲಿ, ಅವನಿಗೆ ಮಾಡಿದ್ದು ನೀವು ನನಗೆ ಮಾಡಿದಿರಿ ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಯಾರು ಪರರಿಗೆ ಪ್ರೀತಿಯನ್ನು ತೋರಿಸುತ್ತಾರೋ ಅವರು ತಮ್ಮ ಪ್ರೀತಿಯಲ್ಲಿ ಭಾಗಿಯಾಗುತ್ತಾರೆ. ನನ್ನ ಪಿತನಿಂದ ಧನ್ಯರೆನಿಸಿಕೊಂಡವರೇ ಬನ್ನಿ, ಲೋಕಾದಿಯಿಂದ ನಿಮಗಾಗಿ ಸಿದ್ಧಮಾಡಿದ ಸಾಮ್ರಾಜ್ಯವನ್ನು ಸ್ವಾಸ್ತ್ಯವಾಗಿ ಪಡೆಯಿರಿ. ಏಕೆಂದರೆ ನಾನು ಹಸಿದಿದ್ದೇ ನನಗೆ ಆಹಾರ ಕೊಟ್ಟಿರಿ, ಬಾಯಾರಿದ್ದೆ ಕುಡಿಯಲು ಕೊಟ್ಟಿರಿ, ರೋಗಿಯಾಗಿದ್ದ ನನ್ನ ಆರೈಕೆ ಮಾಡಿದಿರಿ, ಬಂಧಿಯಾಗಿದ್ದ ನನ್ನನ್ನು ಸಂಧಿಸಿದಿರಿ' ಎಂದು ಹೇಳುವರು. ನಾವು ಒಂಟಿಯಾಗಿ ಬಾಳಲು ಸಾಧ್ಯವಿಲ್ಲ ನಾವು ಸಮಾಜದಲ್ಲಿ ಸಂಘ ಸಂಸ್ಥೆಗಳಲ್ಲಿ ಅಂದರೆ ಬಡವ ಬಲ್ಲಿದರೊಂದಿಗೆ ಬಾಳುತ್ತೇವೆ. ಹೃದಯವಂತ ಸೃಷ್ಟಿಗಳ ಹೃದಯದ ಗುಣ, ಪ್ರೀತಿಸುವುದು ಮತ್ತು ಪ್ರೀತಿಯನ್ನು ಅಪೇಕ್ಷಿಸುವುದು. ಆದುದರಿಂದ ನಾವು ನೆರೆ ಹೊರೆಯವರ ಬಗ್ಗೆ ಆಸಕ್ತಿಯನ್ನು ತೋರಬೇಕು ಅವರನ್ನು ಗಮನಿಸಬೇಕು. ಸೋದರನ ವಿರುದ್ಧವಾಗಿ ಮಾಡಿದ ಪಾಪ ದೇವರ ವಿರುದ್ಧ ಮಾಡಿದಂತೆ ಸೋದರನನ್ನು ಹೃದಯದಿಂದ ಕಿತ್ತೊಗೆದಾಗ ಅಲ್ಲಿ ದೇವರು ಇಲ್ಲವಾಗುತ್ತಾರೆ (ಕನ್ನಡ ಗೀತೆಗಳು ೧೯೬೬ ಗೀತೆ ೨೨೦).

೬.೨ ಜಗತ್ತನ್ನು ನೋಡಿರುವ ಬಗೆ

ಕ್ರೈಸ್ತ ಗೀತೆಗಳಲ್ಲಿ ದೇವರು ಲೋಕದ ಕನಿಷ್ಟ ವಸ್ತುಗಳಿಗೆ ಪ್ರೀತಿ, ವಾತ್ಸಲ್ಯವನ್ನು ತೋರಿರುವುದನ್ನು ಕಾಣುತ್ತೇವೆ. ಉದಾ: ಲಿಲ್ಲಿ ಹೂವು, ಪಕ್ಷಿಗಳ ಕುರಿತು ಹೇಳುತ್ತಾ ದೇವರು ನಮ್ಮ ಬಗ್ಗೆ ವಹಿಸುವ ಕಾಳಜಿಯನ್ನು ತಿಳಿಸಿದ್ದಾರೆ. ಇವು ನಮ್ಮನ್ನು ಬಳಸಿಕೊಂಡಿರುವ ಸೃಷ್ಟಿಯ ಬಗ್ಗೆ ವಿಶೇಷ ಆಸಕ್ತಿಯನ್ನು ತೋರಿಸುತ್ತದೆ. ಈ ಸೃಷ್ಟಿಯಲ್ಲಿ ಅವರು ತಮ್ಮನ್ನು ಮತ್ತು ನಮ್ಮನ್ನು ಪ್ರೀತಿಸುವ ತಂದೆಯಾದ ದೇವರ ಹಸ್ತವನ್ನು ಕಂಡರು. ಸೃಷ್ಟಿಯಲ್ಲಿರುವ ಪ್ರತಿಯೊಂದು ವಸ್ತು ದೇವರ ಸಂದೇಶವನ್ನು ಹೊಂದಿದೆ. ಕಾರಣ ಅದು ದೇವರ ಪ್ರೀತಿಯ ಪರಿಣಾಮವಾಗಿ ಸೃಷ್ಟಿಸಲಾಗಿದೆ. ಈ ಸತ್ಯವನ್ನು ನಾವು ತಿಳಿಯಬೇಕಾಗಿದೆ. ಈ ಸೃಷ್ಟಿಯನ್ನು ಕಾಪಾಡುವ ಜವಾಬ್ದಾರಿ ಪ್ರತಿಯೊಬ್ಬ ಮಾನವನದಾಗಿದೆ. ನಿಸರ್ಗವನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ಮಾನವನನ್ನು ಕಂಡು ಗೀತಗಾರ ಆತನ ಕರ್ತವ್ಯದತ್ತ ಗಮನ ಸೆಳೆದಿದ್ದಾರೆ. ಉದಾ: ಬಾಲಕರ ಗೀತೆಯಲ್ಲಿ (ಗೀತೆ ೫೪). ಕೇದಗೆ ಹೂವನ್ನು ಕೊಯ್ಯಲು ಪ್ರಯತ್ನಿಸಿದ ವ್ಯಕ್ತಿಗೆ 'ಮೂರ್ಖನೇ ನನ್ನ ಮುಳ್ಳು ಚುಚ್ಚುತ್ತೆ ಕೈಗೆ' ಎಂದರೂ ಆತ ಗಮನಿಸದೆ ಕೊಯ್ಯ ತೊಡಗಿದ ಇದರಿಂದ ಅದರ ಮುಳ್ಳು ಆತನನ್ನು ಚುಚ್ಚಲು ಬೇನೆಯಿಂದ ನರಳ ತೊಡಗಿದ, ಅಳ ತೊಡಗಿದ. ಚಂದವಾದ ಕೇದಗೆ ನೋಡಿ ಆನಂದ

ಪಡಬೇಕೇ ಹೊರತು ಅದನ್ನು ಕೊಯ್ದು ನಾಶ ಮಾಡಬಾರದು ಎಂಬ ಸಂದೇಶವನ್ನು ಗೀತಗಾರ ಗೀತೆಯಲ್ಲಿ ನೀಡಿದ್ದಾನೆ. ನಿಸರ್ಗವನ್ನು ನಮ್ಮ ದುರುಪಯೋಗಕ್ಕೆ ಬಳಸಿಕೊಳ್ಳಬಾರದು ಎಂಬ ಸಂದೇಶ ಪ್ರಸ್ತುತ ಸಮಾಜದಲ್ಲಿ ಸರ್ವರ ಮನದಾಳವನ್ನು ತಲುಪಬೇಕಾಗಿದೆ.

ಸಮಾಜಿಕ ಸಮಸ್ಯೆಗಳಿಗೆ ಸ್ಪಂದಿಸಿ ಆ ಸಮಸ್ಯೆಗಳನ್ನು ಹೋಗಲಾಡಿಸಲು ಅವರು ನೀಡುವ ಸಂದೇಶಗಳು ಮೌಲ್ಯಯುತವಾಗಿದೆ. ಜಾತೀಯತೆ ನಮ್ಮ ನಾಡನ್ನು ಕಾಡುತ್ತಿರುವ ಒಂದು ಸಮಸ್ಯೆ. ಜಾತೀಯತೆಯು ಇಂದು ಭಯೋತ್ಪಾದಕ ಹಂತಕ್ಕೆ ಬಂದು ಎಲ್ಲೆಲ್ಲೂ ಅಶಾಂತಿಯ ವಾತಾವರಣ ತಾಂಡವವಾಡುತ್ತಿದೆ. ವ್ಯಕ್ತಿಯ ಸ್ಥಾನಮಾನಗಳು ಆತನ ಜಾತಿಯ ಮೇಲೆ ಆಧಾರಿತವಾಗಿದೆಯೇ ಹೊರತು ಗುಣಗಳಿಂದಲ್ಲ. ಶಾಸನಗಳು ಜಾತೀಯತೆಯನ್ನು ಹೊರಗಟ್ಟಲು ಪ್ರಯತ್ನಿಸುತ್ತಿದ್ದರೂ ಅಷ್ಟೇ ಪ್ರಮಾಣದಲ್ಲಿ ಹೆಚ್ಚಾಗುತ್ತಿರುವುದನ್ನು ಕಾಣುತ್ತೇವೆ. ಕ್ರೈಸ್ತ ಮಿಶನರಿಗಳು ಸಜ್ಜನರನ್ನು ಮೇಲು ಜಾತಿ, ದುರ್ಜನರನ್ನು ಕೀಳು ಜಾತಿಗಳೆಂದು ಬಾಲಕರ ಗೀತೆಗಳು ಗೀತೆ ೭೦ರಲ್ಲಿ ಗುರುತಿಸಿದ್ದಾರೆ. ಗುಣಗಳಿಗೆ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ನಾವು ಅವಲಂಬಿಸುತ್ತಿರುವ ಎಷ್ಟೋ ಜನರ ಬಗ್ಗೆ ನಾವು ಅಗೌರವ ತಾಳಲು ಕಾರಣವೇನು? ನಾವು ಅವರ ಬಗ್ಗೆ ಕೆಲವು ಕೆಟ್ಟ ಅಭಿಪ್ರಾಯಗಳನ್ನು ಹೊಂದಿರುವುದರಿಂದ ಅಲ್ಲವೆ? ಕೆಲವರನ್ನು ನಾವು ಉತ್ತಮ ಜಾತಿಯವರು, ಕೆಲವರನ್ನು ಕೀಳು ಜಾತಿಯವರು ಉಳಿದವರನ್ನು ಜಾತಿ ರಹಿತರು ಜಾತಿ ಭ್ರಷ್ಟರೆನ್ನುತ್ತೇವೆ. ಕೆಲವರನ್ನು ನಾವು ಮುಟ್ಟಿದರೆ ಅಶುದ್ಧರಾಗುತ್ತೇವೆ ಎಂಬ ಮೂಢನಂಬಿಕೆ ಅವರನ್ನು ಅಸ್ಪೃಶ್ಯರ ಗುಂಪಿಗೆ ಸೇರಿಸಿದೆ. ಆದುದರಿಂದ ಅವರಿಗೆ ನಮ್ಮ ಮನೆಗಳಲ್ಲಿ ಸ್ಥಳವಿಲ್ಲ, ಊರಿನ ಬಾವಿಯಿಂದ ನೀರಿಲ್ಲ, ನಮ್ಮ ಸಂವಿಧಾನ ಇಂತಹ ತಾರತಮ್ಯವನ್ನು ಪ್ರತಿನಿಧಿಸುತ್ತದೆ. ಅದನ್ನು ಉಲ್ಲಂಘಿಸುವವರು ಶಿಕ್ಷಾರ್ಹರು ಎನ್ನುತ್ತೇವೆ. ನಾವು ಎಲ್ಲೇ ವಾಸ ಮಾಡುತ್ತಿರಬಹುದು ಯಾವ ಭಾಷೆಯನ್ನಾದರೂ ಆಡುತ್ತಿರುವುದು ನಮ್ಮ ಬಣ್ಣ ಮತ್ತು ಸಂಸ್ಕೃತಿ ಬೇರೆಬೇರೆಯಾಗಿರಬಹುದು. ಧರ್ಮ ಮತ್ತು ದೇಶ ವಿಭಿನ್ನವಾಗಿರಬಹುದು. ಕಟ್ಟಕಡೆಗೆ ನಾವು ಒಂದೇ ವಿಶ್ವ ಕುಟುಂಬಕ್ಕೆ ಸೇರಿದವರು. ದೇವರು ನಮ್ಮೆಲ್ಲರ ತಂದೆ ಮತ್ತು ಸೃಷ್ಟಿ ಕರ್ತರು ಹೊರಗಿನ ವ್ಯತ್ಯಾಸಗಳು, ಆಂತರಿಕ ಮಾನವ ಸೋದರತ್ವದ ಬಂಧನವನ್ನು ಸಡಿಲಗೊಳಿಸಬಾರದು. ಯಾವ ಸಂದರ್ಭದಲ್ಲೂ ಅಂಧಾಭಿಮಾನ ನಮ್ಮನ್ನು ಕಂಗೆಡಿಸಬಾರದು ಎಂಬ ಸಂದೇಶವನ್ನು ಈ ಗೀತೆ ನೀಡುತ್ತದೆ.

ಲೋಕದಲ್ಲಿನ ಯಾತನೆ, ಕಷ್ಟ ಕೋಟಲೆಗಳಿಗೆ ನಮ್ಮ ಪ್ರತಿಕ್ರಿಯೆ ಏನಾಗಿದೆ? ನಾವು ನೋವನ್ನು ಅನುಭವಿಸುವಾಗ ನಮ್ಮ ವ್ಯಕ್ತಿತ್ವ ಮತ್ತು ದೇವರ ಬಗ್ಗೆ ನಮಗಿರುವ ಭಾವನೆಗಳೇನು? ಕ್ರೈಸ್ತ ಗೀತೆಗಳು ಯೇಸುವಿನ ವ್ಯಕ್ತಿತ್ವದತ್ತ ಗಮನಹರಿಸಿ ಯಾತನೆಗೆ ಅರ್ಥವನ್ನು ಕಂಡುಕೊಂಡಿರುವುದನ್ನು ಕಾಣುತ್ತೇವೆ. ಯೇಸು ಯಾತನೆಯನ್ನು ಹೇಗೆ ಎದುರಿಸಿದರು ಎಂಬುದನ್ನು ಪರಿಶೀಲಿಸೋಣ. ಗೆತ್ಸೇಮನಿ, ಒಲೀವ್ ಬೆಟ್ಟದ ಪಶ್ಚಿಮದಲ್ಲಿರುವ ಗುಡ್ಡದ ಪ್ರದೇಶ ಅದು ಜೆರೂಸಲೇಮಿನ ಹತ್ತಿರದಲ್ಲಿದೆ. ಯೇಸು ಆಗಾಗ ಅಲ್ಲಿ ಪ್ರಾರ್ಥಿಸಲು ಹೋಗುತ್ತಿದ್ದರು. ಆ ರಾತ್ರಿ ಅವರು ಪೇತ್ರ, ಯಾಕೋಬ ಮತ್ತು ಯೋವಾನ್ನರನ್ನು ತಮ್ಮ

ಜೊತೆಯಲ್ಲಿ ಕರೆದುಕೊಂಡು ಹೋದರು. ಯೇಸು ಮಹಿಮಾ ರೂಪವನ್ನು ತಾಳಿದಾಗ ಅದನ್ನು ಕಂಡು ಅವರು ಸಂತೋಷಭರಿತರಾಗಿದ್ದರು. ಆದರೆ ಯೇಸು ಮಾನಸಿಕ ಯಾತನೆ, ದೈಹಿಕ ದುರ್ಬಲತೆಯನ್ನು ಅನುಭವಿಸುತ್ತಿರುವುದನ್ನು ಅವರು ನೋಡಬೇಕಾಯಿತು. 'ನೀವು ಎಚ್ಚರವಾಗಿದ್ದು ಪ್ರಾರ್ಥಿಸಿ' ಎಂದು ಯೇಸು ಯಾತನೆಯನ್ನು ಅನುಭವಿಸುವಾಗ ತಮ್ಮ ಗೆಳೆಯರ ಸಹಕಾರವನ್ನು ಅಪೇಕ್ಷಿಸಿದರು. 'ನನ್ನ ಮನೋವೇದನೆ ಪ್ರಾಣ ಹಿಂಡುವಷ್ಟು ತೀವ್ರವಾಗಿದೆ' ಎಂದರು. ಶತ್ರುಗಳು ತಮ್ಮನ್ನು ಕೊಲ್ಲಲು ಒಳಸಂಚನ್ನು ಮಾಡುತ್ತಿರುವುದು ತಾವು ಶಿಲುಬೆಯಲ್ಲಿ ಸಾಯುವುದು ಅವರಿಗೆ ತಿಳಿದಿತ್ತು. ತಮ್ಮ ಶಿಷ್ಯರೇ ದ್ರೋಹ ಬಗೆಯುವುದು ಅವರಿಗೆ ತಿಳಿದಿತ್ತು. ಪ್ರಥಮತಃ ಯೂದ ನಂತರ ಪೇತ್ರ ಕಟ್ಟಕಡೆಗೆ ಉಳಿದ ಎಲ್ಲಾ ಶಿಷ್ಯರು ಅವರನ್ನು ಬಿಟ್ಟಗಲಿದರು. ಅವರಿಗೆ ಕಷ್ಟ ಸಂಕಷ್ಟಗಳು ಎದುರಾಗುವಾಗ ಶಿಷ್ಯರು ಅವರಿಂದ ದೂರವಾಗುತ್ತಿರುವುದು ಅವರಿಗೆ ಸ್ಪಷ್ಟವಾಗಿತ್ತು. ಯೇಸು ನಮ್ಮಂತೆಯೇ ಯಾತನೆಯನ್ನು ಅನುಭವಿಸುವಾಗ ಮಾನಸಿಕವಾಗಿ ದುಃಖಿತರಾಗಿದ್ದರು. ತಾವು ಸಾಯುವುದು ನಿಶ್ಚಿತವಾದಾಗ ಆ ಕಷ್ಟದ ಕೊಡವನ್ನು ತಮ್ಮಿಂದ ತೆಗೆಯುವಂತೆ ತಂದೆ ದೇವರನ್ನು ವಿನಂತಿಸಿದರು. 'ನನ್ನ ಚಿತ್ತದಂತಲ್ಲ ನಿಮ್ಮ ಚಿತ್ತಂದತಾಗಲಿ' ಯೇಸು ತಮ್ಮ ಯಾತನೆಯಲ್ಲಿ ದೇವರು ನಮ್ಮ ತಂದೆ ಎಂಬ ವಿಷಯವನ್ನು ಗಮನಕ್ಕೆ ತಂದರು. ತಮ್ಮ ನಂಬಿಕೆಯನ್ನು ಅವರು ಸಂಪೂರ್ಣವಾಗಿ ದೇವರಲ್ಲಿಟ್ಟರು. ತಂದೆಯ ಚಿತ್ತವಾದರೆ ನೋವನ್ನು ಅನುಭವಿಸಲು ಅವರು ಸಿದ್ಧರಾದರು. ತಮ್ಮ ಯಾತನೆಯ ವೇಳೆಯಲ್ಲಿ ತಮ್ಮ ಮರಣದ ಸಂದರ್ಭದಲ್ಲಿ ಅವರು ಎಲ್ಲವನ್ನು ಪೂರ್ಣ ಮನಸ್ಸಿನಿಂದ ಸ್ವೀಕರಿಸಿದರು. ತಂದೆಯ ಚಿತ್ತವನ್ನು ಅವರು ಸ್ವೀಕರಿಸಿದ್ದರಿಂದ ತಂದೆಯಾದ ದೇವರ ಕೃಪೆಗೆ ಅವರು ಪಾತ್ರರಾದರು.

'ಪ್ರಾರ್ಥನೆ' ಶಕ್ತಿಯುತ ಆಯುಧ. ಮಾನವನಿಗೆ ಅಸಾಧ್ಯವಾದುದು ದೇವರಿಗೆ ಸಾಧ್ಯ ಎಂಬ ನಂಬಿಕೆಯಿಂದ ಎಲ್ಲವನ್ನು ದೇವರಿಗೆ ಅರ್ಪಿಸಿ ಪ್ರಾರ್ಥಿಸುವ ವಿಶಿಷ್ಟ ಭಕ್ತಿ ಇಂದು ಅಗತ್ಯವಿದೆ. ಮನುಷ್ಯ ಕೇವಲ ತನಗಾಗಿ ತನ್ನ ಕುಟುಂಬದವರಿಗಾಗಿ ಪ್ರಾರ್ಥಿಸಿದರೆ ಸಾಲದು ಬದಲಾಗಿ ರಾಷ್ಟ್ರವನ್ನು ಆಳುವ ಅಧಿಕಾರಿಗಳಿಗಾಗಿ, ರಾಷ್ಟ್ರಕ್ಕಾಗಿಯೂ ಪ್ರಾರ್ಥಿಸಬೇಕು (ಕನ್ನಡ ಗೀತೆಗಳು, ಗೀತೆ ೩೭೯). ರಾಷ್ಟ್ರದಲ್ಲಿ ಉತ್ತಮ ಆಡಳಿತ ಹಾಗೂ ಜನತೆ ಶಾಂತಿ, ಪ್ರೀತಿ, ಐಕ್ಯದಿಂದ ಬಾಳಲು ಬೇಕಾದ ಕೃಪೆಯನ್ನು ದೇವರಿಂದ ಪಡೆಯಬೇಕು. ರಾಷ್ಟ್ರವು ಕ್ಷಾಮ, ವ್ಯಾಧಿ, ಯುದ್ಧ, ಮೊದಲಾದವುಗಳಿಂದ ದೂರವಾಗಿ ಜನತೆ, ಸುಭೀಕ್ಷೆಯಲ್ಲಿ ಬಾಳಬೇಕು ಎಂದು ಆಶಿಸುವ ಜನತೆಯಲ್ಲಿ ಪ್ರಾರ್ಥನಾ ಮನೋಭಾವ ಬೆಳೆಸುವ ಗೀತೆಗಳನ್ನು ಕಾಣುತ್ತೇವೆ. ಈ ಗೀತೆಗಳು ದೇಶ ಭಕ್ತಿ ಮೂಡಿಸುವಲ್ಲಿ ಯಶಸ್ವಿಯಾಗಿದೆ.

೬.೩ ಧರ್ಮವನ್ನು ನೋಡಿರುವ ಬಗೆ

'ಭೂಮಿಯಲ್ಲಿ ಬಿದ್ದ ಬೀಜವು ತಾ ಸತ್ತು ಏಳ್ವುದು'. ಈ ರೀತಿ ನೋಡು, ಈ ಮೃತ ದೇಹಕುಂಟು ಉತ್ಥಾನವು (ಕನ್ನಡ ಸಂಗೀತಗಳು, ೧೯೬೬, ಗೀತೆ ೩೨೨). ಮನುಷ್ಯನ ಬದುಕು ಇಹ ಲೋಕಕ್ಕೆ ಮಾತ್ರ ಸೀಮಿತವಾಗಿರದೆ ಈ ಬದುಕು ಮರಣದ ನಂತರವು ಮುಂದುವರೆಯುತ್ತದೆ ಎಂಬ ಅಂಶದತ್ತ ನಮ್ಮ ಗಮನ

ಸೆಳೆದಿದೆ. ನಮ್ಮ ಮುಂದಿನ ಜೀವನ ಇಹದಲ್ಲಿ ನಾವು ಮಾಡಿದ ಸತ್ಕಾರ್ಯಗಳಿಗೆ ಅನುಗುಣವಾಗಿ ನಿರ್ಧರಿತವಾಗುತ್ತದೆ. ನಮ್ಮ ಜೀವವು ಸ್ವರ್ಗಾನಂದವನ್ನು ಅನುಭವಿಸಬೇಕಾದರೆ ಇಹದ ಬಾಳು ದೇವ ಸಂಕಲ್ಪಕ್ಕೆ ಮಣಿದು ನಡೆಸಿದ ಜೀವವಾಗಿರಬೇಕೆಂದು ಬೋಧಿಸುತ್ತದೆ.

ಪಾಪ ವಿಮೋಚನೆಯತ್ತ ಗಮನ ಸೆಳೆದಿದೆ ಗೀತೆ ೨೪೪ (ಕನ್ನಡ ಸಂಗೀತಗಳು, ೧೯೬೬). ಮಾನವ ತಾನು ಹೇಗೆ ಬಾಳಬೇಕು ಎಂಬುದು ಧರ್ಮಗ್ರಂಥ ಬೋಧಿಸುತ್ತದೆ. ಒಳ್ಳೆಯ ಜೀವನ ನಡೆಸಲು ಮಾರ್ಗವನ್ನು ಅದು ಬೋಧಿಸುತ್ತದೆ. ಬಲಹೀನನಾದ ಮಾನವ ತಪ್ಪು ಮಾಡುವುದು ದುಮಾರ್ಗದೆಡೆಗೆ ಸಂಚರಿಸುವುದು ಸಹಜ. ಇಂತಹ ವೇಳೆಯಲ್ಲಿ ತನ್ನ ಬದುಕಿಗೆ ಮುಕ್ತಿ ಇದೆ ಎಂದು ದೇವರು ತನ್ನನ್ನು ಕ್ಷಮಿಸುತ್ತಾನೆಂದು ಬೋಧಿಸುತ್ತದೆ ಗೀತೆ. ದೇವರ ಕ್ಷಮಾಗುಣ ಮನುಷ್ಯನು ಮತ್ತೊಮ್ಮೆ ಆತನ ಪ್ರೀತಿ ಕರುಣೆಯನ್ನು ಅನುಭವಿಸಲು ಸಾಧ್ಯವಿದೆ ಎಂಬ ಸತ್ಯಾಂಶದತ್ತ ಬೆಳಕು ಚೆಲ್ಲಿದೆ.

ದೇವರು ಕುರಣಾಮಯನು ಎಂದು ಸಾರುತ್ತದೆ ಗೀತೆ ೨೧೮ (ಕನ್ನಡ ಸಂಗೀತಗಳು, ೧೯೬೬). 'ಭೂಮ್ಯಾಕಾಶ ಹಾಳಾದಾಗ್ಯೂ ತಳ್ಳನು' ಎಂದು ಗೀತಗಾರ ದೇವರ ಕರುಣಾರ್ಗ ಪ್ರೀತಿಯನ್ನು ಎತ್ತಿಹಿಡಿದಿದ್ದಾನೆ. ಕಷ್ಟ, ನಷ್ಟ, ನೋವು, ಸಂಕಟಗಳಲ್ಲಿ ಸುಖ ನಲಿವಿನಲ್ಲಿ ನಾವು ದೇವರ ಸಾನಿಧ್ಯಕ್ಕೆ ಬಂದಾಗ ಆತ ತನ್ನ ಮಕ್ಕಳನ್ನು ಕರುಣೆಯಿಂದ ಕಂಡು ಆತನ ಯಾವುದೇ ಜೀವನ ಸ್ಥಿತಿಯಲ್ಲಿ ಆತನನ್ನು ಕಾಪಾಡುತ್ತಾನೆ. ದೇವರನ್ನು ನಂಬಿ ಸಕಲವನ್ನು ಸಹಿಸಿಕೊಂಡವರು ಭವ್ಯ ಭವಿಷ್ಯವನ್ನು ಹೊಂದುವರು ಎಂಬ ನಂಬಿಕೆಯನ್ನು ವೃದ್ಧಿಸುತ್ತದೆ ಈ ಗೀತೆ.

'ಯಜ್ಞ' ಎಂಬ ಪದವು ಹೊಸ ಅರ್ಥವನ್ನು ಪಡೆದಿರುವುದನ್ನು ಕಾಣುತ್ತೇವೆ. ಮಾನವ ಸಾಧಾರಣವಾಗಿ ಮಾಡುವ ಬಲಿಯರ್ಪಣೆಗೆ ಬದಲಾಗಿ ಹೊಸ ಅರ್ಥವನ್ನು ಈ ಯಜ್ಞವು ಹೊಂದಿದೆ. 'ಸ್ತುತಿಯ ಯಜ್ಞವ ಅರ್ಪಿಸಿ' (ಗೀತೆ ೨೦೦, ಕನ್ನಡ ಸಂಗೀತಗಳು, ೧೯೬೬) ಎಂದು ಗೀತಗಾರ ಕೇಳಿಕೊಳ್ಳುತ್ತಾನೆ. ನಮ್ಮ ಪ್ರಾರ್ಥನೆಗಳು, ಸ್ತೋತ್ರಗಳು, ಉತ್ತಮ ನಡವಳಿಕೆ ದೇವರಿಗೆ ಯಜ್ಞವಾಗಿ ಅರ್ಪಿತವಾಗಬೇಕು. ದುಃಸ್ವಭಾವಗಳು ಅಶ್ಲೀಲ ಚಿಂತನೆಗಳು ಮನದಲ್ಲಿ ಮೂಡಿ ಬರುವಾಗ ಅವುಗಳಿಂದ ದೂರ ಸರಿದು ಅವುಗಳನ್ನು ಬದುಕಿನಲ್ಲಿ ನಾಶಗೊಳಿಸಿ ಸದ್‌ಚಾರಿತ್ರ್ಯದಲ್ಲಿ ಬೆಳೆದಾಗ ಅದು ದೇವರಿಗೆ ಇಷ್ಟವಾದ ಯಜ್ಞವಾಗಲು ಸಾಧ್ಯವಿದೆ. ವಸ್ತುಗಳಾಗಲಿ, ಪ್ರಾಣಿಗಳಾಗಲಿ ದೇವರಿಗೆ ಅರ್ಪಿತವಾಗುವುದಕ್ಕಿಂತ ಮಾನವನ ಸನ್ನಡತೆಯೇ ದೇವರಿಗೆ ಅತಿ ಪ್ರಿಯವಾದ ಯಜ್ಞವೆಂದು ಗೀತಗಾರ ತಿಳಿಸುತ್ತಾನೆ. ಮಿಕಾನ ಗ್ರಂಥ ಇದನ್ನು ಸ್ಪಷ್ಟಪಡಿಸುತ್ತದೆ. 'ನ್ಯಾಯ ನೀತಿಯ ನಡವಳಿಕೆ ಕರುಣೆಯಲ್ಲಿ ಅಚಲ ಆಸಕ್ತಿ ದೇವರ ಮುಂದೆ ನಂಬ್ರತೆ ಇಷ್ಟನ್ನೇ ಆ ಸ್ವಾಮಿ ನಿನ್ನಿಂದ ಅಪೇಕ್ಷಿಸುವುದು (ಮಿಕಾ ೬-೮).

'ದೇವರ ರಾಜ್ಯ', 'ದೇವರ ಸಾಮ್ರಾಜ್ಯ' ಎಂಬ ಪದ ಪದೇಪದೇ ಗೀತೆಗಳಲ್ಲಿ ಉಲ್ಲೇಖವಾಗಿದೆ. ಈ ಪದ ದೇವರ ಆಳ್ವಿಕೆ, ದೇವರ ರಾಜ್ಯ ಭಾರ, ದೇವರ ಪ್ರಭುತ್ವ, ದೇವರ ಶ್ರೇಷ್ಠಾಧಿಕಾರ, ಎಂಬೆಲ್ಲಾ ಅರ್ಥ ಪಡೆದಿದೆ. ಮೇಲು-ಕೀಳು, ಸಿರಿವಂತ-ಬಡವ, ಪಾಪಿಷ್ಟ-ಪುಣ್ಯವಂತ, ಸ್ತ್ರೀ-ಪುರುಷರೆಂಬ ಬೇಧಭಾವವಿಲ್ಲದೆ

ಶುಭಸಂದೇಶವನ್ನು ಸ್ವೀಕರಿಸಿ, ರಕ್ಷಣೆಯನ್ನು ಪಡೆದು, ದೈವೀ ಸಾಮ್ರಾಜ್ಯದ ಮೌಲ್ಯಗಳನ್ನು ಆಧರಿಸಿ 'ನವ ಸಮಾಜ' ನಿರ್ಮಾಣಗೊಳ್ಳುವುದೇ ದೇವರ ಸಾಮ್ರಾಜ್ಯ. ತಾರತಮ್ಯದ ಬೀಡಾಗಿರುವ ಇಂದಿನ ಸಮಾಜದಲ್ಲಿ 'ದೇವರಾಜ್ಯದ' ಸ್ಥಾಪನೆಯ ಕುರಿತು ಆಳವಾಗಿ ಚಿಂತಿಸಿ ಅಗತ್ಯ ಕ್ರಮ ಕೈಗೊಳ್ಳಬೇಕಾದುದು ಇಂದು ಅನಿವಾರ್ಯ.

೬.೪ ಜನಸಾಮಾನ್ಯರ ರೂಪದಲ್ಲಿ ದೇವರು

ದೇವರನ್ನು ತಿಳಿದುಕೊಳ್ಳುವ, ಅರ್ಥೈಸಿಕೊಳ್ಳುವ ಆತನ ವ್ಯಕ್ತಿತ್ವವನ್ನು ಅರಿಯುವ ಬಗೆ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿದೆ. ದೇವರು ಶಿಕ್ಷಿಸುವ, ಆಪತ್ತನ್ನೊದಗಿಸುವ ಕಲ್ಪನೆ ಕೆಲವರಲ್ಲಿ ಇರಬಹುದು, ಸ್ವರ್ಗದಲ್ಲಿಯೇ ಇದ್ದು ಭೂಮಿಯನ್ನಾಳುವ ನಾಯಕನೂ ಎಂಬ ಕಲ್ಪನೆಯೂ ಕೆಲವರಲ್ಲಿರಬಹುದು. ಆದರೆ ಕ್ರೈಸ್ತ ಗೀತೆಗಳು ದೇವರ ವ್ಯಕ್ತಿತ್ವವನ್ನು ಚಿತ್ರಿಸಿರುವ ಬಗೆ ವಿಶಿಷ್ಟವಾಗಿದೆ.

ಕುರುಬ: ಕುರಿ ಮಂದೆಯನ್ನು ಮುನ್ನಡೆಸುವ, ಪಾಲಿಸಿ ಪೋಷಿಸುವ ಕುರುಬನ ಜೀವನ ಕ್ರಮ ನಮ್ಮ ಸಮಾಜದಲ್ಲಿ ನಿತ್ಯದ ಅನುಭವ. ಕುರಿ ಮಂದೆಯಲ್ಲಿ ಒಂದು ತಪ್ಪಿಸಿಕೊಂಡು ಹೋದಾಗ ಕುರುಬ ಉಳಿದೆಲ್ಲಾ ಕುರಿಗಳನ್ನು ಒಂದೆಡೆ ಬಿಟ್ಟು ತಪ್ಪಿಸಿಕೊಂಡಿದ್ದಕ್ಕಾಗಿ ಪ್ರಯಾಸಪಟ್ಟು ಹುಡುಕಿ ಅದು ದೊರೆತಾಗ ಆತನಲ್ಲಿ ಅಮಿತಾನಂದ ಉಂಟಾಗುವ ವರ್ಣನೆ ಗೀತೆಗಳಲ್ಲಿವೆ. ಅಂತೆಯೇ ದೇವರು ತನ್ನ ಮಕ್ಕಳನ್ನು ಪಾಲಿಸಿ ಪೋಷಿಸುತ್ತಾನೆ. ಒಂದು ಮಗು ದುರ್ಮಾರ್ಗದಲ್ಲಿ ಸಂಚರಿಸುವಾಗ ಆತ, ಮಗು ತನ್ನೆಡೆ ಬರುವವರೆಗೂ ಆ ಮಗುವಿಗಾಗಿ ಅಲೆಯುತ್ತಾನೆ. ಆ ಮಗು ಸನ್ಮಾರ್ಗದಲ್ಲಿ ನಡೆಯತೊಡಗಿದಾಗ ಪರಲೋಕವೇ ಹರ್ಷಿಸುತ್ತದೆ ಎಂಬ ಭಾವ ಅರ್ಥ ಪೂರ್ಣವಾಗಿ ವ್ಯಕ್ತವಾಗಿದೆ ಗೀತೆಗಳಲ್ಲಿ.

ಮಿತ್ರ: 'ಗೆಳೆಯರಿಗಾಗಿ ತನ್ನ ಪ್ರಾಣವನ್ನೇ ಧಾರೆಯೆರೆಯುವ ಪ್ರೀತಿಗಿಂತ ಮಿಗಿಲಾದ ಪ್ರೀತಿ ಯಾವುದು ಇಲ್ಲ', 'ನಾನು ಆಜ್ಞಾಪಿಸಿದಂತೆ ನಡೆದರೆ ನೀವು ನನ್ನ ಗೆಳೆಯರು, ನಾನಿನ್ನು ನಿಮ್ಮನ್ನು ದಾಸರೆಂದು ಕರೆಯುವುದಿಲ್ಲ' ಎಂಬ ನುಡಿಯನ್ನು ಪ್ರತಿಬಿಂಬಿಸುತ್ತವೆ ಅನೇಕ ಗೀತೆಗಳು. ದೇವ ಮಾನವನ ಸಂಬಂಧ ಮಿತ್ರತ್ವಕ್ಕೆ ಹೋಲಿಸಿ ವರ್ಣಿಸಿರುವುದು ಅತಿ ಮುಖ್ಯವಾಗಿದೆ. ಕಷ್ಟ ಸಂಕಟಗಳಲ್ಲಿ, ಸುಖ ದುಃಖಗಳಲ್ಲಿ ಮಿತ್ರನು ಸಹಾಯಕ್ಕೆ ಬರುವ ಹಾಗೆ ದೇವರು ಮಾನವನ ಪ್ರತಿಯೊಂದು ಸ್ಥಿತಿಯಲ್ಲಿಯೂ ಸ್ಪಂದಿಸುವವನಾಗಿದ್ದಾನೆ. ನಮ್ಮ ಆಸೆ ಆಕಾಂಕ್ಷೆಗಳನ್ನು ಈಡೇರಿಸುವವನಾಗಿದ್ದಾನೆ. ಯೇಸುವಿನ ಮಿತ್ರತ್ವವನ್ನು ವರ್ಣಿಸುವ ಗೀತೆ 'ಯೇಸು ನಮಗೆಂಥ ಮಿತ್ರ!' (ಕನ್ನಡ ಗೀತೆಗಳು, ೧೯೬೬, ಗೀತೆ ೧೩೮) ಎಂಬುದು ಯೇಸುವಿನ ವ್ಯಕ್ತಿತ್ವದ ಒಂದು ಮುಖವನ್ನು ವರ್ಣಿಸುವಲ್ಲಿ ಯಶಸ್ವಿಯಾಗಿದೆ.

ವೈದ್ಯ: ಯೇಸು ದೈಹಿಕವಾದ ಪಾಲನೆ ಪೋಷಣೆಯನ್ನು ಒದಗಿಸುವುದರೊಂದಿಗೆ ಮನುಷ್ಯನ ರೋಗ ರುಜಿನಗಳನ್ನು ವಾಸಿಮಾಡುವವನಾಗಿದ್ದಾನೆ. ದೈಹಿಕವಾದ, ಮಾನಸಿಕವಾದ, ರೋಗಗಳಿಂದ ಬಿಡುಗಡೆ ದೇವ ನಾಮ ಜಪದಲ್ಲಿ ಇದೆ ಎಂದು ಗೀತಗಾರ ಗೀತೆ ೧೪೯ರಲ್ಲಿ ಹೇಳಿದ್ದಾರೆ (ಕನ್ನಡ ಸಂಗೀತಗಳು, ೧೯೬೬).

ಪಾಲಕ: ಹದ್ದು ತನ್ನ ಮರಿಗಳ ಮೇಲೆ ರೆಕ್ಕೆಯನ್ನು ಹೊದೆಯುವ ಹಾಗೆಯೇ ದೇವರ ಪಾಲನಾ ಹಸ್ತವು

ನಮ್ಮನ್ನು ಆವರಿಸಿ ತಾಯ ಗರ್ಭದಿಂದ ಅಂತ್ಯದವರೆಗೂ ಕಾಪಾಡುವ ದೇವರಾಗಿದ್ದಾರೆ. ಆತನ ಪ್ರೀತಿಯು ಅನಂತವಾಗಿದೆ ಎನ್ನುತ್ತಾನೆ ಗೀತಗಾರ ಗೀತೆ ೩೯೯ರಲ್ಲಿ (ಕನ್ನಡ ಗೀತೆಗಳು, ೧೯೬೭).

ತಂದೆ-ತಾಯಿ: ಆದರ್ಶ ತಂದೆಯು ತನ್ನ ಮಗನನ್ನು ತಳ್ಳಿಬಿಡುವುದಿಲ್ಲ. ಮಗುವಲ್ಲಿ ತಪ್ಪನ್ನು ಕಂಡು ಶಿಕ್ಷಿಸಿ ಕ್ಷಮಿಸಿ ಒಳ್ಳೆಯ ದಾರಿಗೆ ನಡೆಸುತ್ತಾನೆ. (ಗೀತೆ ೩೯೯, ಕನ್ನಡ ಗೀತೆಗಳು) ತಾಯಿಯು ಮಗುವನ್ನು ನಿತ್ಯವು ಪ್ರೀತಿಸುವವಳಾಗಿದ್ದಾಳೆ. ಆಕೆಯ ಪ್ರೀತಿ ಮಗುವಿಗೆ ಮಿತಿ ಇಲ್ಲದ್ದು (ಕನ್ನಡ ಗೀತೆಗಳು, ಗೀತೆ ೩೫೨) 'ಹೆತ್ತ ತಾಯಿ ನಿನ್ನನ್ನು ಮರೆತರೂ ನಾ ನಿನ್ನ ಮರೆಯಲಾರೆ ಎಂಬ ಆಶ್ವಾಸನೆಯ ನುಡಿಯೇ ದೇವರದು.

ದೇವರನ್ನು ಒಬ್ಬ ಸಾಮಾನ್ಯ ಮನುಷ್ಯನು ಅರ್ಥೈಸಿಕೊಳ್ಳಲು ಸಾಧ್ಯವಾಗುವಂತೆ ಮಿಶನರಿಗಳು ದೇವರ ಸ್ವರೂಪವನ್ನು ನಮ್ಮ ದಿನನಿತ್ಯದ ಅನುಭವಕ್ಕೆ ಬರುವ ಉದಾಹರಣೆಗಳನ್ನು ತೆಗೆದುಕೊಂಡು ವರ್ಣಿಸಿದ್ದಾರೆ. ಇದರಿಂದ ದೇವರೊಂದಿಗೆ ಉತ್ತಮ ಸಂಬಂಧವನ್ನು ಬೆಳೆಸಿಕೊಳ್ಳಲು ಸಾಧ್ಯವಾಗಿದೆ. ದೇವರ ಬಗೆಗಿರುವ ನಮ್ಮ ಕಲ್ಪನೆ ಸಂಪೂರ್ಣವಾಗಿ ಬದಲಾಗಿ ದೇವರು ನಮ್ಮೊಡನೆ ಸದಾ ಇರುವ, ನಮ್ಮನ್ನು ಕಾಪಾಡುವ, ಪ್ರೀತಿಸುವ, ವ್ಯಕ್ತಿಯನ್ನಾಗಿ ಕಾಣುವ ದೃಷ್ಟಿಕೋನವನ್ನು ನಮ್ಮಲ್ಲಿ ಬೆಳೆಸಿದ್ದಾರೆ ಈ ಸಂಗೀತಗಾರರು.

ಗೀತೆಗಳ ಅವಲೋಕನ ನಡೆದಂತೆ ಸ್ವಲ್ಪ ಮಟ್ಟಿಗೆ ಯೇಸುವಿನ ನಡತೆ ಮತ್ತು ಮನೋಭಾವನೆಯು ತಿಳಿದು ಬರುತ್ತದೆ. ಅವರು ಬಳಿಸಿರುವ ಸಾಮಿತಿ, ಉಪಮೆ ಬೋಧನೆಗಳಲ್ಲಿ ಇವು ಪ್ರಕಟವಾಗಿದೆ. ಕ್ಲಿಷ್ಟ ಹಾಗೂ ಗಹನವಾದ ಸತ್ಯಗಳನ್ನು ಜನಸಾಮಾನ್ಯರು ಸುಲಭವಾಗಿ ಗ್ರಹಿಸಿಕೊಳ್ಳಬೇಕೆಂಬ ಉದ್ದೇಶದಿಂದಲೇ ಇವುಗಳನ್ನು ಯೇಸು ಬಳಸಿದರು. ಯೇಸುವು ಎರಡು ಮಹತ್ವಪೂರ್ಣ ಪ್ರಬೋಧನೆಗಳನ್ನು ಬೋಧಿಸಿದ್ದು ಗೀತೆಗಳಿಂದ ತಿಳಿದು ಬರುತ್ತದೆ. ಮೊದಲನೆಯ ಪರ್ವತದ ಮೇಲಿನ ಬೋಧನೆ (ಕನ್ನಡ ಪಂಚಾಂಗ ೧೯೧೫) ಎರಡನೆಯ ಮಹಾ ಪ್ರಬೋಧನೆಯನ್ನು ಕಲ್ವಾರಿ ಬೆಟ್ಟದಲ್ಲಿ ಶಿಲುಬೆಯ ಮೇಲೆ ತೂಗಾಡುತ್ತ ಮೌನವಾಗಿ ಬೋಧಿಸಿದರು (ಗೀತೆ ೬೭, ಕನ್ನಡ ಗೀತೆಗಳು) ಈ ಎರಡೂ ಪ್ರಬೋಧನೆಗಳ ಸಾರಾಂಶವಿಷ್ಟೆ 'ನಾನು ನಿಮ್ಮನ್ನು ಪ್ರೀತಿಸಿರುವಂತೆಯೇ ನೀವೂ ಸಹ ಒಬ್ಬರನ್ನೊಬ್ಬರು ಪ್ರೀತಿಸಿರಿ (ಯೋಹಾನ್ನ ೧೪:೩೪).

ಬಾಳಿನ ಪ್ರತಿಯೊಂದು ಸನ್ನಿವೇಶಕ್ಕೂ ಸ್ಪಂದಿಸುವ ಗೀತೆಗಳಿಗೆ ಉತ್ತಮ ಉದಾಹರಣೆಗೆ ಬಾಲಕರ ಗೀತೆಗಳು ಗೀತೆ ೫೬ರಲ್ಲಿ ಅರ್ಥ ಪೂರ್ಣವಾಗಿ ರಚಿತವಾಗಿವೆ. ಬಾಳು ಕಷ್ಟ ಸಂಕಷ್ಟಗಳ ಸರಮಾಲೆಯಾಗಿದೆ. ಆದರೆ ಉದ್ಧಾರವಾಗಬೇಕೆಂಬ ಭಾವನೆ ಅಂತರಾಳದಲ್ಲಿ ತುಡಿಯುತ್ತಿರುತ್ತದೆ. ಆದ್ದರಿಂದ ಜೀವನಾಂತ್ಯದವರೆಗೂ ತನ್ನನ್ನು ಉದ್ದಾರದ ಮಾರ್ಗದಲ್ಲಿ ನಡೆಸು ಎಂದು ಬೇಡುವ ಬಗೆ ಪ್ರತಿಯೊಬ್ಬರಿಗೂ ಸ್ಫೂರ್ತಿನೀಡುವಂತದ್ದಾಗಿದೆ. ಕ್ರೈಸ್ತ ಗೀತೆಗಳು ತಮ್ಮ ಒಡಲಲ್ಲಿ ಹೊಂದಿರುವ ಸಂದೇಶ ಮಾನವನನ್ನು ನೈತಿಕವಾಗಿ, ಸಾಮಾಜಿಕವಾಗಿ, ಜವಾಬ್ದಾರಿಯುತ ವ್ಯಕ್ತಿಯನ್ನಾಗಿ ರೂಪಿಸಿ ಆದರ್ಶ ಬಾಳನ್ನು ನಡೆಸಿ ತಾನು ಇಹದಲ್ಲಿ ಬೆಳಗಿ ಮುಂದಿನ ಜನಾಂಗವನ್ನು ಬೆಳಕಿನೆಡೆಗೆ ನಡೆಸಲು ಸಾಧ್ಯವಾಗುತ್ತದೆ ಎಂಬ ಸತ್ಯ ಸಂಗತಿ ಅಧ್ಯಯನದಿಂದ ವಿಧಿತವಾಗುತ್ತದೆ.

ಅಧ್ಯಾಯ – ಏಳು

ಅಧ್ಯಯನದ ಫಲಿತಗಳು

ಅಧ್ಯಾಯ – ಏಳು

ಅಧ್ಯಯನದ ಫಲಿತಗಳು

ಕನ್ನಡ ಕ್ರೈಸ್ತ ಗೀತೆಗಳ ಹುಟ್ಟು ಮತ್ತು ಬೆಳವಣಿಗೆಗೆ ಕಾರಣರಾದ ಪಾಶ್ಚಾತ್ಯ ವಿದ್ವಾಂಸರ ಅದ್ವಿತೀಯ ಕೊಡುಗೆಯನ್ನು ಇದುವರೆಗಿನ ವಿವೇಚನೆ ತೋರಿಸಿಕೊಟ್ಟಿದೆ. ಈ ವಿವೇಚನೆಯಲ್ಲಿ ಕ್ರೈಸ್ತ ಗೀತೆಗಳ ವಸ್ತು ವಿಷಯಗಳು ಹಾಗೂ ಅವುಗಳ ವೈಶಿಷ್ಟವನ್ನು ಸ್ಫುಟಗೊಳಿಸಲು ಪ್ರಯತ್ನಿಸಲಾಯಿತು. ಈ ಪ್ರಯತ್ನಗಳ ಫಲಿತಗಳನ್ನು ಸಂಗ್ರಹವಾಗಿ ಹೀಗೆ ಕ್ರೂಢೀಕರಿಸಬಹುದು.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹಬ್ಬಿ ಹರಡಿದ್ದ ಕ್ರೈಸ್ತ ಧರ್ಮ ಕರ್ನಾಟಕದಲ್ಲಿ ಆಗಮಿಸಿದಾಗ ಮೇಧಾವಿಗಳಾದ ಕ್ರೈಸ್ತ ಮಿಶನರಿಗಳು ಕ್ರೈಸ್ತ ಗೀತೆಗಳ ರಚನೆಯಲ್ಲಿ ತೊಡಗಿ ಅನುಪಮ ಕಾರ್ಯ ಮಾಡಿದರು.

ಕ್ರೈಸ್ತ ಗೀತೆಗಳ ಅನುವಾದ ಕಥೋಲಿಕ ಹಾಗೂ ಪ್ರೊಟೆಸ್ಟೆಂಟ್ ಮಿಶನರಿಗಳಿಂದ ನಡೆದಿದೆ. ಕಥೋಲಿಕ ಮಿಶನರಿಗಳು ಲ್ಯಾಟಿನ್ ಮತ್ತು ಫ್ರೆಂಚ್ ಭಾಷೆಗಳಿಂದ ಗೀತೆಗಳನ್ನು ಭಾಷಾಂತರಿಸಿದರೆ ಪ್ರೊಟೆಸ್ಟೆಂಟ್ ಮಿಶನರಿಗಳು ಜರ್ಮನ್ ಮತ್ತು ಇಂಗ್ಲೀಷ್ ಭಾಷೆಯಿಂದ ಗೀತೆಗಳನ್ನು ಅನುವಾದಿಸಿದರು. ಪ್ರಾರಂಭದಲ್ಲಿ ಅನುವಾದ ಗೀತೆಗಳೇ ಹೆಚ್ಚಾಗಿದ್ದು ತದನಂತರದಲ್ಲಿ ದೇಶಿಯತೆಗೆ ಮಾರುಹೋಗಿ ದೇಶಿ ಛಂದಸ್ಸಿನಲ್ಲಿ ಗೀತೆಗಳು ರಚನೆಯಾದವು. ಈ ನಿಟ್ಟಿನಲ್ಲಿ ಇವರ ಕಾವ್ಯ ಪ್ರತಿಭೆ ಶ್ಲಾಘನೀಯವಾಗಿದೆ. ಕ್ರೈಸ್ತ ಗೀತೆಗಳನ್ನು ಕಥೋಲಿಕ ಮಿಶನರಿಗಳು, ಪ್ರೊಟೆಸ್ಟೆಂಟ್ ಮಿಶನರಿಗಳಾದ ಲಂಡನ್, ವೆಸ್ಲಿಯನ್ ಮತ್ತು ಬಾಸೆಲ್ ಮಿಶನರಿಗಳಿಂದ ರಚಿತವಾದವು.

ಗೀತೆಗಳ ಅಧ್ಯಯನ ೧೮ನೇ ಶತಮಾನದ ಅಂತ್ಯಭಾಗದಿಂದ ೧೯ನೇ ಶತಮಾನದ ಅರ್ಧ ಭಾಗದವರೆಗೆ ರಚಿತವಾದ ಗೀತೆಗಳಾಗಿದ್ದು ಇದರಲ್ಲಿ ೧೮೪೧ರಲ್ಲಿ ರಚಿತವಾದ ಗೀತಪುಸ್ತಕ ಪ್ರಥಮ ಗೀತಪುಸ್ತಕ. ಈ ಕೃತಿಯಲ್ಲಿನ ಬರವಣಿಗೆ ಕಲ್ಲಚ್ಚು ಮುದ್ರಣದಲ್ಲಿ ನಡೆದಿರುವುದು ಮುದ್ರಣ ವ್ಯವಸ್ಥೆಯ ಉಗಮದತ್ತ ಗಮನ ಹರಿಸಿದೆ.

ಮಿಶನರಿ ಗೀತ ಸಾಹಿತ್ಯವು ಮತವನ್ನು ಪ್ರಚಾರ ಮಾಡುವ ಉದ್ದೇಶವನ್ನೇ ಪ್ರಧಾನವಾಗಿಟ್ಟ ಸಾಹಿತ್ಯವೆಂಬ ಜನಜನಿತ ಕಲ್ಪನೆ ಇದೆ. ಆದರೆ ಈ ಗೀತ ಸಾಹಿತ್ಯ ಇಂಥದ್ದಲ್ಲ. ಈ ಗೀತೆಗಳನ್ನು ಮತ ಪ್ರಚಾರಕ್ಕೋಸ್ಕರ ಬರೆದರು ಎನ್ನುವುದಕ್ಕಿಂತ ಹೊಸದಾಗಿ ಅಂಗೀಕರಿಸಿದ ಮತದಲ್ಲಿ ಸ್ವಮತಸ್ಥರನ್ನು ನೆಲೆಗೊಳಿಸುವ ಉದ್ದೇಶದಿಂದ ಮಿಶನರಿಗಳು ಬರೆದರು ಎಂಬುದು ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಏಕೆಂದರೆ ಯೇಸುವಿನ ಜನನ, ಬೋಧನೆ, ಮರಣ ಪುನರುತ್ಥಾನ ಮತ್ತು ಸಂಸ್ಕಾರಗಳಿಗೆ ಸಂಬಂಧಿಸಿದ ಗೀತೆಗಳೇ ಹೆಚ್ಚಾಗಿದ್ದು ಸ್ವ ಮತಸ್ಥರನ್ನು ಧರ್ಮದಲ್ಲಿ ದೃಢೀಕರಿಸುವುದು ಗೀತಗಾರರ ಪ್ರಧಾನ ಕಾಳಜಿಯಾಗಿತ್ತು. ಯಾವುದೇ ಧರ್ಮದ ಗೀತೆಗಳಲ್ಲಿನ ವಿಚಾರಗಳು ವಿಧರ್ಮಿಯರನ್ನು ಉದ್ದೇಶಿಸುವಂಥವು ಎಂದು ತೋರುವ ಭಾಗಗಳು ವಾಸ್ತವವಾಗಿ ಆ ಉದ್ದೇಶವನ್ನು ಪಡೆದಂಥವು ಅಲ್ಲ. ಸ್ವಮತಸ್ಥರನ್ನು ಪೂರ್ವದ ಧಾರ್ಮಿಕ ತಳಹದಿಯ ಮೇಲೆ ಮತ್ತು ಪ್ರಚಲಿತವಿರುವ ಅನ್ಯ ಮತಗಳ ಸಂಪರ್ಕದಿಂದ ಮತ್ತು ಪ್ರಭಾವದಿಂದ ರಕ್ಷಿಸುವ ಉದ್ದೇಶವನ್ನೂ ಪಡೆದಿದೆ. ಅನೇಕ ಗೀತೆಗಳು ಕ್ರಿಸ್ತನ ಹೆಸರನ್ನು ಹೊಂದದೆ ರಚಿತವಾಗಿವೆ. ಇಂತಹ ಗೀತೆಗಳ ಮೂಲ ಉದ್ದೇಶವೆಂದರೆ ಮಾನವನಲ್ಲಿ ಧಾರ್ಮಿಕ ಮನೋಭಾವನೆ ಬೆಳೆಸುವುದಾಗಿದೆ. ಪ್ರಕೃತಿಯ ಕುರಿತಾದ ಗೀತೆಗಳು, ಮಧ್ಯ ಪಾನೀಯರಿಗೆ ರಚಿತವಾದ ಗೀತೆಗಳು, ರಾಷ್ಟ್ರಕ್ಕೆ ಸಂಬಂಧಿಸಿದ ಗೀತೆಗಳು, ಯುಗಾದಿಗೆ ಸಂಬಂಧಿಸಿದ ಗೀತೆಗಳು ವ್ಯಕ್ತಿಗಳಲ್ಲಿ ಆಧ್ಯಾತ್ಮ ಮತ್ತು ಸಾಮಾಜಿಕ ಮೌಲ್ಯವನ್ನು ಬೆಳೆಸುವುದಾಗಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಗೀತೆಗಳ ಬಳಕೆ ಹಾಗೂ ಪತ್ರಿಕೆಗಳಲ್ಲಿ ಗೀತೆಗಳ ಪ್ರಕಟಣೆಯ ಉದ್ದೇಶವೂ ಸಮಾಜದ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಮಾನವೀಯ ಮೌಲ್ಯವನ್ನು ಬೆಳೆಸುವುದಾಗಿತ್ತು.

ಈ ನಿಲುವಿನ ಪರಿಣಾಮವಾಗಿ ಸ್ವಧರ್ಮಿಯರಲ್ಲಿ ಧರ್ಮದ ಬಗ್ಗೆ ಸಂಪೂರ್ಣ ನಂಬಿಕೆಯನ್ನು ಬೆಳೆಸುವ ಹಾಗೂ ಸಮಸ್ತರಲ್ಲಿ ಧಾರ್ಮಿಕ ಭಾವನೆ ಮೂಡಿಸುವ ಸಮಗ್ರವೂ, ವಿವರವೂ, ಖಚಿತವೂ ಆದ ನಿರೂಪಣೆ ಮೂಡಿ ಬಂದಿತು. ಕನ್ನಡ ಗೀತ ಕ್ಷೇತ್ರದಲ್ಲಿ ಇದುವರೆಗೆ ಕ್ರೈಸ್ತ ಗೀತೆಗಳ ಪ್ರಸ್ತಾಪ ಬಂದರೂ ಪೂರ್ಣವಾದ ಅಧ್ಯಯನ ನಡೆದಿರಲಿಲ್ಲ. ಮಿಶನರಿಗಳಿಂದ ರಚಿತವಾದ ಕೃತಿಗಳಲ್ಲಿ ಈಗ ಹೊಸದಾಗಿ ಈ ಧರ್ಮದ ಸಿದ್ಧಾಂತಗಳ ನಿಕೃಷ್ಟವೂ ಪರಿಪೂರ್ಣವು ಆದ ಚಿತ್ರಣ ಕನ್ನಡದಲ್ಲಿ ಮೂಡಿತು. ಇದು ಕನ್ನಡ ಧಾರ್ಮಿಕ ಗೀತ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಪ್ರಾಥಮಿಕ ಹಾಗೂ ಮೂಲಭೂತ ಕೊಡುಗೆ.

ಕ್ರೈಸ್ತ ಧರ್ಮದ ಸಮಗ್ರ ಚಿತ್ರಣವನ್ನು ಗೀತೆಗಳ ಮೂಲಕ ಕೊಡಲು ಯತ್ನಿಸಿದ ಮಿಶನರಿಗಳು ಇಂಥ ಚಿತ್ರಣಕ್ಕೆ ಬೇಕಾದ ಪರಿಭಾಷೆಯನ್ನು ಬಳಸಿದರು. ಕಥೋಲಿಕ ಗೀತೆಗಳಲ್ಲಿ ಕಾಣುವ ಪರಿಭಾಷೆಗಳು

ಪಾಶ್ಚಾತ್ಯ ಭಾಷೆಯಿಂದ ಮತ್ತು ಪ್ರಾಂತೀಯ ಭಾಷೆಯಿಂದ ಬಂದವುಗಳಾಗಿವೆ. ಪ್ರೊಟೆಸ್ಟೆಂಟ್ ಮಿಶನರಿಗಳ ಗೀತೆಗಳಲ್ಲಿ ಪಾರಿಭಾಷಿಕ ಪದಗಳು ಪಾಶ್ಚಾತ್ಯ ಭಾಷೆಯ ಮೂಲ ಪದಗಳಾಗಿವೆ. ಈ ಪದಗಳು ಕನ್ನಡದಲ್ಲಿ ಸ್ವತಂತ್ರವಾಗಿ ಲೌಖಿಕ ಅರ್ಥವನ್ನು ಭಿನ್ನಾರ್ಥದ ಪರಿಭಾಷೆಯನ್ನು ಪಡೆದಿರುವುದನ್ನು ನೋಡಬಹುದು. ಪಾರಿಭಾಷಿಕ ಪದಗಳಾಗಿ ಬಳಕೆಯಾಗುವಾಗ ಸ್ಪಷ್ಟವಾಗಿ ಬೇರೆಯೇ ಅರ್ಥಗಳನ್ನು ಪಡೆದಿರುವುದನ್ನು ಗಮನಿಸುವಾಗ ಕನ್ನಡದಲ್ಲಿ ಮಿಶನರಿಗಳು ಸೃಷ್ಟಿಸಿದ ಪರಿಭಾಷೆ ಇದುವರೆಗೆ ಕನ್ನಡ ಧಾರ್ಮಿಕ ಸಾಹಿತ್ಯ, ಶ್ರೀಮಂತಗೊಳಿಸಿತು ಎಂದು ಹೇಳಬಹುದು. ಹೀಗೆ ಕನ್ನಡ ಧಾರ್ಮಿಕ ಗೀತ ಸಾಹಿತ್ಯ, ಕ್ರೈಸ್ತ ಮಿಶನರಿಗಳು ಕೊಟ್ಟ ಕೊಡುಗೆಯಲ್ಲಿ ಅವರು ಸೃಷ್ಟಿಸಿದ ಧಾರ್ಮಿಕ ಪರಿಭಾಷೆ ಒಂದು ಮುಖ್ಯ ಅಂಶವಾಗುತ್ತದೆ.

ಕ್ರೈಸ್ತ ಗೀತ ಸಾಹಿತ್ಯ ಒಟ್ಟಿನಲ್ಲಿ ಜನಾಭಿಮುಖವಾಗಿದ್ದ ಸಾಹಿತ್ಯವಾಗಿತ್ತು. ಇದರ ವಿಶೇಷತೆ ಎಂದರೆ ವಿದ್ಯಾರ್ಹತೆ ಇಲ್ಲದ ಸಾಮಾನ್ಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿತವಾದುದ್ದಾಗಿದೆ. ಸರಳ ರಚನೆ, ಮುಗ್ಧ ಭಾವನೆ, ಕಾವ್ಯಾತ್ಮಕ ವಲ್ಲದಿದ್ದರೂ ಅರ್ಥ ಪ್ರಧಾನತೆಯನ್ನು ಹೊಂದಿದ ಈ ರಚನೆ ಮಿಶನರಿಗಳಿಗೆ ಸಾಮಾನ್ಯ ವರ್ಗದವರೊಂದಿಗಿದ್ದ ಅನ್ಯೋನ್ಯತೆಯನ್ನು ಸೂಚಿಸುತ್ತದೆ. ಹೀಗೆ ಕ್ರೈಸ್ತ ಸಿದ್ಧಾಂತವನ್ನು ಜನಾಭಿಮುಖವಾದ ರೀತಿಯಲ್ಲಿ ಪ್ರತಿಪಾದಿಸಿದುದು ಕನ್ನಡ ಧಾರ್ಮಿಕ ಗೀತ ಸಾಹಿತ್ಯಕ್ಕೆ ಮಿಶನರಿಗಳು ನೀಡಿದ ಕೊಡುಗೆಯ ಗಮನಾರ್ಹ ಅಂಶವಾಗಿದೆ.

ಕನ್ನಡ ಧಾರ್ಮಿಕ ಗೀತ ಸಾಹಿತ್ಯದಲ್ಲಿ ಇದುವರೆಗೆ ಭಾರತೀಯ ದರ್ಶನ ಪರಂಪರೆಯನ್ನು ಅವಲಂಬಿಸಿದ ವಿಚಾರವಿತ್ತು. ಪಾಶ್ಚಾತ್ಯ ತತ್ವಶಾಸ್ತ್ರ ವಿಚಾರವಿರಲಿಲ್ಲ. ಗೀತೆಗಳಲ್ಲಿ ಪಾಶ್ಚಾತ್ಯ ವಿಚಾರ ಧಾರೆಗಳು ಕಾಣಿಸಿಕೊಂಡವು. ಅನೇಕ ವೇಳೆ ಈ ತತ್ವ ಶಾಸ್ತ್ರದ ಸೂಕ್ಷ್ಮಾತಿ ಸೂಕ್ಷ್ಮವಾದ ವಿವರವನ್ನು ಸಹ ಕನ್ನಡದಲ್ಲಿ ಕನ್ನಡ ಪದಗಳ ಮೂಲಕವೇ ವಿವರಿಸಲಾಗಿದೆ. ಅನ್ಯ ಭಾಷೆಯ ಮತ್ತು ಅನ್ಯ ಸಂಸ್ಕೃತಿಯ ತತ್ವಶಾಸ್ತ್ರವನ್ನು ಕನ್ನಡ ಭಾಷೆಯಲ್ಲಿ ಅಭಿವ್ಯಕ್ತಗೊಳಿಸಿದುದು ಕನ್ನಡ ಧಾರ್ಮಿಕ ಗೀತ ಸಾಹಿತ್ಯಕ್ಕೆ ಮಿಶನರಿಗಳು ಕೊಟ್ಟ ಕೊಡುಗೆಯ ಇನ್ನೊಂದು ಅಂಶ. ಇದರ ಮೂಲಕ ಇದುವರೆಗೆ ಭಾರತೀಯ ದರ್ಶನಗಳನ್ನೇ ಪರಿವಹಿಸುತ್ತಿದ್ದ ಕನ್ನಡ ಧಾರ್ಮಿಕ ಸಾಹಿತ್ಯ ಸಾರ್ವತ್ರಿಕತೆಯನ್ನು ಪಡೆಯಿತು.

ಲಿಟನಿ ಎಂಬ ಗೀತ ಪ್ರಕಾರ (ಪ್ರಾರ್ಥನಾ ಪ್ರಕಾರ)ವನ್ನು ಹಾಗೂ ರಾಷ್ಟ್ರಕ್ಕಾಗಿ ಪ್ರಾರ್ಥಿಸುವ ಮತ್ತು ಸಂತರುಗಳಲ್ಲಿ ಗೌರವ ಮೂಡಿಸುವ ಕಲಾತ್ಮಕವಾದ ರೂಪಾಂಶಗಳನ್ನು ಕನ್ನಡದಲ್ಲಿ ಅಳವಡಿಸಿದುದು ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಮಿಶನರಿಗಳು ಕೊಟ್ಟ ಕೊಡುಗೆಯ ಇನ್ನೊಂದು ಅಂಶವಾಗಿದೆ.

ಗೀತೆಗಳ ರಚನೆಯಲ್ಲದೆ ಕೀರ್ತನೆಗಳನ್ನು ಕೂಡ ವಿದೇಶಿ ಮಿಶನರಿಗಳು ರಚಿಸಿದ್ದಾರೆ. ದೇಶಿ ಕವಿಗಳಿಂದ ಪ್ರಭಾವಿತರಾದ ಇವರು ದೇಶೀ ಛಂದಸ್ಸಾದ ಷಟ್ಪದಿ, ತ್ರಿಪದಿ, ದ್ವಿಪದಿ, ಆದಿ, ಅಂತ್ಯ ಪ್ರಾಸಗಳನ್ನು ಹೊಂದಿದ ಗೀತೆಗಳನ್ನು ರಚಿಸಿ ದೇಶಿ ಪ್ರೇಮವನ್ನು ವ್ಯಕ್ತಪಡಿಸಿದ್ದಾರೆ. ಪಾಶ್ಚಾತ್ಯರಲ್ಲದೇ ದೇಶಿ ಗೀತರಚನಾಕಾರರು ಕ್ರೈಸ್ತ ಗೀತೆಗಳ ರಚನೆಯಲ್ಲಿ ತೊಡಗಿ ಕ್ರೈಸ್ತ ಗೀತೆಗಳ ವಿಫುಲ ಬೆಳವಣಿಗೆಗೆ ಕಾರಣರಾದರು.

ಪಾಶ್ಚಾತ್ಯ ಮಿಶನರಿಗಳು ಕನ್ನಡ ನಾಡಿಗೆ ಬಂದು ಇಲ್ಲಿಯ ಭಾಷೆ ಕಲಿತು ಇಲ್ಲಿನ ಸಂಸ್ಕೃತಿಯಲ್ಲಿ ಒಂದಾಗಲು ಶ್ರಮಿಸಿದರು. ಸಾಹಸ ಪ್ರವೃತ್ತಿ ಉಳ್ಳವರಾಗಿದ್ದ ಇವರು ಹೋರಾಟದ ಬದುಕನ್ನು ನಡೆಸಲು ಸಂಕಲ್ಪ ಮಾಡಿದರು. ಕನ್ನಡ ನಾಡು ಅವರ ಕಾರ್ಯಕ್ಷೇತ್ರವಾದ್ದರಿಂದ ವೈಭವದ ಜೀವನ ನಡೆಸದೇ ಇಲ್ಲಿಯ ಜನರ ಬದುಕಿನ ಭಾಗವಾಗಿ ಸರಳತೆಯನ್ನು ಮೈಗೂಡಿಸಿಕೊಂಡು ಸೇವಾ ಮುಖವಾದ ಆದರ್ಶವನ್ನು ತೋರಿದರು. ವಯಕ್ತಿಕ ಜೀವನದಲ್ಲಿ ನೋವನ್ನು ಕಂಡರು ತಮ್ಮ ಬದುಕನ್ನು ನಾಡಿನ ಬಹುಮುಖ ಸೇವೆಗಾಗಿ ಅರ್ಪಿಸಿಕೊಂಡವರಾಗಿದ್ದರು.

ಕ್ರೈಸ್ತ ಗೀತೆಗಳ ಮೂಲ ಕರ್ತೃಗಳು ಪಾಶ್ಚಾತ್ಯ ಭಾಷೆಯಲ್ಲಿ ಗೀತೆಗಳನ್ನು ಬರೆಯಲು ಒದಗಿ ಬಂದ ಸಂದರ್ಭಗಳು ಹಾಗೂ ಅವರ ಜೀವನ ಶೈಲಿ ರೋಮಾಂಚನಕಾರಿಯಾಗಿದ್ದು ಆದರ್ಶ ಪ್ರಾಯವಾಗಿದೆ. ದುಃಖ ದುರಂತಗಳು ಬದುಕಿನಲ್ಲಿ ಅಪ್ಪಳಿಸಿ ಬಂದಾಗಲು ಸೃಷ್ಟಿಕರ್ತನ ಪಾಲನೆಯಲ್ಲಿ ಅಪೂರ್ವ ನಂಬಿಕೆಯನ್ನಿಟ್ಟು ಪಯಣಿಸಿದ ಗೀತಗಾರರು ಪ್ರೇರಕ ಶಕ್ತಿಯಾಗಿದ್ದಾರೆ.

ಮಿಶನರಿಗಳು ಬಳಸಿದ ಪದಗಳು ಅಂದಿನ ಕನ್ನಡದ ಪದಗಳಾಗಿದ್ದು ಕಾಲಕ್ರಮೇಣ ಪದಗಳ ಶಿಷ್ಟ ರಚನೆ ಹೇಗಾಯಿತು ಎಂಬುದನ್ನು ಗುರುತಿಸಲಾಗಿದೆ.

ಪ್ರೊಟೆಸ್ಟೆಂಟ್ ಮಿಶನರಿಗಳು ರಚಿಸಿದ ಕ್ರೈಸ್ತ ಗೀತೆಗಳಲ್ಲಿ ಆಧುನಿಕ ಕನ್ನಡದ ಅರುಣೋದಯ ಕಾಲದಲ್ಲಿ ಹುಟ್ಟಿಕೊಂಡ ಭಾವಗೀತೆಗಳಿಗೆ ಹಿನ್ನಲೆಯಾಗಿರುವ ಭಾವಾಂಶ ಮತ್ತು ಗೇಯ ಗುಣಗಳು ಇರುವುದನ್ನು ಕಾಣುತ್ತೇವೆ.

ಯಾತ್ರಿಕನ ಸಂಚಾರ ಹಾಗೂ ಇನ್ನೂ ಅನೇಕ ಗ್ರಂಥಗಳನ್ನು ಪಾಶ್ಚಾತ್ಯ ಭಾಷೆಯಿಂದ ಕನ್ನಡಕ್ಕೆ ಅನುವಾದಿಸುವ ಮೂಲಕ ಕ್ರೈಸ್ತ ಧಾರ್ಮಿಕ ಸಾಹಿತ್ಯ ವಿದೇಶಿ ಭಾಷೆಗಳ ಮೂಲಕ ಕನ್ನಡಕ್ಕೂ ಪ್ರವೇಶಿಸುವಂತೆ ಮಾಡಿದ್ದಾರೆ.

ಸಂಗೀತ ಕ್ಷೇತ್ರಕ್ಕೆ ಅನುಕೂಲವಾಗುವಂತೆ 'ನೋಟು' ಪುಸ್ತಕಗಳನ್ನು ರಚಿಸಿದರು. 'ಒಂದನೇ ನೋಟು ಪುಸ್ತಕ' ಎಂಬ ಕೃತಿಯನ್ನು ಶಾಲೆಗಳಲ್ಲಿ ಬೋಧಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮಾರ್ಗ ಸೂಚಿಯಾಗಿ ಉಪಯೋಗಿಸುತ್ತಿದ್ದರು. ಗಾಯನ ವಿದ್ಯೆಯ ಪ್ರಾಧಾನ್ಯತೆಯನ್ನು ವಿದ್ಯಾರ್ಥಿಗಳಿಗೆ ತಿಳಿಯಪಡಿಸಿದ್ದಾರೆ. ಗಾಯನ ವಿದ್ಯೆಯ ಮೂಲವಿಚಾರವನ್ನು ಬೋಧಕರಿಗೂ ವಿದ್ಯಾರ್ಥಿಗಳಿಗೂ ಒದಗಿಸಿ ಕಲಿಕೆಯನ್ನು ಸರಳ ಮಾಡುವುದರಲ್ಲಿ ಮಿಶನರಿಗಳು ವಹಿಸಿದ ಪಾತ್ರ ಮೆಚ್ಚುವಂತಹದ್ದಾಗಿದೆ.

ಪ್ರತಿ ಸಂಗೀತಗಳಲ್ಲೂ ಬರೆದವರ ಹೃದಯಾಂಳರಾಳದಿಂದ ಹೊರ ಹೊಮ್ಮಿದ ನಂಬಿಕೆಗಳು ಅಡಕವಾಗಿರುವುದನ್ನು ಕಾಣುತ್ತೇವೆ.

ಕ್ರೈಸ್ತ ಗೀತೆಗಳು ಪ್ರಸ್ತುತ ಕ್ರೈಸ್ತ ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಆರಾಧನೆಯಲ್ಲಿ ಮಾತ್ರವಲ್ಲದೇ ಇಡೀ ಜೀವನಕ್ಕೆ ಸಂಬಂಧಿಸಿದ ಅವು ತಮ್ಮ ಪ್ರಭಾವವನ್ನು ಬೀರುತ್ತಾ ಬಂದಿವೆ. ಅದರಲ್ಲಿಯೂ ಕ್ರಿಸ್ತ ಸಿದ್ಧಾಂತವನ್ನು ಅರ್ಥೈಸುವಲ್ಲಿ ಅವುಗಳ ಕೊಡುಗೆ ಅಪಾರ, ಮತ್ತು ನಿಜವಾದ ಕ್ರಿಸ್ತ

ಸಿದ್ಧಾಂತದ ಆಧಾರದಲ್ಲಿ ನೈಜವಾದ ದೈವ ಶಾಸ್ತ್ರೀಯ ನಿಲುವುಗಳನ್ನು ತಳೆಯಲು ಈ ಸಂಗೀತಗಳು ನಮಗೆ ಸಹಾಯಕವಾಗಿದೆ.

ಈ ಗೀತೆಗಳು ಜಟಿಲವಾದ ದೈವ ಶಾಸ್ತ್ರೀಯ ತತ್ವಗಳನ್ನು ಸರಳವಾಗಿ ಹೊರಗೆಡಹುದರಿಂದ ಅಕ್ಷರ ಜ್ಞಾನದಿಂದ ಆರಾಧಕರಿಗೂ ಕ್ಲಿಷ್ಟವಾದ ದೈವಶಾಸ್ತ್ರವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ. ಕ್ರೈಸ್ತ ಗೀತೆಗಳು ಅನೇಕ ವರ್ಷಗಳಿಂದ ಹಾಡಲ್ಪಡುತ್ತ ಬಂದಿರುವುದರಿಂದ ಇದು ಆರಾಧಕರ ಸ್ಮತಿ ಪಟಲದಲ್ಲಿ ಅಚ್ಚಾಗಿದೆ. ಬಾಲ್ಯ ಪ್ರಾಯದಲ್ಲಿಯೇ ಅವುಗಳನ್ನು ಕಂಠಪಾಠವಾಗಿ ಕಲಿಯುವುದರಿಂದ ಎಲ್ಲಾ ವರ್ಗದವರೂ ಅವುಗಳನ್ನು ಅರ್ಥಮಾಡಿಕೊಂಡು ತಮ್ಮ ಕ್ರೈಸ್ತ ಶಾಸ್ತ್ರೀಯ ನಿಲುವುಗಳನ್ನು ಯೇಸುವಿನ ಬಿರುದಾವಳಿಗಳಂಥಹ ಕಷ್ಟಕರವಾದ ದೈವ ಶಾಸ್ತ್ರೀಯ ಪ್ರಸ್ತಾಪಗಳನ್ನು ಕೂಡ ಗೀತೆಗಳು ಎಷ್ಟು ಸರಳವಾಗಿ ಅರ್ಥವಿಸುತ್ತದೆ ಎಂಬುದನ್ನು ನಾವು ಈ ಅಧ್ಯಯನದಲ್ಲಿ ನೋಡಬಹುದಾಗಿದೆ. ಇದು ಇಂದಿಗೂ ಗೀತೆಗಳನ್ನು ಕ್ರೈಸ್ತ ಜೀವನದ ಅವಿಭಾಜ್ಯ ಅಂಗವಾಗಿಸಲು ಕಾರಣವಾಗಿದೆ ಎಂಬುದು ಸರ್ವ ಸಮ್ಮತವಾದ ವಿಷಯ.

ವಾದ್ಯಗಳ ಬಳಕೆಯಲ್ಲಿ ಹಳೆಒಡಂಬಡಿಕೆಯಲ್ಲಿ ಕಂಡು ಬರುವ ನಿದರ್ಶನಗಳನ್ನು ಗುರುತಿಸಲಾಗಿದೆ. 'ಯುಬಾಲ'ನನ್ನು ಕಿನ್ನರಿ ಕೊಳಲನ್ನು ನುಡಿಸುವವರಿಗೆ ಮೂಲ ಪುರುಷನೆಂದು ಹೆಸರಿಸಲಾಗಿದೆ. ಅಂದಿನಿಂದ ಇಂದಿನವರೆಗೆ ಬಳಸುತ್ತಿದ್ದ ವಾದ್ಯಗಳತ್ತ ಅಧ್ಯಯನ ಬೆಳಕು ಚೆಲ್ಲಿದೆ.

ಮಹಿಳಾ ಮಿಶನರಿಗಳೂ ಗೀತ ಸಾಹಿತ್ಯಕ್ಕೆ ತಮ್ಮ ಕೊಡುಗೆಯನ್ನು ಸಲ್ಲಿಸುವುದರ ಜೊತೆಗೆ ಅವರು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ನಡೆಸಿದ ಅಪರಿಮಿತ ಸೇವೆಯಲ್ಲಿ ಅವರ ವರದಿಗಳಲ್ಲಿ ತಿಳಿದುಕೊಳ್ಳಲು ಸಾಧ್ಯವಾಗಿದೆ.

ಈ ಕ್ರೈಸ್ತ ಗೀತೆಗಳು, ಗೀತೆಗಳಿಗೆ ಗೀತೆಯೂ ಅಲ್ಲ, ಗದ್ಯಕ್ಕೆ ಗದ್ಯವೂ ಅಲ್ಲ ನಿರ್ಧಿಷ್ಟ ಛಂದಸ್ಸು ಹೊಂದಿಲ್ಲ, ಗೇಯ ಪ್ರಕಾರಗಳನ್ನು ಹೊಂದಿಲ್ಲ, ಆದರೆ ಅಲ್ಲಲ್ಲಿ ಅರ್ಥವನ್ನು ಹೊಳೆಯಿಸುವ, ಮಿಂಚಿನಂತೆ ಪ್ರವಾಹಿಸುವ, ಬೆಳದಿಂಗಳಂತೆ ತಣ್ಣನೆಯ ದರ್ಶನ ನೀಡುವ ಗುಣ ಇವಕ್ಕಿವೆ ಎಂಬುದು ಅಧ್ಯಯನದಿಂದ ವಿಧಿತವಾಗುತ್ತದೆ.

ಸಾಹಿತ್ಯದ ದೃಷ್ಟಿಯಿಂದ ಉತ್ಕೃಷ್ಟವಲ್ಲ, ಚಿಂತನೆಯ ದೃಷ್ಟಿಯಿಂದ, ಅಳವಡಿಕೆಯ ದೃಷ್ಟಿಯಿಂದ ಮಹತ್ವವಾದವುಗಳು. ಕ್ರೈಸ್ತ ಗೀತೆಗಳು ಧಾರ್ಮಿಕವಾದ ಗೀತೆಗಳಾದರೂ ಕೂಡ ಸೃಜನಾತ್ಮಕ ಕಾವ್ಯ ಗುಣವನ್ನು ದರ್ಶನಾತ್ಮಕವಾದ ಮಹತ್ವದ ವಿಚಾರಗಳನ್ನು ಒಳಗೊಂಡಿದೆ.

ವಿದೇಶಿ ಮಿಶನರಿಗಳ ಕೊಡುಗೆಗಳಲ್ಲಿ ಪತ್ರಿಕೆಯೂ ಒಂದು ಅಮೂಲ್ಯ ಕೊಡುಗೆ, ಕನ್ನಡದಲ್ಲಿ ಮೊಟ್ಟಮೊದಲ ಬಾರಿಗೆ ಪತ್ರಿಕೆಯನ್ನು ಹೊರ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ. ಇಂದೂ ಕರ್ನಾಟಕವು ಜುಲೈ ೧ನ್ನು ಪತ್ರಿಕಾ ದಿನವನ್ನಾಗಿ ಆಚರಿಸುತ್ತಿರುವಲ್ಲಿ ಪತ್ರಿಕೆಯು ಮಾನವ ಕುಲಕ್ಕೆ ಮಾಡುತ್ತಿರುವ ಸತ್ಪ್ರಯೋಜನವನ್ನು ಎತ್ತಿ ತೋರಿಸುತ್ತದೆ.

ಕನ್ನಡ ಕ್ರೈಸ್ತ ಗೀತೆಗಳ ಸಂಪೂರ್ಣ ಅಧ್ಯಯನ ನಡೆಯದಿದ್ದ ಸಂದರ್ಭದಲ್ಲಿ ಈ ಸಂಶೋಧನೆ ನಡೆದಿದೆ. ಈ ಗೀತೆಗಳ ಸಂಗ್ರಹಕ್ಕಾಗಿ ಸಾಕಷ್ಟು ವ್ಯಾಪಕ ಹಾಗೂ ದೀರ್ಘಾವಧಿಯ ಕ್ಷೇತ್ರಕಾರ್ಯ ನಡೆಸಿದ್ದರೂ ಅದು ಪೂರ್ಣವಾಗಿಲ್ಲದಿರುವ ಅರಿವು ಈ ಸಂಶೋಧಕರಿಗಿದೆ. ಇದುವರೆಗೂ ಕ್ರೈಸ್ತ ಗೀತೆಗಳ ಪರಿಪೂರ್ಣ ಅಧ್ಯಯನ ನಡೆಯದೇ ಇರುವುದರಿಂದ ಕೆಲವು ಕೊರತೆಗಳು ಈ ನಿಬಂಧದಲ್ಲಿ ಉಳಿದಿರಲು ಸಾಧ್ಯವಿದೆ. ಈ ಕೊರತೆಯನ್ನು ತುಂಬುವ ಹಾಗೂ ಇಂತಹ ಅಭ್ಯಾಸಕ್ಕೆ ಸಹಕಾರಿಯಾದ ಸಂಶೋಧನೆಯನ್ನು ಉಳಿದ ಸಂಶೋಧಕರು ನಡೆಸಬಹುದಾಗಿದೆ.

ಹೀಗೆ ಪ್ರಸ್ತುತ ಅಧ್ಯಯನವನ್ನು ಒಂದು ಮೆಟ್ಟಿಲುಗಲ್ಲಾಗಿಸಿಕೊಂಡು ಹಲವು ಸಂಶೋಧನೆಗಳನ್ನು ನಡೆಸಲು ಮುಂದಿನ ಸಂಶೋಧಕರಿಗೆ ಅವಕಾಶವಿದೆ. ಈ ಕೆಲಸಗಳು ನಡೆದು ಕನ್ನಡ ಸಾಹಿತ್ಯ ಹಾಗೂ ಸಂಶೋಧನಾ ಕ್ಷೇತ್ರ ಇನ್ನಷ್ಟು ಶ್ರೀಮಂತವಾಗಲೆಂಬ ಹಾರೈಕೆಯೊಡನೆ ಪ್ರಸ್ತುತ ಅಧ್ಯಯನ ಮುಕ್ತಾಯಗೊಳ್ಳುತ್ತದೆ.

ಅನುಬಂಧಗಳು

ಅನುಬಂಧ – ೧	ಅಧ್ಯಯನಕ್ಕೆ ತೆಗೆದುಕೊಂಡ ಗೀತ ಪುಸ್ತಕಗಳ ವಿವರ ಮತ್ತು ಗೀತೆಗಳ ವರ್ಗೀಕರಣ.
ಅನುಬಂಧ – ೨	ಅಧ್ಯಯನಕ್ಕೆ ಆಯ್ದುಕೊಂಡ ಪತ್ರಿಕೆಗಳ ವಿವರ
ಅನುಬಂಧ – ೩	ಪರಾಮರ್ಶನ ಗ್ರಂಥಗಳು

ಅನುಬಂಧ – ೧

ಅಧ್ಯಯನಕ್ಕೆ ತೆಗೆದುಕೊಂಡ ಗೀತ ಪುಸ್ತಕಗಳ ವಿವರ ಮತ್ತು ಗೀತೆಗಳ ವರ್ಗೀಕರಣ:

೧. ಕಥೋಲಿಕ ಸಭೆ

೧. ಜಪದ ಪುಸ್ತಕ (೧೯೩೦): ವಂದನೀಯ ಎಲ್. ಶಾರ್ಬೋರ್ನೊರವರಿಂದ ಪರಿಷ್ಕೃತ ಮತ್ತು ವಿಸ್ತೃತ ಮಾಡಲಾದ ಪ್ರಾರ್ಥನಾ ಪುಸ್ತಕ.

೨. ಕೀರ್ತನೆ ಪುಸ್ತಕ(೧೯೪೯): ತಿಯೋದೊರ್ ಅಂದ್ರೆ ಜೆರ್ಬಿಯರ್ ಎಂಬ ಫ್ರೆಂಚ್ ಮಿಷನರಿ ರಚಿಸಿದರು

೨. ಲಂಡನ್ ಮಿಶನರಿಗಳು

೧. ಕನ್ನಡ ಸಂಗೀತಗಳು(೧೮೯೮): ಬಿ.ರೈಸ್ ಎಂಬ ಲಂಡನ್ ಮಿಶನರಿಯಿಂದ ರಚಿತವಾದ ಈ ಕೃತಿ ಪ್ರಾರಂಭದಲ್ಲಿ ೨೯೩ ಗೀತೆಗಳನ್ನು ಹೊಂದಿದ್ದು ಇಂದು (೧೯೬೬) ೩೮೬ ಗೀತೆಗಳನ್ನು ಹೊಂದಿದೆ. ಈ ಗೀತೆಗಳು ವರ್ಗೀಕರಣ ಇಂತಿದೆ. ೧೯೬೬ರ ಗೀತ ಪುಸ್ತಕ.

ಗೀತೆಗಳ ಮೂಲ ಕರ್ತೃಗಳು		ರಚಿಸಿದ ಒಟ್ಟು ಗೀತೆಗಳು
ಬಿ. ರೈಸ್	B. Rice	೭೬
ಎಸ್. ಎ. ಮಾರ	S. A. Mara	೯೫
ಜೆ. ಪೋಲ್	J. Paul	೩೩
ಎಚ್. ಮೊಗ್ಲಿಂಗ್	H. Moegling	೨೩
ಬಿ. ಲೂತಿ	B. Luthi	೧೨
ಹಳೆಯ ಗೀತ ಪುಸ್ತಕದಿಂದ	SPCK	೦೮
ಸಿ. ಎ. ಸ್ಟೀನ್	C. L. Stean	೧೪
ಸಿ. ಕ್ಯಾಂಪ್‌ಬೆಲ್	C. Campbell	೦೭
ಎ. ಮನ್ನರ್	A. Manner	೦೭
ಎಮ್. ಆನಂದಮೂರ್ತಿ	M. Anandamurthy	೦೭
ಎಚ್. ರಿಸ್ಚ್	H. Risch	೦೮
ಕ್ರಿ. ಎಲ್. ಗ್ರೈನರ್	Ch. L. Greiner	೦೨
ಜೆ. ಬಿ. ಕೋಲ್ಸ್	J. B. Coles	೦೬
ಜೆ. ಮ್ಯಾಕ್	J. Mack	೦೩
ಜಿ. ವೈಗಲ್	G. Weigle	೧೦
ಅನಾಮಧೇಯ	–	೦೧

ಬಿ. ಗ್ರೇಟರ್	B. Graeter	೧೨
ಎಫ್ ಮೆಟ್ಜ	F. metz	೦೪
ಮಿಸಸ್. ಎಫ್ ತ್ಸಿಗ್ಲರ್	Mrs. F Ziegler	೦೧
ಈ. ಪಿ. ಕಾರಟ್	E. P. Karat	೦೨
ಟಿ. ಕೋಸ್ಟ್	T. Costa	೦೨
ಸತ್ಯವರ್ಥ	Satyavartha	೦೧
ಜೆ. ಲೇಯರ್	J. Layer	೦೨
ಜೆ. ಇಸ್ಸಿಂಗ್	J. Essing	೦೧
ಜಿ. ಸಿಲೋಪ್ಪ	G. Siloppa	೦೧
ವಾಲ್ಜ್ ಥಾಮಸ್	Walz Thomas	೦೧
ಎಫ. ತ್ಸಿಗ್ಲರ್	F Ziegler	೦೧
ಬಾಸೆಲ್ ಮೂಲ	Basel Origin	೧೧
ಡಬ್ಲ್ಯು. ಇ. ಟಾಮ್ಲಿನ್‌ಸನ್	W. E. Tomlinson	೦೬
ಬಿ. ಜೆ. ಚಿಂತಾಮಣಿ	B. J. Chintamani	೦೧
ಎಸ್ ಫ್ರುಟಾಡೊ	S Frutado	೦೨
ಒ. ಕಾಫ್‌ಮನ್	O. Kaufmann	೦೧
ಲಂಡನ್ ಗೀತ ಪುಸ್ತಕದಿಂದ	–	೦೧
ಎ. ಸ್ಪ್ರಿಂಗ್	A. Spring	೦೪
ಎಸ್. ರತ್ನಂ	S. Ratnam	೦೪
ಎ. ಗ್ರೇಟರ್	A. Graeter	೦೩
ಜೆ. ಸೊನ್ನಾ	J. Sonna	೦೩
ಮಿಸ್. ಎಲ್. ಎಮ್. ಬುಟ್ಲರ್	Miss. L. M. Butler	೦೨
ಮಿಸ್. ಒ. ಇ. ಹೊನ್‌ಬೈ	Miss. O E Hornby	೦೧
ಡುಂಬರ್‌ಟನ್	Dumbarton	೦೧
ಮೊಗ್ಲಿಂಗ್ ಮತ್ತು ಲೂತಿ	Moegling & Luthi	೦೧
ಎ. ರಿಡ್ಡಟ್	A. Riddet	೦೧
ಎಫ್. ಹರ್ಬರ್ಟ್	F. Harbert	೦೧

ಎಮ್. ಅರೋನ್ಸ್	M. Aarons	೦೨
ಎಫ್. ಮೆಟ್ಜ್ ಮತ್ತು ಲೂತಿ	F. Metz and Luthi	೦೧
ಒಟ್ಟು		೩೮೬

೩. ವೆಸ್ಲಿಯನ್ ಮಿಶನ್

ವೆಸ್ಲಿಯನ್ ಮಿಶನ್‌ಗೆ ಸೇರಿದ ಭಕ್ತಾದಿಗಳು ಲಂಡನ್ ಮಿಶನ್‌ನ ಗೀತ ಪುಸ್ತಕವನ್ನೇ ಬಳಸುತ್ತಿದ್ದಾರೆ.

೪. ಬಾಸೆಲ್ ಮಿಶನ್

೧. ಗೀತೆಗಳು (೧೮೪೧): 'ಗೀತೆಗಳು' ಎಂಬ ಹೆಸರಿನಿಂದ ಪ್ರಾರಂಭಗೊಂಡ ಈ ಗೀತಪುಸ್ತಕ 'ಕ್ರೈಸ್ತ ಗೀತೆಗಳು' ಮತ್ತು 'ಕನ್ನಡ ಗೀತೆಗಳು' ಎಂಬ ಹೆಸರಿನಿಂದ ಕರೆಯಲಾಗಿದೆ. ಪ್ರಾರಂಭದಲ್ಲಿ ೫೦ ಗೀತೆಗಳಿದ್ದು ಇಂದು ೪೧೦ ಗೀತೆಗಳನ್ನು ಹೊಂದಿದೆ. ಈ ಗೀತೆಗಳ ವರ್ಗೀಕರಣ ಇಂತಿದೆ.

ಗೀತೆಗಳ ಮೂಲ ಕರ್ತೃಗಳು		ರಚಿಸಿದ ಒಟ್ಟು ಗೀತೆಗಳು
ಆರೋನ್ಸ್. ಐ	Aarons. I	೦೧
ಆರೋನ್ಸ್. ಎಮ್	Aarons. M	೦೮
ಆರೋನ್ಸ್. ಎಮ್.ಇ	Aarons. M.E	೦೩
ಇಸ್ಸಿಂಗ್ ಜೆ	Essing. J	೦೨
ಕಡಿಕಿ. ಡಿ	Kadiki. D	೦೩
ಕರಾಟ್. ಇ.ಪಿ	Karat E.P	೧೮
ಕಿಟೆಲ್. ಎಫ್	Kittel. F	೦೨
ಕೋಸ್ಟಾ. ಟಿ	Costa. T	೦೩
ಕೋಲ್ಸ್. ಜೆ.ಬಿ	Coles J. B	೦೧
ಕಾಂಡಿನ್ಯ. ಎ	Kaundinya. A	೦೧
ಕಾಫ್‌ಮನ್. ಓ	Kaufmann. O	೦೨
ಕ್ಯಾಂಪ್‌ಬೆಲ್ ಸಿ	Campbell. C	೦೧
ಗ್ರೇಟರ್. ಎ	Graeter. A	೦೯
ಗ್ರೇಟರ್. ಬಿ	Graeter. B	೩೩
ಗ್ರೇಟರ್. ಜಿ	Graeter. G	೦೧
ಗ್ರೈನರ್. ಚಿ. ಎಲ್	Greiner. Ch. L	೦೨
ಜತ್ತನ್ನಾ. ಎಫ್	Jathanna. F	೦೧

ತ್ಸಿಗ್ಲರ್. ಎಫ್	Ziegler. F	೦೨
ಡುಂಬರ್ಟನ್. ಎ	Dumbarton. A	೦೧
ದೇವದತ್ತಾ. ಎಲ್. ಜೆ	Devadatha. L. J	೦೧
ಫರ್ಟಡೊ. ಎಸ್	Furtado. S	೦೧
ಪಾಲ್. ಜೆ	Paul. J	೦೯
ಬೊಮ್ಮರ್. ಇ	Bommer. E	೦೧
ಮನ್ನರ್ ಎ	Manner A	೧೬
ಮಿಸಸ್. ತ್ಸಿಗ್ಲರ್ಎಫ್	Mrs. Ziegler. F	೦೨
ಮುಲ್ಲರಂ. ಜೆ	Muller. J	೦೧
ಮೆಟ್ಜ್. ಎಫ್	Metz. F	೧೧
ಮೊಗ್ಲಿಂಗ್. ಎಚ್	Moegling. H	೧೦೭
ಮ್ಯಾಕ್. ಜೆ	Mack. J	೧೦
ರಿಸ್ಚ್ ಎಚ್	Risch. H	೨೩
ರೈಸ್. ಬಿ	Rice. B	೧೧
ರ್‍ಯೂಥರ್. ಚಿ	Ruther. Chi	೦೧
ಲೂತಿ ಬಿ	Luthi. B	೫೩
ಲೇಯರ್. ಜೆ	Layer. J	೦೬
ವಾಲ್ಜ್ ಥಾಮಸ್	Walz Thomas	೦೫
ವೈಗಲ್. ಜೆ	Weigle. J	೨೪
ಸತ್ಯವ್ರಥ. ಆರ್	Satyaratha. R	೦೨
ಸೊನ್ನಾ. ಜೆ	Sonna. J	೧೦
ಸೋಲ್ಟ್. ಸಿ	Stolz. C	೦೧
ಸ್ಪ್ರಿಂಗ್. ಎ	Spring. A	೦೮
ಹರ್ಬರ್ಟ್. ಎಪ್	Harbert. F	೦೨
ಹೋಚ್. ಎಂ	Hoch. M	೦೧
ಹರ್ಲಿನ್. ಇ	Harlin. E	೦೧
ಮೆಟ್ಜ್ ಎಫ್ ಮತ್ತು ಲೂತಿ ಬಿ	Metz F and Luthi B	೦೨

ರಿಸ್ಚ್ ಎಚ್ ಮತ್ತು ಸತ್ಯವ್ರಥ	Risch H and Sathyavartha	೦೧
ಕಾಂಡಿನ್ಯ ಎ ಮತ್ತು ಸ್ಟೋಲ್ಜ್	Koundinya A and Stolz	೦೧
ಲೂತಿ ಬಿ ಮತ್ತು ಸತ್ಯವ್ರಥ	Luthi B and Sathyavartha	೦೧
ಮೊಗ್ಲಿಂಗ್ ಎಚ್ ಮತ್ತು ಲೂತಿ ಬಿ	Moegling H and Luthi B	೦೨
ಲಂಡನ್ ಮಿಶನರಿ ಗೀತ ಪುಸ್ತಕದಿಂದ	–	೦೧
ಅನಾಮಧೇಯ	–	೦೧
ಒಟ್ಟು		೪೧೦

೨. ಯಾತ್ರಿಕನ ಸಂಚಾರ(೧೮೪೯): ಯೋಹಾನ್ ಬುನ್ಯನ್ (John Bunyan) ರಚಿಸಿದ ಆಂಗ್ಲ ಕೃತಿಯೆ Pilgrims Progress (from this word to that which is to come) ಎಂಬುದನ್ನು ೧೮೪೯ ರಲ್ಲಿ ಮೊಗ್ಲಿಂಗ್ ಮತ್ತು ವೈಗಲ್‌ರವರು ಸೇರಿ 'ಯಾತ್ರಿಕನ ಸಂಚಾರ' (ಇಹದಿಂದ ಹೊರಕ್ಕೆ ಹೋಗುವ) ಎಂದು ಭಾಷಾಂತರ ಮಾಡಿದರು. ೨೦ ಅಧ್ಯಾಯಗಳಿಂದ ಕೂಡಿದ ಈ ಕೃತಿಯು ಈವರೆಗೆ ಪರಿಷ್ಕೃತ ಆವೃತ್ತಿಗಳಾಗಿ ಹೊರಬಂದಿದೆ. ಪ್ರತಿಯೊಂದು ಅಧ್ಯಾಯಕ್ಕೂ ಇಂಗ್ಲೀಷ್ ಮತ್ತು ಕನ್ನಡದಲ್ಲಿ ಶಿರೋನಾಮೆಗಳನ್ನು ಕೊಡಲಾಗಿದೆ. ೧೬ ಪದ್ಯಗಳನ್ನು ಕಾಣುತ್ತೇವೆ. ದೈವಿಕ ಸಾಧನೆಯಲ್ಲಿ ಕ್ರೈಸ್ತನೊಬ್ಬನು ಹಂತಹಂತವಾಗಿ ಏರುತ್ತ ನಡೆದುದರ ಬಗೆಯನ್ನು ಅದರಲ್ಲಿ ತೋರಿಸಿದ್ದಾರೆ. ಒಬ್ಬ ಉತ್ತಮ ವ್ಯಕ್ತಿಯ ಜೀವನ ಪಯಣದ ಚಿತ್ರಣ ಆಕರ್ಷಕವಾಗಿ ಮೂಡಿಬಂದಿದೆ.

ಇಲ್ಲಿ ಗುರುತಿಸಬಹುದಾದ ವಿಶೇಷ ಅಂಶವೆಂದರೆ ಬೈಬಲ್ ವಾಕ್ಯಗಳನ್ನು ಆಧರಿಸಿ ಕಥೆ ಬೆಳೆದಿದೆ. ಉದಾ:– ದೇವರ ಭಯವೇ ಜ್ಞಾನಕ್ಕೆ ಮೂಲ. ಕೃತಿಯಲ್ಲಿ ಬಳಸಿರುವ ವ್ಯಕ್ತಿಗಳ ಸ್ಥಳಗಳ ಹೆಸರುಗಳು ಸ್ವಭಾವಕ್ಕೆ ತಕ್ಕಂಥದ್ದನ್ನೇ ಆರಿಸಲಾಗಿದೆ. ಇದರಿಂದ ಓದುವವರು ಬೇಗನೆ ಅರ್ಥವನ್ನು ಗ್ರಹಿಸಿಕೊಳ್ಳಲು ಸಾಧ್ಯವಿದೆ. ಇಲ್ಲಿ ಬಳಸಿರುವ ಕೆಲವು ಹೆಸರುಗಳಿವೆ. ಉದಾ:– ಹಟವಾದಿ, ಚಂಚಲಯ್ಯ, ವಾಚಾಳಭಟ್ಟ, ಭಕ್ತ ವೈರಿ ಸ್ವಾಮಿ, ಅಸೂಯರಾಯಪ್ಪ, ಭಕ್ತಿ, ಪ್ರೀತಿ, ನಂಬಿಕೆರಾಯ, ಪಾಪಾಸಾಹೇಬ, ಮುಖಸ್ತುತಿ ರಾಜ, ಪಯಣದ ಪ್ರಾರಂಭದಿಂದ ಅಂತ್ಯದವರೆಗೂ ಪವಿತ್ರ ಗ್ರಂಥದ ವಾಕ್ಯಗಳೇ ಪಯಣಿಗನಿಗೆ ದಾರಿದೀಪವಾಗಿ ಕಾರ್ಯನಿರ್ವಹಿಸಿವೆ. ಸಂದರ್ಭಕ್ಕೆ ಹೊಂದುವ ಪದ್ಯಗಳನ್ನು ಅಲ್ಲಲ್ಲಿ ರಚಿಸಿದ್ದಾರೆ. ಛಂದೋ ನಿಯಮಗಳನ್ನು ಅಳವಡಿಸಿಕೊಂಡಿದ್ದನ್ನು ಕಾಣುತ್ತೇವೆ. ದ್ವಿತಿಯಾ ಪ್ರಾಸ ಸಾಮಾನ್ಯವಾಗಿ ಎಲ್ಲ ಗೀತೆಗಳಲ್ಲಿ ಕಂಡುಬರುತ್ತದೆ. ಡಾ.ರಂ. ಶ್ರೀ ಮುಗುಳಿಯವರು 'ಸುದೀರ್ಘ ಕಥೆ ಅಥವಾ ಕಾದಂಬರಿಯಾಗಿ ಕನ್ನಡದಲ್ಲಿ ಇದೆ ಮೊದಲನೆಯದಾಗಿ ಪರಿಣಮಿಸಿತು' (ರಂ.ಶ್ರೀ ಮುಗುಳಿ, ಕನ್ನಡ ಸಾಹಿತ್ಯದ ಇತಿಹಾಸ, ಪುಟ ೧೯೩) ಎಂದು ಯಾತ್ರಿಕನ ಸಂಚಾರದ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

೩. **ಕಥಾಮಾಲೆ(೧೮೬೨)**: ಎಫ್. ಕಿಟಲ್‌ರವರಿಂದ ರಚಿತವಾದ 'ಕಥಾಮಾಲೆ' ಕ್ರೈಸ್ತ ಧಾರ್ಮಿಕ ಸಾಹಿತ್ಯದಲ್ಲಿ ಒಂದು ಅತ್ಯಮೂಲ್ಯ ಕೃತಿಯಾಗಿದೆ. ಈ ಕೃತಿಯಲ್ಲಿ ಕಿಟಲ್‌ರ ದೇಶೀ ಪ್ರೇಮ ಮತ್ತು ಅವರ ಕಾವ್ಯ ರಚನಾಶಕ್ತಿ ಎದ್ದು ಕಾಣುತ್ತದೆ. ಇದೊಂದು ಖಂಡಕಾವ್ಯವಾಗಿದೆ. ಯೇಸುವಿನ ಜನನದಿಂದ ದಿವಾರೋಹಣದವರೆಗಿನ ಚರಿತ್ರೆಯನ್ನು ೪೩ ಅಧ್ಯಾಯಗಳಲ್ಲಿ ಕಥಾರೂಪದಲ್ಲಿ ನಿರೂಪಿಸಿರುವುದರಿಂದ ಇದು ಕಥೆಗಳನ್ನು ಪೋಣಿಸಿದ ಮಾಲೆಯಾಗಿದೆ. ಇಲ್ಲಿ ಒಟ್ಟು ೪೫೩ ಪದ್ಯಗಳಿದ್ದು ೨೦೬ ಭಾಮಿನಿ ಷಟ್ಪದಿ, ೭೩ ವಾರ್ಧಕ ಷಟ್ಪದಿ, ಹಾಗೂ ೧೭೪ ಪೂರ್ವಿರಾಗದ ಹಾಡುಗಳು ಇವೆ. ಕಿಟಲ್ ಈ ಕಾವ್ಯವನ್ನು ಬರೆಯುವಾಗ ಮತ್ತಾಯನು ಬರೆದ ಸುವಾರ್ತೆಯನ್ನು ಮಾತ್ರ ಆಧರಿಸಿ ಬರೆಯದೆ ಇತರ ಸುವಾರ್ತಿಕರಾದ ಮಾರ್ಕ, ಲೂಕ, ಯೋಹಾನರು ಬರೆದು ಸುವಾರ್ತೆಗಳನ್ನು ಆಧರಿಸಿ ಕಾವ್ಯ ರಚಿಸಿದ್ದು ಕಂಡುಬರುತ್ತದೆ. ಪ್ರತಿಯೊಂದು ಪುಟದ ಆದಿಯಲ್ಲಿ ಆಯಾ ಭಾಗದಲ್ಲಿ ಬರುವ ಕಠಿಣ ಪದಗಳ ಅರ್ಥವನ್ನು ಕೊಡುವುದರ ಮೂಲಕ ಓದುಗರಿಗೆ ಕಾವ್ಯವನ್ನು ಅರ್ಥ ಮಾಡಿಕೊಳ್ಳಲು ಅನುಕೂಲ ಮಾಡಿಕೊಟ್ಟಿದ್ದಾರೆ.

೪. **ಪ್ರಾಕ್ಕಾವ್ಯಮಾಲಿಕೆ(೧೮೬೮)**: ಡಬ್ಲ್ಯು. ಜಿ. ವುರ್ಥರು ಪ್ರಾಕ್ಕಾವ್ಯ ಮಾಲಿಕೆ (Canarese Poetical) ಎಂಬ ಕೃತಿಯನ್ನು ೧೮೬೮ ರಲ್ಲಿ ರಚಿಸಿದರು. ಇದು ೫೭೮ ಪುಟಗಳನ್ನು ಹೊಂದಿದ್ದು ಪ್ರಾರಂಭದಲ್ಲಿ ಕರ್ನಾಟಕ ಗ್ರಂಥಗಳು ಕೆಲವು ಬ್ರಾಹ್ಮಣ ಮತಕ್ಕೆ, ಕೆಲವು ಲಿಂಗವಂತ ಮತಕ್ಕೆ, ಕೆಲವು ಜೈನ ಮತಕ್ಕೆ, ಸಂಬಂಧವಾಗಿ ಮೂರು ಭಾಗವನ್ನು ಒಳಗೊಂಡಿದೆ. ಬ್ರಾಹ್ಮಣ ಸಾಹಿತ್ಯದಲ್ಲಿ ಜೈಮಿನಿ ಭಾರತ, ಆದಿಪರ್ವ, ರಾಮಾಯಣ, ಭಾಗವತ, ಕೃಷ್ಣಾವತಾರಸಾರ, ಅನುಭವಾಮೃತ, ಸೋಮೇಶ್ವರ ಶತಕ ಹಾಗೂ ದಾಸರ ಪದಗಳಿವೆ.

ವೀರಶೈವ ಸಾಹಿತ್ಯದಲ್ಲಿ ಬಸವ ಪುರಾಣ, ಚೆನ್ನಬಸವ ಪುರಾಣ, ಸರ್ವಜ್ಞನ ಪದಗಳು, ರಾಜಶೇಖರ ವಿಳಾಸದಿಂದ ಆಯ್ದ ಪದ್ಯಗಳಿವೆ. ಜೈನ ಸಾಹಿತ್ಯದಲ್ಲಿ ಶಾಸ್ತ್ರಗಾರ ಹಾಗೂ ಧರ್ಮ ಪರೀಕ್ಷೆಯಿಂದ ಪದ್ಯಗಳನ್ನು ಆಯ್ದುಕೊಂಡಿದ್ದಾರೆ. ಕ್ರೈಸ್ತ ಸಾಹಿತ್ಯದಿಂದ ದೇವ ಸ್ತೋತ್ರ, ಇಹಪರ ಬೇಧ, ಸಾಯಂಕಾಲ ಗೀತದಿಂದ ಪದ್ಯಗಳನ್ನು ಆಯ್ದುಕೊಂಡಿದ್ದಾರೆ. ಹೀಗೆ ಒಟ್ಟು ೧೭೦೧ ಪದ್ಯಗಳಿದ್ದು ಪ್ರತಿಯೊಂದು ಪದ್ಯದ ಸಾರವನ್ನು ಇಂಗ್ಲೀಷ್‌ನಲ್ಲಿ ಕೊಡಲಾಗಿದೆ.

ಈ ಕೃತಿಯು ಟ್ರೈನಿಂಗ್ ಕಾಲೇಜುಗಳಲ್ಲಿ ಪಠ್ಯವಾಗಿತ್ತು. ವುರ್ಥರ ಹೆಸರಿನಲ್ಲಿ ಒಂದು ನಿಧಿಯನ್ನಿರಿಸಿ, ಆ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದವರಿಗೆ ಪಾರಿತೋಷಕ ನೀಡಲಾಗುತ್ತಿತ್ತು. ಅದರಲ್ಲಿಯ ಒಂದು ಪೇಪರು ಪ್ರಾಕ್ಕಾವ್ಯಮಾಲಿಕೆಯ ಅಭ್ಯಾಸಕ್ಕೆ ಮಿಸಲಾಗಿತ್ತು. (ಶ್ರೀನಿವಾಸ ಹಾವನೂರ ಹೊಸಗನ್ನಡದ ಅರುಣೋದಯ ಪುಟ– ೧೧೫).

೫. **ಬಾಲಕರ ಗೀತೆಗಳು(೧೮೬೫)**: ಜೆ. ಮ್ಯಾಕ್‌ರು ಸಂಪಾದಿಸಿದ ಬಾಲಕರ ಗೀತೆಗಳು (Canarese Songs for Children) ಎಂಬ ಕೃತಿ ೧೮೬೫ ರಲ್ಲಿ ಪ್ರಕಟವಾಯಿತು. ಇದು ಒಟ್ಟು ೮೨ ಪುಟಗಳನ್ನು ಹೊಂದಿದ್ದು ೫೨ ಗೀತೆಗಳನ್ನು ಹೊಂದಿದೆ. ಬಾಸೆಲ್ ಮಿಶನ್‌ನ ಮುದ್ರಣ(Press)ದಿಂದ ಪ್ರಕಟವಾಯಿತು. ಇದರಲ್ಲಿ

ಪ್ರಮುಖವಾಗಿ ನಾಲ್ಕು ಪ್ರಮುಖ ವಿಚಾರಗಳನ್ನು ಕಾಣಬಹುದು. ಭಕ್ತಿಯ ವಿಷಯ, ಪ್ರಕೃತ್ಯಾದಿಯ ವಿಷಯ, ಸ್ವದೇಶಾದಿಯ ವಿಷಯ, ಕಥಾಧಿಗಳು ಎಂದು ವಿಭಾಗಿಸಲಾಗಿದೆ. ಇಲ್ಲಿನ ಗೀತೆಗಳನ್ನು ಎ. ಗ್ರೇಟರ್ ಜೆ. ಮ್ಯಾಕ್ ಮುಂತಾದವರು ರಚಿಸಿದ್ದಾರೆ.

ಈ ಗೀತ ಪುಸ್ತಕದ ೫ನೇ ಮುದ್ರಣವು ೧೯೦೪ ರಲ್ಲಿ ಪ್ರಕಟವಾಯಿತು. ೧೭೯ ಪುಟಗಳ ಈ ಕೃತಿಯಲ್ಲಿ ಮಿಶನರಿಗಳು ರಚಿಸಿದ ೧೨೫ ಸಂಗೀತಗಳಿವೆ. ಪ್ರಾರಂಭದ ೪ ರಿಂದ ೧೨ ಪುಟಗಳವರೆಗೆ ಸರಳತೆಯ (Notation) ಅಭ್ಯಾಸಗಳಿದ್ದು ಈ ಭಾಗದಲ್ಲಿ ಉಪಾಧ್ಯಾಯರು ಮಕ್ಕಳಿಗೆ ಗೀತೆಗಳನ್ನು ಹಾಡಲು ಹೇಗೆ ಸ್ವರ ಜ್ಞಾನವನ್ನು ಮಾಡಿಕೊಡಬೇಕು ಎಂಬುದನ್ನು ವಿವರಿಸಿ ನಂತರ ಕೇವಲ ನೋಟ್ಸ್‌ಗಳನ್ನು ನೋಡಿ ಹಾಡಲು ಮಕ್ಕಳಿಗೆ ಹೇಗೆ ಕಲಿಸಿಕೊಡಬೇಕು ಎಂಬುದನ್ನು ವಿವರಿಸಿದ್ದಾರೆ.

ಈ ಕೃತಿಯಲ್ಲಿ ಏಳು ಮುಖ್ಯವಾದ ಭಾಗಗಳನ್ನು ಕಾಣುತ್ತೇವೆ. ಪ್ರತಿಯೊಂದು ಮುಖ್ಯ ಶೀರ್ಷಿಕೆಯಡಿಯಲ್ಲಿ ಉಪ ಶೀರ್ಷಿಕೆಗಳಿರುವುದು ಕಂಡುಬರುತ್ತದೆ. ಇಲ್ಲಿ ಬರುವ ಮುಖ್ಯ ಭಾಗಗಳು:

೧. ವಿವಿಧ ಕಾಲಗಳು: ಈ ಭಾಗದಲ್ಲಿ ಮುಂಜಾನೆ, ಸಂಜೆ, ವಸಂತಕಾಲ, ಬೇಸಿಗೆ ಕಾಲ, ಮಳೆಗಾಲದ ಕುರಿತು ಗೀತೆಗಳಿವೆ.

೨. ಸೃಷ್ಟಿಯ ವರ್ಣನೆ

೩. ಸ್ವದೇಶ ವಿಹಾರಾದಿಗಳು: ಈ ಭಾಗದಲ್ಲಿ ಸ್ವದೇಶ, ಪರದೇಶ, ವಿಯೋಗದ ಕುರಿತು ಗೀತೆಗಳಿವೆ.

೪. ಕಥೆಗಳು

೫. ಜೀವ ಮರಣಾದಿಗಳು: ಇದರಲ್ಲಿ ಬಾಲ್ಯ, ಸುಖಾನುಭವ, ಮರಣದ ಕುರಿತು ಗೀತೆಗಳಿವೆ.

೬. ಪಾರಮಾರ್ಥಿಕ ವಿಷಯಗಳು: ಇಲ್ಲಿ ದೇವರ ಸ್ತುತಿ, ಸ್ತೋತ್ರ, ಭರವಸೆ, ಭಕ್ತರ ನಡತೆ, ದೇಶದ ರಾಜ್ಯದ ವಿಸ್ತರಣೆಯ ಕುರಿತಾದ ಗೀತೆಗಳು.

೭. ಕ್ರೈಸ್ತ ಹಬ್ಬಗಳು: ಇಲ್ಲಿ ಆದಿತ್ಯವಾರ, ಆಗಮನ, ಕ್ರಿಸ್ತನ ಜನನ, ಯುಗಾದಿ, ಪ್ರತ್ಯಕ್ಷತೆ, ಶ್ರಮೆಯವಾರ, ಪುನರುತ್ಥಾನ, ದಿವಾರೋಹಣ, ಪಂಚಾಶತ್ತಮ, ಪಶ್ಚಾತ್ತಾಪದ ದಿನ, ಮಿಶನ್ ಹಬ್ಬ, ಕದಿರು ಹಬ್ಬದ ಗೀತೆಗಳಿವೆ. ಈ ಗೀತೆಗಳನ್ನು ರಚಿಸಿದ ಗೀತಗಾರರು ಅವರ ಗೀತೆಗಳ ವರ್ಗೀಕರಣ ಇಂತಿದೆ.

ಗೀತೆಗಳ ಮೂಲ ಕರ್ತೃಗಳು		ರಚಿಸಿದ ಒಟ್ಟು ಗೀತೆಗಳು
ಆರೋನ್ಸ್. ಎಮ್	Aarons. M	೦೧
ಕರಾಟ ಈ. ಪಿ	Karat. E. P	೦೨
ಕಿಟಲ್ ಎಫ್	Kittel. F	೧೨
ಗ್ರೇಟರ್. ಎ	Graeter. A	೦೩
ಥಾಮಸ್ ವಾಲ್ಜ್	Th Walz	೦೪
ಫೈಡರ್. ಬಿ	Faider B	೦೩

ಮನ್ನರ್. ಎ	Manner. A	೦೧
ಮೊಗ್ಲಿಂಗ್. ಎಚ್	Mogling. H	೦೨
ಮ್ಯಾಕ್. ಜೆ	Mack. J	೬೭
ಲೂತಿ. ಬಿ	Luthi. B	೨೮
ಸ್ಟೋಲ್ಜ್. ಸಿ	Stolz. C	೦೧
ಹೋಚ್. ಎಂ	Hoch. M	೦೧

ಈ ಗೀತೆಗಳನ್ನು ಕ್ರೈಸ್ತ ಪಾಠಶಾಲೆ ಹಾಗೂ ಭಾನುವಾರ ಶಾಲೆಗಳಲ್ಲಿ ಉಪಯೋಗಿಸುತ್ತಿದ್ದರು.

೬. ಅಭಿನಯ ಗೀತೆಗಳು(೧೯೦೩): ಈ ಕೃತಿಯು ಬಾಸೆಲ್ ಮಿಶನ್ ಪ್ರೆಸ್‌ನಿಂದ ೧೯೦೩ ರಲ್ಲಿ ಪ್ರಕಟವಾಯಿತು. ಶಾಲಾ ವಿದ್ಯಾರ್ಥಿಗಳಿಗೆ ಐಚ್ಚಿಕ ವಿಷಯಗಳಲ್ಲಿ ಈ ಪುಸ್ತಕವನ್ನು ಸೇರಿಸಲಾಗಿತ್ತು. ಈ ಕೃತಿಯ ಪ್ರಸ್ತಾವನೆಯಲ್ಲಿ ಇಂತಿದೆ "ಈ ವಿಷಯವು ಚಿಕ್ಕವರಿಗೆ ಬಹು ಯುಕ್ತವಾದದ್ದು. ಯಾಕೆಂದರೆ ಇದರಿಂದ ನೇತೇಂದ್ರಿಯದ ವಿನಹ ಶ್ರವಣೇಂದ್ರಿಯಕ್ಕೂ ಅನುಕರಿಸುವ, ಭಾವಕ್ಕೂ ಕಲ್ಪನಾ ಶಕ್ತಿಗೂ ಹೊಸ ಬಗೆಯ ಪ್ರೇರಣೆ ತೃಪ್ತಿಗಳು ದೊರೆಯುವವು. ಅದಲ್ಲದೆ ಮಕ್ಕಳು ತರತರದ ಕಸಬಿನವರ ಕೃತಿಗಳನ್ನಾಗಲಿ ವಿವಿಧ ಪ್ರಾಣಿಗಳ ಚಲನೆಗಳನ್ನಾಗಲಿ ತಾವೇ ನಟಿಸುತ್ತಿರುವುದರಿಂದ ಯಥೇಚ್ಛ ವಿನೋದ ಪಡುವರು. ಈ ಪಾಠವು ತಕ್ಕಂತೆ ನಡೆಯುವ ಶಾಲೆಗಳಲ್ಲಿ ಹುಡುಗರು ಎಷ್ಟೋ ಆತುರದಿಂದ ಶಾಲೆಗೆ ಹೋಗುವರು"!. ಅಭಿನಯ ಪ್ರಿಯರಾದ ವಿದ್ಯಾರ್ಥಿಗಳು ಶಾಲೆಗಳಿಗೆ ತಪ್ಪದೆ ಹಾಜರಾಗಲು ಇದೊಂದು ಮಾರ್ಗವಾಗಿ ಪರಿಣಮಿಸಿತು. ಇಲ್ಲಿನ ವಿಷಯಗಳು ಮನೆ, ಶಾಲೆ, ಹೊಲ, ಬಾನಕ್ಕಿ, ಪಾರಿವಾಳ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ್ದು ಮಕ್ಕಳ ಮನಸ್ಸನ್ನು ಆಕರ್ಷಿಸಿದವು. ಬೋಧಕರಿಗೂ ಬೊಧಿಸಲು ಅಗತ್ಯವಾಗಿ ಬೇಕಾದ ನೋಟುಗಳನ್ನು ಸಹ ನೀಡಲಾಗಿದೆ. ಕೆಲವು ಗೀತೆಗಳಿಗೆ ಅದರ ಶೀರ್ಷಿಕೆಯನ್ನು ಕನ್ನಡ ಮತ್ತು ಜರ್ಮನಿ ಭಾಷೆಯಲ್ಲಿ ನಿಡಲಾಗಿದೆ. ಪ್ರಾರ್ಥನೆ ಮತ್ತು ಬೈಬಲ್‌ಗೆ ಸಂಬಂಧಿಸಿದಂತೆ ಒಟ್ಟು ೭ ಗೀತೆಗಳನ್ನು ಕಾಣುತ್ತೇವೆ.

೭. ಸುರಾರಿ ಕೀರ್ತನೆ (೧೯೦೮) Temperance Hymns: ಮದ್ಯಪಾನ ನಿವಾರಕ ಸಂಘಗಳಲ್ಲಿ ಹಾಗೂ ಇವರಿಗಾಗಿ ಪ್ರತ್ಯೇಕವಾಗಿ ಏರ್ಪಡಿಸಿರುವ ಪ್ರಾರ್ಥನಾ ಕೂಟಗಳಲ್ಲಿ ಉಪಯೋಗವಾಗುವ ಗೀತೆಗಳು ಮಿಶನರಿಗಳಿಂದ ರಚಿತವಾಗಿವೆ. ಬಿ.ಲೂತಿ ಯವರು ಈ ಗೀತೆಗಳ ಸಂಗ್ರಹವನ್ನು ಮಾಡಿ ೧-೫-೧೯೦೮ ರಲ್ಲಿ ಬಾಸೆಲ್ ಮಿಶನ್ ಪ್ರೆಸ್‌ನಿಂದ ಪ್ರಕಟಿಸಿದರು. ೨೫ ಹಾಡುಗಳನ್ನು ಹೊಂದಿದ ಈ ಕೃತಿ ನೀತಿಯನ್ನು ಬೋಧಿಸುತ್ತದೆ.

ಇ.ಪಿ. ಕರಾಟ್	೧೫
ಲೂತಿ	೦೨

ಮೋಸಸ್ ಆರೋನ್ಸ್ ೦೧

ಲೂತಿ ಮತ್ತು ಇತರರು ೦೭


ಒಟ್ಟು ೨೫ ಗೀತೆಗಳು

೮. ಒಂದನೇ ನೋಟು ಪುಸ್ತಕ (Elementary Lessons in Music): ಕ್ರೈಸ್ತ ಮಿಶನರಿಗಳು ಗೀತೆಗಳನ್ನು ಬರೆಯುವುದರೊಂದಿಗೆ ಗೀತೆಗಳನ್ನು ರಾಗಬದ್ಧವಾಗಿ ಹಾಡಲು ಅನುಕೂಲವಾಗುವಂತೆ ನೋಟನ್ನು ರಚಿಸಿದರು. ಬಾಲಕರ ಗೀತೆಗಳು, ಅಭಿನಯ ಗೀತೆಗಳನ್ನು ಶಾಲೆಗಳಲ್ಲಿ ಪಠ್ಯ ಪುಸ್ತಕವಾಗಿ ಜಾರಿಗೆ ತಂದು ವಿದ್ಯಾರ್ಥಿಗಳಿಗೂ, ಬೋಧಕರಿಗೂ ಸಹಾಯಕವಾಗುವಂತೆ ಮಾರ್ಗಸೂಚಿಯಾಗಿ 'ಒಂದನೇ ನೋಟು ಪುಸ್ತಕ' ಎಂಬ ಕೃತಿಯನ್ನು ೧೯೦೨ರಲ್ಲಿ ಬಾಸೆಲ್ ಮಿಶನ್ ಪ್ರೆಸ್‌ನಿಂದ ಹೊರ ತಂದರು. ಗಾಯನ ವಿಧ್ಯೆಯಲ್ಲಿ ತೊಡಗಿದವರಿಗೆ ಇದೊಂದು ಉತ್ತಮ ಕೈಪಿಡಿಯಾಯಿತು. ಗಾಯನ ವಿಧ್ಯೆಯ ಮೂಲ ಪಾಠಗಳನ್ನು ಇದು ಒಳಗೊಂಡಿದೆ. ಕೇವಲ ೧೬ ಪುಟಗಳನ್ನು ಹೊಂದಿದ ಈ ಕೃತಿ ಮೂರು ಮುಖ್ಯ ಅಧ್ಯಾಯಗಳನ್ನು ಹೊಂದಿದೆ.

೧. ಸ್ವರ ಬೇಧಗಳು ೨. ಸ್ವರಗಳ ದೀರ್ಘ ಹ್ರಸ್ವ ೩. ಘಟ್ಟಿ ಮತ್ತು ವೆಲ್ಲನ ಸ್ವರ. ಗಾಯನ ವಿದ್ಯೆಗೆ ಸಂಬಂಧಿಸಿದ ೨೮ ಪ್ರಮುಖ ಅಂಶಗಳನ್ನು ನೀಡಿ ಈ ವಿಧ್ಯೆಯನ್ನು ಕಲಿಯಲು ಅನುಕೂಲ ಮಾಡಿದರು.


ಪ್ರಾರಂಭದಲ್ಲಿ ಗಾಯನ ವಿದ್ಯೆಯ ಪ್ರಾಧಾನ್ಯತೆಯನ್ನು ಹೇಳುತ್ತಾ 'ಗಾಯನವು ಬಹು ಮನೋಹರವಾದದ್ದು, ಗಾಯನದಿಂದ ಮನುಷ್ಯರಿಗೂ, ದೇವದೂತರಿಗೂ ಸಂತೋಷವಾಗುತ್ತದೆ' ಎಂದು ಗಾಯನದ ಪ್ರಾಮುಖ್ಯತೆಯನ್ನು ತಿಳಿಸುತ್ತ ಅದರ ಪ್ರಮುಖ ಅಂಶಗಳನ್ನು ವಿವರಿಸಿದ್ದಾರೆ.

ನೋಟುಗಳನ್ನು ಬರೆಯುವ ರೀತಿ ಹೇಗಿದೆಯೆಂದರೆ ಐದು ಗೆರೆ ಒಂದರ ಕೆಳಗೊಂದನ್ನು ಸಮಾನಾಂತರವಾಗಿ ಎಳೆದು ಈ ಗೆರೆಯಲ್ಲಿ ನೋಟು ಬರೆಯುತ್ತಾರೆ.




ಸರಿಗಮಪಧನಿಸ ಎಂಬ ಈ ಎಂಟು ಸ್ವರಗಳಿಗೆ ಸರಳೆ ಎನ್ನುವರು. ಈ ಸ್ವರಾವಳಿಯು ರಾಗಕ್ಕೆ ಸಾಲುವುದಿಲ್ಲ. ಇನ್ನೂ ಕೆಳಗಿನ ಮತ್ತು ಎತ್ತರದ ಸ್ವರಗಳು ಬೇಕಾಗುತ್ತವೆ. ಸಾಧಾರಣ ಸರಳೆಯ ಮೇಲೆ

ಎತ್ತರದ ಸರಳೆ ಉಂಟು, ಅದಕ್ಕೆ ತಾರಕ ಸರಳೆ ಎನ್ನುತ್ತಾರೆ. ಮತ್ತು ಸಾಧಾರಣ ಸರಳೆಯ ಕೆಳಗೆ ಸಹ ಸರಳೆ ಉಂಟು, ಅದಕ್ಕೆ ಗಂಭೀರ ಸರಳೆ ಎನ್ನುತ್ತಾರೆ. ಸಾಧಾರಣ ಸರಳೆಗೆ ಮಧ್ಯಮ ಸರಳೆ ಎನ್ನುತ್ತಾರೆ.



ಹಾಡುವಾಗ ಮಕ್ಕಳು ಮಾಡುವ ತಪ್ಪುಗಳನ್ನು ಗುರುತಿಸಿ ಅದನ್ನು ಸರಿಪಡಿಸಿ ಸರಿಯಾದ ರೂಪವನ್ನು ನೀಡಿದ್ದಾರೆ.

ಉದಾ:– ಶಾಂತ ಯೇಸುವೇ ಎಂಬುದನ್ನು ಎಚ್ಚರವಿಲ್ಲದೆ ಮಕ್ಕಳು ತಪ್ಪಾಗಿ ಹೀಗೆ ಹಾಡುತ್ತಾರೆ.





ಗಾಯನ ವಿದ್ಯೆಯ ಮೂಲ ಪಾಠವನ್ನು ಬೋಧಕರಿಗೂ ವಿದ್ಯಾರ್ಥಿಗಳಿಗೂ ಒದಗಿಸಿ ಕಲಿಕೆಯನ್ನು ಸರಳ ಮಾಡುವುದರಲ್ಲಿ ಮಿಶನರಿಗಳು ವಹಿಸಿದ ಪಾತ್ರ ಮೆಚ್ಚುವಂತಹುದಾಗಿದೆ.

ಅನುಬಂಧ – ೨

ಅಧ್ಯಯನಕ್ಕೆ ಆಯ್ದುಕೊಂಡ ಪತ್ರಿಕೆಗಳ ವಿವರ:

ವಿದೇಶಿ ಮಿಶನರಿಗಳ ಕೊಡುಗೆಗಳಲ್ಲಿ ಪತ್ರಿಕೆಗಳೂ ಒಂದು. ಕನ್ನಡದಲ್ಲಿ ಪತ್ರಿಕೆಯನ್ನು ಪ್ರಾರಂಭಿಸಿದ ಮೊದಲ ಕೀರ್ತಿ ಬಾಸೆಲ್ ಮಿಶನರಿಗಳಿಗೆ ಸಲ್ಲುತ್ತದೆ. ಕನ್ನಡದ ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ' ೧೮೪೩ ಜುಲೈ ೧ ರಂದು ಪ್ರಕಟಗೊಂಡಿತು. ಆದ್ದರಿಂದ ಕರ್ನಾಟಕದಲ್ಲಿ ಜುಲೈ ೧ನ್ನು ಪತ್ರಿಕಾ ದಿನವನ್ನಾಗಿ ಆಚರಿಸುತ್ತೇವೆ. ಮಿಶನರಿಗಳು ಪ್ರಕಟಿಸಿದ ಪತ್ರಿಕೆಗಳು ಇಂತಿವೆ.

೧. ಲಂಡನ್ ಮಿಶನ್

೧. ಅರುಣೋದಯ ಪತ್ರಿಕೆ: ಬಿ.ರೈಸ್‌ರವರಿಂದ ಪ್ರಕಟವಾಗುತ್ತಿದ್ದ ಈ ಪತ್ರಿಕೆಯು ೧೮೬೧ ರಿಂದ ಆರೇಳು ವರ್ಷಗಳವರೆಗೆ ನಡೆದುಕೊಂಡು ಬಂದಿತು. ಆಂಗ್ಲ–ಕನ್ನಡ ಸಚಿತ್ರ ಮಾಸ ಪತ್ರಿಕೆಯು ಕ್ರೈಸ್ತ ತತ್ವ ಪ್ರಸಾರದ ದೃಷ್ಟಿ ಹೊಂದಿತ್ತು. ಈ ಪತ್ರಿಕೆಯಲ್ಲೂ ಕೆಲವು ಭಾಷಾಂತರಿತ ಸ್ವತಂತ್ರ ಬಿಡಿ ಗೀತೆಗಳು ಪ್ರಕಟವಾಗುತ್ತಿದ್ದವು.

೨. ವೆಸ್ಲಿಯನ್ ಮಿಶನ್

೧. ಬೋಧಕ ಬೋಧಿನಿ: ವೆಸ್ಲಿಯನ್ ಮಿಶನರಿ ಟಾಮ್ಲಿನ್ಸ್‌ನ್ ೧೯೦೫ ರಲ್ಲಿ ಈ ಪತ್ರಿಕೆಯನ್ನು ಪ್ರಕಟಿಸಿದರು. ಇದು ವೆಸ್ಲಿಯನ್ ಮಿಶನ್ ಪ್ರೆಸ್ ಮೈಸೂರಿನಿಂದ ಪ್ರಕಟವಾಗುತ್ತಿತ್ತು. ಇದು ಮಾಸಪತ್ರಿಕೆಯಾಗಿದ್ದು ಬೋಧಕರ ಕೈಪಿಡಿಯಾಗಿ ಮಹತ್ವದ ಪತ್ರಿಕೆಯಾಗಿತ್ತು. ೧೯೩೪ ರವರೆಗೂ ಪ್ರಕಟವಾಯಿತು. ಬೈಬಲ್ ವ್ಯಾಖ್ಯಾನ, ಕ್ರೈಸ್ತ ನಾಯಕರುಗಳ ಜೀವನ ಚರಿತ್ರೆ ಸಭಾ ಚಟುವಟಿಕೆಗಳ ವಿವರಗಳಿದ್ದವು.

೩. ಬಾಸೆಲ್ ಮಿಶನ್

೧. ಮಂಗಳೂರು ಸಮಾಚಾರ: ಎಚ್ ಮೊಗ್ಲಿಂಗ್‌ರ ನೇತೃತ್ವದಲ್ಲಿ 'ಮಂಗಳೂರು ಸಮಾಚಾರ' ಎಂಬ ಪ್ರಥಮ ಪತ್ರಿಕೆಯು ೧೮೪೩ ರಲ್ಲಿ ಪ್ರಕಟವಾಯಿತು. ಕನ್ನಡ ಪತ್ರಿಕೆಗಳ ಯುಗಕ್ಕೆ ನಾಂದಿ ಹಾಕಿದರು. ಈ ಪತ್ರಿಕಾ ಪ್ರಕಟಣೆಯ ಉದ್ದೇಶವನ್ನು ಮೊಗ್ಲಿಂಗ್ ಹೀಗೆ ತಿಳಿಯಪಡಿಸಿದ್ದಾರೆ. 'ಈ ದೇಶವೆಂಬ ಮನೆಯಲ್ಲಿ ವಾಸಿಸುವ ಜನರು ಇಂದಿನ ಪರಿಯಂತರ ಹೊರಗಿನ ದೇಶಸ್ಥರಸಮಾಚಾರ ಮಾರ್ಗ ಮರ್ಯಾದೆಗಳಂನು ತಿಳಿಯದೇ ಕಿಟಕಿಯಿಲ್ಲದ ಬಿಡಾರದಲ್ಲಿವುಳ್ಳುವವರ ಹಾಗೆ ಇರುತ್ತಾ ಬಂದರು. ಅದು ಕಾರಣ ಹೊರಗಿನ ಕಾರ್ಯಗಳನ್ನು ಕಾಣುವ ಹಾಗೆಯೂ ಒಳಗೆ ಸ್ವಲ್ಪ ಬೆಳಕು ಬೀರುವ ಹಾಗೆಯೂ ನಾಲ್ಕು ದಿಕ್ಕಿಗೆ ಕಿಟಕಿಗಳನ್ನು ಮಾಡುವ ಈ ಸಮಾಚಾರ ಕಾಗದವನ್ನು ಪಕ್ಷಕ್ಕೆ ಒಂದು ಸಾರಿ ಸಿದ್ದಮಾಡಿ ಅದನ್ನು ಓದಬೇಕೆಂದಿರುವವರೆಲ್ಲರಿಗೆ ಕೊಟ್ಟರೆ ಕಿಟಕಿಗಳನ್ನು ಮಾಡಿದ ಹಾಗಾಗಿರುವುದು.' ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ವಿಷಯಗಳನ್ನು ಈ ರೀತಿಯಲ್ಲಿ ವಿಭಾಗಿಸಬಹುದು. ೧. ಪ್ರಾದೇಶಿಕ ವಿಷಯಗಳು ೨. ಸರ್ಕಾರದ ನಿಯಮ ಮತ್ತು ನೀತಿಗಳು ೩. ಗಾದೆಗಳು, ಪದ್ಯಗಳು, ಹೇಳಿಕೆಗಳು ಇತ್ಯಾದಿ ೪. ಕಥೆಗಳು ೫. ಇತರೆ ರಾಜ್ಯಗಳಿಗೆ ಸಂಬಂಧಿಸಿದ ವಿಷಯಗಳು. ೧೮೪೪ ರಲ್ಲಿ ಈ ಪತ್ರಿಕೆಯು 'ಕನ್ನಡ ಸಮಾಚಾರ' ಎಂದು ಹೆಸರನ್ನು ಪಡೆಯಿತು. ಈ ಪತ್ರಿಕೆಯಲ್ಲಿ ನನ್ನ ಅಧ್ಯಯನಕ್ಕೆ ಸಂಬಂಧಪಟ್ಟ ಗೀತೆಗಳು ದೊರೆಯುವುದಿಲ್ಲ. ಈ ಪತ್ರಿಕೆಯಲ್ಲಿ ಬುದ್ಧಿಮಾತುಗಳನ್ನು ಹೇಳುವ ರೀತಿಯಲ್ಲಿ ದಾಸರ ಪದಗಳನ್ನು ಪ್ರಕಟಿಸುತ್ತಿದ್ದರು. ದಾಸ ಸಾಹಿತ್ಯದ ಮೊದಲ ಹಾಡುಗಳು ಪ್ರಕಟಗೊಂಡದ್ದು ಕಲ್ಲಚ್ಚು ಮುದ್ರಣದ ಮಂಗಳೂರು ಸಮಾಚಾರದಲ್ಲಿಯೇ ಎನ್ನುವುದು ನಿಜ.

೨. ಸಭಾಪತ್ರ: ಈ ಪತ್ರಿಕೆಯು ೧೮೬೮ರಲ್ಲಿ ಪ್ರಕಟವಾಯಿತು. ಇದು ಎರಡು ವಾರಕ್ಕೊಮ್ಮೆ ಪ್ರಕಟವಾಗುತ್ತಿದ್ದ ಪತ್ರಿಕೆಯಾಗಿದ್ದಿತು. ಬಾಸೆಲ್ ಸಭೆಯ ವರದಿ ಹಾಗೂ ಆಧ್ಯಾತ್ಮಿಕ ವಿಷಯಗಳನ್ನು ಹೊಂದಿದ್ದವು. ೧೮೭೪ಲ್ಲಿ ಇದು 'ಕ್ರೈಸ್ತ ಸಭಾ ಪತ್ರ' ಎಂಬ ಹೆಸರು ಪಡೆಯಿತು. ೧೮೭೭ರಲ್ಲಿ ಕ್ರೈಸ್ತ ಸಭಾಪತ್ರವು Mr. Walz ಮತ್ತು Mr.Christanjua Wats ರವರಿಂದ ಸಂಪಾದಿತವಾಯಿತು.

೩. ಬಾಲಪತ್ರ(Childrens Paper): ೧೮೯೬ ರಲ್ಲಿ ಪ್ರಕಟವಾಯಿತು. ೧೯೭೩ರಲ್ಲಿ ಇದು ನಿಂತು ಹೋಯಿತು. ಇದು ಫೋಟೋ ಮತ್ತು ಚಿತ್ರಗಳನ್ನು ಒಳಗೊಂಡಿತ್ತು.

೪. ಸುಭೋಧಿನಿ: ೧೮೭೧ ರಲ್ಲಿ ಪ್ರಾರಂಭಗೊಂಡ ಈ ಪತ್ರಿಕೆ ಎರಡು ವಾರಕ್ಕೊಮ್ಮೆ ಹೊರಡುತ್ತಿದ್ದ ಪತ್ರಿಕೆಯಾಗಿತ್ತು.

೫. ಸತ್ಯವೃತ: ಈ ಪತ್ರಿಕೆಯನ್ನು ದೇಶೀಯರೇ ನಡೆಸುತ್ತಿದ್ದರು. ಉಳಿದೆಲ್ಲ ಪತ್ರಿಕೆಗಳನ್ನು ಮಿಶನ್ ಸಂಸ್ಥೆ ಪ್ರಕಟಿಸುತ್ತಿದ್ದವು. ಇದರಲ್ಲಿ ಕ್ರೈಸ್ತ ಸಂಘ ಸಂಸ್ಥೆಗಳ ವರದಿ ಇರುತ್ತಿತ್ತು. ಅಲ್ಲದೆ ಕ್ರೈಸ್ತ ಸಂಘ ಸಂಸ್ಥೆಗಳಲ್ಲಿದ್ದ ನ್ಯೂನ್ಯತೆಗಳನ್ನು ಬರೆಯುವ ವಾಚಕರ ವಿಭಾಗವಿರುತ್ತಿತ್ತು. ೧೯೨೫ ರಲ್ಲಿ ಪ್ರಕಟವಾಯಿತು. ಇದರ ಸಂಪಾದಕ ಎಸ್.ಈ. ಐಮಾನ್ ಎಂಬುವರು. ಎರಡನೇ ಮಹಾಯುದ್ಧದ ನಂತರ ಇದು ನಿಂತು ಹೋಯಿತು. ೨೦ ಪುಟಗಳನ್ನು ಇದು ಹೊಂದಿದ್ದು ಧಾರ್ಮಿಕ ವಿಚಾರಗಳು, ಬಾಸೆಲ್ ಮಿಶನ್‌ನ ವರದಿಗಳು ಮತ್ತು ಪ್ರಾದೇಶಿಕ ಮತ್ತು ವಿದೇಶಿ ಸುದ್ದಿಗಳಿರುತ್ತಿದ್ದವು.

೬. ಕರ್ನಾಟಕ ಕ್ರೈಸ್ತ ಬಂಧು: ೧೯೩೨ ರಲ್ಲಿ ಇದು ಪ್ರಕಟವಾಯಿತು. ಸತ್ಯವೃತ ಪತ್ರಿಕೆಯು ತನ್ನ ಹೆಸರನ್ನು ಬದಲಿಸಿ ಕರ್ನಾಟಕ ಕ್ರೈಸ್ತ ಬಂಧು ಎಂದು ಹೆಸರು ಪಡೆಯಿತು. ಇದರ ಸಂಪಾದಕ ಕೆ.ಆರ್. ಕರುಣಾಕರ ಬಲ್ಮಠ, ಮಂಗಳೂರು. ಧ್ಯಾನಕ್ಕೆ ಸಂಬಂಧಿಸಿದ ವಿಷಯಗಳು ಹಾಗೂ ಪುಸ್ತಕ ವಿಮರ್ಶೆ ಇದ್ದವು.

೭. ಕನ್ನಡ ಪಂಚಾಂಗ: ೧೮೫೩ ರಲ್ಲಿ ಕಲ್ಲಚ್ಚು ಮುದ್ರಣದಲ್ಲಿ ಮುದ್ರಿತವಾಯಿತು. ೧೮೫೧ ರಲ್ಲಿ ಮಂಗಳೂರಿಗೆ ಬಂದ ಮಿಶನರಿಯಾದ ಜಾರ್ಜ್‌ಪ್ಲೆಬ್ಸ್(George Plebst) ಎಂಬುವವರು ೧೮೫೨ ರಲ್ಲಿ ಮಂಗಳೂರಿನಲ್ಲಿ ಬಾಸೆಲ್ ಪ್ರೆಸ್‌ನಲ್ಲಿ ಮೊಟ್ಟ ಮೊದಲ 'ಲೆಟರ್ ಪ್ರೆಸ್' ನ್ನು ಸ್ಥಾಪಿಸಿದರು. ಈ ಮೊದಲು ಎಲ್ಲಾ ಸಾಹಿತ್ಯಗಳು ಕಲ್ಲಚ್ಚಿನಿಂದ ಮುದ್ರಣಗೊಳ್ಳುತ್ತಿದ್ದವು. ೧೮೫೩ ರಿಂದ ಈ ಲೆಟರ್ ಪ್ರೆಸ್‌ನಿಂದ ಮುದ್ರಣವು ಆರಂಭಗೊಂಡಿತು. ೧೮೫೩ ರಲ್ಲಿ ೮೦೦ ಪ್ರತಿಗಳಷ್ಟು ಮುದ್ರಿತವಾಗುತ್ತಿದ್ದು, ೮೦ ಪುಟಗಳನ್ನೊಳಗೊಂಡಿತ್ತು. ೧೮೯೪-೯೫ರಲ್ಲಿ ಸುಮಾರು ೭ ಸಾವಿರ ಪ್ರತಿಗಳು ಮುದ್ರಿತಗೊಂಡಿತು. ಪ್ರಧಾನ ಸಂಪಾದಕರಾಗಿ ಮಿಶನರಿಗಳಾದ M Hock, A Manner, Stolz ಮತ್ತು ದೇಶೀಯರಾದ ಕ್ರಿಸ್ತಾಮಜ ವಾಟ್ಸ್, ಶಿವರಾವ್, ಬಾಲಪಯ್ಯ ಮುಂತಾದವರು ಕೆಲಸ ಮಾಡಿದ್ದಾರೆ.

೮. ವಿಚಿತ್ರ ವರ್ತಮಾನ ಸಂಗ್ರಹ: ೧೮೬೨ ರಲ್ಲಿ ಪ್ರಾರಂಭವಾಯಿತು. ಕಿಟಲ್ ಹಾಗೂ ಮ್ಯಾಕ್ ಈ ಪತ್ರಿಕೆಯ ಸಂಪಾದಕರಾಗಿದ್ದರು. ಇದು ಹದಿನೈದು ದಿನಗಳಿಗೊಮ್ಮೆ ಹೊರಡುವ ಪತ್ರಿಕೆಯಾಗಿತ್ತು. ಇದು

ಬಾಂಬೆ ಕ್ಯಾನರೀಜ್ ವರ್ನ್ಯಾಕುಲರ್ ಸೊಸೈಟಿಯ ವತಿಯಿಂದ ಪ್ರಕಟವಾಗುತ್ತಿದ್ದವು. 'The Artistic designs and printing of the paper were of high order' ಎಂದು ಸಿ. ವಾಜ್ ಹೇಳುತ್ತಾರೆ. (Celine Vas the contribution of Christian Missionaries to Journalism South Kanara P.32 (unpublished) ಈ ಪತ್ರಿಕೆಯ ಜೊತೆಯಲ್ಲಿಯೇ ಇಂಡಿಯ ಮತ್ತು ಅನ್ಯ ದೇಶದ ವಾರ್ತಿಕ್ ಎಂಬ ಪತ್ರಿಕೆಯೂ ಹೊರಡುತ್ತಿತ್ತು. ಆದರೆ ಈ ಪತ್ರಿಕೆಗಳು ಬಹಳ ಕಾಲದವರೆಗೆ ಮುಂದುವರೆಯಲಿಲ್ಲ.

೯. ಸತ್ಯದೀಪಿಕೆ: ಹೆರ್ಮನ್ ರಿಸ್ಚ್‌ರವರು 'ಸತ್ಯದೀಪಿಕೆ' ಎಂಬ ವೃತ್ತಾಂತ ಪತ್ರಿಕೆಯ ಸಂಪಾದಕರೊಬ್ಬರಾಗಿ ಕೆಲಸ ಮಾಡಿದರು. ೧೯೧೪ ರಲ್ಲಿ ಯೂರೋಪಿನಲ್ಲಿ ಯುದ್ಧ ಪ್ರಾರಂಭವಾದಾಗ ಈ ಪತ್ರಿಕೆ ನಿಂತು ಹೋಯಿತು. ಈ ಪತ್ರಿಕೆಯಲ್ಲಿ ಮಿಶನ್ ವಾರ್ತೆ, ವಿದೇಶಿ ವಾರ್ತೆ, ಪ್ರಬಂಧಗಳು, ಕಥೆಗಳು, ಕಾವ್ಯ, ಚಿತ್ರ, ವಿಶೇಷ ಜನರ ಜೀವ ಮರಣಗಳು, ಪ್ರಾಣಿ, ವೃಕ್ಷಾದಿಗಳ ವರ್ಣನೆ, ವ್ಯವಸಾಯ, ಸತ್ಯೋಪದೇಶ ಚರಿತ್ರೆ, ರೋಗಚಿಕಿತ್ಸಾ ಹೀಗೆ ಅನೇಕ ವಿಷಯಗಳಿರುತ್ತಿದ್ದವು.

೧೦. ಕ್ರೈಸ್ತ ಹಿತವಾದಿ: ೧೯೨೪ರಲ್ಲಿ ಪ್ರಕಟವಾಯಿತು. ಪ್ರಾರಂಭದ ಸಂಪಾದಕರು Fred Jathanna ಸ್ಥಳೀಯರಾಗಿದ್ದರು. ಮಾಸ ಪತ್ರಿಕೆಯಾಗಿದ್ದು ಕ್ಯಾನರೀಸ್ ಮಿಶನ್ ಪ್ರೆಸ್‌ನಿಂದ ಪ್ರಕಟಗೊಂಡಿತು. ಬೈಬಲ್‌ಗೆ ಸಂಬಂಧಪಟ್ಟ ಸಭಾ ಚಟುವಟಿಕೆಗಳ ಕುರಿತು ತಿಳಿಸಿದ್ದಾರೆ. ೧೯೧೩ರ ವರೆಗೂ ನಡೆಯಿತು.

ಅನುಬಂಧ – ೩

ಪರಾಮರ್ಶನ ಗ್ರಂಥಗಳು

೧. ಬೈಬಲ್ ಉದ್ಧರಣೆಗಳು:

ಬೈಬಲ್ ಉದ್ಧಾರಣೆಗಳನ್ನು 'ಪವಿತ್ರ ಬೈಬಲ್' (ಕರ್ನಾಟಕ ಪ್ರಾಂತಿಯ ಕಥೋಲಿಕ ಧರ್ಮಾಧ್ಯಕ್ಷರುಗಳ ಸಮಿತಿ ೧೯೬೬) ಈ ಆವೃತ್ತಿಯಿಂದ ತೆಗೆಯಲಾಗಿದೆ. ಉಪಯೋಗಿಸಲಾದ ಬೈಬಲ್ ಗ್ರಂಥಗಳ ಶೀರ್ಷಿಕೆಗಳನ್ನು ಕನ್ನಡ ಮತ್ತು ಇಂಗ್ಲೀಷ್ ರೂಪಗಳಲ್ಲಿ ಮೂಲ ಕ್ರಮಕ್ಕೆ ಅನುಗುಣವಾಗಿ ಕೆಳಗೆ ನಮೂದಿಸಿದೆ.

೧. ಆದಿಕಾಂಡ – Genesis
೨. ವಿಮೋಚನಾಕಾಂಡ – Exodus
೩. ಸಂಖ್ಯಾಕಾಂಡ – Numbers
೪. ಧರ್ಮೋಪದೇಶಕಾಂಡ – Deuteronomy
೫. ೧ ಸಾಮುವೇಲ – 1 Samuel
೬. ೨ ಸಾಮುವೇಲ – 2 Samuel
೭. ನೆಹೇಮಿಯಾ – Nehemiah
೮. ಯೋಬನು – Job
೯. ಕೀರ್ತನೆ – Psalms
೧೦. ಜ್ಞಾನೋಕ್ತಿ – Proverbs
೧೧. ಯೆಶಾಯ – Isaiah
೧೨. ದಾನಿಯೇಲ್ – Daniel
೧೩. ಜೇಕರ್ಯ – Zechariah
೧೪. ಯೆರೆಮಿಯ – Jeremiah
೧೫. ಮತ್ತಾಯ – Mathew
೧೬. ಮಾರ್ಕ – Mark
೧೭. ಲೂಕ – Luke
೧೮. ಯೋಹಾನ – John
೧೯. ಅಪೋಸ್ತಲರ ಕೃತ್ಯಗಳು – Acts of the Apostles
೨೦. ರೋಮ Romans
೨೧. ೧ ಕೋರಿಂಥ – 1 Corinthians
೨೨. ೨ ಕೋರಿಂಥ – 2 Corinthians

೨೩. ಗಲಾತ್ಯ – Galatians
೨೪. ಎಫೆಸಿ – Ephesians
೨೫. ಫಿಲಿಪಿ – Philippians
೨೬. ಕೊಲೊಸ್ಸೆ – Colosians
೨೭. ೧ ಥೆಸಲೋನಿಕ – 1 Thessalonians
೨೮. ಹಿಬ್ರಿಯ – Hebrews
೨೯. ಯೊಕೋಬ – James
೩೦. ೧ ಪೇತ್ರ – 1 Peter
೩೧. ಪ್ರಕಟಣೆ – Revelation

೨. ಕನ್ನಡ ಗ್ರಂಥಗಳು:

೧. .... ೧೮೪೧ – ಕನ್ನಡ ಗೀತೆಗಳು ಬಾಸೆಲ್ ಮಿಶನ್ ಮುದ್ರಣ, ಮಂಗಳೂರು.

೨. .... ೧೮೬೯ – ಬಾಲಕರ ಗೀತೆಗಳು, ಬಾಸೆಲ್ ಮಿಶನ್ ಟ್ರಾಕ್ಟ್ ಬುಕ್ ಡಿಪೋ, ಮಂಗಳೂರು.

೩. .... ೧೮೭೪ – ಕನ್ನಡ ಗೀತೆಗಳು, ಬಾಸೆಲ್ ಮಿಶನ್ ಮುದ್ರಣ, ಮಂಗಳೂರು.

೪. .... ೧೮೮೬ – ಕ್ರೈಸ್ತ ಬೋಧನೆಯ ಸಾರಾಂಶ, ಸಿ.ವಿ.ಇ. ಸೊಸೈಟಿ, ಅಲ್‌ಬಿಯೆನ್ ಪ್ರೆಸ್, ಮದ್ರಾಸು.

೫. .... ೧೯೦೩ – ಅಭಿನಯ ಗೀತೆಗಳು, ಬಾಸೆಲ್ ಮಿಶನ್ ಮುದ್ರಣ, ಮಂಗಳೂರು.

೬. .... ೧೯೦೫ – ಕನ್ನಡ ಗೀತೆಗಳು, ಬಾಸೆಲ್ ಮಿಶನ್ ಮುದ್ರಣ, ಮಂಗಳೂರು.

೭. .... ೧೯೨೮ – ಕ್ರೈಸ್ತ ಮತ ಸ್ಥಾಪಕ (ಅನು) ಎಮ್.ರಾಮ್ ರಾವ್, ಸುಬೋಧ ಪ್ರಕಟನಾಲಯ, ಬೆಂಗಳೂರು.

೮. .... ೧೯೪೯ – ಕೀರ್ತನೆಗಳು, ಕಥೋಲಿಕ್ ಮಿಶನ್, ಮೋದಿ ಪವರ್ ಪ್ರೆಸ್, ಬೆಂಗಳೂರು.

೯. .... ೧೯೪೯ – ಜಪದ ಪುಸ್ತಕ, ಕಥೋಲಿಕ್ ಮಿಶನ್ ಡಿಪೋ,

ಬೆಂಗಳೂರು.

೧೦. .... ೧೯೫೭ – ಧರ್ಮೋಪದೇಶ, ಸೆಂಟ್ ಫಿಲೋಮಿನಾಸ್ ಪ್ರೆಸ್, ಮೈಸೂರು

೧೧. .... ೧೯೬೬ – ಕನ್ನಡ ಗೀತೆಗಳು, ಬಾಸೆಲ್ ಮಿಶನ್ ಮುದ್ರಣ, ಮಂಗಳೂರು.

೧೨. .... ೧೯೮೩ – ಶುಭ ಸಂದೇಶಗಳ ಹಿನ್ನೆಲೆ, ಕನ್ನಡ ಸಾಹಿತ್ಯ ಸಂಘ, ಸಂತ ರಾಯಪ್ಪರ ಗುರು ವಿದ್ಯಾಲಯ, ಬೆಂಗಳೂರು.

೧೩. .... ೧೯೯೫ – ಜೀವವಾಕ್ಯ, ಎ.ಸಿ.ಸಿ. ಮಹಾಧರ್ಮಕ್ಷೇತ್ರದ ಸಂಪರ್ಕ ಮಾಧ್ಯಮಗಳ ಕೇಂದ್ರ, ಬೆಂಗಳೂರು.

೧೪. .... ೧೯೯೯ – ಚರ್ಚ್ ಇತಿಹಾಸ. ಸಂಚಲನ ಪ್ರಕಾಶನ, ಕಥೋಲಿಕ ಕೇಂದ್ರ, ಮೈಸೂರು.

೧೫. .... ೨೦೦೦ – ಧರ್ಮ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬. .... ೨೦೦೦ – ಕನ್ನಡ ಸಂಗೀತ ಸಂಗ್ರಹ, ಸ್ಟಾರ್‌ಲೈಟ್ ಮುದ್ರಕರು,

೧೭. .... ೨೦೦೭ – ಬಸವಣ್ಣ ವಚನಾಮೃತ ವ್ಯಾಖ್ಯಾನ ಸಹಿತ, (ಸಂ) ಎಲ್. ಬಸವರಾಜು, ೭ನೇ ಮುದ್ರಣ.

೧೮. ಅಂತಪ್ಪ. ಐ ೧೯೯೪ – ಶ್ರೀರಂಗಪಟ್ಟಣದಲ್ಲಿ ಮತ್ತು ಸುತ್ತಮುತ್ತಲಲ್ಲಿ ಕ್ರೈಸ್ತ ಧರ್ಮದ ಉಗಮ, ಕಥೋಲಿಕ ಕ್ರೈಸ್ತರ ಕನ್ನಡ ಸಾಹಿತ್ಯ ಸಂಘ.

೧೯. ಉತ್ತಂಗಿ ಚೆನ್ನಪ್ಪ ೧೯೬೩ – ಮೃತ್ಯುಂಜಯ (ಸಂ) ಎಸ್.ಆರ್.ಗುಂಜಾಲ್ ಮತ್ತು ಕೊನೆಸಾಗರ, ಶ್ರೀ ಉತ್ತಂಗಿ ಪ್ರಕಾಶನ ಸಮಿತಿ, ಧಾರವಾಡ.

೨೦. ಎಡ್ವರ್ಡ್ ಮೊರೋನ ೧೯೯೬ – ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ, ಭಾಗ್ಯವಾನ್ ಪ್ರಕಾಶನ,

ಮೈಸೂರು.

೨೧. ಕನವಳ್ಳಿ ಪಿ.ಎಸ್ ೧೯೯೬ – ಯೇಸುಕ್ರಿಸ್ತನ ಬಾಳು ಬೋಧನೆ ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ, ಮಂಗಳೂರು.

೨೨. ಕ್ಯಾಂಬಿಲ್ ಡಬ್ಲ್ಯು ಎಚ್ ೧೯೧೧ – ಕ್ರೈಸ್ತ ವೇದಾಂತ ಸಾರವು (ಅನು) ಎಚ್.ಜಿ. ಶೀಲಪ್ಪ ಬುಕ್ ಅಂಡ್ ಟ್ರ್ಯಾಕ್ಟ್ ಸೊಸೈಟಿ, ಬೆಂಗಳೂರು.

೨೩. ಕ್ಯಾಂಬಿಲ್ ಡಬ್ಲ್ಯು ಎಲ್ ೧೯೨೦ – ಕ್ರೈಸ್ತ ಮತ ನಿದರ್ಶನಗಳು (ಅನು) ಎಚ್.ಜಿ.ಶೀಲಪ್ಪ ಬುಕ್ ಅಂಡ್ ಟ್ರಾಕ್ಟ್ ಸೊಸೈಟಿ, ಬೆಂಗಳೂರು.

೨೪. ಗಣಪತಿ ಐಗಳ ಎಂ ೧೯೨೨ – ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ಬಂಟ್ವಾಳ, ಮಂಗಳೂರು.

೨೫. ಗೀತಾನಂದಿಹಾಳ ಎಸ್ – ಕನ್ನಡಕ್ಕೆ ಬಾಸೆಲ್ ಮಿಶನರಿಗಳ ಕೊಡುಗೆ, ಕಿಟಲ್ ಕಲಾ ಮಹಾವಿದ್ಯಾಲಯ, ಧಾರವಾಡ.

೨೬. ಗೋವಿಂದ ಪೈ ೧೯೮೮ – ಗೊಲ್ಗೊಥಾ ಮತ್ತು ವೈಶಾಕ, ಕಾವ್ಯಾಲಯ, ಮೈಸೂರು.

೨೭. ಗೌಡರ ಎಸ್.ಪಿ ೧೯೯೭ – ಕನ್ನಡ ಕ್ರೈಸ್ತ ಗೀತೆಗಳ ಅಧ್ಯಯನ, ಕಿಟಲ್ ಕಲಾ ಮಹಾವಿದ್ಯಾಲಯ, ಧಾರವಾಡ.

೨೮. ಚಿದಾನಂದಮೂರ್ತಿ ಎಂ ೧೯೮೪ – ಕನ್ನಡ ಸಾಹಿತ್ಯ ಶಾಸನಗಳಲ್ಲಿ ಸಂಗೀತ ವಿಚಾರ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.

೨೯. ಜಯವಂತ ಜೋಗುಳ ಎಮ್ ೧೯೮೭ – ಕರ್ನಾಟಕದಲ್ಲಿ ಬಾಸೆಲ್ ಮಿಶನ್.

೩೦. ಜಾಕೋಬ್ .ಸಿ ೨೦೧೦ – ಸಂತ ಮತ್ತಾಯನ ಶುಭ ಸಂದೇಶ, ಧ್ಯಾನವನ ಪಬ್ಲಿಕೇಷನ್ಸ್

೩೧. ಟೊಮ್ಲಿನ್‌ಸನ್ ಡಬ್ಲ್ಯು .ಇ ೧೯೪೬ – ಕ್ರೈಸ್ತ ಧರ್ಮರಾಜ ಚರಿತ್ರಂ (ಅನು), ಎಚ್.ಜಿ. ಶೀಲಪ್ಪ, ಕರ್ನಾಟಕ ಕ್ರಿಶ್ಚಿಯನ್ ಕೌನ್ಸಿಲ್.

೩೨. ತಲ್ವಾಡಿ ಬಿ.ಎಸ್ ೨೦೦೪ – ದಕ್ಷಿಣ ಕರ್ನಾಟಕದ ಕ್ರೈಸ್ತ ಜನಪದ ಸಾಹಿತ್ಯ,

ಭರತ ಪ್ರಕಾಶನ.

೩೩. ತಲ್ವಾಡಿ ಬಿ.ಎಸ್ ೧೯೮೯ – ಕರ್ನಾಟಕ ಕ್ರೈಸ್ತರ ಇತಿಹಾಸ, ಕನ್ನಡ ಕಥೋಲಿಕರ ಸಂಘ.

೩೪. ದಯಾನಂದ ಪ್ರಭು ೧೯೯೪ – ಮೈಸೂರು ಸಂಸ್ಥಾನದ ಕ್ರೈಸ್ತರ ಇತಿಹಾಸ, ಶ್ವೇತ ಪ್ರಕಾಶನ, ಮೈಸೂರು.

೩೫. ಧಾರವಾಡಕರ ರಾ.ಯ ೧೯೭೫ – ಹೊಸಗನ್ನಡ ಸಾಹಿತ್ಯದ ಉದಯಕಾಲ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩೬. ಥಾರ್ಪ್ ಡಬ್ಲ್ಯು.ಎಚ್ ೧೯೨೭ – ಯೇಸು ಕ್ರಿಸ್ತನ ಪುನರುತ್ಥಾನ (ಅನು), ಸಾಮುವೇಲ್ ಸಾಧಯ್ಯ, ಟ್ರಾಕ್ಟ್ ಮತ್ತು ಬುಕ್ ಸೊಸೈಟಿ, ಬೆಂಗಳೂರು.

೩೭. ದೇವದಾಸ ಲೀಲಾವತಿ ೧೯೫ – ಬೈಬಲ್ಲಿನ ಅನಾಮಿಕ ಸ್ತ್ರೀಯರು. ಸಂತ ಒಲಿವರ್ ಸ್ಮಾರಕ ದೇವಾಲಯ, ಬೆಂಗಳೂರು.

೩೮. ನರಹಳ್ಳಿ ಬಾಲಸುಬ್ರಮಣ್ಯ ೧೯೭೩ – ಕ್ರಿಸ್ತಾಂಜಲಿ. ಕ್ರೈಸ್ಟ್ ಕಾಲೇಜ್, ಕನ್ನಡ ಸಂಘ.

೩೯. ಪದ್ಮ ಪ್ರಸಾದ್ ೧೯೮೭ – ಜೈನ ಜನಪದ ಸಾಹಿತ್ಯ ಸಂಪಾದನೆ ಮತ್ತು ಅಧ್ಯಯನ, ಸಹನಾ ಪ್ರಕಾಶನ.

೪೦. ಪದ್ಮಾವತಿ ೧೯೮೦ – ಸಂಗೀತ ಲಕ್ಷಣ ಸಂಗ್ರಹ ಭಾಗ–೧ ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.

೪೧. ಪಾಟೀಲ ೧೯೭೧ – ಸಂಗೀತ ಶಾಸ್ತ್ರ ಪರಿಚಯ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೪೨. ಪುಟ್ಟಪ್ಪ ಕೆ.ವಿ ೨೦೧೦ – ಕನ್ನಡ ಕೈಪಿಡಿ, ಸಂಪುಟ–೧, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೪೩. ಫರ್ಡಿನಾಂಡ್ ಕಿಟಲ್ ೧೮೬೨ – ಕಥಾಮಾಲೆ, ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು.

೪೪. ಬಸವರಾಜು ಎಲ್ ೧೯೯೭ – ಅಕ್ಕನ ವಚನಗಳು, ಗೀತಾ ಬುಕ್ ಹೌಸ್, ಮೈಸೂರು.

೪೫. ಮಾಸ್ತಿವೆಂಕಟೇಶ ಅಯ್ಯಂಗಾರ್ ೧೯೩೩ – ವಿಮರ್ಶೆ, ಜೀವನ ಕಾರ್ಯಾಲಯ, ಬೆಂಗಳೂರು.

೪೬. ಮಾರ್ಕಸ್ ವಾರ್ಡ್ ಎ ೧೯೬೮ – ಕ್ರೈಸ್ತ ಸಿದ್ದಾಂತಸಾರ (ಅನು), ವಿ.ಪಿ. ದಂಡಿನ ಮತ್ತು ಮಾರಾ, ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ, ಮಂಗಳೂರು.

೪೭. ಮ್ಯಾಥ್ಯೂ ಕೆ.ಎಂ ೧೯೯೪ – ಕೆ.ಎಫ್ ಕಿಟಲ್ ಒಂದು ಸಮಗ್ರ ಅಧ್ಯಯನ, ಕಿಟಲ್ ಕಲಾ ಮಹಾವಿದ್ಯಾಲಯ, ಧಾರವಾಡ.

೪೮. ಯೋಹಾನ್ ಬುನ್ಯನ್ ೧೯೫೨ – ಯಾತ್ರಿಕನ ಸಂಚಾರ, ಬಾಸೆಲ್ ಮಿಶನ್ ಬುಕ್ ಡಿಪೋ, ಮಂಗಳೂರು.

೪೯ ರತ್ನಂ ಬೋಧಕರು ಎಸ್ ೧೯೫೯ – ಸಂಗೀತಗಳು ಮತ್ತು ಸಂಗೀತಗಾರರು, ಕನ್ನಡ ಸಾಹಿತ್ಯ ಸಮಿತಿ, ಮೈಸೂರು.

೫೦. ರಾಮಚಂದ್ರನ್ ಸಿ.ಎನ್ ೧೯೯೦ – ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ.

೫೧. ರೋಬರ್ಟ್ ಎಲ್ಲಿಸ್ ೧೯೦೪ – ಆದಿ ಸಭೆಯ ಚರಿತ್ರೆಯ ಬೋಧನೆ, ಟ್ರಾಕ್ಟ್ ಮತ್ತು ಬುಕ್ ಸೊಸೈಟಿ, ಬೆಂಗಳೂರು.

೫೨. ರೋಬರ್ಟ್‌ಸನ್ ಜೆ ೧೯೨೦ – ಕ್ರಿಸ್ತನ ಬೋಧಾಮೃತ (ಅನು), ಚಿಂತಾಮಣಿ ಕಾಲೆಬ್, ಟ್ರಾಕ್ಟ್ ಮತ್ತು ಬುಕ್ ಸೊಸೈಟಿ, ಬೆಂಗಳೂರು.

೫೩. ರೈಸ್ ಬಿ ೧೮೯೮ – ಕನ್ನಡ ಸಂಗೀತಗಳು, ಟ್ರಾಕ್ಟ್ ಮತ್ತು ಬುಕ್ ಸೊಸೈಟಿ, ಬೆಂಗಳೂರು.

೫೪. ರೈಸ್ ಬಿ ೧೯೨೯ – ಕನ್ನಡ ಸಂಗೀತಗಳು, ಟ್ರಾಕ್ಟ್ ಮತ್ತು ಬುಕ್ ಸೊಸೈಟಿ, ಬೆಂಗಳೂರು.

೫೫. ಲಿಲ್ಲಿ ವೆಸ್ಲಿ ೧೯೯೫ – ಸಂಗೀತಗಳು ಮತ್ತು ಸಂಗೀತಗಾರರು, ಜಯನಗರ, ಬೆಂಗಳೂರು.

೫೬. ವೇದ ಮಿತ್ರಯ್ಯ .ಪಿ (ಅನು) ೧೮೦೯ – ಅಗಸ್ಟಿನ್ ಬಿನ್ನಪಂ, ಟ್ರಾಕ್ಟ್ ಅಂಡ್ ಬುಕ್ ಸೊಸೈಟಿ, ಬೆಂಗಳೂರು.

೫೭. ವೆಸ್ಲಿ ಜಿ ೧೯೧೦ – ಕ್ರೈಸ್ತ ಶಾಸ್ತ್ರ ಚರಿತ್ರಸಾರವು, ವೆಸ್ಲಿಯನ್ ಪ್ರೆಸ್

೫೮. ವಿಲ್‌ಫ್ರಡ್ ಸ್ಕೋಪ್ಸ್ ೧೯೬೬ – ಯೇಸುವಿನ ಸಾಮ್ಯಗಳು (ಅನು), ಐರಿಸ್ ಸಮರ್ಥ, ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ,

ಮಂಗಳೂರು.

೫೯. ವಿಜಯ ಕುಮಾರ್ ೨೦೦೪ – ಕರ್ನಾಟಕದಲ್ಲಿ ಪ್ರೊಟೆಸ್ಟಾಂತ ಮಿಷನ್ನುಗಳ ಚರಿತ್ರೆ, ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ, ಮಂಗಳೂರು.

೬೦. ವುರ್ತ ಜಿ ೧೮೬೮ – ಪ್ರಾಕ್ಕಾವ್ಯ ಮಾಲಿಕೆ, ಬಾಸೆಲ್ ಮಿಶನ್ ಪ್ರೆಸ್,ಮಂಗಳೂರು.

೬೧. ಶಿವರುದ್ರಪ್ಪ ಜಿ.ಎಸ್ ೧೯೯೧ – ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ–೬ ಬೆಂಗಳೂರು ವಿಶ್ವವಿದ್ಯಾಲಯ.

೬೨. ಶೇಷಗಿರಿರಾವ್ ಎಲ್.ಎಸ್ ೧೯೯೦ – ಭಾರತೀಯ ಸಾಹಿತ್ಯ ಸಮೀಕ್ಷೆ, ಸಂಪುಟ–ಒಂದು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬೩. ಶ್ರೀನಿವಾಸ ಹಾವನೂರ ೧೯೭೪ – ಹೊಸಗನ್ನಡದ ಅರುಣೋದಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸುರು.

೬೪. ಶ್ರೀನಿವಾಸ ಹಾವನೂರ ೨೦೦೯ – ಡಾ. ಫರ್ಡಿನಾಂಡ್ ಕಿಟಲ್, ಸಾಹಿತ್ಯ ಅಕಾಡೆಮಿ.

೬೫. ಸತ್ಯನಾರಾಯಣ ಟಿ.ಜಿ ೧೯೭೬ – ಫ್ರೆಡ್ರಿಕ್ ಕ್ಲಿಗ್ಲರ್, ಜೀವನ ಮತ್ತು ಕಾರ್ಯ, ಬೆಂಗಳೂರು ವಿಶ್ವವಿದ್ಯಾಲಯ.

೬೬. ಸಭಾಪತಿ ಎನ್ ೨೦೦೧ – ಆಧುನಿಕ ಕನ್ನಡ ಸಾಹಿತ್ಯಾಭಿವೃದ್ಧಿಗೆ ಬಳ್ಳಾರಿ ಲಂಡನ್ ಮಿಶನ್ನಿನ ಕೊಡುಗೆ, ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ. ಮಂಗಳೂರು.

೬೭. ಸೋನ್ಸ್ ಐ.ಐ ೧೯೮೯ – ಧರ್ಮ ಸಂಸ್ಥಾಪನೆಗಾಗಿ ಗೈದ ಜೀವನ್ಮರಣದ ಹೋರಾಟವೂ ಸುವಾರ್ತಾ ಪ್ರಸರಣೆಯ ದಿಗ್ವಿಜಯವೂ, ಮರ್ಕರಾ ಹಿಲ್.

೬೮. ಹಳಹಟ್ಟಿ ಎಫ್.ಜಿ ೧೯೩೧ – ಮಹಾದೇವಿಯಕ್ಕನ ವಚನಗಳು, ಬಿಜಾಪುರ.

೬೯. ಹಿರೇಮಠ ಆರ್.ಸಿ (ಸಂ) ೧೯೬೮ – ಭಕ್ತಿ ಭಂಡಾರಿ ಬಸವಣ್ಣ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೦. ಹೆಗಡೆ ಜಿ.ಎಮ್ ೧೯೯೪ – ರೆವರೆಂಡ್ ಫರ್ಡಿನಾಂಡ್ ಕಿಟಲ್, ಜೀವನ ಹಾಗೂ ಕೃತಿ ಸಮೀಕ್ಷೆ, ಧಾರವಾಡ, ಕಿಟಲ್ ಕಲಾ ಕಾಲೇಜು.

೨೧. ಹೆಗಡೆ ಜಿ.ಎಮ್ ೧೯೯೪ – ಕಿಟಲ್ ಜೀವನ ಹಾಗೂ ಸಾಧನೆ, ಕಿಟಲ್ ಕಲಾ ಮಹಾವಿದ್ಯಾಲಯ ಧಾರವಾಡ.

೩. ಕನ್ನಡ ಪತ್ರಿಕೆಗಳು, ಕೋಶ ಮತ್ತು ವಿಶ್ವಕೋಶಗಳು:

೧. ಕನ್ನಡ ನುಡಿ– ಕನ್ನಡ ಸಾಹಿತ್ಯ ಪರಿಷತ್ತಿನ ಮಾಸ ಪತ್ರಿಕೆ, ಜುಲೈ ೧೯೬೬, ಬೆಂಗಳೂರು

೨. ಕನ್ನಡ ಪಂಚಾಗ– ಬಾಸೆಲ್ ಮಿಷನ್ ಪ್ರೆಸ್, ಮಂಳೂರು

೩. ಕರ್ನಾಟಕ ಕ್ರೈಸ್ತ ಬಂಧು– ಬಾಸೆಲ್ ಮಿಷನ್ ಪ್ರೆಸ್, ಮಂಗಳೂರು

೪. ಕ್ರೈ ಸ್ತ ಹಿತವಾದಿ– ಬಾಸೆಲ್ ಮಿಷನ್ ಪ್ರೆಸ್, ಮಂಗಳೂರು

೫. ಬಾಲ ಪತ್ರ– ಬಾಸೆಲ್ ಮಿಷನ್ ಪ್ರೆಸ್, ಮಂಗಳೂರು

೬. ಬಾಲೋಪದೇಶ– ಬಾಸೆಲ್ ಮಿಷನ್ ಪ್ರೆಸ್, ಮಂಗಳೂರು

೭. ಬೋಧಕ ಬೋಧಿನಿ– ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು

೮. ಮಂಗಳೂರು ಸಮಾಚಾರ– ಬಾಸೆಲ್ ಮಿಷನ್ ಪ್ರೆಸ್, ಮಂಗಳೂರು

೯. ವಿಚಿತ್ರ ವರ್ತಮಾನ ಸಂಗ್ರಹ– ಬಾಸೆಲ್ ಮಿಷನ್ ಪ್ರೆಸ್, ಮಂಗಳೂರು

೧೦. ವೈದಿಕ ಮಿತ್ರ– ಬಾಸೆಲ್ ಮಿಷನ್ ಪ್ರೆಸ್, ಮಂಗಳೂರು

೧೧. ಸತ್ಯ ದೀಪಿಕೆ– ಬಾಸೆಲ್ ಮಿಷನ್ ಪ್ರೆಸ್, ಮಂಗಳೂರು

೧೨. ಸತ್ಯವ್ರತ– ಬಾಸೆಲ್ ಮಿಷನ್ ಪ್ರೆಸ್, ಮಂಗಳೂರು

೧೩. ಸಭಾಪತ್ರ– ಬಾಸೆಲ್ ಮಿಷನ್ ಪ್ರೆಸ್, ಮಂಗಳೂರು

೧೪. ಸುಭೋಧಿನಿ– ಬಾಸೆಲ್ ಮಿಷನ್ ಪ್ರೆಸ್, ಮಂಗಳೂರು

೧೫. ಧರ್ಮ: ರಹಮತ್ ತರೀಕೆರೆ– ಕನ್ನಡ ವಿಶ್ವ ವಿದ್ಯಾಲಯ ವಿಶ್ವಕೋಶ:೩ ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ

೧೬. ಚಿಂತಾಮಣಿ ಕೇಲೆಬ್ ರವರೂ ಘನ. ಇ ಸ್ಟಾಂಲೆ ಎಡ್ವರ್ಡ್ಸ್ ಬೋಧಕರೂ, ೧೯೨೬. ವೇದಕೋಶ: ಟ್ರಾಕ್ಟ್ ಆಂಡ್ ಬುಕ್ ಸೊಸೈಟಿ. ಬೆಂಗಳೂರು

೪. English Books:

1. .... 1860 - Harvest field, Vol.I, November 1861 to Oct 1862, Printed at the Wesleyan Mission Press, Bangalore.

2. .... 1906 - Famous Hymns of the world, Foreword, Allan Sultherland, Philadelphia.

3. .... 1972 - Bishop's Committee on the Liturgy Musick in Catholic Worship, Washington, United States Catholic Conference.

4. Albert C.Outler 1955 - Augustine: Confessions and Enchiridion, Philadelphia, The West minister Press.

5. Copland Aaron 1952 - Music and imagination, Newyork, New American Library.

6. Edward P.Rice 1915 - A History of Kanarese Literature, London, Oxford University Press.

7. Firth C.B. 1961 - An Introduction to Indian Church History, Christian Literature Society.

8. Godwin Shiri 1985 - Wholeness in Christ, KTC Balmatta, Mangalore.

9. Hermann Gundert 1997 - Herrmann Moegling, Edited by Albrecht Frenz, Printed in India at DC Offset Printers, Kottayam.

10. John Owen Whitehouse 1896 - Register of Missionaries Deputations, ETC from 1796 to 1896 London Missionary Society, Blomfield Street.

11. Kenneth W.Osbeck 1982 - 101 Hymn Stories, Printed in United States of America.

12. Lourduswamy D.S 1966 - Vatican II Digest, St. Mary's Town, Bangalore.

13. Michael Racburn and Alen Kendall 1989 - Heritage of Musick, Oxford, Oxford University Press.

14. Michael Raj .M 1955 - Musick and Religion in India Vol.X, No.1.

15. Richard Loyett 1899 - History of London Missionary Society, 1795-1895, Vol.I, London, Henry Frowde, Oxford University Press.

16. Routley Erik 1959 - Church Musick and Theology, London, SCM Press.

17. Sargant N.C. and A 1951 - Tomlinson of Mysore. The Christian

Marcus Ward — Literature Society for India, Madras, Bangalore, Mysore, Colombo.

18. Selina Theiclemann 2001 - The Spirituality of Musick, A.P.H Publishing Corporation, New Delhi.

೫. Dictionary and Encyclopedia:

1. Cross F.L 1957 - The Oxford Dictionary of the Christian Church, Oxford University Press.

2. David B.Barrett George T.Kurian Todd M.Johnson 2001 - World Christian Encyclopedia, Vol.I, Oxford University Press.

3. Hans J.Hillerbrand 1996 - The Oxford Encyclopedia of the Reformation Vol. 3

4. Jonh Julian 1892 - Dictionary of Hymnology, London, John Murray Albemarle Street.

5. Paul J.Achtemeier 1990 - Harper's Bible Dictionary Theological Publications in India, Bangalore.

6. Reeve William 1824 - A Dictionary English and Carnataka, Madras College Press.

7. Reeve William 1832 - Dictionary Carnataka and English, Madras, Printed at the Government Gazette Press.

8. Richard P. McBrien 1995 - Harper Collins Encyclopedia of Catholism, Edited by Richard P. Macbrien, New York. Harper Collins.

9. William Little, H.W. Flower and Jessie Coulson 1974 - The Oxford Universal Dictionary Illustrated Oxford, At the Clarendon Press.

10. Ziegler F. 1896 - English and Canarese School, Dictionary, Mangalore, Basel Mission and Tract Depository.

11. The Book of Saints - A Dictionary of Servants of God, Cononized by the Catholic Church, Compiled by the Benedictrine Monks of st. Augustine's Abbey, Ramsgate, Printed in Great Britain by W&J Mackay & Co. Ltd., Clatham.

೬. Reports:

1. The Fifty Third report of the Wesleyan Mission in the Mysore Province for the year 1891. Madras: Printed at the Lawrence Asylum Press by G.W. Taylor – 1892.
2. The Fifty Eight Report of the Wesleyan Mission in the Mysore Province for the year 1896. Madras: Printed at the M.E. Publishing House, Mount Road, 1897.
3. The Sixty Sixth Report of the Wesleyan Mission in the Mysore Province 1905, Mysore, The Wesleyan Mision Press 1906.
4. The Seventy Sixth Annual Report of the Wesleyan Mission in the Mysore Province 1916. Begin a Review of the work for the year 1915. Printed at the Wesleyan Mission Press, Mysore.
5. Report of the London Mission, Bangalore and Chikkaballapura for the year 1937, Bangalore. Printed at the Scripture Literature Press 1938.
6. Report of the London Mission Bangalore and Chikkaballapura for the year 1938, Bangalore. Printed at Scripture Literature Press 1939.
7. Report of the London Mission, Bangalore and Chikkaballapura for the year 1940, Bangalore. Printed at the Christian Literature Society 1941.
8. Report of the London Mission, Bangalore for the year 1880, Madras: Printed by Addison & Co., Mount Road, 1881.
9. Proceedings of the South India Missionary Conference. Held at Ootacamund, April 19th – May 5th, 1858, Madras. Printed by D.P.L.C. Cannore at the Press of the Society for Promoting Christian Knowledge, Church Street, Vepory 1858.
10. 56th Report of BMS in South – West India – 1896.
11. The Eightieth Annual Report of the Wesleyan Mission in the Mysore Province 1920.
12. The Seventy Eight Annual Report of the Wesleyan Mission in the Mysore Province 1918.
13. Twenty Sixth Annual Report of Basel Mission for the year 1858.
14. A Schosser – A Hundred years of the Basel Mission 1834 – 1934 Basel Mission Report 1934.
15. Basel Mission Report , 1841-1914.